ಷಡಕ್ಷರಿದೇವವಿರಚಿತ

ರಾಜಶೇಖರವಿಳಾಸಂ

ಸಂಪಾದಕರು :

ಡಾ. ಆರ್. ಸಿ. ಹಿರೇಮಠ

ಡಾ. ಎಂ. ಎಸ್. ಸುಂಕಾಪುರ

VEC, Library

001617

ವಿಶ್ವವಿದ್ಯಾಲಯ ಪ್ರಕಾಶನ

VEC, Library
001617

9F8k
VECKAN898

VIJAYA EVENING COLLEGE,
LIBRARY
BANGALORE-4.
ACCN. NO. 1617
SECTION
COST 10=00
Date 28.9.69 Librarian.

9784

ರಾಜಶೇಖರವಿಳಾಸಂ

ಕರ್ನಾಟಕ ವಿಶ್ವವಿದ್ಯಾಲಯ : ಕನ್ನಡ ಕಾವ್ಯಮಾಲೆ—೩

ಷಡಕ್ಷರಿದೇವವಿರಚಿತ

ರಾಜಶೇಖರವಿಳಾಸಂ

VIJAYA EVENING COLLEGE,
LIBRARY
BANGALORE-4.
ACCN. NO ....
SECTION ....
COST ....
Date .... Librarian.

ಸಂಪಾದಕರು :

ಡಾ. ಆರ್. ಸಿ. ಹಿರೇಮಠ, ಎಂ. ಎ., ಪಿಎಚ್. ಡಿ.
ಕನ್ನಡ ಪ್ರಾಧ್ಯಾಪಕರು

ಡಾ. ಎಂ. ಎಸ್. ಸುಂಕಾಪುರ, ಎಂ. ಎ., ಪಿಎಚ್. ಡಿ.
ಕನ್ನಡ ರೀಡರ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೧೯೬೮

ಸಾಹಿತ್ಯ ಭಂಡಾರ
ಹುಬ್ಬಳ್ಳಿ ೨೦.

ಪ್ರಕಾಶಕರು :

ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್. ಬಿ.
ರಜಿಸ್ಟ್ರಾರ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ.

[ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.]

ಬೆಲೆ : ರೂ. ೧೦

ಪ್ರಥಮ ಮುದ್ರಣ— ನವ್ಹಂಬರ, ೧೯೬೨ — ೧೦೦೦ ಪ್ರತಿಗಳು
ದ್ವಿತೀಯ ಮುದ್ರಣ— ನವ್ಹಂಬರ, ೧೯೬೮ — ೨೦೦೦ ಪ್ರತಿಗಳು

ಮುದ್ರಕರು :

ಎಮ್. ಎಮ್. ಹೊರಡಿ,
ಕ್ವಾಲಿಟಿ ಪ್ರಿಂಟರ್ಸ್,
ಧಾರವಾಡ.

ವಿಷಯ ಸೂಚನೆ

	ಪುಟಗಳು
ಸಂಕೇತವಿವರಣೆ	೨
ಮುನ್ನುಡಿ	೩
ಅರಿಕೆ	೫
ಪ್ರಸ್ತಾವನೆ . .	i—Lxxiv
ಪ್ರಥಮಾಶ್ವಾಸಂ . .	೧—೨೯
ದ್ವಿತೀಯಾಶ್ವಾಸಂ . .	೩೦—೬೧
ತೃತೀಯಾಶ್ವಾಸಂ , .	೬೨—೮೩
ಚತುರ್ಥಾಶ್ವಾಸಂ . .	೮೪—೧೧೦
ಪಂಚಮಾಶ್ವಾಸಂ . .	೧೧೧—೧೪೪
ಷಷ್ಠಾಶ್ವಾಸಂ . .	೧೪೫—೧೭೮
ಸಪ್ತಮಾಶ್ವಾಸಂ . .	೧೭೯—೨೦೨
ಅಷ್ಟಮಾಶ್ವಾಸಂ , .	೨೦೩—೨೨೯
ನವಮಾಶ್ವಾಸಂ . .	೨೩೦—೨೪೭
ದಶಮಾಶ್ವಾಸಂ . .	೨೪೮—೨೭೩
ಏಕಾದಶಾಶ್ವಾಸಂ , .	೨೭೪—೩೧೯
ದ್ವಾದಶಾಶ್ವಾಸಂ . .	೩೨೦—೩೪೬
ತ್ರಯೋದಶಾಶ್ವಾಸಂ , .	೩೪೭—೩೮೪
ಚತುರ್ದಶಾಶ್ವಾಸಂ . .	೩೮೫—೪೨೯
ಪರಿಶಿಷ್ಟ—೧	೪೩೧—೪೫೭
ಪರಿಶಿಷ್ಟ—೨	೪೫೮—೪೮೩

ಸಂಕೇತವಿವರಣೆ

+	ಹೆಚ್ಚಾಗಿದೆ
×	ಕಡಿಮೆಯಾಗಿದೆ
>	ಹಿಂದುಮುಂದಾಗಿದೆ
[ ]	ಸಂಪಾದಕರ ಊಹೆ
ಆ.	ಆಶ್ವಾಸ
ಪ.	ಪದ್ಯ
ಪು.	ಪುಟ
ಸ.	ಸರ್ಗ
ಸಂ.	ಸಂಪುಟ
ಅ.; ಅಧಿ.	ಅಧಿಕಾರ
ಆ. ಗ.	ಆಶ್ವಾಸಾಂತ್ಯದ ಗದ್ಯ
ಸ್ವೀ. ಪಾ.	ಸ್ವೀಕೃತಪಾಠ
ಭಾ. ಚಿಂ. ರ.	ಭಾವಚಿಂತಾರತ್ನ
ದೇ. ರಾ. ಕಥೆ.	ದೇವಚಂದ್ರನ ರಾಜಾವಳೀಕಥೆ
ಬ. ರಾ. ವಿ.	ಬಸವರಾಜವಿಜಯ
ಶ. ಶಂ. ವಿ.	ಶಬರಶಂಕರವಿಳಾಸ
ಕ. ಕ. ರ.	ಕವಿಕರ್ಣರಸಾಯನ
ಶಿ. ಸಂ.	ಶಿವಾನುಭವ ಸಂಚಿಕೆ
ಕು. ವ್ಯಾ. ಭಾ.	ಕುಮಾರವ್ಯಾಸ ಭಾರತ
ವ್ಯಾ. ಮ. ಭಾ.	ವ್ಯಾಸ ಮಹಾಭಾರತ
ರಾ. ವಿ.	ರಾಜಶೇಖರವಿಳಾಸಂ

ಮುನ್ನುಡಿ

(ಪ್ರಥಮ ಮುದ್ರಣ)

ಮಹಾಕವಿ ಷಡಕ್ಷರಿದೇವನ ಸಮಗ್ರ ರಾಜಶೇಖರವಿಳಾಸದ ಪರಿಷ್ಕೃತ ಪ್ರಕಟನೆಯು ನಮ್ಮ ವಿಶ್ವವಿದ್ಯಾಲಯದ ಕನ್ನಡ ವಿಭಾಗದವರು ಕೈಕೊಂಡ 'ಕನ್ನಡ ಕಾವ್ಯಮಾಲೆ' ಯಲ್ಲಿ ಮೂರನೆಯ ಪುಷ್ಪವಾಗಿ ಇದೀಗ ಅರಳಲಿದೆ. ಈ ಗ್ರಂಥಕ್ಕೆ ಬಹು ಸಂತೋಷದಿಂದ ಮುನ್ನುಡಿರೂಪದಲ್ಲಿ ಈ ನಾಲ್ಕು ಮಾತುಗಳನ್ನು ಬರೆಯುತ್ತಿದ್ದೇನೆ.

'ರಾಜಶೇಖರವಿಳಾಸ'ವು ಷಡಕ್ಷರಿದೇವನ ಮಹೋನ್ನತವಾದ ಕೃತಿ. ಕನ್ನಡ ಸಾಹಿತ್ಯದಲ್ಲಿ ಶಾಶ್ವತವಾಗಿ ಉಳಿಯುವ ಕೆಲವೇ ಕೆಲವು ಕೃತಿಗಳಲ್ಲಿ ಇದೂ ಒಂದು. ಈ ಕಾವ್ಯವನ್ನು ಷಡಕ್ಷರಿದೇವನು ಅದ್ವಿತೀಯವಾದ ಪ್ರತಿಭೆಯಿಂದ ಪೂರೈಸಿ, ಪಂಪ, ರನ್ನ, ನಾಗಚಂದ್ರ, ಹರಿಹರರಂಥ ಉದ್ದಾಮ ಕವಿಗಳ ಮಾಲಿಕೆಯಲ್ಲಿ ಗಣ್ಯವಾದ ಸ್ಥಾನವನ್ನು ಪಡೆದಿದ್ದಾನೆ.

ರಾಜಶೇಖರವಿಳಾಸವು ಅತ್ಯಂತ ಗಂಭೀರವಾದ ಶೈಲಿಯಲ್ಲಿ ಬರೆದ ಕಾವ್ಯವಾಗಿದ್ದರೂ, ರಸಭರಿತವಾಗಿರುವದರಿಂದ ಅದು ಒಂದು ಕಾಲಕ್ಕೆ ಬಹುಜನಪ್ರಿಯವಾಗಿದ್ದಿತು 'ಪ್ರೌಢಿಮೆ'ಯಿಂದ 'ಪಂಡಿತ'ರಿಗೂ 'ಕಾವ್ಯವೈಭವ'ದಿಂದ 'ಕವಿಸಹೃದಯ'ರಿಗೂ 'ಶೃಂಗಾರ-ಚಮತ್ಕಾರ-ರಸಿಕತೆ'ಗಳಿಂದ 'ಸರಸ ಸಜ್ಜನ'ರಿಗೂ ಇದು ಪ್ರಿಯವಾಗಿದೆ.

ಷಡಕ್ಷರಿದೇವನು ಮಹಾಕವಿ. ಜೀವನದ ಶಾಶ್ವತ ತತ್ವಗಳನ್ನು ಕಂಡುಕೊಂಡು ಕಾವ್ಯಮಯವಾದ ವಾಣಿಯಿಂದ ಬಿತ್ತರಿಸಿದವನು; ಭಕ್ತಿಯ ಬೆಳಕನ್ನು ಬೀರಿದವನು. ಕನ್ನಡ ಸಾಹಿತ್ಯದಲ್ಲಿ ಈತನ ಕೃತಿಗಳು ಚಿರಂತನವಾಗಿ ಉಳಿಯಬಲ್ಲವು. ಇಂಥ ಕೃತಿಗಳಿಂದ ಜನಜೀವನ ಹಸನಾಗುತ್ತದೆ, ಹದವಾಗುತ್ತದೆ. ನಾಡಿನ ಸಂಸ್ಕೃತಿಯ ಸಂವರ್ಧನೆಯಾಗುತ್ತದೆ.

ಇಷ್ಟು ಮಹತ್ವಪೂರ್ಣವೂ ಜನಪ್ರಿಯವೂ ಆದ ರಾಜಶೇಖರವಿಳಾಸದ ಪರಿಷ್ಕೃತ ಮುದ್ರಣ ಇದುವರೆಗೂ ಆಗದಿದ್ದುದರಿಂದ ಸಾಹಿತ್ಯಾಭ್ಯಾಸಕ್ಕೆ ತುಂಬ ತೊಂದರೆಯಾಗಿದ್ದಿತು. ಕಾರಣ, ಈ ಪ್ರಕಟನೆ ಮಹತ್ವಪೂರ್ಣವಾದುದಾಗಿದೆ. ಸಂಪಾದಕರು ರಾಜಶೇಖರವಿಳಾಸದ ಅನೇಕ ಪ್ರತಿಗಳನ್ನು ಸಂಗ್ರಹಿಸಿ ಈ ಗ್ರಂಥವನ್ನು ಅತ್ಯಂತ ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ. ವಿಸ್ತಾರವಾದ ಪ್ರಸ್ತಾವನೆಯನ್ನು ಬರೆದು ಕವಿಯ ಜೀವನ, ಕಾಲ, ಕೃತಿಗಳ ಬಗೆಗೆ ಹೊಸ ಬೆಳಕು ಬೀರಿ

ದ್ದಾರೆ. ಕವಿಯ ಎಲ್ಲ ಕಾವ್ಯಗಳ ಸಾರವನ್ನು ಕೊಟ್ಟು, ಸಹೃದಯರಿಗೆ ಮಹದುಪಕಾರ ಮಾಡಿದ್ದಾರೆ. ರಾಜಶೇಖರವಿಳಾಸದ ಅತಿ ಮಹತ್ವಪೂರ್ಣವಾದ ವಿಮರ್ಶೆಯನ್ನು ಕೊಟ್ಟು ಪೂರ್ವಕವಿಗಳ ಪ್ರಭಾವ ಷಡಕ್ಷರದೇವನ ಮೇಲೆ, ಹಾಗೂ ಆತನ ಪ್ರಭಾವ ಮುಂದಿನ ಕವಿಗಳ ಮೇಲೆ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ಅಭ್ಯಾಸಪೂರ್ಣವಾಗಿ ತೋರಿಸಿಕೊಟ್ಟಿದ್ದಾರೆ. ಸಂಶೋಧನೆ, ಕೃತಿವಿಮರ್ಶೆ— ಈ ದೃಷ್ಟಿಗಳಿಂದ ಈ ಪ್ರಸ್ತಾವನೆ ಮಹತ್ವಪೂರ್ಣವಾದುದು. ಕಠಿನಶಬ್ದಕೋಶ, ಪದ್ಯಗಳ ಅಕಾರಾದಿ, ಮೊದಲಾದವುಗಳಿಂದ ಈ ಗ್ರಂಥದ ಬೆಲೆ ಇನ್ನೂ ಹೆಚ್ಚಿದೆ.

ಇಂತಹ ಮಹತ್ವದ ಗ್ರಂಥವನ್ನು ಒದಗಿಸಿಕೊಟ್ಟ ಸಂಪಾದಕರನ್ನು ಅಭಿನಂದಿಸಿ, ಕನ್ನಡದಲ್ಲಿ ಇನ್ನೂ ಬೆಳಕು ಕಾಣದೆ ಇರುವ ಅನೇಕ ಗ್ರಂಥಗಳನ್ನು ಹೀಗೆ ಸಂಪಾದಿಸಿ ಪ್ರಕಟಿಸಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ,
೧೦–೧೧–೧೯೬೨.

ಡಾ. ಡಿ. ಸಿ. ಪಾವಟೆ
ಉಪಕುಲಪತಿಗಳು

ಅರಿಕೆ

ಷಡಕ್ಷರಿದೇವನು ಕನ್ನಡದ ಮಹಾಕವಿ. ಆತನ ರಾಜಶೇಖರವಿಳಾಸವು ನಮ್ಮ ಸಾಹಿತ್ಯದ ಒಂದು ಉಜ್ವಲ ಕೃತಿ. ಹದಿನೆಂಟು, ಹತ್ತೊಂಬತ್ತನೆಯ ಶತಮಾನಗಳ ಕಗ್ಗತ್ತಲೆಯ ಕಾಲದಲ್ಲಿ ಕನ್ನಡಿಗರು ತಮ್ಮ ಹಿಂದಿನ ಕವಿಗಳನ್ನೂ ಕೃತಿಗಳನ್ನೂ ಸಂಪೂರ್ಣವಾಗಿ ಮರೆಯುವ ಸ್ಥಿತಿಯಲ್ಲಿದ್ದರು. ಜ್ಞಾನದ ದೀವಟಿಗೆ ದೊಡ್ಡದಾಗುತ್ತದೆನ್ನುವ ಸ್ಥಿತಿ ನಾಡನ್ನಾವರಿಸಿತ್ತು. ಇಂತಹ ಸಮಯದಲ್ಲಿ ರಾಜಶೇಖರವಿಳಾಸವು ತನ್ನ ಉಜ್ವಲವಾದ ತೇಜಸ್ಸಿನಿಂದ ಬೆಳಗಿ ಜನತೆಯ ಕಣ್ಮನಗಳನ್ನು ತೆರೆಯುವಂತೆ ಮಾಡಿತು; ಅಪಾರವಾದ ಸಂಸ್ಕೃತಿಯ ಭಾಂಡಾಗಾರವೆನಿಸಿತು ; ರಸಿಕರ ರಸದೂಟವಾಯಿತು; ಜಾತಿ, ಮತ, ಪಂಥ, ಪ್ರದೇಶಗಳ ಗಣನೆಯಿಲ್ಲದೆ ಸರ್ವರ ಆದರವನ್ನು ಗಳಿಸಿತು. ರಾಜಶೇಖರವಿಳಾಸವನ್ನೋದಿ ಅರ್ಥೈಸಿ, ಅರಗಿಸಿಕೊಂಡರೆ ಪಾಂಡಿತ್ಯದ ಒಂದು ಸೀಮೆಯನ್ನು ಮುಟ್ಟಿದಂತಾಗುತ್ತಿತ್ತೆಂಬ ಕಲ್ಪನೆ ಮೊನ್ನೆಮೊನ್ನೆಯ ವರೆಗೂ ಜನತೆಯಲ್ಲಿದ್ದಿತ್ತು.

ರಾಜಶೇಖರವಿಳಾಸದ ಮಹತಿ ಎಂದೆಂದಿಗೂ ಇದ್ದುದೇ. ಷಡಕ್ಷರದೇವನ ಕೃತಿಗಳ ಅಭ್ಯಾಸವನ್ನು ವಿದ್ಯಾರ್ಥಿಗಳೂ ವಿದ್ವಾಂಸರೂ ನಾನಾಮುಖವಾಗಿ ಮಾಡುತ್ತಲಿದ್ದಾರೆ. ಆದ್ದರಿಂದ ಆತನ ಕೃತಿಗಳ ಪರಿಷ್ಕೃತ ಮುದ್ರಣದ ಅವಶ್ಯಕತೆ ವಿಶೇಷವಾಗಿದೆ. ಈ ಮೊದಲು ವೇದಮೂರ್ತಿ ಪಿ. ಆರ್. ಕರಿಬಸವಶಾಸ್ತ್ರಿಗಳವರು ರಾಜಶೇಖರವಿಳಾಸವನ್ನು ಪರಿಶೋಧಿಸಿ ಮುದ್ರಿಸಿದ್ದರು. ಆ ಪ್ರತಿಗಳು ಈಗ ದೊರೆಯದಾಗಿವೆ. ಅದನ್ನು ಮನದಂದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಈ ಕೃತಿಯ ಪರಿಷ್ಕರಣ ಕಾರ್ಯವನ್ನು ಈಗ ಎರಡುವರ್ಷಗಳ ಪೂರ್ವದಲ್ಲಿಯೇ ಪ್ರಾರಂಭಿಸಲಾಯಿತು. ಆ ಪ್ರಯತ್ನವೇ ಇಂದು ಫಲಕೊಟ್ಟಿದೆಯೆಂದು ತಿಳಿಸಲು ಸಂತೋಷವಾಗುತ್ತದೆ.

ಹಳಗನ್ನಡದ ಕಾವ್ಯಗಳನ್ನು ಸಶಾಸ್ತ್ರೀಯವಾಗಿ ಶುದ್ಧವಾಗಿ ಪ್ರಕಟಗೊಳಿಸುವ ಕಾರ್ಯವೇನು ಸಣ್ಣದಲ್ಲ. ಮೊದಲು ವಿವಿಧ ಪ್ರದೇಶಗಳಿಗೊಳಪಟ್ಟ ತಾಡವೋಲೆ, ಕೋರಿಕಾಗದ, ಹಸ್ತಪ್ರತಿಗಳನ್ನು ಸಂಗ್ರಹಿಸುವುದು ಅಗತ್ಯವಾದುದು. ಅದಕ್ಕಾಗಿ ಮೈಸೂರು, ಹೈದರಾಬಾದ ಮತ್ತು ಉತ್ತರ ಕರ್ನಾಟಕದ ವಿಶಿಷ್ಟ ಸ್ಥಳಗಳಿಂದ ತಾಡವೋಲೆಯ ಹಸ್ತಪ್ರತಿಗಳನ್ನು ದೊರಕಿಸಲಾಯಿತು. ಆ ಪ್ರತಿಗಳ ವಿವರ ಇಂತಿದೆ:

ಬ ಬಾಗಿಲುಕೋಟೆಯ ಬಸವೇಶ್ವರ ಕಾಲೇಜದ ಪ್ರಿನ್ಸಿಪಾಲರಾದ ಡಾ. ಎಸ್, ಸಿ. ನಂದೀಮಠ, ಎಮ್. ಎ., ಪಿಎಚ್. ಡಿ. (ಲಂಡನ್) ಅವರು ಕೃಪೆಯಿಟ್ಟು ಕಳಿಸಿದ ತಾಡವೋಲೆಯ ಪ್ರತಿಯಿದು. ಇದನ್ನು ಹೈದರಾಬಾದ ಸಂಸ್ಥಾನದಿಂದ ತಂದು ಕಾಲೇಜದ ಹಸ್ತಪ್ರತಿಗಳ ಸಂಗ್ರಹಾಲಯದಲ್ಲಿ ಇಡಲಾಗಿತ್ತು. ಪ್ರತಿ ಸಂಪೂರ್ಣವಿದ್ದು ನಡುವೆ ಕೆಲವು ಗರಿಗಳು ಮುರಿದಿವೆ. ಬರೆಹ ತಕ್ಕಮಟ್ಟಿಗೆ ಶುದ್ಧವಾಗಿದೆ. ಶಕಟರೇಫವನ್ನು ಬಳಸಿಲ್ಲ. ಇ, ಉ ಗಳ ಹೊರತಾಗಿ ಉಳಿದ ಸ್ವರಗಳ ದೀರ್ಘಸಂಜ್ಞೆಯನ್ನು ಉಪಯೋಗಿಸಿಲ್ಲ. ಮಹಾಪ್ರಾಣ ಒತ್ತಕ್ಷರಗಳನ್ನು ಸರಿಯಾಗಿ ಬರೆದಿದ್ದಾನೆ, ಎಕಾರಾಂತ ಧಾತುಗಳ ಕ್ರಿಯಾಪದ ರೂಪಗಳಲ್ಲಿ ಎಕಾರವನ್ನು ಅಕಾರವಾಗಿ ಪರಿವರ್ತಿಸಿಕೊಂಡಿದ್ದಾನೆ; ಉದಾ: ಬರೆದು-ಬರದು, ಎಸೆದವು-ಎಸದವು. ಪ್ರತಿಮಾಡಿದವರ ಹೆಸರಾಗಲಿ ಬರೆದು ಮುಗಿಸಿದ ಮಿತಿಯಾಗಲಿ ಉಲ್ಲಿಖಿತವಾಗಿಲ್ಲ.

ಮೈ ಮೈಸೂರು ಓರಿಯೆಂಟಲ್ ರಿಸರ್ಚ ಇನ್‌ಸ್ಟಿಟ್ಯೂಟಿನ ತಾಡವೋಲೆಯ ಪ್ರತಿಯಿದು. ಇದನ್ನು ಆ ಇನ್‌ಸ್ಟಿಟ್ಯೂಟಿನ ಅಧಿಕಾರಿಗಳು ದಯವಿಟ್ಟು ಕಳಿಸಿ ಉಪಕಾರಮಾಡಿದರು. ಪ್ರತಿಯು ಉತ್ತಮ ಸ್ಥಿತಿಯಲ್ಲಿದ್ದು ಬರೆಹ ಶುದ್ಧವಾಗಿದೆ. ಅಲ್ಲಿ ಶಕಟರೇಫವನ್ನು ಸರಿಯಾಗಿ ಬಳಸಿರುವದಲ್ಲದೆ ಹಳಗನ್ನಡ ಪ್ರಯೋಗಗಳನ್ನು ಶುದ್ಧವಾಗಿ ಬರೆಯಲಾಗಿದೆ. ಅಲ್ಲಿರುವ ಭಾಷೆ ಬರಹಗಳು ಮೈಸೂರ ಕನ್ನಡವನ್ನು ಪ್ರತಿನಿಧಿಸುತ್ತವೆ.

ಮೂ ಹುಬ್ಬಳ್ಳಿಯ ಮೂರುಸಾವಿರಮಠದ ಶ್ರೀಜಗದ್ಗುರುಗಳವರು ಕೃಪೆಯಿಂದ ದಯಪಾಲಿಸಿದ ತಾಡವೋಲೆಯ ಪ್ರತಿಯಿದು. ಪ್ರತಿಯು ಸಂಪೂರ್ಣವಾಗಿದ್ದು ಭಾಷೆ ಮತ್ತು ಲಿಪಿ ಎರಡೂ ಶುದ್ಧವಾಗಿವೆ. ಸ್ವರಾದಿ ಶಬ್ದಗಳಲ್ಲಿ ಸ್ವರಗಳ ಬದಲು ವ್ಯಂಜನಗಳನ್ನೇ ಬಳಸಲಾಗಿದೆ. ಏ ಮತ್ತು ಓ ಈ ದೀರ್ಘಸ್ವರಗಳ ಬದಲು ಹ್ರಸ್ವವನ್ನೇ ಇಟ್ಟಿದ್ದಾನೆ. ಶಕಟರೇಫವನ್ನು ಬಳಸಿರುವದಿಲ್ಲ. ಉಳಿದ ಎಲ್ಲ ರೀತಿಯಲ್ಲಿ ಪ್ರತಿ ಆಕರ್ಷಣೀಯವಾಗಿದೆ.

ತಾ ಈ ತಾಡವೋಲೆಯ ಪ್ರತಿಯನ್ನು ಧಾರವಾಡದ ಶ್ರೀ ಮಲ್ಲಾಬಾದಿ ವೀರಭದ್ರಪ್ಪನವರು ತಾಳಿಕೋಟೆಯಿಂದ ತಂದಿದ್ದು ಅದನ್ನು ನಮ್ಮ ಉಪಯೋಗಕ್ಕೆ ಕೊಟ್ಟು ಸಹಕರಿಸಿದರು. ಪ್ರತಿಯು ಸಾಕಷ್ಟು ಖಿಲವಾಗಿದ್ದು ಭಾಷೆ ಮತ್ತು ಬರಹಗಳೆರಡೂ ಅಶುದ್ಧವಾಗಿವೆ. ಬಹುತರವಾಗಿ ಸ್ವರಗಳ ಬದಲು ವ್ಯಂಜನಗಳನ್ನೇ ಉಪಯೋಗಿಸಿದ್ದಾನೆ. ಏಕಾರವನ್ನುಳಿದು ಮಿಕ್ಕ ದೀರ್ಘಸ್ವರಗಳನ್ನು ಸರಿಯಾಗಿ ಉಪಯೋಗಿಸಿದ್ದಾನೆ. ಶಕಟರೇಫವನ್ನು ಕ್ವಚಿತ್ತಾಗಿ ಬಳಸಲಾಗಿದೆ. ಪ್ರತಿಮಾಡಿದವನು ಕೆಲಕೆಲವು ಕಡೆಗಳಲ್ಲಿ ತಿದ್ದಿ ಹೊಸ ಶಬ್ದಗಳನ್ನು ಸೇರಿಸಿದುದೂ ಉಂಟು.

ಕ ಇದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ೫೧೯ ನೆಯ ನಂಬರಿನ ತಾಡವೋಲೆಯ ಪ್ರತಿಯು. ಪ್ರತಿ ಮಾಡಿದ ಕಾಲ ಇದರಲ್ಲಿ ಉಲ್ಲಿಖಿತವಿಲ್ಲ. ಆದರೂ ಬರೆಹವನ್ನೂ ಪ್ರತಿಯ ಸ್ಥಿತಿಯನ್ನೂ ನೋಡಿದರೆ ದೊರೆತ ಪ್ರತಿಗಳಲ್ಲಿ ಇದು ಹಳೆಯದಾಗಿ ತೋರುತ್ತದೆ. ಪ್ರತಿಯಲ್ಲಿ ಅಶುದ್ಧ ಪ್ರಯೋಗಗಳು ಬಹಳ ಕಡೆ ಕಂಡುಬರುತ್ತವೆ. ದೀರ್ಘದ ಬದಲು ಹ್ರಸ್ವಗಳನ್ನೂ ಮಹಾಪ್ರಾಣಗಳ ಬದಲು ಅಲ್ಪಪ್ರಾಣಗಳನ್ನೂ ಉಪಯೋಗಿಸಿದ್ದಾನೆ. ಆದರೆ, ಕ್ವಚಿತ್ತಾಗಿ ಸರಿಯಾದವುಗಳನ್ನು ಉಪಯೋಗಿಸಿದ್ದಾನೆ. ಶಕಟರೇಫವನ್ನು ಅನೇಕ ಕಡೆ ಬಳಸಿಲ್ಲ. ಎಲ್ಲಿಯೋ ಒಂದೊಂದು ಕಡೆಯಲ್ಲಿ ಮಾತ್ರ ಬಳಸಿದ್ದಾನೆ. ಎಕಾರಾಂತ ಧಾತುಗಳ ಕ್ರಿಯಾಪದರೂಪಗಳಲ್ಲಿ ಎಕಾರವನ್ನು ಅಪವಾದಾತ್ಮಕವಾಗಿ ಅಕಾರವಾಗಿ ಪರಿವರ್ತಿಸಿಕೊಂಡಿದ್ದಾನೆ; ಉದಾ: ಒರೆವೆ- ಒರವೆ.

ಖ ಇದೂ ಸಹ ಕನ್ನಡ ಸಂಶೋಧನ ಸಂಸ್ಥೆಯಲ್ಲಿದ್ದ ೪೨ ನೆಯ ನಂಬರಿನ ತಾಡವೋಲೆಯ ಪ್ರತಿ. ಬರೆಹ, ಭಾಷೆಗಳೆರಡೂ ಶುದ್ಧವಾಗಿದ್ದು ಪ್ರತಿ ಸಂಪೂರ್ಣವಾಗಿದೆ. ದೀರ್ಘವನ್ನು ಬಳಸಿಲ್ಲ. ಶಕಟರೇಫವನ್ನು ಬಳಸಿದ್ದರೂ ತಪ್ಪುತಪ್ಪಾಗಿವೆ. ಎಕಾರಾಂತ ಧಾತುಗಳ ಕ್ರಿಯಾಪದರೂಪಗಳಲ್ಲಿ ಕೆಲವೆಡೆ ಎಕಾರಕ್ಕೆ ಬದಲಾಗಿ ಅಕಾರವನ್ನೂ ಉಪಯೋಗಿಸಿದ್ದಾನೆ. ಉದಾ: ಬರೆವುದಕ್ಕೆ ಬರವುದಕ್ಕೆ ಮುಂ. ಕೃತಿಯ ಅಂತ್ಯದಲ್ಲಿ ಲಿಪಿಕಾರನ ಹೆಸರಾಗಲಿ, ಆತನು ಬರೆದ ಕಾಲವಾಗಲಿ ಉಲ್ಲಿಖಿತವಾಗಿಲ್ಲ.

ಇ ಕನ್ನಡ ಸಂಶೋಧನ ಸಂಸ್ಥೆಯವರಿಂದ ಪಡೆದ ಕಾಗದ ಪ್ರತಿ. ಪ್ರತಿಯ ನಂಬರು ೧೪೦೫. ಕಾವ್ಯಾರಂಭದಲ್ಲಿ "ರಾಣೇಬೆನ್ನೂರ ಯಿಟಗಿ ಶಿವರುದ್ರಪ್ಪನ ಪುತ್ರ ಚನ್ನಬಸಪನು ನೃಪಶಾಲಿವಾಹನ ಶಕ ೧೭೫೭ ಮನ್ಮಥನಾಮ ಸಂವತ್ಸರದ ಭಾದ್ರಪದ ಶುದ್ಧ ೪ ಗುರುವಾರ ದಿವಸ ಯಳೇಂದ್ರ ಷಡಕ್ಷರ ಸ್ವಾಮಿಗಳು ನಿರೂಪಿಸಿದ ರಾಜಶೇಖರ ಕಲಿವ ಅಭಿಲಾಷೆಯಿಂದ ಖುದ್ದ ಪುಸ್ತಕ ಸಂಗ್ರಹ ನಿಮಿತ್ತ್ಯ ಪ್ರಾರಂಭಿಸಿದ್ದು...." ಎಂದು ಹೇಳಿಕೊಂಡು ಕಾವ್ಯಾಂತ್ಯದಲ್ಲಿ "ಶಾಲಿವಾಹನ ಶಕ ಮಾರ್ಗಶಿರ ವಧಿ ೧೨ ಗುರುವಾರ ತಾಸು ಎರಡರಲ್ಲಿ ದಿವಾಕಾಲದಲ್ಲಿ ಸುಮುಹೂರ್ತದಲ್ಲಿ ಈ ರಾಜಶೇಖರ ಬರವಣ ಸಮಾಪ್ತ........" ಎಂದಿರುವದರಿಂದ ಸುಮಾರು ನಾಲ್ಕು ತಿಂಗಳಲ್ಲಿ ಪ್ರತಿಯನ್ನು ಸಿದ್ಧಗೊಳಿಸಿದ್ದಾನೆ ಎಂದು ತಿಳಿದುಬರುತ್ತದೆ. ಲಿಪಿ, ಭಾಷೆ ಎರಡೂ ಶುದ್ಧವಾಗಿದ್ದು ಶಕಟರೇಫವನ್ನು ಬಳಸಿಲ್ಲ. ಶಬ್ದಾದಿಯ ಸ್ವರಗಳ ಬದಲಾಗಿ ಬಹುತರವಾಗಿ ವ್ಯಂಜನಗಳನ್ನೇ ಬಳಸಿದ್ದಾನೆ.

ಘ ಇದು ಕನ್ನಡ ಸಂಶೋಧನ ಸಂಸ್ಥೆಯ ಪ್ರತಿ. ಪ್ರತಿಯು ಸಂಪೂರ್ಣವಿದ್ದು ಬರೆಹ ಸಾಮಾನ್ಯವಾಗಿದೆ. ಮಹಾಪ್ರಾಣಗಳನ್ನೂ ದೀರ್ಘಗಳನ್ನೂ ಬಳಸಿಲ್ಲ. ಶಕಟರೇಫವನ್ನು ಕಟ್ಟುನಿಟ್ಟಾಗಿ ಬಳಸಿದ್ದಾನೆ. ಕಾವ್ಯದ ಅಂತ್ಯದಲ್ಲಿ— "ಬಿದರೂರ ಪಟ್ಟಣದಲ್ಲಿರ್ಪ ಬೆಂಡಿಗೇಜಿಯ ರಾಮಶೆಟ್ಟಿಯ ಪುಣ್ಯಸ್ತ್ರೀಯಳಾದ

ಶಾಂತಂಪುನ ಪುತ್ರಿಯಳಾದ ಸಂಗಂಮನವರಿಗೆ ಧನ-ಕನಕ, ವಸ್ತು-ವಾಹನ, ಕರಿ-ತುರಗ, ವರಪಾಲಕಿ, ದಾಸಿ ಭೃತ್ಯ, ಸುತರು ಬಂಧುಗಳು, ಮುತ್ತು ಮಾಣಿಕ, ವಜ್ರ ವೈಢೂರ್ಯ, ಗೋಮೇಧಿಕ, ಪುಷ್ಯರಾಗ, ಪಚ್ಚೆ, ಪವಳ, ನೀಲ ಮೊದಲಾದ ನವರತ್ನಭೂಷಣಾಲಂಕೃತರಾಗಿ ಪುತ್ರಸಂತಾನ ಘನಕ್ಕೆ ಘನವಾಗಿ ಬಾಳಲಿಯೆಂದು ತ್ರಿಸಂಧ್ಯಾಕಾಲದಲ್ಲು ಹರಸಿ ಮಾಡುವಂತೆ ಪುರಾಣದ ಮಹಂತಸ್ವಾಮಿಗಳೆ ರಾಜ-ಶೇಖರವಿಳಾಸ ಬರೆಸಿಕೊಟ್ಟರು" ಎಂದು ಬರೆಯಲ್ಪಟ್ಟಿದೆ.

ಟಿ ಬಾಗಿಲುಕೋಟೆಯ ಟೀಕಿನ ಮಠದ ಪ್ರತಿಯಿದು. ಪ್ರೊ. ಉಮಾಪತಿ ಶಾಸ್ತ್ರಿಗಳವರು ಕಳಿಸಿಕೊಟ್ಟು ಉಪಕಾರಮಾಡಿದರು. ಇದು ಕಾಗದದ ಪ್ರತಿಯಿರುತ್ತದೆ. ಬರೆಹ ಸಾಧಾರಣವಿದ್ದರೂ ಭಾಷೆ ಶುದ್ಧವಿದೆ. ಶ, ಷ, ಸ ಗಳನ್ನು ಸರಿಯಾಗಿ ಪಾಲಿಸಿಕೊಂಡುಬಂದಿರುವದು ಈ ಪ್ರತಿಯ ವೈಶಿಷ್ಟ್ಯ. ಶಕಟ ರೇಫವನ್ನು ಕ್ವಚಿತ್ತಾಗಿ ಬಳಸಿದ್ದಾನೆ. ದೀರ್ಘವನ್ನು ಬಹುತರವಾಗಿ ಬಳಸಿಲ್ಲ.

ಈ ಒಂಬತ್ತು ಪ್ರತಿಗಳ ಪರಸ್ಪರ ಸಂಬಂಧ ಹೀಗಿದೆ :



ಈ ರಾಜಶೇಖರವಿಳಾಸವು ಇಷ್ಟು ಪ್ರತಿಗಳ ಆಧಾರಗಳಿಂದ ಪರಿಷ್ಕೃತವಾಗಿದೆ. ಇದರಲ್ಲಿ ಶಕಟರೇಫವನ್ನು ಬಳಸಿದ್ದೇವೆ. ಷಡಕ್ಷರದೇವನು ಹರಿಹರದೇವನ ಉದಿತ ಮಾರ್ಗದಲ್ಲಿ ನಡೆದವನಾದುದರಿಂದ 'ಅಬಿ, ಕುಳ, ಕ್ಷಳ' ವಿಭೇದವನ್ನು ಮಾಡಿ ದಂತಿಲ್ಲ. ಆದುದರಿಂದಲೇ 'ಟಿ' ಕಾರಪ್ರಯೋಗವು ನಮಗೆ ದೊರೆತ ಯಾವ ಪ್ರತಿಗಳಲ್ಲಿಯೂ ಕಾಣುವುದಿಲ್ಲ. ಕಾರಣ 'ಟಿ' ಕಾರವನ್ನು ಇಲ್ಲಿ ಕಾಣಲಾರೆವು.

ನಮ್ಮ ವಿಶ್ವವಿದ್ಯಾಲಯದ ಮಾನ್ಯ ಉಪಕುಲಪತಿಗಳಾದ **ರ್‍ಯಾಂ. ಡಿ. ಸಿ. ಪಾವಟೆ** ಎಂ. ಎ. (ಕ್ಯಾಂಟಬ್) ಅವರು ಕೃಪೆಯಿಟ್ಟು ಈ ಗ್ರಂಥಕ್ಕೆ ಮುನ್ನುಡಿಯನ್ನು ಆಶೀರ್ವದಿಸಿರುವರು. ಅವರಿಗೆ ನಮ್ಮ ಭಕ್ತಿಪುರಸ್ಸರ ಪ್ರಣಾಮಗಳು.

ಈ ಗ್ರಂಥದ ಪರಿಷ್ಕರಣಕ್ಕೆ ಬೇಕಾದ ತಾಡವೋಲೆ, ಹಸ್ತಪ್ರತಿಗಳನ್ನು ದಯ ಪಾಲಿಸಿದ ಮಹನೀಯರಿಗೆ ನಮ್ಮ ಹಾರ್ದಿಕ ವಂದನೆಗಳು.

ಕನ್ನಡದ ಅಭಿಮಾನಿಗಳೂ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗಿರುವ ಪಂ. ಬಿ. ಶಿವಮೂರ್ತಿಶಾಸ್ತ್ರಿಗಳವರು ಷಡಕ್ಷರಿದೇವನಿಗೆ ಸಂಬಂಧಪಟ್ಟ ಬ್ಲಾಕು ಗಳನ್ನು ಪೂರೈಸಿ ಉಪಕಾರಮಾಡಿದ್ದಾರೆ.

ಕ್ರಿ. ಶ. ೧೯೬೦-೬೧ ರಲ್ಲಿ ಎಂ. ಎ. ಅಭ್ಯಾಸಮಾಡುತ್ತಿದ್ದ ವಿದ್ಯಾರ್ಥಿಗಳೂ ಕನ್ನಡವಿಭಾಗದ ಉಳಿದ ಅಧ್ಯಾಪಕರೂ ಈ ಕೃತಿಯ ಪ್ರಕಾಶನಕಾರ್ಯದಲ್ಲಿ ಹಲವಂದದಿಂದ ಸಹಾಯ ಸಲ್ಲಿಸಿದ್ದಾರೆ.

ಸಂಯುಕ್ತ ಕರ್ನಾಟಕ ಪ್ರೆಸ್ಸಿನವರು ಹೆಚ್ಚು ಶ್ರಮವಹಿಸಿ ಒಳ್ಳೇ ಅಂದವಾಗಿ ಮುದ್ರಿಸಿದ್ದಾರೆ. ಇವರೆಲ್ಲರನ್ನೂ ನಾವು ಹೃತ್ಪೂರ್ವಕವಾಗಿ ಸ್ಮರಿಸುತ್ತೇವೆ.

ಕರ್ನಾಟಕ ವಿಶ್ವವಿದ್ಯಾಲಯವು ಪ್ರಾಚೀನ ಕನ್ನಡ ಕಾವ್ಯಗಳ ಪರಿಷ್ಕೃತ ಮುದ್ರಣ ಕಾರ್ಯಕ್ಕೆ ವಿಶೇಷವಾದ ಪ್ರೋತ್ಸಾಹ ನೀಡುತ್ತಲಿದೆ. ಅದರ ಫಲವಾಗಿಯೇ ವಿಶ್ವವಿದ್ಯಾಲಯದ ಕನ್ನಡ ವಿಭಾಗವು 'ಕನ್ನಡ ಕಾವ್ಯಮಾಲೆ'ಯೊಂದನ್ನು ಪ್ರಾರಂಭಿಸಿದೆ. ರಾಜಶೇಖರವಿಳಾಸವು ಆ ಮಾಲೆಯ ಮೂರನೆಯ ಪುಷ್ಪವಾಗಿದೆ. ಈ ಪುಷ್ಪವು ಹೆಚ್ಚು ಮನೋಹರವಾಗಿ ಅರಳಿಬರುವಂತೆ ನೆರವಾದ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನಾವು ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಸಹೃದಯರು ಈ ಕೃತಿಯನ್ನು ಆದರದಿಂದ ಬರಮಾಡಿಕೊಳ್ಳುವರೆಂದು ಆಶಿಸುತ್ತೇವೆ.

೨೯-೧೦-೧೯೬೨ ಸಂಪಾದಕರು

ದ್ವಿತೀಯ ಮುದ್ರಣ

ಮೊದಲನೆಯ ಮುದ್ರಣದ ಪ್ರತಿಗಳು ಮುಗಿದುದರಿಂದ ಈ ದ್ವಿತೀಯ ಮುದ್ರಣವನ್ನು ಪ್ರಕಟಿಸಲಾಗಿದೆ. ನಮ್ಮ ನೂತನ ಕುಲಪತಿಗಳಾದ ಡಾ. ಎ. ಎಸ್. ಅಡಕೆ, ಬಿ. ಇ., ಪಿಎಚ್. ಡಿ. ಅವರು ಈ ಕಾರ್ಯಕ್ಕೆ ಶುಭಾಶಯಗಳನ್ನಿತ್ತು ಆಶೀರ್ವದಿಸಿರುವರು. ನಮ್ಮ ರಜಿಸ್ಟ್ರಾರರೂ, ಪ್ರಕಟನೆ ಶಾಖೆಯವರೂ ಎಲ್ಲ ಬಗೆಯ ಸಹಾಯ ನೀಡಿರುವರು. ಕ್ವಾಲಿಟಿ ಪ್ರಿಂಟರ್ಸ ಅಚ್ಚುಕೂಟದವರು ಮುದ್ರಣ ಕಾರ್ಯವನ್ನು ಅಲ್ಪಾವಧಿಯಲ್ಲಿ ಅತ್ಯಂತ ತೃಪ್ತಿಕರವಾಗಿ ಪೂರೈಸಿಕೊಟ್ಟಿರುವರು. ಎಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

೧೨-೧೧-೧೯೬೮ ಸಂಪಾದಕರು

ಪ್ರಸ್ತಾವನೆ

ಷಡಕ್ಷರಿದೇವ : ಜೀವನಚರಿತ್ರೆ

೧

ಪೀಠಿಕೆ

ಕನ್ನಡ ಸಾಹಿತ್ಯದಲ್ಲಿ ಷಡಕ್ಷರಿ ಎಂಬ ಹೆಸರು ಚಿರಸ್ಥಾಯಿಯಾಗಿದೆ. ಇದು-ವರೆಗೆ ನಮ್ಮ ಅರಿತಕ್ಕೆ ಬಂದಮಟ್ಟಿಗೆ ಷಡಕ್ಷರಿ ಎಂಬ ಹೆಸರಿನ ಕವಿಗಳು ಕೆಳಗಿನಂತಿರುವರು:

ಕವಿಯ ಹೆಸರು	ಕಾಲ	ಕೃತಿಗಳು
೧) ಮುಪ್ಪಿನ ಷಡಕ್ಷರಿ	ಕ್ರಿ. ಶ. ಸು. ೧೫೦೦ ?	ಹಾಡುಗಳು
೨) ದೊಡ್ಡ ಷಡಕ್ಷರಸ್ವಾಮಿ	,, ೧೬೫೦	ವಚನ, ಹಾಡುಗಳು
೩) ಷಡಕ್ಷರಿದೇವ	,, ೧೬೫೫	ರಾಜಶೇಖರವಿಳಾಸ ಇತ್ಯಾದಿ
೪) ವಿರಕ್ತಷಡಕ್ಷರಿ	,, ೧೬೫೦	ಶಿವಪೂಜಾಷ್ಟಕ, ಶಿವಯೋಗಾಷ್ಟಕ ಇತ್ಯಾದಿ
೫) ಷಡಕ್ಷರಾಮಾತ್ಯ	,, ೧೬೫೨	ಧರ್ಮಶಿರೋಮಣಿ (ಸಂಸ್ಕೃತ)

ಈ ಐವರು ಕವಿಗಳಿತ್ತ ಕಾಣ್ಕೆಗಳಿಂದ ಕನ್ನಡಸಾಹಿತ್ಯ ಒಂದು ವಿಶೇಷಶಕ್ತಿಯನ್ನು ಪಡೆದಿದೆ. ಇವರಲ್ಲಿ ಮೂರನೆಯವನಾದ ಷಡಕ್ಷರಿದೇವನು ಮಹಾಕವಿಯೆನಿಸಿ, ಮೇರುಕೃತಿಗಳನ್ನು ರಚಿಸಿ ನಮ್ಮ ಸಾಹಿತ್ಯಕ್ಕೆಲ್ಲ ಮುಕುಟಪ್ರಾಯನಾಗಿದ್ದಾನೆ. ಆತನು ಕನ್ನಡ ಸಂಸ್ಕೃತ ಭಾಷೆಗಳೆರಡರಲ್ಲಿಯೂ ಅನೇಕ ಉದ್ಗ್ರಂಥಗಳನ್ನು ರಚಿಸಿ ಉಭಯಕವಿತಾವಿಶಾರದನೆನಿಸಿದ್ದಾನೆ.

---

೧. ರಾಜಶೇಖರವಿಳಾಸ ಮೊದಲಾದ ಗ್ರಂಥಗಳ ಹಸ್ತಪತ್ರಿಕೆಗಳಲ್ಲಿ ಈ ಕವಿಯ ಹೆಸರು 'ಷಡಕ್ಷರಿದೇವ' 'ಷಡಕ್ಷರದೇವ' 'ಷಡಕ್ಷರಸ್ವಾಮಿ' ಎಂದು ಮೂರು ಬಗೆಯಾಗಿ ಉಲ್ಲಿಖಿತವಾಗಿದೆ. ಎಲ್ಲವೂ ಸಾಧುಪ್ರಯೋಗಗಳೇ. ಈ ಕಾವ್ಯದಲ್ಲಿ ಷಡಕ್ಷರಿದೇವ ಎಂಬುದನ್ನು ಇಟ್ಟುಕೊಳ್ಳಲಾಗಿದೆ.

೨

ಜನ್ಮಕಾಲ

ಷಡಕ್ಷರಿದೇವನ ಜನ್ಮತಿಥಿ ಮತ್ತು ಲಿಂಗೈಕ್ಯಕಾಲ ಇವು ಎಲ್ಲಿಯೂ ಉಕ್ತ-ವಾದಂತೆ ಕಂಡುಬರುವುದಿಲ್ಲ. ಆತನು ಹದಿನೇಳನೆಯ ಶತಮಾನದ ಉತ್ತರಾರ್ಧ ದಲ್ಲಿ ಜೀವಿಸಿದ್ದನೆಂದು ನಿರ್ಧರವಾಗಿ ಹೇಳಬಹುದು. ಷಡಕ್ಷರಿದೇವನು ರಾಜಶೇಖರ ವಿಳಾಸ, ಬಸವರಾಜವಿಜಯಗಳನ್ನು ಬರೆದುದು ಅನುಕ್ರಮವಾಗಿ ಕ್ರಿ. ಶ. ೧೬೫೪ ಮತ್ತು ೧೬೭೭ರಲ್ಲಿ. ಷಡಕ್ಷರಿದೇವ, ಚಿಕದೇವರಾಯ, ತಿರುಮಲಾರ್ಯ, ವಿಶಾಲಾಕ್ಷಪಂಡಿತ ಇವರೆಲ್ಲರ ಪರಸ್ಪರ ಒಡನಾಟಗಳನ್ನು ತಿಳಿಸುವ ಆಖ್ಯಾಯಿಕೆ ಗಳು ದೇವಚಂದ್ರನ ರಾಜಾವಳೀ ಕಥೆಯಲ್ಲಿ ಉಕ್ತವಾಗಿವೆ. "ಎಳಂದೂರ ಷಡಕ್ಷರಿಯುಂ, ತತ್ಪುರದ ಜೈನಬ್ರಾಹ್ಮಣಸಪ್ಪ ಬೊಮ್ಮರಸನ ಪುತ್ರ ವಿಶಾಲಾಕ್ಷ ಪಂಡಿತನುಂ, ತಿರುಮಲಾರ್ಯನುಂ ಇಂತು ಮೂವರು ಸಹಾಧ್ಯಾಯಿಗಳಾಗಿ...." ೧ ಎಂದು ಅಲ್ಲಿ ಉಲ್ಲಿಖಿತವಾಗಿರುವುದರಿಂದ ಷಡಕ್ಷರಿದೇವನ ಜನ್ಮಕಾಲವನ್ನು ಸ್ಥೂಲ ವಾಗಿ ಊಹಿಸಲು ಅವಕಾಶವಿದ್ದಂತೆ ತೋರುತ್ತದೆ. "ಚಿಕದೇವರಾಯ ಮತ್ತು ತಿರುಮಲಾರ್ಯ ಇರ್ವರು ಕ್ರಿ. ಶ. ೧೬೪೫ ಕ್ಕೆ ಸರಿಯಾದ ಪಾರ್ಥಿವಸಂವತ್ಸರದ ಆಶ್ವಿಜಮಾಸದಲ್ಲಿ ಜನಿಸಿದರು." ೨ ಷಡಕ್ಷರಿದೇವನು ಇವರೊಡನೆ ಸಹಾಧ್ಯಾಯಿ ಯಾಗಿದ್ದನೆಂದು ಇಲ್ಲಿ ಹೇಳಿದ್ದರೂ ಆತನು ಅವರಿಗಿಂತ ವಯಸ್ಸಿನಲ್ಲಿ ಸ್ವಲ್ಪ ಹಿರಿಯ ನಾಗಿರುವಂತೆ ತೋರುತ್ತದೆ. ಕ್ರಿ. ಶ. ೧೬೫೪ ರಲ್ಲಿ ಆತನು ರಾಜಶೇಖರವಿಳಾಸವನ್ನು ರಚಿಸಿರುವನು. ಅಷ್ಟೊಂದು ಶೃಂಗಾರರಸಭರಿತವಾದ ಮಹಾಕಾವ್ಯವನ್ನು ಬರೆಯು ವಾಗ ಕವಿ ಯೌವನದಲ್ಲಿ ಕಾಲಿಟ್ಟಿರಬೇಕೆಂದು ಬೇರೆ ಹೇಳಬೇಕಾಗಿಲ್ಲ. ಆಗ ಕವಿಗೆ ಸುಮಾರು ಹದಿನೆಂಟು ಇಪ್ಪತ್ತು ವರ್ಷಗಳಾದರೂ ಆಗಿರಬೇಕು. ಅಂದರೆ ಷಡಕ್ಷರಿ ದೇವನು ಕ್ರಿ. ಶ. ೧೬೩೬ ರ ಸುಮಾರು ಜನಿಸಿರುವ ಸಂಭವವಿದೆ.

೩

ಜನ್ಮಸ್ಥಳ

ಮಹಾಕವಿ ಷಡಕ್ಷರಿದೇವನು ಸಾಮಾನ್ಯವಾಗಿ ಎಳಂದೂರ ಷಡಕ್ಷರಿದೇವ ನೆಂದೇ ಖ್ಯಾತಿವೆತ್ತಿದ್ದಾನೆ. ಆದುದರಿಂದ ಎಳಂದೂರಿಗೂ ಷಡಕ್ಷರಿದೇವನಿಗೂ ನಿಕಟಸಂಬಂಧವಿರಬೇಕೆಂದು ಅರ್ಥವಾಗುತ್ತದೆ. ಆ ಸಂಬಂಧ ಹಲವಾರು ತೆರನಾಗಿರಬಹುದು :

---

೧ ರಾಜಾವಳೀ ಕಥೆ :— ಅಧಿಕಾರ ೧೨ ಪುಟ ೪೪೬ ಹಸ್ತಪ್ರತಿ, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ.

೨ ರಾಜಾವಳೀ ಕಥೆ :— ಅಧಿಕಾರ ೧೨ ಪುಟ ೪೪೫; ಚಿಕದೇವರಾಯ ವಂಶಾವಳಿ ಪುಟ ೧೩೨–೩೩.

(೧) ಕವಿ ಎಳಂದೂರಲ್ಲಿ ಹುಟ್ಟಿರಬಹುದು.

ಇಲ್ಲವೆ

(೨) ಆತನು ಎಳಂದೂರನ್ನೇ ತನ್ನ ಜೀವನದ ಕಾರ್ಯರಂಗವನ್ನಾಗಿ ಮಾಡಿಕೊಂಡು ಅಲ್ಲಿಯೇ ಹೆಚ್ಚುಕಾಲ ಬಾಳಿರಬಹುದು.

ಇವುಗಳಲ್ಲಿ ಎರಡನೆಯ ಊಹೆಯ ಬಗೆಗೆ ಯಾರಲ್ಲಿಯೂ ಸಂದೇಹವಿಲ್ಲ. ಷಡಕ್ಷರಿದೇವನ ಕಾವ್ಯಕ್ಷೇತ್ರ ಎಳಂದೂರಾಗಿತ್ತೆಂಬುದಕ್ಕೆ ರಾಜಶೇಖರವಿಳಾಸ ರಚನೆಯ ಬಗೆಗೆ ಇರುವ ದಂತಕಥೆ[೧], ಆ ಭಾಗದ ಜನತೆಯಲ್ಲಿರುವ ನಂಬಿಗೆ, ದೇವಚಂದ್ರನ ರಾಜಾವಳೀ ಕಥೆ[೨] ಮೊದಲಾದವುಗಳಲ್ಲಿ ದೊರೆಯುವ ಆಧಾರ — ಇವೇ ಸಾಕ್ಷಿಯಾಗಿವೆ. ಆದರೆ ಷಡಕ್ಷರಿದೇವನ ಜನ್ಮಸ್ಥಳ ದನುಗೂರು. 'ಕವಿಕರ್ಣರಸಾಯನ' ದಲ್ಲಿ ಷಡಕ್ಷರಿದೇವನು ತನ್ನನ್ನು "ಧನುಃಪುರೋದ್ದಾನಯತೀಂದ್ರವಂಶಃ"[೩] ಎಂದು ಕರೆದುಕೊಂಡಿದ್ದಾನೆ. ಇದರಿಂದ ಆತನು ದನುಗೂರಿನ ಉದ್ದಾನಯತಿಗಳ ವಂಶದಲ್ಲಿ ಹುಟ್ಟಿದವನು ಎಂದು ಅರ್ಥವಾಗುತ್ತದೆ.

'ರಾಜಶೇಖರವಿಳಾಸ' ದಲ್ಲಿ ಉದ್ದಾನಶಿವಯೋಗಿಗಳ ಹಸ್ತಕಮಲೋದ್ಭವ ಅನ್ನದಾನೀಶ್ವರ, ತದೀಯ ಕರಕಂಜಜ ದನುಗೂರು ರೇವಣಸಿದ್ಧೇಶ, ಆತನ ಕರಕಂಜಾತಜಾತ ಚಿಕವೀರದೇಶಿಕ, ಚಿಕವೀರದೇಶಿಕನ ಕರಕಮಲೋದ್ಭವ ಷಡಕ್ಷರಿದೇವ ಎಂದು ಹೇಳಲಾಗಿದೆ. ರಾಜಶೇಖರವಿಳಾಸದ ಈ ಉಲ್ಲೇಖದಿಂದ ದನುಗೂರು ಮಠದ ಪಟ್ಟಾಧಿಕಾರಿಗಳು ಕೇವಲ ತಮ್ಮ ಗುರುಗಳ ಕರಕಮಲಸಂಜಾತರಾಗುತ್ತ ಬಂದರೇ, ಇಲ್ಲವೆ ಆ ಮಠದಲ್ಲಿಯೇ ಜನಿಸಿ ಪೀಠಾಧಿಪತಿಗಳಾದರೇ ಎಂಬ ಸಂದೇಹ ಒಡಮೂಡುತ್ತದೆ. 'ಕವಿಕರ್ಣರಾಸಾಯನ' ದಿಂದ ಈ ಸಂದೇಹ ನಿರಸನವಾಗುತ್ತದೆ. ಅಲ್ಲಿ ಷಡಕ್ಷರಿದೇವನನ್ನು ಧನುಃಪುರದ ಉದ್ದಾನ ಯತೀಂದ್ರರ ವಂಶಜನೆಂದು ಸ್ಪಷ್ಟವಾಗಿ ಕರೆದಿರುವುದರಿಂದ ಕವಿಯು ದನುಗೂರು ಮಠದ ಈ ಯತೀಂದ್ರರ ಪೂರ್ವಾಶ್ರಮಕ್ಕೆ ಸಂಬಂಧಪಟ್ಟ ಬಂಧುಬಳಗದವರ ಒಡಲಲ್ಲಿ ಜನಿಸಿರುವನೆಂಬ ಧ್ವನಿ ಸ್ಪಷ್ಟವಾಗಿ ಹೊರಹೊಮ್ಮುತ್ತದೆ. ವೀರಶೈವ ಸಂಪ್ರದಾಯದ ಗುರುವರ್ಗದ ಮಠಗಳಲ್ಲಿ ಮಠದ ಪಟ್ಟಾಧಿಕಾರಿಗಳು ಉತ್ತರಾಧಿಕಾರವನ್ನು ತಮ್ಮ ಪೂರ್ವಾಶ್ರಮದ ಬಂಧುಬಳಗದ ಸಂತಾನಕ್ಕೆ ಕೊಟ್ಟುಬಿಡುವ ರೂಢಿ ಇಂದಿಗೂ ಇದೆ. ದನುಗೂರಿನ

೧ ಕರಿಬಸವಶಾಸ್ತ್ರಿಗಳು; ರಾಜಶೇಖರವಿಳಾಸ. ಉಪೋದ್ಘಾತ ಪು. ೨

೨ ರಾಜಾವಳೀ ಕಥೆ ಅಧಿ. ೧೨. ಪುಟ ೪೫೪; ಕರ್ನಾಟಕ ಕವಿಚರಿತೆ ಭಾಗ II ಪು. ೪೪೨.

೩ ಕವಿಕರ್ಣರಸಾಯನ; ಸರ್ಗ ೧. ಪ. ೫೪



ಮಹಾಕವಿ ಷಡಕ್ಷರಿದೇವರ ಪುಣ್ಯಾಶ್ರಮ, ದನುಗೂರು

ಪಂಡಿತರತ್ನಂ ಬಿ. ಶಿವಮೂರ್ತಿಶಾಸ್ತ್ರಿಗಳವರ ಕೃಪೆಯಿಂದ

ದನೂಗೂರಲ್ಲಿರುವ ಮಹಾಕವಿ ಷಡಕ್ಷರಿದೇವರಮಠ

ಪಂಡಿತರತ್ನಂ ಬಿ. ಶಿವಮೂರ್ತಿಶಾಸ್ತ್ರಿಗಳವರ ಕೃಪೆಯಿಂದ

ಮಠವೂ ಈ ಸಂಪ್ರದಾಯಕ್ಕೆ ಸೇರಿದುದಾಗಿರಬೇಕು. ಆದುದರಿಂದ ಷಡಕ್ಷರಿದೇವನ ಜನ್ಮಸ್ಥಳ ದನುಗೂರು ಎಂದು ಸ್ಪಷ್ಟವಾಗಿ ಹೇಳಬಹುದು. ಅದು ಈಗ ಮಂಡ್ಯ ಜಿಲ್ಲೆಗೆ ಸೇರಿದೆ.[೧]

೪

ವಾಸಸ್ಥಳ

ಷಡಕ್ಷರಿದೇವನು ದನುಗೂರಲ್ಲಿ ಜನಿಸಿ ಅಲ್ಲಿಯ ಮಠಕ್ಕೆ ಪಟ್ಟಾಧಿಕಾರಿಯಾಗಿದ್ದರೂ ಆತನು ತನ್ನ ಜೀವನದ ಬಹುಭಾಗವನ್ನೆಲ್ಲ ಎಳಂದೂರಲ್ಲಿಯೇ ಕಳೆದಂತೆ ತೋರುತ್ತದೆ. ಎಳಂದೂರ ಷಡಕ್ಷರಿಯೆಂದೇ ಆತನು ಖ್ಯಾತಿವೆತ್ತಿದ್ದಾನೆ. ಎಳಂದೂರಲ್ಲಿಯೇ ವಿದ್ಯಾಭ್ಯಾಸ ಮಾಡಿದನೆಂಬುದಕ್ಕೆ ರಾಜಾವಳೀ ಕಥೆಯೇ ಸಾಕ್ಷಿ.[೨] ರಾಜಶೇಖರವಿಳಾಸವನ್ನು ಎಳಂದೂರಲ್ಲಿಯೇ ರಚಿಸಿದನೆಂಬ ಬಗೆಗೆ ಐತಿಹ್ಯಗಳು[೩] ಇವೆ. ದನುಗೂರಿನ ಷಡಕ್ಷರಿಗೂ ಎಳಂದೂರಿಗೂ ಇಷ್ಟೊಂದು ನಿಕಟಸಂಬಂಧ ಉಂಟಾಗಲು ಕಾರಣವೇನೆಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ.

ಷಡಕ್ಷರಿದೇವನ ವಂಶಜರ ಮಠವೊಂದು ಎಳಂದೂರಲ್ಲಿಯೂ ಇರುವ ಸಂಭವವಿದೆ. ಏಕೆಂದರೆ— ರಾಜಾವಳೀಕಥೆಯಲ್ಲಿ ಆತನನ್ನು "ಎಳಂದೂರ ಅಮೃತಾಂಬಿಕೆ ತೌರಮನೆಗೆ ಗುರುವಾದ ಆರಾಧ್ಯಪುತ್ರನು"[೪] ಎಂದು ಕರೆಯಲಾಗಿದೆ. ಎಳಂದೂರ ರಾಧ್ಯರ ಮನೆತನ ಬಹುಪ್ರಸಿದ್ಧವೂ ಪ್ರಭಾವಶಾಲಿಯೂ ಆಗಿರುವಂತೆ ರಾಜಾವಳೀ ಕಥೆಯಿಂದಲೇ ವ್ಯಕ್ತವಾಗುತ್ತದೆ. ಎಳಂದೂರ ಜೈನ ವಂಶ (ಚೆನ್ನ?) ರಾಜನೆಂಬವನಿಗೆ ಈ ಆರಾಧ್ಯಮನೆತನದವರು ಶಿವದೀಕ್ಷೆಯನ್ನು ಕೊಟ್ಟಂತೆ ಆ ಕಥೆಯಿಂದ ತಿಳಿದುಬರುತ್ತದೆ.[೫] ಈ ಆರಾಧ್ಯರ ಮಠವೂ ದನುಗೂರಿನ ಷಡಕ್ಷರಿದೇವನ ಮಠವೂ ಒಂದೇ ಕುಟುಂಬಕ್ಕೆ ಸೇರಿರಬೇಕು.

ದನಗೂರಲ್ಲಿ ಹುಟ್ಟಿದ ಷಡಕ್ಷರಿಯು ತಮ್ಮ ಮಠದ ಬೇರೊಂದು ಶಾಖೆಯಿರುವ ಎಳಂದೂರಿಗೆ ಬಂದಿರುವುದು ಸಹಜವಾಗಿದೆ. ಆತನು ಅಲ್ಲಿಗೆ ಬರುವುದಕ್ಕೆ ಇದಕ್ಕಿಂತಲೂ ಹೆಚ್ಚು ಪ್ರಬಲವಾದ ಕಾರಣಗಳೂ ಉಂಟು. ಎಳಂದೂರು ಒಂದು

---

೧ ಈತನು ಹುಟ್ಟಿದುದು ಮೈಸೂರ ಜಿಲ್ಲೆಯ ಮಳವಳ್ಳಿ ತಾಲೂಕಿಗೆ ಸೇರಿದ 'ದನುಗೂರು' ಎಂಬ ಗ್ರಾಮದಲ್ಲಿ— ಎಮ್. ಎಸ್. ಬಸವಲಿಂಗಯ್ಯ ಶಿವಾನುಭವ. ಸಂ. ೧೧. ಸಂ. ೭, ಷಡಕ್ಷರಿಯ ಜನ್ಮಸ್ಥಳವಾದ ದನುಗೂರು...ಬಿ. ಶಿವಮೂರ್ತಿ ಶಾಸ್ತ್ರಿಗಳು. ಶಿ. ಸಾ. ೭-೧, ೨. ರಾಜಾವಳೀಕಥೆ ಅಧಿ. ೧೨. ಪು, ೪೪೬. ೩ ಲೀಲಾವತಿ ಗ್ರಂಥದ ಮೆರವಣಿಗೆಯ ಕಥೆ, ೪. ರಾಜಾವಳೀಕಥೆ ಅಧಿ. ೧೨. ಪು. ೪೭೬. ೫ ರಾಜಾವಳೀಕಥೆ ಅಧಿ. ೧೨ ಪು. ೪೪೫.

ಪ್ರಸಿದ್ಧ ವಿದ್ಯಾಕೇಂದ್ರವಾಗಿರಬೇಕೆಂದು ತೋರುತ್ತದೆ.೧ ಅದು ಪ್ರಸಿದ್ಧವಾದ ಪದಿನಾಡ ರಾಜಧಾನಿಯಾಗಿದ್ದಿತು.೨ ರಾಜಧಾನಿಯು ವಿದ್ಯಾಕೇಂದ್ರವಾಗಿರುವುದು ಸಹಜವಾಗಿದೆ. ತನ್ನ ಜನ್ಮಸ್ಥಳವಾದ ದನುಗೂರನ್ನು ಬಿಟ್ಟು ಷಡಕ್ಷರಿದೇವನು ವಿದ್ಯಾಭ್ಯಾಸಕ್ಕಾಗಿ ತಮ್ಮ ಮಠದ ಬೇರೊಂದು ಶಾಖೆಯಿರುವ ಎಳಂದೂರಿಗೆ ಬಂದಿರುವುದೂ ಸಹಜ. ಅಲ್ಲಿ ಅವನ ವಿದ್ಯಾಭ್ಯಾಸವು ಹೇಗೆ ನಡೆಯಿತೆಂಬುದು ಕೆಳಗಣ ವಿವರಣೆಯಿಂದ ಸ್ಪಷ್ಟವಾಗುತ್ತದೆ.

"ಎಳವಂದೂರ....ಷಡಕ್ಷರಿಯುಂ ತತ್ಪುರದ ಜೈನ ಬ್ರಾಹ್ಮಣನಪ್ಪ ಬೊಮ್ಮರಸನ ಪುತ್ರ ವಿಶಾಲಾಕ್ಷಪಂಡಿತನುಂ, ತಿರುಮಲಾರ್ಯ್ಯನುಮಿಂತು ಮೂವರು ಸಹಾಧ್ಯಾಯಿಗಳಾಗಿ ನಿಘಂಟು, ವ್ಯಾಕರಣ, ಕಾವ್ಯ, ನಾಟಕ, ಛಂದೋಲಂಕಾರ, ತರ್ಕ ಮೊದಲಾದ ವಿದ್ಯೆಯೆಲ್ಲಮಂ ಕಲ್ತು....ತಂತಮ್ಮ ಮತಪ್ರಮೇಯಂಗಳೊಳು ಶಿಖಾಮಣಿಗಳೆನಿಸಿ ಕವಿ ಗಮಕಿ–ವಾದಿ–ವಾಗ್ಮಿತ್ವದೊಳು ಅಗ್ರಗಣ್ಯರೆನಿಸಿದರ್. ಅವರೊಳು ಚಿಕದೇವರಾಜರಸಂ ಕೋವಿದ ಶಿಖಾಮಣಿಯೆನಿಸಿದಂ, ತಿರುಮಲಾರ್ಯ್ಯಂ ವಿದ್ಯಾವಿಶಾರದನೆನಿಸಿದಂ, ವಿಶಾಲಾಕ್ಷಂ ಸಾಹಿತ್ಯಭಾರತಿಯೆನಿಸಿದಂ, ಷಡಕ್ಷರಿಯು ಕವಿಶೇಖರನೆನಿಸಿದಂ.೩

ಷಡಕ್ಷರಿದೇವನು ಚಿಕದೇವರಾಜ, ತಿರುಮಲಾರ್ಯ್ಯ, ವಿಶಾಲಾಕ್ಷ ಪಂಡಿತ ಇವರೆಲ್ಲರೊಡನೆ ವಿದ್ಯಾಭ್ಯಾಸ ಮಾಡಿ ಪಂಡಿತನೆನಿಸಿ ವೀರಶೈವ ಮತದರ್ಶನದಲ್ಲಿ ಸಿದ್ಧಿಯನ್ನು ಪಡೆದು ಕವಿಶೇಖರನೆನಿಸಿ ಅವರೆಲ್ಲರಿಗಿಂತಲೂ ಮಿಗಿಲಾಗಿದ್ದನೆಂಬುದು ಈ ಉಲ್ಲೇಖದ ಸಾರ. ವಯೋಮಾನದಲ್ಲಿಯೂ ಆತನು ಅವರೆಲ್ಲರಿಗಿಂತ ಹಿರಿಯನಾಗಿರಬೇಕೆಂದು ಹಿಂದೆ ಹೇಳಿದುದು ಗಮನಾರ್ಹವಾಗಿದೆ. ಎಳಂದೂರಲ್ಲಿ ವಿದ್ಯಾಭ್ಯಾಸ ಮಾಡಿದ ಷಡಕ್ಷರಿದೇವನಿಗೆ ಆತನ ಶಿಷ್ಯರಾದ ಹದಿನಾಡ ಮುದ್ದುಭೂಪಾಲ೪ ಮತ್ತು ಮೈಸೂರ ಭೂಪಾಲರು೫ ಅಲ್ಲಿ ಮಠಮಾನ್ಯಗಳನ್ನು ನಿರ್ಮಿಸಿ, ಅನುಕೂಲತೆಗಳನ್ನು ಕಲ್ಪಿಸಿ ಕೊಟ್ಟುದರಿಂದ ಷಡಕ್ಷರಿದೇವನು ತನ್ನ ಜೀವಿತದ ಬಹುಭಾಗವನ್ನು ಎಳಂದೂರಲ್ಲಿಯೇ ಕಳೆದಿದ್ದಾನೆ. ಹೀಗೆ ಎಳಂದೂರು ಕವಿಯ ಕಾರ್ಯ್ಯರಂಗವಾಗಿ, ಕಾವ್ಯರಂಗವಾಗಿ ಪರಿಣಮಿಸಿದೆ.

---

೧. ರಾಜಾವಳೀ ಕಥೆ: ಅಧಿ. ೧೨ ಪು. ೪೪೬ ೨. ಶಿವಾಧಿಕ್ಯರತ್ನಾವಳಿ: ಕೊನೆಯ ಗದ್ಯ.
೩. ರಾಜಾವಳೀ ಕಥೆ: ಅಧಿ. ೧೨ ಪು. ೪೪೬. ೪. ಪಿ. ಆರ್. ಕರಿಬಸವಶಾಸ್ತ್ರಿಗಳು: ರಾಜಶೇಖರವಿಳಾಸ– ಉಪೋದ್ಘಾತ. ೫. ಕರ್ಣಾಟಕ ಕವಿಚರಿತೆ ಭಾಗ ೨ ಪು. ೪೪೨.

೫

ಇಳಾಪತಿಪೂಜಿತ

ಷಡಕ್ಷರಿದೇವನು ಒಂದೆರಡು ರಾಜಮನೆತನಗಳಿಗೆ ಗುರುವಾಗಿರುವ ಭಾಗ್ಯವನ್ನು ಪಡೆದಿದ್ದನು. ಆತನು ಹದಿನಾಡು ಮುದ್ದುರಾಜನಿಗೆ ಕುಲಗುರುವಾಗಿದ್ದನು. "ಶ್ರೀಬಾಲೇಂದು ಪುರವರಾಧೀಶ ಮುದ್ದುಭೂಪಕುಲಗುರು ಷಡಕ್ಷರಸ್ವಾಮಿ ವಿರಚಿತ ಶಿವಾಧಿಕ್ಯರತ್ನಾವಳಿಃ" ಎಂದು ಕವಿಯು ತನ್ನ ಶಿವಾಧಿಕ್ಯರತ್ನಾವಳಿಯ ಕೊನೆಯಲ್ಲಿ ಹೇಳಿದ್ದಾನೆ, ಬಾಲೇಂದುಪುರವೆಂದರೆ ಎಳಂದೂರು. ಅಲ್ಲಿಯ ರಾಜನಿಗೆ ಕುಲಗುರುವಾದ ಷಡಕ್ಷರಿದೇವನು ಆತನಿಂದ ಪೂಜೆ ಪಡೆದಿರುವುದು ತೀರ ಸಹಜವಾಗಿದೆ. ಕುಲಗುರುವನ್ನು ರಾಜಧಾನಿಯಲ್ಲಿಯೇ ಇರಿಸಿಕೊಳ್ಳುವ ಪ್ರಯತ್ನವನ್ನು ಮುದ್ದುಭೂಪಾಲನು ಮಾಡಿರುವುದು ಸ್ವಾಭಾವಿಕ. ಪಿ. ಆರ್. ಕರಿಬಸವಶಾಸ್ತ್ರಿಗಳು ತಮ್ಮ ರಾಜಶೇಖರವಿಳಾಸದ ಉಪೋದ್ಘಾತದಲ್ಲಿ "ಹದಿನಾಡೆಂಬ ದೇಶವನ್ನು ಪಾಲನೆ ಮಾಡುತ್ತಿದ್ದ ಮುದ್ದುರಾಜನು ತನ್ನ ಹೆಂಡತಿಯ ತೌರುಮನೆಯ ಗುರುವಾಗಿದ್ದ ಷಡಕ್ಷರಿದೇವನನ್ನು ಕರೆಸಿ ತನ್ನ ಹೆಂಡತಿಯ ತೌರೂರಾದ ಎಳಂದೂರಿನಲ್ಲಿಯೇ ಒಂದು ಮಠವನ್ನು ಕಟ್ಟಿಸಿ ಅನುಕೂಲತೆ ಪಡಿಸಿದ್ದನು."[೧] ಎಂದು ಬರೆದಿರುವರು. ಮುದ್ದುರಾಜನು 'ಬಾಲೇಂದು ಪುರವರಾಧೀಶ'ನೆಂದು ಷಡಕ್ಷರಿದೇವನೇ ಹೇಳಿರುವುದರಿಂದ ತನ್ನ ಹೆಂಡತಿಯ ತೌರೂರಾದ ಎಳಂದೂರಲ್ಲಿ ಒಂದು ಮಠವನ್ನು ಕಟ್ಟಿಸಿಕೊಟ್ಟನೆ'ಂಬ ಹೇಳಿಕೆ ಅಷ್ಟೊಂದು ಸಮಂಜಸವೆಂದು ತೋರುವುದಿಲ್ಲ. ಆದರೆ, ಮುದ್ದುರಾಜನು ಷಡಕ್ಷರಿದೇವನಿಗಾಗಿ ಮಠಮಾನ್ಯಗಳನ್ನು ನಿರ್ಮಿಸಿ ಅನುಕೂಲತೆಗಳನ್ನು ಒದಗಿಸಿ ಕೊಟ್ಟಿರುವಲ್ಲಿ ಯಾವ ಸಂದೇಹವೂ ಇಲ್ಲ. ಮುದ್ದುರಾಜನು ಧಾರ್ಮಿಕ ಭಾವನೆಯುಳ್ಳವನಾಗಿದ್ದನೆಂಬುದಕ್ಕೆ ಆತನು ಎಳಂದೂರ ಗೌರೀಶ್ವರ ದೇವಾಲಯಕ್ಕೆ ಬಿಟ್ಟ ದತ್ತಿಯೇ ಸಾಕ್ಷಿಯಾಗಿದೆ.[೨] ಕುಲಗುರುವಿಗೆ ಆತನು ಎಲ್ಲಂದದ ಗೌರವವನ್ನು ತೋರಿಸಿರಲು ಸಾಕು; ಅನುಕೂಲತೆಗಳನ್ನು ಒದಗಿಸಿರಲೂ ಬೇಕು.

ಪಿ. ಆರ್. ಕರಿಬಸವಶಾಸ್ತ್ರಿಗಳ ಹೇಳಿಕೆಯನ್ನು ಪೂರ್ಣ ಸತ್ಯವೆಂದು ಪರಿಗಣಿಸದಿದ್ದರೂ ಷಡಕ್ಷರಿದೇವನು ಒಬ್ಬ ರಾಜನ ಹೆಂಡತಿಯ ತೌರುಮನೆಗೆ ಗುರುವಾಗಿದ್ದನೆಂಬ ಸತ್ಯಾಂಶವನ್ನು ಅಲ್ಲಿ ಅರಿಯಬಹುದಾಗಿದೆ. ದೇವಚಂದ್ರನ ರಾಜಾವಳೀ ಕಥೆಯಲ್ಲಿ ಷಡಕ್ಷರಿದೇವನು "ಎಳವಂದೂರ ಅಮೃತಾಂಬಿಕೆ ತೌರುಮನೆಗೆ ಗುರುವಾದ ಆರಾಧ್ಯಪುತ್ರನು"[೩] ಎಂದು ಹೇಳಲಾಗಿದೆ. ಈ ಅಮೃತಾಂಬೆ ಮೈಸೂರ

---

೧ ಕರಿಬಸವಶಾಸ್ತ್ರಿಗಳು ; ರಾಜಶೇಖರವಿಳಾಸ–ಉಪೋದ್ಘಾತ. ಪು.

೨ Epigraphica karnatika Vol. IV part II pp 70-71.

೩. ರಾಜಾವಳೀಕಥೆ; ಅಧಿಕಾರ ೧೨ ಪು. ೪೪೬.

ದೊಡದೇವರಾಜನ ಪತ್ನಿ[೧], ಚಿಕದೇವರಾಜನ ತಾಯಿ. ಈಕೆಯು ಎಳಂದೂರ ರಾಜಪುತ್ರಿಯೆಂಬುದು ಕೆಳಗಿನ ಉಲ್ಲೇಖದಿಂದ ಸ್ಪಷ್ಟವಾಗುತ್ತದೆ:

"ಎಳವಂದೂರ ವ(ಚ)ಂನರಾಜನೆಂಬ ಜೈನನಾಗಿರ್ದ ಅರಸು ಕೆಲವು ದಿವಸದಿಂ ಜಂಗಮನ ಉಪದೇಶದಿಂ ಶಿವಭಕ್ತನಾಗಿ ಆರಾಧ್ಯನ ಶಿಷ್ಯನಾಗಿರ್ದನಾತನ ಪುತ್ರಿಯಾದ ಸದ್ಗುಣಾಭರಣೆ ಅಮೃತಂಮನೆಂಬಳ್ ಅರಸಿಯಾಗೆ."[೨]

ಇಲ್ಲಿ "ವಂನ" ಎಂಬುದು ಅಕ್ಷರವ್ಯತ್ಯಾಸದಿಂದ ಆದ ಪದವೆಂದು ತೋರುತ್ತದೆ. ಏಕೆಂದರೆ ಈಗಿದ್ದ ರೂಪದಲ್ಲಿ ಅದರಿಂದ ಯಾವ ಅರ್ಥವೂ ಹೊರಡುವಂತಿಲ್ಲ. ಹಿಂದೆ ಇಂತಹ ಹೆಸರುಗಳಿದ್ದ ಸಂಪ್ರದಾಯವೂ ಕಂಡುಬರುವುದಿಲ್ಲ. 'ಚಂನ' ಎಂಬುದು ಬರಹದೋಷದ ಮೂಲಕ 'ವಂನ' ಎಂದಾಗುವುದು ಸಂಭವನೀಯವಾಗಿದೆ. ಕೆಳಗೆ ನಿರ್ದೇಶಿಸಿದ ಹದಿನಾಡ ರಾಜರ ವಂಶಾವಳಿಯನ್ನು ಪರೀಕ್ಷಿಸಿದರೆ ಹೀಗಾಗಿರುವುದು ಸಾಧ್ಯವೆಂದು ತೋರುತ್ತದೆ.

ಸಿಂಗೆದೇವಭೂಪ
|
ದೇವೇಂದ್ರ
|
ರಾಮನೃಪಾಲ (ಕ್ರಿ. ಶ. ೧೫೪೭–೬೮)*
|
ಚೆನ್ನರಾಜ (ಕ್ರಿ. ಶ. ೧೫೭೦)
|
ತಿರುಮಲರಾಜ (ಕ್ರಿ. ಶ. ೧೫೮೦) — ನಂಜರಾಜ (ಕ್ರಿ. ಶ. ೧೬೦೪)
|
ಮುದ್ದುರಾಜ (ಕ್ರಿ. ಶ. ೧೬೫೪)

ಇಲ್ಲಿ ಉಕ್ತವಾಗಿರುವ 'ಚೆನ್ನ'ರಾಜನೇ ಅಮೃತಾಂಬೆಯ ತಂದೆ 'ವಂನ' ರಾಜನಾಗಿರಬೇಕು. ಈ ಊಹೆಗೆ ಉಪಷ್ಟಂಭಕವಾಗಿ ಈ ವಂಶಾವಳಿಯಿಂದಲೂ ಮಿಕ್ಕ ಆಧಾರಗಳಿಂದಲೂ ಕೆಳಗಿನ ಸಂಗತಿಗಳು ವಿದಿತವಾಗುತ್ತವೆ.

೧) ಈ ವಂಶದ ರಾಜರು ಮೊದಲಿನಿಂದಲೂ ಎಳಂದೂರು ಗೌರೀಶ್ವರ

---

* ಈ ವಂಶಾವಳಿಯಲ್ಲಿ ಸೂಚಿತವಾದ ಕಾಲಗಳು ಆಯಾ ದೊರೆಗಳು ತಮ್ಮ ಆಳಿಕೆಯಲ್ಲಿ ದತ್ತಿಯನ್ನು ಬಿಟ್ಟುದಕ್ಕಾಗಿ ಬರೆಯಿಸಿದ ಶಾಸನಗಳ ಕಾಲಗಳಾಗಿವೆ.

೧ ಚಿಕದೇವರಾಯ ವಂಶಾವಳಿ ಪು. ೫೬, ೨ ರಾಜಾವಳೀಕಥೆ; ಅಧಿಕಾರ ೧೨ ಪು. ೪೪೫.

೩ ರಾಜಾವಳೀಕಥೆ; ಅಧಿಕಾರ ೧೨. ಪು. ೪೪೫.

ಮಹಾಕವಿ ಷಡಕ್ಷರಿದೇವರ ಸಮಾಧಿ, ಎಳಂದೂರು

ಪಂಡಿತರತ್ನಂ ಬಿ. ಶಿವಮೂರ್ತಿಶಾಸ್ತ್ರಿಗಳವರ ಕೃಪೆಯಿಂದ

ಮಹಾಕವಿ ಷಡಕ್ಷರಿದೇವರ ಗುರುಸಮಾಧಿ, ದನುಗೂರು

ಪಂಡಿತರತ್ನಂ ಬಿ. ಶಿವಮೂರ್ತಿಶಾಸ್ತ್ರಿಗಳವರ ಕೃಪೆಯಿಂದ

ದೇವಾಲಯಕ್ಕೂ ಉಳಿದ ಶೈವದೇವಾಲಯಗಳಿಗೂ ದತ್ತಿಗಳನ್ನು ಬಿಡುತ್ತಬಂದಿರುವದರಿಂದ ಅವರೆಲ್ಲರೂ ಶಿವಭಕ್ತರಾಗಿರಬೇಕು.

೨) ಎಳಂದೂರ ಆರಾಧ್ಯಮಠದ ಸ್ವಾಮಿಗಳಿಂದ ರಾಮನೃಪಾಲನ ಮಗ ಚಂನರಾಜನು ವೀರಶೈವದೀಕ್ಷೆ ತೆಗೆದುಕೊಂಡಿರಬೇಕು. ಶೈವನಾಗಿದ್ದ ದೊರೆಯು ವೀರಶೈವ ದೀಕ್ಷೆ ತೆಗೆದುಕೊಂಡುದನ್ನು ದೇವಚಂದ್ರನು ಜೈನ-ವೀರಶೈವ ಪರಿವರ್ತನೆಯೆಂದು ಭಾವಿಸಿದಂತೆ ತೋರುತ್ತದೆ.

೩) ಚೆನ್ನರಾಜನ ಮಗಳೇ ಚಿಕದೇವರಾಜನ ತಾಯಿ ಅಮೃತಾಂಬೆಯಾಗಿರಬೇಕು.

೪) ಅಮೃತಾಂಬಿಕೆಯ ಪತಿಯಾದ ದೊಡದೇವರಾಜನು ವೀರಶೈವನಿಷ್ಠನಿದ್ದನೆಂಬುದಕ್ಕೆ ಆತನು ಕಗ್ಗೆರೆಯ ತೋಂಟದ ಸಿದ್ಧಲಿಂಗಯತಿಗಳಲ್ಲಿ ಅಪಾರವಾದ ನಿಷ್ಠೆಯನ್ನು ಇಟ್ಟು, ಅವರ ಮಠಕ್ಕೆ ದತ್ತಿಯನ್ನು ಬಿಟ್ಟುದು ಪ್ರಮಾಣವಾಗಿದೆ.[೧] ಹೀಗೆ ವೀರಶೈವದಲ್ಲಿ ಶ್ರದ್ಧೆಯುಳ್ಳ ದೊಡದೇವರಾಜನು ವೀರಶೈವನಾದ ಹದಿನಾಡ ದೊರೆ ಚೆನ್ನರಾಜನ ಪುತ್ರಿ ಅಮೃತಾಂಬೆಯನ್ನು ವರಿಸಿರುವಲ್ಲಿ ಯಾವ ಅಭ್ಯಂತರವೂ ಇಲ್ಲ.

೫) ಮುದ್ದುರಾಜನು ಎಳಂದೂರ ಗೌರೀಶ್ವರದೇವಾಲಯಕ್ಕೆ ದತ್ತಿ ಕೊಟ್ಟ ವೇಳೆಗೆ (ಕ್ರಿ. ಶ. ೧೬೫೪) ಚಿಕದೇವರಾಜನು ಒಂಬತ್ತು ವರ್ಷದವನಾಗಿದ್ದನು.[೨] ಅಮೃತಾಂಬೆಗೆ ಆತನೇ ಹಿರಿಯ ಮಗನಾದುದರಿಂದ ಆಗ ಅವಳ ವಯಸ್ಸು ಕನಿಷ್ಠ ೨೫ ವರ್ಷಗಳಾಗಿರಲು ಸಾಕು. ಹೀಗಿರುವುದರಿಂದ ಅಮೃತಾಂಬೆಯು ಹದಿನಾಡ ರಾಜರಾದ ತಿರುಮಲರಾಜ, ನಂಜರಾಜರ ತಂಗಿಯಾಗಿರುವಲ್ಲಿಯೂ ಚೆನ್ನರಾಜನ ಕಿರಿಯ ಮಗಳಾಗಿರುವಲ್ಲಿಯೂ ಕಾಲಮಾನದೃಷ್ಟಿಯಿಂದ ಯಾವ ಆಕ್ಷೇಪವೂ ಕಂಡು ಬರಲಾರದು. ಇದರಿಂದ ಅಮೃತಾಂಬೆ ಚೆನ್ನರಾಜನ ಮಗಳೆಂಬ ನಮ್ಮ ಊಹೆ ದೃಢವಾಗುತ್ತದೆ.

ಇದುವರೆಗಿನ ವಿವೇಚನೆಯಿಂದ ಷಡಕ್ಷರಿದೇವನು ಕುಲಗುರುವಾಗಿ ಹದಿನಾಡ ಮುದ್ದುರಾಜನಿಂದಲೂ ಅಮೃತಾಂಬೆಯ ಮೂಲಕ ಮೈಸೂರು ದೊರೆಗಳಿಂದಲೂ ಪೂಜೆವಡೆದಿರುವನೆಂಬುದು ಸ್ಪಷ್ಟವಾಗುತ್ತದೆ.

ಷಡಕ್ಷರಿದೇವನಿಗೂ ಆ ಕಾಲದ ಪ್ರಸಿದ್ಧವಾದ ಎರಡು ರಾಜಮನೆತನಗಳಿಗೂ ಇರಬಹುದಾದ ಸಂಬಂಧವನ್ನು ದೇವಚಂದ್ರನ ರಾಜಾವಳೀಕಥೆ ಹಾಗೂ ಇತರ ಆಧಾರಗಳಿಂದ ವಿವೇಚಿಸಿದುದಾಯಿತು. ಇದರಿಂದ ಷಡಕ್ಷರಿದೇವನು ರಾಜಾಶ್ರಯದಲ್ಲಿದ್ದನೆಂದು ಭಾವಿಸುವ ಕಾರಣವೇ ಇಲ್ಲ. ರಾಜಾಶ್ರಯದಲ್ಲಿದ್ದರೆ ರಾಜನನ್ನು

---

೧ Mysore Gazetteer Vol. II.

೨ ಚಿಕದೇವರಾಜನ ಜನನ ಕಾಲ ಕ್ರಿ. ಶ. ೧೬೪೫; ಚಿಕದೇವರಾಯ ವಂಶಾವಳಿ: ಪು. ೧೩೩.

ಹೊಗಳಬೇಕಾಗುವುದು. 'ನುತಿಸೆನುಳಿದ ಸುರರಂ ನರರಂ' ಎಂದು ಪ್ರತಿಜ್ಞೆಗೈದ ಕವಿಯು ಯಾವ ನರನನ್ನೂ ದೊರೆಯನ್ನೂ ಸ್ತುತಿಸಲಾರನು. ಆದರೆ, ಮೇಲೆ ನಿರ್ದೇಶಿಸಿದ ರಾಜಮನೆತನಗಳು ಷಡಕ್ಷರಿದೇವನಲ್ಲಿ ಭಕ್ತಿ, ವಿಶ್ವಾಸ, ಗೌರವಗಳನ್ನಿಟ್ಟು ಆತನಿಗೆ ಮಠಮಾನ್ಯಗಳನ್ನು ನಿರ್ಮಿಸಿಕೊಟ್ಟಿರುವವು. ರಾಜಶೇಖರ ವಿಳಾಸವನ್ನು ಚಿಕದೇವರಾಜನ ತಾಯಿ ಅಮೃತಾಂಬೆ ಮೆಚ್ಚಿ ಕೊಂಡಾಡಿದಳೆಂದು ದೇವಚಂದ್ರನು ಹೇಳಿದ್ದಾನೆ[1]. ಇಷ್ಟರಿಂದಲೇ ಈ ರಾಜಮನೆತನಗಳ ಹಂಗು ಕವಿ ಷಡಕ್ಷರಿದೇವನಿಗೆ ಇತ್ತೆಂದು ಯಾರೂ ಭಾವಿಸುವ ಕಾರಣವಿಲ್ಲ. ಪಟ್ಟಾಧಿಕಾರಿಯಾಗಿ, ಯೋಗಿಜನಮಂಡನನಾಗಿ, ಮಹಾತಪಸ್ವಿಯಾಗಿ, ಕವಿಶೇಖರನಾಗಿ, ವೀರವಿರಕ್ತನಾಗಿ ರಾರಾಜಿಸಿದ ಷಡಕ್ಷರಿದೇವನಿಗೆ ಯಾವ ರಾಜರ ಆಶ್ರಯವೂ ಬೇಕಿರಲಿಲ್ಲ. ದೊರೆಗಳು ಕೊಟ್ಟ ದತ್ತಿ ಆತನ ಮಠಕ್ಕೆ ಸಂದಿರಬೇಕು: ಷಡಕ್ಷರಿದೇವನಿಗಲ್ಲ. ಷಡಕ್ಷರಿದೇವನು ತಪಸ್ವಿಯಾಗಿ, ಪ್ರತಿಭಾನ್ವಿತನಾಗಿ, ಪ್ರಭಾವಶಾಲಿಯಾಗಿ ಸಮಕಾಲೀನ ದೊರೆಗಳಿಂದ ಪೂಜೆಗೊಂಡನೆಂದು ಹೇಳುವುದೇ ನಮ್ಮ ಆಶಯ.

ಚಿಕದೇವರಾಜನಿಗೆ ಷಡಕ್ಷರಿದೇವನ ವಿಷಯದಲ್ಲಿ ಆದರಾಭಿಮಾನ, ಭಕ್ತಿ ವಿಶ್ವಾಸ, ಸ್ನೇಹಸೌಹಾರ್ದಗಳಿದ್ದವು. ಇವರೀರ್ವರ ಈ ಆತ್ಮೀಯತೆ ಸುಮಾರು ಕ್ರಿ. ಶ. ೧೬೬೫ ರ ವರೆಗೂ ಬೆಳೆದುಬಂದಿರುವದಾಗಿ ತಿಳಿಯಲವಕಾಶವಿದೆ. ವಿಶಾಲಾಕ್ಷಪಂಡಿತ, ಷಡಕ್ಷರಿದೇವ, ತಿರುಮಲಾರ್ಯ ಈ ಮೂವರು ಅನ್ಯೋನ್ಯವಾಗಿ ಚಿಕದೇವರಾಜನ ಕಾರ್ಯಕ್ಕೆ ಅನುಕೂಲರಾಗಿದ್ದರು[2]. ಆದರೆ ಕ್ರಿ. ಶ. ೧೬೮೫ ರ ಸುಮಾರು ಚಿಕದೇವರಾಜನ ರಾಜ್ಯದಲ್ಲಿ ಪ್ರಜೆಗಳ ಮೇಲಿನ ಕರಭಾರ ಮಿತಿಮೀರಲು ಪ್ರಜೆಗಳು ಅದನ್ನು ಬಲವಾಗಿ ವಿರೋಧಿಸಿದರು. ನಾಡಿನಲ್ಲಿ ಒಂದು ಗಂಭೀರ ಸ್ವರೂಪದ ಕ್ರಾಂತಿಯೇ ಉದ್ಭವಿಸಿತು[3]. ಆಗ ಚಿಕದೇವರಾಜನು ಷಡಕ್ಷರಿದೇವನ ಸಲಹೆಯನ್ನು ಕೋರುವನು. "ಪ್ರಜೆಗಳ ನ್ಯಾಯವಾದ ಬೇಡಿಕೆಗೆ ಆತಂಕವನ್ನುಂಟುಮಾಡುವದು ಯಾರಿಂದಲೂ ಸಾಧ್ಯವಿಲ್ಲ" ಎಂದು ಷಡಕ್ಷರಿದೇವನು ಅಭಿಪ್ರಾಯವಿತ್ತನು[4]. ಅಂದಿನಿಂದ ಮುಂದೆ ಇವರೀರ್ವರ ಸಂಬಂಧದಲ್ಲಿ ವಿರಸವುಂಟಾದಂತೆ ಕಂಡುಬರುತ್ತದೆ. ಷಡಕ್ಷರಿದೇವನ ಪ್ರಭಾವವು ತನ್ನ ಮೇಲೆ ಇರುವವರೆಗೂ ಚಿಕದೇವರಾಜನು ಆನುವಂಶಿಕವಾಗಿ ಬಂದ ವೀರಶೈವಧರ್ಮದಲ್ಲಿ ಶ್ರದ್ಧೆ, ವಿಶ್ವಾಸಗಳನ್ನಿಟ್ಟಿದ್ದನು. ಆ ಪ್ರಭಾವ ಕಡಿಮೆಯಾದೊಡನೆ ಅವನ ಒಲವು ಶ್ರೀವೈಷ್ಣವ ಧರ್ಮದ ಕಡೆಗೆ ಹೊರಳಿತು.[5]

---

೧ ದೇ. ರಾ. ಕಥೆ- ಅಧಿಕಾರ ೧೨. ಪು. ೪೫೪.

೨ ದೇ. ರಾ. ಕಥೆ. ಅಧಿಕಾರ. ೧೨. ಪು. ೪೫೪.

೩ Mysore Gazetteer Vol. II Part IV pp. 2444-46.

೪ ದೇ. ರಾ. ಕಥೆ. ಅಧಿಕಾರ ೧೨, ಪು. ೪೫೪-೫೫,

೫ Mysore Gazetteer Vol. II part IV p. 2458.

ಗುರುಪರಂಪರೆ

ಷಡಕ್ಷರಿದೇವನು ತಾನು ಶ್ರೀಮನ್ನಿಖಿಲ ನಿಗಮಾಗಮ ಪುರಾಣಾದಿ ಪ್ರಸಿದ್ಧನೂ ವೀರಶೈವ ಮತಸ್ಥಾಪನಾಚಾರ್ಯನೂ ಆದ ಜಗದ್ಗುರು ರೇಣುಕಾಚಾರ್ಯಗೋ-ತ್ರೋತ್ಪನ್ನನೆಂದು ಶಿವಾಧಿಕ್ಯರತ್ನಾವಳಿಯ ಕೊನೆಯ ಗದ್ಯದಲ್ಲಿ ಸ್ಪಷ್ಟವಾಗಿ ಹೇಳಿ ಕೊಂಡಿದ್ದಾನೆ; ಉಳಿದ ಕೃತಿಗಳಲ್ಲಿಯೂ ಈ ಮಾತನ್ನು ಉಲ್ಲೇಖಿಸಿರುವನು. 'ಬಸವರಾಜವಿಜಯ'ದಲ್ಲಿ ಷಡಕ್ಷರಿದೇವನು ರೇಣುಕಾಚಾರ್ಯರನ್ನು ಹೀಗೆ ಸ್ತುತಿ-ಸಿರುವನು:

"ಸದ್ಗುರುವಾದಿಗಾದಿಗುರು ಜಂಗಮಕೋಟಿಗೆ ಮುಖ್ಯನಾದ ಭಾ
ಸ್ವದ್ಗುರುವಾಗಮಂಗಳಡಿಗಾಣದೆ ಬೊಬ್ಬಿಡೆ ಪಾಟಿಗೈಯದು
ದ್ಯದ್ಗುರು ಭಕ್ತದೇಹಿಕಲಸದ್ಗುರು ಷಟ್‌ಸ್ಥಲ ಚಿತ್ಕ್ರಿಯಾಸ್ಪದಂ
ಮದ್ಗುರು ರೇಣುಕೇಶ್ವರ ಮಹಾಗುರು ಮಾಳ್ಕೆಮಗಿಷ್ಟಸಿದ್ಧಿಯಂ[೧]"

ಹೀಗೆ ಪ್ರಾರ್ಥಿಸಿ ಕವಿ ಚತುರಾಚಾರ್ಯರಾದ ರೇಣುಕಾರಾಧ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯ ಮತ್ತು ಮರುಳಾರಾಧ್ಯರ ಪದಾಂಬುಜಗಳಿಗೆರಗುತ್ತಾನೆ. ಕವಿ ಕರ್ಣರಸಾಯನದಲ್ಲಿಯೂ "ಸೋಮೇಶಲಿಂಗಃ ಪ್ರಭವಶ್ಯಿವಾತ್ಮಾ ಶ್ರೀರೇಣುಕಃ ಪಾತು ಮಹಾಗುರುರ್ವಃ[೨]" ಎಂದು ಭಕ್ತಿಯಿಂದ ಬಣ್ಣಿಸಿದ್ದಾನೆ. ರಾಜಶೇಖರ ವಿಳಾಸದಲ್ಲಿ ತನ್ನ ಗುರುಪರಂಪರೆಯನ್ನು ವಿಸ್ತಾರವಾಗಿಯೇ ವರ್ಣಿಸಿದ್ದಾನೆ:[೩] ಕೊಲ್ಲಿಪಾಕಿ ಲಿಂಗೋದ್ಭವ ರೇಣುಕಾಚಾರ್ಯ ; ಆತನ ಪುತ್ರ ನಿಗಮಾಗಮ ಶಾಸ್ತ್ರಪಾರಗನಾದ ರುದ್ರಮುನೀಶ್ವರ; ಆತನ ವಂಶದಲ್ಲಿ ಜನಿಸಿದವನು ಉದ್ದಾನ ಶಿವಯೋಗಿ; ಆತನ ಹಸ್ತಕಮಲೋದ್ಭವ ಅನ್ನದಾನೀಶ; ತದೀಯ ಕರಕಂಜಜ ರೇವಣಸಿದ್ಧ ದೇಶಿಕ; ಆತನ ಕರಕಂಜಾತಜಾತ ಚಿಕವೀರದೇಶಿಕ: ಚಿಕವೀರದೇಶಿಕನ ಕರಕಮ-ಲೋದ್ಭವನು ಷಡಕ್ಷರಿದೇವ.

ಷಡಕ್ಷರಿದೇವನು ತನ್ನ ವಂಶಪರಂಪರೆಯನ್ನು ವೀರಶೈವಪೂರ್ವಾಚಾರ್ಯರಾದ ರೇಣುಕಾಚಾರ್ಯರಿಂದ ಆರಂಭಿಸಿರುವುದು ಸಾಂಪ್ರದಾಯಿಕವಾದುದು. ಏಕೆಂದರೆ ರೇಣುಕರ ಶಾಖೆಗೆ ಸಂಬಂಧಪಟ್ಟ ಅನೇಕ ಮಠಗಳು ದಕ್ಷಿಣ ಭರತಖಂಡದಲ್ಲಿ ಗೋಚರವಾಗುತ್ತವೆ. ಆ ಮಠದವರೆಲ್ಲ ತಮ್ಮ ವಂಶಪರಂಪರೆಯನ್ನು ರೇಣುಕಾಚಾರ್ಯರಿಂದಲೇ ಆರಂಭಿಸುವುದು ವಾಡಿಕೆ. ಷಡಕ್ಷರಿಯೂ ಆ ವಾಡಿಕೆಯಂತೆ ರೇಣುಕಾಚಾರ್ಯರನ್ನು ಭಕ್ತಿಯಿಂದ ಬಣ್ಣಿಸಿ ತನ್ನ ವಂಶ ಅವರಿಂದ ಪ್ರಾರಂಭವಾ-

---

೧ ಬಸವರಾಜವಿಜಯ ಆ ೧. ಪ. ೧೧ ೨ ಕವಿಕರ್ಣರಸಾಯನ ಸ. ೧ ಪ ೬.

೩ ರಾಜಶೇಖರವಿಳಾಸ ಆ. ೧. ಪ. ೫೩-೬೭

ಯತೆಂದು ಹೇಳಿಕೊಳ್ಳುತ್ತಾನೆ. ಆದರೆ, ವಾಸ್ತವವಾಗಿ ಆತನ ವಂಶ ಆರಂಭವಾಗು-ವುದು ಮೇಲಿನ ವಂಶಪರಂಪರೆಯಲ್ಲಿ ಮೂರನೆಯವನಾದ ಉದ್ದಾನ ಶಿವಯೋಗಿ-ಯಿಂದ. ಕವಿಯು ಇದನ್ನು ರಾಜಶೇಖರವಿಳಾಸದಲ್ಲಿ ಸೂಚ್ಯವಾಗಿ ತಿಳಿಸಿದ್ದಾನೆ. ರೇಣುಕಾಚಾರ್ಯರ ಪುತ್ರನು ರುದ್ರಮುನೀಶ್ವರನೆಂದು ತಿಳಿಸಿ ಆ ಗುರುನಾಥನ ವಂಶದಲ್ಲಿ ಉದ್ದಾನ ಶಿವಯೋಗಿ ಹುಟ್ಟಿದನೆಂದು ಹೇಳಿಕೊಳ್ಳುತ್ತಾನೆ. ಆತನು ಎಷ್ಟನೆಯ ತಲೆಯವನೆಂಬುದನ್ನು ಕವಿ ತಿಳಿಸಿಲ್ಲ; ಹಾಗೆ ತಿಳಿಸಲಿಕ್ಕೆ ಸಾಧ್ಯವೂ ಇಲ್ಲ. ಆದುದರಿಂದಲೇ ಲೌಕಿಕ ದೃಷ್ಟಿಯಿಂದ ನ್ಯಾಯವಾಗಿ ಷಡಕ್ಷರಿದೇವನ ವಂಶಪರಂಪರೆ ಪ್ರಾರಂಭವಾಗುವುದು ಉದ್ದಾನ ಶಿವಯೋಗಿಯಿಂದ, ದನುಗೂರಲ್ಲಿ. ಉದ್ದಾನ ಶಿವಯೋಗಿಯೇ ದನುಗೂರ ಮಠಸ್ಥಾಪಕನೆಂದು ತೋರುತ್ತದೆ. ರಾಜಶೇಖರ ವಿಳಾಸದಲ್ಲಿ ಬಂದ ಕವಿಯ ಗುರುಪರಂಪರೆಯ ವರ್ಣನೆಯಲ್ಲಿ ಈ ಮಾತು ಸ್ಪಷ್ಟವಾಗಿಲ್ಲ. ಅಲ್ಲಿ ದನುಗೂರಿನ ಉಲ್ಲೇಖ ಬರುವುದು ರೇವಣಸಿದ್ಧದೇಶಿಕನ ನಾಮನಿರ್ದೇಶನವಾದ ಮೇಲೆ. ಈ ಕಾವ್ಯವನ್ನಷ್ಟೇ ಓದಿದವರಿಗೆ ರೇವಣಸಿದ್ಧದೇಶಿಕನ ಹಿಂದಿನ ಗುರುಗಳು ದನುಗೂರ ಮಠಾಧಿಕಾರಿಗಳಾಗಿದ್ದರೆಂದು ಅರ್ಥವಾಗುವುದಿಲ್ಲ. ಆದರೆ, ಕವಿಕರ್ಣರಸಾಯನದಲ್ಲಿ ಈ ಮಾತು ಸ್ಪಷ್ಟವಾಗುತ್ತದೆ. ಉದ್ದಾನ ಯತೀಂದ್ರನನ್ನು "ಧನುಃಪುರೋದ್ದಾನಯತೀಂದ್ರ[1]"ನೆಂದು ಸಂಬೋಧಿಸಲಾಗಿದೆ. ಆದುದರಿಂದ ಷಡಕ್ಷರಿದೇವನ ಮನೆತನಕ್ಕೆ ಮೂಲಪುರುಷ ಉದ್ದಾನ ಯತೀಂದ್ರ.

ಈ ವಿವರಣೆಯಿಂದ ಒಂದು ಮಾತು ಸ್ಪಷ್ಟವಾಗುತ್ತದೆ. ಗುರುಸ್ಥಲದಲ್ಲಿಯೇ ಜನಿಸಿ, ಗುರುಸ್ಥಲದ ಪಟ್ಟಾಧಿಕಾರಿಯಾದ ಷಡಕ್ಷರಿದೇವನು ರೇಣುಕಾಚಾರ್ಯರನ್ನು ಭಕ್ತಿಯಿಂದ ಬಣ್ಣಿಸಿರುವುದು ಸಹಜ. ಆದರೆ, ಗಮನಾರ್ಹವಾದ ಒಂದು ವಿಶೇಷ ಸಂಗತಿಯಿದೆ ಇಲ್ಲಿ! ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ತೋಂಟದ ಸಿದ್ಧಲಿಂಗಯತಿ, ನಿಜಗುಣ ಶಿವಯೋಗಿ ಇವರೆಲ್ಲರನ್ನು ಕವಿ ತನ್ನ ಕಾವ್ಯಗಳಲ್ಲಿ ಎದೆದುಂಬಿ ಬಣ್ಣಿಸುತ್ತಾನೆ. ಆತನು ರಾಜಶೇಖರವಿಳಾಸದಲ್ಲಿ ಅನಂತರ ರೇಣುಕ, ರಾಮ, ಪಂಡಿತ, ಮಹಾಮಹುಳಾರ್ಯರ ಪಾಠತೆತ್ತುತ್ತಾನೆ. ಮುಂದೆ ತನ್ನ ಗುರುಪರಂಪರೆಯನ್ನು ವಿಸ್ತಾರವಾಗಿ ವರ್ಣಿಸುತ್ತಾನೆ. ಗುರುಸ್ಥಲಮಠದ ಉನ್ನತಸ್ಥಾನದಲ್ಲಿದ್ದ ಷಡಕ್ಷರಿದೇವನಿಗೆ ಬಸವಾದಿ ಪ್ರಮಥರಲ್ಲಿ ಅಪಾರವಾದ ಭಕ್ತಿಯಿದೆ. ಬಸವಣ್ಣನವರ ಹೆಸರನ್ನೆತ್ತಿದರೆ ಕವಿ ಭಕ್ತಿಪುಲಕಿತನಾಗುತ್ತಾನೆ. ಅಂತೆಯೇ ಆತನು 'ಬಸವರಾಜವಿಜಯ' ಗ್ರಂಥವನ್ನು ಬರೆದಿರುವುದು. ಹೀಗೆ ರೇಣುಕಾದ್ಯಾ-ಚಾರ್ಯರನ್ನೂ ಬಸವಾದಿ ಪ್ರಮಥರನ್ನೂ ಕವಿ ಸಮಸಮುಚ್ಚಯವಾಗಿ ವಿಕೆಮುಖವಾದ ನಿಷ್ಠೆಯಿಂದ ಸ್ತುತಿಸಿರುವುದು ಗಮನಾರ್ಹವಾಗಿದೆ. ಇದು ಕವಿಯ ವಿಶಾಲಮನೋಭಾವನೆಯ ದ್ಯೋತಕವಾಗಿದೆ.

೧ ಕವಿಕರ್ಣರಸಾಯನ ಸ. ೧ ಪ. ೫೪.

ಇಷ್ಟದೇವತೆ

ಷಡಕ್ಷರಿದೇವನು ಸಾಮಾನ್ಯವಾಗಿ ತನ್ನ ಎಲ್ಲ ಕಾವ್ಯಗಳಲ್ಲಿಯೂ ನಂದಿಕೇಶ, ಪಾರ್ವತಿ, ಗಣಪತಿ, ಷಣ್ಮುಖ, ವೀರಭದ್ರ ಈ ದೇವತೆಗಳನ್ನು ಅತ್ಯಂತ ಭಕ್ತಿಯಿಂದ ಬಣ್ಣಿಸಿದರೂ ಆತನು ನಿಷ್ಠೆಯ ವೀರಶೈವನೆಂಬುದು ನಾವು ಮರೆಯಲಾಗದು. ಷಟ್‌ಸ್ಥಲಾಂಕಶಾಸ್ತ್ರನಿಜಯಸಾರದರ್ಶನನಾದ ಈ ಕವಿ ವೀರಶೈವಕ್ಕೆ ವಿಶಿಷ್ಟವಾದ ಇಷ್ಟಲಿಂಗವನ್ನು ತನ್ನ ಕಾವ್ಯಗಳಲ್ಲಿ ಸೂಕ್ತವಾಗಿ ವರ್ಣಿಸಿರುವುದು ಅತ್ಯಂತ ಗಮನಾರ್ಹವಾಗಿದೆ. ರಾಜಶೇಖರವಿಳಾಸ, ಶಬರಶಂಕರವಿಳಾಸ, ಬಸವರಾಜವಿಜಯಗಳಲ್ಲಿ ಪ್ರತಿಯೊಂದು ಆಶ್ವಾಸದ ಆರಂಭದಲ್ಲಿ ಶಿವಲಿಂಗವನ್ನು ಸ್ತೋತ್ರಮಾಡುತ್ತಾನೆ. ಆದರೆ, ಈ ಎಲ್ಲ ಕಾವ್ಯಗಳ ಪ್ರಥಮಾಶ್ವಾಸದ ಪ್ರಥಮ ಪದ್ಯದಲ್ಲಿ ಆ ಶಿವಲಿಂಗವನ್ನು 'ನಂದಿಕೇಶಂ ಮಹೇಶಂ' ಎಂದು ಸಂಬೋಧಿಸಿ, ಮಿಕ್ಕ ಆಶ್ವಾಸಾರಂಭಗಳಲ್ಲಿ ಶಿವಲಿಂಗವೆಂದು ಸ್ಪಷ್ಟವಾಗಿ ಉಲ್ಲೇಖಿಸುತ್ತಾನೆ. 'ಪಾಲಿಕೆಮ್ಮನುರೆ ಶಿವಲಿಂಗಂ', 'ಪೊರೆಗೆಮ್ಮನಾವಗಂ ಶಿವಲಿಂಗಂ', 'ಈಗೆ ಸೌಖ್ಯಮಂ ಶಿವಲಿಂಗಂ', 'ಮಾಳ್ಕೆಮಗೆ ಸೌಖ್ಯಮಂ ಶಿವಲಿಂಗಂ' ಎಂಬ ಪ್ರಾರ್ಥನೆಗಳು ಅವನ ಕಾವ್ಯಗಳಲ್ಲಿ ಹೇರಳವಾಗಿ ದೊರೆಯುತ್ತವೆ.

ಈ ಕಾವ್ಯಗಳ ಆಶ್ವಾಸಾದಿಪದ್ಯಗಳಲ್ಲಿ ಬರುವುದು ಶಕ್ತಿಸಮೇತನಾದ ಶಿವನ ಸಾಕಾರ ವರ್ಣನೆ. ಶೃಂಗಾರ ಭಕ್ತಿರಸಗಳೆರಡನ್ನೂ ಒಂದುಗೂಡಿಸುವ ಜಾಣ್ಮೆಯನ್ನು ಪಡೆದ ಈ ಕವಿ ಶಿವಲಿಂಗದ ವರ್ಣನೆಯನ್ನು ಬಹು ಸುಂದರವಾಗಿ ನಿರೂಪಿಸಿದ್ದಾನೆ. ಇನ್ನು ಕವಿ ರಾಜಶೇಖರವಿಳಾಸ ಮತ್ತು ಬಸವರಾಜವಿಜಯಗಳ ಆಶ್ವಾಸಾಂತ್ಯಗಳಲ್ಲಿ ತಪ್ಪದೆ ಪಾರ್ವತಿಯ ಸ್ತುತಿಗೆಯ್ಯುತ್ತಾನೆ. ಆಶ್ವಾಸಾರಂಭದಲ್ಲಿ ಶಿವನನ್ನೂ ಅಂತ್ಯದಲ್ಲಿ ಶಕ್ತಿಯನ್ನೂ ವರ್ಣಿಸಿ ಶಿವಶಕ್ತಿಯರ ಕೃಪಾದೃಷ್ಟಿಯಲ್ಲಿ ತನ್ನ ಪ್ರತಿಯೊಂದು ಆಶ್ವಾಸವನ್ನೂ ಇರಿಸಿದ್ದಾನೆ. ವೀರಶೈವದಲ್ಲಿ ಶಿವಶಕ್ತಿಯರು ಅಭೇದಭಾವದಲ್ಲಿರುವರೆಂಬುದನ್ನು ಕವಿ ಸೂಚ್ಯವಾಗಿ ತೋರಿಸುವಂತಿದೆ ಈ ಕ್ರಮ. ಆ ಶಿವಲಿಂಗವೇ ಕವಿಯ ಇಷ್ಟದೇವತೆ. ಅದು ಕವಿಯ ಕರಸ್ಥಲದ ಇಷ್ಟಲಿಂಗದ ದ್ಯೋತಕವೂ ಅವರ ದನುಗೂರುಮಠದ ಸ್ಥಾವರ ಶಿವಲಿಂಗದ್ಯೋತಕವೂ ಆಗಿದೆ. ಬಸವಾದಿ ಪ್ರಮಥರು ತಮ್ಮ ಅಂಕಿತಗಳಲ್ಲಿ ಕರಸ್ಥಲದ ಇಷ್ಟಲಿಂಗ ಹಾಗೂ ತಾವು ನೆಲೆನಿಂದ ಸ್ಥಾವರಲಿಂಗ ಈ ಎರಡನ್ನೂ ಸೂಚಿಸುವಂತೆ ಷಡಕ್ಷರಿದೇವನ ಶಿವಲಿಂಗಾಂಕಿತವೂ ಸೂಚಿಸುತ್ತದೆ.

ಪೂರ್ವಕವಿಸ್ತವನ

ಷಡಕ್ಷರಿದೇವನ ಪೂರ್ವಕವಿಸ್ತವನ ಸ್ವಲ್ಪ ವಿಸ್ತಾರವಾಗಿಯೇ ಇದೆ. ಆತನು

ಸೋಮನಾಥ, ಹರಿಹರ, ಪದ್ಮರಸರನ್ನು ಸಾಮಾನ್ಯವಾಗಿ ತನ್ನ ಎಲ್ಲ ಕಾವ್ಯಗಳಲ್ಲಿಯೂ ಭಕ್ತಿಯಿಂದ ನೆನೆದಿದ್ದಾನೆ:

"ಗುಣಾಗ್ರಗಣ್ಯಃ ಕವಿರಾಜಮೌಲಿಃ । ಕಲಾಕಲಾಪಃ ಕಲಿಕಲ್ಮಷಘ್ನಃ
ಗುರುರ್ಗುರೂಣಾಂ ಗುರುರತ್ನಸಿಂಧುಃ । ಶ್ರೀಸೋಮನಾಥೋऽಸ್ತು
ಜಯೀ ಜಗತ್ಯಾಂ[೧] ॥"

ಎಂದು ಪಾಲ್ಕುರಿಕೆ ಸೋಮನಾಥನನ್ನೂ

"ಹರೀಶ್ವರಸ್ತೇನ ಸಮಃ ಕವಿಃ ಕಃ[೨]"

ಎಂದು ಹಂಪೆಯ ಹರಿಹರದೇವನನ್ನೂ "ಲಸತ್ಪತ್ಪದ್ಮ[೩]"ನೆಂದು ಕೆರೆಯ ಪದ್ಮರಸರನ್ನೂ ಬಣ್ಣಿಸಿದ್ದಾನೆ. ಹರಿಹರನುದಿತಮಾರ್ಗದಲ್ಲಿ ಕಾವ್ಯವನ್ನೊರೆದ ಷಡಕ್ಷರಿದೇವನು ಆತನಿಗೆ ಭಕ್ತಿಪ್ರಣಾಮಗಳನ್ನರ್ಪಿಸುತ್ತಿರುವುದನ್ನು ಆತನ ವಾಣಿಯಿಂದಲೇ ಕೇಳಬೇಕು:

"ಧರೆಯೊಳ್ಮೇಣ್ ಪುಟ್ಟಿ ಪುಟ್ಟುತ್ತುರುಳ್ವ ನರರ ಮೇಲುರ್ಬಿ ಕಬ್ಬಂಗಳಂ ಬಿ
ತ್ತರಿಸುತ್ತಂ ಸಪ್ರಯಾಸಂ ಕೆಲಕೆಲರಕಟಾ ಕಬ್ಬಿಗರ್ ಕೆಟ್ಟುಪೋದರ್
ಹರಿದೇವಂ ದೇವದೇವೋತ್ತಮನ ಶರಣರಂ ಪಾಡಿ ಕೈವಲ್ಯಲಕ್ಷ್ಮೀ
ವರನಾದಂ ಮತ್ತವಂಗತ್ಯಧಿಕ ಶಿವಕವೀಂದ್ರುಂಗದಾರ್ ಸಾಟಿಯಪ್ಪರ್[೪] ॥"

ಇದಲ್ಲದೆ ಕೆಳಗೆ ಕಂಡ ವೀರಶೈವಕವಿಗಳನ್ನು ಷಡಕ್ಷರಿದೇವನು ಅತ್ಯಂತ ಭಕ್ತಿಯಿಂದ ಸ್ತುತಿಸಿದ್ದಾನೆ:

ಕೇಶಿರಾಜ[೫]	ಜಕ್ಕಣಾರ್ಯ[೯]
ರಾಘವಾಂಕ[೬]	ಮಲ್ಲಣ[೧೦]
ಭೀಮಕವಿ[೭]	ಮಲ್ಲಣಾರ್ಯ[೧೧]
ಮಾಯಿದೇವ[೮]	ಶಂಕರಾರ್ಯ[೧೨]

---

೧ ಕ. ಕ. ರ. ಸ. ೧. ಪ. ೧೩.   ೨ ಕ. ಕ. ರ. ಸ. ಪ. ೧೪.
೩ ರಾ. ವಿ. ಆ. ೧. ಪ. ೧೮.   ೪ ರಾ. ವಿ. ಆ. ೧ ಪ. ೭೯.
೫ ,, ,, ,, ,, ,, ೧೭.   ೬ ,, ,, ,, ,, ,, ೧೭.
೭ ,, ,, ,, ,, ,, ೧೮.   ೮ ,, ,, ,, ,, ,, ,,
೯ ,, ,, ,, ,, ,, ೧೭.   ೧೦ ,, ,, ,, ,, ,, ,,
೧೧ ,, ,, ,, ,, ,, ,,   ೧೨ ,, ,, ,, ,, ,, ,,

ಕೃತಿಗಳು

ಷಡಕ್ಷರಿದೇವನು ಉಭಯಕವಿತಾವಿಶಾರದನು.[೧]

"ಸಕ್ಕದಗಬ್ಬಮಂ ಮಿಸುಪ ಕನ್ನಡಗಬ್ಬಮನೊಲ್ದು ಕೋವಿದರ್
ಬೆಕ್ಕಸಮುತ್ತು ಮೆಚ್ಚಿ ಪೊಗಳುತ್ತಿರೆ ಶಂಭುಕೃಪಾವಶೇಷದಿಂ
ಮೊಕ್ಕಳಮಾಗೆ ಸರ್ವರಸಮೊಪ್ಪಿರೆ .... ಪೇಳ್ದಂ[೨]"

ಎಂದು ಶಬರಶಂಕರವಿಳಾಸದಲ್ಲಿ ಹೇಳಿಕೊಂಡಿದ್ದಾನೆ. ಕವಿಕರ್ಣರಸಾಯನದಲ್ಲಿಯೂ ಉಲ್ಲೇಖ ಹೀಗೆ ಬರುತ್ತದೆ :

"ಯಸ್ಯಾಸ್ತಿ ಭಾಷಾದ್ವಯಸತ್‌ಕವಿತ್ವಂ
ಜಗತ್‌ಸ್ತುತಂ ನೂತ್ನಮನನ್ಯಲಭ್ಯಂ[೩]"

ಹೀಗೆ ಪ್ರತಿಯೊಂದು ಕಾವ್ಯದಲ್ಲಿಯೂ ಕವಿ ತನ್ನ ಉಭಯಕವಿತ್ವದ ಪ್ರಸ್ತಾಪ ವೆತ್ತಿರುವನು. ಇದು ಕೇವಲ ಸಾಂಪ್ರದಾಯಕ ಉಕ್ತಿಯಲ್ಲ. ಉಭಯಕವಿತಾ ವಿಶಾರದರೆಂದು ಹೇಳಿಕೊಂಡ ಅನೇಕಜನ ಕವಿಗಳು ಉಭಯ ಭಾಷೆಗಳಲ್ಲಿ ಬರೆದ ಕಾವ್ಯಗಳು ಉಪಲಬ್ಧವಾಗಿರುವುದಿಲ್ಲ. ಅವರು ಉಭಯ ಭಾಷೆಗಳಲ್ಲಿ ಕಾವ್ಯರಚನೆ ಮಾಡಿರುವರೋ ಇಲ್ಲವೋ ತಿಳಿಯದಾಗಿದೆ. ಅವರು ಉಭಯ ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿರುವುದು, ಕಾವ್ಯಶಕ್ತಿಯನ್ನು ಸಂಪಾದಿಸಿರುವುದು ಸಾಧ್ಯ ವಿದೆ; ಸತ್ಯಸಂಗತಿಯಾಗಿದೆ. ಆದರೆ, ಷಡಕ್ಷರಿದೇವನ ವಿಷಯದಲ್ಲಿ ಇಂತಹ ಯಾವ ಸಂದೇಹಕ್ಕೂ ಎಡೆಯಿಲ್ಲ. ಕನ್ನಡ, ಸಂಸ್ಕೃತ ಭಾಷೆಗಳೆರಡರಲ್ಲಿಯೂ ಬರೆದ ಆತನ ಕಾವ್ಯಗಳು ಉಪಲಬ್ಧವಾಗಿವೆ:

" ಪ್ರವಿಮಳ ರಾಜಶೇಖರವಿಳಾಸ ಮಹಾಕೃತಿಯಂ ವೃಷಾಧಿರಾ
ಜವಿಜಯ ಸತ್ಪ್ರಬಂಧಮುಮನೊಪ್ಪುವ ಕನ್ನಡದಿಂ ನಿಮಿರ್ಚಿದಂ
ಭುವನವಿನುತ್ಯಮಾಗೆ ಕವಿಕರ್ಣರಸಾಯನಮೆಂಬ ಕಬ್ಬಮಂ
ಪ್ರವಿತತ ಸಂಸ್ಕೃತೋಕ್ತಿಯೊಳೊಡರ್ಚಿದನಲ್ತೆ ಷಡಕ್ಷರಾಹ್ವಯಂ[೪] "

ಎಂದು ಷಡಕ್ಷರಿದೇವನು ಶಬರಶಂಕರವಿಳಾಸಾಂತ್ಯದಲ್ಲಿ ಹೇಳಿದ್ದಾನೆ. ಇವಲ್ಲದೆ

---

೧. ರಾ. ವಿ. ಆಶ್ವಾಸಾಂತ್ಯದ ಗದ್ಯ. ೨ ಶ. ಶಂ. ವಿ. ಆ. ೫. ಪ. ೬೨. ೩ ಕ. ಕ. ರ. ಸಂ. ೧. ಪ. ೪೫ ೪ ಶ. ಶಂ. ವಿ. ಆ. ೫. ಪ. ೬೩.

ಆತನು ಇನ್ನೂ ಅನೇಕ ಕೃತಿಗಳನ್ನು ರಚಿಸಿದ್ದಾನೆ. ಈಗ ಉಪಲಬ್ಧವಿರುವ ಆತನ ಕೃತಿಗಳು ಕೆಳಗಿನಂತಿವೆ:

ಮಹಾಕಾವ್ಯಗಳು

ಕನ್ನಡ

(i) ರಾಜಶೇಖರವಿಳಾಸ
(ii) ಬಸವರಾಜವಿಜಯ
(iii) ಶಬರಶಂಕರವಿಳಾಸ

ಸಂಸ್ಕೃತ

(i) ಕವಿಕರ್ಣರಸಾಯನ

ಸಂಸ್ಕೃತ ಲಘುಕೃತಿಗಳು

(i) ಭಕ್ತಾಧಿಕ್ಯರತ್ನಾವಳಿ
(ii) ಶಿವಾಧಿಕ್ಯರತ್ನಾವಳಿ
(iii) ಶಿವಸ್ತವಮಂಜರಿ
(iv) ವೀರಭದ್ರಗದ್ಯ
(v) ವೀರಭದ್ರದಂಡಕ
(vi) ಸಿದ್ಧಲಿಂಗಸ್ತವ
(vii) ನೀಲಾಂಬಿಕಾಸ್ತೋತ್ರ
(viii) ಬಸವೇಶ್ವರಾಷ್ಟಕ

ಕನ್ನಡದಲ್ಲಿ ಮೂರು, ಸಂಸ್ಕೃತದಲ್ಲಿ ಒಂದು ಹೀಗೆ ನಾಲ್ಕು ಮಹಾಕಾವ್ಯಗಳನ್ನೂ ಸಂಸ್ಕೃತದಲ್ಲಿ ಎಂಟು ಲಘುಕಾವ್ಯಗಳನ್ನೂ ಒಟ್ಟಾರೆ ಹನ್ನೆರಡು ಕೃತಿಗಳನ್ನು ಷಡಕ್ಷರಿದೇವನು ರಚಿಸಿದ್ದಾನೆ. ಆತನು ಇನ್ನೂ ಅನೇಕ ಕೃತಿಗಳನ್ನು ರಚಿಸಿರುವ ಸಂಭವವಿದೆ. ಅವು ಚಿಕ್ಕ ಕೃತಿಗಳಾಗಿರುವುದರಿಂದ ಕವಿ ಅವುಗಳ ನಾಮನಿರ್ದೇಶನ ಮಾಡಿದಂತಿಲ್ಲ. ಒಂದೆಡೆ ಷಡಕ್ಷರಿದೇವನ ಕೃತಿಗಳ ಸಂಖ್ಯೆ ೨೨ ಎಂದು ಉಲ್ಲಿಖಿತವಾಗಿದೆ.[೧] ಆದರೆ ಆತನ ಇನ್ನುಳಿದ ೧೦ ಕೃತಿಗಳು ಯಾವುವೆಂಬುದು ನಮ್ಮ ಅವಗಾಹನೆಗೆ ಬಂದಿರುವುದಿಲ್ಲ.

೧ ಶಿವಾನುಭವ : ಸಂಪುಟ ೧೭, ಸಂಚಿಕೆ ೫, ಪು. ೨೫೧

ಕೃತಿರಚನೆಯ ಕಾಲ

ರಾಜಶೇಖರವಿಳಾಸವು ಷಡಕ್ಷರಿದೇವನ ಪ್ರಥಮ ಮಹಾಕಾವ್ಯ. ಆ ಕಾವ್ಯ ಸಮಾಪ್ತಿಯ ಕಾಲವನ್ನು ಕುರಿತು ಕವಿ ಹೀಗೆ ಹೇಳುತ್ತಾನೆ :

"ಸುರುಚಿರ ಶಾಲಿವಾಹನ ಶಕಾನ್ವಿತ ರತ್ನ ಸಮುದ್ರ ಬಾಣ ಭೂ
ಪರಿಗಣನಾಂಕ ಬಂಧುರ ಜಯಾಬ್ದದ ಮಾಘದ ಶುಕ್ಲಪಕ್ಷವಿ
ಸ್ಫುರಿತ ತೃತೀಯೆಯಲ್ಲಿ ಬುಧವಾರದೊಳೀ ಕೃತಿ ಪೂರ್ಣಮಾಯ್ತು ಶಂ
ಕರಶಿವಲಿಂಗದಂಘ್ರಿಕೃಪೆಯಿಂದೆ ಷಡಕ್ಷರಿದೇವನಿರ್ಮಿತಂ[೧]"

ಇಲ್ಲಿ ಭೂಮಿ, ಬಾಣ, ಸಮುದ್ರ ಎಂಬ ಸಂಕೇತಗಳಿಗೆ ಅನುಕ್ರಮವಾಗಿ ೧, ೫, ೭, ಎಂದು ಅರ್ಥೈಸುವಲ್ಲಿ ಯಾವ ಅಭ್ಯಂತರವೂ ಇಲ್ಲ. ಇನ್ನುಳಿದುದು ರತ್ನ ಎಂಬುದು. ರತ್ನಕ್ಕೆ ೩, ೫, ೯ ಮತ್ತು ೧೪ ಹೀಗೆ ನಾಲ್ಕು ಸಂಕೇತಗಳಾಗುವವು.[೨] ಇವುಗಳಲ್ಲಿ ೩ ಮತ್ತು ೧೪ ಈ ಸಂಕೇತಗಳು ಇಲ್ಲಿ ಅನ್ವಯವಾಗಲಾರವು. ೯ ನ್ನು ರತ್ನಕ್ಕೆ ಸಂಕೇತವೆಂದು ಇಟ್ಟುಕೊಂಡರೆ ಕೃತಿಸಮಾಪ್ತಿಯ ಕಾಲ ಶಕೆ ೧೫೭೯ ಎಂದಾಗುವುದು. ಈ ಶಕವರುಷವು ಹೇವಿಲಂಬಿಯಾಗಿದ್ದು ಆ ವರ್ಷದ ಮಾಘ ಶುದ್ಧ ೩, ಮಂಗಳವಾರವಾಗುವುದು. ಇಲ್ಲಿ ಕವಿ ನಿರ್ದೇಶಿಸಿದ ಸಂವತ್ಸರ ಮತ್ತು ವಾರ ಎರಡಕ್ಕೂ ಚ್ಯುತಿ ಬರುವುದರಿಂದ ರತ್ನಕ್ಕೆ ೯ ಎಂದು ಅರ್ಥಮಾಡುವುದು ಸೂಕ್ತವೆನಿಸಲಾರದು. ಇನ್ನುಳಿದುದೆಂದರೆ ೫. ರತ್ನಕ್ಕೆ ೫ ಎಂದು ಅರ್ಥಮಾಡಿ

---

೧ ರಾ. ವಿ. ಆಶ್ವಾಸ ೧೪, ಪ. ೨೬೪

೨. ೧. ರತ್ನತ್ರಯಗಳು : (i) ದರ್ಶನ (ii) ಜ್ಞಾನ (iii) ಚಾರಿತ್ರ (ಜೈನ ಪರಿಭಾಷೆ)

೨. ಪಂಚರತ್ನಗಳು ; (೧) ಸುವರ್ಣ (೨) ವಜ್ರ (೩) ನೀಲ (೪) ಮಾಣಿಕ್ಯ (೫) ಮೌಕ್ತಿಕ.

೩. ನವರತ್ನಗಳು ; (೧) ವಜ್ರ (೨) ವೈಢೂರ್ಯ (೩) ಗೋಮೇದಕ (೪) ಪುಷ್ಯರಾಗ (೫) ನೀಲ (೬) ಮರಕತ (೭) ಮಾಣಿಕ್ಯ (೮) ವಿದ್ರುಮ (೯) ಮೌಕ್ತಿಕ.

೪. ಚತುರ್ದಶರತ್ನಗಳು ; (೧) ಲಕ್ಷ್ಮಿ (೨) ಕೌಸ್ತುಭ (೩) ಪಾರಿಜಾತ (೪) ಧನ್ವಂತರಿ (೫) ಚಂದ್ರ (೬) ಕಾಮಧೇನು (೭) ಕಲ್ಪವೃಕ್ಷ (೮) ಐರಾವತ (೯) ರಂಭಾದಿ ದೇವಾಂಗನೆಯರು (೧೦) ಉಚ್ಚೈಃ ಶ್ರವ (೧೧) ಹಾಲಾಹಲ (೧೨) ಇಂದ್ರಧನುಸ್ಸು (೧೩) ಶಂಖ (೧೪) ಅಮೃತ.

ದರೆ ಶಾಲಿವಾಹನ ಶಕ ೧೫೭೫ ಎಂದು ಆಗುವದು. ಆ ಶಕವರ್ಷ ವಿಜಯ ಸಂವತ್ಸರವಿದ್ದು ಆ ಸಂವತ್ಸರದ ಮಾಘ ಶುಕ್ಲ ತೃತೀಯೆ ಬುಧವಾರವಿರುವುದು. ಕವಿ "ಬಂಧುರಜಯಾಬ್ದ" ಎಂಬುದನ್ನು 'ವಿಜಯ ಸಂವತ್ಸರ' ಎಂದು ಅರ್ಥ ಮಾಡಬೇಕಾಗುವುದು. 'ಬಂಧುರ' ಎಂಬ ವಿಶೇಷಣವನ್ನು ಕವಿ ಸುಮ್ಮನೆ ಬಳಸದೆ 'ವಿ' ಎಂಬ ವಿಶೇಷಾರ್ಥದಲ್ಲಿ ಬಳಸಿರುವುದು ಹೆಚ್ಚು ಸಂಭವನೀಯ. ಹಾಗೆ ಅರ್ಥ ಮಾಡಿಕೊಂಡರೆ ಕವಿ ರಾಜಶೇಖರವಿಳಾಸವನ್ನು ಶಾಲಿವಾಹನ ಶಕ ೧೫೭೫ನೆಯ ವಿಜಯಸಂವತ್ಸರದ ಮಾಘ ಶುಕ್ಲ ೩ ಬುಧವಾರ ಅಂದರೆ ಕ್ರಿ. ಶ. ೧೬೫೪ನೆಯ ಜ್ಯಾನುಅರಿ ೧೧ನೆಯ ಬುಧವಾರ ಮುಕ್ತಾಯ ಮಾಡಿದಂತಾಗುವುದು.

ಈ ಕಾವ್ಯದಲ್ಲಿ ಕವಿ ತಾನು ಬರೆದ ಅನ್ಯಕೃತಿಗಳ ನಾಮನಿರ್ದೇಶನ ಮಾಡುವುದಿಲ್ಲ. ಕವಿಕರ್ಣರಸಾಯನ, ಶಬರಶಂಕರವಿಳಾಸಗಳಲ್ಲಿ ಉಳಿದ ಕೃತಿಗಳನ್ನು ಹೆಸರಿಸಿದ್ದಾನೆ. ಆದುದರಿಂದ ರಾಜಶೇಖರವಿಳಾಸವು ಷಡಕ್ಷರಿದೇವನ ಪ್ರಥಮ ಕೃತಿಯಾಗಿರುವುದು ಹೆಚ್ಚು ಸಂಭವನೀಯವಾಗಿದೆ. ಇದಕ್ಕೆ ಪುಷ್ಟಿಕೊಡುವಂತೆ ಒಂದು ಐತಿಹ್ಯವೂ ಜನಜನಿತವಾಗಿದೆ :

ಎಳಂದೂರಿನಲ್ಲಿ ಒಂದು ರಾತ್ರಿ ಕಾವ್ಯದ ಮೆರವಣಿಗೆ ನಡೆಯಿತು. ನೇಮಿಚಂದ್ರನ ಲೀಲಾವತಿಯನ್ನು ಆನೆಯ ಮೇಲೆ ಅಂಬಾರಿಯಲ್ಲಿಟ್ಟು ಆನೆಯ ಹೊಟ್ಟೆಯ ಕೆಳಗೆ ಒಂದು ತೊಟ್ಟಿಲನ್ನು ಕಟ್ಟಿದ್ದರು. ಮೆರವಣಿಗೆ ಷಡಕ್ಷರಿದೇವನ ಮಠದ ಮುಂದೆಯೇ ಬಂದಿತು. ಭಕ್ತರು ತೊಟ್ಟಿಲವನ್ನೇಕೆ ಕಟ್ಟಿರುವರೆಂದು ಕೇಳಲು, ಲೀಲಾವತೀಕೃತಿರಸವು ಕೆಳಗೆ ಬೀಳಬಾರದೆಂಬ ಉದ್ದೇಶದಿಂದ ಕಟ್ಟಲಾಗಿದೆಯೆಂದು ತಿಳಿದುಬಂದಿತು. ಷಡಕ್ಷರಿದೇವನಿಗೆ ಈ ವಿಷಯ ವಿದಿತವಾಗಲು ಲೀಲಾವತಿಗಿಂತಲೂ ಹೆಚ್ಚು ರಸಭರಿತವಾದ ಒಂದು ಕಾವ್ಯ ತಮ್ಮಲ್ಲಿರುವುದೆಂದು ಹೇಳಿ ಈ ವಿಷಯ ನಿಷ್ಕರ್ಷೆಯಾಗುವವರೆಗೆ ಮೆರವಣಿಗೆಯನ್ನು ನಿಲ್ಲಿಸಲು ತಿಳಿಸಿದನು; ಮುಂದೆ ಒಂದು ವರ್ಷದೊಳಗಾಗಿ ರಾಜಶೇಖರವಿಳಾಸವನ್ನು ರಚಿಸಿ ತೋರಿಸಿದನು. ಆ ಕಾವ್ಯ ಲೀಲಾವತಿ ಮೊದಲಾದ ಗ್ರಂಥಗಳಿಗಿಂತಲೂ ಹೆಚ್ಚು ರಸಭರಿತವಾದುದೆಂದು ವಿದ್ವಜ್ಜನರು ಅಭಿಮತವಿತ್ತರು.

ಇಲ್ಲಿ ಪ್ರಸ್ತುತವಾದುದು ರಾಜಶೇಖರವಿಳಾಸದ ರಚನೆ. ಮೆರವಣಿಗೆಯ ಪೂರ್ವದಲ್ಲಿ ಷಡಕ್ಷರಿದೇವನು ತನ್ನ ಇನ್ನುಳಿದ ಮಹಾಕಾವ್ಯಗಳಲ್ಲಿ ಒಂದನ್ನಾದರೂ ರಚಿಸಿದ್ದರೆ ತತ್‌ಕ್ಷಣದಲ್ಲಿಯೇ ಆ ಕಾವ್ಯವನ್ನು ತೋರಿಸಬಹುದಾಗಿದ್ದಿತು; ಒಂದು ವರ್ಷದವರೆಗೆ ನಿಲ್ಲುವ ಪ್ರಸಂಗವೇ ಇರಲಿಲ್ಲ. ಆದುದರಿಂದ ರಾಜಶೇಖರವಿಳಾಸವು ಷಡಕ್ಷರಿದೇವನ ಪ್ರಥಮ ಮಹಾಕಾವ್ಯವಾಗಿರಬೇಕೆಂಬ ನಂಬಿಗೆ ಈ ಕಥೆಯನ್ನು ಕಟ್ಟಿದ ಜನತೆಯಲ್ಲಿ ಮನದಟ್ಟಾದಂತೆ ತೋರುತ್ತದೆ.

ಷಡಕ್ಷರಿದೇವನ ಮುಂದಿನ ಮಹಾಕಾವ್ಯವೆಂದರೆ ಬಸವರಾಜವಿಜಯ. ಇದನ್ನು ವೃಷಭೇಂದ್ರವಿಜಯವೆಂದು ಕರೆಯುವ ರೂಢಿಯಿದೆ.[೧] ಬಸವರಾಜವಿಜಯ

೧ ಕವಿ ಬಸವರಾಜವಿಜಯವನ್ನು ವೃಷಭೇಂದ್ರವಿಜಯವೆಂದು ಎಲ್ಲಿಯೂ ಹೆಸರಿಸಿಲ್ಲ.

ವನ್ನು ಕವಿಯು ಕ್ರಿ. ಶ. ೧೬೭೭ರಲ್ಲಿ ರಚಿಸಿದ್ದಾನೆ.[೧] ರಾಜಶೇಖರವಿಳಾಸ ಮತ್ತು ಬಸವರಾಜವಿಜಯಗಳನ್ನು ರಚಿಸಿದನಂತರ ಕವಿಕರ್ಣರಸಾಯನವನ್ನು ಬರೆದಿದ್ದಾನೆ :

ವೃಷೇಂದ್ರ ಸತ್ಯೇಂದ್ರಸುವೃತ್ತರಮ್ಯಂ । ಕಾವ್ಯದ್ವಯಂ ವಸ್ತುಕಮೇವ ಚಕ್ರೇ ॥
ಕರ್ಣಾಟಭಾಷ್ಯಾಸ್ತವನೀಯಮಾರ್ಯೈ । ರುದ್ಯದ್‌ರಸಂ ಯಸ್ಸುಭಗಂ ಗುಣೌಘೈಃ[೨]॥

ಕವಿಕರ್ಣರಸಾಯನದಲ್ಲಿ ಬಂದಿರುವ ಈ ಪದ್ಯದಿಂದ ವೃಷೇಂದ್ರ, ಮತ್ತು ಸತ್ಯೇಂದ್ರರಿಗೆ ಸಂಬಂಧಪಟ್ಟ ಬಸವರಾಜವಿಜಯ ಮತ್ತು ರಾಜಶೇಖರವಿಳಾಸಗಳೆಂಬ ಕರ್ಣಾಟ ವಸ್ತುಕಕೃತಿಗಳೆರಡೂ ಕವಿಕರ್ಣರಸಾಯನ ಹುಟ್ಟುವ ಪೂರ್ವದಲ್ಲಿಯೇ ರಚಿತವಾಗಿದ್ದವೆಂದು ಸ್ಪಷ್ಟವಾಗುತ್ತದೆ. ಈ ಕವಿಯ ಮುಂದಿನ ಮಹಾಕೃತಿಯೇ ಶಬರಶಂಕರವಿಳಾಸ. ಆ ಕಾವ್ಯದಲ್ಲಿ ಹೀಗೆ ಹೇಳಲಾಗಿದೆ :

"ಪ್ರವಿಮಳ ರಾಜಶೇಖರವಿಳಾಸ ಮಹಾಕೃತಿಯಂ ವೃಷಾಧಿರಾ
ಜವಿಜಯ ಸತ್‌ಪ್ರಬಂಧಮುಮನೊಪ್ಪುವ ಕನ್ನಡದಿಂ ನಿಮಿರ್ಚಿದಂ
ಭುವನವಿನುತ್ಯಮಾಗೆ ಕವಿಕರ್ಣರಸಾಯನಮೆಂಬ ಕಬ್ಬಮಂ
ಪ್ರವಿತತ ಸಂಸ್ಕೃತೋಕ್ತಿಯೊಳೊಡರ್ಚಿದನಲ್ತೆ ಷಡಕ್ಷರಾಹ್ವಯಂ[೩]"॥

ಈ ಪದ್ಯದಲ್ಲಿ ಕವಿ ತಾನು ರಚಿಸಿದ ಕೃತಿಗಳನ್ನು ಕಾಲಾನುಕ್ರಮದಲ್ಲಿಯೇ ಉಲ್ಲೇಖಿಸಿರುವುದು ಸ್ಪಷ್ಟವಾಗುತ್ತದೆ. ಶಬರಶಂಕರವಿಳಾಸವು ಷಡಕ್ಷರಿದೇವನ ಕೊನೆಯ ಮಹಾಕೃತಿ.

ಷಡಕ್ಷರಿದೇವನ ಇನ್ನುಳಿದ ಸಂಸ್ಕೃತ ಗಂಥಗಳ ರಚನಾಕಾಲ ಸ್ಪಷ್ಟವಾಗಿ ತಿಳಿಯುವುದಿಲ್ಲ. ಶಿವಾಧಿಕ್ಯರತ್ನಾವಳಿಯ ಕೊನೆಯ ಗದ್ಯದಲ್ಲಿ ಹೀಗೆ ಹೇಳಲಾಗಿದೆ:

"........ಗೀರ್ವಾಣಕರ್ಣಾಟಭಾಷಾಮಯ ಸರಸಪ್ರಬಂಧರಚನಾಚಾತುರೀ-ಧುರೀಣ ಶ್ರೀ ಬಾಲೇಂದುಪುರವರಾಧೀಶ ಮುದ್ದುಭೂಮಿಪ ಕುಲಗುರು ಶ್ರೀಷಡಕ್ಷರ ಸ್ವಾಮಿರಚಿತಾ ಶಿವಾಧಿಕ್ಯರತ್ನಾವಳಿಃ ಸಂಪೂರ್ಣಾ."

ಇದೇ ರೀತಿಯ ಉಲ್ಲೇಖ ಭಕ್ತಾಧಿಕ್ಯರತ್ನಾವಳಿಯಲ್ಲಿಯೂ ಬರುತ್ತದೆ. ಈ ಉಲ್ಲೇಖಗಳಿಂದ ಕೆಳಗಣ ಅಂಶಗಳನ್ನು ಊಹಿಸಬಹುದು:

---

೧ ಬಸವರಾಜ ವಿಜಯ: ಆ. ೪೨: ಪ. ೧೧೨ ೨ ಕ. ಕ. ರಸಾಯನ: ಸರ್ಗ ೧: ಪ. ೫೫ ೩ ಶ. ಶಂ. ವಿಳಾಸ: ಆ. ೫, ಪ. ೬೩.

೧) ಮುದ್ದೇಂದುಭೂಪಾಲನ ಜೀವಿತ ಕಾಲದಲ್ಲಿ ಭಕ್ತ್ಯಾಧಿಕ್ಯ ಶಿವಾಧಿಕ್ಯ ರತ್ನಾವಳಿಗಳನ್ನು ಕವಿ ರಚಿಸಿರಬೇಕು.

೨) ಕವಿಕರ್ಣರಸಾಯನವನ್ನು ಬರೆದ ಮೇಲೆ ಈ ಗ್ರಂಥಗಳು ಹುಟ್ಟಿರುವ ಸಂಭವವಿದೆ. ಏಕೆಂದರೆ ಕವಿ ತನ್ನನ್ನು 'ಗೀರ್ವಾಣ ಕರ್ಣಾಟಭಾಷಾಮಯ ಸರಸ ಪ್ರಬಂಧರಚನಾ ಚಾತುರೀಧುರೀಣ'ನೆಂದು ಕರೆದುಕೊಂಡುದೇ ಈ ಊಹೆಗೆ ಕಾರಣ.

ಇನ್ನುಳಿದ ಕೃತಿಗಳಲ್ಲಿ ಕೆಲವನ್ನು ರಾಜಶೇಖರವಿಳಾಸರಚನೆಯ ಪೂರ್ವದಲ್ಲಿಯೂ ಉಳಿದವುಗಳನ್ನು ಅನಂತರವೂ ಬರೆದಿರುವ ಸಂಭವವಿದೆ. ರಾಜಶೇಖರವಿಳಾಸದಲ್ಲಿಯೇ ಕವಿ ತನ್ನನ್ನು ಉಭಯಕವಿತಾವಿಶಾರದನೆಂದು ಕರೆದುಕೊಂಡಿರುವುದರಿಂದ ಎಳೆವರೆಯದಿಂದಲೂ ಉಭಯಭಾಷೆಗಳಲ್ಲಿ ಕೃತಿರಚನೆ ಮಾಡುವ ಶಕ್ತಿಯನ್ನು ಈ ಕವಿಯು ಪ್ರಕಟಗೊಳಿಸಿರಬೇಕು.

ಕನ್ನಡ ಸಂಸ್ಕೃತ ಭಾಷೆಗಳೆರಡರಲ್ಲಿಯೂ ಷಡಕ್ಷರಿದೇವನು ಅಪ್ರತಿಮವಾದ ಪ್ರತಿಭೆ, ಪಾಂಡಿತ್ಯಗಳನ್ನು ಪ್ರದರ್ಶಿಸಿ ಸಿದ್ಧಕವಿಯೆನಿಸಿದ್ದರೂ ಕನ್ನಡ ಭಾಷೆಯ ಮೇಲೆ ಆತನಿಗೆ ಅಪೂರ್ವವಾದ ಪ್ರೇಮ, ಆದರ, ಪ್ರಭುತ್ವಗಳಿದ್ದುವೆಂಬುದಕ್ಕೆ ಕೆಳಗಣ ಅವನ ಹೇಳಿಕೆಯೇ ಸಾಕ್ಷಿ:

"ಮೊದಲಗ್ಗದ ಸಕ್ಕದಮಿರೆ ಕನ್ನಡಮುದಯಿಸಿ ರಂಜಿಸದೆ
ಕರ್ಣಕಮನೀಯತೆಯಿಂ[೧]"

ಇದಕ್ಕೆ ನಿದರ್ಶನವೆಂಬಂತೆ ಶ್ರೀಷಡಕ್ಷರಿದೇವನು ತನ್ನ ಕಾವ್ಯಗಳಲ್ಲಿ ಸುಂದರವಾದ ಅನೇಕ ಕಂದವೃತ್ತಗಳನ್ನು ಅಚ್ಚಗನ್ನಡದಲ್ಲಿ ರಚಿಸಿದ್ದಾನೆ.

೧ ರಾಜಶೇಖರವಿಳಾಸ ಆಶ್ವಾಸ ೧; ಪ. ೮೦.

ಕವಿಪ್ರಶಸ್ತಿ

ಷಡಕ್ಷರಿದೇವನು ಇಷ್ಟೊಂದು ಘನವಾದ ಕೃತಿಗಳನ್ನು ರಚಿಸಿದುದರಿಂದ ಈತನನ್ನು ಪಂಡಿತರು ಅನೇಕ ಮುಖವಾಗಿ ಕೊಂಡಾಡಿರುವರು. 'ಸರಸಜನಮಾನಿತ', 'ಉಭಯಕವಿತಾವಿಶಾರದ', 'ಯೋಗಿಜನಮಂಡನ', 'ಷಟ್‌ಸ್ಥಲಶಾಸ್ತ್ರದರ್ಶನಾಂಕ' ಎಂದು ಮುಂತಾಗಿ ಆ ಕಾಲದ ವಿದ್ವಜ್ಜನರು ಈತನನ್ನು ಕೊಂಡಾಡಿದ್ದಾರೆ. ಅವರಿತ್ತ ಪ್ರಶಸ್ತಿರೂಪದ ಪದ್ಯ ಆತನ ರಾಜಶೇಖರವಿಳಾಸದ ಹಸ್ತಪ್ರತಿಗಳ ಅಂತ್ಯದಲ್ಲಿ ದೊರೆಯುತ್ತದೆ:

"ಜಿಹ್ವಾಂತರ್ನಟದಂಬುಜಾಸನವಧೂಪಾದಪ್ರವಾಳಸ್ಫುರ
ನ್ಮಂಜೀರದ್ವಯ ಮಂಜುನಾದವಿಭವ ಶ್ರೀಗರ್ವಸರ್ವಂಕಷಾಃ
ಜೀಯಾಸುರ್ಭವತಷ್ಷಡಕ್ಷರವಿಭೋ ಕುಂದಾರಮಂದಾವಳೀ
ಮಂದಾರದ್ರುಮಮಂಜರೀ ಮಧುಝುರೀ ಮಾಧುರ್ಯಧುರ್ಯಾಗಿರಃ॥"

ಈ ಪ್ರಶಸ್ತಿ ಕವಿಗೆ ರಾಜಶೇಖರವಿಳಾಸವನ್ನು ಬರೆದ ಮೇಲೆ ಬಂದಿತಂತೆ. ನೇಮಿಚಂದ್ರನ ಲೀಲಾವತಿಗಿಂತ ರಾಜಶೇಖರವಿಳಾಸವು ಹೆಚ್ಚು ರಸಭರಿತವಾದುದೆಂದು ಪಂಡಿತರು ನಿರ್ಣಯಿಸಿ ಹೀಗೆ ಮನ್ನಣೆಯಿತ್ತರಂತೆ. ನಿಜಸಂಗತಿ ಏನಿದ್ದರೂ ಆತನ ಕೃತಿಗಳು ಒಳ್ಳೆಯ ಜನಪ್ರಿಯವಾಗಿ ಪಂಡಿತಪ್ರಮೋದವಾಗಿ ೧೭-೧೮ನೆಯ ಶತಮಾನಗಳ ಕಗ್ಗತ್ತಲೆಯನ್ನು ಅತ್ಯಂತ ಯಶಸ್ವಿಯಾಗಿ ಭೇದಿಸಿ ಬಂದಿವೆಯೆಂದು ಹೇಳಬಹುದು. ಲೀಲಾವತಿ ಮತ್ತು ರಾಜಶೇಖರವಿಳಾಸಗಳಿಗೆ ಸಂಬಂಧಿಸಿದ ಕಥೆ ಪ್ರಚಲಿತವಿದ್ದಂತೆ ಜಗನ್ನಾಥವಿಜಯ, ರಾಜಶೇಖರವಿಳಾಸಗಳಿಗೆ ಸಂಬಂಧವನ್ನು ಸೂಚಿಸುವ ಕೆಳಗಿನ ಷಟ್ಪದಿ ಜನಜನಿತವಾಗಿ ಬಂದಿದೆ:

"ಅರಸಲ್ ಜಗನ್ನಾಥವಿಜಯಮೆನಿಪಾ ಕಬ್ಬ
ಮುರುದೋಷಪೂಗ ಪರಿಚಿತಮಾಗಿ ಲಾಕ್ಷಣಿಕ
ವರರದಂ ರಾಜಶೇಖರವಿಳಾಸಕೆ ಪಡಿಯನೊರೆಯದಿರೆ ರುದ್ರಭಟ್ಟಂ
ಪರಿಭವಕೆ ಗುರಿಯಾದನೆಂದು ಸಭಿಕರು ಪೇಳ್ದ
ಪರಿಯರಿತು ಕರುಣದಿಂದಾ ಷಡಕ್ಷರದೇವ
ಬಿರುದುಗಳ ಕೊಂಡು ಮಗುಳಿತ್ತು ಮನ್ನಿಸಿದ........"

ರುದ್ರಭಟ್ಟ ಮತ್ತು ಷಡಕ್ಷರಿದೇವ ಇಬ್ಬರೂ ಸಮಕಾಲೀನರಲ್ಲವೆಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟ. ಆದರೆ, ಷಡಕ್ಷರಿದೇವನ ಕಾಲದಲ್ಲಿ ಮತಮತೀಯ

ಕವಿ, ಕೃತಿಗಳ ನಡುವೆ ಸ್ಪರ್ಧೆ ನೇರವಾಗಿ ನಡೆಯುತ್ತಿದ್ದಿತೆಂದು ಕಂಡುಬರುತ್ತದೆ. ಅಂತೆಯೇ ಈ ಕವಿಯ ವಿಷಯವಾಗಿ ಇಂತಹ ಅನೇಕ ಆಖ್ಯಾಯಿಕೆಗಳು ಎಳಂದೂರ ಭಾಗದ ಜನತೆಯಲ್ಲಿ ಇಂದಿಗೂ ಪ್ರಚಲಿತವಾಗಿವೆ. ಈ ಕಥೆಗಳು ರಾಜಶೇಖರವಿಳಾಸದ ಜನಪ್ರಿಯತೆಯನ್ನೂ ಸತ್ವವನ್ನೂ ವ್ಯಕ್ತಪಡಿಸುತ್ತವೆ. ಆತನ ಕೃತಿಗಳನ್ನು ಅವಲೋಕಿಸಿದರೆ ಷಡಕ್ಷರಿದೇವನು ಈ ಪ್ರಶಂಸೆಗಳಿಗೆ ಎಲ್ಲಂದದಿಂದಲೂ ಸಮರ್ಥನಾಗಿರುವನೆಂದು ವಿದಿತವಾಗುವುದು. ಸಕೃದ್ದರ್ಶನಕ್ಕೆಂದು ಆತನ ಮಹಾ-ಕಾವ್ಯಗಳ ಸಾರವನ್ನಿಲ್ಲಿ ಉದ್ಧರಿಸಲಾಗಿದೆ:

ಶಬರಶಂಕರವಿಳಾಸ

ಶಬರಶಂಕರವಿಳಾಸವು ಷಡಕ್ಷರಿದೇವನ ಕನ್ನಡಕೃತಿಗಳಲ್ಲಿ ಕೊನೆಯದಾಗಿದ್ದು ಚಂಪೂರೂಪವಾಗಿದೆ. ಕೃತಿ ಚಿಕ್ಕದಾಗಿದ್ದು ಖಂಡಕಾವ್ಯವೆನಿಸಿಕೊಳ್ಳುವಂತಿದೆ. ಕಥಾವಸ್ತು ಚಿಕ್ಕದಾಗಿರುವುದರಿಂದ ವರ್ಣನಾಭಾಗಗಳಿಗೆ ಇಲ್ಲಿ ಪ್ರಾಧಾನ್ಯ. ಈ ಕಾವ್ಯದ ಕಥೆಯನ್ನು ಸಂಗ್ರಹಿಸಿ ಹೀಗೆ ಹೇಳಬಹುದು:

ಶಿವನ ಒಡ್ಡೋಲಗ; ಓಲಗದ ಎಡಬಲ, ಮುಂಗಡೆಗಳಲ್ಲಿ ದೇವಾನುದೇವತೆಗಳು ತಮ್ಮ ತಮ್ಮ ಸ್ಥಾನಮಾನವನ್ನರಿತು ಕುಳಿತುಕೊಂಡಿದ್ದಾರೆ. ನೃತ್ಯವಾದ್ಯ ಸಂಗೀತಾದಿ ಕಳಕಳನಿನಾದವು ಸುತ್ತಲೂ ಕೇಳಿಬರುತ್ತದೆ. ಪರಶಿವನು ಗಿರಿಜೆಯೊಡನೆ ಸುಖಾಸೀನನಾಗಿದ್ದಾನೆ.

ಆಗ ತಪಸ್ವಿಗಳ ಗುಂಪೊಂದು ಶಿವನೋಲಗಕ್ಕೆ ಪರಿತಂದು ದಂಡಪ್ರಣಾಮಂಗೈದು ಈಶ್ವರನ ಸ್ತುತಿಮಾಡುತ್ತದೆ. ಅವರ ಸಂಸ್ತವಕ್ಕೆ ಸಂಪ್ರೀತನಾದ ಶಿವನು "ನಿಮ್ಮ ತಪೋವನ ಯಾವ ದಿಕ್ಕಿನಲ್ಲಿದೆ; ತಾವು ಇಲ್ಲಿಗೆ ಬಂದ ಕಾರಣವೇನು" ಎಂದು ತಿಳಿದೂ ತಿಳಿಯದವನಂತೆ ಕೇಳುತ್ತಾನೆ. ಅವರು ಪ್ರತ್ಯುತ್ತರವಾಗಿ "ಇಂದ್ರಕೀಲ ಪರ್ವತವೇ ನಮ್ಮ ತಪೋಭೂಮಿ; ಅದು ಮುನಿಗಳ ಬೀಡು, ಮುಕ್ತಿಯ ತವರ್ಮನೆಯೆನಿಸಿದೆ. ನಾವು ನಿರ್ವಿಘ್ನದಿಂದ ನಿಮ್ಮನ್ನೆ ಧ್ಯಾನಿಸುತ್ತ ಇರುತ್ತಿರಲು ಒಂದು ದಿವಸ, ಕಿರೀಟವನ್ನು ಧರಿಸಿ, ಬಿಲ್ಲು ಬತ್ತಳಿಕೆಗಳಿಂದ ಸುಸಜ್ಜಿತನಾದ ಸುಂದರ ಯುವಕನೊಬ್ಬನು ನಾವಿದ್ದಲ್ಲಿಗೆ ಬಂದು, ತೀರ್ಥೋದಕವನ್ನು ಮಿಂದು, ಶೈವವ್ರತವನ್ನು ಕೈಕೊಂಡು, ಬಿಲ್ವವೃಕ್ಷವೊಂದರ ಕೆಳಗೆ ಕುಳಿತು ತಪಶ್ಚರ್ಯೆ ಮಾಡತೊಡಗಿದನು. ಅಷ್ಟರಲ್ಲಿಯೇ ದೇವೇಂದ್ರನು ಬ್ರಾಹ್ಮಣವೇಷವನ್ನು ಧರಿಸಿ ಅವನಿದ್ದಲ್ಲಿಗೆ ಬಂದು "ಇದೇನು ನಿನ್ನ ವಿಚಿತ್ರವೇಷ? ಒಂದೆಡೆ ವಿಭೂತಿ, ರುದ್ರಾಕ್ಷಿ;–ಸೌಮ್ಯಾಕಾರ! ಇನ್ನೊಂದೆಡೆಯಲ್ಲಿ ಬೆನ್ನ ಬತ್ತಳಿಕೆ, ಕೈಯಲಗು; –ರೌದ್ರಾಕಾರ! ನಿನ್ನಂತಹ ತಪಸ್ವಿಯನ್ನು ನಾನೆಲ್ಲಿಯೂ ನೋಡಿಲ್ಲ." ಎಂದು ಕಟೂಕ್ತಿಗಳನ್ನಾಡಿದನು. ಆ ತಪಸ್ವಿಯು "ನನ್ನ ಹೊರವೇಷ ಎಂತಹದೇ ಇರಲಿ; ಮನೋಬ್ಜದಲ್ಲಿ ಶಿವನ ಪಾದಕಮಲಗಳನ್ನಿರಿಸಿ ಧ್ಯಾನಿಸುತ್ತ ಅವನನ್ನು ಮೆಚ್ಚಿಸುವೆನು." ಎಂದು ಉತ್ತರ

ಕೊಟ್ಟನು. "ಶಿವನು ದುರ್ಲಭ; ಅವನನ್ನು ಮೆಚ್ಚಿಸಿಕೊಳ್ಳುವುದು ಸುಲಭ ಕಾರ್ಯವಲ್ಲ. ಈ ಕಾರ್ಯಕ್ಕೆ ಕೈಹಾಕಿದ ನೀನು ಅರೆಮರುಳ" ಎಂದು ಚುಚ್ಚು ನುಡಿದನು. ಅದಕ್ಕೆ ಆ ತಪಸ್ವಿಯು "ಶಿವನು ಭಕ್ತಿಸಂಧಾನಕ್ಕೆ ಸುಲಭನು; ಘನ ತಪವನೆಸಗಿ ಅವನನ್ನು ಮೆಚ್ಚಿಸುವೆನು. ಸಾಧ್ಯವಾಗದಿದ್ದರೆ ನನ್ನ ಹರಣವನ್ನೇ ತೊರೆಯುವೆನು." ಎಂದು ಪೂಣ್ದು ನುಡಿಯಲು ದೇವೇಂದ್ರನು ಅವನ ನಿಷ್ಠೆಗೆ ಮೆಚ್ಚಿ, ತನ್ನ ನಿಜರೂಪುದೋರಿ ಹರಸಿ, ಸ್ವಸ್ಥಾನಕ್ಕೆ ಮರಳಿದನು. ಇತ್ತ ಆ ತಪಸ್ವಿಯು ಏಕಾಗ್ರತೆಯಿಂದ ಶಿವನನ್ನು ಧ್ಯಾನಿಸತೊಡಗಿದನು. ದಿನಗಳೆದಂತೆ ಅವನ ತಪಸ್ಸು ಉಗ್ರವಾಗತೊಡಗಿತು. ಅದರ ಫಲವಾಗಿ ಅಲ್ಲಿಯೇ ಇದ್ದು ತಪವನ್ನಾಚರಿಸುತ್ತಿದ್ದ ನಮ್ಮೆಲ್ಲರ ಶಾಂತಿ ಭಂಗವಾಗತೊಡಗಿದೆ. ಶಿವಧ್ಯಾನ ತತ್ಪರರಾಗಲು ಭಕ್ತಿಯೇ ಇಲ್ಲದಾಗಹತ್ತಿದೆ. ನಮ್ಮನ್ನು ಈ ಕುತ್ತದಿಂದ ಪಾರುಮಾಡುವ ಭಾರ ನಿನ್ನ ಮೇಲಿದೆ. ಆ ತಪಸ್ವಿಯನ್ನು ಇಂದ್ರಕೀಲ ಪರ್ವತದಿಂದ ಓಡಿಸಬೇಕು; ಇಲ್ಲವೆ ನಮ್ಮೆಲ್ಲರಿಗೆ ಯೋಗ್ಯವಾದ ಮತ್ತೊಂದು ತಪೋಭೂಮಿಯನ್ನು ತೋರಿಸಬೇಕು. ಇದನ್ನು ಬಿಟ್ಟು ಅನ್ಯಮಾರ್ಗವೇ ನಮಗಿಲ್ಲ" ವೆಂದರು. ಅವರ ಮೊರೆಯನ್ನು ಕೇಳಿದ ಶಿವನು ಮುನಿಗಳಿಗೆ "ನೀವು ಅಂಜಬೇಡಿರಿ; ಅವನು ಇಂದ್ರನಂದನನಾದ ಅರ್ಜುನ. ಪಾಶುಪತಾಸ್ತ್ರ ಪಡೆಯುವದಕ್ಕಾಗಿ ನನ್ನನ್ನೇ ಕುರಿತು ತಪಸ್ಸು ಮಾಡುತ್ತಿದ್ದಾನೆ. ಆತನ ಅಭೀಷ್ಟವನ್ನು ಸಲಿಸಿ ನಿಮ್ಮನ್ನು ಕಾಪಾಡುವೆನು" ಎಂದು ಅಭಯವಚನವನ್ನು ನೀಡಿ ಅವರೆಲ್ಲರನ್ನು ಕಳಿಸಿಕೊಡುವನು.

ತನ್ನ ಭಕ್ತನಾದ ಅರ್ಜುನನ ಹಿತಾರ್ಥವಾಗಿ ಈಶ್ವರನು ಬೇಟೆಯ ನೆವದಿಂದ ಕಿರಾತವೇಷವನ್ನು ಧರಿಸುತ್ತಾನೆ. ಪಾರ್ವತಿ ಪುಳಿಂದೆಯಾಗುವಳು. ಆಕೆಯ ಪರಿವಾರದವರೆಲ್ಲರೂ ಬೇಡತಿಯರಾಗುವರು. ಬೇಡಪಡೆ ಸಿದ್ಧವಾಗುತ್ತಲೇ ಶಿವನು ಬೇಟೆಯಾಡುತ್ತ ಇಂದ್ರಕೀಲಪರ್ವತಕ್ಕೆ ನಡೆತರುವನು. ಆ ಸಮಯದಲ್ಲಿ ಗಿರಿಯ ಕಂದರವೊಂದರಲ್ಲಿ ವಾಸಿಸುತ್ತಿದ್ದ ಮೂಕದಾನವನೆಂಬ ರಕ್ಕಸನು ಬೇಂಟೆಯ ಕೋಳಾಹಳಧ್ವನಿಯನ್ನು ಕೇಳಿ ಮಹಾವರಾಹರೂಪ ಧರಿಸಿ ಹೊರಬರುವನು. ಭಯಂಕರಾಕಾರದ ಆ ವರಾಹವನ್ನು ಕಂಡೊಡನೆ ಬೇಡರು ಚೀರಾಡುತ್ತ ಆಯುಧ ಸುಸಜ್ಜಿತರಾಗಿ ಅದರ ಮೇಲೇರಿ ಹೋಗುವರು. ಅವರನ್ನು ಲೆಕ್ಕಿಸದೆ ಆ ಹಂದಿ ಘನರೋಷವನ್ನು ತಾಳಿ ಬೇಡಪಡೆಯ ಮೇಲ್ವಾಯ್ದು ಸಿಕ್ಕವರನ್ನೇ ಸೀಳಲಾರಂಭಿಸುವುದು. ಆಗ ಶಿವನು ತನ್ನವರಿಗೆ ವಿಶ್ರಮಿಸಲು ಹೇಳಿ, ತಾನೇ ಒಂದು ದಿವ್ಯ ಬಾಣವನ್ನು ಎಸೆಯುವನು. ಆ ಬಾಣಹತಿಯನ್ನು ತಾಳಲಾರದೆ ಆ ಹಂದಿ ನೆಲಕ್ಕೆ ಬಿದ್ದುರುಳಿ, ಮೂರ್ಛೆ ತಿಳಿದು ಎದ್ದೋಡಿ, ತಪವನ್ನಾಚರಿಸುತ್ತಿದ್ದ ಅರ್ಜುನನತ್ತ ಸುಳಿಯುವುದು. ಕಣ್ಣೆದುರಿನಲ್ಲಿಯೇ ಬಂದು ಆರ್ಭಟಿಸುವ ಹಂದಿಯು ಅನ್ಯ ಮುನಿಗಳಿಗೆ ತೊಂದರೆ ನೀಡಬಹುದೆಂದು ಬಗೆದ ಅರ್ಜುನನು ಬತ್ತಳಿಕೆಯಿಂದ ಬಾಣವನ್ನು ಹಿರಿದು ತನ್ನ ಗಾಂಡೀವಕ್ಕೆ ಜೋಡಿಸಿ ಅದನ್ನು ನೆಲಕ್ಕುರುಳಿಸುವನು.

ಅಷ್ಟರಲ್ಲಿಯೇ ಹಂದಿಯನ್ನು ಬೆನ್ನಟ್ಟಿಬಂದ ಶಿವನು "ಈ ಹಂದಿ ನನ್ನ ಬಾಣಹತಿಗೆ ತುತ್ತಾಗಿದೆ, ತೆಗೆದುಕೊಳ್ಳಿರಿ" ಎಂದು ಬೇಡಪಡೆಗೆ ಹೇಳುವನು. "ಸುಳ್ಳು. ಈ ಹಂದಿಯನ್ನು ಕೊಂದವನು ನಾನು, ಅದು ನನ್ನ ಬೇಟೆ" ಎಂದು ಅರ್ಜುನನು ಅರ್ಭಟಿಸುವನು. ಮಾತಿಗೆ ಮಾತು ಬೆರೆತು ಅವರಿಬ್ಬರಲ್ಲಿ ಕೋಪೋದ್ರೇಕವುಂಟಾಗುವುದು. ಮಾತು ಮೂದಲಿಕೆಯ ಸ್ವರೂಪ ತಾಳುವುದು. ಕೊನೆಗೆ ಅದು ಅವರಿಬ್ಬರಲ್ಲಿ ಸಮರವಾಗಿ ಪರಿಣಮಿಸುವುದು. ಅರ್ಜುನನು ಕೋಪದಿಂದ ಶಿವನ ಮೇಲೆ ಬಾಣಗಳ ಸುರಿಮಳೆಯನ್ನೇ ಕರೆಯುವನು. ಶಿವನು ಅವನ್ನೆಲ್ಲ ನಡುವೇ ತುಂಡರಿಸಿಬಿಡಲು ಪಾರ್ಥನು 'ಎಲೈ ಶಬರ, ನಿನ್ನ ಬಿಲ್ಲಾಳ್ತನ ಹೊಗಳತಕ್ಕುದು' ಎಂದು ಪ್ರಶಂಸಿಸಿ ಮತ್ತೆ ಬಾಣಗಳನ್ನು ಬಿಡುವನು. ಅವುಗಳನ್ನು ಕತ್ತರಿಸಿ ಶಿವನು ಪುನಃ ಬಾಣಬಿಡುವನು. ಇಷ್ಟೊತ್ತಿಗೆ ಅರ್ಜುನನ ಬತ್ತಳಿಕೆಯಲ್ಲಿರುವ ಬಾಣಗಳೆಲ್ಲ ತೀರಿಹೋಗುವವು. ಆಗ ಅವನು ಹಿಂಜರಿಯದೆ ಕೋಪೋದ್ರೇಕದಿಂದ ಶಿವನ ಮೇಲೆ ಕಲ್ಲುಗುಂಡುಗಳನ್ನು ತೂರತೊಡಗುವನು. ಶಿವನು ಅವುಗಳನ್ನು ತನ್ನ ನಿಶಿತವಾದ ಬಾಣಗಳಿಂದ ಕತ್ತರಿಸಿ ಹಾಕಿ, "ಎಲೋ ಮಹಾವೀರ, ಬೇರೆಬಾಣಗಳಿದ್ದರೆ ತೆಗೆದುಕೊಂಡು ಬಾ, ಇಲ್ಲದಿದ್ದರೆ ನಾವೇ ಕೊಡುವೆವು, ಸ್ವೀಕರಿಸಿ ಯುದ್ಧಮಾಡು" ಎಂದು ಮರ್ಮಭೇದಕ ಮಾತುಗಳನ್ನಾಡುವನು. ಆಗ ಅರ್ಜುನನು "ಇಷ್ಟೇಕೆ ಉಬ್ಬಟೆ ಪುಳಿಂದ? ಶಸ್ತ್ರಯುದ್ಧ ಈಗ ನಿಲ್ಲಲಿ, ಮುಷ್ಟಿಯುದ್ಧಕ್ಕೆ ಸನ್ನದ್ಧನಾಗು; ನನ್ನ ಕಾರ್ಯ ಸಾಹಸಗಳನ್ನು ಈ ಬೇಡಪಡೆ ನೋಡಲಿ" ಎಂದು ಆಹ್ವಾನ ನೀಡುವನು. ಈಶ್ವರನು ತನ್ನ ಭಕ್ತನ ಸಾಹಸಕ್ಕೆ ಮೆಚ್ಚಿ ಅವನನ್ನು ಪಾರ್ವತಿಯ ಮುಂದೆ ಹೊಗಳಿ ಮುಷ್ಟಿಯುದ್ಧವಾಡುವನು. ಒಬ್ಬರ ಮೇಲೊಬ್ಬರು ಎರಗಿ ತಮ್ಮ ಶಕ್ತಿಪ್ರದರ್ಶನಮಾಡುತ್ತಿರುವಾಗ ಶಿವನು ಪಾರ್ಥನನ್ನು ತುಳಿದು ಮೆಟ್ಟುವನು. ಅರ್ಜುನನ ಬಾಯಿ ಮೂಗುಗಳಿಂದ ನೆತ್ತರು ಚಿಮ್ಮತೊಡಗುವುದು. ಭಕ್ತನ ಸ್ಥಿತಿಯನ್ನು ನೋಡಿ ಈಶ್ವರ ಮರಗುವನು. ಅರ್ಜುನನ ಬಿಂಕ ಮಾಯವಾಗುವುದು; ಸೋತೆನೆಂಬ ಭಾವ ಅವನ ಮನಸ್ಸನ್ನು ಆವರಿಸುವುದು. ಒಬ್ಬ ಸಾಮಾನ್ಯ ಬೇಡನಿಗೆ ತಾನು ಸೋಲಬೇಕಾದರೆ, ಶಿವನನ್ನು ಮರೆತುದೇ ಕಾರಣವಾಗಿರಬೇಕೆಂದು ಊಹಿಸುವನು. ಶಿವನ ಕೃಪೆಯಿಲ್ಲದವನಿಗೆ ಗತಿಯಿಲ್ಲವೆಂದರಿತು ಶಿವಾಗಮೋಕ್ತವಿಧಿಯಿಂದ ಮಳಲ ಲಿಂಗವೊಂದನ್ನು ಮಾಡಿ, ಹೂಗಳನ್ನು ಧರಿಸಿ ಲಿಂಗಪೂಜೆಮಾಡುವನು; ರಿಪುಜಯವನ್ನು ಕೊಟ್ಟು ಕಾಪಾಡಬೇಕೆಂದು ಬೇಡಿಕೊಳ್ಳುವನು. ಇನ್ನು ತನಗೆ ಜಯ ಕಟ್ಟಿಟ್ಟದ್ದೆಂದು ಭಾವಿಸಿ, ಭುಜಗಳನ್ನು ತಟ್ಟಿ ಬೇಡನನ್ನು ನೋಡುವಷ್ಟರಲ್ಲಿ ಮಳಲ ಲಿಂಗದ ಮೇಲೆ ಏರಿಸಿದ ಹೂಗಳು ಅವನ ಮಂಡೆಯನ್ನಲಂಕರಿಸಿದ್ದುದನ್ನು ಕಂಡು ವಿಸ್ಮಿತನಾಗುವನು. ಬೇಡನೇ ಶಿವನೆಂಬ ಕಲ್ಪನೆ ಆಗ ಅವನಲ್ಲಿ ಮೂಡುವುದು. ತನ್ನ ಮರುಳ್ತನಕ್ಕೆ ತನ್ನನ್ನೇ ಹಳಿದುಕೊಂಡು, ಭಯಭಕ್ತಿಪರವಶನಾಗಿ ಶಿವನಿಗೆ ಸಾಷ್ಟಾಂಗನಮಸ್ಕಾರಮಾಡುವನು. ತಿಳಿಯದೆ ಉದ್ಧತವೃತ್ತಿಯಿಂದ ಆಚರಿಸಿದ

ತನ್ನನ್ನ ಕ್ಷಮಿಸಲು ಬೇಡಿಕೊಳ್ಳುವನು. ಆಗ ಶಿವನು ಅವನನ್ನು ಸಂತೈಸಿ ತನ್ನ ನಿಜರೂಪುದೋರುವನು.

ಅರ್ಜುನನು ಭಕ್ತಿಪರವಶನಾಗಿ ಶಿವನನ್ನು ನಾನಾಬಗೆಯಲ್ಲಿ ನುತಿಸಿ ತನ್ನ ಅಪರಾಧವನ್ನು ಕ್ಷಮಿಸಲು ಯಾಚಿಸುವನು. ಶಿವನು ಅರ್ಜುನನನ್ನು ಬಿಗಿಯಾಗಿ ಅಪ್ಪಿಕೊಂಡು "ನಿನ್ನಕಟೂಕ್ತಿಗಳೆ ಮಂತ್ರ, ನಿನ್ನ ಶರಗಳೆ ಹೂವುಗಳು, ನಿನ್ನ ಮುಷ್ಟಿಯುದ್ಧವೆ ನನ್ನ ಪಾದಪೂಜೆ; ನಾನು ನಿನ್ನ ಭಕ್ತಿಗೆ ಸಂತುಷ್ಟನಾಗಿದ್ದೇನೆ. ನಿನ್ನ ಅಭೀಷ್ಟವನ್ನು ವ್ಯಕ್ತಪಡಿಸು" ಎನ್ನಲು "ಸಮಸ್ತರಿಪುವೃಂದವನ್ನು ಗೆಲ್ಲುವು ದಕ್ಕಾಗಿ ಪಾಶುಪತಾಸ್ತ್ರವನ್ನೂ ಬ್ರಹ್ಮಶಿರೋಸ್ತ್ರವನ್ನೂ ದಯಪಾಲಿಸು." ಎಂದು ಪಾರ್ಥನು ಪ್ರಾರ್ಥಿಸಿದನು. ಶಿವನು ಭಕ್ತನ ಬೇಡಿಕೆಯನ್ನು ಸಲ್ಲಿಸಿದನು. ಪಾರ್ವತಿಯು ಅರ್ಜುನನಿಗೆ ಅತಿ ಮಮತೆಯಿಂದ ಅಂಜನಾಸ್ತ್ರವನ್ನು ದಯಪಾಲಿ-ಸುವಳು. ಅರ್ಜುನನು ಶಿವಪಾರ್ವತಿಯರಿಗೆ ನಮಸ್ಕರಿಸಿ ತನ್ನ ಊರಿಗೆ ಹೊರಡು ವನು. ಈಶ್ವರನು ಪಾರ್ವತೀಸಮೇತನಾಗಿ ಕೈಲಾಸಕ್ಕೆ ವಿಜೃಂಭಣೆಯಿಂದ ಹಿಂದಿರುಗುವನು. ಕಾವ್ಯಕ್ಕೆ ಮಂಗಳವಾಗುತ್ತದೆ. ಆ ಮಂಗಳವೇ ಲೋಕ ಕಲ್ಯಾಣ.

ಶಬರಶಂಕರವಿಳಾಸದ ಕಥಾವಸ್ತು ಸುಪ್ರಸಿದ್ಧವಾದುದು. ಶಿವನ ಪಂಚವಿಂ-ಶತಿ ಲೀಲೆಗಳಲ್ಲಿ ಒಂದಾಗಿ ಶೈವಪುರಾಣಕಾವ್ಯಗಳಲ್ಲಿಯೂ ಮಹಾಭಾರತಾಂತರ್ಗತ ಕಥೆಯಾಗಿ ಭಾರತದ ವಿವಿಧರೂಪದ ಸಾಹಿತ್ಯಕೃತಿಗಳಲ್ಲಿಯೂ ಈ ಕಥೆ ಹರಿದು ಬಂದಿದೆ. ಸಂಸ್ಕೃತ ಭಾಷೆಯಲ್ಲಿ ಕಿರಾತಾರ್ಜುನೀಯವೆಂದು ಖ್ಯಾತಿವೆತ್ತ ಮಹಾ ಕಾವ್ಯ ಸರ್ವಶ್ರುತವಿದೆ. ಕನ್ನಡದಲ್ಲಿ ಈ ಇಂದ್ರಕೀಲಪ್ರಸಂಗ ಪಂಪಭಾರತ, ಕುಮಾರವ್ಯಾಸಭಾರತ ಮುಂತಾದ ಕಾವ್ಯಗಳಲ್ಲಿ ಮೈವೆತ್ತಿದೆ.

ಷಡಕ್ಷರಿದೇವನು ಈ ಎಲ್ಲ ಕಾವ್ಯಗಳಿಂದ ಸ್ಫೂರ್ತಿವಡೆದಿದ್ದರೂ ಅರ್ಜುನನ ಪಾತ್ರವನ್ನು ಪರಿಸ್ಫುಟಗೊಳಿಸುವಲ್ಲಿ, ಸಂಯಮ—ಕ್ಷಾತ್ರಸಹಜವಾದ ಯುದ್ಧೋ ತ್ಸಾಹ, ಕಟೂಕ್ತಿ—ಮೃದುಭಾವನೆ, ಶರಯುದ್ಧ–ಮುಷ್ಟಿಯುದ್ಧ, ಪಶ್ಚಾತ್ತಾಪ—ಮನದ ನಿಲುಕಡೆ, ಶಿವಸಂದರ್ಶನ-ಭಕ್ತ್ಯುದ್ರೇಕ ಈ ದ್ವಂದ್ವಗಳಲ್ಲಿ ಅರ್ಜುನನ ಮನಃಸ್ಥಿತಿಯನ್ನು ಚಿತ್ರಿಸುವಲ್ಲಿ ಷಡಕ್ಷರಿದೇವನು ಒಂದು ಹೆಜ್ಜೆ ಮುಂದೆ ಹೋಗಿ ರುವನೆಂದರೂ ಸಲ್ಲುವುದು. ಆತನ ಈ ಖಂಡಕಾವ್ಯದಲ್ಲಿ ಹರಿವ ಭಕ್ತಿರಸ ಸಹೃದ ಯರಿಗೆ ಅಖಂಡವಾದ ಆನಂದವನ್ನಿತ್ತು ಅವರನ್ನು ಕೈಲಾಸದತ್ತ ಒಯ್ಯುತ್ತದೆ. ಷಡಕ್ಷರಿದೇವನ ಕೈಲಾಸದ ವರ್ಣನೆಯನ್ನು ಭಾಷಾಂತರಿಸಿದ ಲಂಡನ್ ವಿಶ್ವವಿದ್ಯಾ ಲಯದ ಸುಪ್ರಸಿದ್ಧವಿದ್ವಾಂಸರಾದ ಡಾ. ಎಲ್. ಡಿ. ಬಾರ್ನೆಟ್ ಅವರು "ಈ ವರ್ಣನೆ 'ಡ್ಯಾಂಟೆ' ಮೊದಲಾದವರ ವರ್ಣನೆಗೆ ಹೊಯ್‌ಕೈಯಾಗಿದೆ." ಎಂದ ಮಾತು ಕವಿಯ ಅಗ್ಗಳಿಕೆಗೆ ಸಾಕ್ಷಿಯಾಗಿದೆ.

ಬಸವರಾಜವಿಜಯ

'ಬಸವರಾಜವಿಜಯ'ವು ಷಡಕ್ಷರಿದೇವನ ಎರಡನೆಯ ಕನ್ನಡಕೃತಿ; ಮಹೋನ್ನತಕಾವ್ಯ. ಅದು ಪ್ರೌಢ ಚಂಪೂರೀತಿಯಲ್ಲಿ ರಚಿತವಾಗಿದ್ದು ೪೨ ಆಶ್ವಾಸಗಳನ್ನೊಳಗೊಂಡಿದೆ. ಪ್ರಮಥ ಪ್ರಥಮಾಚಾರ್ಯರೆನಿಸಿದ ಬಸವಣ್ಣನವರ ಜೀವನ ಚರಿತೆಯೆ ಈ ಕಾವ್ಯದ ಕಥಾವಸ್ತು. 'ಕೃತಿ ಬಸವಪುರಾಣಂ', 'ಕೃತಿಪತಿ ಬಸವಂ' ಎನ್ನುವಲ್ಲಿ ಈ ಮಾತು ಸ್ಪಷ್ಟವಾಗಿದೆ. ಮೂಲಕಥಾವಸ್ತುವಿನಲ್ಲಿ ಅನೇಕ ಶಿವಶರಣರ ಉಪಕಥೆಗಳನ್ನು ಜೋಡಿಸಿರುವುದರಿಂದ ಈ ಕೃತಿಯು ಉದ್ಗ್ರಂಥವೆನಿಸಿದೆ, ಈ ಕಾವ್ಯದ ಕಥೆ ಸಂಕ್ಷಿಪ್ತವಾಗಿ ಹೀಗಿದೆ :

ತಾರಾಚಲದಗ್ರಪ್ರದೇಶದಲ್ಲಿ ಈಶಪುರವು ಭಾಸುರಮಾಗಿ ಕಂಗೊಳಿಸುತ್ತದೆ. ಅಲ್ಲಿರುವ ಶಿವನ ಸಭಾನಿವಾಸವು ದೇವಾನುದೇವತೆಗಳಿಂದ ಕಿಕ್ಕಿರಿದು ತುಂಬಿದೆ. ಶಿವನು ಗಣನಿವಹಂ ಬೆರಸು ತನ್ನ ಅರ್ಧಾಂಗಿಯೊಡನೆ ಭದ್ರಾಸನವನ್ನಲಂಕರಿಸಿದ್ದಾನೆ. ಆ ಸಮಯದಲ್ಲಿ ಶೈವನಿಶ್ಚಳಮತಿಯಾದ ನಾರದನು ಮಂದಹಾಸ ಬೀರುತ್ತ ಆ ಸಭೆಯಲ್ಲಿ ಪ್ರವೇಶಿಸುವನು. ಬಂದವನೇ ಶಿವಶಿವೆಯರಿಗೆ ನಮಿಸಿ ಸ್ತೋತ್ರಮಾಡುವನು. ಶಿವನು ನಾರದನನ್ನು ಕಂಡು, ಕಾರುಣ್ಯವನ್ನು ನೀಡಿ, ಅವನನ್ನು ಮರ್ತ್ಯಲೋಕದ ವೃತ್ತಾಂತವನ್ನು ಬಿತ್ತರಿಸಲು ಕೇಳುವನು. ನಾರದನು ಹರ್ಷದಿಂದ 'ನರಲೋಕಮೊಂದರೊಳ್ ಪುರಹರಭಕ್ತಿಯು ಗುಪ್ತಮಾಗಿರ್ದಪುದು'; ಆದ್ದರಿಂದ ತಾವು ಭೂಮಿಯಲ್ಲಿ ಜನಿಸಿ ಜನತೆಯ ಅಜ್ಞಾನವನ್ನು ಹೋಗಲಾಡಿಸಿ, ಸುಜ್ಞಾನಭಾವವನ್ನು ಕರುಣಿಸಿ ಭಕ್ತರನ್ನು ಕೃತಾರ್ಥರನ್ನಾಗಿ ಮಾಡಬೇಕೆಂದು ಬಿನ್ನವಿಸುವನು. ಅದಕ್ಕೆ ಶಿವನು ತನ್ನಲ್ಲಿ ಅಭೇದಯುಕ್ತನಾಗಿರುವ ನಂದಿಯನ್ನು ಭೂಲೋಕಕ್ಕೆ ಕಳುಹಿ ಭಕ್ತಿಜ್ಞಾನಶಿವಾಚಾರಗಳು ಇಳೆಯಲ್ಲಿ ಹರಡುವಂತೆ ಮಾಡುವೆನೆಂದು ನಾರದನಿಗೆ ತಿಳಿಸುವನು. ಗಿರಿಜೆ ಕುತೂಹಲದಿಂದ ನಂದಿಯ ಜನ್ಮವೃತ್ತಾಂತವನ್ನು ತಿಳಿಸಬೇಕೆಂದು ಬೇಡಿಕೊಳ್ಳಲು ಶಿವನು, ನಂದಿಯು ಶಿಲಾದನ ಸುತನಾಗಿದ್ದು ಕ್ರಮೇಣ ಉಗ್ರತಪಸ್ಸನ್ನು ಆಚರಿಸಿ, ಕೊನೆಗೆ ತನ್ನ ವಾಹನವಾದ ಕಥೆಯನ್ನು ವಿಸ್ತರಿಸಿ ಹೇಳುವನು. ಆ ದೇವಲೋಕದ ನಂದೀಶನೇ ಇನ್ನು ಮುಂದೆ ಶಿವನಾಜ್ಞೆಯಂತೆ ಮನುಜಲೋಕದಲ್ಲಿ ಬಸವನಾಮವೆತ್ತು ಜನಿಸಿಬರುವನು.

ಕರ್ಣಾಟಶ್ರೀಯ ಸೌಭಾಗ್ಯಸಾರವೆನಿಸಿದ ತಿಂಗಳೇಶ್ವರಬಾಗೇವಾಡಿಯಲ್ಲಿ ಅಘವಾಂಘ್ರಿಸರೋರುಹಸಾರಭೃಂಗನಾದ ಮಂಡಗೆಯ ಮಾದರಸನು ಗುರುಶೈವಭೂಸುರನೆಂಬಂತೆ ಶೋಭಿಸುತ್ತಿದ್ದಾನೆ. ಆತನ ಧರ್ಮಪತ್ನಿ ಮಾದಲಾಂಬೆ. ಅವಳು ಪತಿಭಕ್ತಿವಿರಾಜಿತೆ, ಶಿವಾಂಘ್ರಿಪದ್ಮಭಜನಪ್ರಿಯೆ. ಈ ದಂಪತಿಗಳು ಸಂಸಾರಸಮಸುಖದಲ್ಲಿ ಕಾಲಕಳೆಯುತ್ತಿರಲು ಒಂದು ದಿನ, ಮಾದಲಾಂಬಿಕೆ ಮಾರ್ಕಾಂಡೇಯಶಿಲಾದಾದಿಗಳ ಪುರಾಣವನ್ನು ಕೇಳಿ, ತನಗೆ ಸಕಲಸಂಪತ್ತಿದ್ದರೂ ವಂಶೋದ್ಧಾರಕ

ನಾದ ಪುತ್ರನೊಬ್ಬನು ಇಲ್ಲದ್ದಕ್ಕಾಗಿ ವ್ಯಥೆಪಟ್ಟು, ಕಮಳವರಳದ ಸರೋವರ ನಿರರ್ಥಕವೆಂದು ಬಗೆದು ಮನೋರಮಣನಾದ ಮಾದರಸನಿಗೆ ತನ್ನ ಮನದ ಹಂಬಲವನ್ನು ತಿಳಿಸುವಳು. ತನೂಭವಲಾಭಲೋಭದಿಂದಾಡಿದ ನಿಜರಮಣಿಯ ದೀನಾನನವನ್ನು ಕಂಡು ಮಾದರಸನು ಮ್ಲಾನವದನನಾಗಿ ತನ್ನ ಸತಿಯೊಡನೆ ಸಮಾಲೋಚಿಸಿ ಪುತ್ರಕಾಮವ್ರತಗಳನ್ನು ಆಚರಿಸುವನು. ಈ ವ್ರತಗಳಿಂದ ದಂಪತಿಗಳ ಮನೋರಥವು ಈಡೇರುವುದಿಲ್ಲ. ಆಗ ಇವರ ಇಂಗಿತವನ್ನರಿತ ಶಾಸ್ತ್ರವಯೋವೃದ್ಧರೊಬ್ಬರು 'ನಂದೀಶ್ವರನೋಂಪಿಯಿಂ ನಂದನೋದಯಂ ಸಮನಿಪುದು' ಎಂದು ತಿಳಿಸಲು, ನಂಬಿ ನಲವೇರಿ, ಊರ ಹೊರಭಾಗದಲ್ಲಿರುವ ಭಾಸುರಶಿವಾಲಯಕ್ಕೆ ಬಂದು ನಂದೀಶ್ವರನನ್ನು ಕಂಡು ಕೊಂಡಾಡಿ ದಂಡಪ್ರಣಾಮಂಗೈವರು. ಒಂಬತ್ತು ದಿನ ನೋಂಪಿಯನ್ನಾಚರಿಸಿ ಮಾದರಸನು ಮಡದಿವೆರಸಿ ವೃಷೇಂದ್ರನ ಪೂಜೆಯನ್ನು ಸಂಭ್ರಮದಿಂದ ಮಾಡಿ 'ನಿನ್ನನ್ನನಪ್ಪ ಸುತನಂ ಮನ್ನಾಥ ವೃಷೇಂದ್ರ ಕರುಣಿಪುದೆಸಗಾಂ ನಿನ್ನಯ ಪೆಸರಿಟ್ಟಪೆಂ' ಎಂದು ಭಯಭಕ್ತಿಯಿಂದ ಬೇಡಿಕೊಳ್ಳುವನು. ಆಗ ವೃಷಭನು ನೆರೆದ ಜನ ಒಲ್ದು ನೋಡುತ್ತಿರಲು ತನ್ನ ದಕ್ಷಿಣಶೃಂಗದಲ್ಲಿರುವ ಅಲರನ್ನು ಕರುಣಿಸಲು, ಮಾದಲಾಂಬಿಕೆ ಅದನ್ನು ಭಕ್ತಿಯಿಂದ ತನ್ನ ಮುಡಿಯಲ್ಲಿ ಮುಡಿದುಕೊಳ್ಳುವಳು. ಸತಿಪತಿಗಳೀರ್ವರು ಲಬ್ಧವರರಾಗಿ ಪರಮಾನಂದದಲ್ಲಿ ಲೋಲಾಡುವರು. ಕೆಲಕಾಲ ಗತಿಸಲು ನಂದೀಶನು ಧರೆಯನ್ನು ಪಾವನಗೊಳಿಸಲೋಸುಗ ಮಾದಲಾಂಬಿಕೆಯ ಪುಣ್ಯೋದರವನ್ನು ಪ್ರವೇಶಿಸುವನು.

ಮಾದಲಾಂಬಿಕೆಯ ಸುಗರ್ಭಕ್ಕೆ ನವಮಾಸಗಳು ತುಂಬಿದವು. ಒಂದು ದಿನ ರಾತ್ರಿ ಮಾದಲಾಂಬಿಕೆ ಕೆಳದಿಯರೊಡನೆ ಪವಡಿಸಿದಾಗ ಕುಶಲಮತಿ ವೃಷಭರಾಜನು ಶಶಿವದನೆಯ ಮಗ್ಗುಲಲ್ಲಿ ಮನದೊಲವಿನಿಂದ ಶಿಶುಭಾವಮಂ ತಳೆದು ಮೆರೆವನು. ಈ ರೀತಿಯಾಗಿ ನಂದೀಶನು ಭೂಲೋಕದಲ್ಲಿ ಅವತರಿಸಲು ಕಪ್ಪಡಿಯ ಸಂಗಮೇಶನು ಬಾಗೇವಾಡಿಗೆ ಬಿಜಯಂಗೈದು, ತನ್ನ ಕುಮಾರನಾದ ಬಸವಣ್ಣನನ್ನು ನಿರೀಕ್ಷಿಸಿ ಆನಂದದಿಂದ 'ಪಾಣಿಪಂಕಜಮನಿಟ್ಟು ಮಸ್ತಕದೊಳು, ವಿಭೂತಿಯನೊಲ್ದು ಭಾಳದೊಳ್ ಧರಿಯಿಸಿ, ಲಿಂಗಸಂಗತನಿಜಾಂಗನನಾಗಿಸಿ ಮೂಲಮಂತ್ರಮಂ ತರುಣನ ಕರ್ಣದೊಳ್ ತಿಳುಪಿ' ದೀಕ್ಷೆಯನ್ನೀಯುವನು. ಶಿಶುವನ್ನು ಮುಂಡಾಡಿ ಪರಮಾನಂದದಿಂದ ಹರಸಿ ಕಪ್ಪಡಿಗೆ ಮರಳಿಹೋಗುವನು.

ನಿದ್ರೆ ತಿಳಿದೆದ್ದು ಕುಳಿತ ಮಾದಲಾಂಬಿಕೆ ಕುಮಾರನನ್ನು ಕಂಡು ವಿಸ್ಮಯಗೊಳ್ಳುವಳು. ಮಾದರಸನು ಭಸಿತಲಲಾಟನಾದ ರುದ್ರಾಕ್ಷಮಾಲಾಲಂಕೃತನಾದ ಬಾಲಕನನ್ನು ನೋಡಿ ಸಾನಂದಾಶ್ಚರ್ಯವನ್ನು ವ್ಯಕ್ತಪಡಿಸಿ, ಶಿವಮಹಿಮೆಗೆ ತಲೆದೂಗಿ, ನಂದೀಶ್ವರನಿಗೆ ಬಾಗಿನವನ್ನು ಕಳುಪಿ 'ಬಸವನ ನೇಮದಿಂದೊಗೆದನಪ್ಪದರಿಂ ಬಸವನೆಂದು ನಾಮಕರಣಂಗೆಯ್ದು' ದರಿದ್ರನು ಸುರತ್ನವನ್ನು ಕಂಡಂತೆ ಪರಮಾನಂದಸುಧೆಯನ್ನು ಸವಿದನು. ಬಸವಣ್ಣನು ಶಿವಧರ್ಮಂ ಶಿವರೂಪ

ತಾಳ್ದಂತೆ ಬಾಲಚಂದ್ರನಂತೆ ಬೆಳೆಯತೊಡಗುವನು. 'ಮಾಯಾಪ್ರಪಂಚವಿದೆಲ್ಲಂ ಜಡನೆ'ಂದು ನೋಡಿ ನಗುವಂತೆ ಬಾಲಲೀಲೆಗಳನ್ನೆಸಗಿ ತಂದೆತಾಯಿಗಳಿಗೆ ಸಂತಸ ವನ್ನುಂಟುಮಾಡುವನು.

ಬಾಲಕನಾದ ಬಸವರಸನಿಗೆ ಅಷ್ಟವರ್ಷಗಳು ಸಂಪ್ರಾಪ್ತವಾದುವು. ಆಗ ಮಾದರಸನು ಜೋಯಿಸರನ್ನು ಕರೆಯಿಸಿ, ತನ್ನ ಮಗನಿಗೆ ಉಪನಯನ ಮಾಡಿ-ಸಲು ಮುಹೂರ್ತ ತೆಗೆಯಿಸುವನು. ತಂದೆಯ ಬೆಳ್ತನಕ್ಕೆ ಬೆಕ್ಕಸಂಬಟ್ಟ ಬಸವ-ಣ್ಣನು ಮುಗುಳ್ನಗೆ ನಕ್ಕು "ಹರದೀಕ್ಷೆಯನಾಂತ ಮಹಿಮಂ ಪರದೀಕ್ಷೆಯನಾಸೆ ಗೆಯ್ವನೆ? ಶಿವಮತವನೊಲ್ದು ಸೇವಿಪ ಶಿವಭಕ್ತಂ ಭವಿಮತಕ್ಕೆನೊಲ್ದಪನೆ? ರುದ್ರಮುದ್ರೆವಡೆದಾತನು ಕ್ಷುದ್ರಮುದ್ರೆಗೆಳಸನು" ಎಂದು ಸ್ಪಷ್ಟಹೇಳಿ ಉಪ ನಯನವನ್ನು ತಿರಸ್ಕರಿಸಿ ನುಡಿಯುತ್ತಾನೆ. ತಂದೆ ಶಾಸ್ತ್ರ-ಪುರಾಣಗಳ ಆಧಾರ ಕೊಟ್ಟು ಎಷ್ಟು ಬುದ್ಧಿಹೇಳಿದರೂ ಬಸವರಸನು ಒಪ್ಪುವುದಿಲ್ಲ. ಉಪಾಯಗಾಣದೆ ಮಾದರಸನು ಉಪನಯನ ಕಾರ್ಯವನ್ನು ನಿಲ್ಲಿಸುವನು.

ಬಸವಣ್ಣನವರು ಹೀಗೆ ತಂದೆಗೆ ವಿವೇಕವನ್ನು ಬೋಧಿಸಿ, ಸಮಾಧಾನ ಹೇಳಿ ಕೆಲವು ಕಾಲ ಶಿವಾನುಭವಗೋಷ್ಠಿಯಲ್ಲಿರುತ್ತಾನೆ. ಒಮ್ಮೆ ಶಿವನ ಧ್ಯಾನಮಾಡುತ್ತ ಕುಳಿತಾಗ ಬಸವಣ್ಣನವರಿಗೆ ಕಪ್ಪಡಿಸಂಗಮೇಶ್ವರನ ಸ್ಮರಣೆಯಾಗುತ್ತದೆ. ಆಗ ಅವನು ವಿಳಂಬವಿಲ್ಲದೆ ತನ್ನ ಸಹೋದರಿ ನಾಗಾಲಾಂಬೆಯೊಡನೆ ಕಪ್ಪಡಿಗೆ ಬರು ವನು. ಸಂಗಮೇಶ್ವರ ದೇವಾಲಯದ ಹೆಬ್ಬಾಗಿಲಿಗೆ ಬರುತ್ತಲೇ ಸಂಗಮನಾಥನು ಮುನ್ನಿನ ಗುರುರೂಪವನ್ನು ತಾಳಿ ಎದುರಿಗೆ ಕಾಣಿಸಿಕೊಳ್ಳುವನು. ತನ್ನ ನಚ್ಚಿನ ಅಣುಗನನ್ನು ತೆರೆದ ಹೃದಯದಿಂದ ಬರಮಾಡಿಕೊಂಡು ಭಕ್ತಿಯ ವಿವಿಧ ಲಕ್ಷಣ ಗಳನ್ನು ತಿಳಿಸುವನು. ಬಸವಣ್ಣನು ಗುರುವಿತ್ತ ಉಪದೇಶವನ್ನು ಪರಿಪಾಲಿಸುತ್ತ ಕೆಲವು ಕಾಲ ಕಪ್ಪಡಿಯಲ್ಲಿಯೇ ಇರುವನು.

ಅತಿ ರುಚಿರತರವಾದ ಕರ್ಣಾಟದೇಶದ ಸೌಭಾಗ್ಯಭವನವೆನಿಸಿದ ಕಲ್ಯಾಣ ಪುರವು ಮಂಗಳವಾಗಿ ಶೋಭಿಸುತ್ತದೆ. ಸಿರಿಯೊಳ್ ಶ್ರೀಪತಿಯಂತಿರುವ ಬಿಜ್ಜಳ ಭೂಪಾಲನು ಅದನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯವಾಳು ತ್ತಾನೆ. ಅವನಿಗೆ ಮಾದಲಾಂಬೆಯ ತಮ್ಮನಾದ ಶಿವಭಕ್ತ ಬಲದೇವನು ಮಂತ್ರಿ ಯಾಗಿದ್ದಾನೆ. ಈ ಮಂತ್ರಿಗೆ ಗಂಗಾಂಬಿಕೆಯೆಂಬ ಕುವರಿಯಿದ್ದು ಸೌಂದರ್ಯದ ಖಣಿಯಾಗಿ, ಸದ್ಗುಣಮಣಿಯಾಗಿ ಶೋಭಿಸುವಳು. ಮಗಳಿಗೆ ತಕ್ಕ ವರನನ್ನು ತರಬೇಕೆಂದು ಬಲದೇವನು ಯೋಚಿಸುತ್ತಿರಲು ಅವನಿಗೆ ಒಮ್ಮೆಲೇ ಕಪ್ಪಡಿಯ ಲ್ಲಿದ್ದ ಬಸವಣ್ಣನವರ ನೆನಪಾಗುವದು. 'ಈ ಕನ್ಯೆಗೆ ತಕ್ಕ ವಲ್ಲಭಂ, ಅವಂಗಿರ-ದೀವೆಂ' ಎನುತ್ತೆ ನೇರವಾಗಿ ಮಂತ್ರಿವರ್ಯನು ಕಪ್ಪಡಿಗೆ ಬರುವನು. 'ತನ್ನ ಕನ್ಯಾ ರತ್ನಮಂ ಕೈಕೊಳ್ವುದೆ'ಂದು ಬಿನ್ನವಿಸಲು ಬಸವಣ್ಣನವರೂ ಒಪ್ಪಿಕೊಳ್ಳುವರು. ಬಸವರಸ-ಗಂಗಾಂಬಿಕೆಯರ ವಿವಾಹವು ಕಲ್ಯಾಣಪಟ್ಟಣದಲ್ಲಿ ಬಹುವಿಜೃಂಭಣೆ

ಯಿಂದ ನೆರವೇರುವುದು. ಬಸವಣ್ಣನವರು ಪತ್ನೀಸಮೇತವಾಗಿ ಕಪ್ಪಡಿಗೆ ಬಂದು ಸಂಗಮನಾಥನ ಧ್ಯಾನದಲ್ಲಿರುವರು.

ಇತ್ತ ಕಲ್ಯಾಣಪುರದಲ್ಲಿ ಬಲದೇವಮಂತ್ರಿಯು 'ಬಸವಂಗೆ ಮಗಳನರ್ಪಿಸಿ ದೊಸಗೆಯನೀಶಂಗೆ ಬಿನ್ನವಿಸಲೆಯ್ದಿದವೋಲ್' ಕೈಲಾಸವಾಸಿಯಾಗುವನು. ಇದ ರಿಂದ ಬಿಜ್ಜಳನಿಗೆ ತನ್ನ ಘನಭುಜಬಲದೇವನನ್ನೇ ಕಳೆದು ಕೊಂಡಂತಾಗುವದು. ಬಿಜ್ಜಳನು ಸಾಕಷ್ಟು ವಿಚಾರಮಾಡಿ ಬಲದೇವನ ಸ್ಥಾನವನ್ನಲಂಕರಿಸಲು ಬಸವಣ್ಣನ ವರೇ ಯೋಗ್ಯರೆಂದು ತೀರ್ಮಾನಿಸಿ ಅವರನ್ನು ಕಲ್ಯಾಣಕ್ಕೆ ಕರೆಯಿಸಿಕೊಂಡು ಮಂತ್ರಿಪದವನ್ನೀಯುವನು.

ಒಂದು ದಿವಸ, ಬಿಜ್ಜಳಭೂಪಾಲನು ಓಲಗದಲ್ಲಿ ಕುಳಿತಿರುವಾಗ ಹರಲಿಖಿತ ಲಿಪಿಯೊಂದು ಮೇಲಿಂದ ಸಭಾಮಧ್ಯದಲ್ಲಿಯೇ ಜೀಳುವುದು. ಅದನ್ನು ಓದಿ ಅರ್ಥೈಸುವುದು ಯಾರಿಂದಲೂ ಸಾಧ್ಯವಿಲ್ಲದಾಗ ಬಸವಣ್ಣನವರು ಅದನ್ನು ಓದಿ ಹೇಳುವರು. ಆಗ ತುಂಬಿದ ಸಭೆಯೇ ವಿಸ್ಮಯಗೊಳ್ಳುವುದು. ಶಿವಲಿಖಿತ ಲಿಪಿ ಯಲ್ಲಿ ಬರೆದಂತೆ ಬಿಜ್ಜಳನಿಗೆ ಎಣೆಯಿಲ್ಲದ ಸುವರ್ಣ ರಾಶಿಯು ದೊರೆಯುವುದು. ಅರಸನು ಪರಮಹರ್ಷಿತನಾಗಿ ಬಸವನಿಗೆ ದಂಡನಾಥಪಟ್ಟವನ್ನು ಸಲ್ಲಿಸುವನು.

ಮಂತ್ರಿಯಾಗಿ ಪ್ರಜಾಪಾಲನೆ ಮಾಡುವುದರ ಜೊತೆಗೆ ಭಕ್ತನಾಗಿ ಧರ್ಮ ರಕ್ಷಣೆಯ ಕಾರ್ಯವನ್ನು ಬಸವಣ್ಣನವರು ಕೈಕೊಳ್ಳುವರು. ಶಿವನನ್ನೂ ಶಿವಶರಣ ರನ್ನೂ ಪೂಜಿಸಿ ಅವರು ಭಕ್ತಿಭಾಂಡಾರಿಯೆನಿಸಿಕೊಳ್ಳುವರು. ಶಿವಗಣದ ಸೇವೆ ಮಾಡುತ್ತ, ನುಡಿದಂತೆ ನಡೆದು ಆದರ್ಶಪುರುಷರಾಗಿ ಮೆರೆಯುವರು. ಹೀಗೆ ಕಾಲ ಕಳೆಯುತ್ತಿರಲು, ಅವರ ತಂಗಿಯಾದ ನಾಗಲಾಂಬಿಕೆಗೆ ಜಂಗಮಪ್ರಸಾದದಿಂದ, ಅಂಗಲಿಂಗಸಂಯೋಗದಿಂದ ಚೆನ್ನಬಸವಣ್ಣ ಜನಿಸುವನು. ಬಸವಣ್ಣನು ದೀಕ್ಷೆಯ- ನ್ನಿತ್ತು ಸೋದರಳಿಯನಿಗೆ ಗುರುವಾಗುತ್ತಾನೆ.

ಶಿವಯೋಗಿ ಸಾರ್ವಭೌಮನಾದ ಅಲ್ಲಮಪ್ರಭು ಭಕ್ತರ ಉದ್ಧಾರಕ್ಕಾಗಿಯೇ ಸಂಚರಿಸುತ್ತ ಬಸವಣ್ಣನವರಲ್ಲಿಗೆ ಬರುತ್ತಾನೆ. ಭಕ್ತಿ ಸುಖವೇ ಸಮಸುಖವೆಂದು ಭಾವಿಸಿದ ಬಸವಣ್ಣನು ಪ್ರಭುವಿಗೆ ಸಾತ್ವಿಕಭಕ್ತಿವೆರಸಿ ಪ್ರಣಾಮಂಗೈದು ಆತಿಥ್ಯ ಕೋರುತ್ತಾನೆ. ಲಕ್ಷಾತೀತ ಜಂಗಮರಿಗೆ ತಯಾರಿಸಿದ ಪ್ರಸಾದವು ಅಲ್ಲಮನಿಗೊಬ್ಬ ನಿಗೇ ಸಾಲದಾಗುವದು. ಕೊನೆಗೆ ಬಸವಣ್ಣನವರು ತನ್ನನ್ನೇ ಅರ್ಪಿಸಲು ಪ್ರಭು ಭಕ್ತಿಸಂಪ್ರೀತನಾಗಿ ತೃಪ್ತಿಗೊಳ್ಳುತ್ತಾನೆ. ಆಗ ಅವನು ಬಸವನಿಗೆ ನಿಜಪ್ರಸಾದಮಂ ಕರುಣಿಸಿ, ವಾಕ್‌ಸಿದ್ಧಿ ಮನಃಸಿದ್ಧಿಗಳನ್ನಿತ್ತು ಹರಸಿ ಹೋಗುತ್ತಾನೆ. ಪ್ರಭುವಿನ ಹರಕೆಯಿಂದ ಬಸವಣ್ಣ ಶುಭಚರಿತನಾಗಿ ಬಾಳುತ್ತಾನೆ.

ಶಿವಾನುಭವಪಥದಲ್ಲಿ ಇಷ್ಟು ದಿವಸಗಳವರೆಗೆ ಸಾಧಕರಾಗಿದ್ದ ಬಸವಣ್ಣನ ವರು ಈಗ ಸಿದ್ಧಪುರುಷರಾಗಿ ಮೆರೆಯುತ್ತಾರೆ; ಕಲ್ಯಾಣ ರಾಜ್ಯದ ಮಂತ್ರಿಯಾಗಿ ರಾಜ್ಯಸೂತ್ರಗಳನ್ನು ಸರಿಯಾಗಿ ನಿರ್ವಹಿಸುತ್ತ, ಶಂಕರನ ಕಿಂಕರನಾಗಿ ಹಲವು

ಪವಾಡಗಳನ್ನು ಬೀರುತ್ತಾರೆ. ಅವನೊಬ್ಬ ಅವತಾರಪುರುಷನೆಂದು ಸಿದ್ಧಪಡಿಸುವ ನೂರಾರುಪವಾಡಗಳು ಬಸವರಾಜವಿಜಯದಲ್ಲಿ ವಿಸ್ತಾರವಾಗಿ ಚಿತ್ರಗೊಂಡಿವೆ. ಅವುಗಳೊಡನೆ ಅನೇಕ ಶಿವಶರಣರ ಕಥೆಗಳು ಸಂದರ್ಭೋಚಿತವಾಗಿ ಷಡಕ್ಷರಿದೇವನಿಂದ ಹೇಳಲ್ಪಟ್ಟಿವೆ.

ಬಸವಣ್ಣನವರ ಕೀರ್ತಿ ಜಗದಗಲ ಹಬ್ಬುತ್ತಿರುವದನ್ನು ಕಂಡು ಕೇಳಿದ ಪರವಾದಿಗಳು ಕರುಬಿ, ಅವನ ಕಾರ್ಯನಿರ್ವಹಣೆಯಲ್ಲಿ ತೊಡಕುಗಳನ್ನು ತಂದೊಡ್ಡುವರು: ಬಿಜ್ಜಳದೊರೆಯ ಮುಂದೆ ಅನೇಕ ವಿಧದಲ್ಲಿ ಚಾಡಿಗಳನ್ನು ಹೇಳುವರು. ಚಾಡಿಮಾತಿಗೆ ಕಿವಿಗೊಟ್ಟ ಬಿಜ್ಜಳದೊರೆ ಬಸವಣ್ಣನವರ ವಿಷಯದಲ್ಲಿ ಅನಾದರ ಭಾವ ತಳೆಯುವನು. ಸತ್ಯಶರಣನನ್ನು ಎದುರಿಸಿದುದು ತನ್ನ ಮರಣವನ್ನು ತಾನೇ ತಂದುಕೊಂಡಂತಾಗುವುದು.

ಜಗದೇವನೆಂಬ ಶರಣನು ಮಹಿಮಾಪುರುಷನಾದ ಬಸವಣ್ಣನನ್ನು ಭೋಜನಕ್ಕಾಗಿ ಆಮಂತ್ರಿಸುವನು. ಅಂತವಂ ಭಕ್ತಿಯಿಂ ಪ್ರಾರ್ಥಿಸೆ ಬಸವರಾಜನು ಜಗದೇವನಿಗೆ "ಜಂಗಮ ಕದಂಬ ಸಂಮರ್ದಮನೆಂತಗಲದೆ ಸೈರಿಪೆ"ಯೆನೆ ತಮ್ಮ ಚಿತ್ತದಂತೆ ನಡೆದುಕೊಳ್ಳುವೆನೆಂದು ಜಗದೇವನು ಒಪ್ಪುವನು. ಸಕಲ ಪಾಕ ಸಾಮಗ್ರಿಯನ್ನು ಸಿದ್ಧಪಡಿಸಿ, ಭೋಜನವನ್ನೇರ್ಪಡಿಸಿ ಬಸವಣ್ಣನನ್ನು ಕರೆತರುವ ಪೂರ್ವದಲ್ಲಿಯೇ 'ಕರೆದಾತ್ಮ ಮಂದಿರಕೆ ಪಾರ್ವರನಾದರಿಸುತ್ತಂ ಪೂಜೆಗೆಯ್ದಂ.' ಈ ವಿಷಯವು ಬಸವಣ್ಣನವರಿಗೆ ವಿದಿತವಾಗಲು ಕಾದು ಕೆಂಡವಾಗುವರು. ತಮ್ಮನ್ನು ಕರೆಯಲು ಬಂದ ಜಗದೇವನಿಗೆ ರೋಷದಿಂದ "ಶರಣಜನಚರಣಜಲಮಂ ಶಿರದೊಳ್ತಳೆದೆಯ್ದೆ ಧನ್ಯನೆನಿಸಿದ ನಿನಗೀ ದುರಿತಕುಲಭರಿತ ಭೂಸುರಚರಣಜಲಂ ತಾಳ್ವುದುಚಿತಮೆ!" ಎಂದು ಆಕ್ಷೇಪಿಸುವರು. ಜಗದೇವನು ತಿಳಿಯದೆ ಮಾಡಿದ ತನ್ನ ತಪ್ಪನ್ನು ಮನ್ನಿಸಲು ಕೇಳಿಕೊಳ್ಳುವನು. ಆಗ ಬಸವಣ್ಣನು ಕಾರುಣ್ಯದೋರಿ "ಜಗದೇವ ಕೇಳ್ವುದೆಸೆವೀ ನಗರದೊಳೊಗೆವುದು ಪಲಂ ಶಿವದ್ರೋಹಮದಂ ನೆಗಳ್ದನನಂತಕಪುರಮಂ ಪುಗಿಸಲೆ ನೀಂ ನೆಗಳ್ದ ದೋಷಕಿದು ಪರಿಹಾರಂ" ಎಂದು ಸೂಚಿಸುವನು. ಶರಣರ ಹೇಳಿಕೆ ಮಹಾಪ್ರಸಾದವೆಂದು ಒಪ್ಪಿಕೊಂಡ ಜಗದೇವನ ಮನೆಯಲ್ಲಿ ಪ್ರಸಾದಸ್ವೀಕರಿಸಿ ಭಕ್ತನ ಮನವನ್ನು ತೃಪ್ತಿಪಡಿಸುವನು.

ಇತ್ತ ಕಲ್ಯಾಣನಗರದಲ್ಲಿ ಅಲ್ಲಯ್ಯ ಮಧುವಯ್ಯರೆಂಬ ಈಶ್ವರಭಕ್ತರೀರ್ವರು ಬಸವಣ್ಣನವರ ಅನುಮತಿಪಡೆದು ಶರೀರಸಂಬಂಧ ಬೆಳೆಸಿದುದನ್ನು ಸಹಿಸದೆ ಕುಹಕಿಗಳು ಬಿಜ್ಜಳನಿಗೆ ಪಿಸುಣು ಮಾತುಗಳನ್ನು ಹೇಳುವರು. ಬಿಜ್ಜಳನು ಆ ಭಕ್ತರ ಕಣ್ಣು ಕೀಳಿಸುವನು. ಈ ವಿಷಯವನ್ನು ತಿಳಿದ ಕಲ್ಯಾಣದ ಶರಣರು "ಯಮಪುರಿಗೈದುವ ಸಮಯಂ ಸಮನಿಸಿದುದಿವಂಗೆ ನೃಪತಿಗೆ ಅಲ್ಲದೊಡೀ ದ್ರೋಹಮನಳ್ಕದೆ ಮಾಳ್ಪನೆ ? ಮುಳಿಯೆ ಮಹೇಶ್ವರಭಕ್ತರುಳಿವರಾರ್ ಧಾರುಣಿ

ಯೋಳ್' ಎಂದಾಡಿಕೊಳ್ಳುವರು. 'ಶಿವದ್ರೋಹವನ್ನೆಸಗಿದ ಬಿಜ್ಜಳನು ಈ ಪುರದೊಳಿನ್ನಿರಲ್ ತಕ್ಕುದಲ್ಲೆ'ಂದು ನಿರ್ಧರಿಸಿ, ಜಗದೇವನಂ ಬಳಿಯಟ್ಟಿ ಬರಿಸಿ, ಬಿಜ್ಜಳನೆಸಗಿದ ಪರಾಧವನವಂಗೊರೆದು, 'ಅಂದಿತ್ತ ನಿನ್ನ ಭಾಷೆಗೆ ಬಂದುದು ದಿನಮೀ ಮಹೇಶ್ವರ ದ್ರೋಹಿಯನೋರಂದದೆ ಸಂಹರಿಪುದು.' ಎಂದು ಕಿನ್ನರ ಬೊಮ್ಮಯ್ಯ ಮೊದಲಾದ ಶರಣರು ಆಜ್ಞಾಪಿಸಿ ಬಸವಣ್ಣನವರೊಡನೆ ಕಪ್ಪಡಿಗೆ ಸಾಗುವರು. ವೀರಜಗದೇವನು ತನ್ನ ವಚನ ಪಾಲಿಸುವನು.

ಬಸವಣ್ಣನವರು ಶಿವಗಣದೊಡನೆ ಕಪ್ಪಡಿಗೆ ಬಂದು ಸಂಗಮನಾಥನ ದರ್ಶನ ಪಡೆದು ಭಕ್ತಿಪುಲಕಿತರಾಗಿ ಶಿವಸ್ತೋತ್ರ ಮಾಡುವರು. 'ಇಂತು ಕಟ್ಟಳ್ಕರಿಂ ಪೊಗಳ್ದ ನಿಜಕುಮಾರನಪ್ಪ ಗುಣಭೂಷಣನಂ ಫಣಿಭೂಷಣಂ ನಡೆನೋಡಿ ತೆಗೆದು ಬಿಗಿದಪ್ಪಿ ನಿಜ ಪ್ರಸಾದಮನಿತ್ತು ಮನ್ನಿಸಿ ಗರ್ಭಗೃಹದಂತರಾಳಮನವಂ ಬೆರಸು ಪೊಕ್ಕಾಗಳ್' ಬೆಳಗಿನೊಳು ಬೆಳಗು ಬೆರೆದಂತೆ ಬಸವರಸನು ಸಂಗಮೇಶ್ವರನಲ್ಲಿ ಐಕ್ಯವಾಗುವನು. ಷಡಕ್ಷರಿದೇವನ ಕಾವ್ಯ ಬಸವಣ್ಣನ ಗುಣಗಾನದೊಡನೆ ಮುಕ್ತಾಯ ವಾಗುವುದು.

ಬಸವರಾಜವಿಜಯವು ಕನ್ನಡದ ಉತ್ತಮೋತ್ತಮವಾದ ಕೃತಿಗಳಲ್ಲಿ ಒಂದು. ಈ ಕಾವ್ಯವನ್ನು ರಚಿಸುವಾಗ ಕವಿಯ ಮನಸ್ಸು ಒಳ್ಳೆಯ ಪರಿಪಕ್ವಾವಸ್ಥೆಗೆ ಬಂದಿದೆ; ಕಾವ್ಯಸಿದ್ಧಿಯನ್ನು ಪಡೆದಿದೆ. ಬಸವಣ್ಣನವರ ವ್ಯಕ್ತಿತ್ವವನ್ನು ಚಿತ್ರಿಸುವಲ್ಲಿ, ಆತನ ಜೀವನದ ಸುತ್ತು ಸಮಕಾಲೀನ ಶರಣರ ಜೀವನಚರಿತ್ರೆಗಳನ್ನು ಹೆಣೆಯುವಲ್ಲಿ ಕವಿ ಅದ್ಭುತವಾದ ಪ್ರತಿಭೆಯನ್ನು ತೋರಿದ್ದಾನೆ. ರಾಜಶೇಖರವಿಳಾಸದಲ್ಲಿ ಕಂಡುಬರುವ ವರ್ಣನಾವೈಪುಲ್ಯ ಈ ಕಾವ್ಯದಲ್ಲಿಲ್ಲ. ಕವಿಯ ದೃಷ್ಟಿ ನೇರವಾಗಿ ತಾನು ಚಿತ್ರಿಸುವ ಪಾತ್ರಗಳ ಕಡೆಗಿದೆ. ಈ ಕಾವ್ಯದಲ್ಲಿ ಕಂಡುಬರುವ ಷಡಕ್ಷರಿದೇವನ ಕಥನಕಲೆ ಅತ್ಯಂತ ಪ್ರಶಂಸನೀಯವಾಗಿದೆ. ಹನ್ನೆರಡನೆಯ ಶತಮಾನದ ಕನ್ನಡ ನಾಡಿನ ಧಾರ್ಮಿಕ, ಸಾಮಾಜಿಕ ಕ್ರಾಂತಿಯು 'ಕರಿಯು ಕನ್ನಡಿಯಲ್ಲಿ ಅಡಗುವಂತೆ' ಈ ಕಾವ್ಯದಲ್ಲಿ ಅಂತರ್ಗತವಾಗಿದೆ. ಬಸವಣ್ಣನವರ ಜೀವನ ಚರಿತ್ರೆಯನ್ನು ಹೇಳುವ ಅನೇಕ ಗ್ರಂಥಗಳು ಕನ್ನಡ, ಸಂಸ್ಕೃತ, ತೆಲುಗು, ತಮಿಳು ಭಾಷೆಗಳಲ್ಲಿದ್ದರೂ ಷಡಕ್ಷರಿದೇವನ ಬಸವರಾಜವಿಜಯಕ್ಕೆ ಒಂದು ವೈಶಿಷ್ಟ್ಯವಿದೆ. ಕವಿಯೇ ಈ ವಿಷಯವನ್ನು ಬಹು ಸೊಗಸಾಗಿ ತಿಳಿಸಿದ್ದಾನೆ. ಪಾಲ್ಕುರಿಕೆ ಸೋಮನಾಥ, ಭೀಮಕವಿ, ಕಂಚಿಯ ಶಂಕರಾರಾಧ್ಯ ಈ ಮೂವರು ಮಹಾನುಭಾವರು ಮೂರು ಕಾವ್ಯಗಳನ್ನು ರಚಿಸಿ ಬಸವಾಂಘ್ರಿತ್ರಯಕ್ಕರ್ಪಿಸಿರುವರು. ಈ ಕವಿ ತನ್ನ ಕಾವ್ಯವನ್ನು ಬಸವಣ್ಣನ ನಾಲ್ಕನೆಯ ಪಾದಕ್ಕರ್ಪಿಸಿರುವೆನೆಂದು ಭಕ್ತಿ ಕಂಪಿತನಾಗಿ ನುಡಿದಿದ್ದಾನೆ.

ಕಾವ್ಯ ಮತ್ತು ಧರ್ಮಗಳು ಸುಸ್ಥಿರವಾಗಿ ನಿಲ್ಲುವಂತೆ ಬರೆದ ಮಹಾಕೃತಿ ಬಸವರಾಜವಿಜಯ. ಅದು ಮಹಾಕವಿಯ ಕೀರ್ತಿಗೆ ಎತ್ತಿ ಹಿಡಿದ ವಿಜಯಪತಾಕೆ.

ಕವಿಕರ್ಣರಸಾಯನವು ಷಡಕ್ಷರಿದೇವನು ಸಂಸ್ಕೃತದಲ್ಲಿ ರಚಿಸಿದ ಒಂದು ಮಹಾಕಾವ್ಯ. ಈ ಕಾವ್ಯ ಪೂರ್ತಿಯಾಗಿ ಇದುವರೆಗೂ ಅಚ್ಚಾಗಿರುವುದಿಲ್ಲ.* ದುರ್ದೈವದ ಸಂಗತಿಯೆಂದರೆ ಆ ಗ್ರಂಥ ಇನ್ನೂ ಪೂರ್ತಿಯಾಗಿ ಉಪಲಬ್ಧವಾಗದಿರುವುದು. ಶಬರಶಂಕರವಿಳಾಸದಿಂದ ಕವಿ ಆ ಕಾವ್ಯವನ್ನು ಪೂರ್ತಿಗೊಳಿಸಿರುವಂತೆ ತಿಳಿದುಬರುತ್ತದೆ. ಆದರೆ ಈಗ ೧೦ ಸರ್ಗಗಳು ಮಾತ್ರ ದೊರೆತಿದ್ದು ನಡುವೆ ಎರಡು ಸರ್ಗಗಳಲ್ಲಿ ಸುಮಾರು ೧೦೦ ಪದ್ಯಗಳು ಕಾಣದಾಗಿವೆ. ಮೊದಲಿನ ನಾಲ್ಕು ಸರ್ಗಗಳಿಗೆ 'ವೆಂಗವಸುಧಿ'ಯೆಂಬುವರು ಬರೆದ ಟೀಕೆ ಉಪಲಬ್ಧವಿದೆ. ಈಗ ದೊರೆತನಿತು ಭಾಗದಿಂದ ಕಥೆ ಪೂರ್ತಿಯಾಗುವದಿಲ್ಲ, ರಾಜಶೇಖರವಿಳಾಸದ ಮಾದರಿಯಲ್ಲಿಯೇ ಕಥೆ ವರ್ಣನೆ ಎಲ್ಲವೂ ಉಕ್ತವಾಗಿರುವುದರಿಂದ ಈ ಕಾವ್ಯ ಕನಿಷ್ಟಪಕ್ಷ ೧೪ ಸರ್ಗಗಳಷ್ಟಾದರೂ ಇದ್ದಿರಬಹುದೆಂದು ಊಹಿಸಬಹುದು.

ಕವಿಕರ್ಣರಸಾಯನದಲ್ಲಿ ಉಕ್ತವಾದುದು ತಮಿಳು ನಾಡಿನ ೬೩ ಪುರಾತನರಲ್ಲಿ ಒಬ್ಬರಾದ ಮಾನಕಂಜರರ ಕಥೆ. ಮೇರುಪರ್ವತದ ದಕ್ಷಿಣ ದಿಗ್ಭಾಗದಲ್ಲಿ 'ಸುಕೃತನಿಚಯಕೋಶ'ವೆನಿಸಿದ ಚೋಲ ದೇಶವು ಶೋಭಿಸುತ್ತಿತ್ತು. ಅದು ಭೂದೇವಿಯ ಸುಂದರವಾದ ಮುಕುರದಂತಿದ್ದಿತು; 'ಶ್ರೀ ಕಲಾಕೇಲೀವಾಸ'ವಾಗಿದ್ದಿತು. ಆ ದೇಶದ ಶ್ರೀಮುಖತಿಲಕದಂತೆ 'ಕರಿಪುರ'ವೆಂಬ ಹೆಸರಿನ ರಾಜಧಾನಿಯು ಶಿವಭಕ್ತರು, ಕಲಾವಿದರು, ಶಾಸ್ತ್ರಸಂಪನ್ನರು, ಸರಸ ಕವಿಗಳು—ಇವರೆಲ್ಲರಿಂದ ಶೋಭಾಯಮಾನವಾಗಿದ್ದಿತು. ಅಲ್ಲಿ ಶಿವಪದಾಬ್ಜ ಲಸನ್ಮದಷಟ್ಪದನೂ ಸುಕವಿಸೂಕ್ತಿಮಣಿಶ್ರುತಿಭೂಷಣನೂ ಆದ ವಿಕ್ರಮಚೋಳಮಹೀಪತಿ ಇದ್ದನು. ಆತನ ಸತಿ ಕಲಾವತಿ ಅತ್ಯಂತ ಗುಣಾನ್ವಿತೆಯಾಗಿದ್ದಳು. ವಿಕ್ರಮ ಚೋಳ ಭೂಪತಿಗೆ ಪತಿಹಿತಚರಿತನೂ ಶಿವೈಕಭಕ್ತನೂ ಆದ ಗಾಂಗೇಯನೆಂಬ ಮಂತ್ರಿಯಿದ್ದನು.

ಒಂದು ದಿನ ಕಲಾವತಿಯು ಮೃಕಂಡುಚರಿತೆಯನ್ನು ಕೇಳಿ ಮಕ್ಕಳಿಲ್ಲದವರಿಗೆ ಮೋಕ್ಷವಿಲ್ಲೆಂದು ಚಿಂತೆಗೊಳಗಾಗಿ ಸರ್ವಾಭರಣಗಳನ್ನು ತ್ಯಜಿಸಿ ಖಿನ್ನವದನಳಾಗಿದ್ದಳು. ಚೋಳಭೂಪತಿಗೆ ಈ ವಿಷಯ ವಿದಿತವಾಗಲು ಆತನು 'ತ್ಯಜ ಶುಚಂ ಭಜ ಶಂಭುಪಾದಾಂಬುಜಂ' ಎಂದು ಹೇಳಿ ಸತಿಯನ್ನು ಸಂತೈಸುತ್ತಾನೆ. ಹಾಗೆ

---

* ೧ ಶ್ರೀ ಕಾಡದೇವರಮಠ ಇವರು ೨ ಸರ್ಗಗಳನ್ನು ಮಾತ್ರ ಅಚ್ಚು ಹಾಕಿಸಿರುವರು.

೨ ಡಾ. ಎಸ್. ಸಿ. ನಂದೀಮಠ ಎಂ. ಎ. ಪಿಎಚ್. ಡಿ. (ಲಂಡನ್) ಅವರು ಈ ಗ್ರಂಥದ ಸಂಪಾದನೆಯ ಕಾರ್ಯವನ್ನು ವಹಿಸಿದ್ದು ೪ ಸರ್ಗಗಳು ಮಾತ್ರ ಅಚ್ಚಾಗಿ ಇನ್ನೂ ಪ್ರಕಾಶಿತವಾಗಿರುವದಿಲ್ಲ. ಗ್ರಂಥ ಪೂರ್ತಿ ದೊರೆಯದ್ದರಿಂದ ಸಂಪಾದನೆಯ ಕಾರ್ಯ ಸ್ಥಗಿತವಾಗಿದೆ.

ಸತಿಪತಿಗಳು ಶಿವಭಕ್ತಿಪರಾಯಣರಾಗಿ ಒಬ್ಬ ಸುಕುಮಾರನನ್ನು ಪಡೆಯುವರು. ಶಿವೋಕ್ತವಿಧಾನದಂತೆ ಗುರುಗಳು ಆಗಮಿಸಿ ಜನನಕರ್ಮವನ್ನು ಪೂರೈಸಿ ಸೌಂದರ ಚೋಳನೆಂದು ಶಿಸುವಿಗೆ ನಾಮಕರಣ ಮಾಡುವರು. ಇಲ್ಲಿಗೆ ಕರ್ಣರಸಾಯನದ ನಾಲ್ಕು ಸರ್ಗಗಳು ಮುಗಿಯುತ್ತ ಬರುತ್ತವೆ. ಗಾಂಗೇಯಾಮಾತ್ಯನು ಮಾನಕಂಜರ ನಲ್ಲಿಗೆ ಹೋಗಿ ಆತನ ಮಗಳನ್ನು ಸೌಂದರಕುಮಾರ ಭೂಪತಿಗೆ ಕೊಡಬೇಕೆಂದು ಕೇಳು ವನು. ಉಭಯತರೂ ಒಪ್ಪಿ ವಿವಾಹದ ಸಿದ್ಧತೆ ನಡೆಯುವುದು. ವಿವಾಹ ನಡೆದಾಗ ಪರ ಮೇಶ್ವರನು ಮದುವೆಯಾಗಲಿರುವ ಮಾನಕಂಜರನ ಮಗಳ ಕೂದಲಗಳನ್ನು ಕೇಳು ವನು. ಶಿವಭಕ್ತನಾದ ಮಾನಕಂಜರನು ಮಗಳ ಕೂದಲನ್ನೆಲ್ಲ ಕತ್ತರಿಸಿಕೊಡುವನು. ಪರಮೇಶ್ವರನು ಪ್ರತ್ಯಕ್ಷನಾಗಿ ಕೃಪೆಗೆಯ್ಯುವನು.

ಇದು ಬೇರೆಡೆ ದೊರೆಯುವ ಆ ಪ್ರಸಿದ್ಧ ಕಥೆಯ ಪೂರ್ತಿಪಾಠ. ಷಡಕ್ಷರಿ ದೇವನು ಒಟ್ಟಿನಲ್ಲಿ ಮೂಲ ಕಥೆಯನ್ನನುಸರಿಸಿದ್ದರೂ ಅವನ ಕಥಾಸಂವಿಧಾನ ಬೇರೆ ತೆರನಾಗಿದೆ. ಪೆರಿಯ ಪುರಾಣ, ಹರಿಹರನ ರಗಳೆ, ತ್ರಿಷಷ್ಟಿ ಪುರಾತನ ಚಾರಿತ್ರಗಳಲ್ಲಿ ಕಥೆ ಮಾನಕಂಜರನ ವೃತ್ತಾಂತದ ನಿರೂಪಣೆಯಿಂದ ಆರಂಭವಾದರೆ, ಷಡಕ್ಷರಿದೇವನು ವಿಕ್ರಮಚೋಳಭೂಪತಿ, ಆತನ ಮಗ ಸೌಂದರಕುಮಾರ ಇವ ರಿಂದ ಆರಂಭಿಸುತ್ತಾನೆ. ಒಂದೊಂದು ಸರ್ಗವೂ ವರ್ಣನಾಭಾಗದಿಂದ ಕಿಕ್ಕಿರಿಗಿರಿ ದಿದೆ. ಆತನ ಸುಂದರವಾದ ಕಲ್ಪನೆಗಳೂ ಭಾವಗಳೂ ಸಹೃದಯರಿಗೆ ಹೊಸ ಚೇತನವನ್ನೀಯುತ್ತವೆ. ಆದರೆ ಕಥೆಯ ಓಟ ಬಹು ಮಂದವಾಗಿದೆ. ಹರಿಹರನು ಹತ್ತು ಪುಟಗಳಲ್ಲಿ ಹೇಳಿದುದನ್ನು ಷಡಕ್ಷರಿದೇವನು ಸುಮಾರು ೧೦-೧೫ ಸರ್ಗಗ ಳಲ್ಲಿ ಹೇಳಬೇಕಾದರೆ ಕಥೆ ಯಾವ ವೇಗದಿಂದ ಸಾಗಿರಬೇಕೆಂಬುದನ್ನು ಸಹಜ ವಾಗಿ ಊಹಿಸಬಹುದು. ಆದರೆ ಸಂಸ್ಕೃತ ಮಹಾಕಾವ್ಯಪರಂಪರೆಯ ಪರಿಚಯ ವಿದ್ದವರಿಗೆ ಇದು ಚೋದ್ಯವೆನಿಸುವುದಿಲ್ಲ. ಕವಿಕರ್ಣರಸಾಯನವು ಶೃಂಗಾರ- ಭಕ್ತಿರಸಗಳ ಸರಸಸಂಗಮವಾಗಿ ನಿಜವಾಗಿಯೂ ಕರ್ಣರಸಾಯನವಾಗಿದೆ. ಆ ಕಾವ್ಯ ಪೂರ್ತಿಯಾಗಿ ದೊರೆತು ಬೇಗನೆ ಬೆಳಕು ಕಾಣುವಂತಾಗಲೆಂದು ಹಾರೈಸುತ್ತೇವೆ.

ಮಿಕ್ಕ ಕೃತಿಗಳು

ಷಡಕ್ಷರಿದೇವನ ಮಿಕ್ಕ ಸಂಸ್ಕೃತ ಗ್ರಂಥಗಳೆಲ್ಲ ಗಾತ್ರದಲ್ಲಿ ಚಿಕ್ಕವಾಗಿವೆ. ಆದರೆ ಅವುಗಳ ಸತ್ವ ಹಿರಿದಾಗಿದೆ. ಆ ಕಾವ್ಯಗಳ ಹೆಸರುಗಳೇ ಸೂಚಿಸುವಂತೆ ಕವಿ ಶಿವ, ಭಕ್ತ, ವೀರಭದ್ರ, ಸಿದ್ಧಲಿಂಗ, ನೀಲಾಂಬಿಕೆ, ಬಸವೇಶ್ವರಾದಿಗಳ ಆಧಿಕ್ಯವನ್ನು ಎತ್ತಿ ತೋರಿಸುತ್ತಾನೆ. ಅಲ್ಲಿ ಆತನ ಭಕ್ತಿ ಪಾಂಡಿತ್ಯಗಳು ಇತಿ ಮಿತಿಯಿಲ್ಲದೆ ಗೋಚರವಾಗುತ್ತವೆ. ಶಿವಾಧಿಕ್ಯದಲ್ಲಿ ಆತನು ವೇದ ಆಗಮ ಪುರಾಣಾದಿ ಗ್ರಂಥಗಳ ಆಧಾರಗಳಿಂದ ಶಿವಾಧಿಕ್ಯವನ್ನು ಪ್ರತಿಷ್ಠಾಪನೆ ಮಾಡುವ

ಅದ್ಭುತವಾದ ಜಾಣ್ಮೆಯನ್ನು ನೋಡಬೇಕು. ಅಲ್ಲಿ ಕವಿಯ ತರ್ಕಸರಣಿ ಬಹು ಸೂಕ್ಷ್ಮವಾಗಿ ಗೋಚರಿಸುತ್ತದೆ. ಹರಿದತ್ತಾಚಾರ್ಯರ ಶಿವಾಧಿಕ್ಯಕ್ಕಿಂತಲೂ ಷಡಕ್ಷರಿದೇವನ ಶಿವಾಧಿಕ್ಯ ಒಂದು ತೂಕ ಮಿಗಿಲಾಗಿದೆ. ಇದರಂತೆ ಅವನ ಮಿಕ್ಕ ಕೃತಿಗಳೂ ಶಾಸ್ತ್ರೋಕ್ತವಾಗಿದ್ದು ಅಮೌಲ್ಯವಾಗಿವೆ.

ರಾಜಶೇಖರ ವಿಳಾಸ

ಕಥಾಸಾರ

ಚೋಳಮಂಡಳವು ಧರಣೀಕಾಂತೆಯ ಸೀಮಂತರತ್ನದಂತೆ ಶೋಭಿಸುವುದು, ಅಲ್ಲಿ ಕಾವೇರಿ ದೇವಗಂಗೆಯೆಂಬಂತೆ ಕಮನೀಯವಾಗಿ ಪ್ರವಹಿಸುವಳು. ಸನಿಹದ ಅದರ ಪ್ರದೇಶದಲ್ಲಿಯೆ ನುತಿವೆತ್ತ ಧರ್ಮವತಿಯೆಂಬ ಪುರವಿದೆ. ಆ ಪಟ್ಟಣವು ಶೈವವರ್ಯರಿಂದ ಶೋಭಾಯಮಾನವಾಗಿರುವುದು. ಅದನಾಳುವವನು ಅಭವಪದ ಭಕ್ತನೂ ಇಳಾಮಾನಿನಿಯ ಅರಸನೂ ಆದ ಸತ್ಯೇಂದ್ರಚೋಳಭೂಪಾಲನು. ಅಮೃತ ಮತಿಯೆಂಬ ಅನುಪಮ ಸತಿ ಆತನ ರಾಣಿ. ಕಲ್ಪದೃಮಸದೃಶನಾದ ಈ ದೊರೆಗೆ ಮಂತ್ರಿ ಪತಿಮೋಹಿ. ಗುರುವಾದ ಚಿದ್ಘನಶಿವಾಚಾರ್ಯರ ಮಂತ್ರಬಲದಿಂದ ಪತಿ ಮೋಹಿಗೆ ಓರ್ವ ಸುತನು ಜನಿಸಿದನು. ಆತನೇ ಮಿತವಚನ. ಹೀಗಿರಲು ಒಂದು ದಿನ ಸತ್ಯೇಂದ್ರಚೋಳಭೂಪಾಲನು ಮೋಕ್ಷಾಲಂಬಮೆನಿಪ ಕಾಶಿಗೆ ಹೋಗಿ ಕಾಲಾರಿಗೆ ಸಹಸ್ರಕುಂಭಾಭಿಷೇಕವನ್ನೆಸಗಬೇಕೆಂಬ ತನ್ನ ಅಭಿಲಾಷೆಯನ್ನು ಮಂತ್ರಿಗೆ ತಿಳಿ ಸುವನು. 'ನಿಮ್ಮಲ್ಲಿಯೇ ಶಿವನು ನೆಲಸಿರ್ದ ಕಾರಣ ನೀವಿರ್ದೆಡೆಯೇ ಕಾಶಿ. ಆದು ದರಿಂದ ಗಂಗಾನದಿಯ ನೀರನ್ನೇ ಇಲ್ಲಿಗೆ ತರಿಸುವೆ'ನೆಂದು ಹೇಳಿ ಮಂತ್ರಿಯ್ಯು ಭೂವರವೃಂದವನ್ನು ಸಾಲಾಗಿ ನಿಲ್ಲಿಸಿ ಜಲಪೂರ್ಣಸುವರ್ಣಘಟಗಳು ಒಬ್ಬರಿಂದೊ ಬ್ಬರಿಗೆ ಮುಟ್ಟುವಂತೆ ಮಾಡಿ, ಗಂಗಾಜಲತುಂಬಿದ ಘಟಗಳನ್ನು ಧರ್ಮವತಿಗೆ ತರಿಸುವನು. ಅವುಗಳಿಂದ ಅಭಿಷೇಕಮಾಡಿ ಸತ್ಯೇಂದ್ರಚೋಳನು ಶಿವಲಿಂಗಸಂಗ-ರತಿಯನ್ನು ತಳ್ತುಪ್ಪಿದಂತೊಪ್ಪಿದನು.

ಅಂತಃಪುರದಲ್ಲಿ ಅಮೃತಮತಿಮಹಾದೇವಿ ಒಂದು ಪುಣ್ಯವಾಸರದ ಸುಪ್ರಭಾತ ಸಮಯದಲ್ಲಿ ಶಿವಲಿಂಗಪೂಜಾನಂತರ ಪುರಾಣಶ್ರವಣ ಮಾಡುತ್ತಿದ್ದಳು. ಅಲ್ಲಿ ಮಾರ್ಕಂಡೇಯನ ಚರಿತೆ ಬರಲು ಅದನ್ನು ಕೇಳಿ ಅವಳಿಗೂ ಮಗುವಿನ ಬಯಕೆ ಯಾಯಿತು. ತದನುಗುಣವಾಗಿ ಅರಸನಿಗೂ ಪುತ್ರಾಕಾಂಕ್ಷೆಯುಂಟಾಯಿತು. ಗುರು ಗಳ ಪ್ರಸಾದಬಲವಿದ್ದರೆ ಬಯಕೆ ಈಡೇರುವುದೆಂದು ಸತಿಪತಿಗಳಿಬ್ಬರೂ ದೃಢವಾಗಿ ನಂಬಿ ಚಿಂತಾವಿಮುಕ್ತರಾಗಿದ್ದರು. ಅಷ್ಟರಲ್ಲಿ ಅವರ ಮನೋರಥವನ್ನು ಈಡೇರಿಸ ಲೆಂದು ನೃಪು ಸಾಕಾರವಾಗಿ ಬಂದಂತೆ ಶ್ರೀಗುರು ಚಿದ್ಘನಶಿವಾಚಾರ್ಯರು ಅಲ್ಲಿ ಗೈತರುವರು. ಅವರನ್ನು ಇದಿರ್ಗೊಂಡು ಕನಕಮಯ ಸುಖಾಸನದೊಳ್ಕೈಗೊಟ್ಟು ಮೂರ್ತಿಗೊಳಿಸಿ ಅರಸನು ಅವರನ್ನು ಸತ್ಕರಿಸಿ ಪೂಜಿಸಿ ಮನವಾರೆ ಕೊಂಡಾಡು ವನು. ಸಂತೃಪ್ತರಾದ ಗುರುಗಳು 'ಭೂವನಿತೇಶ, ನಿನ್ನ ಮನದಿಷ್ಟನಿಯೋಜನೆ ಗೆಯ್ವೆವು, ಅವುದು, ಅದನೊರೆ'ಯೆನಲು ದೊರೆಯು ಭಕ್ತಿಭರದಲ್ಲಿ ಪುತ್ರವರವನ್ನು

ಕೇಳುವುದನ್ನು ಮರೆತು "ತಮ್ಮ ಮುಖದಿಂದೆ ಶಿವನ ಲೀಲೆಗಳನ್ನು ಕೇಳುವ ಬಯಕೆಯಾಗಿದೆ" ಎಂದು ಪ್ರಾರ್ಥಿಸುವನು. ಸಂತುಷ್ಟರಾದ ಗುರುಗಳು ಶಿವನ ಲೀಲೆಗಳನ್ನು ವಿವರಿಸಿ ಅವರನ್ನು ಸಂತೋಷಗೊಳಿಸಿದುದಲ್ಲದೆ ಜ್ಞಾನದೃಷ್ಟಿಯಿಂದ ಅವರ ಮನೋಭಿಲಾಷೆಯನ್ನರಿತು ಅಮೃತಮಶಿಮಹಾದೇವಿಗೆ ಪಂಚಾಕ್ಷರೀ ಮಂತ್ರೋಪದೇಶ ಮಾಡುವರು. "ನೀನು ಈ ಮಂತ್ರವನ್ನು ಜಪಿಸುತ್ತಿರು, ನಿನ್ನ ಪುಣ್ಯೋದರದಲ್ಲಿ ಸತ್ಪುತ್ರನು ಜನಿಸುವನು " ಎಂದು ಆಶೀರ್ವದಿಸುವರು. ಗುರುಗಳ ವರಪ್ರಸಾದಬಲದಿಂದ ಅಲ್ಪಕಾಲದಲ್ಲಿಯೆ ಆ ರಾಜದಂಪತಿಗಳಿಗೆ ಪುತ್ರೋತ್ಪತ್ತಿಯಾಗುವದು. ಚಿದ್ಘನಶಿವಾಚಾರ್ಯಗುರುಗಳೆ ಆಗಮಿಸಿ ಹರಮಂತ್ರೋದ್ಭವನಾದ ಶಿಶುವಿಗೆ ಮಂತ್ರಲಕ್ಷ್ಮನೆಂದು ನಾಮಕರಣಮಾಡುವರು. ಹಾಗೂ ಭೂಕಾಂತ ಸಂತಾನದಲ್ಲಿ ಅಗ್ಗದ ಕೀರ್ತಿವೆತ್ತೆಸೆವನೆಂದು ಅನ್ವರ್ಥವಾದ ರಾಜಶೇಖರನೆಂಬ ಇನ್ನೊಂದು ಹೆಸರನ್ನೂ ಇಡುವರು. ರಾಜಶೇಖರ-ಮಿತವಚನರು ತಮ್ಮ ಬಾಲಲೀಲೆಗಳಿಂದ ತಂದೆತಾಯಿಗಳಿಗೆ ಸಂತಸವನ್ನುಂಟುಮಾಡುವರು. ಮಕ್ಕಳೀರ್ವರು ಶೈಶವಾವಸ್ಥೆಯನ್ನು ಕಳೆಯುತ್ತಿರುವಷ್ಟರಲ್ಲಿಯೇ ಗುರುಗಳು ಅವರಿಗೆ ಮಹಾಶಿವದೀಕ್ಷೆಯನ್ನು ಮಾಡಿ ಶಿವತತ್ತ್ವದ ತಿರುಳನ್ನು ತಿಳಿಸುವರು. ಮುಂದೆ ಅವರೀರ್ವರೂ ಕೂಡಿಯೆ ಶಸ್ತ್ರಶಾಸ್ತ್ರ, ಹಯಹಸ್ತಿವಿಶೇಷವಾಹಕತ್ವ ಮೊದಲಾದ ಸರ್ವವಿದ್ಯೆಗಳನ್ನು ಕಲಿತು ಪಾರಂಗತರಾಗುವರು. ರಾಜಶೇಖರನಿಗೆ ಯೌವನೋದಯವಾಗಲು ಶುಭಮುಹೂರ್ತದಲ್ಲಿ ಸತ್ಯೇಂದ್ರಚೋಳನು ಯುವರಾಜಪಟ್ಟಗಟ್ಟಿ ರಾಜ್ಯಸೂತ್ರಗಳನ್ನು ಮಗನಿಗೆ ವಹಿಸಿಕೊಟ್ಟು ತಾನು ಶಿವಲಿಂಗಾರ್ಚನೆಯಲ್ಲಿ ಕಾಲಕಳೆಯ ತೊಡಗುವನು.

ಒಂದು ದಿನ ರಾಜಶೇಖರನು ಒಡ್ಡೋಲಗದಲ್ಲಿ ಕುಳಿತಿರಲು ಒಬ್ಬ ಬೇಡನು ಅಲ್ಲಿಗೈತರುವನು. ಆತನು ಅನರ್ಘ್ಯವಾದ ರತ್ನವೊಂದನ್ನು ದೊರೆಯ ಪಾದಪೀಠದಲ್ಲಿರಿಸಿ ಹೀಗೆ ನುಡಿದನು : ದಕ್ಷಿಣಾಂಭುಧಿಯ ತೀರದಲ್ಲಿ ಪುಳಿಂದಪುರವಿರುವದು. ಅಲ್ಲಿ 'ಕಲಿಕಾಲಮೇಘ'ನೆಂಬುವನು ತನ್ನ ಪದಾಬ್ಜಕಿಂಕರನಾಗಿ ದೊರೆಯಾಗಿರುವನು. ಆತನು ತನ್ನ ಬೇಡವಡೆಯೊಡನೆ ಬೇಸಗೆಯ ಕಾಲದ ಒಂದು ದಿನ ಬೇಟೆಗೆ ಹೋಗಿ ಬೇಟೆಯಾಡಿ ಪ್ರಲಯಸ್ವರೂಪದ ಒಂದು ಸಿಂಹವನ್ನು ಕೊಂದನು. ಅದರ ತಲೆಯನ್ನು ಸೀಳಿ, ಅಲ್ಲಿರುವ ಅನರ್ಘ್ಯವಾದ ರತ್ನವೊಂದನ್ನು ತೆಗೆದುಕೊಳ್ಳುತ್ತಿರುವಷ್ಟರಲ್ಲಿ 'ಈ ಸಿಂಹವು ನಮ್ಮ ದೇಶದಿಂದ ಬಂದುದು, ಆದುದರಿಂದ ಈ ರತ್ನವು ನಮಗೆ ಸಲ್ಲತಕ್ಕುದು' ಎಂದು ಸಿಂಹಳದೇಶದ ರಾಜಭಟರು ಹೋರಾಟ ನಡೆಸಿದರು. ಕಾಳಗ ನಡೆದಿರುವಾಗಲೇ ನಮ್ಮ ದೊರೆ 'ಕಾಳಮೇಘ'ನು ನನ್ನನ್ನು ಕರೆದು ಈ ರತ್ನವನ್ನು ನನ್ನ ಕೈಯಲ್ಲಿ ಕೊಟ್ಟು, ಇದನ್ನು ವಸುಧೀಶ ರಾಜಶೇಖರನರಾಧಿನಾಥನಿಗೆ ಒಪ್ಪಿಸಿ, ಸಿಂಹಳರಾಜನ ಉದ್ಧಟತನದ ಇರವನ್ನು ಅವರಿಗೆ ತಿಳಿಸೆಂದು ಹೇಳಿ ನನ್ನನ್ನು ಇಲ್ಲಿಗೆ ಕಳಿಸಿಕೊಟ್ಟು ತಾನು ಅವರೊಡನೆ ಯುದ್ಧಕ್ಕೆ ನಿಂತನು. ಯುದ್ಧ

ವಿನ್ನೂ ನಡೆದಿದೆ—ಎಂದು ವಿಜ್ಞಾಪಿಸಿದನು. ಅದನ್ನು ಕೇಳಿ ರಾಜಶೇಖರನು ಕೆರಳಿ 'ಜಳನಿಧಿಯಲ್ಲಿರುವೆನೆಂದು ಸಿಂಹಳೇಂದ್ರನು ಗರ್ವಿಷ್ಠನಾಗುವನು. ಆತನಿಗೆ ಎಮ್ಮಳವನ್ನು ತೋರಿಸಲೇ ಬೇಕು' ಎಂದು ಯುದ್ಧಕ್ಕೆ ಸನ್ನದ್ಧನಾಗುವನು.

ಯುದ್ಧದಲ್ಲಿ ಸಿಂಹಳೇಂದ್ರನ ಸೈನ್ಯ ಸೋತು ಸಿಂಹಳದ್ವೀಪಕ್ಕೆ ಓಡಿ ಹೋಗಲು ರಾಜಶೇಖರನ ಸೈನ್ಯವು ಅವರನ್ನು ಬೆನ್ನಟ್ಟುವುದು. ಮಾರ್ಗದಲ್ಲಿ ಸಮುದ್ರವು ಮೈದೆರೆದು ಅವರನ್ನು ಬರಮಾಡಿಕೊಳ್ಳುವುದು. ಸಿಂಹಳೇಂದ್ರನು ಕುಪಿತನಾಗಿ ಕೋಟೆಕೊತ್ತಳಗಳನ್ನು ಭದ್ರಪಡಿಸಿಕೊಂಡು ಪುನಃ ಯುದ್ಧಕ್ಕೆ ಸಿದ್ಧನಾಗುವನು. ಆಗ ನೀತಿಭೂಷಣನೆಂಬ ಆತನ ಮಂತ್ರಿಯು ಕೈಮುಗಿದು "ದೊರೆಯೇ, ಈತನು ಮನುಷ್ಯಮಾತ್ರನೆಂದು ನೀನು ಬಗೆಯದಿರು. ಏಕೆಂದರೆ ರಾಜಶೇಖರನು ಶಿವಮಂತ್ರಸಂಭೂತನು; ಮಹಾಪ್ರಭಾವಶಾಲಿಯೂ ಬಲಯುತನೂ ಆಗಿರುವನು. ಈತನನ್ನು ಗೆಲ್ಲುವುದು ಯಾರಿಗೂ ಸಾಧ್ಯವಿಲ್ಲ. ಆದುದರಿಂದ ಇವನೊಡನೆ ವಿರೋಧವನ್ನು ಬಿಟ್ಟು ಸಂಧಿಯನ್ನು ಮಾಡಿಕೊಳ್ಳುವುದೇ ಲೇಸು" ಎಂದು ಪ್ರಾರ್ಥಿಸಿದನು. ಮಂತ್ರಿಯ ಹಿತವಚನಗಳನ್ನು ಮನದಂದು ಸಿಂಹಳನರೇಂದ್ರನು ರಾಜಶೇಖರನಲ್ಲಿಗೆ ಬಂದು ನಮಸ್ಕರಿಸುವನು. ಅವನ ಮಂತ್ರಿಯು ಎಲ್ಲವನ್ನೂ ವಿವರಿಸಲು ರಾಜಶೇಖರನು ಅದಕ್ಕೊಪ್ಪಿ ಕಪ್ಪಕಾಣಿಕೆಗಳನ್ನು ಸ್ವೀಕರಿಸುವನು. ಸಿಂಹಳೇಂದ್ರನೂ ಸಂತುಷ್ಟಹೃದಯನಾಗಿ ರಾಜಶೇಖರನನ್ನು ರಾಜವೀಧಿಯಲ್ಲಿ ಮೆರೆವಣಿಗೆಯಿಂದ ಕರೆತರುವನು. ಮೆರೆವಣಿಗೆಯು ರಾಜಬೀದಿಯಲ್ಲಿ ಬರುವಾಗ ಪುರಜನರು ಪರಿಜನರು ಕಿಕ್ಕಿರಿದು ನೆಲೆನೆಲೆಗಳಲ್ಲಿ ನಿಂತು ರಾಜಕುಮಾರನನ್ನು ನಿರೀಕ್ಷಿಸುವರು. ಸಖೀಜನಸಮೇತಳಾದ ಸಿಂಹಳೇಂದ್ರನ ಅಂತಃಪುರಸರೋವರಬಾಲಹಂಸಿ ಸರ್ವಮಂಗಳೆಯು ಅಂತಃಪುರದ ಮೇಲ್ಮಾಳಿಗೆಯ ಮೇಲಿಂದ ರಾಜಕುಮಾರನನ್ನು ನಿಟ್ಟಿಸುವಳು. ತತ್‌ಕ್ಷಣದಲ್ಲಿಯೇ ರಾಜಶೇಖರನೂ ಅನಿಮಿಷದೃಷ್ಟಿಯಿಂದ ತನ್ನನ್ನು ಅನೂನಸ್ನೇಹರಸಭರಿತಕಟಾಕ್ಷದಿಂದ ಅಭೀಕ್ಷಿಸುತ್ತಿರುವ ಸರ್ವಮಂಗಳೆಯನ್ನು ನೋಡುವನು. ಕೌತುಕರಸಪ್ರಭಾವದಲ್ಲಿ ಮುಳುಗಿ ಮೋಹಿಸುವನು. ಚಲ್ಲಿದ ಕರಣಂಗಳನ್ನು ಮೆಲ್ಲನೆ ಸಂತೈಸಿಕೊಂಡು ಧೀರೋದಾತ್ತನಾದ ಸಾರ್ವಭೌಮನು ಮುಂದೆ ನಡೆತರುತ್ತಿರಲು ರಾಜಕುಮಾರಿಯ ಎದೆ ಪಡಿದೆರೆದಂತೆ ಹಾರಿತು; ಮೈ ಜುಮ್ಮೆಂದು ನವಿರೆದ್ದು ಆಕೆ ಮೂರ್ಛೆಹೋಗುವಳು. ಕೆಳದಿಯರು ಶೈತ್ಯೋಪಚಾರವನ್ನು ಮಾಡಿ ಅವಳ ತಂದೆತಾಯಿಗಳಿಗೆ ಈ ವಿಷಯವನ್ನು ತಿಳಿಸುವರು. ಅದೇ ವಿಚಾರದಲ್ಲಿದ್ದ ಸಿಂಹಳೇಂದ್ರನು ಈ ವಾರ್ತೆಯನ್ನು ಕೇಳಿ ಹರ್ಷಭರಿತನಾಗುವನು. ಅದೇ ಕಾಲಕ್ಕೆ ರಾಜಶೇಖರನ ಇಂಗಿತವನ್ನರಿತ ಆತನ ಮಂತ್ರಿಯೂ ಸಿಂಹಳೇಂದ್ರನಲ್ಲಿಗೆ ಬರುವನು. ಆಗ ಸಿಂಹಳೇಂದ್ರನು ತನ್ನ ಮನೋರಥವು ಕೈಸಾರಿತೆಂದು ಆನಂದಪಟ್ಟು ಸರ್ವಮಂಗಳೆಯನ್ನು ರಾಜಶೇಖರನಿಗೆ ಕೊಡುವದಾಗಿ ಅಭಿವಚನವನ್ನಿತ್ತನು. ಕೂಡಲೆ ಸರ್ವಸನ್ನಾಹದೊಡನೆ ಅತ್ಯಂತ ವಿಜೃಂಭಣೆಯಿಂದ ವಿವಾಹ ಸಮಾರಂಭವೂ

ನೆರವೇರುವುದು. ಸುಖಸಂಕಥಾವಿನೋದದಿಂದ ರಾಜಶೇಖರನು ಅಲ್ಲಿ ಕೆಲದಿನ ಗಳನ್ನು ಕಳೆದು ಸರ್ವಮಂಗಳೆಯೊಡನೆ ತನ್ನ ರಾಜಧಾನಿಗೆ ಮರಳುವನು. ಮುಂದೆ ದಿಗ್ವಿಜಯಯಾತ್ರೆಯನ್ನು ಕೈಕೊಂಡು ಅದನ್ನು ಪರಮಾನಂದದಿಂದ ಪೂರೈಸುವನು.

ಒಂದು ದಿನ, ರಾಜಶೇಖರನು ಒಡ್ಡೋಲಗದಲ್ಲಿ ಕುಳಿತಿರಲು ಸಿಂಧುದೇಶದ ಅರಸನು ಜಾತ್ಯಶ್ವಗಳೆರಡನ್ನು ಕಾಣಿಕೆಯಾಗಿ ತಂದರ್ಪಿಸುವನು. ಅಶ್ವಾರೋಹಣ ದಲ್ಲಿ ಪರಿಣತನೂ ನವತರುಣನೂ ಆದ ರಾಜಶೇಖರನಿಗೆ ಆ ಕುದುರೆಗಳನ್ನೇರಿ ವಿಹ ರಿಸಬೇಕೆಂಬ ಅಪೇಕ್ಷೆಯುಂಟಾಗುವುದು. ಮಿತವಚನನು ಕುದುರೆಗಳನ್ನು ಪರೀಕ್ಷಿ ಸದೆ, ಪಳಗಿಸದೆ ಏರುವದು ಹಿತವಲ್ಲೆಂದು ವಿಜ್ಞಾಪಿಸುವನು. ಶಿವಭಕ್ತರಿಂದ ತುಂಬಿದ ರಾಜಧಾನಿಯಲ್ಲಿ ಈ ಏರಾಟದಿಂದ ಅವರಿಗೆ ಏನಾದರೂ ಅಪಾಯ ಸಂಭ ವಿಸಿದರೆ ದೊರೆಯು ಅದನ್ನು ಮನ್ನಿಸಲಾರನು. ಕಾರಣ, ಇದು ಸರಿಯಲ್ಲವೆಂದು ಅರಿಕೆಮಾಡಿಕೊಳ್ಳುವನು. ರಾಜಶೇಖರನ ಉತ್ಸಾಹಕ್ಕೆ ಮಿತಿಯೇ ಇರಲಿಲ್ಲ. ಆದುದರಿಂದ ಮಿತವಚನನ ಹಿತೋಕ್ತಿಯ ಪರಿಣಾಮ ಅವನ ಮೇಲೆ ಎಳ್ಳಷ್ಟೂ ಆಗಲಿಲ್ಲ. ಈ ವೈಹಾಳಿಯಲ್ಲಿ ಸಂಭವಿಸಬಹುದಾದ ತಪ್ಪಿಗೆ ತಾನು ಹೊಣೆ ಎಂದು ಅಭಿವಚನವಿತ್ತು ಮಿತವಚನನನ್ನು ಒಡಂಬಡಿಸಿ ಅವನೊಡನೆ ವೈಹಾಳಿಗೆ ಹೊರಟೇ ಬಿಡುವನು.

ವೈಹಾಳಿಯನ್ನು ಮುಗಿಸಿಕೊಂಡು ಸಂಭ್ರಮದಿಂದ ತಿರುಗಿ ಪುರಪ್ರವೇಶ ಮಾಡುತ್ತಿರುವಾಗ ಮಿತವಚನನ ಕುದುರೆಯ ಖುರಪುಟಕ್ಕೆ ಸಿಕ್ಕು ತಿರುಕೊಳ ವಿನಾಚಿಯೆಂಬ ಶಿವಭಕ್ತೆಯ ಮಗು ಶಂಕರನ ಶಿರ ಹರಿದುಬೀಳುವದು. ಅನಾಥಳಾದ ತಿರುಕೊಳವಿನಾಚಿ ತನ್ನ ಮಗನ ಸಾವನ್ನು ಕಂಡು ಭೋರ್ಗರೆದು ಕಲ್ಲು ಕರಗು ವಂತೆ ಪ್ರಲಾಪಿಸುವಳು; ಹಾಗೂ ಮಗನ ರುಂಡಮುಂಡಗಳನ್ನು ಉಡಿಯಲ್ಲಿ ಕಟ್ಟಿ ಕೊಂಡು ಸತ್ಯೇಂದ್ರಚೋಳಮಹಾರಾಜನಲ್ಲಿಗೈತಂದು ತನ್ನ ದಾರುಣವಾದ ಕಥೆ ಯನ್ನು ಅವನೆದುರು ನಿವೇದಿಸುವಳು. ಸತ್ಯನಿಷ್ಠನಾದ ಸತ್ಯೇಂದ್ರನು ತಿರುಕೊಳ ವಿನಾಚಿಯ ಬಗೆಗೆ ಅನುಕಂಪೆ, ತನ್ನ ಮಗನ ವಿಷಯವಾಗಿ ಕಟುತರವಾದ ಕೋಪ- ಇವುಗಳನ್ನು ತಳೆದು ಕೊಂದವನನ್ನು ಕೊಲ್ಲುವದೇ ರಾಜಧರ್ಮವೆಂದು ನಿಶ್ಚಯಿಸು ವನು; ರಾಜಶೇಖರಮಿತವಚನರನ್ನು ಆಸ್ಥಾನಕ್ಕೆ ಕರೆಯಿಸಿ ವಿಚಾರಣೆ ನಡೆಸುವನು. ಮಿತವಚನನು ಮಗುವನ್ನು ಕೊಂದವನು ತಾನೇ ಎಂದೂ ಅದಕ್ಕಾಗಿ ತನಗೆ ಮರಣ ದಂಡನೆಯಾಗಬೇಕೆಂದೂ ಪ್ರಾರ್ಥಿಸುವನು. ಕೂಡಲೆ ರಾಜಶೇಖರನು ಮುಂದಾಗಿ ಈ ಶಿಶುಹತಿ ಮಿತವಚನನ ಕುದುರೆಯಿಂದಾಗಿದ್ದರೂ ಇಂದಿನ ಪ್ರಸಂಗದಲ್ಲಿ ಸಂಭವಿ ಸುವ ತಪ್ಪಿಗೆ ನಾನು ಹೊಣೆ ಎಂಬುದಾಗಿ ಪ್ರಾರಂಭದಲ್ಲಿಯೇ ಮಿತವಚನನಿಗೆ ಅಭಿ ವಚನವನ್ನಿತ್ತು ಒಪ್ಪಿಸಿರುವದರಿಂದ ಈ ಶಿಶುಹತಿಯ ತಪ್ಪಿಗಾಗಿ ನನಗೆ ಮರಣ ದಂಡನೆಯಾಗಬೇಕೆಂದು ಬಿನ್ನವಿಸುವನು. ಸತ್ಯೇಂದ್ರಮಹಾರಾಜನು ಆ ವಾದ

ವನ್ನು ಒಪ್ಪಿ, ರಾಜಶೇಖರನ ಶಿರವನ್ನು ಕತ್ತರಿಸಿ ತರಬೇಕೆಂದು ಮಂತ್ರಿ ಪತಿಪೋಹಿಗೆ ಆಜ್ಞಾಪಿಸುವನು. ರಾಜಕುಮಾರನನ್ನು ಕೊಲ್ಲಬೇಕೋ, ಇಲ್ಲವೆ ರಾಜಾಜ್ಞೆಯನ್ನು ಉಲ್ಲಂಘಿಸಬೇಕೋ ಎಂಬ ಉಭಯಸಂಕಟಕ್ಕೆ ಸಿಲುಕಿದ ಪತಿಪೋಹಿಮಂತ್ರಿಯು ತಾನೇ ತನ್ನ ಶಿರಚ್ಛೇದನ ಮಾಡಿಕೊಂಡನು. ಈ ವಾರ್ತೆ ರಾಜನಿಗೆ ತಲುಪಲು ಆತನು ಸಂದಾಯಿ ಎಂಬ ಸೇವಕನಿಗೆ ರಾಜಶೇಖರನ ಶಿರಚ್ಛೇದನ ಮಾಡಲು ಆಜ್ಞಾಪಿಸುವನು. ವಧಸ್ಥಾನದಲ್ಲಿ ರಾಜಶೇಖರನು ಸಿದ್ಧನಾಗಿ ಕುಳಿತಾಗ ಸಂದಾಯಿಯು 'ಪಂಚಾಕ್ಷರೀ ಮಂತ್ರಜಪವನ್ನು ಮರೆತೆಯೋ' ಎಂದು ರಾಜಶೇಖರನನ್ನು ಎಚ್ಚರಿಸುವನು. ಅದಕ್ಕೆ ರಾಜಶೇಖರನು 'ಮರೆತು ಮೌನದಿಂದಿಲ್ಲ; ಈಗ ನಾನು ಆ ಮಂತ್ರೋಚ್ಚಾರಣೆ ಮಾಡಿದರೆ ರಾಜಾಜ್ಞೆ ನಿನ್ನ ಭೃತ್ಯತ್ವ ಇವೆರಡಕ್ಕೂ ಭಂಗಬರುವುದೆಂದು ಸುಮ್ಮನಿರುವೆನು' ಎಂದು ತಿಳಿಸಿದನು ಆಗ ಸಂದಾಯಿಯು "ರಾಜಾಜ್ಞೆಗೆ ಭಂಗ ಬಂದರೂ ಬರಲಿ, ನನ್ನ ಭೃತ್ಯತ್ವಕ್ಕೆ ಚ್ಯುತಿಯುಂಟಾದರೂ ಆಗಲಿ, ಕೊನೆಗಳಿಗೆಯಲ್ಲಿ ಮೋಕ್ಷಕ್ಕೆ ಕಾರಣವಾದ ಈ ಪಂಚಾಕ್ಷರಿಯನ್ನು ಮರೆದುಳಿಯುವದೇ ದೇವ? ಏನೇ ಆಗಲಿ ನೀನು ಆ ಮಂತ್ರವನ್ನೀಗ ಜಪಿಸಲೇಬೇಕು" ಎಂದು ಆಗ್ರಹಪಡಿಸುವನು. ಸಂದಾಯಿಯ ಉದಾತ್ತತೆಗೆ ಮೆಚ್ಚಿ, ರಾಜಶೇಖರನು ಅವನ ಭೃತ್ಯತ್ವಕ್ಕೆ ವ್ಯತ್ಯಯವಾಗದಂತೆ ಮಂತ್ರಮಹಿಮೆ ತೋರುವ ಲೀಲೆಯೊಂದನ್ನು ತೋರಿಸುವುದಾಗಿ ಹೇಳಿ ಮಂತ್ರವನ್ನುಚ್ಚರಿಸುತ್ತಲೇ ತನ್ನ ಶಿರವನ್ನು ತಾನೇ ಕತ್ತರಿಸಿ ಅದನ್ನು ಸಂದಾಯಿಯ ಕೈಗೆ ಕೊಟ್ಟನು. ಸಂದಾಯಿಯು ನಮಃಶಿವಾಯಯೆನ್ನುತ್ತಲಿದ್ದ ಆ ಶಿರವನ್ನು ತೆಗೆದುಕೊಂಡು ಬಂದು ರಾಜನ ಮುಂದೆ ಇಡುವನು. ಅದನ್ನು ಕಂಡ ಸಂತ್ಯೇಂದ್ರಚೋಳಮಹಾರಾಜನು ಪರಮಾನಂದಾಶ್ಚರ್ಯಗಳಿಂದ ಇದರ ರಹಸ್ಯವೇನೆಂದು ಸಂದಾಯಿಗೆ ಕೇಳುವನು. ಆಗ ಆತನು ನಡೆದ ವೃತ್ತಾಂತವೆಲ್ಲವನ್ನೂ ತಿಳಿಸಿ ತಾನೂ ಆವೇಶಗೊಂಡು ನಿಷ್ಠೆಯಿಂದ ತನ್ನ ಶಿರಸ್ಸನ್ನು ಕೊರೆದಿಡುವನು. ಅದೂ ಪಂಚಾಕ್ಷರೀಮಂತ್ರವನ್ನುಚ್ಚರಿಸತೊಡಗಿತು. ಆಗ ಮಹಾರಾಜನು ನಿನ್ನ ಮಗನ ಒಂದು ಶಿರಕ್ಕೆ ಈ ಎರಡೂ ಶಿರಗಳು ಅರ್ಪಿತವಾಗಿವೆ ನೋಡು—ಎಂದು ತಿರುಕೊಳವಿನಾಚಿಗೆ ಹೇಳುತ್ತ ಆ ಎರಡೂ ಶಿರಗಳನ್ನು ಶಂಕರಕುಮಾರನ ಶಿರದ ಎಡಬಲಗಳಲ್ಲಿರಿಸಿದನು. ಆ ಎರಡೂ ಶಿರಗಳ ಮಂತ್ರೋಚ್ಚಾರದ ಪ್ರಭಾವದಿಂದ ಶಂಕರಕುಮಾರನ ಶಿರವೂ ಉಜ್ಜೀವಿತವಾಗಿ ಅದೂ ಮಂತ್ರೋಚ್ಚಾರ ಮಾಡಹತ್ತಿತು. ಆಗ ತಿರುಕೊಳವಿನಾಚಿಯು ಸಂದಾಯಿಯ ಕಬಂಧದ ಕರತಳದ ಖಡ್ಗವನ್ನು ಕೈಯಲ್ಲಿ ತೆಗೆದುಕೊಂಡು ದೊರೆಯೇ, ನನ್ನ ಮಗನ ಮಸ್ತಕಕ್ಕೆ ಲೋಕಾಳಿಯನ್ನು ಒಲ್ದು ಪಾಲಿಸುವ ನಿನ್ನ ಮಗನ ತಲೆಯನ್ನಿತ್ತೆ; ನಿನ್ನ ಆಳೆನಿಸಿರುವ ಈ ಸಂದಾಯಿಯ ಶಿರಕ್ಕೆ ನನ್ನ ತಲೆ ಸರಿ ನೋಡೆಂದು ತನ್ನ ತಲೆಯನ್ನು ಕತ್ತರಿಸಿಟ್ಟಳು. ಅದೂ ಪಂಚಾಕ್ಷರೀಜಪ ಮಾಡಹತ್ತಿತು. ತಿರುಕೊಳವಿನಾಚಿಯು ಎಸಗಿದ ಕಾರ್ಯಕ್ಕೆ ಆಶ್ಚರ್ಯಪಟ್ಟು ಮಂತ್ರಿಯ ಶಿರವನ್ನೂ ತರಿಸಿ ಅಲ್ಲಿಡಲು ಅದೂ ಪಂಚಾಕ್ಷರೀ

ಮಂತ್ರವನ್ನು ಸ್ವೀಕರಿಸಿತು. ಪಂಚಾಕ್ಷರಿಯ ಪಂಚವರ್ಣಗಳನ್ನುಚ್ಚರಿಸುತ್ತಿರುವ ಈ ಪಂಚ ಶಿರಗಳಿಗೆ ತನ್ನ ಶಿರಃಪುಣವವನ್ನು ಅರ್ಪಿಸಿ ಅಲಂಕರಿಸುವೆನೆಂದು ಉತ್ಸಾಹ ಗೊಂಡು ಅರಸನು ತನ್ನ ಕೈಯ ಖಡ್ಗದಿಂದ ತನ್ನ ತಲೆಯನ್ನು ಕೊರೆದಿಡುವನು. ಪಂಚಾಕ್ಷರೀಮಂತ್ರ ಸಹಿತವಾಗಿಯೇ ಆ ಶಿರವೂ ಮೆರೆಯುವುದು. ಇದೆಲ್ಲವನ್ನು ಕಂಡ ಮಿತವಚನನು "ನಿಜವಾಗಿ ಶಂಕರಕುಮಾರನ ಕೊಲೆಗೆ ಕಾರಣನು ನಾನು; ನಿರ್ನಿಮಿತ್ತವಾಗಿ ತನ್ನ ಶಿರವನ್ನು ಅರ್ಪಿಸಿದವನು ರಾಜಶೇಖರನು; ಅವನನ್ನು ಬಿಟ್ಟಿರ ಲಾರೆ"ನೆಂದು ನಿಶ್ಚಯಿಸಿ ತನ್ನ ಶಿರಸ್ಸನ್ನು ಕತ್ತರಿಸಿಕೊಂಡನು. ಅದೂ ಪಂಚಾಕ್ಷರಿ ಯನ್ನು ಜಪಿಸತೊಡಗಿತು.

ಈ ವಾರ್ತೆಯನ್ನು ಸಖೀಜನರ ಮುಖದಿಂದ ಕೇಳಿದ ರಾಣಿ ಅಮೃತಮತಿ ಮಹಾದೇವಿಯು ರಾಜಶೇಖರ-ಮಿತವಚನರ ಪತ್ನಿಯರೊಂದಿಗೆ ಸಭಾಸ್ಥಾನಕ್ಕೆ ಬಂದಳು; ಚಿತ್ಕಾಂತಿಯಲ್ಲಿ ಮುಳುಗಿ ಪಂಚಾಕ್ಷರೀಮಂತ್ರವನ್ನುಚ್ಚರಿಸುತ್ತಿದ್ದ ಏಳೂ ತಲೆಗಳನ್ನು ಕಂಡಳು. ಮಂತ್ರಮಹಿಮೆಯಿಂದ ಆ ತಲೆಗಳು ಜೀವಂತವಾಗಿ ಮಂತ್ರೋಚ್ಚಾರ ಮಾಡುವುದನ್ನು ಕಂಡು, ನಿಷ್ಠೆ ಬಲಿದು ಅವರೊಡನೆ ತಾನೂ ಒಂದಾಗಬೇಕೆಂದು ಬಯಸಿ, ಪತಿಯ ಖಡ್ಗವನ್ನು ಕೈಯಲ್ಲಿ ಧರಿಸಿ ಶಿರಶ್ಛೇದನ ಮಾಡಿಕೊಳ್ಳಲು ಸಿದ್ಧಳಾದಳು. ಅವಳೊಡನೆ ರಾಜಶೇಖರ-ಮಿತವಚನರ ಸತಿಯರೂ ತಮ್ಮ ತಮ್ಮ ಪತಿಗಳ ಶಿರಗಳೆದುರು ನಿಂತು, ಅವರ ಖಡ್ಗಗಳನ್ನು ಕೈಯಲ್ಲಿ ಧರಿಸಿ ತಾವೂ ಪ್ರಾಣಾರ್ಪಣಮಾಡಲು ಸಿದ್ಧರಾಗಿ ನಿಲ್ಲುವರು. ಅವರು ಖಡ್ಗಗಳನ್ನೆತ್ತಿ ಕೊರಳಿಗೆ ಹಚ್ಚುವಷ್ಟರಲ್ಲಿಯೇ ಪರಶಿವನು ಪ್ರತ್ಯಕ್ಷನಾಗಿ ತಡೆಯುವನು; ಹಾಗೂ ಇಚ್ಛಿತ ವರವೊಂದನ್ನು ಕೇಳಿಕೊಳ್ಳಬೇಕೆಂದು ಅಮೃತಮತಿ ಮಹಾದೇವಿಗೆ ಹೇಳು ವನು. ಆಕೆಯು ಶಂಕರಕುಮಾರನ ಜೀವದಾನವನ್ನು ಬೇಡುವಳು. ಆಕೆಯ ಸದ್ಭಾವನೆಗೆ ಮೆಚ್ಚಿದ ಶಿವನು ಎರಡನೆಯ ವರವನ್ನು ಬೇಡಲು ಹೇಳುವನು. ಆಗಲೂ ಅವಳು ತನ್ನ ಪತಿಪುತ್ರರ ಪ್ರಾಣದಾನ ಕೇಳದೆ ತಿರುಕೊಳವಿನಾಚಿಯ ಜೀವವನ್ನು ಕೊಡುವುದಾಗಿ ಕೇಳುವಳು. ಅದಕ್ಕೆ ಮೆಚ್ಚಿ ಶಿವನು ಸರ್ವರಿಗೂ ಪ್ರಾಣ ದಾನಮಾಡುವನು. ದೇವದುಂದುಭಿ ಮೊಳಗುವುದು; ಪುಷ್ಪವೃಷ್ಟಿ ಸುರಿಯುವುದು. ಶಿವನು ಎಲ್ಲರನ್ನೂ ಕೈಲಾಸಕ್ಕೊಯ್ದು ಗಣಸಂದೋಹಮಧ್ಯದಲ್ಲಿರಿಸುವನು. ಇದು ರಾಜಶೇಖರ ವಿಳಾಸದ ಕಥೆ.

ಕಥೆಯ ಮೂಲ, ಮಾರ್ಪಾಡು ಹಾಗೂ ಔಚಿತ್ಯ

೧

ರಾಜಶೇಖರವಿಳಾಸದ ಕಥೆ ಮೊದಲೇ ಚಿಕ್ಕದು. ಅದನ್ನು ಇನ್ನೂ ಚಿಕ್ಕದನ್ನಾಗಿ ಮಾಡಿ ಕಂಡುಗವನ್ನು ಬಳ್ಳದಲ್ಲಿರಿಸಿದಂತೆ ಇಲ್ಲಿ ಹೇಳಲಾಗಿದೆ. ರಸಜ್ಞ ಸುಮನೋಲತೆಯಂತಿರುವ ಈ ಕಥೆಯನ್ನು ಗುಬ್ಬಿಯ ಮಲ್ಲಣಾರ್ಯರು ಉರ್ವೀಶವಿರಾಜರಾಜನುತವಾಗುವಂತೆ ವರ್ಣಕದಲ್ಲಿ ಹೇಳಿ 'ಭಾವಚಿಂತಾರತ್ನ' ವನ್ನಾಗಿ ಮಾಡಿರುವರು. ಅದನ್ನು ತಾನು ವಸ್ತುಕದಿಂದ ವರ್ಣಿಸಿ ರಾಜಶೇಖರ ವಿಳಾಸವನ್ನಾಗಿ ಮಾಡುವೆನೆಂದು ಷಡಕ್ಷರಿದೇವನ ಹೇಳಿಕೆ.[೧] ಗುಬ್ಬಿಯ ಮಲ್ಲಣಾರ್ಯರಿಗೆ ಮೂಲಮಾತೃಕೆ ದ್ರವಿಡಭಾಷೆಯಿಂದ ಬಂದಿದೆ. ದ್ರಾವಿಡ (ತಮಿಳ) ದಲ್ಲಿ ಈ ಕಥೆ ನಾನಾಮುಖವಾಗಿ ಹರಿದುಬಂದಿದೆ. ಕ್ರಿ. ಶ. ೨ ನೆಯ ಶತಮಾನದ 'ಶಿಲಪ್ಪದಿಗಾರಂ' ಎಂಬ ತಮಿಳುಗ್ರಂಥದಲ್ಲಿ ಈ ಕಥೆ ಹೀಗೆ ವರ್ಣಿತವಾಗಿದೆ: ಒಂದು ಹಸು ಕರುವಿನೊಡನೆ ರಾಜಬೀದಿಯಲ್ಲಿ ನಿಂತಿರುತ್ತದೆ. ಕರು ಕುದುರೆಯ ಕಾಲಿಗೆ ಸಿಲುಕಿ ಸಾಯುತ್ತದೆ. ತಾಯಿ–ಹಸು ನಗರದ ಮಹಾದ್ವಾರದಲ್ಲಿ ಕಟ್ಟಿದ ನ್ಯಾಯಘಂಟೆಯ ಸರಪಳಿಯನ್ನು ತನ್ನ ಕೋಡಿನಿಂದ ಜಗ್ಗಿ ಆ ಗಂಟೆಯನ್ನು ಬಾರಿಸುತ್ತದೆ. ಅರಸನು ಅಲ್ಲಿಗೆ ಬಂದು ವಿಚಾರಿಸಿ ಹಸುವಿಗೆ ನ್ಯಾಯದಾನವನ್ನು ಮಾಡುತ್ತಾನೆ, ಈ ಕಥೆ ತಮಿಳ ಜಾನಪದದಲ್ಲಿ, ಶಿಲ್ಪದಲ್ಲಿ ಮೈವೆತ್ತು ನಿಂತಿದೆ. ಸಾಹಿತ್ಯದಲ್ಲಿ ಇದೇ ಮನುಚೋಳನ ಕಥೆಯ ಸ್ವರೂಪವನ್ನು ತಳೆದಂತಿದೆ. ಗುಬ್ಬಿಯ ಮಲ್ಲಣಾರ್ಯರ (ಕ್ರಿ, ಶ. ೧೫೧೩) ಪೂರ್ವದಲ್ಲಿ ಇವೆಲ್ಲವುಗಳ ಆಧಾರದಿಂದ ಸತ್ಯೇಂದ್ರಚೋಳನ ಪೌರಾಣಿಕ ಕಥೆಯೊಂದು ತಮಿಳಿನಲ್ಲಿ ನಿರ್ಮಿತವಾಗಿರಬೇಕು. ಆ ಕಥೆಯನ್ನೇ ತಿರುಜ್ಞಾನಸಂಬಂಧಿಗಳು ಕುಲಚ್ಚರಿಯರಿಗೆ ಹೇಳಿದರೆಂದು ಮಲ್ಲಣಾರ್ಯರು ಹೇಳಿರುವುದರಿಂದ ಆ ಕಥೆ ಆಗಲೇ ಒಂದು ಕಾವ್ಯಸ್ವರೂಪವನ್ನು ಪಡೆದಿರಬೇಕು.[೨] ಈ ಕಥೆ ತಮಿಳಿನಿಂದ ಕನ್ನಡಕ್ಕೂ ಕನ್ನಡದಿಂದ ತೆಲುಗಿಗೂ ಹೋಗಿರುವುದು ಇದರ ಜನಪ್ರಿಯತೆಯನ್ನು ತೋರಿಸುತ್ತದೆ. ಪ್ರತಿಭಾನ್ವಿತನಾದ ಷಡಕ್ಷರಿದೇವನು ಇದಕ್ಕೆ ಮನಸೋತು ತಾನೂ ವಸ್ತುಕರೂಪದಿಂದ ಇದನ್ನೊರೆಯಲುಜ್ಜುಗಿಸಿರುವನು. ಆದರೆ ಷಡಕ್ಷರಿದೇವನು ಮಲ್ಲಣಾರ್ಯರ ಕಥೆಯನ್ನು ಇದ್ದಕ್ಕಿದ್ದಂತೆಯೆ ಇಟ್ಟುಕೊಂಡಿಲ್ಲ. ಮಲ್ಲಣಾರ್ಯರಿಗಾದರೋ ಸತ್ಯೇಂದ್ರಚೋಳನ ಕಥೆಯನ್ನು ಹೇಳಿ ಪಂಚಾಕ್ಷರೀಮಂತ್ರದ ಮಹಿಮೆಯನ್ನು ಬಿತ್ತರಿಸಬೇಕಾಗಿದೆ. ಷಡಕ್ಷರಿದೇವನೂ—

---

೧ ರಾಜಶೇಖರವಿಳಾಸದ ಆ. ೧ ಪ. ೭೮ ೨ ಭಾವಚಿಂತಾರತ್ನ ಆ. ೧, ಪ. ೧೨.

"ನರನೊರ್ಮೆ ನೆನೆಯೆ ಸಲೆ ಶಂ
ಕರನಂ ನೆಱೆಮಾಳ್ಪ ಮಹಿಮೆಯಂ ತಳೆದ ಷಡ
ಕ್ಷರಮಂತ್ರದಮಳಕಥನಮ
ನೊರೆವೆನ್ನಿಂದನ್ಯರೊಳರೆ ಧನ್ಯರ್ ಜಗದೊಳ್[೧]"

ಎಂದು ತನ್ನ ಕಾವ್ಯಪೀಠಿಕೆಯಲ್ಲಿ ಹೇಳಿರುವನು. ಆದರೆ, ಕಾವ್ಯದ ವಸ್ತುವನ್ನು ಹಮ್ಮುವಾಗ ಕವಿ ಷಡಕ್ಷರಿದೇವನ ಕಾವ್ಯಪ್ರತಿಭೆ ಮುಂದೆಬಂದು ಕಥೆಗೆ ಹೊಸ ಕಳೆಯನ್ನೇ ಕೊಡುತ್ತದೆ. ಭಾವಚಿಂತಾರತ್ನದ ಸತ್ಯೇಂದ್ರಚೋಳನ ಕಥೆ ಇಲ್ಲಿ ರಾಜಶೇಖರನ ಕಥೆಯಾಗುತ್ತದೆ. ಕವಿಯು ಸತ್ಯೇಂದ್ರಚೋಳನನ್ನು ಒಂದಕ್ಕೆ ಸರಿಸಿ ರಾಜಶೇಖರನನ್ನೇ ಮುಂದೆ ತರುತ್ತಾನೆ. ಅಂತೆಯೇ ರಾಜಶೇಖರವಿಳಾಸವು ಆರಂಭವಾಗುವುದು ಅಮೃತಮತಿಮಹಾದೇವಿಯ ಪುತ್ರಾಕಾಂಕ್ಷೆ, ಗುರುಚಿದ್ಘನ ಶಿವಾಚಾರ್ಯರ ಆಗಮನ, ಆಶೀರ್ವಾದ, ರಾಜಶೇಖರನ ಜನನ, ಬಾಲ್ಯ, ಯೌವನ ಇತ್ಯಾದಿಗಳ ವರ್ಣನೆಯಿಂದ. ರಸಗ್ರಹಣದೃಷ್ಟಿಯಿಂದಲೇ ಕವಿಯು ಕಾವ್ಯದ ಕಥೆಯನ್ನು ಆರಂಭಿಸುತ್ತಾನೆ; ಮುಂದುವರಿಸುತ್ತಾನೆ.

"ಕವಿವಿಬುಧರ ಕಿವಿಯೊಳ್ ಸೂ
ಸುವ ನವರಸಮಿಳಿದು ತೀವಿ ತನುವಂ ಮನವಂ
ಕವಿದು ಪೊಱಸೂಸಿತೆನೆ ಪೊ
ಣ್ಮುವ ಸುಖಬಾಷ್ಪಂ ತುಳುಂಕೆ ಪೇಳ್ವುದು ಕೃತಿಯಂ[೨]"

ಎಂಬ ಸಂಕಲ್ಪ ಷಡಕ್ಷರಿದೇವನ ಕಣ್ಣ ಮುಂದೆ ಸದಾ ನಿಂತಿರುತ್ತದೆ. ಅಂತೆಯೇ ಕವಿ ಕಥೆಯನ್ನು ಮೇಗಣಂತೆ ಮಾರ್ಪಡಿಸುತ್ತಾನೆ. ಗುಬ್ಬಿಯ ಮಲ್ಲಣಾರ್ಯರ ಭಾವಚಿಂತಾರತ್ನದಲ್ಲಿ ಬರುವ ಕೈಲಾಸದ ವರ್ಣನೆ, ಶಾಪದ ಕಥೆ ಇವುಗಳನ್ನು ನೇರವಾಗಿ ಬಿಟ್ಟುಬಿಡುತ್ತಾನೆ. ಸಂಕ್ಷಿಪ್ತವಾಗಿ ಒಂದೆರಡು ಪದ್ಯಗಳನ್ನು, ಆತನನ್ನು ಕೊಂಡಾಡಿರುವ ಬುಧರಾಜರ ಬಾಯಲ್ಲಿ ಹಾಕಿ, ಬ್ರಹ್ಮನು ಷಣ್ಮುಖನಿಗೆ ವಿದ್ಯಾಭ್ಯಾಸವನ್ನಾರಂಭಿಸಿ ಪ್ರಣಮವನ್ನು ಬರೆದಂತೆಯೂ ಅದಕ್ಕೆ ಪೂರ್ತಿಯಾಗಿ ಅರ್ಥೈಸುವುದು ಬ್ರಹ್ಮ, ಶಿವ ಇಬ್ಬರಿಂದಲೂ ಆಗದಿರಲು ತಾನೇ ಅದನ್ನು ವಿವರಿಸಿದಂತೆಯೂ ಅದು ಕಾರಣ, ಪರಶಿವನ ಅಪ್ಪಣೆಯ ಮೇರೆಗೆ ಷಣ್ಮುಖನು ತಿರುಜ್ಞಾನಸಂಬಂಧಿಯಾಗಿಯೂ ಬ್ರಹ್ಮನು ವಾಗೀಶನಾಗಿಯೂ ದ್ರವಿಡದೇಶದಲ್ಲಿ ಹುಟ್ಟಿರುವಂತೆಯೂ ತಿಳಿಸುತ್ತಾನೆ. ಆದರೆ, ಇದು ರಾಜಶೇಖರವಿಳಾಸದ ನಿಜ ಆರಂಭವಲ್ಲ. ಆ ಕಾವ್ಯವು ನಿಜವಾಗಿ ಪ್ರಾರಂಭವಾಗುವುದು ಸಮುದ್ರ, ಮೇರುಪರ್ವತ, ಚೋಳಮಂಡಳ,

೧ ರಾಜಶೇಖರವಿಳಾಸ ಆ. ೧ ಪ. ೮೯ ೨ ರಾಜಶೇಖರವಿಳಾಸ ಆ. ೧ ಪ. ೫೨

ಕಾವೇರಿ ಮೊದಲಾದವುಗಳ ವರ್ಣನೆಯಿಂದ. ಮಹಾಕಾವ್ಯವನ್ನು ಬರೆಯಬೇಕೆಂದಿದ್ದ ಕವಿಯು ಹೀಗೆ ಇಂತಹ ಕಾವ್ಯಾಂಗಗಳ ವರ್ಣನೆಯಿಂದ ಕಾವ್ಯವನ್ನಾರಂಭಿಸುವುದು ಸಹಜ.

೨

ಷಡಕ್ಷರಿದೇವನ ಕಾವ್ಯದ ಕಥಾನಾಯಕನು ರಾಜಶೇಖರನೇ ಆಗಿರುವುದರಿಂದ ಕವಿಯು ಅವನ ಮೇಲೆ ತನ್ನ ದರ್ಶನದ ಸಮಗ್ರದೃಷ್ಟಿಯನ್ನು ಕೇಂದ್ರೀಕರಿಸುತ್ತಾನೆ. ರಾಜಶೇಖರನಿಗೆ ಯೌವನೋದಯವಾದೊಡನೆ ಸತ್ಯೇಂದ್ರಚೋಳನು ಅವನಿಗೆ ಯುವರಾಜಪಟ್ಟವನ್ನು ಕಟ್ಟಿ, ರಾಣಿಯೊಡನೆ ತಾನು ಲಿಂಗಪೂಜಾನಿರತನಾಗುವನು. ಇಲ್ಲಿಂದ ಮುಂದೆ ಕೊನೆಯ ದೃಶ್ಯದ ವರೆಗೂ ಸತ್ಯೇಂದ್ರಚೋಳನ ಉಲ್ಲೇಖವೇ ಆಗುವುದಿಲ್ಲ. ಆ ಪಾತ್ರ ಸುಪ್ತವಾಗಿಯೇ ಬೆಳೆಯಲೆಂದು ಕವಿಯು ಆತನನ್ನು ಲಿಂಗಪೂಜೆಯಲ್ಲಿ ನಿರತನನ್ನಾಗಿ ಮಾಡುತ್ತಾನೆ. ಈ ವಿರತಿಯಿಂದಲೇ ಸತ್ಯೇಂದ್ರನ ಭಕ್ತಿ ಬಲಿದು ನಿಷ್ಠೆಯಾದಂತಿದೆ. ಆ ನಿಷ್ಠೆಯೇ ಕೊನೆಯ ದೃಶ್ಯದಲ್ಲಿ ಪ್ರಕಟವಾಗಿದೆ.

೩

ಯುವರಾಜನಾದ ರಾಜಶೇಖರನು ಒಡ್ಡೋಲಗದಲ್ಲಿ ಕುಳಿತಿರಲು ಬೇಡನೋರ್ವನು ಬಂದು ಅನರ್ಘ್ಯವಾದ ರತ್ನವೊಂದನ್ನು ಆತನಿಗೆ ಅರ್ಪಿಸಿ ಅದರ ವೃತ್ತಾಂತವನ್ನು ವಿವರಿಸಿ ಹೇಳುವನು. ಆ ರತ್ನದ ನಿಮಿತ್ತವಾಗಿ ಪುಳಿಂದಪುರದ ತನ್ನೊಡೆಯನ ಪಡೆಗೂ ಹಾಗೂ ಸಿಂಹಳರಾಜನ ಸೈನಿಕರಿಗೂ ನಡೆದ ಯುದ್ಧದ ವಾರ್ತೆಯನ್ನು ವಿವರಿಸುವನು. ಅದನ್ನು ಕೇಳಿ ರಾಜಶೇಖರನು ಕೆರಳಿ ಸಿಂಹಳರಾಜನ ಮೇಲೆ ದಂಡೆತ್ತಿಹೋಗುವನು. ಈ ಕಥೆಯನ್ನು ಷಡಕ್ಷರಿದೇವನು ಕಥಾನಾಯಕನ ಜೀವನ ವೃತ್ತಾಂತನಿರೂಪಣೆ, ವ್ಯಕ್ತಿತ್ವವಿಕಸನ ಇವುಗಳಿಗಾಗಿಯೇ ಕಲ್ಪಿಸಿಕೊಂಡಂತಿದೆ. ಭಾವಚಿಂತಾರತ್ನದಲ್ಲಿ ಈ ವಿವರಣೆಯಿಂದ ಸತ್ಯೇಂದ್ರಚೋಳನೇ ಸಿಂಹಳದ ಮೇಲೆ ದಂಡೆತ್ತಿಹೋಗುತ್ತಾನೆ. ಈ ಮಾರ್ಪಾಟಿನಿಂದ ಷಡಕ್ಷರಿದೇವನು ಸಾಂಪ್ರದಾಯಿಕ ಮಹಾಕಾವ್ಯಕ್ಕೆ ಅತ್ಯವಶ್ಯವೆನಿಸಿದ ಬೇಟೆ, ಯುದ್ಧದ ವರ್ಣನೆಗಳನ್ನು ಸಹಜವಾಗಿಯೇ ತಂದುಕೊಂಡಿದ್ದಾನೆ.

೪

ಷಡಕ್ಷರಿದೇವನು ಸ್ವಭಾವತಃ ಶೃಂಗಾರಪ್ರಿಯನಾದ ಕವಿ. ಆದುದರಿಂದಲೇ ಆತನು ರಾಜಶೇಖರವಿಳಾಸದಲ್ಲಿ ಶೃಂಗಾರರಸ ಪ್ರಕಟನೆಗೆ ಅವಶ್ಯವಾದ ಸನ್ನಿವೇಶಗಳನ್ನು ಅಲ್ಲಲ್ಲಿ ನಿರ್ಮಾಣಮಾಡಿಕೊಂಡಿದ್ದಾನೆ. ಕಥಾನಾಯಕನಾದ ರಾಜಶೇಖರನು ಸಿಂಹಳದ್ವೀಪದ ಮೇಲೆ ದಂಡೆತ್ತಿಹೋಗಿ ಅಲ್ಲಿ ಸರ್ವಮಂಗಳೆಯನ್ನು

ಕಾಣುತ್ತಾನೆ. ಪ್ರಥಮಸಂದರ್ಶನದಲ್ಲಿಯೇ ಪರಸ್ಪರರಲ್ಲಿ ಪ್ರೇಮಭಾವನೆ ಅಂಕುರಿಸುತ್ತದೆ; ಅದು ಬೆಳೆದು ಪಲ್ಲವಿಸಿ ಕುಸುಮಿಸಿ ಸುಮಧುರಫಲಗಳನ್ನೂ ಕೊಡುತ್ತದೆ. ಇವೆಲ್ಲ ವರ್ಣನೆಗಳು ರಾಜಶೇಖರವಿಳಾಸದಲ್ಲಿ ಶೃಂಗಾರದ ಮಡುವನ್ನೇ ನಿರ್ಮಿಸಿವೆ. ಇದು ಷಡಕ್ಷರಿದೇವನ ನೂತನನಿರ್ಮಾಣ. ಪ್ರಾಯಶಃ ತನಗೆ ಅತ್ಯಂತ ಪ್ರಿಯಕರವಾದ ಶೃಂಗಾರರಸದ ನಿರೂಪಣೆಗಾಗಿಯೇ ಕವಿಯು ಈ ನೂತನವಾದ ಮಾರ್ಪಾಡನ್ನು ತನ್ನ ಕಾವ್ಯದಲ್ಲಿ ಮಾಡಿಕೊಂಡಂತಿದೆ. ಶೃಂಗಾರದ ಕೇಂದ್ರಗಳೆನಿಸಿದ ವನವಿಹಾರ, ನೃತ್ಯ, ಸಂಗೀತ, ಪುಷ್ಪಾಪಚಯ ಮೊದಲಾದ ಸನ್ನಿವೇಶಗಳು ಈ ನೂತನದಂಪತಿಗಳನ್ನುದ್ದೇಶಿಸಿಯೇ ಕಲ್ಪಿತವಾದಂತಿವೆ. ಇವು ಕಾವ್ಯದ ಪ್ರಧಾನ ರಸವಾದ ಶೃಂಗಾರವನ್ನು ಪೋಷಿಸುತ್ತವೆ.

೫

ಉಳಿದ ಕಥೆಯೆಲ್ಲ ಹೆಚ್ಚು ಕಡಮೆ ಮೂಲದಲ್ಲಿದ್ದಂತೆಯೇ ಇಳಿದುಬಂದಿದೆ. ಆದರೂ ಷಡಕ್ಷರಿದೇವನ ನೂತನದರ್ಶನದಿಂದ ಅದು ಹಿಗ್ಗಿದೆ, ಅರಳಿದೆ: ಜೀವಂತವಾಗಿದೆ.

ಕಾವ್ಯವಿಮರ್ಶೆ

ರಾಜಶೇಖರವಿಳಾಸವು ಷಡಕ್ಷರಿದೇವನ ಮೊದಲನೆಯ ಕೃತಿ. ಎಳೆವರೆಯದಲ್ಲಿಯೇ ಕಾವ್ಯ ಬರೆಯುತ್ತಿದ್ದ ಉತ್ಸಾಹಶೀಲನಾದ ಈ ಕವಿಯು ಕಾವ್ಯಾರಂಭದಲ್ಲಿ ತನ್ನ ಗುರುಪರಂಪರೆ, ಕಾವ್ಯವಿಚಾರ, ಕುಕವಿನಿಂದೆ, ಪೂರ್ವಕವಿಸ್ತವನ೧ ಮುಂತಾದವುಗಳನ್ನು ಕುರಿತು ಬಹುವಿಶದವಾಗಿ ವಿವೇಚನೆ ಮಾಡುತ್ತಾನೆ. ಕಾವ್ಯವಿಷಯದಲ್ಲಿಯಂತೂ ಆತನು ನಿತ್ಯನೂತನವಾದ, ಶಾಶ್ವತವಾದ ವಿಚಾರಗಳನ್ನು ಹೇಳುತ್ತಾನೆ. "ಕಲಿಸಿದೊಡಂ ಬರ್ಕುಮೆ ಸಲ್ಲಲಿತ ಕವಿತ್ವಂ ನಿಸರ್ಗಸುಭಗಂ" ಎಂದು ಕೇಳಿ, ಕಾವ್ಯನಿರ್ಮಿತಿಗೆ ಪ್ರತಿಭೆ ಅತ್ಯವಶ್ಯವಾದುದೆಂದು ಸ್ಪಷ್ಟಪಡಿಸುತ್ತಾನೆ. ಕಾವ್ಯಪ್ರತಿಭೆ ಆಜನ್ಮಸಿದ್ಧವಾದುದು; ಅದು ಮಾರಾರಿಯ ಕೃಪೆಯಿಂದ ಬರತಕ್ಕುದು; ಬಹುತರ ಜನ್ಮಕೋಟಿಗಳೊಳಾರ್ಜಿಸಿದುತ್ತಮ ಪುಣ್ಯದೇಳ್ಗೆಯಿಂದ ಈ ಮಾರಾರಿಯ ಕೃಪೆ ದೊರೆಯುವುದು. ದೇವದತ್ತವಾಗಿ ಬಂದ ಈ ಕಾವ್ಯಪ್ರತಿಭೆಯ ಫಲವನ್ನು ಶಿವನಿಗೇ ಅರ್ಪಿಸಬೇಕು.

---

೧. ವೀರಶೈವ ಶರಧಿಶ್ರೀಸೋಮನೆನಿಸಿದ ಪಾಲ್ಕುರಿಕೆ ಸೋಮನಾಥ, ಸದ್ಬುಧಸ್ತುತಲಸತ್ಪದ್ಮನಾದ ಕೆಱೆಯ ಪದ್ಮರಸ, ದುರ್ವಿದಗ್ಧಜನತಾಹೃದ್ಭೀಮನೆನಿಸಿದ ಭೀಮಕವಿ, ಶಾಂಕರೀರಮಣನನ್ನು ಸತತ ಆರಾಧಿಸಿದ ಭೋಜ, ಶರಣರಂ ಪಾಡಿ ಕೈವಲ್ಯಲಕ್ಷ್ಮೀವರನಾದ ಹರಿಹರದೇವ, ಮಾಯಿದೇವ, ಚಕ್ಕಣಾರ್ಯ, ರಾಘವಾಂಕ, ಕಂಚಿಯ ಶಂಕರ, ಕೇಶಿರಾಜ ಈ ಕವಿಗಳನ್ನು ಷಡಕ್ಷರಿಯು ಸ್ತುತಿಸಿದ್ದಾನೆ.

ಅದಱಿಂದೆ ಮಹಿತಮಹಿಮಾ
ಸ್ಪದನಂ ಶಿವನಂ ತದೀಯ ಶರಣವ್ರಜಮಂ
ಪದೆದು ಮುದಮೊದವೆ ಬಲ್ಲಂ
ದದೆ ನುತಿಪೆಂ ನುತಿಸೆನುಳಿದ ಸುರರಂ ನರರಂ

ಎಂದು ಹರಿಹರನುದಿತಮಾರ್ಗದಲ್ಲಿಯೇ ಕವಿಯು ತನ್ನ ಕಾವ್ಯಗಳನ್ನು ರಚಿಸಿರುವನು. ಕಾವ್ಯ ರಸಭರಿತವಾಗಿರಬೇಕು; ಅದರಲ್ಲಿ ನಿರರ್ಗಳತೆ ಇರಬೇಕು—ಎಂದು ನಿತ್ಯಸತ್ಯವಾದ ಕಾವ್ಯತತ್ವಗಳನ್ನು ವಿವರಿಸಿ ಕಾವ್ಯಾರಂಭಮಾಡುತ್ತಾನೆ.

ಮಹಾಕಾವ್ಯವನ್ನು ಬರೆಯ ಹೊರಟ ಕವಿ, ಸಂಪ್ರದಾಯಕ್ಕನುಗುಣವಾಗಿ ಸಮುದ್ರದ ವರ್ಣನೆಯಿಂದಲೆ ಕಾವ್ಯವನ್ನು ಪ್ರಾರಂಭಿಸುತ್ತಾನೆ. ಅಂಭಃಕುಂಭೀನಸ ಮಕರ ಮಹಾಕೂರ್ಮ ಮೊದಲಾದುವುಗಳಿಂದ ಸಮುದ್ರವು ಭೋರ್ಗರೆದು ರಂಜಿಸಿತಂತೆ. ಸಮುದ್ರವನ್ನು ಕಂಡಿರಲಿ, ಕಾಣದಿರಲಿ; ಅದನ್ನು ಬಣ್ಣಿಸುವ ಛಲ ನಮ್ಮ ಕವಿಗಳಿಗಿದೆ. ಷಡಕ್ಷರಿಯೂ ಆ ಸಾಲಿನಲ್ಲೊಬ್ಬನು. ಆದರೆ, ಅವನ ಪ್ರತಿಭೆ ಅಪ್ರತಿಮವಾದುದು. ತನ್ನ ಪ್ರಬಲಕಲ್ಪನಾಶಕ್ತಿಯಿಂದ ಸಮುದ್ರದ ಸಾಂಪ್ರದಾಯಿಕ ವರ್ಣನೆಯಲ್ಲಿಯೂ ಆತನು ಬೆಡಗನ್ನು ತೋರದಿಲ್ಲ:

ಅಳಿಯಂ ಪೂಗಣ್ಣನೆನ್ನೀ ಮಗಳೆ ಚಪಳೆ ಪುತ್ರಂ ಕರಂ ರಾಜಯಕ್ಷ್ಮಾ
ಕುಳನೆನ್ನೈಶ್ವರ್ಯಮಂ ನಿರ್ಜರರೆ ಕವರ್ದರೆನ್ನೊಳ್ಬಿಸಂ ಪುಟ್ಟಿತೆನ್ನಂ
ಕಳಶಪ್ರೋದ್ಭೂತನಂದೀಂಟಿದನಕಟ ಮಹಾಭಂಗಮಂ ತಾಳ್ದೆನೆಂದೆಂ
ದೊಳಗಂಭೋರಾಶಿ ಚಿಂತಾಗ್ನಿಯನೆ ತಳೆದವೊಲ್ಔರ್ವನಂತಃಸ್ಥಮಿರ್ಕುಂ

ಎಂದು ಸಮುದ್ರವು ಚಿಂತಾಗ್ನಿಯನ್ನು ತನ್ನಂತಸ್ಥದಲ್ಲಿ ತಳೆದಿತ್ತಂತೆ. ಮಾನವ ಸ್ವಭಾವವನ್ನು ನಿರೀಕ್ಷಿಸುವ ಸಾಮರ್ಥ್ಯವುಳ್ಳ ಕವಿ ಪ್ರಕೃತಿಯಲ್ಲಿಯೂ ಅದನ್ನು ಕಾಣುತ್ತಾನೆ. ಕವಿಗೆ ಚೇತನಾಚೇತನವಸ್ತುಗಳೆಲ್ಲವೂ ಒಂದೇ ರೂಪದಲ್ಲಿ ಕಾಣುತ್ತವೆ. ಸಮುದ್ರದ ವರ್ಣನೆ ಮುಗಿಯುತ್ತಲೇ ಮೇರುಪರ್ವತದ ವರ್ಣನೆ ಬರಲೇಬೇಕು. ಅದು ಮೇಘ ಮುಗಿಲ್ಗಳಿಂದ ಮುಸುಕಿ ಸಾಂದ್ರತೇಜೋವಹ ಲಿಂಗದಂತೆ ಕವಿಗೆ ಕಾಣಿಸುತ್ತದೆ. ಶಿವಭಕ್ತನಾದ ಕವಿಗೆ ಮೇರುಪರ್ವತವೂ ಲಿಂಗಾಕಾರವಾಗಿ ಕಾಣುವಲ್ಲಿ ಒಂದು ಬೃಹದ್ದರ್ಶನವಿದೆ. ಹೀಗೆ ಸುಂದರವಾದ ವಿಚಾರಗಳನ್ನು ಹೇಳುವ ಕವಿ ಸಾಂಪ್ರದಾಯಿಕ ವಿಚಾರಗಳನ್ನೂ ಹೇಳದೆ ಬಿಟ್ಟಿಲ್ಲ. ಒಟ್ಟಿನಲ್ಲಿ ರಾಜಶೇಖರ ವಿಳಾಸವನ್ನು ನಿಧಾನವಾಗಿಯೇ ಓದಬೇಕು. ವಿಷಯವನ್ನು ವಿಸ್ತರಿಸಿ ವರ್ಣಿಸುವುದು ಷಡಕ್ಷರಿದೇವನ ಶೀಲ; ಆತನ ಶೀಲದಂತೆಯೇ ಕಾವ್ಯಶೈಲಿ. ಭಾವ, ಭಾಷೆ, ಪ್ರತಿಭೆ, ಪಾಂಡಿತ್ಯ ಇವುಗಳಲ್ಲಿ ಶ್ರೀಮಂತನಾದ ಕವಿ ಷಡಕ್ಷರಿದೇವನಿಗೆ ಕೊರತೆಯೆಂಬುದೇ ಇಲ್ಲ. ಹೀಗಾಗಿ ಆತನ ಪ್ರತಿಯೊಂದು ವರ್ಣನೆಗಳೂ ವಿಸ್ತೃತವಾಗಿಯೇ ವೈಪ-

ತ್ತಿವೆ. ಕಥೆಯ ಗತಿ ಕಡಿಮೆ: ವರ್ಣನೆಯ ವಿವರ ಹೆಚ್ಚು. ಉತ್ಪ್ರೇಕ್ಷೆಯ ಮೇಲೆ ಉತ್ಪ್ರೇಕ್ಷೆ, ಕಲ್ಪನೆಯ ಮೇಲೆ ಕಲ್ಪನೆ ಬರುವುದರಿಂದ ಸಾಂಪ್ರದಾಯಿಕವಾದ ವರ್ಣನೆಗಳೂ ಸುಂದರವಾಗಿ ಕಾಣುತ್ತವೆ. ಅದನ್ನು ಅರಿತು ಅನುಭವಿಸಿ ಆನಂದಿಸಲು ತಾಳ್ಮೆ ಬೇಕು; ಶಕ್ತಿ ಬೇಕು. ಷಡಕ್ಷರಿದೇವನ ತಪ್ಪಲುಪ್ರದೇಶ, ಗುಹೆಗಳು, ತಪೋವನ, ನದೀತೀರ ಮೊದಲಾದ ಗತಾನುಗತಿಕ ವರ್ಣನೆಗಳಲ್ಲಿಯೂ ಕಾವ್ಯಸೌಂದರ್ಯ ತುಂಬಿತುಳುಕುತ್ತದೆ. ಇವೆಲ್ಲ ವರ್ಣನೆಗಳ ಸಾರವನ್ನು ಹೀರುವಾಗ ಕಥೆಗಾಗಿ ದುಡುಕಿ ಓಡದೆ, ನಿಂತು ನಿಂತು ಕಾವ್ಯಸೌಂದರ್ಯವನ್ನು ಸವಿಯಬೇಕು. ಸಹೃದಯರನ್ನು ಮೈಮರೆಸುವ ಶಕ್ತಿ ಷಡಕ್ಷರಿದೇವನ ಶೈಲಿಗಿದೆ. ಉದಾಹರಣೆಗೆಂದು ಅವನ ಸುಪ್ರಸಿದ್ಧವಾದ ಗಂಧಶಾಲಿವನಗಳ ವರ್ಣನೆಯನ್ನು ನೋಡಬೇಕು:

ತೂಗುತೆ ತೊನೆಯುತೆ ಬಳ್ಕುತೆ
ಬಾಗುತೆ ಕಂಪಿಡುತೆ ಕನಕರುಚಿದಾಳುತ್ತುಂ
ರಾಗಿಸುತೆ ರಾಜಿಸುತೆ ಸೊಂ
ಪಾಗಿರ್ದುವು ಕಣ್ಗೆ ಗಂಧಶಾಲಿವನಂಗಳ್

ಗಾಳಿಗೆ ಉಯ್ಯಾಲಾಡುವ ಭತ್ತದ ಬೆಳೆಯನ್ನು ಕವಿ ಎಷ್ಟು ಸೂಕ್ಷ್ಮವಾಗಿ ನಿರೀಕ್ಷಿಸುತ್ತಾನೆ! ಅದು ತೂಗಿ ತೊನೆಯಿತಂತೆ; ಬಾಗಿ ಬಳ್ಕಿತಂತೆ. ಈ ಮಾತುಗಳಲ್ಲಿ ಹುದುಗಿರುವ ಧ್ವನಿ ಅನುಭವವೇದ್ಯವಾದುದು. ಇಡೀ ವರ್ಣನೆಯೇ ಸುಲಲಿತವೂ ಸುಂದರವೂ ಆದ ಕಂದಪದ್ಯಗಳಲ್ಲಿಯೇ ಮುಂದುವರಿದು ಹಕ್ಕಿಗಳನ್ನು ಹಾರಿಸುವ ಪಾಮರಿಯರ ವರ್ಣನೆಗೆ ಎಡೆಗೊಡುತ್ತದೆ. ಅಲ್ಲಿಯೂ ಅದೇ ಹಾಸ್ಯ, ಬೆಡಗು; ಸಾಲದುದಕ್ಕೆ ಶೃಂಗಾರದ ಸೊಬಗು. ಇಂತು ರಮ್ಯವಾದ ಚೋಳಮಂಡಳದಲ್ಲಿ ಧರ್ಮವತಿಯೆಂಬ ಪುರವು ಶೋಭಿಸುತ್ತದೆ. ಉಳಿದ ವರ್ಣನೆಗಳಲ್ಲಿ ಉನ್ನತಮಟ್ಟಕ್ಕೇರುವ ಕವಿಯ ಪ್ರತಿಭೆ ಈ ಪುರವರ್ಣನೆಯಲ್ಲಿ ಸ್ವಲ್ಪ ಕೆಳಗಿಳಿದಂತಿದೆ; ಇಂತಹ ವರ್ಣನೆಯಿಂದ ಸ್ವಲ್ಪ ಬೇಸರಿಕೆಯೂ ಬಂದಂತಾಗುತ್ತದೆ. ಆ ಬೇಸರಿಕೆಯನ್ನು ಕಳೆಯುವುದಕ್ಕೋ ಏನೋ ಎಂಬಂತೆ ಮುಂದೆ ಧರ್ಮವತೀಪುರದ ರಾಜ ಸತ್ಯೇಂದ್ರಚೋಳ, ಆತನ ಹೆಂಡತಿ ಅಮೃತಮತಿಮಹಾದೇವಿ, ಮಂತ್ರಿ ಪತಿಮೋಹಿ ಇವರ ಸುಂದರವಾದ ವರ್ಣನೆ ಬರುತ್ತದೆ. ಅಮೃತಮತಿಮಹಾದೇವಿಯ ಪುತ್ರದೋಹದದ ವರ್ಣನೆ ನಮ್ಮ ಸಾಹಿತ್ಯದಲ್ಲಿಯೇ ಮಿಗಿಲಾಗಿ ನಿಲ್ಲುವಂತಿದೆ:

ಗಿಳಿವಱಿ ಮೆಱೆಯದ ನಂದನ
ಮಳಿಶಿಶು ವಿಹರಿಸದ ಪೂಗೊಳಂ ಕಳರವದಿಂ
ದೆಳ ಅಂಚೆಯಡಿಯಿಡದ ತ
ಣ್ಬೆಳಲರ್ಭಕನಾಡದಂಗಳಂ ಮಂಜುಳಮೇ

ಮಗನಿಲ್ಲದ ಕಾರಣ ಆಕೆಗೆ ಮನೆ ಶೂನ್ಯ; ಮನ ಶೂನ್ಯ. ಮಕ್ಕಳ ಆಟಪಾಟಗಳನ್ನೊಂದೊಂದನ್ನೇ ತನ್ನ ಕಣ್ಣ ಮುಂದೆ ತಂದುಕೊಳ್ಳುತ್ತಾಳೆ ಅಮೃತಮತಿ ಮಹಾದೇವಿ:

ಅರಸನ ಪಿಂದೆಸೆಯೊಳ್ಮೆ
ಯ್ಗರೆದೆಲ್ಲಿರ್ದಪನೊ ಜನನಿ ಪೇಳೆನುತೊಲವಿಂ
ಪರಿತಂದೆಳನಗೆ ಮಿನುಗು
ತ್ತಿರೆ ಕುವರಂ ಕೊರಲನೆಂದು ಬಿಗಿಯಪ್ಪುವನೋ

ಇಲ್ಲಿ ಕವಿ ತೋರಿಸಿದ ಮಾನವಸ್ವಭಾವನಿರೀಕ್ಷಣೆ, ನಿರೂಪಣೆಗಳು ಮಹಾಕವಿ ಷಡಕ್ಷರಿದೇವನ ಕಾವ್ಯಶಕ್ತಿಯ ಕುರುಹುಗಳಾಗಿವೆ. ಅಂತಃಪುರದಲ್ಲಿ ಒರಗಿರ್ದ ಪತ್ನಿಯ ಕ್ಷೇಮಸಮಾಚಾರಕ್ಕಾಗಿ ಬಂದ ಸತ್ಯೇಂದ್ರಚೋಳನ ಇರವನ್ನು ವರ್ಣಿಸುವ ರೀತಿಯನ್ನು ನೋಡಿರಿ:

ಎಡಗೈಯಿಂದೊತ್ತಿ ಶಯ್ಯಾತಳಮನಿನಿಸು ಜಾಜಿರ್ದುದಂ ಮೇಲುದಂ ಪೊಂ
ಗಡಗಂ ಗಲ್ಕೆಂದು ಶಬ್ದಂಗುಡೆ ಬಲದ ಕರಾಂಭೋಜದಿಂದೇಱನೂಂಕು
ತ್ತೊಡನುತ್ತುಂಗಸ್ತನಾಗ್ರಕ್ಕಿಳಿವ ಮುಡಿಯನಾಂತೌಂಕುತಂ ಕಂಠದಿಂ ಮುಂ
ಗಡೆಯೊಳ್ಕಂಡೇಳ್ವಳಂ ಕೈವಿಡಿದವಳೊಡನರ್ಧಾಸನಂಗೊಂಡನಾಗಳ್

ಈ ವರ್ಣನೆ ನಿತ್ಯ ಜೀವನದಿಂದ ಎತ್ತಿ ಇಟ್ಟಂತಿದೆ; ಅಷ್ಟು ಸಹಜವಾಗಿದೆ ಈ ವರ್ಣನೆ. ಅಂತರಂಗದ ವ್ಯಾಪಾರ, ತದನುಗುಣವಾದ ಬಾಹ್ಯಕ್ರಿಯೆಗಳನ್ನು ಗ್ರಹಿಸಿ ಸ್ಫುಟವಾಗುವಂತೆ ನಿರೂಪಿಸುವ ಸಾಮರ್ಥ್ಯ ಷಡಕ್ಷರಿದೇವನಲ್ಲಿ ಬೇಕಾದಷ್ಟಿದೆ; ಇದು ಅದಕ್ಕೊಂದು ಉದಾಹರಣೆ ಮಾತ್ರ. ಹೀಗೆ ಪುತ್ರಾಕಾಂಕ್ಷಿಗಳಾದ ಸತ್ಯೇಂದ್ರಚೋಳ ಅಮೃತಮತಿಯರು ಸದ್ಗುರುವಿನ ಕೃಪೆಯನ್ನು ಹಾರಯಿಸುತ್ತಿದ್ದಾಗ ಅವರ ಆಕಾಂಕ್ಷೆಯನ್ನರಿತು ಸದ್ಗುರು ಚಿದ್ಘನಶಿವಾಚಾರ್ಯರು ಅವರಲ್ಲಿಗೈತರುವರು. ಆಗ ದಂಪತಿಗಳು ಸಂತುಷ್ಟರಾದ ಗುರುಗಳಿಂದ ಸಂಕಲ್ಪಿತ ಪುತ್ರ ವರವನ್ನು ಬೇಡುವುದನ್ನು ಮರೆತು ಶಿವಲೀಲಾಕೀರ್ತನಕ್ಕೆ ಮನಸೋಲುವರು. ಇದು ಸಹಜದೃಷ್ಟಿಗೆ ವಿಚಿತ್ರವೆನಿಸಿದರೂ ಅದರಲ್ಲಿ ಒಂದು ಔಚಿತ್ಯವಿದೆ. ಸತ್ಯೇಂದ್ರಚೋಳ, ಅಮೃತಮತಿ ಇವರ ಜೀವನದಲ್ಲಿ ಲೌಕಿಕಕ್ಕಿಂತ ಪಾರಮಾರ್ಥಿಕಕ್ಕೆ, ಮಾನವ್ಯಕ್ಕಿಂತ ದಿವ್ಯಕ್ಕೆ ಹೆಚ್ಚಿನ ಸ್ಥಾನವಿದೆ. ಆದುದರಿಂದ ಅವರ ಭಕ್ತಿ ನಿಷ್ಕಾಮಭಕ್ತಿಯಾಗಿದೆ. ಇಹಪರಗಳೆರಡರ ಸರಸಸಂಗಮದ ಮಂಗಲಜೀವನವನ್ನು ಇವರಲ್ಲಿ ಕಾಣುತ್ತೇವೆ. "ಮಾಡಿದೆನೆಂಬುದು ಮನದಲ್ಲಿ ಹೊಳೆಯದಿದ್ದಡೆ, ಬೇಡಿದುದನೀವ ಕೂಡಲಸಂಗಮದೇವ". ಸತ್ಯೇಂದ್ರಚೋಳ, ಅಮೃತಮತಿಮಹಾದೇವಿಯರು ತಮ್ಮ

ಮನದಲ್ಲಿ ಇಂಥ ಸದ್ಭಾವನೆ, ನಿಷ್ಕಾಮಭಕ್ತಿಯುಳ್ಳವರಾದುದರಿಂದಲೇ ಸದ್ಗುರುವು ತಾನೇ ಅವರಿಗೆ ಪುತ್ರಪ್ರಾಪ್ತಿಯ ವರವನ್ನು ದಯಪಾಲಿಸುವುದು ಶರಣಜೀವನಕ್ಕೆ ಸಹಜವಾದುದು.

ಅಮೃತಮತಿಮಹಾದೇವಿ ಒಳ್ಳೆಯ ಮಂಗಳಕರವಾದ ಕನಸೊಂದನ್ನು ಕಾಣುವಳು. ಮೊಗಸಸಿ ತಿಳಿಜೊನ್ನವನ್ನು ಚಿಮುಕಿಸುವಂತೆ ರದನರುಚಿ ತುಳುಕಲು, ಅವಳು ತಾನು ಕಂಡ ಕನಸನ್ನು ಪತಿಗೆ ಅರಿಕೆಮಾಡಿಕೊಳ್ಳುವಳು.

ಕರಿಯಿಂ ಭದ್ರಯುತಂ ಸರೋಜದೆ ಗುಣಧಾರಂ ವೃಷಾಧೀಶನಿಂ
ಪರಭಕ್ತಂ ಕಮಳಾಪ್ತನಿಂ ಪ್ರಬಳತೇಜೋಯುಕ್ತನಾದರ್ಶದಿಂ
ಪರಸಂಪ್ರೀತಿದನಬ್ಧಿಯಿಂದತಿಗಭೀರಂ ಮೇರುವಿಂ ಭೂಮಿಭೃ
ದ್ವರನಬ್ಜಾಹಿತನಿಂ ಕಳಾನಿಧಿ ಕುಮಾರಂ ಪುಟ್ಟುವಂ ನಿಶ್ಚಯಂ

ಎಂದು ಪತಿಯು ಕನಸಿನ ಫಲವನ್ನು ಬಿತ್ತರಿಸಲು, ಅಮೃತಮತಿಮಹಾದೇವಿ ಪರಮಹರ್ಷಮನೊಳಕೊಂಡಿರುತ್ತಿರುವಳು. ಮಹಾಪುರುಷರ ಜನನಪೂರ್ವದಲ್ಲಿ ಕೆಲವು ಮಂಗಲಕರವಾದ ಶುಭಚಿಹ್ನಗಳು ತೋರುವುದುಂಟು. ಮಹಾವೀರನೂ ಪರಮಶಿವಭಕ್ತನೂ ಆದ ರಾಜಶೇಖರನು ಗರ್ಭದಲ್ಲಿ ಮೂಡುವ ಮುನ್ನವೇ ತಾಯಿಯು ಇಂಥ ಕನಸು ಕಂಡಿರುವುದು ಸ್ವಾಭಾವಿಕ. ತೀರ್ಥಂಕರರ ಜನನದ ಮುನ್ನ ಅವರ ತಾಯಂದಿರು ಕಾಣುವ ಕನಸುಗಳು ಇಲ್ಲಿ ನಮ್ಮ ಸ್ಮರಣೆಗೆ ಬಾರದಿರವು. ಶಿವಮಂತ್ರದ ಕಳೆ ಶಿವಪ್ರೇರಣೆಯಿಂದ ಸುಮುಹೂರ್ತದಲ್ಲಿಯೇ ಅಮೃತಮತಿಯ ಪುಣ್ಯೋದರದಲ್ಲಿ ಬಂದು ನೆಲಸುವುದು. 'ಬಳೆದುದು ಗರ್ಭಂ' ಎಂದು ಕವಿ ಅದನ್ನು ಬಹು ಸೂಕ್ಷ್ಮವಾಗಿ ವರ್ಣಿಸುವನು. ಆದರೆ, ಇದು ಮಹಾಪುರುಷನನ್ನೊಳಗೊಂಡ ಗರ್ಭವೆಂಬುದನ್ನು ಆತನು ಮರೆತಿಲ್ಲ. ಅಮೃತಮತಿಮಹಾದೇವಿಗೆ ಮೃಡಲೀಲೆಯ ಕಥೆಗಳನ್ನು ಕೇಳುವ, ಶಿವಪುರಾಣವನ್ನು ಲಾಲಿಸುವ ಬಯಕೆಯಾಗುವುದು. ಲೌಕಿಕ ದೃಷ್ಟಿಗೆ ಸಹಜವಾದ ಬಯಕೆಗಳೊಂದಿಗೆ ಆಕೆಗೆ ಅಲೌಕಿಕವಾದ ಶಿವಭಕ್ತಿಯ ಬಯಕೆ ಆಯಿತೆಂದು ಬಣ್ಣಿಸುವಲ್ಲಿ ಕವಿಯ ಔಚಿತ್ಯಜ್ಞಾನ ಪ್ರಕಟವಾಗಿದೆ. ಗರ್ಭ ಧಾರಣೆಯ ಪ್ರಸಂಗ ಲೌಕಿಕ ಕಾವ್ಯಗಳಲ್ಲಿ ಶೃಂಗಾರವನ್ನು ಸೂಸಿ ಸೂಸಿ ಹರಿಸುವ ಪರಮ ಸಾಧನ. ಹಲವೆಡೆ ಅಶ್ಲೀಲತೆಯು ಮೈವೆತ್ತುನಿಲ್ಲುವ ಪ್ರಸಂಗವೂ ಉಂಟು. ಷಡಕ್ಷರಿಯು ಕೇವಲ ಶೃಂಗಾರಪ್ರಿಯನಲ್ಲ; ಆತನು ಭಕ್ತಕವಿಯೂ ನಿಜ. ಶೃಂಗಾರವು ಈ ಕಾವ್ಯದಲ್ಲಿ ಎಷ್ಟೇ ಪ್ರಧಾನವಾಗಿದ್ದರೂ ಅದು ಕೊನೆಗೆ ಭಕ್ತಿಯಲ್ಲಿ ಪರ್ಯವಸಾನ ಹೊಂದಬೇಕೆಂಬುದೇ ಕವಿಯ ಆಶಯ. ಅಂತೆಯೇ ಅಮೃತಮತಿಯ ಗರ್ಭಧಾರಣೆಯ ವರ್ಣನೆ ಒಂದು ಮಿತಿಯಲ್ಲಿಯೇ ಮುಕ್ತಾಯವಾಗುತ್ತದೆ. ರಾಜಶೇಖರನ ಜನನಕಾಲದಲ್ಲಿ ಈಶ್ವರಾರ್ಚಕರ ಬಲಗಣ್ಣು ಹಾರುವವು. ಕೈಲಾಸದಲ್ಲಿ

ಶಂಕರನು ನಲಿದಾಡುವನು; ಭೂರಮೆ ಉತ್ಸವಂಬಡೆವಳು; ಜನಾಳಿ ಕೇಳ್ದು ಗುಡಿಗಟ್ಟಿತ್ತು. ರಾಜಶೇಖರನು ಅಸಾಮಾನ್ಯ ವ್ಯಕ್ತಿಯೆಂಬ ಕಲ್ಪನೆಯನ್ನು ಕವಿಯು ನಮಗೆ ಮತ್ತೆಮತ್ತೆ ತಂದುಕೊಡುತ್ತಾನೆ. ಗುರುಗಳು ಬಂದು ಪಾದೋದಕವನ್ನು ಕೊಟ್ಟು ವಿಭೂತಿಯನ್ನು ಧರಿಸಿ ಲಿಂಗಧಾರಣಮಾಡುವರು.

ಮಂಗಳಾಕರ ಜೋ ಮನೋಹರ ಜೋ ಮಹೇಶ್ವರ ಜೋ ಮಹಾ
ಲಿಂಗಸಂಗತ ಜೋ ಮುದನ್ವಿತ ಜೋ ಮೃದುಸ್ಮಿತ ಜೋ ಜನೋ
ತ್ತುಂಗವಂದಿತ ಜೋ ಜಗನ್ನುತ ಜೋ ಜಯೋನ್ನತ ಜೋಯೆನು
ತ್ತ್ಂಗನಾಜನಮೆಯ್ದೆ ಪಾಡುತೆ ಜೋಗುಳಂ ಮಿಗೆ ತೂಗಿದರ್

ಎಂದು ಅಂಗನೆಯರು ಜೋಗುಳಹಾಡಿ ಶಿಶುವನ್ನು ತೊಟ್ಟಿಲಲ್ಲಿ ಪಟ್ಟಿರಿಸಿ ತೂಗುವರು. ಆತನು ಪಂಚಾಕ್ಷರೀಮಂತ್ರ ಸಂಭೂತನಾದುದರಿಂದ ಮಂತ್ರಲಕ್ಷ್ಯನೆಂದೂ ಅಗ್ಗದ ಕೀರ್ತಿವೆತ್ತೆಸೆವನಾದುದರಿಂದ ರಾಜಶೇಖರನೆಂದೂ ಗುರುಗಳು ನಾಮಕರಣ ಮಾಡುವರು. ರಾಜಶೇಖರನ ಬಾಲಲೀಲೆ ಮನೋಜ್ಞಮಾಗಿಯೇ ನಡೆಯುವುದು. ಅರಿನೃಪರ ಸಿರಿಯ ಸೆರೆಯನ್ನು ಹೀಗೆ ಹಿಡಿವನೆಂಬಂತೆ ಸುಕುಮಾರನು ಕರಾಂಗು-ಲಿಯಿಂದ ತರುಣಿಯರ ಅಳಕವನ್ನು ಬರಸೆಳೆವನು; ಶಿವನ ಜೆಡೆಮುಡಿಯ ಶಶಿಕಳೆಯೇ ರಾಜಶೇಖರನ ರೂಪುದಳೆದಂತೆ ಬಾಲಕನು ಶೋಭಿಸುವನು. ಹೀಗೆ ಕವಿಯ ಪ್ರಬಲಕಲ್ಪನಾಶಕ್ತಿಯಿಂದ ಉತ್ಕೃಷ್ಟವಾದ ಉತ್ಪ್ರೇಕ್ಷೆಗಳು ಅಂಕುರಿಸಿ ಬಾಲಲೀಲೆಯ ವರ್ಣನೆಗೆ ಕಳೆ ತಂದುಕೊಟ್ಟಿವೆ.

ರಾಜಶೇಖರಮಿತವಚನರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಯೌವನದಲ್ಲಿ ಕಾಲಿಡುವರು. ನಡೆ, ನಗೆ ಮಾಂದ್ಯದಲ್ಲಿ ಪುಗುವುದು; ತೊಡೆ, ನುಡಿ ಕಡುನುಣ್ಪನಾನುವುದು; ಮನ, ಕಡೆಗಣ್‌ರಾಗಮೊಂದುವುದು—ಹೀಗೆ ರಾಜಶೇಖರ, ಮಿತವಚನರಲ್ಲಿ ಯೌವನಮಡಿಯಿಡುವುದು. ಅವರ ಯೌವನ ಕೇವಲ ದೈಹಿಕವಾದುದಲ್ಲ; ಜಾಣ್ಮೆ, ಜವ್ವನ, ಚೆಲ್ವು, ಸೊಬಗು, ಲೀಲೆ-ಉತ್ಸವ ಇವು ಅವರ ಯೌವ-ನೋದಯದಲ್ಲಿ ಮೈವೆತ್ತಿದ್ದುವೆಂದು ಕವಿ ಬಹು ಸ್ವಾರಸ್ಯವಾಗಿ ಬಣ್ಣಿಸುತ್ತಾನೆ. ಈ ಜವ್ವನದ ಜಾಡ್ಯಕ್ಕೆ ಶಿವಮಂತ್ರದ ಕಳೆಯೇ ಮರ್ದನ್ನುವಂತೆ ಸತ್ಯೇಂದ್ರಚೋಳನು ಅವರಿಗೆ ಶಿವದೀಕ್ಷೆಯನ್ನು ಮಾಡಿಸುವನು. ಚಿದ್ಘನಶಿವಾಚಾರ್ಯರು ಜ್ಞಾನದೃಷ್ಟಿಯಿಂದಲೂ ಭಕ್ತ್ಯತಿಶಯದಿಂದಲೂ ನನೆಕೊನೆವೋಗಿ ಪಂಚಾಕ್ಷರೀಮಂತ್ರವನ್ನುಪದೇಶಿಸಿ ಅದರ ಮಹಿಮೆಯನ್ನರುಹುವರು. ರಾಜಶೇಖರನು ಮಂತ್ರಪೂತನಾಗಿ ಶ್ರೀಗುರುವಿನ ಪಾದಕ್ಕೆ ನಮೋನಮೋಯೆಂದೆರಗಿ ಹೀಗೆ ಸ್ತುತಿಸುವನು :

ದುರಿತಾಬ್ಜಸುಧಾಕರ ಭೀ
ಕರಭವಬಂಧನತಮೋದಿವಾಕರ ಮಹಿಮಾ
ಕರ ವಿತತಕೃಪಾಕರ ಕೇ
ಕರ ಜಯ ಜಗತೀಜನೋತ್ತಮಸ್ತುತಿಪಾತ್ರಾ

ತನುವಂ ಮನವಂ ಘನಜೀ
ವನಮಂ ಪರಿಶುದ್ಧಗೊಳಿಸಿ ಶಿವಚಿತ್ಕಳೆ ಪಾ
ವನ ಪಂಚಾಕ್ಷರಮಂತ್ರಮ
ನನುಗೊಳಿಸಿದಿರಾರ್ಯಕುಲಕುಶೇಶಯಮಿಹಿರಾ

ನಿಗಮಾಂತ ಭೂಮಿಕಾಂತಃ
ಪ್ರಗತಿಶಿವಾದ್ವೈತಚಿನ್ಮಹಾನಿಧಿಯನಿದಂ
ವಿಗತಾಂಜನನಱಿದೆಮಗುಱಿ
ತೆಗೆದಿತ್ತುದು ಚಿತ್ರಮಲ್ತೆ ನೀಂ ಗುರುವರ್ಯಾ

ಎಂದು ವಿಪುಳತರಭಕ್ತಿಯಿಂ ವಿವಿಧಸ್ತುತಿಗಳಿಂ ಪೊಗಳ್ದು ಸಾಷ್ಟಾಂಗಪ್ರಣಾಮಂ-ಗೈದು ಪೂಜಿಸಿ ಪೂರ್ಣಮನೋರಥವನ್ನು ಪಡೆಯುವರು. ಯೌವನಾವಸ್ಥೆಯಲ್ಲಿ ಶಿವದೀಕ್ಷೆಯನ್ನು ಮಾಡಿಸುವುದು ಅವಾಸ್ತವವೆನಿಸಿದರೂ ಶಿವದೀಕ್ಷೆ ಇದೇ ಕಾಲಕ್ಕೆ ಅತ್ಯವಶ್ಯವೆಂಬ ಕವಿಯ ಪ್ರಜ್ಞಾತಿಶಯವನ್ನು ಆದು ಸೂಚಿಸುತ್ತದೆ. ಪ್ರಾಪ್ತ-ವಯಸ್ಕನೂ ಮಂತ್ರಪೂತನೂ ಆದ ರಾಜಶೇಖರನಿಗೆ ಯುವರಾಜಪಟ್ಟಗಟ್ಟಿ ಸತ್ಯೇಂದ್ರಚೋಳನು ಹೀಗೆ ಕಾಲವನ್ನು ಕಳೆಯುವನು:

ಶಿವಲಿಂಗಾಂಘ್ರಿಸಮರ್ಚನೈಕಸುಖದಿಂದೋರೊರ್ಮೆ ವಿಖ್ಯಾತಶಾಂ
ಭವಲೀಲಾಕಥನಪ್ರಸಂಗರಸದಿಂದೋರೊರ್ಮೆ ಮಾಹೇಶ್ವರ
ಪ್ರವಿರಾಜತ್ಪದಪದ್ಮಸೇವನದಿನಂದೋರೊರ್ಮೆ ಸತ್ಯೇಂದ್ರ ಭೂ
ಧವಬೃಂದಾರಕನಿಂತು ಪೊಳ್ತುಗಳೆದಂ ಸನ್ಮಾರ್ಗಸಾರೋದಯಂ

ಋತುವರ್ಣನೆ, ಬೇಟೆಯ ವರ್ಣನೆ—ಇವು ಎಲ್ಲ ಮಹಾಕಾವ್ಯಗಳಲ್ಲಿ ಬರುವು-ದುಂಟು. ವರ್ಣನಾಶೀಲವಾದ ಷಡಕ್ಷರಿಕವಿಯು ಈ ಸನ್ನಿವೇಶವನ್ನು ಸುದೀರ್ಘವಾಗಿ ಯೇ ಬಣ್ಣಿಸಿದ್ದಾನೆ. ತನ್ನ ಪೂರ್ವದ ಕಾವ್ಯಗಳಲ್ಲಿ ಬಂದ ವರ್ಣನೆಗಳನ್ನು ಇಕ್ಕಿ ಮೆಟ್ಟ ಬೇಕೆಂಬ ಆಶೆಯಿಂದ ಕವಿ ಈ ವರ್ಣನೆಗಳಿಗೆ ಕೈ ಹಾಕಿದಂತಿದೆ. ಪಶುಪಕ್ಷಿಗಳ ಸೂಕ್ಷ್ಮ ವಾದ ಹಾವಭಾವ, ಬೇಡಬೇಡಿತಿಯರ ವೇಷ-ಭೂಷಣ, ಉತ್ಸಾಹ, ರಭಸಕ್ಕೆ ಸಿಲುಕಿದ ಕಾಡಿನ ನೋಟ–ಇವನ್ನೆಲ್ಲ ಕವಿಯು ಸಂಪೂರ್ಣವಾಗಿ ವಿವರಿಸಿ ಇದಮಿತ್ಥಂ ಎನ್ನುವಂತೆ ಮಾಡಿಬಿಟ್ಟಿದ್ದಾನೆ.ಆತನು ವರ್ಣನೆಗೆ ಸೋತಿದ್ದಾನೆನ್ನುವ ಮಾತಂತೂ ಸರಿಯೇ.

ರಾಜಶೇಖರನು ಸಿಂಹಳದ ಮೇಲೆ ದಂಡೆತ್ತಿಹೋಗಿದ್ದಾನೆ. ಚತುರಂಗ ಸೇನೆಯ ವರ್ಣನೆ ಸಶಾಸ್ತ್ರೀಯವಾಗಿಯೂ ಆಡಂಬರಸಹಿತವಾಗಿಯೂ ಬಂದಿದೆ. ಆದರೆ, ಯುದ್ಧಧ ವರ್ಣನೆಯಲ್ಲಿ ಅಷ್ಟೊಂದು ಉತ್ಸಾಹವೇ ಕಾಣಲಾರದು. ಷಡಕ್ಷರಿ ದೇವನ ವೀರರಸದ ಪರಾಕಾಷ್ಠದೆಶೆಯನ್ನು ಕಾಣಬೇಕಾದರೆ ನಾವು ಆತನ ಶಬರ ಶಂಕರವಿಳಾಸದಲ್ಲಿ ಬರುವ ಕಿರಾತಾರ್ಜುನರ ಯುದ್ಧದ ವರ್ಣನೆಯನ್ನು ನೋಡ ಬೇಕಾಗುವುದು. ಅಲ್ಲಿರುವ ಉತ್ಸಾಹ, ಸೂಕ್ಷ್ಮನಿರೀಕ್ಷಣೆ, ವಾಸ್ತವವರ್ಣನೆ ಇಲ್ಲಿ ಅಷ್ಟೊಂದು ಕಂಡುಬರಲಾರವು. ಕವಿ ಸಾಂಪ್ರದಾಯಿಕವಾಗಿ ಅದನ್ನು ಹೇಳಿ ಮುಗಿಸಿ ದ್ದಾನೆ. ರಾಜಶೇಖರವಿಳಾಸದ ಹೃದಯವಡಗಿರುವುದು ಮುಂದಿನ ಸರ್ವಮಂಗಳಾ ಸಂದರ್ಶನಸನ್ನಿವೇಶದಲ್ಲಿ. ಸಿಂಹಳೇಂದ್ರನ ಮೇಲೆ ವಿಜಯ ಸಂಪಾದಿಸಿದ ರಾಜ ಶೇಖರನು ಅವನ ಬಿನ್ನಹದ ಮೇರೆಗೆ ರಾಜಬೀದಿಯಲ್ಲಿ ಬಿಜಯಂಗೈಯುತ್ತಿರು ವನು. ನೋಳ್ಪ ಕಾಮಿನೀಜನಮನದೊಳ್ ಮನೋಜನನ್ನು ಹುಟ್ಟಿಸುವ ರೂಪು ಲಾವಣ್ಯಗಳಿವೆ ರಾಜಶೇಖರನಿಗೆ. ಇಂತಹ ಸುಂದರನೂ ಸುಕುಮಾರನೂ ಆದ ದೊರೆಯು ಬರುತ್ತಿರುವಾಗ ಆತನನ್ನು ನೋಡುತ್ತಿರುವ ಪುರವಿಳಾಸಿನಿಯರ ವರ್ಣನೆ ಯನ್ನು ಎಷ್ಟು ಮನೋಜ್ಞವಾಗಿ ಮಾಡುತ್ತಾನೆ!

ಪಾಡುವ ಗೀತಮಂ ನಿಲಿಸಿ ವೀಣೆಯನಾಳಿಯ ಕೈಯೊಳಿತ್ತು ಮ
ತ್ತಾಡುವ ನೆತ್ತಮಂ ಬಿಸುಟಲಂಕೃತಿಯಂ ರಯದಿಂದೊಡರ್ಚಿ ಮೇಣ್
ನೋಡುವ ನೃತ್ಯಮಂ ತೊಲಗಿ ಕೇಳ್ವಿನಿಗಬ್ಬಮನೊತ್ತಿ ಬಂದವರ್
ನೋಡಿದರಾ ಕುಮಾರಕನನಾ ಪುರದಂಗನೆಯರ್ ವಿಳಾಸದಿಂ

ಸುಖಸಮೃದ್ಧಿಗೆ ತವರಾದ ಜನತೆಯ ಜೀವನದ ಸಾರವನ್ನೇ ಕರಿಯನ್ನು ಕನ್ನಡಿ ಯಲ್ಲಡಗಿಸುವಂತೆ ಕವಿಯು ಇಲ್ಲಿ ಚಿತ್ರಿಸಿದ್ದಾನೆ, ಈ ಚಿತ್ರದಲ್ಲಿ ಕವಿಯ ಅತ್ಯಂತ ಸೂಕ್ಷ್ಮನಿರೀಕ್ಷಣೆ, ಸಹಜನಿರೂಪಣೆ ಪ್ರಕಟವಾಗಿವೆ. ಇನ್ನೊಂದೆಡೆ ಓರ್ವ ಇಚ್ಛೆಗಾರ್ತಿ ಪೂತಮಾವಂ ಬಿಡದೇಱಿ ನೋಳ್ಪ ರತಿಯಂತಿರೆ ಸೌಧಮನೇರಿ ನೋಡುತ್ತಿರುವಳು. ಕವಿಗೆ ಮಾಮರ, ಸುಂದರವನಿತೆ ಇವೆರಡೂ ಅಷ್ಟೇ ಪ್ರಿಯಕರವಾಗಿವೆ. ಅಂತೆಯೇ ಸೌಧಮನೇರುವ ಇಚ್ಛೆಗಾರ್ತಿ ಆತನ ಕಣ್ಣಿಗೆ ಮಾಮರವನ್ನೇರುವ ರತಿಯಾಗಿಯೇ ಕಾಣಿಸುವಳು. ಶೃಂಗಾರದ ಈ ಮಂಗಲ ಸಮಯದಲ್ಲಿ ಕವಿ ಆ ಇಚ್ಛೆಗಾರ್ತಿಯನ್ನು ಕಾಮನ ಸಾಮಜಕ್ಕೆ ಹೋಲಿಸುವುದು ಬಹು ಸಹಜವಾಗಿದೆ. ಇನ್ನೊರ್ವ ಬೆಡಂಗಿ ವೀಣೆಯನ್ನು ನೆಱೆ ಪಿಡಿದೇಱಿ ವಾಣಿಯಂತೆ ಜಲಕ್ಕನೆ ನಿಂದು ರಾಜಕುಮಾರನನ್ನು ನೋಡುವಳು. ಮತ್ತೊರ್ವ ಆಖರ್ವ ಸಗರ್ವ ತಾರುಣ್ಯವತಿ ಹಸ್ತಾಬ್ಜವನ್ನು ಬಿಂಕ ದಿಂದ ತಿರುವುತ್ತ ನೋಡಿದಳಂತೆ. ಹೀಗೆ ಒಂದೇ ಎರಡೇ ಅನೇಕ ಸುಂದರ ಸ್ತ್ರೀಯರ ಸೂಕ್ಷ್ಮವಾದ ವರ್ಣನೆಗಳನ್ನು ತಂದೊಡ್ಡಿ ಕವಿ ಮುಂಬರುವ ಶೃಂಗಾರರಸ ಪ್ರವಾಹಕ್ಕೆ ತಕ್ಕ ಪಾತ್ರವನ್ನು ನಿರ್ಮಿಸುತ್ತಾನೆ. ಆ ಸಮಯದಲ್ಲಿ ಸಿಂಹಳೇಂದ್ರ-

ನಂತಃಪುರಸರೋವರಬಾಲಹಂಸಿ ಸರ್ವಮಂಗಳೆ ರತಿವಿಳಾಸವನ್ನು ತಳೆದು ಅತಿ ವಿನೋದದಿಂದ ಕೇಳೀವನದ ಕುಸುಮಮಂಟಪದಲ್ಲಿ ಸೌಂದರ್ಯಶಾರದೆಯೆಂಬ ಸಖಿಯ ಸಂಗೀತವನ್ನಾಲಿಸುತ್ತ ಕುಳಿತಿರುವಳು. ಶೃಂಗಾರ, ಗಾಂಭೀರ್ಯಗಳಿಗಾಗರ ವಾದ ಸರ್ವಮಂಗಳೆಯ ವ್ಯಕ್ತಿತ್ವದರ್ಶನವನ್ನು ಕವಿಯು ತನ್ನ ಬಿಗಿವಡೆದ ಪದ-ಪುಂಜಗಳಿಂದಲೇ ಮಾಡಿಸುತ್ತಾನೆ. ಆಳೀಜನದ ಮಾತನ್ನು ಕೇಳಿ ಸರ್ವಮಂಗಳೆಯು ಬರುತ್ತಿರುವ ದೃಶ್ಯ ಹೀಗೆ :

ಅರಗಿಳಿವಿಂಡು ತೊಂಡುಗೆಡೆವಂತಿರೆ ನುಣ್ಣುಡಿ ಸೋಗೆ ಸಾಗಿ ಸೈ
ವರಿವವೊಲೊಪ್ಪೆ ಸೋರ್ಮುಡಿ ತಳಿರ್ತೊಳಪಂತಿರೆ ಕೆಂದಳಂ ಕಳ
ಸ್ವರಮದು ಕೋಕಿಲಸ್ವರದವೋಲಿರೆ ಬಲ್ಮೊಲೆ ಪೂದೊಡಂಬೆಯಂ
ತಿರೆ ಬನಮೆಯ್ದುವಂತೆಸೆಯೆ ಪೆಣ್ಬಡೆ ಬಂದಳದೊಂದು ಬಿಂಕದಿಂ

ವನಲಕ್ಷ್ಮಿ ವಸಂತನನ್ನು ನೋಡಲೆಳಸುವಂತೆ ಸರ್ವಮಂಗಳೆಯು ರಾಜಶೇಖರನನ್ನು ನೋಡುತ್ತ—

ನೆಲೆವೊಲೆಗಳ್ಕದಕ್ಕದಿಸೆ ಸೂಸೆ ಬಳಲ್ಮುಡಿ ಪುಷ್ಪಬೃಂದಮಂ
ಕಲರುತಿ ಕಿಂಕಿಣೀಕಲಿತಕಾಂಚಿ ರವಂಗುಡೆ ನೂಪುರಂ ಪೊದ
ಳ್ದುಲಿಯೆ ನಿತಂಬಮುಂ ಜಡಿಯೆ ತೆಳ್ನಡು ಬಳ್ಕೆ ಸಖೀಕದಂಬಕಂ
ನಲಿದೊಡನೇಱೆ ನೀಱೆ ಬಿಡದೇಱಿದಳೊಯ್ಯನೆ ರಮ್ಯಹರ್ಮ್ಯಮಂ

ಈ ನಿರೀಕ್ಷಣೆಯಲ್ಲಿ ಕವಿಯ ಸುಸ್ಪಷ್ಟವಾದ ಚಿತ್ರಣಶಕ್ತಿ ವ್ಯಕ್ತವಾಗುತ್ತದೆ. ಸರ್ವ ಮಂಗಳೆ ರಾಜಕುಮಾರನನ್ನು ಅನೂನ ಸ್ನೇಹರಸಭರಿತಕಟಾಕ್ಷದಿಂದ ನಿರೀಕ್ಷಿಸುತ್ತಿ ರುವಲ್ಲಿ ರಾಜಕುಮಾರನ ಸುಂದರವಾದ ಮೂರ್ತಿ ಅವಳ ಕಂಗಳಲ್ಲಿ ಕಂಡರಿಸಿ ದಂತಿತ್ತು. ರಾಜಶೇಖರನೂ ಸಖೀಜನದ ಮಧ್ಯದಲ್ಲಿದ್ದು ತನ್ನನ್ನೇ ಅನಿಮಿಷದೃಷ್ಟಿ ಯಿಂದ ನಿರೀಕ್ಷಿಸುತ್ತಿರುವ ಸರ್ವಮಂಗಳೆಯನ್ನು ಕಂಡು ಅತಿ ವಿತತ ಕೌತುಕರಸ ಪ್ರವಾಹದೊಳ್ಮುಳುಂಗಿ ಮೋಹಿಸುವನು. "ಅಮರಾಂಗನೆಯಿವಳಲ್ಲದೊಡೆ ಎವೆ ಯಿಕ್ಕದ ದೀರ್ಘನಯನಮಸಾಧ್ಯ"ವೆಂದು ಭಾವಿಸುತ್ತಾನೆ. ಇದು ಬರಿ ಉತ್ಪ್ರೇಕ್ಷೆ ಯಲ್ಲ. ಪ್ರಥಮ ಸಂದರ್ಶನದಲ್ಲಿ ಪ್ರೇಮವಂಕುರಿಸುವಾಗ ಆ ಪ್ರೇಮಿಗಳಿಗೆ ಒಬ್ಬರಿ ಗೊಬ್ಬರು ಅನ್ಯಾದೃಶ್ಯರಾಗಿ ಕಾಣುತ್ತಾರೆ. ಇದು ಲೋಕದ ಸಹಜ ವ್ಯಾಪಾರ. ಕವಿಯು ಇದರ ಹಿನ್ನೆಲೆಯಲ್ಲಿಯೇ ಸರ್ವಮಂಗಳೆ, ರಾಜಶೇಖರರ ಪ್ರಣಯದರ್ಶನ ವನ್ನು ಮಾಡಿಸುತ್ತಾನೆ. ಅರಸನ ಹೃದಯಪಟಾಭ್ಯಂತರದಲ್ಲಿ ರಾಗರಸದಿಂದ ಸರ್ವಮಂಗಳೆಯ ರೂಪವನ್ನು ಬರೆದಂತಾಗುವದು. ಆತನ ಕಣ್ಬೇಟ ಗಡಿಗೆಟ್ಟಿತು; ಚಿತ್ತವೃತ್ತಿ ನಡೆಗೆಟ್ಟಿತು; ಧೃತಿವಲ್ಲಿ ಕುಡಿಗೆಟ್ಟಿತು. ಸಕೃದ್ದರ್ಶನದಲ್ಲಿ ಉಂಟಾಗುವ

ಪ್ರೇಮಿಗಳ ಮನೋವ್ಯಾಪಾರವನ್ನು ಇದಕ್ಕಿಂತ ಮಿಗಿಲಾಗಿ ಚಿತ್ರಿಸುವುದು ಸಾಧ್ಯವೇ?

ಈ ಲಲನೆಯ ಸೌಂದರ್ಯಂ
ಸೋಲಿಸಿದುದು ಗಡ ಮದೀಯ ಮನವನದಾರ್ಗಂ
ಸೋಲದುದಂ ಶಿವ ಶಿವ ಶಶಿ
ಮೌಲಿಯ ಮಾಯೆಯನದಾರೊ ಮೀಱಲ್ಬಲ್ಲರ್

ರಾಜಶೇಖರನಿಗೆ ತನ್ನ ಮನಃಸ್ಥೈರ್ಯದ ಅರಿವಿದೆ. ಆದರೂ ಅದು ಈಗ ಸರ್ವಮಂಗಳೆಯ ಸೌಂದರ್ಯಕ್ಕೆ ಸೋತು ಶಿಥಿಲವಾಗಿದೆ. ಈಗ ಅವನಿಗೆ "ಶಿವ ಶಿವಾ ಶಶಿಮೌಲಿಯ ಮಾಯೆಯನದಾರೊ ಮೀರಲ್ಬಲ್ಲರ್" ಎಂದು ಉದ್ಗಾರ ತೆಗೆಯುವುದೊಂದೇ ದಾರಿ ಉಳಿದಿದೆ. ಆದರೂ ಈತನು ಧೀರೋದಾತ್ತ ಸಾರ್ವಭೌಮ. ಚಲ್ಲಿದ ಕರಣಂಗಳನ್ನು ಮೆಲ್ಲನೆ ಸಂತೈಸಿಕೊಂಡು ಮುಂದೆ ಸಾಗುತ್ತಾನೆ. ರಾಜಕುಮಾರನು ಸರ್ವಮಂಗಳೆಯ ನಯನಪಥವನ್ನು ಮೀರಿ ಆಚೆಗೆ ಹೋದೊಡನೆ—

ಪಡಿದೆಱೆದಂತೆ ಪಾರಿತೆರ್ದೆ ಜುಮ್ಮನೆ ಮೈನವಿರುರ್ವಿ ಮೂಡಿದ
ತ್ತಿಡಿಕಿಱಿದಿರ್ದ ಬಲ್ಮೊಲೆಗಳಿಟ್ಟೆಡೆಯೊಳ್ಬೆಮರುಣ್ಮಿದತ್ತು ಮೇಣ್
ದಡದಡಿಸಿತ್ತು ನುಣ್ದೊಡೆ ರದಚ್ಛದಮಿರ್ಪುಡುಗಿತ್ತು ಸುಯ್ಗೆ ಕಾ
ಯ್ಪುಡದುರ್ದೊಡಲ್ಗೆ ಮೆಲ್ಲನಡಿಯಿಟ್ಟುದು ಮೂರ್ಛೆ ಮೃಗಾಯತಾಕ್ಷಿಯಾ

ರಾಜಶೇಖರನ ನೋಟ ಮರೆಯಾದೊಡನೆಯೇ ಸರ್ವಮಂಗಳೆಗೆ ಮೂರ್ಛೆ ಬಂದಿತೆಂದು ಹೇಳುವಲ್ಲಿ ಸ್ತ್ರೀತ್ವದ ಸಹಜದರ್ಶನವಿದೆ. ರಾಜಶೇಖರನ ಮಾಟದ ನೋಟವೆಂಬ ಸೂತ್ರವೇ ಸರ್ವಮಂಗಳೆಯ ಜೀವಸೂತ್ರ. ಈಗ ಅವಳು ಸೂತ್ರತಪ್ಪಿದ ಗೊಂಬೆಯಾಗಿದ್ದಳು. ಪ್ರೇಮಸಂದರ್ಶನದಲ್ಲಿ ನೇತ್ರವ್ಯಾಪಾರ ಸ್ತ್ರೀಯರಿಗೆ, ಹೃದಯವ್ಯಾಪಾರ ಪುರುಷನಿಗೆ ಮುಖ್ಯಶಕ್ತಿಸ್ಥಾನಗಳೆಂಬುದನ್ನು ಕವಿಯು ಅರಿತಿದ್ದಾನೆ. ಹೀಗೆ ಕವಿ ಪ್ರೇಮದ ಸೂಕ್ಷ್ಮವ್ಯಾಪಾರಗಳನ್ನು ಚಿತ್ರಿಸುತ್ತಾನೆ. ರಾಜಶೇಖರ, ಸರ್ವಮಂಗಳೆಯರ ವಿವಾಹವೂ ನಿಶ್ಚಿತವಾಗುತ್ತದೆ. ಸಂಭ್ರಮದ ಮದುವೆಯನ್ನು ಕವಿಯು ಬಹು ಸಂಭ್ರಮದಿಂದ ವರ್ಣಿಸುತ್ತಾನೆ. ಈ ವರ್ಣನೆಯಲ್ಲಿ ತತ್ಕಾಲೀನ ಸಾಮಾಜಿಕ ಚಿತ್ರವನ್ನು ನಾವು ಸುಸ್ಪಷ್ಟವಾಗಿ ಕಾಣಬಹುದು. ಶೃಂಗಾರದ ಅನಂತ ಅವಸ್ಥೆಗಳನ್ನು ಪದರು ಪದರುಗಳಾಗಿ ಹಿಂಜಿಹಿಂಜಿ ಕವಿ ಬಹುಮನೋಜ್ಞವಾಗುವಂತೆ ವರ್ಣಿಸಿದ್ದಾನೆ. ನೂತನ ದಂಪತಿಗಳ ಸರಸ ಸಮಾಗಮ, ವನವಿಹಾರ, ವಸಂತಾಗಮನ, ದಿಗ್ವಿಜಯ, ಪುಷ್ಪಾಪಚಯ, ಚಂದ್ರೋದಯ, ರಾಜಶೇಖರ ನರೇಂದ್ರನ ಆಸ್ಥಾನದ ನೃತ್ಯ ಮೊದಲಾದ ವಿವಿಧ ಸನ್ನಿವೇಶಗಳಲ್ಲಿ

ಶೃಂಗಾರರಸ ಪ್ರವಾಹವು ಭೋರ್ಗರೆದು ಹರಿವುದು. ಇದು ಶೃಂಗಾರದ ಒಂದು ಮುಖ; ಇದರ ಇನ್ನೊಂದು ಮುಖವನ್ನು ಕವಿಯು ವೇಶ್ಯಾವಾಟದ ವರ್ಣನೆಯಲ್ಲಿ ಬಹು ಸುಂದರವಾಗಿ ಚಿತ್ರಿಸಿದ್ದಾನೆ. ಅಲ್ಲಿಯೂ ಕವಿಯ ಜಾಣ್ಮೆ, ನಿರೀಕ್ಷಣೆ, ನಿರೂಪಣೆಗಳ ಆಧಿಕ್ಯವನ್ನು ಕಾಣಬಹುದು. ಆ ರಸಪ್ರವಾಹಕ್ಕೆ ಮಾನವನನ್ನು ಮೈಮರೆಸಿ, ಮನಸ್ಸನ್ನು ಸೆಳೆದು, ಅತುಲವಾದ ಆನಂದವನ್ನೀಯುವ ಅದ್ಭುತಶಕ್ತಿಯಿದೆ. ಅಲ್ಲಿ ಬಿಡಿಬಿಡಿಯಲ್ಲಿ ಕಾಣುವ ಸೂಕ್ಷ್ಮತೆ, ಇಡಿಯಲ್ಲಿ ಕಾಣುವ ಭವ್ಯತೆ, ಕಲ್ಪನೆಯ ಲೀಲಾಜಾಲ, ಮಾನವಸ್ವಭಾವದ ಸೂಕ್ಷ್ಮಾವಲೋಕನ, ಭಾವಗಳ ನೆಗೆತ ಜಿಗಿತ, ಭಾಷೆಯ ಬೆಡಗು ಇವೇ ಮೊದಲಾದವುಗಳನ್ನು ಅಪರಿಮಿತವಾಗಿ ಕಾಣಬಹುದು. ಮಹಾಕವಿಯಾದವನು ಮಾಡಬೇಕಾದ ಕಾರ್ಯ ಇದೇ ಅಲ್ಲವೇ ?

ರಾಜಶೇಖರವಿಳಾಸದಲ್ಲಿ ಶೃಂಗಾರದ ಲತೆಗೆ ಕರುಣೆಯೇ ನೀರು; ಭಕ್ತಿಯೇ ಕುಸುಮ. ಕಾವ್ಯದ ಬಹುಭಾಗವನ್ನು ವ್ಯಾಪಿಸಿದ ರಾಜಶೇಖರನ ಶೃಂಗಾರದ ಲೀಲೆಯೇ ಆ ಹೂಬಳ್ಳಿ. ಆತನ ತುರಗಖುರಪುಟಕ್ಕೆ ಸಿಲುಕಿ, ತಲೆ ಕತ್ತರಿಸಿ ಶಂಕರಕುಮಾರನು ಮಡಿಯಲು ತಾಯಿ ತಿರುಕೊಳವಿನಾಚಿಯು ತನ್ನ ಕಣ್ಣೀರನ್ನೇ ಪ್ರವಾಹವಾಗಿ ಹರಿಸಿ ಆ ಬಳ್ಳಿಗೆ ಎರೆದಿರುವಳು. ಸತ್ಯನಿಷ್ಠೆಯಿಂದ ಭಕ್ತ್ಯುದ್ರೇಕದಿಂದ ಶಿವನಿಗರ್ಪಿತವಾದ ಶಿರಗಳೇ ಈ ಬಳ್ಳಿಗೆ ಅರಳಿದ ಪುಷ್ಪಗಳು.

ತಿರುಕೊಳವಿನಾಚಿಯ ತಾಯಿಗರುಳು ಸಮಸ್ತಸೃಷ್ಟಿಯನ್ನೇ ಅಲುಗಿಸಬಲ್ಲುದು. ಮಗುವಿನ ತಲೆಯನ್ನು ಕೈಯಲ್ಲಿ ಹಿಡಿದುಕೊಂಡು ಅವಳು—

"ಎಳಗಿಳಿಯಂ ಕೊರಲ್ಮುಱಿದು ಮೋದಿದರಾರ್ ಮಱಿಯಂಚೆಯಂ ಭಯಂ
ಗೊಳಿಸುತೆಱಂಕೆಯಂ ಪರಿದು ಪೊಯ್ದವರಾರ್"

ಎಂದು ಬಸಿರಂ ಪೊಸೆದು ದೆಸೆದೆಸೆಗೆ ಬಾಯ್ವಿಟ್ಟು, ಮೊರೆಯಿಟ್ಟು ಮಮ್ಮಲ ಮಱುಗುವಳು. ಮೊಗದಲ್ಲಿ ಮುಸುಕಿದ ಧೂಳಿಯನ್ನು ಮೇಲುವದಿಂದ ತಾಯಿ ಒಯ್ಯನೆ ಒರಸುತ್ತಾಳೆ. ಮಗುವಿಗೆ ನೋವಾಗಬಾರದೆಂಬ ಭಾವನೆ ತಾಯಿಗೆ ಇನ್ನೂ ಇದೆ.

ಮುನ್ನಱುವರಳಿದಳಲನೆಲೆ
ನಿನ್ನಂ ನೆಱೆ ನೋಡಿ ಮಗನೆ ಮಱೆದಿರ್ದೆಂ ಪೇಳ್
ಇನ್ನಾರಿಂದಂ ಮಱೆದಪೆ
ನೆನ್ನೊಳುಸಿರ್ ಸುಮ್ಮನಿರದಿರೆಲೆ ತನುಜಾತಾ

ಎಂದು ಅಳುವಲ್ಲಿ ವ್ಯಷ್ಟಿಯೊಡನೆ ಸಮಷ್ಟಿಯು ದನಿ ಬೆರೆಸುತ್ತದೆ. ತಿರುಕೊಳವಿನಾಚಿಯ ಆರುಜನ ಮಕ್ಕಳು ಮಡಿದಿದ್ದಾರೆ. ವ್ಯಾಪಾರಕ್ಕೆ ಹೋದ ಪತಿ, ಹಡಗು ಮುಳುಗಿ ಸಕಲ ಸಂಪತ್ತಿನೊಡನೆ ಜಲಸಮಾಧಿಹೊಂದಿದ್ದಾನೆ. ಪ್ರಾಣಕಳೆಯಂತೆ ತದನಂತರ ಜನಿಸಿದ ಮಗುವನ್ನು ನೋಡಿಯೇ ಕಾಲಕಳೆಯುತ್ತಿರುತ್ತಾಳೆ.

'ಮುನ್ನಱುವರಳಿದಳಲಂ ಎಲೆ ಮಗನೆ ನಿನ್ನಂ ನೆಱೆ ನೋಡಿ ಮಱೆದಿರ್ದೆಂ' ಎಂದು ತಾಯಿ ಹೇಳುವಲ್ಲಿ ಮಕ್ಕಳನ್ನು ಕಳೆದುಕೊಂಡ ತಾಯಿಯ ಕರುಳಿನ ವೇದನೆ ಹಾಗೂ ಉಳಿದವರನ್ನು ನೋಡಿ ಜೀವನವನ್ನು ಸಾಗಿಸುವ ಸಾಂತ್ವನ ಇವು ಗಳ ಕಲ್ಪನೆಯಾಗುತ್ತದೆ. ಮಗು ಗಳಗಳನೆ ಬೆಳೆದು, ಧನವನ್ನು ಗಳಿಸಿ, ಚರಾರ್ಚ ನೆಯನೆಸಗಿ ಉಜ್ವಲಸುಖವನೀವನೆಂದು ತಾಯಿಯ ಹೆಬ್ಬಯಕೆ; ಆದರೆ, ಆತನು ತುರಗಖುರಹತಿಯಿಂದ ಮಡಿದು ಬಿದ್ದಿರುತ್ತಾನೆ. ಕಡೆಯಿಲ್ಲದ ದುಃಖಸಾಗರ ದಲ್ಲಿ ಮುಳುಗಿದ ತಿರುಕೊಳವಿನಾಚಿಯ ಮನಸ್ಸಿಗೆ ಈಗ ನಿಲುಗಡೆಯೆಲ್ಲಿಂದ ಬರ ಬೇಕು ? ಆಕೆಯ ಮನದಲ್ಲಿ ಭಾವನೆಯ ತರಂಗಗಳು ಒಂದರ ಮೇಲೊಂದು ಎದ್ದು ನಿಲ್ಲುತ್ತವೆ. ಮುಂದಿನ ಆಸೆಯನ್ನು ನೆನೆಯುವಷ್ಟರಲ್ಲಿಯೇ—

ಕೊರಲಂ ಮೆಟ್ಟುವ ಪದದೊಳ್
ತುರಗಂ ಕಂಗೆಟ್ಟು ಜನನಿಯೆಂದೆನ್ನಂ ನೀಂ
ಕರೆದೆಯೊ ಮಱೆದೆಯೊ ದೋಷಾ
ಕರೆಯೆಂದೇಂ ತೊಱೆದೆಯೋ ತನೂಜನೆ ಪೇಳೈ

ಎಂದು ಕೇಳುವಲ್ಲಿ ತಾಯಿಗೆ ಮಗು ಕರೆದುದರ ನೆನಪಾಗುತ್ತದೆ. ಮರುಕ್ಷಣ ದಲ್ಲಿಯೇ ಅವಳಿಗೆ ತನ್ನ ಮಗನು ಜೀವಂತನಾಗಿರುವನೆಂದು ಭಾಸವಾಗುತ್ತದೆ.

ಪಸಿದೆಯೆಲೆ ಕಂದ ಬತ್ತಿತು
ಬಸಿರಿದು ಕಳೆಗುಂದಿತಾನನಂ ಕಣ್ಬೊಗರ್ಗಳ್
ಮಸುಳ್ದುವುಣಲ್ಬಡೆಯದೆ ಮಿಗೆ
ಬಸವಳಿದಿಂತಿರ್ಪುದುಚಿತವೇ ಸುಕುಮಾರಾ

ಎಂದು ಕೇಳುತ್ತಾಳೆ. 'ಪಸಿದೆಯೆಲೆ ಕಂದ' ಎಂದು ಕೇಳುವಲ್ಲಿ ಎಷ್ಟು ಸಹಜತೆ ಯಿದೆ ? ಮಕ್ಕಳಿಗೆ ಉಣಿಸುವುದು ತಿನಿಸುವುದು, ಅವರ ಆಟಪಾಟಗಳನ್ನು ನೋಡುವುದು ಇವೆಲ್ಲವೂ ತಾಯಿಗೆ ಹಿಗ್ಗು. ಸರಿವರೆಯದ ಮಕ್ಕಳು ಬಂದು ಶಂಕರನೆಲ್ಲಿದನು ಎಂದು ಬೆಸಗೊಂಡರೆ ಅರಸನ ಹಯದಿಂದ ಮಡಿದನೆಂದು ಪೇಳಲೇ ? ಎಂದು ತಾಯಿ ಪ್ರಶ್ನೆಮಾಡುತ್ತಾಳೆ. ಹೃದಯದ ಅಂತರಾಳದಿಂದ ಪುಟನೆಗೆದು ಗಗನವನ್ನು ಮುಟ್ಟುವ ಇಂಥ ಭಾವನೆಗಳು ಒಂದರ ಮೇಲೆ ಒಂದು ಬಂದು ತಾಯಿಯ ಮನವನ್ನು ಮುತ್ತಿ ಮುಸುಕುತ್ತವೆ. ಮಗನು ಆಡಿದ ಎಡೆ ಗಳನ್ನು, ಆತನ ಮಲಗಿದ ಹಾಸಿಗೆಯನ್ನು, ಉಂಡ ತಾಣವನ್ನು 'ಇನ್ನಾನೆಂತೀಕ್ಷಿಸುವೆ ನೆಂತು ಸೈರಿಪೆನಕಟಾ' ಎಂದು ನುಡಿವಲ್ಲಿ ಕವಿ, ತಾಯಿಯ ಕರುಳನ್ನೇ ಎತ್ತಿ ಕಾವ್ಯದಲ್ಲಿಟ್ಟಂತಿದೆ. ಏನು ಭಾವನೆ ! ಏನು ಶಕ್ತಿ ಈ ಕಾವ್ಯಕ್ಕೆ!! ಕಲ್ಲು ಸಹಿತ

ಕರಗಿ ನೀರಾಗಬಲ್ಲುದೆಂದರೆ ಮಾನವರ ಪಾಡೇನು ? ತಿರುಕೊಳವಿನಾಚಿಯ ಪ್ರಳಾಪದ ಸನ್ನಿವೇಶ ಕನ್ನಡಕಾವ್ಯಪ್ರಪಂಚದಲ್ಲಿಯೇ ಮಿಗಿಲಾದುದು. ಇಲ್ಲಿ ಹರಿಸಿರುವ ಕರುಣರಸ 'ಏಕೋ ರಸಃ ಕರುಣ ಏವ' ಎಂಬ ಭವಭೂತಿಯ ಮಾತನ್ನು ನೆನಪಿಗೆ ತಂದುಕೊಡುತ್ತದೆ. ಅಂತೆಯೇ ಶೃಂಗಾರದ ಬಳ್ಳಿಗೆ ಈ ಕರುಣರಸದ ನೀರೆರೆಯಲು ಅದರ ಸ್ವರೂಪವೇ ಬೇರೆಯಾಗುತ್ತದೆ. ಈ ಕರುಣದ ಪರಿಣಾಮವಾಗಿಯೇ ಮಾನವತೆಯ ಮಂದಾರ ಪುಷ್ಪಗಳರಳಿದಂತೆ ಏಳು ತಲೆಗಳು ಅರಳಿ ನಿಲ್ಲುತ್ತವೆ.

ರಾಜಶೇಖರವಿಳಾಸದ ಕೊನೆಯ ದೃಶ್ಯ ಉಗ್ರವಾಗಿದೆ, ಭವ್ಯವಾಗಿದೆ; ಕೊನೆಗೆ ಮಂಗಳಕರವೂ ಆಗಿದೆ. ಈ ದೃಶ್ಯದಲ್ಲಿ ಲೌಕಿಕ, ಪಾರಮಾರ್ಥಿಕ ಸ್ಥಿತಿಗಳೆರಡರ ತೂಕವೂ ನಡೆದಿದೆ. ಕೊನೆಗೆ ಲೌಕಿಕವು ಪಾರಮಾರ್ಥದಲ್ಲಿ ಬೆರಸಿ ಬೇರಿಲ್ಲದಂತಾಗಿದೆ. ಒಂದು ಕಡೆಗೆ ತಿರುಕೊಳವಿನಾಚಿ ಮಗುವನ್ನು ಕಳೆದುಕೊಂಡು ದೆಸೆದೆಸೆಗೆ ಬಾಯ್ಬಿಡುತ್ತ ಭೋರ್ಗರೆದು ಅಳುತ್ತಿದ್ದರೆ, ಇನ್ನೊಂದೆಡೆ ವಧಸ್ಥಾನಕ್ಕೆ ಹೋಗುವದಕ್ಕೆ ಸಿದ್ಧನಾದ ಮಗನನ್ನು ಅಮೃತಮತಿಮಹಾದೇವಿ ಸಂತೋಷದಿಂದ ಹರಸುತ್ತಾಳೆ. ಅಲ್ಲಿ ಅಳುವೇಕೆ, ಇಲ್ಲಿ ಆನಂದವೇಕೆ? ತಿರುಕೊಳವಿನಾಚಿ, ಅಮೃತಮತಿಮಹಾದೇವಿ ಈ ತಾಯಂದಿರಿಬ್ಬರು ನಿಂತ ನಿಲವುಗಳು ಬೇರೆ ಬೇರೆ. ತಿರುಕೊಳವಿನಾಚಿ ಇರುವುದು ಲೌಕಿಕಭೂಮಿಕೆಯಲ್ಲಿ; ಅಮೃತಮತಿಮಹಾದೇವಿ ನಿಂತಿರುವುದು ಪಾರಲೌಕಿಕದ ಭೂಮಿಕೆಯಲ್ಲಿ. ಜೀವನದುದ್ದಕ್ಕೂ ಲಿಂಗಪೂಜೆಯಲ್ಲಿ ನಿರತರಾಗಿ ತನು ಮನ ಧನಗಳನ್ನು ಗುರುಸೇವೆ, ಲಿಂಗಪೂಜೆಗಳಲ್ಲಿ ಸವೆಸಿ ಜೀವನವನ್ನೇ ಒಂದು ಪರಮ ತಪಸ್ಸನ್ನಾಗಿ ಆಚರಿಸಿದ ಸತ್ಯೇಂದ್ರಚೋಳ, ಅಮೃತಮತಿಯರ ಭಕ್ತಿ ಬಲಿದು ಈಗ ನಿಷ್ಠೆಯಾಗಿದೆ. ಇಂತಹ ನಿಷ್ಠೆಯಲ್ಲಿ ಭಕ್ತರು ಪರಮಾತ್ಮನಿಗೆ ಸರ್ವಸ್ವವನ್ನೂ ಅರ್ಪಿಸುತ್ತಾರೆ; ಅರ್ಪಿಸಿದಷ್ಟು ಅವರಿಗೆ ಆನಂದ. ಹೀಗೆ ಅರ್ಪಣ ಮಾಡುವ ವಸ್ತು ತಮ್ಮ ತನುವಾದರೇನು, ಮನವಾದರೇನು ? ಮಕ್ಕಳಾದರೇನು, ಹೆಂಡರಾದರೇನು ? ಅವರದಾವುದನ್ನೂ ಲೆಕ್ಕಿಸರು. "ಅರ್ಥವ ಸನರ್ಥವ ಮಾಡಿ ಕೋಲಾಹಲಂಗೆಯ್ಯುತಿರಲಿ, ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿಯುತಿರಲಿ, ಮುಟ್ಟಿದ ಸ್ತ್ರೀಯನಭಿಮಾನಗೊಂಡು ನೆರೆವುತಿರಲಿ, ಮತ್ತೆಯೂ ಲಿಂಗಾರಾಧನೆ ಮಾಡುವೆ, ಮತ್ತೆಯೂ ಜಂಗಮಾರಾಧನೆ ಮಾಡುವೆ, ಪ್ರಸಾದಕ್ಕೆ ತಪ್ಪೆ. ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದಡೆ ನೀನಂದೇ ಮೂಗಕೊಯ್ ಕೂಡಲ ಸಂಗಮದೇವಾ" ಎಂದು ಬಸವಣ್ಣನವರು ಹೇಳಿದುದು ಇಂತಹ ನಿಷ್ಠೆಯ ಅವಸ್ಥೆಯಲ್ಲಿ. ತಮಿಳುನಾಡಿನ ಅನೇಕ ಪುರಾತನರೂ ಭಕ್ತರೂ ಹೀಗೆ ನಿಷ್ಠೆಯಿಂದ ನಡೆದು ಶಿವಕಾರುಣ್ಯವನ್ನು ಪಡೆದುದುಂಟು. ಮಕ್ಕಳ ಶಿರವನ್ನು ಕೊರೆದು ಜಂಗಮರೂಪದಲ್ಲಿ ಬಂದ ಶಿವನಿಗೆ ಉಣಬಡಿಸಿದವರುಂಟು. ತಮಿಳುನಾಡಿನ ಭಕ್ತಿ ಬಹು ಉಗ್ರವಾದುದು. ಪತಿಮೋಹಿ, ರಾಜಶೇಖರ, ಸಂದಾಯಿ,

ತಿರುಕೊಳಪಿನಾಚಿ, ಸತ್ಯೇಂದ್ರಚೋಳ, ಮಿತವಚನ ಇವರೆಲ್ಲರೂ ತಮ್ಮ ತಮ್ಮ ಶಿರ ಹರಿದು ಪರಮಾತ್ಮನಿಗೆ ಅರ್ಪಿಸುವಲ್ಲಿ ತೋರುವ ಭಕ್ತಿಯ ಆವೇಶವನ್ನು ಈ ಹಿನ್ನಲೆಯಲ್ಲಿ ನೋಡಬೇಕು ! ಆ ಜೀವನಕ್ಕೆ ಅದು ಸಹಜವಾಗಿಯೇ ಕಾಣುತ್ತದೆ. ಈ ದೃಶ್ಯ ಭವ್ಯವಾಗಿದೆ, ನಾಟಕೀಯವಾಗಿದೆ. ಕೊನೆಗೆ ಪರಮಾತ್ಮನ ಸಂದರ್ಶನವಾಗಿ ಎಲ್ಲರ ಪ್ರಾಣೋಜ್ಜೀವನವಾಗುತ್ತದೆ, ಎಲ್ಲವೂ ಮಂಗಲಕರವಾಗುತ್ತದೆ. ಹದಿನಾಲ್ಕು ಆಶ್ವಾಸಗಳ ರಾಜಶೇಖರವಿಳಾಸವೆಂಬ ಮಹಾಕಾವ್ಯಕ್ಕೆ ಕವಿ ಷಡಕ್ಷರಿಯು ಮಂಗಲ ವನ್ನು ಮಾಡುತ್ತಾನೆ. ಆತನು ಹರಿಸಿದ ರಸಪ್ರವಾಹದಲ್ಲಿ ಮಿಂದುಬಂದರೆ ಪುನರ್ಜನ್ಮ ವಿಲ್ಲವೆನ್ನುವಷ್ಟು ಪರಿಶುದ್ಧನಾಗುತ್ತಾನೆ ಸಹೃದಯ. 'ರಸೋ ವೈ ಸಃ' ಎಂಬ ಮಂತ್ರವನ್ನು ಕವಿ ಪಂಚಾಕ್ಷರೀ ಮಂತ್ರಮಹಿಮೆಯನ್ನು ಬೀರುತ್ತಲೇ ಸಾಗುತ್ತಾನೆ. ಅಂತೆಯೇ ಈ ಕಾವ್ಯದಲ್ಲಿ ಎಡೆಯೆಡೆಯಲ್ಲಿ ಹರಿಯುವ ವಿವಿಧ ರಸಗಳ ನಡುವೆ ಕವಿಯು ಭಕ್ತಿರಸವನ್ನು ಮರೆಯದೆ ಹರಿಸಿ ಆ ರಸಗಳಿಗೆ ಶಿವದೀಕ್ಷೆಯನ್ನೆಸಗು ತ್ತಾನೆ. ರಾಜಶೇಖರನ ಲಿಂಗಾರ್ಚನೆ, ಶಿವಸ್ತೋತ್ರ ಇವು ಮೇಲಿಂದ ಮೇಲೆ ಬರು ವುದು ಈ ಕಾರಣಕ್ಕಾಗಿ. ಒಟ್ಟಿನಲ್ಲಿ ರಾಜಶೇಖರವಿಳಾಸದ ಘನತೆಯನ್ನು ಅರಿಯ ಬೇಕಾದರೆ, ಅಲ್ಲಿ ಹರಿದಿರುವ ರಸಪ್ರವಾಹವನ್ನು ಅವಶ್ಯವಾಗಿ ಅವಲೋಕಿಸಬೇಕು.

ರಾಜಶೇಖರವಿಳಾಸದಲ್ಲಿ ಪಾತ್ರಗಳೆದುರು ಜೀವನದ ಸಮಸ್ಯೆಗಳು ಏಳುತ್ತವೆ; ಏಳುವಷ್ಟರಲ್ಲಿಯೇ ಅವು ಗುರುಕೃಪೆಯಿಂದಲೋ ಹರಕೃಪೆಯಿಂದಲೋ ಪರಿಹಾರ ವಾಗುತ್ತವೆ. ಆದುದರಿಂದ ಈ ಕಾವ್ಯದಲ್ಲಿ ಸಮಸ್ಯೆಗಳ ಚಿತ್ರಣಕ್ಕೆ, ವಿವರಣಕ್ಕೆ ಹೆಚ್ಚು ಅವಕಾಶವಿಲ್ಲ. ಮಹಾಕವಿ ಷಡಕ್ಷರಿದೇವನ ಪಾತ್ರಪೋಷಣೆಯ ಶಕ್ತಿಯನ್ನ ರಿಯಬೇಕಾದರೆ ನಾವು ಶಬರಶಂಕರವಿಳಾಸ, ಬಸವರಾಜ (ವೃಷಭೇಂದ್ರ) ವಿಜಯ ಈ ಕಾವ್ಯಗಳನ್ನು ಅವಶ್ಯವಾಗಿ ನೋಡಬೇಕಾಗುವುದು. ಅಲ್ಲಿ ಕವಿಯು ಪ್ರಕಟ ಪಡಿಸಿರುವ ಪಾತ್ರಪೋಷಣೆಯ ಕಲಾಕೌಶಲ್ಯ, ಮನೋವಿಶ್ಲೇಷಣೆ, ಕಥನಕಲೆ—ವಿಶೇಷವಾಗಿ ಬಸವರಾಜ (ವೃಷಭೇಂದ್ರ) ವಿಜಯದಲ್ಲಿ—ಅದ್ಭುತವಾಗಿವೆ, ಅಪರಿ ಮಿತವಾಗಿವೆ.

ಕಥೆ, ಪಾತ್ರಪೋಷಣೆ, ರೀತಿ, ಪ್ರತಿಮೆ, ಶೈಲಿ ಮುಂತಾದ ಕಾವ್ಯಾಂಗಗಳು ಹೊರಮೈ ಮಾತ್ರ. ಕವಿಯ ನಿಜವಾದ ಸತ್ವವನ್ನು ಆತನ ದರ್ಶನದಲ್ಲಿ ಕಾಣಬೇಕು. ದರ್ಶನಶಕ್ತಿಯೇ ಮಹಾಕವಿಯ ಶಕ್ತಿಯನ್ನು ಅಳೆಯುವ ಅಳತೆಗೋಲು.

> "ಬರೆ ಬರೆದಂತದಂ ತೊಡೆದು ತೊಟ್ಟನೆ ನಿಟ್ಟಿಸಿ ಮೆಲ್ಲನೊಂದುಮಂ
> ಸರಸಪದಾರ್ಥಮಂ ತಡಕಿ ಕಾಣದೆ ಕಳ್ದು ಪರೋಕ್ತಯುಕ್ತಿಯಂ
> ವಿರಚಿಸುತಂತುಮಿಂತುಮಳಿಗಬ್ಬಮನಾಗಿಪ ...."

ಕವಿ ಷಡಕ್ಷರಿದೇವನಲ್ಲ.

ಪದಪದಕ್ಕೂ ಕಾವ್ಯದುದ್ದಕ್ಕೂ ರಾಶಿರಾಶಿಯಾಗಿ ಅವನ ದಿವ್ಯದರ್ಶನ ಪ್ರಕಟವಾಗುತ್ತದೆ. ಅಷ್ಟು ಜಾಗೃತನಾದ ಕವಿ ಷಡಕ್ಷರಿದೇವ. 'ಬಾಲಾಬ್ಜಿನೀಕಾಂತಸದ್ಯುತಿಯಂ ಪಾರ್ವತಿಯಂ', 'ಧರೆಯೊಳ್ಮೆಣ್ಪುಟ್ಟಿ ಪುಟ್ಟುತ್ತಿರುಳ್ವ ನರರ ಮೇಲೆ', 'ಇಂಗಡಲೊಡನಾಡಿಯೊ', 'ಆ ಕಥೆಯಂ ಕೃತಾರ್ಥಸುಮನೋಲತೆಯಂ', 'ತೂಗುತೆ ತೊನೆಯುತೆ ಬಾಗುತೆ ಬಳ್ಕುತೆ', 'ಗಳಗಳನಿಳಿದೊಳಪೊಕ್ಕು', 'ಬಡನಡು ಬಳ್ಕೆ' 'ನೆಲೆಮೊಲೆ ಕದಕ್ಕದಿಸೆ', 'ಶ್ರಾಂತ ಪಥಶ್ರಾಂತಪಾಂಥಸಂತಾನನಯನಪ್ರಾಂತಪ್ರತಾನಲಾವಣ್ಯರಸಪ್ರಪಾಶಾಲೆಯರಪ್ಪ ಬಾಲೆಯರ್', 'ಕಲಹಂಸೀಯಾನೆ', 'ಲತಾತನ್ವಂಗಿ ಕಲ್ಪದ್ರುಮಸಮನೃಪನೊಳ್ಕೂಡಿ ಬಾಳುತ್ತುಮಿರ್ದಳ್' 'ಸಿಂಹಳೇಂದ್ರನಂತಃಪುರಸರೋವರ ಬಾಲಹಂಸಿ', 'ಗಡಿಗೆಟ್ಟುದು ಕಣ್ಬೇಟಂ', 'ನಡೆಗೆಟ್ಟುದು ಚಿತ್ತವೃತ್ತಿ', 'ಧೃತಿವಲ್ಲಿ ಕುಡಿಗೆಟ್ಟುದು', 'ಮಾತನಾಡುವ ನಾಲಗೆ ಮುರುಂಟಿದುದು' 'ಸವಿಯ ಸಾಲಿಡುವಮರ್ದುನಗೆ' ಹೀಗೆ ಕಾವ್ಯದ ಮಹೋನ್ನತಸ್ಥಲಗಳನ್ನು ಪ್ರಕಟಿಸುವ ಪದವಿಶೇಷಗಳು, ವಾಕ್ಯವಿಶೇಷಗಳು, ಪದ್ಯವಿಶೇಷಗಳು ಒಂದೋ ಎರಡೋ, ನಿಜವಾಗಿಯೂ ಅಗಣಿತವಾಗಿ ಅಪರಿಮಿತವಾಗಿ ಈ ಕಾವ್ಯದಲ್ಲಿ ಬಂದಿರುವುದನ್ನು ಕಾಣಬಹುದು. ಕಾವ್ಯಸೌಂದರ್ಯವೇ ಮೈವೆತ್ತು ನಿಂತಂತಿದೆ ರಾಜಶೇಖರ ವಿಳಾಸ. ತಾರುಣ್ಯದಲ್ಲಿಯೇ ಕವಿ ಈ ಕಾವ್ಯವನ್ನು ಬರೆದಿದ್ದರೂ ಆತನ ಒಳಗಣ್ಣು ಸದಾ ತೆರೆದಿರುತ್ತದೆ. ವಯೋಮಾನಕ್ಕನುಸರಿಸಿ ಕವಿಯಲ್ಲಿ ನಿಯಂತ್ರಣಶಕ್ತಿ ಕಡಿಮೆಯಿರುವುದೂ ನಿಜ. ತತ್ಪರಿಣಾಮವಾಗಿ ವರ್ಣನೆಗಳು ಸುದೀರ್ಘವಾಗಿ ಸಾಗುತ್ತವೆ. ಆದರೆ, ಸೌಂದರ್ಯದ ಸಾಗರದಲ್ಲಿ ಈಸುವ ಕವಿಗೆ ಇದಾವುದರ ಪರವೆಯೂ ಇಲ್ಲದಾಗಿದೆ. ಸಹೃದಯನೂ ಆ ಸೌಂದರ್ಯದೇವತೆಯ ಸಾಕ್ಷಾತ್ಕಾರ ಮಾಡಿಕೊಂಡು ಪುನೀತನಾಗುತ್ತಾನೆ.

ಷಡಕ್ಷರಿದೇವನು ಬಹುಶ್ರುತನಾದ ಕವಿ. ಕನ್ನಡ, ಸಂಸ್ಕೃತ ಈ ಉಭಯ ಭಾಷೆಗಳ ಮೇಲೆ ಆತನಿಗೆ ಅಪಾರವಾದ ಪ್ರಭುತ್ವವಿದೆ. ಕನ್ನಡ, ಸಂಸ್ಕೃತ, ಪ್ರಾಕೃತ ಮುಂತಾದ ಭಾಷೆಗಳ ವಿಪುಲವಾದ ಶಬ್ದಸಂಪತ್ತಿಯನ್ನು ಪಡೆದ ಕೆಲವೇ ಕೆಲವು ಜನ ಕವಿಗಳಲ್ಲಿ ಷಡಕ್ಷರಿದೇವನೂ ಒಬ್ಬನು; ಅಗ್ರಗಣ್ಯನೆಂದರೂ ಸಲ್ಲುವುದು. ಆತನು ವಿವಿಧರಸ, ನಾನಾಭಾವಗಳಿಗನುಣವಾಗುವಂತೆ ತನ್ನ ಶೈಲಿಯನ್ನು ಅಳವಡಿಸಿಕೊಂಡಿದ್ದಾನೆ. ಲಾಲಿತ್ಯ, ಮಾಧುರ್ಯ, ಮಾರ್ದವ, ಅರ್ಥವ್ಯಕ್ತಿತ್ವ ಈ ಗುಣಗಳಿಗೆ ಷಡಕ್ಷರಿದೇವನ ಶೈಲಿ ಆದರ್ಶವಾಗಿದೆ. ವಿಪುಲವಾದ ಶಬ್ದಸಂಪತ್ತಿಗೂ ಭಾವಸಂಪತ್ತಿಗೂ ಇರಬೇಕಾದ ಅನ್ಯೋನ್ಯಮೈತ್ರಿ ಈತನ ಶೈಲಿಯಲ್ಲಿದೆ. ಸಂಸ್ಕೃತ ಪದಗಳು ವಿಪುಲವೆನಿಸಿದರೂ ಭಾವಾಭಿವ್ಯಕ್ತಿಗೆ ಅವು ಆವಶ್ಯಕವಾಗಿವೆ. ಕನ್ನಡ ಪದಗಳಿಗೇನು ಕೊರತೆಯೇ? ಆತನ ಕಂದಗಳು ಕನ್ನಡ ಸಾಹಿತ್ಯದಲ್ಲಿಯೇ ಹೆಸರಾಗಿವೆ. ಅಲ್ಲಿ ನೋಡಬೇಕು ಕನ್ನಡ ಪದಗಳ ಲಾಸ್ಯವನ್ನು !

ಉಪಮೆಗೆ ಕಾಳಿದಾಸ; ಉತ್ಪ್ರೇಕ್ಷೆಗೆ ಷಡಕ್ಷರಿದೇವ. ಅಷ್ಟು ಮಟ್ಟಿಗೆ ಪರಿಪೂರ್ಣ

ವಾಗಿವೆ ಷಡಕ್ಷರಿದೇವನ ಉತ್ಪ್ರೇಕ್ಷೆಗಳು. ಉತ್ಪ್ರೇಕ್ಷೆಗಳಷ್ಟೇ ಏಕೆ ? ಉಳಿದ ಅಲಂಕಾರಗಳೂ ಬಹು ಮನೋಹರವಾಗಿವೆ. ಅಲಂಕಾರವೇ ಅವನ ಶೈಲಿಯ ಹೆಗ್ಗುರುತೆಂದರೂ ಸಲ್ಲುವುದು. ಅಲಂಕಾರಗಳು ಕಾವ್ಯದಲ್ಲಿ ಬರುವುದು ಕೃತಕವಲ್ಲ; ಸಹಜ. ಏಕೆಂದರೆ, ಕಾವ್ಯಕ್ಕೆ ಮಾತೃಕೆಯಾದ ಅಲಂಕಾರ ಜೀವನದಲ್ಲಿ ಸಹಜವಾಗಿ ಉದ್ಭವಿಸುತ್ತದೆ. ನಮ್ಮ ನಿತ್ಯಜೀವನದ ಮಾತುಗಳಲ್ಲಿ ಇದನ್ನು ನಾವು ಕಾಣಬಹುದು. ಇದರ ಮರ್ಮವನ್ನು ಬಲ್ಲ ಷಡಕ್ಷರಿದೇವನು ತನ್ನ ಕಲ್ಪನೆಯ ರೆಕ್ಕೆಯನ್ನು ಬಹು ದೂರದವರೆಗೆ ಹರಿಸಿ ಸುಂದರವಾದ ಅಲಂಕಾರಗಳನ್ನು ಹೆಣೆದಿರುವನು. ಒಳಗೆ ದರ್ಶನ ಸೌಂದರ್ಯ, ಹೊರಗೆ ಶೈಲಿಯ ಸೌಂದರ್ಯ ಹೀಗೆ ಎರಡೂ ಒಂದುಗೂಡಿ ನಡೆದಿರುವದರಿಂದ ಕವಿಯ ಅಗ್ಗಳಿಕೆ ಅಧಿಕವಾಗಿದೆ. ಆತನ ಮಾರ್ಗದ ಬಿಗುವಿನ ಶೈಲಿಯಲ್ಲಿ ಅಲ್ಲಲ್ಲಿ ದೇಸಿಯ ಬೆಡಗನ್ನೂ ಕಾಣುತ್ತೇವೆ. ಆತನು ಬಳಸಿರುವ ರಗಳೆ, ತ್ರಿಪದಿ, ತ್ರಿಪುಡೆ ಇವು ಈ ಮಾತಿಗೆ ತಕ್ಕ ಸಾಕ್ಷಿ. ಕನ್ನಡ ಛಂದಸ್ಸಿನಲ್ಲಿಯೂ ಕವಿ ಸುಂದರವಾದ ಕಾವ್ಯವನ್ನು ಬರೆಯಬಲ್ಲನೆಂಬುದಕ್ಕೆ ಇವು ನಿದರ್ಶನವಾಗಿವೆ.

ಹೀಗೆ ಭಾವ ಭಾಷೆಗಳ ಅನ್ಯೋನ್ಯಮೈತ್ರಿಯನ್ನು ಪ್ರಕಟಪಡಿಸಿ ಷಡಕ್ಷರಿದೇವನು ಮಹಾಕವಿಯೆನಿಸಿರುವನು.

ಪ್ರಭಾವಮುದ್ರೆ

ಕಾವ್ಯನಿರ್ಮಿತಿಗೆ ಪ್ರತಿಭೆಯೊಂದೇ ಸಾಲದೆಂದು ಭಾರತೀಯ ಕಾವ್ಯ ಮೀಮಾಂಸಕರ ಮತ. ಅದರೊಡನೆ ಪೂರ್ವಕವಿಗಳ ಕಾವ್ಯಾಭ್ಯಾಸವೂ ಶಾಸ್ತ್ರಪರಿಚಯವೂ ಅವಶ್ಯಕವೆಂದು ಮಮ್ಮಟ ಮೊದಲಾದವರು ಸ್ಪಷ್ಟವಾಗಿ ಹೇಳುತ್ತಾರೆಃ

"ಶಕ್ತಿರ್ನಿಪುಣತಾ ಲೋಕಶಾಸ್ತ್ರಕಾವ್ಯಾದ್ಯವೇಕ್ಷಣಾತ್
ಕಾವ್ಯಜ್ಞಶಿಕ್ಷಯಾಭ್ಯಾಸ ಇತಿ ಹೇತುಸ್ತದುದ್ಭವೇ ॥

(ಕಾವ್ಯ ಪ್ರಕಾಶ i ೩)

ಎಂದು ಕಾವ್ಯಪ್ರಕಾಶದಲ್ಲಿ ಉಲ್ಲಿಖಿತವಾಗಿದೆ. ಮಹಾಕಾವ್ಯನಿರ್ಮಿತಿಗೆ ಪ್ರತಿಭೆ, ಲೋಕಶಾಸ್ತ್ರಪರಿಚಯ, ಸತತಾಭ್ಯಾಸ ಇವು ಮೂರೂ ಸಮಸಮುಚ್ಚಯವಾಗಿಯೇ ಕಾರಣವಾಗುತ್ತವೆಂದು ನಮ್ಮ ಲಾಕ್ಷಣಿಕರ ಅಭಿಪ್ರಾಯ. ಆದುದರಿಂದಲೇ ಭಾರತೀಯ ಸಾರಸ್ವತ ಪ್ರಪಂಚದಲ್ಲಿ ಕವಿಗಳು ಘನಪಂಡಿತರೂ ಆಗಿರುತ್ತಿದ್ದರು. ಕಾವ್ಯನಿರ್ಮಿತಿಗೆ ಕೈಹಾಕುವ ಮುನ್ನ ತತ್ಪೂರ್ವದ ಸಾಹಿತ್ಯವನ್ನೂ, ಶಾಸ್ತ್ರವನ್ನೂ ಅವರು ಮನನಮಾಡಿಕೊಳ್ಳುತ್ತಿದ್ದರು. ಅಷ್ಟು ಸಿದ್ಧಿಯನ್ನು ಪಡೆದ ಮೇಲೆ ಕಾವ್ಯನಿರ್ಮಿತಿಯಾಗುತ್ತಿತ್ತು. ಅಂತೆಯೇ ಯಾವುದೊಂದು ಕಾವ್ಯವನ್ನು ತೆಗೆದುಕೊಂಡರೂ ಅದರ ಮೇಲೆ ಪೂರ್ವಕವಿಗಳ ಪ್ರಭಾವಮುದ್ರೆ ಒಂದಿಲ್ಲೊಂದು ದೃಷ್ಟಿ

ಯಿಂದ ಆಗಿರುವವನ್ನು ನಾವು ಕಾಣಬಹುದು. ಹಿಂದಿನ ಭಾವಗಳು, ವಿಚಾರಗಳು, ಪ್ರತಿಮೆಗಳು, ಕಥಾವಸ್ತು, ಪಾತ್ರಗಳು ಒಂದಿಲ್ಲೊಂದು ರೀತಿಯಿಂದ ಹೊಸ ರೂಹು ತಳೆದು ಮುಂದಿನವರ ಕಾವ್ಯಗಳಲ್ಲಿ ಮೈದೋರುವುದುಂಟು. ಕಾಳಿದಾಸ, ಶೇಕ್ಸ್‌ಪಿಯರ, ಡ್ಯಾಂಟೆ ಇಂತಹ ಲೋಕವಿಖ್ಯಾತ ಮಹಾಕವಿಗಳೂ ಈ ನಿಯ-ಮಕ್ಕೆ ಅಪವಾದವೆನ್ನುವಂತಿಲ್ಲ: ಮತ್ತಿನ ಕವಿಗಳ ಮಾತೇನು? ಒಂದು ಕಾವ್ಯ ಪ್ರಕಟವಾದ ಮೇಲೆ ಅದು ನಾಡಿನ ಸೊತ್ತಾಗುತ್ತದೆ. ಸೊತ್ತನ್ನು ಸರಿಯಾಗಿ ಬಳಸಿ ಕೊಳ್ಳುವ ಹಕ್ಕು ಮುಂದಿನ ಪೀಳಿಗೆಗೆ ಇದೆ. ಆದರೆ ಬಳಸಿಕೊಂಡ ವಸ್ತು ಕೃತಿ ಚೌರ್ಯವಾಗಕೂಡದು. ಕವಿ ತಾನು ಹೆರವರಿಂದ ಎರವಲಾಗಿ ಕೊಂಡ ವಿಷಯ ಗಳನ್ನು ಸ್ವಾನುಭಾವದ ಎರಕದಲ್ಲಿ ಹೊಯ್ದು ಅದಕ್ಕೊಂದು ಹೊಚ್ಚ ಹೊಸತನ ವನ್ನು ಕೊಡಬೇಕು. ಅಂದರೆ ಕಾವ್ಯವು ಪೂರ್ವದ ಸಾಮಗ್ರಿಯನ್ನು ಬಳಸಿಕೊಂಡಿ ದ್ದರೂ "ಅದು ನಿಚ್ಚಂ ಅರ್ಣವಂಬೊಲ್ ಪೊಸತಪ್ಪುದು."

"ಪಸರಿಪ ಕನ್ನಡಕ್ಕೊಡೆಯನೊರ್ವ"ನೆನಿಸಿದ ಪಂಪನಲ್ಲಿಯೂ ಪೂರ್ವ ಕವಿಗಳ ಛಾಯೆ ಅನೇಕ ಕಡೆಗೆ ಕಂಡುಬರುವುದು. ಉದಾಹರಣೆಗೆಂದು ಒಂದು ಪದ್ಯವನ್ನು ನೋಡಬಹುದು:

"ಜಗಮಂ ಮಾಡಿದ ಪದ್ಮಜಂ ಪಡೆದನಿಲ್ಲೀ ಕನ್ನೆಯಂ ಮಾಡುವ
ಲ್ಲಿಗೆ ಚಂದ್ರಂ ಮಳಯಾನಿಳಂ ಮಳಯಜಂ ನೀರೇಜಮಿಮ್ಮಾವು ಮ
ಲ್ಲಿಗೆಯೆಂದಿಂತಿವನಲ್ಕಱಿಂದಮರ್ದಿನೊಳ್ ತಾನಟ್ಟಿಯಿಂ ತೊಯ್ದು ಮೆ
ಲ್ಲಗೆ ಸಂದಂಗಜನೆಂಬಜಂ ಪಡೆದನಂತಾ ಕಾಂತೆಗೀ ಕಾಂತಿಯಂ॥"

(ಪಂಪಭಾರತ, ಆ. ೪. ಪ. ೭೫)

ಈ ಪದ್ಯಕ್ಕೆ ಮೂಲ ಮಾತೃಕೆ ಕಾಲಿದಾಸನ ನಾಟಕಗಳಲ್ಲಿದೆಯೆಂಬುದು ಸಕೃದ್ದರ್ಶನಕ್ಕೆ ಕೆಳಗಣ ಪದ್ಯದಿಂದ ಗೋಚರವಾಗಬಲ್ಲದು:

ಅಸ್ಯಾಸ್ಸರ್ಗವಿಧೌ ಪ್ರಜಾಪತಿರಭೂಚ್ಚಂದ್ರೋನು ಕಾಂತಿಪ್ರದಃ।
ಶೃಂಗಾರೈಕರಸಃ ಸ್ವಯಂ ನು ಮದನೋ ಮಾಸೋನು ಪುಷ್ಪಾಕರಃ।
ವೇದಾಭ್ಯಾಸಜಡಃ ಕಥಂ ನು ವಿಷಯವ್ಯಾವೃತ್ತಕೌತೂಹಲೋ।
ನಿರ್ಮಾತುಂ ಪ್ರಭವೇನ್ಮನೋಹರಮಿದಂ ರೂಪಂ ಪುರಾಣೋ ಮುನಿಃ॥"

(ವಿಕ್ರಮೋರ್ವಶೀಯ ಅಂಕ ೧.)

ಹೀಗೆಯೇ ಇನ್ನೂ ಅನೇಕ ಸಮಾಂತರ ವಿಚಾರಗಳೂ ಭಾವಗಳೂ ವಸ್ತು ವಿನ್ಯಾಸಗಳೂ ಪಾತ್ರಗಳ ರೀತಿನೀತಿಗಳೂ ಮಹಾಕವಿ ಪಂಪನಲ್ಲಿಯೇ ಪೂರ್ವಕವಿ ಗಳಿಂದ ಎರವಲಾಗಿ ಬಂದಿರುವುದನ್ನು ಕಾಣಬಹುದು. ಆದರೆ, ಸೂರ್ಯಪ್ರಭೆ ಯಲ್ಲಿ ನಕ್ಷತ್ರಗಳು ಕಾಣದಂತೆ ಪಂಪನ ದಿವ್ಯವಾದ ಪ್ರತಿಭೆಯಲ್ಲಿ ಆತನ ಸ್ವೀಕರಣ ಗಳು ಗೋಚರವಾಗುವುದಿಲ್ಲ. ಆದರಿಂದ ಕವಿಯ ಪ್ರತಿಭೆಗೆ ಯಾವ ಬಗೆಯ ಚ್ಯುತಿಯೂ ಬರಲಾರದು.

ಹೀಗೆಯೇ ರನ್ನ, ರಾಘವಾಂಕ, ಜನ್ನ ಮೊದಲಾದ ಮಹಾಕವಿಗಳ ವಿಷಯ ಗಳನ್ನು ಉಲ್ಲೇಖಿಸಬಹುದು. ಇದರಂತೆ ಷಡಕ್ಷರಿದೇವನಲ್ಲಿಯೂ ಪೂರ್ವಕವಿಗಳ ಛಾಯೆ ಹಲವೆಡೆ ಗೋಚರವಾಗುತ್ತದೆ. ರಾಜಶೇಖರವಿಳಾಸಕ್ಕೆ ಮೂಲ ಮಾತೃಕೆ ಗುಬ್ಬಿ ಮಲ್ಲಣಾಚಾರ್ಯರ ಭಾವಚಿಂತಾರತ್ನವೆಂದು ಕವಿಯೇ ಹೇಳಿಕೊಂಡಿದ್ದಾನೆ.[೧] ಅಂದಮೇಲೆ ಮಲ್ಲಣಾಚಾರ್ಯರ ವಸ್ತು ಉತ್ಪ್ರೇಕ್ಷೆಗಳು ಪರ್ಯಾಯವಾಗಿ ರಾಜಶೇಖರ ವಿಳಾಸದಲ್ಲಿ ಬಂದಿರುವುದು ತೀರ ಸಹಜ. ಆದರೆ ಆ ಕಥೆಯಲ್ಲಿ ಷಡಕ್ಷರಿದೇವನು ಮಾಡಿಕೊಂಡ ಮಾರ್ಪಾಡುಗಳನ್ನೂ ಆತನು ಆ ಕಥೆಯ ಪಾತ್ರಗಳಿಗಿತ್ತ ಹೊಸ ಜೀವಕಳೆಯನ್ನೂ ಅಲ್ಲಿ ಭೋರ್ಗರೆದು ಹರಿದು ಭಕ್ತಿಯಲ್ಲಿ ಮಡುಗಟ್ಟಿನಿಂತ ಶೃಂಗಾರರಸದ ವಿಷಯವನ್ನೂ ಈಗಾಗಲೇ ವಿವರಿಸಲಾಗಿದೆ. ಇದಲ್ಲದೆ ರಾಜಶೇಖರ ವಿಳಾಸರಚನೆಯ ಬಗೆಗೆ ಇರುವ ಒಂದು ದಂತಕಥೆಯನ್ನು ಈ ಹಿಂದೆ ಹೇಳಲಾ ಗಿದೆ. ನೇಮಿಚಂದ್ರನ ಲೀಲಾವತಿಗಿಂತ ರಾಜಶೇಖರವಿಳಾಸವು ಹೆಚ್ಚು ರಸಭರಿತ ವಾದುದೆಂದು ಬಲ್ಲ ಸಜ್ಜನರು ಅದಕ್ಕೆ ಮನಣ್ಣೆಯಿತ್ತ ವಿಷಯವನ್ನು ಉದ್ಧರಿಸ ಲಾಗಿದೆ. ಲೀಲಾವತಿ ಮೊದಲಾದ ಪ್ರಬಂಧಗಳಲ್ಲಿ ಷಡಕ್ಷರಿದೇವನು ನಿಪುಣನೆನಿಸಿದ ನೆಂದು ರಾಜಾವಳೀ ಕಥೆಯಲ್ಲಿ ಹೇಳಲಾಗಿದೆ.[೨] ಇದರಿಂದ ಲೀಲಾವತಿ ಮತ್ತು ರಾಜಶೇಖರವಿಳಾಸಗಳಲ್ಲಿರುವ ಪರಸ್ಪರ ಸಂಬಂಧವನ್ನು ಸಹಜವಾಗಿಯೇ ಊಹಿಸ ಬಹುದಾಗಿದೆ ಅದಕ್ಕೆ ಹಲವು ನಿದರ್ಶನಗಳೂ ದೊರೆಯುಬಲ್ಲವು.

ಲೀಲಾವತಿಯಲ್ಲಿ ಕಂದರ್ಪದೇವ, ಮಕರಂದ ಇವರಿಬ್ಬರು ಗೆಳೆಯರಾಗಿದ್ದರೆ ರಾಜಶೇಖರ ವಿಳಾಸದಲ್ಲಿ ರಾಜಶೇಖರ, ಮಿತವಚನರು ಆತ್ಮೀಯ ಮಿತ್ರರಾಗಿದ್ದಾರೆ. ಎರಡೂ ಕಥೆಗಳಲ್ಲಿ ಒಡೆದುಕಾಣುವ ವ್ಯಕ್ತಿಗಳೆಂದರೆ ಅವರೇ. ಲೀಲಾವತಿಯಲ್ಲಿ ಕಾವ್ಯದ ಬಗೆಗೆ ಕವಿಯು ಹೆಚ್ಚು ಸಮಾಲೋಚನೆ ಮಾಡಿದಂತೆ ರಾಜಶೇಖರವಿಳಾಸ ದಲ್ಲಿಯೂ ಕವಿಯು ಕಾವ್ಯನಿರ್ಮಿತಿಯ ವಿಷಯವನ್ನು ಕುರಿತು ಮಹೋನ್ನತ ವಾದ ಅನೇಕ ವಿಚಾರಗಳನ್ನು ವಿಸ್ತಾರವಾಗಿಯೇ ವಿವರಿಸುತ್ತಾನೆ. ಲೀಲಾವತಿಯ ಎರಡನೆಯ ಆಸ್ಥಾನದಲ್ಲಿ ಮುತ್ತಿನಕ್ಕಿಯನ್ನು ಕನಕದೊನಕೆಯಿಂದ ಕುಟ್ಟುವ ಸಂದರ್ಭದಲ್ಲಿ ಹತ್ತು ತ್ರಿಪದಿಗಳನ್ನು ಕವಿ ಬಳಸುತ್ತಾನೆ. ಇದರಂತೆ ರಾಜಶೇಖರ ವಿಳಾಸದಲ್ಲಿಯೂ ಒನಕೆವಾಡಿನ ಸಂದರ್ಭದಲ್ಲಿ ಕವಿ ತ್ರಿಪದಿಗಳನ್ನೇ ಬಳಸಿದ್ದಾನೆ. ನೇಮಿಚಂದ್ರನ ಕಾಂತೆಯರು ಗೆಯ್ದು ಮದನಪೂಜೆಯನ್ನು ವರ್ಣಿಸುವಲ್ಲಿ ಲಲಿತ ರಗಳೆಯನ್ನು ಉಪಯೋಗಿಸಿದ್ದಾನೆ. ಷಡಕ್ಷರಿದೇವನೂ ರಾಜಶೇಖರನ ಶಿವಪೂಜೆಯ

---

೧ ರಾಜಶೇಖರ ವಿಳಾಸ. ಆ ೧. ಪ. ೭೮.

೨ "ಷಡಕ್ಷರಿಯು ಲೀಲಾವತಿ ಮೊದಲಾದ ವಸ್ತುಕ ಕಾವ್ಯಮಂ ಚನ್ನಾಗರಿವನಾಗಿ" (ರಾಜಾವಳೀ ಕಥೆ ಅಧಿಕಾರ ೧೨, ಪುಟ ೪ ೪)

ಸಂದರ್ಭದಲ್ಲಿ ಲಲಿತ ರಗಳೆಯನ್ನೇ ಬಳಸಿದ್ದಾನೆ. ಇಷ್ಟೇ ಅಲ್ಲ. ಆ ರಗಳೆಯ ಪ್ರಾರಂಭದ ಒಂದೆರಡು ಗಣಗಳು ಲೀಲಾವತಿಯ ಗಣವಿನ್ಯಾಸವನ್ನೇ ಹೋಲುತ್ತವೆ.೧

ಇದೇ ರೀತಿಯಾಗಿ ಶಬರಶಂಕರವಿಳಾಸದ ಕಥಾವಸ್ತು ಮೂಲ ಮಹಾಭಾರತ, ಕಿರಾತಾರ್ಜುನೀಯ, ಪಂಪಭಾರತ, ಕುಮಾರವ್ಯಾಸಭಾರತಗಳಲ್ಲಿ ಕಂಡುಬರುವುದರಿಂದ ಅಲ್ಲಲ್ಲಿ ಕೆಲವು ಸಾಮ್ಯಗಳು ಸಹಜವಾಗಿಯೇ ಗೋಚರವಾಗುತ್ತವೆ. ಅರ್ಜುನನು ತಪಸ್ಸು ಮಾಡುವಲ್ಲಿಗೆ ದೇವೇಂದ್ರನು ವಿಪ್ರವೇಷ ತಾಳಿ ಬರುವುದು, ಮೂದಲಿಸುವುದು, ಕೊನೆಗೆ ಪ್ರಸನ್ನನಾಗುವುದು, ಕಿರಾತರೂಪದ ಶಿವನಿಗೂ ಅರ್ಜುನನಿಗೂ ವಾಗ್ವಾದ ನಡೆಯುವುದು, ಯುದ್ಧದಲ್ಲಿ ಅರ್ಜುನನಿಗೆ ಸೋಲುಂಟಾಗುವುದು, ಮಳಲಲಿಂಗವನ್ನು ಪೂಜಿಸುವುದು, ಆ ಲಿಂಗದ ಮೇಲಿಟ್ಟ ಪುಷ್ಪಗಳು ಕಿರಾತನ ತಲೆಯಲ್ಲಿ ಕಂಗೊಳಿಸು-ವುದು, ಶಿವನು ಪ್ರತ್ಯಕ್ಷನಾಗಿ ಅರ್ಜುನನಿಗೆ ಪಾಶುಪತಾಸ್ತ್ರವನ್ನು ದಯಪಾಲಿಸು-ವುದು— ಈ ಕಥಾವಿನ್ಯಾಸದಲ್ಲಿ ಮೂಲಮಹಾಭಾರತ, ಕುಮಾರವ್ಯಾಸಭಾರತ ಮತ್ತು ಶಬರಶಂಕರವಿಳಾಸಗಳಿಗೆ ನಿಕಟ ಸಂಬಂಧವಿದೆ. ಷಡಕ್ಷರದೇವನು ಇವೆಲ್ಲ ಗ್ರಂಥಗಳನ್ನು ಚೆನ್ನಾಗಿ ಮನನ ಮಾಡಿಕೊಂಡಿದ್ದನೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಷಡಕ್ಷರಿದೇವನ 'ಬಸವರಾಜವಿಜಯದ ಮೇಲೆ ಭೀಮಕವಿಯ ಕನ್ನಡ ಬಸವಪುರಾಣ, ಪಾಲ್ಕುರಿಕೆಯ ಸೋಮಾರಾಧ್ಯರ ತೆಲುಗು ಬಸವಪುರಾಣ, ಕಂಚಿ ಶಂಕರಾರಾಧ್ಯರ ಸಂಸ್ಕೃತ ಬಸವಪುರಾಣಗಳ ಪ್ರಭಾವವಾಗಿರಲು ಸಾಕು. ಈ ಕಾವ್ಯದ ಅಂತ್ಯದಲ್ಲಿ ಷಡಕ್ಷರಿದೇವನು ಬಸವಾಂಘ್ರಿತ್ರಯಕ್ಕೆ ಮೇಗಣ ಮೂವರು ಕವಿಗಳು ತಮ್ಮ ಕಾವ್ಯಗಳನ್ನರ್ಪಿಸಿರುವರು; ತನ್ನ ಕಾವ್ಯವನ್ನು ನಾಲ್ಕನೆಯ ಪಾದಕ್ಕೆ ಅರ್ಪಿಸುತ್ತೇನೆ' ಎಂದು ಹೇಳಿಕೊಂಡಿದ್ದಾನೆ.೨ ಷಡಕ್ಷರಿದೇವನಿಗೆ ಪ್ರತ್ಯಕ್ಷವಾಗಿ ತೆಲುಗು ಭಾಷೆಯ ಪರಿಚಯವಿದ್ದಿತೋ ಇಲ್ಲವೋ ಎಂಬುದನ್ನು ನಿರ್ಧರಿಸಿ ಹೇಳಲು ಈಗ ಸಾಧ್ಯವಿಲ್ಲ. ಆದರೆ ಸಂಸ್ಕೃತ ಮತ್ತು ಕನ್ನಡ ಬಸವಪುರಾಣಗಳು ಕವಿಗೆ ಕರತಲಾಮಲಕವಾಗಿರುವುದರಲ್ಲಿ ಆವ ಸಂದೇಹವೂ ಇಲ್ಲ. ಅಂತೆಯೇ ಬಸವಣ್ಣನವರ ಚರಿತ್ರೆ ಬಸವರಾಜವಿಜಯದಲ್ಲಿ ಕನ್ನಡ ಬಸವಪುರಾಣವನ್ನೇ ಹೋಲುತ್ತದೆ. ಹರಿ-ಹರನುದಿತಮಾರ್ಗದಲ್ಲಿ ನಡೆದ ಷಡಕ್ಷರಿದೇವನು ಬಸವರಾಜದೇವ ರಗಳೆಯನ್ನು ಬಿಟ್ಟು ಭೀಮಕವಿಯ ಬಸವಪುರಾಣವನ್ನು ಅನುಸರಿಸಿರುವುದು ಆತನ ಮೇಲೆ ಈ ಕಾವ್ಯದ ಪ್ರಭಾವವೆಷ್ಟಾಗಿತ್ತೆಂಬುದರ ದ್ಯೋತಕವಾಗಿದೆ.

ಇದಲ್ಲದೆ ಬಹುಶ್ರುತನಾದ ಈ ಕವಿಯ ಕಾವ್ಯಗಳಲ್ಲಿ ಪೂರ್ವ ಕವಿಗಳ ಪದ್ಯಗಳ, ಭಾವದ, ಭಾಷೆಯ ಛಾಯೆ ಹಲವೆಡೆ ಗೋಚರವಾಗುತ್ತದೆ. ಉದಾಹರಣೆಗೆಂದು ಮುಂದಿನ ಪದ್ಯಗಳನ್ನು ನೋಡಬಹುದು :

---

೧. ಅಲ್ಲಿ ಲತೆವನೆಯಲ್ಲಿ ಮಲ್ಲಿಕಾವನದಲ್ಲಿ (ಲೀಲಾವತಿ)
ಅಲ್ಲಿ ಮಾಮರದಲ್ಲಿ ಮಲ್ಲಿಕಾಲತೆಯಲ್ಲಿ (ರಾ. ಶೇ. ವಿ.)

೨. ಬಸವರಾಜವಿಜಯ ಆ. ೪೨, ಪ. ೧೧೯.

"ಡೊಣೆಯಿಂದ್ ತೆಗೆವಾಗಳೊಂದು ತುಡುವಾಗಳ್‌ಪತ್ತುಬಾಣಂ ಧನುರ್
ಗುಣದಿಂದಂ ಬಿಡುವಲ್ಲಿ ನೂಱು ಪರಿವಾಗಳ್ ಸಾಸಿರಂ ವೈರಿಮಾ
ರ್ಗಣಮಂ ಭೇದಿಸುವಲ್ಲಿ ಲಕ್ಷ ನಡುವಾಗಳ್ ಕೋಟಿ ಸೇನಾಂಗದೊಳ್
ಗಣನಾತೀತಮಿದೆಂದೊಡೇವೊಗಳ್ವುದೋ ಬಿಲ್‌ಬಲ್ಮೆಯಂ ಪಾರ್ಥನಾ"[೧] ॥

"ಮೊದಲೊಳಿದೊಂದು ಪತ್ತು ತುಡುವಲ್ಲಿ ಶತಂ ಬಿಡುವಲ್ಲಿ ಸಾಸಿರಂ
ಪದಮಿಡುವಲ್ಲಿ ವೈರಿಶರಸಂಹತಿಯಂ ತಱಿವಲ್ಲಿ ಲಕ್ಷಮ
ಗ್ಗದ ಗತಿಯಲ್ಲಿ ಕೋಟಿ ಸಮರಾಂಗಣದೊಳ್ ಗಣನಾವಿಹೀನಮು
ಪ್ಪದು ರಿಪುವೃಂದಮಂ ತವಿಸಿ ನಿನ್ನೆಡೆಗೆಯ್ದುಗುಮೀ ಮಹಾಶರಂ"[೨] ॥

ಸುರಂಗ ಕವಿಯ ತ್ರಿಷಷ್ಟಿಪುರಾತನವಿಲಾಸದಲ್ಲಿ ಬರುವ ವರ್ಣನೆಗಳಿಗೂ ರಾಜಶೇಖರವಿಳಾಸದ ಹಲವು ವರ್ಣನೆಗಳಿಗೂ ಸಾಮ್ಯ ಕಂಡುಬರುತ್ತದೆ. ಹಮ್ಮೀರ ಕಾವ್ಯದ ಚಂಪೂ ಶೈಲಿಗೂ ರಾಜಶೇಖರವಿಳಾಸದ ಶೈಲಿಗೂ ಹೋಲಿಕೆ ಕಂಡುಬರುತ್ತದೆ. ಹೀಗೆ ಷಡಕ್ಷರಿದೇವನ ಕಾವ್ಯಗಳಲ್ಲಿ ಪೂರ್ವಕವಿಗಳ ಛಾಯೆ ಹಲವೆಡೆ ಗೋಚರವಾಗುತ್ತದೆ.

ಸೂಕ್ಷ್ಮಮತಿಯಿಂದ, ತೀಕ್ಷ್ಣದೃಷ್ಟಿಯಿಂದ ಇವೆಲ್ಲ ಸಾಮ್ಯಗಳನ್ನು ಪರಿಶೀಲಿಸಿದರೆ ಅವು ಕೇವಲ ಹೊರಮೈಯ ಹೋಲಿಕೆಗಳೆಂದು ಸ್ಪಷ್ಟವಾಗುತ್ತದೆ. ಲೀಲಾವತಿ, ರಾಜಶೇಖರವಿಳಾಸಗಳಲ್ಲಿ ಕಂಡುಬರುವ ಒನಕೆವಾಡುಗಳನ್ನು ಉದಾಹರಣೆಗೆಂದು ಎತ್ತಿಕೊಳ್ಳಬಹುದು :

"ಅಂಗಜನೈದು ಶರಂಗಳ ಬಂದ ಬ
ನಂಗಳ ಪುಟಿಲ ತಳಿರುಯ್ಯಲಜ್ಜವೆ
ಳ್ದಿಂಗಳ ಮೇಲೆ ಸಿರಿ ನಿಲ್ಕೆ ॥"

(ಲೀಲಾವತಿ, ಆ. ೨, ಪ. ೧)

ರಾಜಶೇಖರವಿಳಾಸದಲ್ಲಿ ಈ ಹಾಡು ಹೀಗೆ ಆರಂಭವಾಗುತ್ತದೆ :

"ಮದನಂಗೆ ಜಯಮಕ್ಕೆ ಮಧುಗೆ ಸಂಪದಮಕ್ಕೆ
ಬಿದುಗದಿರಿಂತು ನೆಲೆಸಿರ್ಕೆ ರತಿಗೆ ಸಂ
ಮದಮೆಂದು ತೊಲಗದಿರುತಿರ್ಕೆ ॥"

(ರಾಜಶೇಖರವಿಳಾಸ, ಆ. ೧೧, ಪ. ೮೯.)

---

೧. ಗದಾಯುದ್ಧ : ಆ. ೩, ಪ. ೩. ೨. ಶಬರಶಂಕರವಿಳಾಸ ಆ. ೫, ಪ. ೫೧.

ಇಲ್ಲಿ ಷಡಕ್ಷರಿದೇವನ ಬಂಧಭಾವಗಳಲ್ಲಿ ಕಾಣುವ ನಯ ಅದ್ಭುತವಾಗಿದೆ. ಈ ಹಾಡಿನಲ್ಲಿ ಬರುವ ಕೆಳಗಿನ ಎರಡು ಪದ್ಯಗಳಲ್ಲಿ ಭಾವಸಾಮ್ಯವಿದ್ದರೂ ಷಡಕ್ಷರಿ ದೇವನ ಕೈಯಲ್ಲಿ ನೇಮಿಚಂದ್ರನ ಭಾವ ಇನ್ನೂ ಪಳಗಿದಂತಿದೆ:

"ಪತ್ತಿದ ಗಂಡರ ಚಿತ್ತವ ಕಿಡಲೀಯ
ದಿತ್ತುದೇ ಕೋಟಿ ತನಗೆಂಬ ಸೂಳೆಯ
ಹಿತ್ತಿಲಲ್ಲಿರದೆ ಸುರಭೂಜ ॥"

(ಲೀಲಾವತಿ, ಆ, ೨, ಪ ೪,)

"ಮನದಿಚ್ಛೆಯಿಂ ಮುಂಚಿ ತನುವಿತ್ತು ನಲ್ಲರೊಂ
ದನುವರಿದೊಂದಿ ಸವಿದೋರ್ಪ ಸೂಳೆಯರಾ
ಮನೆಯ ಮುಂದಿರದೆ ಸುರಧೇನು ॥"

(ರಾಜಶೇಖರವಿಳಾಸ, ಆ. ೧೧, ಪ, ೯೦.)

ಒಟ್ಟಿನಲ್ಲಿ ನೇಮಿಚಂದ್ರನ ಹತ್ತು ಪದ್ಯಗಳನ್ನೂ ರಾಜಶೇಖರವಿಳಾಸದ ಸಮಾಂತರ ಪದ್ಯಗಳನ್ನೂ ಸಮೀಕ್ಷಣೆಮಾಡಿದರೆ ಲೀಲಾವತಿಯ ಈ ಸನ್ನಿವೇಶ ಷಡಕ್ಷರಿದೇವನ ನೆನಹಿನಲ್ಲಿದ್ದರೂ ಅಲ್ಲಿಯ ಭಾವಸ್ಫುರಣೆಗಳೆಲ್ಲ ತನ್ನವೇ ಆಗಿವೆ ಯೆಂದು ಗೋಚರವಾಗುತ್ತದೆ. ಇದರಂತೆ ಇವೆರಡೂ ಕಾವ್ಯಗಳಲ್ಲಿ ಬರುವ ಮೇಲೆ ನಿರ್ದೇಶಿಸಿದ ಲಲಿತರಗಳೆಗಳೆರಡನ್ನೂ ತೂಗಿನೋಡಿದರೆ[೧] ಷಡಕ್ಷರಿದೇವನ ಭಾವ ವೈಖರಿ, ಭಾಷೆಯ ಬೆಡಗು ವಿನೂತನವಾಗಿವೆಯೆಂಬುದು ಯಾರಿಗಾದರೂ ಹೊಳೆಯದಿರದು. ನೇಮಿಚಂದ್ರನಲ್ಲಿ ಭಾವಗಳು ಸ್ಥಾಯಿಯಾಗಿಯೇ ಉಳಿದರೆ ಷಡಕ್ಷರಿದೇವನಲ್ಲಿ ಅವು ರಸಸಿದ್ಧಿಯನ್ನು ಪಡೆಯುತ್ತವೆ. ಇದಲ್ಲದೆ ಷಡಕ್ಷರಿದೇವ ನಿಗೆ ಅಪಾರವಾದ ಲೋಕಾನುಭವವಿದೆ. ಪೂರ್ವಕವಿಗಳ ಭಾವಗಳು ಸುಂದರ ವಾಗಿದ್ದು ಅವು ಲೋಕರೂಢಿಗೆ ಹೊಂದಿಕೆಯಾಗದಂತಿದ್ದರೆ ಅವನ್ನು ಕವಿ ತನ್ನ ಹರಿತವಾದ ಪ್ರತಿಭೆಯಿಂದ ಕತ್ತರಿಸಿ ಹೆಚ್ಚಿನ ಬೆಡಗನ್ನು ತರುತ್ತಾನೆ.

ಶಬರಶಂಕರವಿಳಾಸದ ಕಥೆ ಮಹಾಭಾರತಕಾಲದಿಂದಲೂ ಹಿಗ್ಗುತ್ತಲೇ ಬಂದಿದೆ. ಮುಂದೆ ಬಂದ ಪ್ರತಿಯೊಬ್ಬ ಕವಿ ಹಿಂದಿನದನ್ನು ಅರಗಿಸಿಕೊಂಡು ಅದನ್ನು ಹಿಗ್ಗಿಸುತ್ತ ಹೋದುದು ಸ್ಪಷ್ಟವಾಗಿ ಗೋಚರವಾಗುತ್ತದೆ. ವ್ಯಾಸಮಹಾ ಭಾರತ, ಕುಮಾರವ್ಯಾಸಭಾರತ, ಶಬರಶಂಕರವಿಳಾಸದಲ್ಲಿ ಕಂಡುಬರುವ ಕೆಲವು ಸಾಮ್ಯಗಳನ್ನು ಇಲ್ಲಿ ಉಲ್ಲೇಖಿಸಬಹುದು. ಅರ್ಜುನನು ತಪಸ್ಸಿಗೆ ನಿಂದುದರ ವರ್ಣನೆ ಮೂರೂ ಕಾವ್ಯಗಳಲ್ಲಿ ಹೀಗೆ ಬಂದಿದೆ:

---

೧. ಪೊಗೊಯ್ಯತಿಲೆಂದಬಲೆಯರ್ ನೆರೆದು ಬಗೆವಂದು
ಕಡೆಗಣ್ಣ ಕುಡಿವೆಳಗು ಬಿಡದಡರೆ ನಡೆನೋಡಿ ॥ (ರಾ. ಶೇ. ವಿ.)
ನನೆಗೊಂಚಲಂ ಮುಡಿದು ವನದಲರ್ಗಳಂ ಪಿಡಿದು
ಮಧುವಿಂದೆ ಬೊಟ್ಟಿಟ್ಟು ಮಧುರತೆಗೆ ಮುಂಬಿಟ್ಟು ॥ (ಲೀಲಾವತಿ)

ವ್ಯಾಸಮಹಾಭಾರತ—

"ಊರ್ಧ್ವಬಾಹುರ್ನಿರಾಲಂಬಃ ಪಾದಾಂಗುಷ್ಠಾಗ್ರವಿಷ್ಠಿತಃ ॥"[೧]

ಕುಮಾರವ್ಯಾಸಭಾರತ—

"ನಿಂದನು ದೀರ್ಘಬಾಹುಗಳ....ತುದಿಯ ಕಾಲುಗಳ....॥"[೨]

ಶಬರಶಂಕರವಿಳಾಸ—

"ತುದಿಗೊಳಿಸಿದಂಘ್ರಿಯಿಂದೆ
ತ್ತಿದ ಭುಜದಿಂ.... ....॥"[೩]

ಆತನು ತಪಶ್ಚರ್ಯಕಾಲದಲ್ಲಿ ಆಹಾರಸೇವನೆಮಾಡುವ ಬಗೆ ಹೀಗೆ:

ವ್ಯಾಸಮಹಾಭಾರತ—

"ಪೂರ್ಣೇ ಪೂರ್ಣೇ ತ್ರಿರಾತ್ರೇ ತು ಮಾಸಮೇಕಂ ಫಲಾಶನಃ।
ದ್ವಿಗುಣೇನೈವ ಕಾಲೇನ ದ್ವಿತೀಯಂ ಮಾಸಮತ್ಯಗಾತ್ ॥
ತೃತೀಯಮಪಿ ಮಾಸಂ ಸಪಕ್ಷೇಣಾಹಾರಮಾಚರನ್ ।
ಶೀರ್ಣಂ ಚ ಪತಿತಂ ಭೂಮೌ ಪರ್ಣಂ ಸಮುಪಯುಕ್ತವಾನ್ ॥
ಚತುರ್ಥೇ ತ್ವಥ ಸಂಪ್ರಾಪ್ತೇ ಮಾಸಿ ಪೂರ್ಣೇ ತತಃಪರಂ ।
ವಾಯುಭಕ್ಷೋ ಮಹಾಬಾಹುರಭವತ್ ಪಾಂಡುನಂದನಃ[೪]" ॥

ಕುಮಾರವ್ಯಾಸಭಾರತ—

"ಮೂರು ದಿನಕೊಮ್ಮೊಮ್ಮೆ ಫಲದಾ
ಹಾರದಲಿ ನೂಕಿದನು ತಿಂಗಳ
ನಾರುದಿವಸಕೆ ಫಲವಗೊಂಡನು ತಿಂಗಳೆರಡರಲಿ ॥
ಮೂರುತಿಂಗಳ ಕಳೆದನಿಂತೀ
ರಾರುದಿವಸಕೆ ಕಂದಮೂಲಾ
ಹಾರದಲಿ ತರಗೆಲೆಯುಲಿರ್ದನು ನಾಲ್ಕು ಮಾಸದಲಿ ॥

ಬಳಿಕ ಪವನಾಹಾರದಲಿ...."[೫]

---

೧. ವ್ಯಾಸಮಹಾಭಾರತ ೩. ೩೯. ೨೭. ಪ. ೨೩. ೨. ಕುಮಾರವ್ಯಾಸಭಾರತ: ಅರಣ್ಯ ಪರ್ವ ಸಂ. ೪, ಪ. ೪೨–೪೩ ೩. ಶಬರಶಂಕರವಿಳಾಸ ಆ. ೨, ಪ. ೮೦. ೪. ವ್ಯಾಸ ಮಹಾಭಾರತ ೩. ೩೯. ೨೭. ಪ. ೨೧, ೨೨, ೨೩. ೫ ಕುಮಾರವ್ಯಾಸಭಾರತ: ಅರಣ್ಯ ಪರ್ವ ಸಂ. ೫, ಪ. ೩೩.

ಶಬರಶಂಕರವಿಳಾಸ—

ತ್ರಿದಿನಕ್ಕೊರ್ಮೆ ಫಲಾದನಂ ನೆಗಳ್ದುದಾತಂಗೊಂದು ತಿಂಗಳ್ ದ್ವಿವಾ-
ಸದೊಳಾಱುಂ ದಿನಕೊರ್ಮೆ ತತ್ಫಳಚಯಾಹಾರಂ ತ್ರಿಮಾಸಂ ಬಳಿ-
ಕ್ಕೊದವಿರ್ದತ್ತುಕಂದಮೂಲಲಸುರಸಂ ನಾಲ್ದಿಂಗಳೊಳ್ ಜೀರ್ಣಪರ್ಣ-
ರ್ಣದ ಸಂಸೇವನೆ ಮಾಸಪಂಚಕದೊಳಾಯ್ತಾತ್ತಂಗೆ ವಾತಾಶನಂ॥೧

ಇಲ್ಲಿ ವ್ಯಾಸಮಹಾಭಾರತದಲ್ಲಿ ನಾಲ್ಕನೆಯ ತಿಂಗಳಾದ ಮೇಲೆ 'ತತಃ ಪರಂ' ಎಂದುದನ್ನು ಕುಮಾರವ್ಯಾಸನು 'ಬಳಿಕ' ಎಂದು ಅನುವಾದಿಸಿದರೆ, ಷಡಕ್ಷರಿದೇವನು 'ಮಾಸಪಂಚಕದೊಳ್' ಎಂದು ಬೇರೆ ರೀತಿಯಾಗಿಯೇ ಹೇಳುತ್ತಾನೆ. ಮೂಲ ಮಹಾಭಾರತದ 'ಪಕ್ಷೇ' ಎಂಬುದನ್ನು ಕುಮಾರವ್ಯಾಸನು 'ಈರಾರು ದಿವಸಕೆ' ಎಂದು ಭಾಷಾಂತರಿಸಿದರೆ ಷಡಕ್ಷರಿದೇವನು ಯಾವುದನ್ನೂ ಹೇಳುವುದಿಲ್ಲ. ಇದರಿಂದ ಈತನ ಸ್ವತಂತ್ರ ಪ್ರವೃತ್ತಿಯ ಅರಿವಾಗದಿರದು.

ಹೀಗೆಯೇ ಇನ್ನೂ ಅನೇಕ ಸಾಮ್ಯಗಳನ್ನು ಈ ಮೂರೂ ಕಾವ್ಯಗಳಲ್ಲಿ ಗುರುತಿಸಬಹುದು.

೧. ಅರ್ಜುನನು ಬಿಟ್ಟ ಬಾಣಗಳನ್ನು ಕಿರಾತನು ನುಂಗಿದ ಸಂದರ್ಭ :

ವ್ಯಾಸಮಹಾಭಾರತ–೩.೪೦.೨೦. ಪ. ೨೬,೨೭,೨೮
ಕುಮಾರವ್ಯಾಸ ಭಾರತ–ಅರಣ್ಯಪರ್ವ ಸಂ. ೬ ಪ. ೧೭
ಶಬರ ಶಂಕರ ವಿಳಾಸ–ಆ. ೪. ಪ. ೫೫

೨. ಅರ್ಜುನನ ಪ್ರಚಂಡವಾದ ಬಾಣಗಳಿಗೆ ಅಳುಕದೆ ನಿಂತ ಕಿರಾತನನ್ನು ಕಂಡು ಆತನ ವಿಷಯದಲ್ಲಿ ಸಂದೇಹ ಹುಟ್ಟುವ ಸಂದರ್ಭ:

ವ್ಯಾ. ಮ. ಭಾ. ೩. ೪೦. ೪೧. ಪದ್ಯ ೩೧, ೩೨.
ಕು. ವ್ಯಾ. ಭಾ. ಅರಣ್ಯ. ಸಂ. ೬, ಪ. ೧೬, ೧೭.
ಶ. ಶಂ. ವಿ. ಆ. ೪, ಪ. ೫೩, ೫೪

ಇಲ್ಲಿ ಕುಮಾರವ್ಯಾಸನು ವ್ಯಾಸಮಹಾಭಾರತದ ಸಸಂದೇಹ ಅಲಂಕಾರವನ್ನೇ ಪರ್ಯಾಯವಾಗಿ ಅನುಕರಣ ಮಾಡಿದರೆ ಷಡಕ್ಷರಿದೇವನು ಅದನ್ನು ಬೇರೊಂದು ರೀತಿಯಲ್ಲಿಯೇ ಅಭಿವ್ಯಕ್ತಪಡಿಸುತ್ತಾನೆ.

೩. ಬಾಣ ತೀರಿದ ಮೇಲೆ ವ್ಯಾಸ ಮಹಾಭಾರತದಲ್ಲಿ ಅರ್ಜುನನು ಹುತಾಶನನನ್ನು ಸ್ಮರಿಸುತ್ತಾನೆ. ಖಾಂಡವ ದಹನ ಪ್ರಸಂಗದಲ್ಲಿ ಪ್ರಾಪ್ತವಾದ ಅಕ್ಷಯಬಾಣದ ಉಲ್ಲೇಖವು ಇಲ್ಲಿ ಬರುತ್ತದೆ.

---

೧. ವ್ಯಾ. ಮ. ಭಾ. ೩.೪೦. ೪೩. ಪ. ೩೬.

ಕುಮಾರವ್ಯಾಸಭಾರತದಲ್ಲಿ ಇದೇ ಛಾಯೆ ಬರುತ್ತದೆ:

"ಅಂದು ಖಾಂಡವವನದ ದಹನದೆ
ಬಂದುದಕ್ಷಯ ಬಾಣ........[೧]"

ಷಡಕ್ಷರಿದೇವನಲ್ಲಿ ಈ ಪ್ರಸ್ತಾಪವೇ ಬರುವುದಿಲ್ಲ.

೪. ಬಾಣಗಳು ತೀರಿದ ತರುವಾಯ ಅರ್ಜುನನು ಶಿವನನ್ನು ಬಿಲ್ಲಿನಿಂದ ಅಪ್ಪಳಿಸುವನು. ಶಿವನು ಅದನ್ನು ಸೆಳೆದುಕೊಳ್ಳುವನು.

ವ್ಯಾ. ಮ. ಭಾ. ೩, ೪೦. ೪೩. ಪ. ೩೮, ೩೯,
ಕು. ವ್ಯಾ. ಭಾ. ಅರಣ್ಯ ಸಂ. ೬, ಪ. ೧೮, ೧೯,
ಶ. ಶಂ. ವಿ. ಆ. ೪, ಪ. ೫೮, ೫೯.

೫. ಆ ಮೇಲೆ ಅರ್ಜುನನು ಕಿರಾತನನ್ನು ಖಡ್ಗದಿಂದ ಹೊಡೆಯುವನು.

ವ್ಯಾ. ಮ. ಭಾ. ೩ ೪೦. ೪೩. ಪ. ೨೦,
ಕು. ವ್ಯಾ. ಭಾ. ಅರಣ್ಯ ಸಂ. ೬, ಪ. ೪೦
ಶ. ಶಂ. ವಿ. ಆ. ೪, ಪ. ೬೦,

ಈ ಸಂದರ್ಭದಲ್ಲಿ ಬಿಲ್ಲು, ಬಾಣ, ಖಡ್ಗಗಳನ್ನೆಲ್ಲ ಕಳೆದುಕೊಂಡ ಅರ್ಜುನನ ಸ್ಥಿತಿಯನ್ನು ಷಡಕ್ಷರಿದೇವನು "ಕೋಡುಡಿದ ಇಭದವೊಲಿರ್ದಂ" ಎಂದು ಬಹಳ ಸುಂದರವಾಗಿ ವರ್ಣಿಸುವನು.

೬. ಆ ಮೇಲೆ ಅರ್ಜುನನು ಗಿಡಗಂಟಿಗಳನ್ನು ಕಿರಾತನ ಮೇಲೆ ಕಿತ್ತು ಎಸೆಯುವನು: ಕಲ್ಲುಗುಂಡುಗಳನ್ನು ತೂರುವನು.

ವ್ಯಾ. ಮ. ಭಾ. ೩, ೪೦, ೪೩ ಪ. ೪೧
ಕು. ವ್ಯಾ. ಭಾ. ಅರಣ್ಯ ಸಂ. ೬, ಪ. ೨೧
ಶ. ಶಂ. ವಿ. ಆ. ೪ ಪ. ೬೨

ಕುಮಾರವ್ಯಾಸನು ವ್ಯಾಸಮಹಾಭಾರತವನ್ನು ಓದಿ ಅದನ್ನು ಹಿಗ್ಗಿಸಿದಂತೆ ಷಡಕ್ಷರಿದೇವನೂ ವ್ಯಾಸಭಾರತ ಕುಮಾರವ್ಯಾಸಭಾರತಗಳನ್ನು ಓದಿ ಅವೆರಡರಲ್ಲಿ ಬರುವ ಕಥೆಯನ್ನು ಭಾವಗಳನ್ನೂ ಹಿಗ್ಗಿಸಿರುವನು.

ಕುಮಾರವ್ಯಾಸಭಾರತ, ಶಬರಶಂಕರವಿಳಾಸಗಳಲ್ಲಿ ಕಾಣುವ ಕೆಲವು ಸಾಮ್ಯಗಳನ್ನು ಇಲ್ಲಿ ಉಲ್ಲೇಖಿಸಬಹುದು:

---

೧. ಕು. ವ್ಯಾ. ಭಾ. ಅರಣ್ಯ ಸಂ. ೬, ಪ. ೧೮

೧. ಕು. ವ್ಯಾ. ಭಾ. ಅರಣ್ಯಪರ್ವ ಸಂ. ೬ ಪ. ೧೨.
ಶ. ಶಂ. ವಿ. ಆ. ೪ ಪ. ೪೬

೨. ಕು. ವ್ಯಾ. ಭಾ. ಅರಣ್ಯಪರ್ವ ಸಂ. ೬ ಪ. ೧೬
ಶ. ಶಂ. ವಿ. ಆ. ೪ ಪ. ೫೩, ೫೪

೩. ಕು. ವ್ಯಾ. ಭಾ. ಅರಣ್ಯಪರ್ವ ಸಂ. ೬ ಪ. ೨೨
ಶ. ಶಂ. ವಿ. ಆ. ೪ ಪ. ೬೩

೪. ಕು. ವ್ಯಾ. ಭಾ. ಅರಣ್ಯಪರ್ವ ಸಂ. ೬ ಪ. ೨೪, ೨೫
ಶ. ಶಂ. ವಿ. ಆ. ೪ ಪ. ೬೫

೫. ಕು. ವ್ಯಾ. ಭಾ. ಅರಣ್ಯಪರ್ವ ಸಂ. ೬ ಪ. ೧೮
ಶ. ಶಂ ವಿ. ಆ. ೪ ಪ. ೫೮

ಇನ್ನು ಷಡಕ್ಷರಿದೇವನು ಕುಮಾರವ್ಯಾಸನಿಗಿಂತ ಹೆಚ್ಚು ಸುಂದರವಾಗಿ. ವಿಸ್ತೃತವಾಗಿ ಭಾವಗಳನ್ನು ಬಿತ್ತರಿಸಿದ ಬಗೆಯನ್ನು ಇಲ್ಲಿ ಅವಲೋಕಿಸಬಹುದು,

ಅರ್ಜುನನ ತಪಸ್ಸಿನ ಉಗ್ರತೆಯನ್ನು ಕುಮಾರ ವ್ಯಾಸನು-

"ಮೇಲೆ ಮೇಲೀತನ ತಪೋಗ್ನಿ
ಜ್ವಾಲೆ ಜಡಿದುದು ತಡೆದುದಭ್ರ
ಸ್ಥಾಳಿಯಲಿ ಸೈವರಿವ ಸೂರ್ಯಾಚಂದ್ರಮಪ್ರಭೆಯ
ಥಾಳಿಸುವ ಪರಿಧೌತ ಮೌನ ಕ
ರಾಳ ತೇಜೋಗರ್ಭ ತಪ ಧೂ
ಮಾಳಿಯಲಿ ಮೇಘಾಳಿ ಮಸಗಿದುದು........" ೧ ॥

ಎಂದು ಹೇಳಿದರೆ ಷಡಕ್ಷರಿದೇವನು-

"ಕ್ಷಿತಿಯೆಲ್ಲಂ ಕಾಯ್ದುದಾಶಾಧಿಪರಗಿದರಮರ್ತ್ಯರ್ಕಳಲ್ಲಾಡಿದರ್ ಪ
ರ್ವತವೃಂದಂ ಕಾಯ್ಪುಗೊಂಡತ್ತತುಳಜಳಧಿ ಮೆಯ್ಗುಂದಿದತ್ತರ್ಕಚಂದ್ರೋ
ನ್ನತ ತೇಜಃಸ್ಫೂರ್ತಿಯೆತ್ತಂ ಮಸುಳ್ದುದಮಮ ತತ್ತಾಪಸಾತ್ತಪ್ರವೃದ್ಧೋ
ಗ್ರ ತಪೋಗ್ನಿಜ್ವಾಲೆಯಿಂದಂ ನೆಗೆದುದೊಗೆದ ತದ್ಧೂಮದಿಂ ಮೇಘವೃಂದಂ೨ ॥ "

ಎಂದು ವರ್ಣಿಸುತ್ತಾನೆ. ಇಲ್ಲಿ ತಪಸ್ಸಿನ ಉಗ್ರತೆ ಹೆಚ್ಚು ಸ್ಫುಟವಾಗುವಂತೆ ಷಡಕ್ಷರಿದೇವನು ಸುಂದರವಾದ ಪ್ರತಿಮೆಗಳನ್ನು ಬಳಸಿಲ್ಲವೆ ?

ಶಿವನು ಕಿರಾತವೇಷವನ್ನು ತಾಳಿದೊಡನೆ ಪಾರ್ವತಿಯೂ ಕಿರಾತೆಯ ರೂಹು ದಳೆವುದನ್ನು ವ್ಯಾಸನು :

---

೧. ಕು. ವ್ಯಾ. ಭಾ. ಅರಣ್ಯ ಸಂ. ೫, ಪ. ೧೦ ೨. ಶ. ಶಂ. ವಿ. ಆ. ೨, ಪ. ೧೦೬

"ದೇವ್ಯಾ ಸಹೋಮಯಾ ಶ್ರೀಮಾನ್ ಸಮಾನಾವ್ರತವೇಷಯಾ" ॥೧

ಎಂದು ವಿವರಿಸಿದುದನ್ನು ಕುಮಾರವ್ಯಾಸನು :

"ದೇವನನುರೂಪಿನಲಿ ನಿಂದರು ದೇವಿಯರು...." ೨

ಎಂದು ಕನ್ನಡಿಸಿಬಿಟ್ಟರೆ ಷಡಕ್ಷರಿದೇವನು ಅದನ್ನು ಕಾವ್ಯಮಯವಾಗಿ ಕಂಡರಿಸುವ ಕಲಾಪ್ರತಿಭೆಯನ್ನು ನೋಡಿರಿ :

"ತಳಿರುಡೆ ಸಂಜೆಗೆಂಪು ಪೊಸಮುತ್ತಿನ ಹಾರಮೆ ತಾರಕಾಳಿ ತ
ಳ್ತಳಿರುಚಿ ಕಾಯಕಾಂತಿ ಕಡುಗಳ್ತಲೆ ಮೂಕುತಿ ಮುತ್ತು ಶುಕ್ರಮಂ
ಡಳಮಮರ್ದೊಪ್ಪೆ ಭಿಲ್ಲಿಯ ವಿಳಾಸಮನಾಳ್ದಿಸೆದಂದು ಸರ್ವಮಂ
ಗಳೆ ನಿಜಕಾಳರಾತ್ರಿವೆಸರಂ ಮಿಗೆ ಸಾರ್ಥಕಮಂ ನೆಗಳ್ಚಿದಳ್ ॥"೩

ಅರ್ಜುನನು ಅತ್ಯಂತ ಪ್ರತಾಪದಿಂದ ಯುದ್ಧಮಾಡುವುದನ್ನು ಕಿರಾತರುದ್ರನು ಪಾರ್ವತಿಗೆ ತೋರಿಸುವುದನ್ನು ಕುಮಾರವ್ಯಾಸನು ಹೀಗೆ ವಿವರಿಸುತ್ತಾನೆ :

"ಆತನ ಪರಾಕ್ರಮಲಕ್ಷ್ಮಿಯನು ಪಾರ್ವತಿಗೆ ತೋರಿಸುತ"೪

ಇದನ್ನೇ ಷಡಕ್ಷರಿದೇವನು :

"ಬಳಿಯೊಳಿರ್ಪಗಜಾತೆಗೆ ಸೂಚಿಸುತ್ತೆ ಪುರ್ಬಿನ ಕೊನೆಸನ್ನೆಯಿಂ"೫

ಎಂದು ವರ್ಣಿಸುತ್ತಾನೆ. ಇಲ್ಲಿ 'ತೋರಿಸು'ವುದಕ್ಕಿಂತಲೂ 'ಸೂಚಿಸು'ವುದು ಹೆಚ್ಚು ಸೂಕ್ತವಾಗಿದೆ. ಅದರಲ್ಲಿಯೂ 'ಪುರ್ಬಿನ ಕೊನೆಸನ್ನೆಯಿಂ' ಸೂಚಿಸಿದ ನೆಂದು ಹೇಳಿ ಷಡಕ್ಷರಿದೇವನು ಕಾವ್ಯದ ಮಹೋನ್ನತ ಮಟ್ಟವನ್ನು ಮುಟ್ಟಿರುವನು; ಔಚಿತ್ಯದ ಪರಮ ಸೀಮೆಯನ್ನು ಸೇರಿರುವನು.

ಕಿರಾತನ ಅಭಿಮಾನದ ನುಡಿಯನ್ನು ಕೇಳಿದ ಅರ್ಜುನನ ಮನಸ್ಥಿತಿಯನು ಕುಮಾರವ್ಯಾಸನು ಹೀಗೆ ವರ್ಣಿಸುತ್ತಾನೆ :

"ಕದಡಿದನೀತನ ಸ್ಥೈರಣೆಯ ಮನವ"೬

ಈ ಸನ್ನಿವೇಶ ಶಬರಶಂಕರವಿಳಾಸದಲ್ಲಿ ಹೀಗೆ ವರ್ಣಿತವಾಗಿದೆ :

"ಒಳಸೋರ್ದುದು ಶಾಂತಿರಸಂ
ಮೊಳೆತುದು ಕೋಪಾಗ್ನಿ ಪೊಗೆದುದುಸಿರೊಳ್ ನಿಡುಗ
ಣ್ಗಳ ಕಡೆಯೊಳ್ ಕಿಡಿಗೆದರ್ದುದು
ಬಳಿಕಲರ್ದುದು ಮೊಗದೊಳಚಲರಿಪುನಂದನನಾ ॥"೭

---

೧. ವ್ಯಾ. ಮ. ಭಾ. ३. ३೯. २೭, ಪ. ३. ೨. ಕು. ವ್ಯಾ. ಭಾ. ಅರಣ್ಯ ಸಂ. ೬, ಪ. ೨.
೩. ಶ. ಶಂ. ವಿ. ಆ. ೩, ಪ. ೬. ೪. ಕು. ವ್ಯಾ. ಭಾ. ಅರಣ್ಯ ಸಂ. ೬, ಪ. ೨.
೫. ಶ. ಶಂ. ವಿ. ಆ. ೪, ಪ. ೩೦. ೬. ಕು. ವ್ಯಾ. ಭಾ. ಅರಣ್ಯ ಸಂ. ೬, ಪ. ೬.
೭. ಶ. ಶಂ. ವಿ. ಆ ೪, ಪ. ೩೭.

ಇಲ್ಲಿ ಷಡಕ್ಷರಿದೇವನ ಭಾವಸಂಪತ್ತಿನ ಹಿರಿಮೆ ಸಕೃದ್ದರ್ಶನಕ್ಕೆ ಸಹೃದಯರಿಗೆ ಗೋಚರವಾಗದಿರದು.

ಹೀಗೆ ಅನೇಕ ಸಂದರ್ಭಗಳಲ್ಲಿ ಹಿಂದಿನ ಭಾವಗಳು ಮುಂದುವರಿದು ಹೆಚ್ಚಿನ ಮೆರುಗನ್ನು ಕೊಡುತ್ತಿರುವುದನ್ನೂ ನೂತನ ಭಾವಗಳೂ ಪ್ರತಿಮೆಗಳೂ ರಾಶಿರಾಶಿಯಾಗಿ ಈ ಕಾವ್ಯದಲ್ಲಿ ಬರುತ್ತಿರುವುದನ್ನೂ ನಾವು ಕಾಣಬಹುದಾಗಿದೆ. ಷಡಕ್ಷರಿದೇವನು ಒಂದು ಖಂಡಕಾವ್ಯವನ್ನೇ ಬರೆಯಹೊರಟಿರುವುದರಿಂದಲೂ ಆತನು ಅತ್ಯಂತ ಪ್ರತಿಭಾನ್ವಿತನಾದ ಕವಿಯಾಗಿರುವುದರಿಂದಲೂ ಇದು ಸಾಧ್ಯವಾಗಿದೆ.

ಷಡಕ್ಷರಿದೇವನು ಬಹುಶ್ರುತನಾದ ಕವಿಯಾಗಿರುವುದರಿಂದ ಆತನ ಕಾವ್ಯದಲ್ಲಿ ಪೂರ್ವಕವಿಗಳ ಪ್ರಭಾವಮುದ್ರೆ ಎನಿತಾಗಿದೆ, ಆತನ ಸ್ವಯಂಪ್ರಪೂರ್ಣಪ್ರತಿಭೆ ಎಷ್ಟಿದೆ-ಎಂಬುದನ್ನು ದಿಕ್ಸೂಚಿಯಾಗಿ ಎತ್ತಿ ತೋರಿಸುವುದೇ ಮೇಲಿನ ಕಾವ್ಯಗಳ ತೋಲನೋದ್ದೇಶವಾಗಿದೆ.

ಇನ್ನು ಷಡಕ್ಷರಿದೇವನ ಪ್ರಭಾವಮುದ್ರೆ ಮುಂದಿನ ಕವಿಗಳ ಮೇಲೆ ಎಷ್ಟೆಂಬುದನ್ನು ನೋಡುವುದು ಇಷ್ಟೇ ಅವಶ್ಯಕವಾಗಿದೆ. ದೇವಚಂದ್ರನ ರಾಜಾವಳೀ ಕಥೆಯಲ್ಲಿ ಬರುವ ಕೆಳಗಣ ಉಲ್ಲೇಖ ಅತ್ಯಂತ ಮಹತ್ವಪೂರ್ಣವಾಗಿದೆ. "ಚಿಕದೇವರಾಯಂ ಕೋವಿದಶಿಖಾಮಣಿಯೆನಿಸಿದಂ, ತಿರುಮಲಾರ್ಯಂ ವಿದ್ಯಾವಿಶಾರದನೆನಿಸಿದಂ, ವಿಶಾಲಾಕ್ಷಂ ಸಾಹಿತ್ಯಭಾರತಿಯೆನಿಸಿದಂ, ಷಡಕ್ಷರಿ ಕವಿಶೇಖರನೆನಿಸಿದಂ."[೧] ಚಿಕದೇವರಾಯನ ಕಾಲದಲ್ಲಿ ಕನ್ನಡ ಸಾಹಿತ್ಯದ ಒಂದು ಸುವರ್ಣಯುಗವು ಆರಂಭವಾದುದು ನಮ್ಮ ಸಾಹಿತ್ಯೇತಿಹಾಸದಲ್ಲಿ ಸುಪ್ರಸಿದ್ಧವಾಗಿದೆ. ಚಿಕದೇವರಾಯ, ತಿರುಮಲಾರ್ಯ, ವಿಶಾಲಾಕ್ಷಪಂಡಿತ, ಚಿಕುಪಾಧ್ಯಾಯ, ಹೊನ್ನಮ್ಮ ಇವರು ಆ ಆಸ್ಥಾನದಲ್ಲಿ ಅಗ್ರಗಣ್ಯರು. ಈ ಕವಿಗಳ ಕಾಲದಲ್ಲಿ ಚಂಪೂ ಮತ್ತೆ ತಲೆಯೆತ್ತಿನಿಂತಿದೆ. ಇವರಲ್ಲಿ ಸತ್ವದಲ್ಲಿಯೂ ಮೊತ್ತದಲ್ಲಿಯೂ ಬೆಲೆಯುಳ್ಳ ಗ್ರಂಥಗಳನ್ನು ಬರೆದವನೆಂದರೆ ಚಿಕುಪಾಧ್ಯಾಯ. ಚಿಕುಪಾಧ್ಯಾಯನು ಚಂಪೂಗ್ರಂಥಗಳನ್ನು ಬರೆಯುವ ಮುನ್ನ ಷಡಕ್ಷರಿದೇವನ ಕಾವ್ಯಗಳನ್ನು ಅತ್ಯಂತ ಆಸ್ಥೆಯಿಂದ ಓದಿ ಮನನಮಾಡಿಕೊಂಡಿರಲು ಸಾಕು. ಅಂತೆಯೇ ಷಡಕ್ಷರಿದೇವನ ಭಾವಗಳೂ ಭಾಷೆಯೂ ಪದ್ಯಗಳೂ ರಾಶಿರಾಶಿಯಾಗಿ ಆತನ ಕಾವ್ಯಗಳಲ್ಲಿ ಬಂದಿವೆ. ಉದಾಹರಣೆಗಾಗಿ ಆತನ ವಿಷ್ಣುಪುರಾಣದ ಕೆಳಗಣ ಭಾಗಗಳನ್ನು ನಿರೀಕ್ಷಿಸಬಹುದು ;

---

೧. ರಾಜಾವಳೀ ಕಥೆ, ಅಧಿಕಾರ ೧೨, ಪುಟ ೪೫೪.

ರಾಜಶೇಖರವಿಳಾಸ—

"ಗಗನಗಜನಿಟಿಲತಟದಿಂ
ಜಗುಳ್ದಂತೆ ಪುರಾಣರಶ್ಮಿಮಣಿಮಯಮುಕುರಂ
ಮಿಗೆ ಮೆಱೆದುದರರೆ ಪಶ್ಚಿಮ
ನಗದಗ್ರದೊಳಿಳಿದು ತೋರ್ಪ ದಿನಕರಬಿಂಬಂ॥"೧

ವಿಷ್ಣುಪುರಾಣ—

"ಪುರಾಣರಶ್ಮಿಯುಕ್ತರತ್ನದರ್ಪಣಾರ್ಪಣಂ ಮಹಾ
ಕರೀಂದ್ರಫಾಲದೇಶದಿಂದೆರಲ್ಸಡಿಲ್ಚಿ ಬೀಳ್ವವೋಲ್
ಸ್ಫುರಜ್ಜಲಾಧಿನಾಥದಿಗ್ಧರಾಧರಾಗ್ರಭಾಗದೊಳ್
ಸರೋಜಬಂಧುಬಿಂಬಮಭ್ರದಿಂದೆ ಜಾರುತೊಪ್ಪುಗುಂ॥"೨

ರಾಜಶೇಖರವಿಳಾಸ—

"ಅರುಣಂ ಬಳಲ್ದ ತುರಗೋ
ತ್ಕರಮಂ ಮೈದೊಳೆಯಲಬ್ಧಿಯೊಳ್ತೆಗೆದು ಕೆಲ
ಕ್ಕಿರಿಸಿದ ರನ್ನದ ಪಲ್ಲಣ
ದಿರವೆನೆ ನೆರೆ ನೆಗೆದ ಸಂಜೆಗೆಂಪೆಸೆದಿರ್ಕುಂ॥"೩

ವಿಷ್ಣುಪುರಾಣ—

"ತೊಳೆಯಲ್ಬಳಲ್ದ ತುರಗಂ
ಗಳನರುಣಂ ಪಶ್ಚಿಮಾಬ್ಧಿತಟದೊಳ್ ತೆಗೆದು
ಜ್ವಳಿಸುವ ರನ್ನದ ಪಲ್ಲಣ
ಗಳನಿರಿಸಿದನೆನೆ ವಿರಾಜಿಕುಂ ಸಾಜೆವೊಗರ್॥"೪

ರಾಜಶೇಖರವಿಳಾಸ—

"ಎನ್ನ ತನೂಜೆ ನಿನ್ನರಸಿಯೊಳ್ಕೆಳೆಗೊಂಡೊಡನಿರ್ಪಳಾಗಳುಂ
ನಿನ್ನ ತನೂಜೆಯೆನ್ನರಸಿ ಕೇಳದರಿಂದೆಮಗಿಲ್ಲ ಭೇದಮಿ
ನ್ನೆನ್ನ ಮಗಂಗೆ ಕಾಯದಿರೆನುತ್ತೆ ಸರೋನಿಧಿ ಬಂದ ಭಾನುವಂ
ಮನ್ನಿಸುತಿತ್ತ ಪೀತವಸನಂ ನಿಜಮೆಂದೆನೆ ಸಂಜೆ ರಂಜಿಕುಂ॥"೫

ವಿಷ್ಣುಪುರಾಣ—

"ಕೆಳೆಗೊಂಡೆನ್ನ ತನೂಜೆ ನಿನ್ನರಸಿಯಲ್ಲಿರ್ಕುಂ ಭವತ್ಪುತ್ರಿಯೆ
ನ್ನೊಳಜಸ್ರಂ ಪ್ರಿಯೆಯಾಗಿ ರಂಜಿಸುಗುಮಿಂತಿರ್ದಿರ್ದುಮಸ್ಮತ್ಸುತಾ
ಮಳತೇಜಕ್ಕೆಡೆರಾಗವೇಡೆನುತೆ ಸಾರ್ತಂದರ್ಯಮಂಗಬ್ಧಿಮಂ
ಜುಳಪೀತಾಂಬರವಿತ್ತು ಸಂತವಿಸಿದಂತೊಪ್ಪಿತ್ತು ಸಂಧ್ಯಾರುಣಂ॥"೬

---

೧. ರಾ, ವಿ, ಆ. ೧೧, ಪದ್ಯ ೨   ೨. ವಿಷ್ಣುಪುರಾಣ ಆ. ೩ ಪ, ೯೮
೩. ,, ,, ಆ. ೧೨, , ೭   ೪. ,, ,, ಆ. ೩ ಪ, ೧೦೦
೫. ,, ,, ಆ. ೧೧, ,, ೯   ೬. ,, ,, ಆ. ೩ ಪ, ೧೦೧

ರಾಜಶೇಖರವಿಳಾಸ—

"ಇದು ಪೂರ್ವದಿಶಾವಧುವೆ
ತ್ತಿದ ಶಶಿಮಣಿಮುಕುರಮಮೃತಕರಮಂಡಳಮ
ಲ್ತಿದು ಚಿಹ್ನಮಲ್ತು ಮಧ್ಯದೊ
ಳೊದವಿದ ಮಾರ್ಪೊಳಪು ವಿಷ್ಣುಪದ ವಿಷ್ಣುವಿನಾ[೧]॥

ವಿಷ್ಣುಪುರಾಣ—

"ಪದೆದಿಂದ್ರದಿಶಾಂಗನೆಯೆ
ತ್ತಿದ ಶಶಿಮಣಿಮುಕುರಮಲ್ಲದಿದು ಬಿದುವಟ್ಟ
ಲ್ತದಱೊಳ್ ವಿಷ್ಣುಪದಶ್ರೀ
ಸುದತೀಶನ ಬಿಂಬಮಲ್ಲದಲ್ತು ಕಳಂಕಂ[೨]॥

ಹೀಗೆಯೆ ಷಡಕ್ಷರಿಯು ರಾಜಶೇಖರವಿಳಾಸದ ೧೧ ನೆಯ ಆಶ್ವಾಸದ ೩, ೧೦, ೨೧, ೪೬, ೫೪, ೫೮ ಈ ಪದ್ಯಗಳನ್ನು ಚಿಕುಪಾಧ್ಯಾಯನ ವಿಷ್ಣುಪುರಾಣದ ೩ ನೆಯ ಆಶ್ವಾಸದ ೯೯, ೧೦೨, ೧೦೬, ೧೧೦, ೧೧೨, ೧೧೩ ಈ ಪದ್ಯಗಳಿಗೆ ಕ್ರಮದಿಂದ ಹೋಲಿಸಿ ನೋಡಬಹುದು.

೧೭ ನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯದೊಳಗೆ ಚಂಪೂ ಮತ್ತೆ ತಲೆದೋರುವುದಕ್ಕೆ ಷಡಕ್ಷರಿದೇವನೇ ಪ್ರೇರಕಶಕ್ತಿಯೆಂದು ಹೇಳಲಭ್ಯಂತರವಿಲ್ಲ. ಚಿಕುಪಾಧ್ಯಾಯ, ತಿರುಮಲಾರ್ಯ ಮೊದಲಾದವರು ಆತನನ್ನು ಅನುಕರಿಸಿ ಅವನಿಗಿಂತಲೂ ಉತ್ತಮವಾದ ಕಾವ್ಯಗಳನ್ನು ಬರೆಯಬೇಕೆಂದು ಹೊರಟಿರುವರು. ಆದರೆ, ಅವರ ಕಾವ್ಯಗಳು ಪಾಂಡಿತ್ಯದ ಕಣಿಯಾದುವಲ್ಲದೆ ರಸದ ಹೊನಲಾಗಲಿಲ್ಲ. ಅಂತೆಯೇ ಅವರೆಲ್ಲರ ಮಧ್ಯದಲ್ಲಿ ಷಡಕ್ಷರಿದೇವನ 'ಕವಿಶೇಖರ'ನೆನಿಸಿರುವನು

ಷಡಕ್ಷರಿದೇವನ ಪ್ರಭಾವ ತದನಂತರ ಬಂದ ಎಲ್ಲ ಕವಿಗಳ ಮೇಲೆಯೂ ಆಗಿದೆ. ಮುದ್ದಣನ ಗ್ರಂಥವೊಂದರ ಹಸ್ತಪ್ರತಿಯ ರಕ್ಷಾಕವಚದ ಮೇಲೆ ಷಡಕ್ಷರಿದೇವನ ಕೆಳಗಣ ಪದ್ಯವೊಂದನ್ನು ಬರೆಯಲಾಗಿತ್ತಂತೆ:

"ಅರುಣೋದಯದರುಣದ್ಯುತಿ
ಗಿರಿಕಟಕದ ಪಳಿಕಿನಲ್ಲಿ ಬಿಂಬಿಸೆ ಕಾಣು
ತ್ತರುಣಜಲಂಗೆತ್ತಲ್ಲಿಯ
ಹರಿಣಾರಿಯ ಮಱಿಗಳೆಯ್ದೆ ನಕ್ಕುತ್ತಿರ್ಕುಂ[೩]॥

೧. ರಾಜಶೇಖರವಿಳಾಸ ಆ. ೧೧. ಪ. ೬೧. ೨. ವಿಷ್ಣುಪುರಾಣ ಆ. ೩. ಪ. ೧೧೫ ೩ ಶಬರಶಂಕರವಿಳಾಸ ಆ. ೨ ಪ. ೩೧.

ಇದು ನಿಜವಿದ್ದರೆ ಷಡಕ್ಷರಿದೇವನು ಮುದ್ದಣನಿಗೆ ಎಷ್ಟು ಆದರ್ಶಪ್ರಾಯನಾಗಿದ್ದನೆಂಬುದು ತಾನೇ ಸ್ಪಷ್ಟವಾಗುತ್ತದೆ. ಇಷ್ಟೇ ಏಕೆ? ಮುದ್ದಣನ ರಾಮಾಶ್ವಮೇಧದಲ್ಲಿ ಬರುವ ಪುತ್ರದೋಹದವರ್ಣನೆಯನ್ನೂ ರಾಜಶೇಖರವಿಳಾಸದಲ್ಲಿ ಬರುವ ಇದೇ ಸಂದರ್ಭದ ಪದ್ಯಗಳನ್ನೂ ತೂಗಿ ನೋಡಿದರೆ, ಮುದ್ದಣನ ಮೇಲೆ ಷಡಕ್ಷರಿದೇವನ ಪ್ರಭಾವಮುದ್ರೆ ಸ್ಪಷ್ಟವಾಗಿ ಬಿದ್ದಿರುವುದು ಗೋಚರವಾಗುತ್ತದೆ.

ರಾಜಶೇಖರವಿಳಾಸ—

ಅಮೃತಮತಿಮಹಾದೇವಿ.... .... ಕೆಳದಿಯೊಡನಿಂತೆಂದಳ್—

"ಎಳೆವರೆಯದೊಳೆಳೆಯರ್ಕಳಿ
ಗೆಳಸುತೆ ನಳಿತೋಳ್ಗಳಿಂದೆ ಬಿಗಿದಪ್ಪಿ ಮನಂ
ಗೊಳೆ ತಳ್ತು ನೋಡಿ ಮುದ್ದಿಪ
ವಿಳಾಸಮೊಂದಕ್ಕೆ ನೋಂತುದಿಲ್ಲಾಂ ಕೆಳದೀ೧ ॥

ರಾಮಾಶ್ವಮೇಧ—

"ಜಾನಕಿ ಸಖಿಗಿಂತೆಂದಳ್ ಮಿತ್ರೆ ನೋಡೆ! ನೋಡೆ! ....
ಎಳೆವರೆಯದೊಳ್ ನಲ್ಲೊಗಸಂ ಪೆತ್ತು ಬಾಲಕೇಳಿಯಂ ಕಣ್ದಣಿಯೆ ಕಂಡು
ಸಂಸಾರದ ಸಾರಮಿದೆನುತ ಸಂತಸಂಬಡುವ ಪೆಣ್ಗಳೆ ಧನ್ಯೆಯರಲ್ತೇ"೨

ರಾಜಶೇಖರವಿಳಾಸ—

"ಕರತಳದಿಂದೆನ್ನಯ ನು
ಣ್ಬೆರಲಂ ಪಿಡಿದೆಳ್ದು ಜನನಿ ನಡೆದಪೆನೆನುತೊಂ ॥
ದೆರಡಡಿಯನಿಟ್ಟು ನಿರಿಯಂ
ಭರದಿಂ ತಳ್ಕೈಪ ಮಗನನೆಂದೀಕ್ಷಿಪೆನೋ॥೩

ರಾಮಾಶ್ವಮೇಧ—

"ಅಜ್ಜ ಪಿಡಿ! ನಡೆದಪೆನೆನುತುಮೆರಟ್ಮೊಅಡಿಯಿಡುತೆ ಪೊಂಗಿ ತಾಯ ದಿಪುದೋಳಂ ತಾಂಗಿ ಮೆಲ್ಲನೊತ್ತಿನೊಳಂಕಮನೇಱಿ ನುಣ್ಗಲ್ಲಮಂ ಪಿಡಿದಲುಗಿಸಿ ಈಗಳ್ ನಡೆಗಲ್ವೆನೆನುತೆ ಕೇಳಿಪ ಕಂದನೆಂದಿಂಗೆ ಪುಟ್ಟುವನೋ"೪

---

೧. ರಾಜಶೇಖರವಿಳಾಸ ಆ. ೩. ಪ. ೪೬ ೨. ರಾಮಾಶ್ವಮೇಧ ಆ. ೪ ಪು. ೧೮
೩. ,, ಆ. ೩ ,, ೪೯ ೪. ,, ,, ೪ ,, ೧೮

ರಾಜಶೇಖರವಿಳಾಸ—

"ಅರಸನ ಪಿಂದೆಸೆಯೊಳ್ ಮೆ
ಯ್ಗರೆದೆಲ್ಲಿರ್ದಪೆನೊ ಜನನಿ ಪೇಳೆನುತೊಲವಿಂ
ಪರಿತಂದೆಳನಗೆ ಮಿನುಗು
ತ್ತಿರೆ ಕುವರಂ ಕೊರಲನೆಂದು ಬಿಗಿದಪ್ಪುವನೋ[೧]॥

ರಾಮಾಶ್ವಮೇಧ—

"ಪೆರತೊರ್ಮೆ ತಂದೆಯ ಪಿಂದೆಸೆಯೊಳಡಂಗಿ ತಾನೆಲ್ಲಿರ್ಪೆನೆನುತಬ್ಬೆ
ಯಂ ಕೇಳ್ವ............ ಕುಮಾರನೆನಗಪ್ಪನೆಂದಿಗೋ"[೨]

ರಾಜಶೇಖರವಿಳಾಸ—

"ಪಡಿನೆಳಲಂ ಮಣಿಕುಟ್ಟಿಮ
ದೆಡೆಯೊಳ್ನಡೆ ನೋಡಿನೋಡಿ ದಾಯೆನುತುಂ ಕೈ
ದುಡುಕಲದು ತುಡುಕೆ ನಗೆ ನಗೆ
ಕಡು ಬಿನದಂಬಡೆವ ಕಂದನೆಂದಾದಪನೋ[೩]

ರಾಮಾಶ್ವಮೇಧ—

"ಮತ್ತಮದೊರ್ಮೆ ಕೈಪಿಡಿಯಿಂ ಲೀಲೆಯಿಂ ದಿಟ್ಟಿಸಿ ಮಾರ್ಪೊಳಿವ
ಮುದ್ದುಮೊಗಮಂ ಪಡಿಗೂಸುಗೆತ್ತು ತನಗೆ ತಂದೀವುದೆಂದು ಚಲದಿಂ
ಮರುಗುವ............ಕುಮಾರನೆನಗಪ್ಪನೆಂದಿಗೋ[೪]"

ಈ ಸಂದರ್ಭದಲ್ಲಿ ತಿರುಮಲಾರ್ಯನ ಚಿಕದೇವರಾಯ ವಂಶಾವಳಿಯಲ್ಲಿ ಬರುವ ಅಮೃತಾಂಬೆಯ ಪುತ್ರದೋಹದ ವರ್ಣನೆಯನ್ನೂ ನೋಡಬಹುದು. ಅಲ್ಲಿಯೂ ಷಡಕ್ಷರಿದೇವನ ಪ್ರಭಾವಮುದ್ರೆ ಖಚಿತವಾಗಿ ಕಂಡುಬರುತ್ತದೆ. ಷಡಕ್ಷರಿದೇವನ ಅನಂತರ ಬಂದ ವೀರಶೈವ ಕವಿಗಳಿಗಂತೂ ಆತನು ಆಚಾರ್ಯಪುರುಷನಾಗಿದ್ದಾನೆ. ಅವರೆಲ್ಲರೂ ಆತನನ್ನು ತಮ್ಮ ಕಾವ್ಯಗಳಲ್ಲಿ ಸ್ಮರಿಸಿರುವರು; ನಮಸ್ಕರಿಸುವರು.

ಉದಾಹರಣೆಗೆಂದೂ ಕೊಟ್ಟೂರು ಬಸವೇಶ್ವರ ಚಾರಿತ್ರವನ್ನು ಬರೆದ ಬಸವ ಲಿಂಗಕವಿಯು (ಕ್ರಿ, ಶ. ೧೬೭೮) ಷಡಕ್ಷರಿದೇವನನ್ನು ಸ್ತುತಿಸುವ ಪದ್ಯ ವೊಂದನ್ನು ಇಲ್ಲಿ ಉಲ್ಲೇಖಿಸಬಹುದು:

---

೧. ರಾಜಶೇಖರವಿಳಾಸ ಆ. ೩ ,, ೫೦ ೨. ರಾಮಾಶ್ವಮೇಧ ೪ ,, ೧೮
೩. ,, ಆ. ೩ ,, ೫೨ ೪. ,, ,, ೧ ,, ೧೯

ನಾಮಮಾಮ್ನಾಯಸಂಸ್ತವನೀಯಮಹಿಮಾಭಿ-
ರಾಮಮಾತ್ಮೀಯವೇಷಂ ಶರಣತೋಷಂ ಸ-
ದಾಮಂಜುಲಾಮೃತಮಯೋಕ್ತಿ ಭಾಷಾಯೋಷಿತಾಮಾನಸಾನುರಕ್ತಿ
ಧೀಮಾನ್ವಿತತಿ ಸಮೀಹಿತ ಸುಕೃತತಾಲಿ ಶಿವ-
ಧಾಮ ವಿಶ್ರಾಮಧಾಮಂ ಸರಸಕವಿತಾರ-
ಮಾಮನೋಜ್ಞಂ ಷಡಕ್ಷರಿದೇವನೋವುದೆಮ್ಮಂ ಸತ್ಕಲಾನಿಧಿಜ್ಞಂ೧ ॥

ಹೀಗೆ ಷಡಕ್ಷರಿದೇವನು ತನ್ನ ಅನಂತರ ಬಂದ ಎಲ್ಲ ಮತೀಯ ಕವಿಗಳ ಮೇಲೆಯೂ ಪ್ರಭಾವಮುದ್ರೆಯನ್ನು ಬೀರಿದ್ದಾನೆ. ಆತನು ಅಷ್ಟೊಂದು ಪ್ರತಿಭಾ-ಸಂಪನ್ನನಾದ ಮಹಾಕವಿಯು.

ಒಟ್ಟಿನಲ್ಲಿ ಷಡಕ್ಷರಿದೇವನು ಕರ್ಣಾಟಕೃತಿಗೆ ಸೀಮಾಪುರುಷನು; ಚಂಪೂ ಯುಗವು ಮತ್ತೆ ತಲೆದೋರುವಂತೆ ಮಾಡಿದ ಮಹಾನುಭಾವನು; ಅವನು ಮಹಾ ಕವಿಗಳಾದ ಪಂಪ, ರನ್ನ, ನಾಗಚಂದ್ರ, ಹರಿಹರ ಈ ಕವಿಗಳ ಸಾಲಿನಲ್ಲಿ ನಿಲ್ಲತಕ್ಕ-ವನು. ಕನ್ನಡ ಚಂಪೂಸಂಪ್ರದಾಯದ ಮಹಾಕವಿಗಳಲ್ಲಿ ಪಂಪನು ಆದಿ, ಷಡಕ್ಷರಿ ದೇವನು ಕೊನೆ.

ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ
೧೦—೮—೧೯೬೨

ಆರ್. ಸಿ. ಹಿರೇಮಠ
ಎಮ್. ಎಸ್. ಸುಂಕಾಪುರ

೧. ಕೊ. ಬ. ಪು. ಸಂ. ೧. ದ. ೨೫.

ಶ್ರೀ

ಷಡಕ್ಷರಿದೇವವಿರಚಿತಂ

ರಾ ಜ ಶೇ ಖ ರ ವಿ ಳಾ ಸ ಂ

ಪ್ರಥಮಾಶ್ವಾಸಂ

ಶ್ರೀಶೈಲಾದಿಪ್ರಸಿದ್ಧಂ ಸುರುಚಿರವಿಜಯಸ್ತುತ್ಯನುದ್ರಿಕ್ತಸತ್ವಾ
ವೇಶಂ ಕಲ್ಯಾಣಭೂಭೃತ್ಸದನಧನದಮಿತ್ರಂ ಧರಾಧಾರಧರ್ಮಂ
ವೈಶದ್ಯ[೧]ದ್ಯೋ[೧]ತಿ ಚಂದ್ರೋಪಲಸಿತಭಸಿತಾನಂತಕಾಂತೋತ್ತಮಾಂಗಂ
ಶ್ರೀಶೈವಶ್ರೇಯಮಂ ಮಾಳ್ಕೆಮಗನವರತಂ ನಂದಿಕೇಶಂ ಮಹೇಶಂ ॥೧॥

ನಿಜನೇತ್ರಂ ಲೋಕನೇತ್ರಂ ನಿಜಭರಣಮಿಳಾಚಕ್ರಭಾರಾವಹಂ ಮೇಣ್
ನಿಜವಾಹಂ ಧರ್ಮಗೇಹಂ ನಿಜಧನು ದನುಜಾರಾತಿಜಾತಾಧಿವಾಸಂ
ನಿಜರೂಪಂ ವಿಶ್ವರೂಪಂ ನಿಜರಮಣಿ ಜಗನ್ಮಂಡಳೀಮಾತೆ ನಿಚ್ಚಂ
ನಿಜಮಾದಂ ಸುಪ್ರಮೋದಂ ಕುಡುಗೆಮಗತುಳಶ್ರೇಯಮಂ ಶೈಲಜೇಶಂ ॥೨॥

[೨]ಪು[೨]ರಮುಕ್ತಿಪ್ರಮದಾಮುಖೈಕಮುಕುರಂ ಮೋಹಾಂಧಕಾರೌಘಭಾ
ಸ್ಕರಬಿಂಬಂ ಮುನಿಮುಖ್ಯಮಾನಸಗೃಹಾಂತಜ್ಯೋತಿ ಚಿದ್ವ್ಯೋಮವಿ
ಸ್ಫುರದಬ್ಜಾಹಿತಮಂಡಳಂ ಶ್ರುತಿಸತೀಸೀಮಂತರತ್ನಂ ಮಹೇ
ಶ್ವರಪಾದಾಬ್ಜನಖಂ [೩]ಸುಖೋ[೩]ದಯಕರಂ ತಾನಿರ್ಕೆ ಮಚ್ಚಿತ್ತದೊಳ್ ॥೩॥

ಕ್ಷಿತಿಯಂ ಪಾಲಿಪಗಣ್ಯಪುಣ್ಯಮತಿಯಂ ಪ್ರಖ್ಯಾತಸೌಂದರ್ಯಸಂ
ಗತೆಯಂ ಶೈವಮತೈಕಕಲ್ಪಲತೆಯಂ ಶ್ರೀವಾಗ್ವಧೂಸಂತ[೪]ತ[೪]
ಸ್ತುತೆಯಂ ಚಂದ್ರಧರಾರ್ಧದೇಹಯುತೆಯಂ ಬಾಲಾಬ್ಜಿನೀಕಾಂತಸ
ದ್ಯುತಿಯಂ ಪಾರ್ವತಿಯಂ ಕೃಪಾವತಿಯನಾಗಳ್ ಬಣ್ಣಿಪೆಂ ಭಕ್ತಿ[೫]ಯಿಂ[೫] ॥೪॥

---

೧ ಜ್ಯೋ (ಬ, ಮೂ) ೨ ಹ (ಬ); ಪ (ಮೂ) ೩ ಶುಭೋ (ಬ, ಮೂ)
೪ ತರಿ (ಕ, ಬ) ೫ ಯಿಂದಂ (ಮೈ).

ಮುರಹರಪದ್ಮಸದ್ಮಮುಖನಿರ್ಜರಕೋಟಿಯನೊ[೧]ಕ್ಕಿ[೧]ಲಿಕ್ಕಿ ಸ
ಚ್ಚರಿತ ಜಿತಾಕ್ಷಸಂಚಯಮನಂಜಿಸಿ ಭಂಜಿಸಿ ಮೂಜಗಂಗಳೊಳ್
ಸರಿದೊರೆಯಿಲ್ಲಿವಂಗೆನಿಪ ಶೌರ್ಯಮನಾಂತ ಮನೋಜನಂ ಕನ
ಲ್ದುರುಪಿದ ಶಂಭುವರ್ಧತನುವಂ ಸೆಳೆದಂಬಿಕೆಗೆಯ್ದೆ ವಂದಿಪೆಂ ॥೫॥

ಯತಿತತಿಚಕ್ರವರ್ತಿ ರುಚಿರಾಮಳಮೂರ್ತಿ ವಿಶಾಲಕೀರ್ತಿಪೂ
ರಿತ ಹರಿದಂತನುಜ್ವಳಗುಣಾವಳಿಕಾಂತನತೀವಶಾಂತನಾ
ಶ್ರಿತಜನರಕ್ಷನನ್ವಿತಜಿತಾಕ್ಷನಮೋಘಕೃಪಾಕಟಾಕ್ಷನೂ
ರ್ಜಿತ ಚಿಕವೀರದೇಶಿಕಶಿಖಾಮಣಿ ಮಾಳ್ಕೆ ಮ[೨]ದಿ[೨]ಷ್ಟಸಿದ್ಧಿಯಂ ॥೬॥

ರದನದ ಕಾಂತಿ ನಿರ್ಜರಮುದಗ್ರ ಕಿರೀಟ ಮಣಿಪ್ರಕಾಶಮೊಂ
ದಿದ ನವಧಾತು ಬದ್ಧಫಣಿಯಂದಮರರ್ಕಡೆಯಲ್ಕೆ ಕಟ್ಟಿದ
ಗ್ಗದ ಫಣಿ ಗಂಡಮಂಡಳಮದಾಂಬುಗೆ ಪಾರ್ದೆಱಪುನ್ಮದಾಳಿ ನೀ
ರದಮೆನೆ ಮಂದರಂಬೊಲೆಸೆವಾನೆಮೊಗಂ ಮಿಗೆ ಮಾಳ್ಕವಿಘ್ನಮಂ ॥೭॥

ಅಹಿತತಮೋಪಹಂ ಧನುಜಸಂಹೃತಿಶಕ್ತಿಧರಂ ಪ್ರಭಾಕರಂ
ಮಹಿತಮಹೋದಯಂ ಕಮಳಬಂಧುರಸಸ್ಮಿತವಕ್ತ್ರಭಾಸುರಂ
ಬಹುಕರರಂಜಿತಂ ವಿಹೃತದೋಷನನಾರತಮೆನ್ನ ಹೃತ್ಸರೋ
ರುಹಕುಜಿ[೩] ತಾರಕಾರಿ ಮಿಗೆ ಮಾಡುಗೆ ಭವ್ಯತರಪ್ರಮೋದಮಂ ॥೮॥

ಸ್ಥಿರಕಾಯಂ ಸತ್ಸಹಾಯಂ ಶಮಿತವಿತತಮಾಯಂ ಸುರವ್ರಾತಗೇ[೩]ಯಂ[೪]
ಗುರುಶೃಂಗಂ ಸಾಧುಸಂಗಂ ಮದನಮದವಿಭಂಗಂ ಮಹೇಶಾಂತರಂಗಂ
ವರವೇ[೪]ಷ[೪]ಂ ಚಿತ್ರಭೂಷಂ ಪದವಲಯಿತಶೇಷಂ ಸದಾಸತ್ಯಭಾಷಂ
ಪರಿರುಂಧ್ರಂ ಭೂತಿಸಾಂದ್ರಂ ಕುಡುಗೆಮಗೆ ವಿತಂದ್ರತ್ವಮಂ ಶ್ರೀವೃಷೇಂದ್ರಂ ॥೯॥

ಸಕ್ಷಮ ದಕ್ಷಶಿಕ್ಷಣವಿಚಕ್ಷಣ[೫] ಸುಕ್ಷಣಲಕ್ಷಣೇಕ್ಷಣಾ[೫]
ರಕ್ಷಿತಲಕ್ಷಿತೇಶ್ವರ ಮುಮುಕ್ಷು ಜಿತಾಕ್ಷ ಮಹೋಕ್ಷಲಕ್ಷ ಫಾ
ಲಾಕ್ಷ ತರಕ್ಷುರಾಕ್ಷಸವಿಪಕ್ಷ ವಳಕ್ಷಸರಕ್ಷದೇಹ ಮೋ
ಹಕ್ಷಯದಕ್ಷ ರಕ್ಷಿಪುದಧೋಕ್ಷಜಪಕ್ಷ ಶಿವಾಕ್ಷಿಸಂಭವಾ ॥೧೦॥

---

೧ ಕ್ಕ (ಮೈ, ಬ, ಮೂ) ೨ ಗಿ (ರಿ, ಬ, ಮೂ) ೩ ಹಂ (ಬ) ೪ ಶಂ (ರಿ, ಬ)
೫ ಸುಲಕ್ಷಣ ದಕ್ಷಣೇಕ್ಷಣಾ (ಮೈ)

ಸದಮಳಧರ್ಮರೂಪನಭವಾಗಮಸಾರಕಳಾಕಳಾಪನು
ನ್ಮದ ಮದನಪ್ರಲೋಪನಕಳಂಕ ಸದದ್ವಯ ತತ್ವದೀಪನ
ಭ್ಯುದಯವಹಪ್ರತಾಪನತಿಭಕ್ತಿವಶೀಕೃತಶೈಲಚಾಪನಾ
ತ್ತದಯ ಜಿತತ್ರಿತಾಪಬಸವೇಶ್ವರನೀಗೆಮಗೀಶಭಕ್ತಿಯಂ ॥೧೧॥

ವೃಜಿನವ್ರಾತಮನೊ[೧]ಕ್ಕಿ[೧]ಲಿಕ್ಕಿ ಮದಮಾತಂಗಂಗಳಂ ಸೀಳ್ದು ತಾ
ಳ್ದು ಜಗದ್ವಿಶ್ರುತವರ್ತಿ ಕೀರ್ತಿಯನನಂಗೋದ್ರೇಕಮಂ ಮೆಟ್ಟಿ ಮು
ಟ್ಟಿಜಡಂ ಪೊರ್ದದ ಸಾಧುಬೋಧಮನಶೇಷತ್ಯಾಗಮಂ ಯೋಗಮಂ
ಸುಜನಗ್ರಾಗಿಪಭಿನ್ನಚೆನ್ನಬಸವೇಶಂ ಮಾಳ್ಕೆ ಸುಜ್ಞಾನಮಂ ॥೧೨॥

ಅರಿವರ್ಗಧ್ವಂಸಮಂ ಪೂಣ್ದೆಸಗಿ ತಳೆದು ಪಂಚಾಂಗಸನ್ಮಂತ್ರಮಂ ಪೊ
ರ್ದಿರೆ ಸತ್ವಂ ಸತ್ಪ್ರಜಾಪಾಲನೆಯ ನೆಗಳ್ದುಪಾಯಂಗಳಂ ಸಾರ್ದು ಶಕ್ತಿ
ಸ್ಫುರಣಂ ಕೈಗಣ್ಮೆ ತಂತ್ರೋದಿತಗುಣಗಣಮಂ ತಾಳ್ದಮೋಘಂ ಪ್ರಭುತ್ವಂ
ದೊರೆಕೊಂಡೆಮ್ಮಾಳ್ದನಾದಲ್ಲಮವಿಭು ವಿರತಿಶ್ರೀಯಮಂ ಮಾಳ್ಪುದೆಮ್ಮೊಳ್ ॥೧೩॥

ದುರಿತತಮಃಪತಂಗನಮಳಾರ್ಥವಿವೇಚನಸತ್ಪ್ರಸಂಗನೀ
ಶ್ವರಲಸದಂತರಂಗನಭವಾಗಮವಾರಿಜದಿವ್ಯಭೃಂಗನ
ಕ್ಷರಪರಲಿಂಗಸಂಗನತಿ[೨]ಶಾಂತಿ[೨] ನಿರಸ್ತಜಡಾನುಷಂಗನೊ
ಲ್ದುರುತರಸಿದ್ಧಲಿಂಗಯತಿತುಂಗನೊಡರ್ಚುಗೆ ಸಜ್ಜನೇಷ್ಟಮಂ ॥೧೪*॥

ಶಿವನೊಡನುಂಡು ಶಂಕರನನಂಗನೆಯಂಗಣಕಟ್ಟಿ ಶಂಭುವಿಂ
ಗವಯವಮಿತ್ತು ಶರ್ವನೊಡನಕ್ಷಮನಾಡಿ ಭವಂಗಮರ್ಚಿ ಚ
ಕ್ಷುವನಭವಂಗೆ ಪಾಲೆ[೩]ಐ[೩]ದು ಭರ್ಗನೊಳರ್ಪಿಸಿ ಸರ್ವಮಂ ಶಿವಾ
ಧವನೊಲವೆತ್ತರಿಂದೆಮಗೆ ವಂದ್ಯರನಿಂದ್ಯರವದ್ಯವರ್ಜಿತರ್ ॥೧೫*॥

ಸುಜನವರನತಪದನ ಸಳದ[೪]
[೫]ಸುಜನವರದ[೫]ನತುಳನಾದ ರಸಿಕನ ವಿಳಸ
ನ್ನಿಜಗುಣಯೋಗಿಯ ನಿರುಪಮ
ನಿಜಗುಣಯೋಗಿಯ ಪದಾಬ್ಜಕಾನತನಪ್ಪೆಂ ॥೧೬॥

---

೧ ಕ್ಕ (ಬ, ಮೂ) *೧೪ > ೧೫ (ಬ)
೨ ಶರ್ಮ (ಮೂ); ೩ ಐ (ಮೈ, ಬ, ಮೂ) ೪ ದಾ (ಬ, ಮೂ, ಮೈ):
೫ ಕುಜನಾವರಣ (ಮೊ) ಸುಜನರ ರಣ (ಕ) ಸುಜನ ವರಣದ (ಮೈ)
ಸುಜನವರನದ (ತಾ)

ರೇಣುಕ ರಾಮಪಂಡಿತ ಮಹಾಮರುಳಾರ್ಯರ ಮಾಯಿದೇವರಂ
ಜಾಣನ ಜಕ್ಕಣಾರ್ಯನ ಜಗನ್ನುತ ಮ[೧]ಲ್ಲ[೧]ಣ ಮಲ್ಲಣಾರ್ಯರಂ
[೨]ಪ್ರೀ[೨]ಣಿತಶಂಭುಶಂಕರ ಹರೀಶ್ವರ ರಾಘವ ಕೇಶಿರಾಜರಂ
ಮಾಣದೆ ಬಣ್ಣಿಸುತ್ತೆಱಗಿ ಮೇಣ್ಪಡೆವೆಂ ಪರಮಾರ್ಥಸಿದ್ಧಿಯಂ ॥೧೭॥

ನುತಿಪೆಂ ವಿಶ್ರುತ ವೀರಶೈವಶರಧಿಶ್ರೀಸೋಮನಂ ಸೋಮನಂ
ಜಿತವಾದಿವ್ರಜಸದ್ಬುಧ[೩]ಸ್ತುತಲ[೩]ಸತ್ಪತ್ಪದ್ಮನಂ ಪದ್ಮನಂ
ತತಗರ್ವೋದ್ಧತದುರ್ವಿದಗ್ಧ ಜನತಾಹೃದ್ಭೀಮನಂ ಭೀಮನಂ
ಸತತಾರಾಧಿತಶಾಂಕರೀರಮಣಪಾದಾಂಭೋಜನಂ ಭೋಜನಂ ॥೧೮*॥

ಧರೆಯೊಳ್ಮೇಣ್ಪುಟ್ಟಿ ಪುಟ್ಟುತ್ತುರುಳ್ವ ನರನ ಮೇಲುರ್ಬಿ ಕಬ್ಬಂಗಳಂ ಬಿ
ತ್ತರಿಸುತ್ತಂ ಸಪ್ರಯಾಸಂ ಕೆಲಕೆಲರಕಟಾ ಕ[೪]ಬ್ಬಿ[೪]ಗರ್ ಕೆಟ್ಟು ಪೋದರ್
ಹರಿದೇವಂ ದೇವದೇವೋತ್ತಮನ ಶರಣರಂ ಪಾಡಿ ಕೈವಲ್ಯಲಕ್ಷ್ಮೀ
ವರನಾದಂ ಮತ್ತವಂಗತ್ಯಧಿಕ ಶಿವಕವೀಂದ್ರ[೫]ಂಗ[೫]ದಾರ್ ಸಾಟಿಯ[೬]ಪ್ಪ[೬]ರ್ ॥೧೯*॥

ವರ್ಣತತಿಮಾತೃಜನಕರ
ಪರ್ಣಾಪರಮೇಶರೆಂಬ ನಿಗಮೋಕ್ತಿಯನಾ
ಕರ್ಣಿಸಿ ತನ್ನುತಿ[೭]ಗೆ[೭]ಯ್ಯದ
ದು[೮]ರ್ಣ[೮]ರಕೃತಿಕರನೆ ಲಬ್ಧವರ್ಣವರಾಕಂ ॥೨೦॥

ರಸೆಯೊಳ್ ರಸವತ್ಕವಿತೆಯ
ನ[೯]ರ್ಸ[೯]ರಲ್ಪ[೧೦]ಡೆ[೧೦]ದಸಮನಯನನಂ ಪೊಗಳದೆ ಮಾ
[೧೧]ನಿ[೧೧]ಸರಂ ಸುರರಂ ಪೊಗಳ್ವುದು
ಕಸವರಮಂ ಕಳೆದು ಕಸವನಾಂತವೊಲಕ್ಕುಂ ॥೨೧॥

ಅದಱಿಂದೆ ಮಹಿತಮಹಿಮಾ
ಸ್ಪದನಂ ಶಿವನಂ ತದೀಯ ಶರಣವ್ರಜಮಂ
ಪದೆದು ಮುದಮೊನವೆ ಬಲ್ಲಂ
ದದೆ ನುತಿಪೆಂ ನುತಿಸೆನುಳಿದ ಸುರರಂ ನರರಂ ॥೨೨॥

---

೧ ಲ್ಲ (ಮೈ) ೨ ಪ್ರೇ (ತಾ) ೩ ಪ್ರಕರ (ತಾ) ೪ ರ್ಬಿ (ಮೈ, ಕ) ೫ ರ್ಗ (ತಾ)
೬ ರ್ಪ (ಮೈ) ೭ ಗೈ (ಮೈ) ೮ ರ್ಣ್ಣ (ಮೈ, ಮೂ) ೯ ಸು (ಬ, ಕ, ಮೂ, ಮೈ) ಸ (ಬ)
೧೦ ಡ (ಕ) ೧೧ ನ (ಮೈ, ಕ). *೧೮ > ೧೯ (ತಾ).

ಬರೆಬರೆದಂತದಂ ತೊಡೆದು ತೊಟ್ಟನೆ ನಿಟ್ಟಿಸಿ [೧]ಮೆಲ್ಲ[೧]ನೊಂದುಮಂ
ಸರಸಪದಾರ್ಥಮಂ [೨]ತ[೨]ಡಕಿ ಕಾಣದೆ ಕಳ್ದು ಪರೋಕ್ತಿಯುಕ್ತಿಯಂ
ವಿರಚಿಸುತಂತುಮಿಂತುಮಳಿಗ[೩]ಬ್ಬ[೩]ಮನಾಗಿಸಿ ಕೇಳಿಸುತ್ತೆ ಕಾ
ಲುರಿಚರ ತೋರ್ಪ ದುಷ್ಕವಿ ಮಹಾಕವಿಮಧ್ಯದೊಳೊ[೪]ಪ್ಪಲಾರ್ಪನೇ[೪] ॥೨೩॥

ಅಳಿಗಬ್ಬಿಗನೊರ್ವಂ ಮಂ
ಜುಳಯುಕ್ತಿಯನೊಂದನೊಂದಿ ಸರಿವರ್ಪನೆಯ
[೫]ರ್ಗ[೫]ಳ ಕವಿಗೆ ರನ್ನಮೊಂದಂ
ತಳೆದಹಿ ರತ್ನಾಕರಕ್ಕೆ ಸರಿವಂದಪುದೇ ॥೨೪॥

ಸಕಳಕಳಾನಿಧಿನಿಕಟದೆ
ಸುಕರರಸಪ್ರಕಟಕಾವ್ಯಮೆಂಬಮೃತಪಯೋ
ಧಿ ಕರಂ ಪೆರ್ಚುಗುಮಲ್ಲದೆ
ಕುಕವಿ ಬುಧಪ್ರಭೃತಿಯಿದಿರೊಳೇಂ ಪೆರ್ಚುಗುಮೇ ॥೨೫॥

ಕೃತಿಕೃತಕೃತಿಯಂ ಕ್ಷಿತಿಯೊಳ್
ಮತಿರಹಿತರ್ತಿಳಿಯರೆಂದು ಪಳಿಯೆಂ ಮುಳಿಯೆಂ
ರತಿಲಾಲಸರಮಣೀಸಮ
ರತಿಯಂ ಕ್ಲೀಬರ್ಕಳೆಂತುಮೇನಱಿದಪರೇ ॥೨೬॥

ಬೇಱಿನಿಸಿ ಮಿಸುಗುವಲರ್ಗಳ್
ಬೀಱುವ ನಱುಗಂಪಿನೊಳ್ವಿಶೇಷಮನಱಿವಂ
ತಾಱಡಿ ನಾನಾಕೃತಿಯೊಳ್
ತೋಱುವ ನವ ಭಾವಭೇದಮಂ ಬುಧನಱಿವಂ ॥೨೭॥

ಭುವನ[೬]ದೆ[೬] ಭೋಜರಾಜನ ಮಹಾಸಭೆಯೊಳ್ ಬಹುಶಾಸ್ತ್ರಕೋವಿದರ್
ಸವಿಸಲೆ ಪೊಣ್ಮೆ ಪಾಡುವವರೇನಿರರೇ ತೆಗೆ ಕಾಳಿದಾಸಮು
ಖ್ಯವಿವಿಧಸತ್ಕವೀಂದ್ರರ ಜಸಂ ಬಿಡದಿನ್ನುಮಿರುತ್ತೆ ತೋರ್ಪವೋ
ಲವರ ಜಸಂ ವಿರಾಜಿಪುದೆ ಸತ್ಕವಿಯೊಳ್ಸರಿ[೭]ವ[೭]ರ್ಪನಾವನೋ ॥೨೮॥

---

೧ ಮೇಲ (ಮೈ, ರಿ, ಕ, ತಾ) ೨ ತು (ಮೂ) ೩ ರ್ಬ (ಕ, ತಾ, ಬ) ೪ ಳೊರ್ಪ-ಲೊರ್ಪನೆ (ಮೈ, ತಾ) ೫ ಗ (ಮೂ, ತಾ) ೬ ದಿ (ಮೂ) ೭ ಬ (ಕ, ಮೂ ಬ, ತಾ, ರಿ).

ಆರಾರೇಱಿರ್ಶಾಸ್ತ್ರ
ಶ್ರೀರೋಹಣಗಿರಿಯನಲ್ಲಿ ನವಕವಿತಾಚಿಂ
ತಾರತ್ನಂ ದೊ೧ರೆ೧ಗುಮೆ ಮಾ
ರಾರಿಯ ಕೃಪೆಯಿಲ್ಲದಂಗೆ ಧರಣೀತಳದೊಳ್ ॥೨೯॥

ಕಲಿಸಿ೨ದೊ೨ಡಂ ಬರ್ಕುಮೆ ಸ
ಲ್ಲಲಿತಕವಿತ್ವಂ ನಿಸರ್ಗ೩ಸು೩ಭಗಂ ರಮಣೀ
ವಿಲಸಿತ ರತಿರಸರಸಿಕತೆ
ತಲೆದೋರ್ಪುದು ತಾನೆ ಕಲಿಸಲೇಂ ಬಂದಪುದೇ ॥೩೦॥

ನಿಂದಿಸುವರ್ದುರ್ಜನರೆಂ
೪ಬೊ೪ಂದು ಭಯಂಬೆತ್ತು ಸುಕವಿ ರಚಿಸನೆ ಕೃತಿಯಂ
ಮಂದೇಹರಭಯದಿಂದರ
ವಿಂದಸಖಂ ನಿಜಮಯೂಖಮಂ ಪಸರಿಸನೇ ॥೩೧॥

ಕಿಱಿಯ ಕೃತಿ ಪಿರಿದೆನಿಕ್ಕುಂ
ಪೆಱರರ್ಥಕೆ ಕೈದುಡುಂಕದಿರೆ ಸತ್ಕವಿಗಂ
ಕಿಱಿಯ ಸಿರಿ ಪಿರಿದೆನಿಕ್ಕುಂ
ಪೆಱರರ್ಥಕೆ ಕೈದುಡುಂಕದಿರೆ ಮನುಜಂಗಂ ॥೩೨॥

ಮಿಸುನಿಯದೊಂದಾದೊಡದೇಂ
ಪೊಸ ತೊಡವೆನಿಸುತ್ತೆ ಬೇಱೆ ಬೇಱೆನಿಸುವವೋಲ್
ರಸವತ್ಕವಿತಾಮಾರ್ಗಂ
ರಸೆಯಲ್ಲಿ ವಿಚಕ್ಷಣರ್ಕಳಿಂ ಪೊಸತೆನಿಕುಂ ॥೩೩॥

ಭವ್ಯರ್ ಸತ್ಕೃತಿವೇಳ್ದರ್
ಕಾವ್ಯಾಲಾಪಾಂಶ್ಚ ವರ್ಜಯೇದೆಂಬುದಸ
ತ್ಕಾವ್ಯನಿಬಂಧನಮದಱಿಂ
ಸೇವ್ಯಂ ಸತ್ಕಾವ್ಯಮವನಿಯೊಳ್ ಬುಧಜನದಿಂ ॥೩೪॥

---

೧ ರ (ತಾ) ೨ ದ (ತಾ) ೩ ಖು (ತಾ) ೪ ದೊ (ತಾ)

ಮೊದಲ ಕವೀಂದ್ರರೊಲ್ದೊರೆದ ಸತ್ಕೃತಿಸಂಚಯಮೀ ಧರಿತ್ರಿಯೊಳ್
ಪುದಿದಿರೆ ನೋಡಿ [೧]ತುಷ್ಟಿ[೧]ವಡಲೊಲ್ಲದೆ ಕಬ್ಬಿಗರೇಕೆ ಕಬ್ಬಮಂ
ಗದಿಪರೊ ಬೇಱೆನುತ್ತೆ ನುಡಿವಳ್ಕಜಕಾಱನವಂಗೆ ಪುತ್ರಸಂ
ಪದ[೨]ಮೆ ದಲೇಕೆ[೨] ಬೇಱೆ ಪರಪುತ್ರರನೀ[೩]ಕ್ಷಿಪ ತುಷ್ಟಿ ಸಾಲದೇ[೩] ॥೩೫॥

ಎರವಿನ ಪಚ್ಚಮಂ ತಳೆದಿದಕ್ಕೆಣೆವಾರದಿದೆಂದು ಲೋಗರಾ
ಭರಣಮನೇಳಿಪಂತೆ ತನಗಿಲ್ಲದೆ ಸಾರಕವಿತ್ವಮನ್ಯಕಾ
ವ್ಯರುಚಿರಪದ್ಯಮಂ ಪರಿಸಿ ಸತ್ಕವಿನಿರ್ಮಿತಪದ್ಯಮಿಂತಿದ
ಕ್ಕೊರೆಯೆಯೆನು[೪]ತ್ತೆ[೪] ಕಾಳ್ಗೆಡೆವನಂ ನಗದಿರ್ಪರೆ ಬಲ್ಲ ಕಬ್ಬಿಗರ್ ॥೩೬॥

ಕೃತಿಕಾದಂಬಿನಿ ರಸಮಂ
ಕ್ಷಿತಿಪಸಭಾಕ್ಷಿತಿಗೆ ಸುರಿವ ಸಮಯದೆ ಖಲಗ
ರ್ಜಿತಘನಗರ್ಜಿತವೊದವಿದೊ
ಡತಿರಸವಿಸರಪ್ರಸಾರಕಾರಣಮಲ್ತೇ ॥೩೭॥

ಅಜನ[೫]ಜ[೫]ಗರಗರದಿಂದ
ಭೃಜಶಿಖಿರವದಿಂದೆ ಪುಲಿಯ ಕಾಯ್ಪಿಂ ನಿಸದಂ
ವೃಜಿನ ಘನ ಕುಜನ ಜನಮಂ
ಸೃಜಿಸಿದನಲ್ಲದೊಡವಂಗೆ ಜಗಮಂಜುವುದೇ ॥೩೮॥

ಸ್ಥಿತಿಯೊಳ್ಸುಜನಂ ಸುಖದಂ
ಮೃತಿಯೊಳ್ಕುಜನಂ ಜಗಜ್ಜನೌಘಕ್ಕಾದ್ಯಂ
ಮೃತಿಯೊಳ್ದುಃಖದನಂತ್ಯಂ
ಸ್ಥಿತಿಯೊಳ್ಪರಿಕಿಪ್ಪೊಡಿರ್ವರುಂ [೬]ಸರಿಯಲ್ತೇ[೬] ॥೩೯॥

ಪರಪರಿವಾದಮಂ ನೆಗ[೭]ಳ್ವು[೭]ದೇ ಜಪಮನ್ಯಮನಃಪ್ರಸೂನಮಂ
ಕೊರಗಿಪುದೇ ತಪಂ ಪೆಱರ ಜೀವಿತಮಂ ಪರಿದಿಕ್ಕುವಂದಮೇ
ಪರತರ ಶೀಲಮಾದರಿಸಿ ಲೋಗರಮರ್ಮಮನೆಯ್ದೆ ಭೇದಿಪೊಂ
ದಿರವೆ ಪೊದಳ್ದ ಜಾನಮೆನೆ ದುರ್ಜನತಾಪಸನೇಂ ಕೃತಾರ್ಥನೋ ॥೪೦॥

---

೧ ತೃಪ್ತಿ (ಕ) ೨ ಮೊದಲೇಕೆ (ಕ, ಬ, ರಿ, ತಾ); ಮನೆಲೇಕೆ (ಮೂ)
೩ ನೀಕ್ಷಿಸಿ ತುಷ್ಟಿ ವಟ್ಟಪಂ (ಮೈ) ೪ ತ್ತ (ತಾ, ಬ) ೫ ಜೆ (ಮೈ)
೬ ಸಮವಲ್ತೆ (ಮೂ) ೭ ಳ್ದು (ಮೈ, ಮೂ)

ಕಡಿವ[1]ಡೆ[1]ದುದೊ ನಂಜಿನಮು
ಳ್ಪುಡಿದುದೊ [2]ಕ[2]ರ್ಬೊನ್ನ ಸರ[3]ಳೆ[3] ಕೀಲಿಸಿದುದೊ ಮೇ
ಣಡರ್ದುದೊ ಮೂಕಗ್ರಹಮೆನೆ
ಮಿಡುಕದು ಖಳರಸನೆ ಸುಕವಿಕಾವ್ಯ[4]ಸ್ತವ[4]ದೊಳ್ ॥೪೧॥

ಇಲ್ಲದ ದೋಷಮನಲ್ಲಿಯೆ
ಸೊಲ್ಲಿಪನದನೆಲ್ಲಿ ತರ್ಪನೊ ಖಳನಿದನೆ
ನ್ನಲ್ಲಿ ನೆಱೆ ತಿಳಿದೆನಬ್ಧಿಯೊ
ಳಿಲ್ಲದ ವಿಷಮಂ ಮಹಾಹಿಯೇಂ ತೋಱದೆ ಪೇೞ್ ॥೪೨॥

ಖಲಕರ್ಣವಿಲದೊಳಿಳಿದು
ಜ್ವಲಕೃತಿರಸದಿಂದೆ ನಂದಿತಕ್ಕುಂ ದ್ವೇಷ
[5]ಜ್ವಲದಗ್ನಿಯಲ್ಲದೊಡೆ ಮುಖ[5]
ವಲಯಮನಾವರಿಸಿ ಪೊಗೆಯದೇಂ ತೋಱುಗುಮೇ ॥೪೩॥

ಘನಮಾರ್ಗಸುಭಗಸತ್ಕಾಂ
ತಿನಿಯುಕ್ತಂ ವಿಗತದೋಷಮಮೃತರುಚಿಸ್ಪ
ರ್ಧಿ ನವಕವಿಕಾವ್ಯರವಿ ದು
ರ್ಜನಘೂಕವ್ರಜಕ[6]ಸಹ್ಯಮಂ[6] ಪುಟ್ಟಿಸುಗುಂ ॥೪೪॥

ತಿಳಿದನಿತನನುಭವಿಸಿ ನೆಱೆ
ತಿಳಿಯದುದಂ ತಿಳಿದಱಿಂದೆ ತಿಳಿವುದು ಕೃತಿಯೊಳ್
ಪೊಳೆವರ್ಥಮನದನೆ ಖಳಂ
ತಿಳಿಯದೆ ತಾಂ ಪೞಿಯೆ ಪೞಿಗೆ ಪಕ್ಕಾಗಿರನೇ ॥೪೫॥

ಸಲೆ ಸತ್ಕೃತಿಯೊಳ್ದೋಷಮ
ನಲಸದೆ ನಡೆನೋಡಿ ನೋಡಿ ಕಾಣದೆ ಮನದೊಳ್
ಮಲಮಲನೆ ಮಱುಗುವೀ ಕೋ
ಟಲೆಯಿಂ ಖಳನೆಂತು ಬರ್ದುಕುವಂ ಭೂತಳದೊಳ್ ॥೪೬॥

---

೧ ಡ (ಮೈ) ೨ ಕಾ (ಮೂ, ಣ, ತಾ, ರಿ) ೩ ಳು (ಮೂ) ೪ ಸ್ಥಳ (ಮೂ, ತಾ)
೫ ಜ್ವಲನನದಿಲ್ಲದೆ ತನ್ಮುಖ (ಮೈ, ಮೂ) ೬ ಸೂಯಮಂ (ತಾ).

ಅದಱಿಂ [೧]ದೋಷಾಭಾಸ[೧]ಮ
ನೊದವಿಪರೊಂದೆಡೆಗೆ ದುರ್ಜನಸ್ತುತ್ಯತುಯೆಂ
ಬುದನನುಕರಿಸಿ ಕವೀಂದ್ರರ್
ಪದಪಿಂ ಕೃತಿಯೊಳ್ ಪರೋಪಕೃತಿಪರತಂತ್ರರ್ ॥೪೭॥

ಪಳಿಯಲ್ ಬಲ್ಲಂ ನೆಗಳಲ್
ಖಳನೇಂ ಬಲ್ಲನೆ ನವೀನಕಾವ್ಯಮನಿಳೆಯೊಳ್
ತೊಳಗುವ ರವಿಯಂ ಮುಸುಳಿಪ
ಜಳಧರಮದಱಿಂತೆ ಜಗಮನೇಂ ಬೆಳಗುಗುಮೇ ॥೪೮॥

ಸುಕವಿಗುಣರಚಿತಕೃತಿಚಂ
ಪಕಮಾಲಿಕೆಗಕಟ ಮಳಿನನಮಳಿನ ಸುಮನಃ
ಪ್ರಕರಮನಲೆದೆಱಗುವ ಧೂ
ರ್ತಕದಂಬಭ್ರಮರನಿವಹಮೇನೆಱಗುಗುಮೇ ॥೪೯॥

ರಸಿಕಕವಿರಚಿತಕೃತಿಮಾ
ನಸದೊಳ್ವಿಹರಿಪವಿದಗ್ಧವಿಮಳಮರಾಳಂ
ವಸಿಯಿಕುಮೆ ಕುಕವಿಕೃತಕೃತಿ
ವಿಸರತ್ಪಲ್ವಲದೊಳಬುಧಬಕಸೇವಿತದೊಳ್ ॥೫೦॥

ಒರೆಯೆ ಸುವರ್ಣರೇಖೆ ಮಿಗೆ ಬಾರದೊಡಂ ಪೊಸ ಚಿನ್ನದಂತೆ ಕಂ
ಡರಿಸಿದೊಡಿಕ್ಷುಕಾಂಡಮೆನೆ ಸೀಯನೆ ಸದ್ರಸಮುಣ್ಮದಿರ್ದೊಡಂ
ಸರಗೊಳಿಸುತ್ತೆ ತಾಳೆ ಮಣಿಮಾಲಿಕೆಯಂತೆ ಕೊರಲ್ಗೆ ಕಾಂತಿಯಂ
ನೆರಪದೊಡಂ ರಸಜ್ಞಸುಮನೋಜ್ಞಮೆ ಕಾವ್ಯಮದುಂ ಧರಿತ್ರಿಯೊಳ್ ॥೫೧॥

ಕವಿವಿಬುಧರ ಕಿವಿಯೊಳ್ಸೂ
ಸುವ ನವರಸಮಿಳಿದು ತೀವಿ ತನುವಂ ಮನ[೨]ವಂ[೨]
ಕವಿದು ಪೊಱಸೂಸಿತೆನೆ ಪೊ
ಣ್ಮುವ ಸುಖಬಾಷ್ಪಂ ತುಳುಂಕೆ ಪೇಳ್ವುದು ಕೃತಿಯಂ ॥೫೨॥

---

೧ ದೋಷಭಾಷ (ತಾ) ೨ ಮಂ (ಮೈ, ಮೂ)

ಶಿವವಕ್ಷೋಭಸ್ಮರೇಣುಪ್ರಭವನೆನಿಸಿ [೧]ಮುಂ[೧] ರೇಣುಕೇಶಾಖ್ಯೆಯಂ ತಾ
ಳ್ದವನೀರಕ್ಷಾರ್ಥಮೀಶಂ ಬೆಸಸೆ ಧರಣಿಯೊಳ್ಕೊಲ್ಲಿಪಾಕೀಶನೊಳ್ಸಂ
ಭವಿಸುತ್ತುಂ ಜಂಗಮಾಕಾರದೆ ಸುೞಿದಖಿಳಕ್ಷೇತ್ರಮಂ ಪಾವನಂಗೆ
ಯ್ದು ವಿಶೇ[೨]ಷೌನ್ನತ್ಯ[೨]ದಿಂ ಕುಂಭಜಮುಖಮುನಿಪವ್ರಾತಮಂ
ಬೋಧಿಸುತ್ತಂ ॥೫೩॥

ಖಗತಿಯೊಳೆಯ್ದಿ ಲಂಕೆಗೆ ವಿಭೀಷಣನಿಷ್ಟಮನಿತ್ತು ಸಿದ್ಧರಂ
ಬಗೆಗೆಡಿಸುತ್ತೆ ಬಿಜ್ಜಳನನಳ್ಕಿಸಿ ನೇತ್ರಮನಿತ್ತು ತೆಲ್ಲಿಗಂ
ಗೆ ಗರುಡವಾಹಕಂಪನಮನಿಲ್ಲೆನಿಸುತ್ತೆ ನಿಜೋರುತೇಜದಿಂ
ದಗಣಿತಮಾದ ಪೆಣ್ಸೆಱೆಗಳಂ ಬಿಡಿಸುತ್ತುರುವಿಕ್ರಮಾರ್ಕನಾ ॥೫೪॥

ಅಭಿಮತಮಿತ್ತು ಖರ್ಪರನ ಭಂಗಿಸಿ ಯಕ್ಷನ ರಕ್ಷಿಸುತ್ತೆ ಬಂ
ದಭವನನುಜ್ಞೆಯಿಂ ಮದುವೆನಿಂದು ಮಹೀಶ್ವರಪುತ್ರಿಯರ್ಕಳೊಳ್
ವಿಭವದೆ ತದ್ವಧೂತತಿಯೊಳಗ್ಗಳಭೋಗಮನಾಂತು ರೇವಣ
ಪ್ರಭು ಪಡೆದಂ ಮಹೋತ್ಸವದೆ ರುದ್ರಮುನೀಶ್ವರ[೩]ನೆ[೩]ಂಬ ಪುತ್ರನಂ ॥೫೫॥

ಕಾರುಣ್ಯಂಗೆಯ್ದು ಸದ್ದೀಕ್ಷೆಯನೆಸಗಿ ಲಸಚ್ಚಿತ್ಕ್ರಿಯಾಮಾರ್ಗಮಂ ಪೇ
ಳ್ದಾ ರಾಜತ್ಸೂನುಗಾಚಾರ್ಯತೆಯನೊಸದು ತಾನಿತ್ತುಮೇಶಾಜ್ಞೆಯಿಂ[೪]ದಿಂ[೪]
ತೀರೇೞ್ನೂರ್ವತ್ಸರಂಗಳ್ನಿಱಿಯೆ ಭರದೊಳಾ ಕೊಲ್ಲಿಪಾಕೀಶನೊಳ್ಪೊ
ಕ್ಕಾರಾಧ್ಯಂ ಮುಕ್ತಿರಾಮಾರಮಣನೆನಿಸಿದಂ ರೇಣುಕಾಚಾರ್ಯವರ್ಯಂ ॥೫೬॥

ರುದ್ರಮುನೀಂದ್ರನಾಮಮುನಿಮುಖ್ಯನಿಳಾತಳದಲ್ಲಿ ಪೆರ್ಮೆವೆ
ತ್ತದ್ರಿಜೆಯಾಣ್ಮನರ್ಗಳಮಹತ್ವಮನೆಲ್ಲೆಡೆಯಲ್ಲಿ ತೋಱುತಂ
ಕ್ಷುದ್ರಮತಂಗಳಂ[೫] ಜಯಿಸಿ[೫] ಬೆಳ್ಜಸಮೆಣ್ದೆಸೆದೀವೆ ಸಂತತಂ
ಭದ್ರ ಚರಸ್ವರೂಪನೆಸೆದಂ ನಿಗಮಾಗಮಶಾಸ್ತ್ರಪಾರಗಂ ॥೫೭॥

ಆ ಗುರುನಾಥ[೬]ವಂ[೬]ಶದೊಳೆ ಪುಟ್ಟಿದನೊರ್ವನಖರ್ವಸರ್ವಶೈ
ವಾಗಮವೇದಿ ನಿರ್ಜಿತಮನೋಜನಿಳಾತಳರುದ್ರಮೂರ್ತಿ ಸ
ದ್ಯೋಗಿವರೇಣ್ಯನಾನತಸುರಾಗನರಾಗನಗಣ್ಯಪುಣ್ಯಶೋ
ಭಾ[೭]ಗತ[೭]ವಿಗ್ರಹಂ ವಿಪುಳಶೈವಸುಧಾಂಬುಧಿ[೮]ಶ[೮]ರ್ವರೀಶ್ವರಂ ॥೫೮॥

---

೧ ಯುಂ (ರಿ, ತಾ, ಮೂ, ಬ) ೨ ಪೊನ್ನತ್ಯ (ಕ) ೩ ರೆ (ಮೈ) ೪ ದಂ (ಮೂ)
೫ ಜೈಯ್ಸಿ (ಮೂ) ೬ ನಂ (ಮೂ) ೭ ಕರ (ಮೂ) ೮ ಶಾ (ಮೂ, ತಾ, ಬ)

ಜ್ಞಾನನಿಧಾನನಾನತಜನಪ್ರಸರಾಮರಭೂರುಹಂ ಸುಧಾ
ಭಾನುಸಮಾನಕೀರ್ತಿ ಶಿವಮೂರ್ತಿ ಮುನೀಶ್ವರಚಕ್ರವರ್ತಿ ಧಾ
ತ್ರೀನವಿತಾನಮಾನಿತಪದಂ ಪದೆದೊಪ್ಪಿದನುತ್ತ್ರಭಾವನು
ದ್ದಾನನವೀನನಾಮಚರಪುಂಗವನಂಗಜಮಾನಮರ್ದನಂ ॥೫೯॥

ಆ ಶಿವಯೋಗಿಹಸ್ತ ಕಮಳೋದರದೊಳ್ಮಿಗೆ ಪುಟ್ಟಿ ಭಕ್ತಿಯಿಂ
ಶ್ರೀಶಿವನಂಘ್ರಿಯಂ ಭಜಿಸಿ [1]ತ[1]ತ್ಕೃಪೆಯಿಂ ಘನಶಿಷ್ಯವೃಂದಮಂ
ದೇಶಿಕಶೇಖರಂ ಪಡೆವುತಾತ್ಮಸಮಾನ[2]ರ[2]ನುರ್ವಿಗನ್ನದಾ
ನೀಶನೆನಿಪ್ಪ ನಾಮ[3]ಮ[3]ಭಿರಾಮತೆವೆತ್ತಿರೆ ತೋರ್ದನೂರ್ಜಿತಂ ॥೬೦॥

ಶಿವನ ಗುಣಂ ಪುರಾಂತಕನ ವಿಕ್ರಮಮಿಂದುಕಳಾಕಪರ್ದನು
ತ್ಸವಮಹಿರಾಜಭೂಷಣನ ಪ್ರೈಮೆ ಮಹೇಶನ ಭಾಗ್ಯಮಂಬಿಕಾ
ಧವನ ಜಸಂ ಗಿರೀಶ್ವರನ ಗೌರವಮೊರ್ಬುಳಿಗೊಂಡು ಪುಟ್ಟಿದಂ-
ತೆವೊಲೊಗೆದಂ ತದೀಯ ಕರಕಂಜದೆ ರೇವಣಸಿದ್ಧದೇಶಿಕಂ ॥೬೧॥

ಧರಣೀರಮಣಿಯ ಹೃದಯಾಂ
ಬುರುಹದವೊಲ್ ಮೆಱೆದು ತೋರ್ಪ ದನುಗೂರೊಳ್ಬಾ
ಸುರಕರ್ಣಿಕೆ[4]ವೊ[4]ಲ್ರಾಜಿಪ
ವರಮಠದೊಳ್ ಪರಮಹಂಸನೆನೆ ರಂಜಿಸಿದಂ ॥೬೨॥

ಶಿವಪೂಜಾರತಿಯಿಂ ರತೀಶ್ವರಜಯಪ್ರಾಗಲ್ಭ್ಯಸದ್ವೃತ್ತಿಯಿಂ
ವಿವಿಧಾಮ್ನಾಯವಿಚಾರದಿಂ ಶರಣಗೋಷ್ಠೀಸಾರಸಲ್ಲಾಪದಿಂ
ಭುವನಸ್ತುತ್ಯನಶೇಷಶಿಷ್ಯತತಿಯಿಂ ತಾನೊಪ್ಪಿದಂ ಶಂಭುಸಂ
ಭವತದ್ರೇಣುಕರೂಪರೇವಣಮಹಾಯೋಗೀಂದ್ರಪಂಚಾನನಂ ॥೬೩॥

ವರವಾಣಿವಿಬುಧಸೇವಿತ
ಚರಣಂ ಕಲ್ಯಾಣಗರ್ಭನಾಗಿಯುಮಜನಂ
ತಿರೆ ಜಡಜಜನೆನಿಸದೆ ತ
ದ್ಗುರುಕರಕಂಜಾತಜಾತನೆನಿಸಿದನೀತಂ ॥೬೪॥

---

೧ ಸ (ಮೂ) ೨ ಮ (ರಿ) ೩ ವ (ಮೈ, ಬ, ಮೂ) ೪ ಯೋ (ಮೂ)

ಮಣಿಯದ ಮಾನ್ಯರಿಲ್ಲ ತಲೆವಾಗದ ವಾದಿಗಳಿಲ್ಲ ಬಂದು ಸಂ
ದಣಿಸದ ಸಂತರಿಲ್ಲ ನಡೆನೋಳ್ಪೊಡೆ ಬಾರದ ರಾಜರಿಲ್ಲ ಕೂ
ರ್ತಣಿಸದ ಧೀರರಿಲ್ಲ ನುತಿಗೆಯ್ಯದ ಕಬ್ಬಿಗರಿಲ್ಲ ಸಾರಸ
ದ್ಗುಣಮನೆನಲ್ ಧರಾತಳದೊಪ್ಪಿದನಾ ಚಿಕವೀರ[1]ದೇಶಿಕಂ[1] ॥೬೫॥

ಕ್ಷೀರಪಟೀರಹೀರಘನಸಾರಸುಶಾರದನೀರದೋರುಮಂ
ದಾರತುಷಾರವಾರವರಹಾರಸರೋರುಹಸಾರಸಾರಿಬೃಂ
ದಾರಕವಾರಣಾರುಚಿರನಾರದತಾರಸಮೀರಭುಗ್ವರೋ
ದ್ಗಾರಯಶಂ ವಿರಾಜಿ[2]ಸಿ[2]ದುದೆಣ್ದೆಸೆಯೊಳ್ ಚಿಕವೀರದೇವನಾ ॥೬೬॥

ಜನನುತಶಾಂತಿಭೂಷನ ಜಗಜ್ಜನವಂದ್ಯನ ಧರ್ಮಪೂರ್ಣಕೋ
ಶನ ಧರಣೀಶಪೂಜ್ಯನ ಶುಭಾವಹಭಾವನ ಶೈವಪಾರಿಜಾ
ತನ ಮಧುರಸ್ವಭಾವನ ಮಹಾಮಹಚಿತ್ತನ ಮನ್ಮಥಾರಿರೂ
ಪನ ಚಿಕವೀರದೇವನ ಚಿದಂಬರಶಂಬರಜಾತಮಿತ್ರನಾ ॥೬೭॥

ಕರಕಂಜಾತಸುಜಾತನುತ್ತಮಜನಾನಂದಾಬ್ಧಿರಾಕಾಸುಧಾ
ಕರನುದ್ಯತ್ಕವಿತಾಲತಾರ್ಚಿತಯಶಃಪುಷ್ಪೋದಯಂ ಸಾಂಬಶಂ
ಕರಪಾದಾಬ್ಜಮಧುವ್ರತಂ ಸುಕವಿವೃಂದಸ್ತೋ[3]ತ್ರ[3]ಪಾತ್ರಂ ಷಡ
ಕ್ಷರಿದೇವಂ ಸರಸಪ್ರಬಂಧಸುಭಗಾಂಭೋಜಪ್ರಭಾವಲ್ಲಭಂ ॥೬೮॥

ಜಸವೆತ್ತು ಪೆರ್ಮೆ ಮಿಗೆ ರಂ
ಜಿಸೆ ವಸುಧಾತಳದೊಳಖಿಳಕಳೆಗಳನೊಳಕೊಂ
ಡೆಸೆವ ಬುಧರಾಜರಾನಂ
ದಿಸಿ ಸಲೆ ಕೊಂಡಾ[4]ಡಿ[4] ಕೂರ್ಮೆಯಿಂದಿಂತೆಂದರ್ ॥೬೯॥

ಎಳವರೆಯದೊಳಖಿಳಕಳಾ
ವಿಳಾಸಮಂ ಕಂಡು ಮೆಚ್ಚಿ ಬರೆ ಕವಿತಾಕೋ
ಮಳೆಯವಳ್ಗೆರ್ದೆಯಿತ್ತುಂ ಯತಿ
ತಿಳಕಂ ನೀನೆನಿಪುದಿಳೆಗಿದಚ್ಚರಿಯಲ್ತೇ ॥೭೦॥

---

೧ ದೇವನಾ (ಕ) ೨ ಪು (ಮೂ, ಬ) ೩ ಮ (ಮೂ) ೪ ಡೆ (ಮೂ, ಕ)

ಇಂಗಡಲೊಡನಾಡಿಯೊ ನೆಱೆ
ದಿಂಗಳ ಸೋದರಮೊ ಸುದತಿಯಧರಾಮೃತದಿಂ
ಪಿಂಗಿದು ಗುರುವೊ ಸುಧಾರಸ
ಮಂ ಗೆಲ್ದಂಕಮೊ ಭವದ್ವಚಸ್ಸಮುದಯಮೋ ॥೭೧॥

ನಿನಗೆ ನಿಸರ್ಗಮಲ್ತೆ ನಿರಹಂಕೃತಿ ನಿರ್ಮಳಬುದ್ಧಿ ಶುದ್ಧವ
ರ್ತನೆ ಶಿವಯೋಗಮಾ[1]ಗಮ[1] ವಿಚಾರತೆ ಸದ್ಗುರುಭಕ್ತಿ ಶೈವಕಾ
ವ್ಯನಿವಹಸತ್ಪುರಾಣತತಿತರ್ಕಸಮಂಚಿತಷಟ್ಸ್ಥಲಾಂಕಶಾ
ಸ್ತ್ರನಿಚಯಸಾರದರ್ಶನಮಿಳಾಪತಿಪೂಜಿತಪಾದಪಂಕ[2]ಜಾ[2] ॥೭೨॥

॥ ವ ॥ [3]ಎಂದು[3] ಮನಂದಂದು ಕೀರ್ತಿಸಿ ಮತ್ತಮಿಂತೆಂದರ್—

ಶ್ರೀಮತ್ಕೈಲಾಸದೊಳ್ ಶಂಕರನಿರೆ ಸಭೆಯೊಳ್ ಬಂದು ಮೆಯ್ಯಿಕ್ಕಿಬೊಮ್ಮಂ
ಸ್ವಾಮಿ ಶ್ರೀಕಂಠ ನಿಮ್ಮಾಜ್ಞೆಯೊಳೆ ಗುಹನನೊಲ್ದೋದಿಸಲ್ಕೆಂದು ಮುನ್ನಾಂ
ಪ್ರೇಮಂಬೆತ್ತೊಪ್ಪವೋಂಕಾರಮನೆ ಬರೆಯೆ ಕೋಽರ್ಥೋಽಸ್ಯಮೇ ಬ್ರೂಹಿಯೆಂದೆಂ
ಬೀ ಮಾತಂ [4]ಪೇಳೆ[4] ಮುಂ ಕೇಳ್ವುದೆ ಲಘುವೆನೆ ಪೊಯ್ದಂ ಕಶಾದಂಡದಿಂದಂ
॥೭೩॥

ವೇದಾಂಗವದನನಿವನೊಳ್
ವಾದಿಸುವುದಯುಕ್ತಮೆಂದು ತತ್ಪ್ರಣವಕ್ಕಾ
ನೋದಿದೆನುಚಿತಗ್ರಂಥಮ
ನಾದರದಿಂ ದೇವ ಪನ್ನೆರಳ್ಸಾ[5]ಸಿ[5]ರಮಂ ॥೭೪॥

ಅದನಾಕರ್ಣಿಸಿ ಜಾಡ್ಯಬುದ್ಧಿ ತೊಲಗೆಂದೇಳ್ತಂದನಿಲ್ಲಿಂದೆ ಮೇ
ಲೆ ದಯಾವಾರಿಧಿ ನೀಂ ನಿರೂಪಿಸೆನೆ ಕೇಳೆಂದೋದಿದಂ ಶಂಭು ಸಂ
[6]ಮ[6]ದದಿಂ ದ್ವಾದಶಲಕ್ಷಮಂ ಪ್ರಣ[7]ವ[7] ದರ್ಥಗ್ರಂಥಮಂ ಕೇಳ್ದು ಷ
ಡ್ವದನಂ ದ್ವಾದಶಕೋಟಿಯುಂಟೆನೆ ಮಹೇಶಂ ಮೆಚ್ಚಿ ಸಂಪ್ರೀತಿಯಿಂ ॥೭೫॥

ಅಂದಗಜಾತೆಗಾನೊರೆವ ಕಾಲದೊಳಾಲಿಸಿ ಬಾಲನೀ ಕುಮಾ
ರಂ ದಿಟಮಂತದಂ ಮಱಿದನ[8]ಲ್ಲೆ[8]ನುತಂ ಪೊಗಳ್ದಲ್ಲಿ ಪೋಗು ಸೈ
ಪೊಂದಿದ ಚೋಳಮಂಡಳದ ಶೈವಸಮೂಹಕೆ ಮಂತ್ರದರ್ಥಮಂ
ಕುಂದದೆ ಬೋಧಿಸೆಂದು[9]ಸು[9]ದು ಕಂಜಜನಂ ಕರೆದೊಲ್ದು ಶಂಕರಂ ॥೭೬॥

---

೧ ರ್ಗ (ಮೂ) ೨ ಜಂ (ರಿ, ಬ, ಕ) ೩ ಇಂತು (ಮೂ) ೪ ಕೇಳೆ (ತಾ)
೫ ವಿ (ತಾ, ಬ) ೬ ಮು (ಮೂ, ರಿ) ೭ ಮ (ಕ) ೮ ಲ್ತೆ (ತಾ) ೯ ಸಿ (ಬ)

ವಾಗೀಶಾಹ್ವಯಮಾಂತು ಪುಟ್ಟಿ ತಿಳಿ ನೀನೀ ಮಂತ್ರದರ್ಥಂಗಳಂ
ಪೋಗೆಂದಂದೊಡಗೂಡಿ ಮೇಣ್ಕಳುಪೆ ಚೋಳೋರ್ವೀತಳ[೧] ಕ್ಕೈದಿ[೧] ಸ
ದ್ರಾಗಂ ಕೈಮಿಗೆ ತಾ[೨]ಮು[೨]ವಂಗಱಿಪುವಾಗಳ್ ಪಿ[೩]ಳ್ಳೆ[೩]ನ್ನೈನಾರರಿಂ
ಬಾಗಿರ್ದೊಂದಿತಿಹಾಸಮಂ ದ್ರವಿಡಭಾಷಾಭೇದದಿಂ[೪] ಮಾಡಿದರ್[೪] ॥೭೭॥

ಆ ಕತೆಯಂ ಕೃತಾರ್ಥಸುಮನೋಲತೆಯಂ ವರಮಲ್ಲಣಾರ್ಯರು
ರ್ವೀಕವಿರಾಜರಾಜಿನುತಮಾಗಿರೆ ವರ್ಣಕದಿಂದೆ ಭಾವರ
ತ್ನಾಕರಮಾಗೆ ಪೇಳ್ದರದನೊಪ್ಪಿರೆ ವಸ್ತುಕಮಾಗಿ ಪೇಳ್ವುದಾ
ಲೋಕಿತಕಾವ್ಯಬೃಂದದೊಳಗಿಲ್ಲದ ಮಂಜುಳಯುಕ್ತಿಪುಂಜದಿಂ ॥೭೮॥

॥ವ॥ [೫]ಎನೆ[೫] ಮನಂದಂದು,

ಮೃದುಮಧುರಪದವಿಳಾಸಾ
ಸ್ಪದರಸವಿಸರಪ್ರಕಾಶಕರ್ಣಾಟಕವಿ
ತ್ವದೊಳೊರ್ವನೆ ಪೆಸರ್ವಡೆದ
ಗ್ಗದ ಹರಿಹರನುದಿತಮಾರ್ಗದಿಂದಿದನೊ[೬]ರೆ[೬]ವೆಂ ॥೭೯॥

ಮೊದಲೊರೆದ ಕೃತಿಗಳಿರೆ ಪೇ
ಳ್ವುದು ಮೆಱೆಯದಿದೆನ್ನದಿರ್ಕೆ ವಿಬುಧರ್ಮೊದಲ
ಗ್ಗದ ಸಕ್ಕದಮಿರೆ ಕನ್ನಡ
ಮುದಯಿಸಿ ರಂಜಿಸದೆ ಕರ್ಣಕಮನೀಯತೆ[೭]ಯಿಂ[೭] ॥೮೦॥

ಕಾವ್ಯಮೆನಿಸಿರ್ದು ವಿಬುಧಸು
ಸೇವ್ಯಂ ಘನರಸಮಿದೆನಿಸಿ ಭಂಗವಿರಹಿತಂ
ಭವ್ಯಗುಣಮೆನಿಸಿ ಕುಜನಾ
ಭಾವ್ಯಂ ಮತ್ಕೃತಿ ಚಮತ್ಕೃತಿಪ್ರದಮಲ್ತೇ ॥೮೧॥

ಸರಸಿಜದಂತೆ ಸಾರಗುಣ[೮]ಮ[೮]ರ್ಣವದಂತೆ ರಸಾರ್ದ್ರಮರ್ಕನಂ
ತಿರೆ ಘನಮಾರ್ಗಶೋಭಿ ವನಿತಾಜನದಂತಿರೆ ಭಾವಜಾತಿಬಂ
ಧುರಮಮರಾದ್ರಿಯಂತೆ ವಿಬುಧಾವಳಿಸೇವಿತಮಿಂದುಬಿಂಬದಂ
ತಿರೆ ಸುಕರಪ್ರಸಿದ್ಧಮೆನಿಕುಂ ವಿಳಸತ್ಕೃತಿ ಸನ್ಮನೋಜ್ಞನಾ ॥೮೨॥

---

೧ ಕ್ಕೆಯ್ದಿ (ಮೂ) ೨ ವ (ಮೂ) ೩ ಳ್ಯ (ಬ) ೪ ಪೇಳಿದರ್ (ಮೂ, ಮೈ)
೫ ಎಂದು (ಮೂ) ೬ ರ (ಮೈ, ಕ, ಮೂ, ಬ) ೭ ಯಂ (ತಾ) ೮ ಮಾ (ತಾ, ಬ, ಮೂ)

ಅತಿರಸವೃತ್ಯಲಂಕೃತಿ ಸಮನ್ವಿತಪದ್ಧತಿ ಸಾರವಿಚ್ಚಮ
ತ್ಕೃತಿ ಕರಭಾವಸಂಗತಿ ನವೀನಗುಣೋನ್ನತಿ ಸತ್ಕವೀಂದ್ರಸಂ
ತತಿ ಸರಸೋಕ್ತಿಸನ್ನುತಿ ಬುಧವ್ರಜಸಮ್ಮತಿ ಮಂಜುಳಾರ್ಥಸು[1]
ಸ್ಥಿತಿ[1] ನವರೀತಿ ಸದ್ರತಿಯೊಡರ್ಚುವುದೀ ಕೃತಿ ಸದ್ಗುಣಾಂಕನಾ ॥೮೩॥

[2]ತೆ[2]ಂಬೆಲರಂತೆ ತುಂಬುವೆ[3]ಜೆ[3]ಯಿಂ ಪೊಱಪೊಣ್ಮುವ ಜೊನ್ನದಂತೆ ಪೆ
ಣ್ದುಂಬಿಯ ಗಾನದಂತೆ ಪೊಸಸುಗ್ಗಿಯ ನಂದನದಂತೆ ನಲ್ಮೆಯಿಂ
ದಂ ಬಿಗಿದಪ್ಪಿದಂಗನೆಯ ಪೆರ್ಮೊಲೆಸೋಂಕಿನ ಸೌಖ್ಯದಂತೆ ಚಿ
ತ್ತಂಬಡಿದಪ್ಪುದೀಕೃತಿ ಷಡಕ್ಷ[4]ರಿ[4]ದೇವಕೃತಂ ರಸಜ್ಞ[4]ರಾ[4] ॥೮೪॥

ನುತರಸಸಂಪದಂ ಪದಮುದರ್ಥಸಮನ್ವಿತಮರ್ಥಮಾರ್ಯಸ
ಮ್ಮತಗುಣರಂಜಿತಂ ಗುಣಮುದಾತ್ತನವಸ್ಥಿತಿವೃತ್ತಿ ವೃತ್ತಿ ನಿ
ರ್ಮಿತಸರಸಾನುಭಾವಮುರುಭಾವಮುದಂಚಿತರೀತಿ ರೀತಿ ವಿ
ಶ್ರುತಸದಲಂಕೃತಿ ಸ್ಫುರದಲಂಕೃತಿ ರಂಜಿಪುದೀ ಪ್ರಬಂಧದೊಳ್ ॥೮೫॥

ವಿತತ ಪುರಾತನಕವಿಕೃತ
ಕೃತಿಭೂಷಣಭೂಷಿತಾಂಗಿ ಭಾರತಿ ಭುವನ
ಸ್ತುತಕಾಂತಿಗುಣಮಿಳಿತಮ
ತ ೃತಿ ನವಸೀಮಂತರತ್ನಮಂ ತಳೆದೆಸೆ[5]ವ[5]ಳ್ ॥೮೬॥

ಕಡೆಗಾಣರ್ಗಡ ವಿಷ್ಣುಮುಖ್ಯವಿಬುಧರ್ ಕಲ್ಪಾಂತಪರ್ಯಂತಮಾ
ಮೃಡಮಾಹಾತ್ಮ್ಯಮನಾಗಳುಂ ಪೊಗಳ್ದುಮೆಂದೆಂಬಾಗಳಾಂ ಪೇಳ್ವೆನೆಂ
ದೊಡೆ ಕಿಂಚಿಜ್ಞನದೆಂತು ತೀರ್ದಪುದೊ ಮೇಣಂತಾದೊಡಂ ತಚ್ಫಲಂ
ಬ[6]ಡಿ[6]ದಿಂದಾಗಿಪೆನೆನ್ನ ಮೆಲ್ನುಡಿಗೆ ಬಲ್ಲರ್ಮೆಚ್ಚೆ ಸಾಫಲ್ಯಮಂ ॥೮೭॥

ಅನುಚಿತಮಲ್ತೆ ಯೋಗಿಜನಮಂಡನ ನೀಂ ಕೃತಿವೇಳ್ವುದಿಲ್ಲಿ ಕೇ
ಳ್ಮನಸಿಜಕೇಳಿಮುಖ್ಯಜನರಂಜ[7]ನ[7]ವರ್ಣನೆಗೈವುದೆಂದು ಸ
ಜ್ಜನರಿದನೆನ್ನದಿರ್ಕೆ ಶಿವಯೋಗಿಹರೀಶ್ವರಮಲ್ಲಣಾರ್ಯರಿಂ
ಪಿನ ಪೊಸಕಬ್ಬಮಂ ನೆಗಳ್ದರಾನವರಂತಿರೆ ಪೇಳ್ದೆನಿಂತಿದಂ ॥೮೮॥

---

೧ ಸಂಸ್ಥಿತ ೨ ತಂ (ಬ, ಮೂ, ತಾ, ರಿ) ೩ ರ (ಬ) ೪ ರಂ (ಕ) ೫ ದ (ಮೂ)
೬ ಡ (ತಾ, ಬ, ಮೂ) ೭ ನೆ (ಮೂ)

ನರನೊರ್ಮೆ ನೆನೆಯೆ ಸಲೆ ಶಂ
ಕರನಂ ನೆಱೆ ಮಾಳ್ಪ ಮಹಿಮೆಯಂ ತಳೆದ ಷಡ
ಕ್ಷರಮಂತ್ರದಮಳಕಥನಮ
ನೊರೆವೆನ್ನಿಂದನ್ಯರೊಳರೆ ಧನ್ಯರ್ಜಗದೊಳ್ ॥೮೯॥

॥ವ॥ ಅದೆಂತೆಂದೊಡೆ—

ಅಂಭಃಕುಂಭೀನಕುಂಭೀನಸಮಕರಮಹಾಕೂರ್ಮಕೀರ್ಣೋರ್ಮಿಮಾಲಾ
ಜೃಂಭದ್ದಂಭೋಳಿಹಸ್ತಾಹತಚಕಿತಗತಕ್ಷ್ಮಾಧ್ರ ವಿಸ್ಫಾರವಿದ್ಯು
ತ್ಸಂಭಿನ್ನಾಂಭೋಭೃದುದ್ಯತ್ತಟಚಟುಳಚಳನ್ಮೀನಫೇನಪ್ರತಾನಂ
ಶುಂಭದ್ಗಂಭೀ[1]ರಿಮಂ ರಂಜಿಸಿದುದಮಮ ದತ್ತೇಂದ್ರಭದ್ರಂ ಸಮುದ್ರಂ ॥೯೦॥

ಯಮುನಾನದಿ ರೋಮಾವಳಿ[2]ವೊ
ಲಮರೆ ಮಹೀರಮಣಿ ನಿಜಮಹೀಧರಜಘನ
ಕ್ಕೆ ಮುದಂ ಮಿಗೆ ತೆಗೆದುಟ್ಟವೊ
ಲೆ ಮನೋಜ್ಞಾಂಬರಮೆನಿಸಿದುದಂಬುನಿಧಾನಂ ॥೯೧॥

॥ ವ ॥ ಮತ್ತಮಲ್ಲಿ—

ತನುಜನ ತೇಜಮನಪಹರಿ
ಪನಿವನೆನುತ್ತಬ್ಧಿ ಮುಳಿದು ಸಂಧ್ಯಾರುಣಸೂ
ರ್ಯನ ಕಿರಣಮನುಱೆ ಸೆಱೆವಿಡಿ
ದನೆನೆ ವಿರಾಜಿಪುದು ವಿದ್ರುಮಂ ಸದ್ರುಚಿಯಿಂ ॥೯೨॥

ಜಲಕರಿನಿಕರಂ ಪುಷ್ಕರ
ಮಲರೆ ಕರಂ ನಿಮಿರೆ ಫೂತ್ಕರಿಸೆ ಸಿಡಿದ ಲಸ
ಜ್ಜಲಕಣಮನಮಳಮುಕ್ತಾ
ಫಳಮೆಂದುಱೆ ಮುಗ್ಧಖಚರಿಯರ್ ಕೈಯಿಡುವರ್ ॥೯೩॥

ಪಡೆದುದು ಗಡ ಮೊದಲಿಂದುವ
ಕಡಲಿದು ಮೇಣಿಂದು ಪಡೆದುದುಡುವಿತತಿಯನೆಂ
ಬೆಡೆಗೆಡೆಯಾದುದು ಜಡನಿಧಿ
ಸಿಡಿದೆಡೆವಿ[3]ಡ[3]ದಿಡಿದ ವಾರಿಕಣಗಣದಿಂದಂ ॥೯೪॥

---

೧ ರ (ಮೂ, ಬ, ತಾ) ೨ ರೋಮಾಳಿಯೊ (ತಾ, ಬ, ಮೂ, ಕ) ೩ ಡಿ (ಮೂ, ತಾ)

ಎಲೆ ಜಲಧಿ ಜಿಷ್ಣುಚಕಿತಾ
ಚಲಪಾಲಕ ಕಾವುದೆಮ್ಮನೆನುತಂ ಕರ್ಗ
ಳ್ತಲೆ ಖರಕರಕರೆಭಯವಿ
ಹ್ವಲಮಿರ್ಪಂತದಱಿ ತೀರದೊಳ್ಮುಗಿಲೆಸೆಗುಂ ॥೯೫॥

॥ವ॥ ಅಂತುಮಲ್ಲದೆಯುಂ—

ಘನಲಾವಣ್ಯರಸಾನ್ವಿತಂಗೆ ನವರತ್ನಾಲಂಕೃತಾಂಗಂಗೆ ಜೀ
ವನಮೊಂದಾಗಿರೆ ಕೂ[1]ಡಿ[1] ಮಚ್ಚಿಸಿದ ಪಾರಾವಾರಕಾಂತಂಗೆ ಸೋ
ಲ್ತು ನದೀನಾರಿಯರಿತ್ತ ನುಣ್ಗುರುಳಿವೆಂಬಂತಂಗುಲಿವ್ರಾತಮೆಂ
ಬಿನೆಗಂ ತೀರದ ನೀರದಂಗಳೆಸೆಗುಂ ಸದ್ವಿದ್ರುಮಾಗ್ರಂಗ[2]ಳುಂ[2] ॥೯೬॥

ಜಲನಿಧಿ ಜಲಮಂ ಜಲಭೃ
ತ್ಕುಲಕ್ಕೆ ನಲಿದಿತ್ತುದತ್ತಮಿತ್ತ ನದೀನಿ
ರ್ಮಲಸಲಿಲಂ ದೊರೆದುದು ಗಡ
ನೆಲದೊಳ್ಕೊಟ್ಟಂಗೆ ಬಡತ[3]ನಂ[3] ಬಂದಪುದೇ ॥೯೭॥

ಘನದ ಬರವಪ್ರಯೋಜನ
ಮೆನುತಱಿದುಂ ಜಡಧಿ ಜಡಮನಿತ್ತುದದಂ ನೆ
ಟ್ಟನೆ ಪೊತ್ತುದು ಜಳದಂ ವ್ಯ
ರ್ಥನಿಯುಕ್ತಮಿದೆಂದು ಬಗೆವೊಡಿದು ಚಿತ್ರತರಂ ॥೯೮॥

ಜಲನಿಧಿ ಜಂಭವೈರಿಗಿರಿಯಂ [4]ನಿಱಿ[4]ಯಂ ಬಿಡು ಬೇಗಮೆಂದು ಬಂ
ದುಲಿವವೊಲೊಪ್ಪೆ ಸುಸ್ತನಿತಮುಚ್ಚತಟಿತ್ಕರವಾಳನಾಂತು ತ
ಜ್ಜಲದ ಭಟಂಗದಂ ಕುಡದೆ ತನ್ನಯ ಜೀವನಮಿತ್ತುದಬ್ಧಿ ಭೂ
ತಲದೊಳೆ ಸತ್ವಶಾಲಿ ಪಗೆಗೇಂ ಮಱಿವೊಕ್ಕನನೀಯಲಾರ್ಪನೇ ॥೯೯॥

ಎಱಗಿದ ನಿಱಿಮುಗಿಲೊಳ್ಳಱಿ
ಮಿಱುಗುವ ಮಿಂಚುಗಳನುಡಿದು ಪಿಡಿದನೊ ಕಡುಪಿಂ
ತೊಱಿಯೆಱಿಯಂ ತೆಱಿಗೈಗಳಿ
[5]ನಱಿ[5]ದೆನೆ ಕೆಮ್ಮೀನ್ಗಳಿಂ ಮನಂಗೊಳಿಸಿದುವೋ ॥೧೦೦॥

---

೧ ಡೆ (ಮೂ) ೨ ಳಿಂ (ಮೂ) ೩ ನೇಂ (ಕ) ೪ ಗಿರಿ (ಅ) ೫ ನುಱು (ಅ)

ಎನ್ನೊಳ್ಪುಟ್ಟಿದ ಚಂದ್ರನಿಂದೆ ಪಡೆಗುಂ ಸಸ್ಯಾಳಿ ಸಂಪತ್ತನಂ
ತೆನ್ನೊಳ್ಪುಟ್ಟಿದ ಲಕ್ಷ್ಮಿಯಿಂದೆ ಪಡೆಗುಂ ಸೌಭಾಗ್ಯಮಂ ಧಾತ್ರಿ ಮೇ
ಣೆನ್ನೊಳ್ಪುಟ್ಟಿದ ವಸ್ತುವಿಂದೆ ಪಡೆದಂ ಸರ್ವಾರ್ಥಮಂ ಜಿಷ್ಣು ತಾ
ನೆನ್ನೊಳ್ಪೇಳ್ಸರಿಯಾವನೆಂದುಲಿವವೋಲುದ್ಘೋಷಿಕುಂ ಸಾಗರಂ ॥೧೧೧॥

ಅಳಿಯಂ ಪೂಗಣ್ಣನೆನ್ನೀ ಮಗಳೆ ಚಪಳೆ ಪುತ್ರಂ ಕರಂ ರಾಜಯಕ್ಷ್ಮಾ
ಕುಳನೆನ್ನೈಶ್ವರ್ಯಮಂ ನಿರ್ಜರರೆ ಕವರ್ದರೆನ್ನೊಳ್ಬಿಸಂ ಪುಟ್ಟಿತೆನ್ನಂ
ಕಳಶಪ್ರೋದ್ಭೂತನಂದೀಂಟಿದನಕಟ ಮಹಾಭಂಗಮಂ ತಾಳ್ದೆನೆಂದೆಂ
ದೊಳಗಂಭೋರಾಶಿ ಚಿಂತಾಗ್ನಿಯನೆ ತಳೆದವೋಲೌರ್ವನಂತಸ್ಥಮಿರ್ಕುಂ ॥೧೧೨॥

॥ವ॥ ಮತ್ತಂ ತಡಿಗೊಂಡೆಡೆವಿಡದೆ ಮಡಲ್ತು [1]ಬೆ[1]ಳೆದ ತರುಣತಮಾಲತರುವನದೊಳಿಡಿದು ಕಡುಗೊರ್ಬಿ ಪರ್ಬಿದ ಮರ್ಬು ಮಿಗವ[2]ಕ್ಕೆ[2]ಗನೊಳಾದ ಪಗೆತನಮಂ ಬಗೆಗೊಂಡು ತಜ್ಜನಕವನನಿಧಿಯಂ ಕನಲ್ದು ಸುತ್ತಮೊತ್ತರಿಸಿ ಮೊತ್ತಂಗೊಂಡು ಪತ್ತುಗೆಗುಂದದೊತ್ತಿಮುತ್ತಿದುದೆಂಬೊಪ್ಪಮನಪ್ಪುಕೆಯ್ದಳಿಯ ಬಣ್ಣಮಂ ಪಳಿದು ನೀರುಣಲೆ[3]ಂದು[3] ಸಾರೆವಂದು ತೀರದೊಳ್ನಿಂದ ನೀರದಂಗಳ ವಾರದಿನಾ ನೀರದಂಗಳೊಳ್ವಾರಿವಾಹವಾಹನೊಳೊದವಿದ ವೈರದಿಂ ವಾರಿಧಿಯೊಳ್ಪೊಕ್ಕ ಭೂರಿ ಭೂಧರಂಗಳ್ವಳಂಚಲೆಂದು ಪಟುತೆಯಿಂದಿದಿರ್ಚಿನಿಂದವೆಂಬಂತೆ ಸಾರ್ತಂದುದಂ ಪ್ರತಿಗಜವ್ರಜಮೆಂದು ಸರಿಸದೊಳ್ನಿಂದು ಕೊಡಂಕೆ ಚಲಿಸೆ ಕೋಡಮೊನೆಯೊಳೀಡಿಱಿಯೆ ಮುಗಿಲ್ಮುತ್ತುಗಳ್ಪೆರಸು ಜಳಕಣಗಣಂ [4]ಜ[4]ಲ್ಲನುಗೆ ಮಿಗೆ ಮೆಱೆವಂಬುಸ್ತಂಬೇರಶ[5]-ಮಂ[5]ಗಳಿನಾ ಸ್ತಂಬೇರಮಂಗಳನಂಬುದಂಗೆತ್ತು ದಂತಕಾಂತಿಯುಂ ಗೊಂಚಲ್ಮಿಂಚೆಂದು ಗರ್ಜನೆಯಂ ಪರ್ಜನ್ಯಜನ್ಯಧ್ವನಿಯೆಂದು ಮುಂದುಗೆಟ್ಟು ತೊಟ್ಟನೆ ಕಂಡಕಡೆಗೆ ಬಡಬಂಗಳ್ಕಿ ಶಂಖಸಮುದಯಂ ನೆಗೆದು ಪೋಪಂತೆ [6]ಬಗಡು[6]ಗೊಂಡು ತಳರ್ವ ತರುಣ ಮರಾಳಂಗಳಿನಾ ಮರಾಳಂಗಳ ಗಱಿದುಱುಗಲ ತುದಿಗಳಿಂ ಕೆದದುರ್ರುಳ್ವ ವಿಮಳಜಳಕಣಗಣಮಂ ಕಡಲೊಳ್ಬಡಬಾನಲಜ್ವಲಜ್ವಾಲೆಯಿಂ ಶುಕ್ತಿಪುಟಂ [7]ಗ[7]ಳಿಲೆನೆ ಸಿಡಿದೊಡದಱಿಂದುಚ್ಚಳಿಸಿದಚ್ಚಳಿಸಿದಚ್ಚಮುತ್ತೆಂದು ತುಡುಂಕಲವ್ವಳಿಪ ಖೇಚರಾಂಗನೆಯರಂ ನೆಱೆ ನೆಗೆವ ನಿಡುಮೀನ್ಗಳೆಂಬ ಕಣ್ಗಳಿಂ ಕಂಡು ಕೆಂಬವಳಮೆಂಬ ತಂಬುಲರಸಂ ಸೂಸೆ, ಶುಕ್ತಿಯಿಂ ಪೊಣ್ಮುವ ನುಣ್ಮುತ್ತೆಂಬ ಸುಲಿಪಲ್ಲಸೂಸುವೆಳಗು ಥಳಥಳಿಸಿ ಪೊಳೆಯೆ, ಜೆಲ್ಲೊನೆಯೆಂಬ ಹಸನರುಚಿ ದೆಸೆದೆಸೆಗೆ ಪಸರಿಸೆ, ತೊಳಪ ನೀಳ್ದೆರೆಯೆಂಬ ನಳಿತೋಳಂ ನೀಡಿ, ನದೀನಾರಿಯರುಣಸರಸಿಜಮೆಂಬ ಕರತಳ[8]ಮಂ[8]ಗಳಿಲನೆ ಪೊಯ್ದು ರಯ್ಯುಮೆನೆ [9]ಮ್ಮೈಯ್ಯ[9]ದಿರೆ ಮತ್ತೆ ಮತ್ತೆ ಮಾಣದೆ ಗಹಗಹಿಸಿ ನಕ್ಕಪನೆಂಬಂತೆ

೧ ಬ (ಕ, ಬ) ೨ ಕ್ಕಿ (ತಾ) ೩ ದುರ್ (ಬ) ೪ ಚ (ಮೂ) ೫ ರಂ (ತಾ, ಬ)
೬ ಬೆಡಂಗ (ಮೂ) ೭ ಭ (ತಾ. ಮೂ) ೮ ದಿಂ (ಮೂ) ೯ ಮೆ (ಮೆಯ್ಯ)

ಪವನಹತಿಪ್ರಚಲಿತ ತರಂಗಸಂಗಸಮುದ್ಘೋಷಣದಿಂ ತಳ್ತು ರತ್ನಾಕರಂ ರಮಣೀಯಮಾಗಿರ್ಪುದಂತು ಮಲ್ಲ[೧]ದೆಯುಂ[೧]—

ಪವಳಮೆ ನೀಳ್ದ ಕೆಂಜೆಡೆ ಮೊಗಂ ಶತಪತ್ರಮುದೀರ್ಣಫೇನಮೊ
ಪ್ಪುವ ಭಸಿತಂ ಕರೋಟಿ ಸುಳಿ ಕಂಬುಕದಂಬಕಮಸ್ಥಿಮಾಲೆ ಮೀನ್
ಪ್ರವಿಮದಘೂರ್ಣಿತಾಕ್ಷಿ ಜಳಸರ್ಪನೆ ಕೂರಸಿ ವೀಚಿ ಬಾಹುವ
ರ್ಣವನವಭೈರವಂಗೆ ಮಣಿಬುದ್ಬುದಕಿಂಕಿಣಿ ಕಣ್ಗೆ ರಂಜಿಕುಂ ॥೧೦೩॥

॥ವ॥ ಅಂತುಮಲ್ಲದೆಯುಂ—

ಘುಳುಘುಳಿಸುತ್ತೆ ಬರ್ಪ ತೆಱೆಯಿಂ ನೊಱೆಯಿಂ ಕಱೆಯಿಂಬಿನೊಳ್ಕರಂ
ಬೆಳೆದ ತಮಾಲನೀಲವನದಿಂ ಘನದಿಂ ಬಿನದಂಬುಗುತ್ತೆ ಸಂ
ಚಳಿಸುವ ಪೀನಮೀನಕುಲದಿಂ ಬಲದಿಂ ಜಲದಿಂ ಸಿಡಿಲ್ದ ನಿ
ರ್ಮಳತರಶುಕ್ತಿಯಿಂದೆ ಹರಿಯಿಂ ಕರಿಯಿಂ ಗಿರಿಯಿಂದದೊಪ್ಪುಗುಂ ॥೧೦೪॥

॥ವ॥ ಮತ್ತಮಾ ಸಮುದ್ರಂ ರುದ್ರನಂತೆ [೨]ವಿಷವಿಷಧರಭರಣನುಂ[೨] ಸುಪರ್ಣಪತಾಕನಂತೆ ಶಂಖಚಕ್ರಕರಾಂಬುಜಕಲಿತನುಂ [೩]ವಿರಿಂಚನಂತೆ[೩] ಸುರಸಭಾಕಾಂತನುಮಮರಲೋಕದಂತ[೪]ನಿ[೪]ಮಿಷಸಂತಾನಾಶ್ರಯನುಮರಣ್ಯದಂತೆ ನಗನಾಗವಿಲಸಿತನುಂ ದಿವದಂತಹಿಮಕರಮಂಜುಲನುಂ ಸುರಪಥದಂತುಡುಪತರಣಿಗಮನರಮಣೀಯನುಂ ದ್ವಿಪಪ್ರವಿಷ್ಟವನದಂತೆ ಸುಪ್ರವಾಳಭಂಗಭಾಸುರನುಂ ಶರದ್ಘನದಂತೆ ಮುಕ್ತಾಂಬುಕಣಮನೋಹರನುಂ ಭೂತಳದಂತೆ ಸದಾನದೀನತಾಸಹಿತನೆನಿಸಿರ್ದನಂತುಮಲ್ಲದೆಯುಂ—

ಯಮಿಯಂತಂಬರದಂತೆ ಹಂಸನಿಲಯಂ ಪದ್ಮಾಭಿರಾಮಂ ರಮಾ
ರಮನಂತಾ ನಿಧಿಯಂತೆ ಪುಷ್ಕರಯುತಂ ಮತ್ತೇಭದಂತರ್ಕನಂ
ತೆ ಮಹಾಮಾರುತಿಯಂತೆ ಚೈತ್ರಕುಜದಂತುದ್ಯತ್ಪ್ರವಾಲಾಶ್ರಯಂ
ಸುಮದಂತುತ್ತಮನಂತೆ ಸಂಭೃತರಸಶ್ರೀಗಾಗರಂ ಸಾಗರಂ ॥೧೦೫॥

ಪೃಥುತರಮಧ್ಯಕಂಕಣಮೆ ಸುತ್ತಿದ ಪನ್ನಗನಾಗೆ ತತ್ಫಣಾ
ಪೃಥಿತಸುರತ್ನಮಾಗೆ ಮಣಿಸಾನು ಸುರರ್ಪಿರಿದಾಶೆಯಿಂದೆ ಮೇಣ್
ಮಥಿಯಿಸಲೆಂದು ಮಂದರಮನಲ್ಲಿರದಿಟ್ಟರೆನಿಪ್ಪ ಭಾವಮಂ
ಕಥಿಯಿಸುವಂತೆ ಮೇರು ಮೆಱೆದಿರ್ದುದು ಮಧ್ಯದೊಳಾ ಪಯೋಧಿಯಾ ॥೧೦೬॥

---

೧ ದೆ (ಮೈ, ಕ, ಮೂ) ೨ ವಿಷಧರಾಭರಣಮುಂ (ಬ, ಮೂ) ೩ ವಿಧಿಯಂತೆ (ಬ)
೪ ನು (ಮೂ, ತಾ)

ನುತನಕ್ಷತ್ರಾಚ್ಛಮುಕ್ತಾವೃತಮಮೃತಮಯೂಖಾರ್ಕಸದ್ದರ್ಪಣಂ ತ-
ದ್ಗತಶೃಂಗೋತ್ತುಂಗದಂಡಾಮರವರಸರಿದುದ್ಯದ್ಧ್ವಜಂ ರತ್ನರುಕ್ಛಿ-
ಶ್ರಿತಪಾಥೋಭೃತ್ಪಟಂ ಶಂಕರಗೃಹಕಲಶಂ ದೇವರಾಜಾಧಿದೇವ
ಪ್ರತಿಮಂ ಸ್ವರ್ಣಾಚಲಾಲಂಕೃತರಥಮೆಸೆದತ್ತೀಶ್ವರಾವಾಸಯೋಗ್ಯಂ ॥೧೦೭॥

ಮೇವ ಮುಗಿಲ್ಗಳಿಂ ಮುಸುಕಿ ಮೋಹಿಪ ಭೂಧರಮೊಂದು ಪಕ್ಕದೊಳ್
ತಾವರೆಗಣ್ಣನಂತಿರೆ ಧರಾಧರಮೊಂದು ಸಧಾತು ನಿಂದ ವಾ
ಣೀವರನಂತೆ ತಳ್ತಿರೆ ಮೊದಲ್ತುದಿಗಾಣೆಸದಿರ್ದ ಸಾಂದ್ರತೇ
ಜೋವಹ ಲಿಂಗದಂತೆ ಕನಕಾಚಲಮುಜ್ವಲಮಾದುದುರ್ವಿಯೊಳ್ ॥೧೦೮॥

ಹರನಿರ್ಪ ಗಿರಿಯಿದೆಂದಾ
ದರದೆ ನಭೋಲಕ್ಷ್ಮಿ ಭಗಣವಿಚಕಿಲಸುಮದಿಂ
ದಿರದರ್ಚಿಸಿ ಬೆಳಗುವ ಬಂ
ಧುರದೀಪದ ತೆಱದೆ ಹಿಮಕರಂ ಬಲವರ್ಪಂ ॥೧೦೯॥

ಖರನಖರದೆ ಹರಿ ಗಿರಿಕರಿ
ವರಶಿರಮಂ ಸೀಳ್ದು ಕೆದರ್ದ ಮುತ್ತಿನ ಮಣಿಗಳ್
ತರುಗಳೊಳೆಡೆ[1]ದೊಡರ್ದಂತೊ
ಪ್ಪಿ[1]ರುತಿರ್ಪವು ತಪ್ಪಲಲ್ಲಿ ಮಿಗೆ ತಾರಗೆಗಳ್ ॥೧೧೦॥

ಸಾರಸಸಖನಾ ನಗಕಾ
ಸಾರಸಮುತ್ಪನ್ನಕಮಳಮಂ ಕೀಳ್ವಾಂತಂ
ದಾಱಿಯೊಳಲ್ಲದೊಡೆ ನಭ
ಶ್ಚಾರಿಗೆ ನೆಲನಱಿಯೆ ನಳಿನಮೇಂ ದೊರೆದಪುದೇ ॥೧೧೧॥

ನಗದ ಗಗನೇಚರಿಯ ನು
ಣ್ಬೊಗರುಗುವ ಮೊಗಂ ಮೃಗಾಂಕನುಂ ಸಂಧಿಸಿ ತ
ನ್ಮೃಗಮದತಿಲಕಂ ಪತ್ತಿರೆ
ಜಗಮಱಿಯದೆ ವಟಮಿದೆಂಬುದಿಂದುವ [2]ಕಱಿಂದಂ ॥೧೧೨॥

---

೧ ವಿಡದಮರ್ದಂತಿ (ಅ) ೨ ಕು (ಮೂ)

ಗುರುತರತರುತಳದೊಳ್ಕಿ
ನ್ನರಿಯರ ಸರಕೆಳಸಿ ಬಳಸದಿರೆ ನಿಜಹರಿಣಂ
ಹರಿಣಾಂಕಂ ಸಲೆ ನಿಲೆ ತ
ತ್ತರುಣಿಯರಿದು ಸುಕರಮುಕುರಮೆಂದೀಕ್ಷಿಸುವರ್ ॥೧೧೩॥

ಮುನಿದಿ[1]ನಿ[1]ಯಳಿ[1]ನಿ[1]ಯನೊಳ್ದ
ಲ್ನನೆದೀವಿದ ಜಾದಿಯಲ್ಲಿ ಮೃಗಱಿದಿರೆ ತ
ದ್ವನಿತೆಯ ನಿಡುಜಡೆಗಂಡದ
ನನುವಿಸುವಂ ರಾಹುವೆಂದು ರಜನಿಪನದಱೊಳ್ ॥೧೧೪॥

ಚಪಳಾಕ್ಷಿಯರಾ ಗಿರಿಯೊ
ಳ್ತಪನಾತಪಮೆಯ್ದೆ ಸುಟ್ಟೊಡಿರಲಾಱದೆ ಪಾ
ಱಿ ಪಯೋಧರದೆಡೆಯೊಳ್ ಶೀ
ತಪಯೋಜಾಕರದೆ ಪೊಕ್ಕು ಜಳಮಂ ಕಳೆವರ್ ॥೧೧೫॥

ವಿರಹಿಣಿಯಂತೆ ತದ್ಗಿರಿಯ ತಂಗೊಳದೊಳ್ಕೆಲಸಿರ್ಪ ಪದ್ಮಿನೀ
ತರುಣಿಯ ಚಾರುಕೋರಕಕುಚಂಗಳನುತ್ಕರದಿಂದಿನಂ ಸಮಂ
ತಿರದಮರ್ದಂಟೆ ಕಂಟಕಿತಮಾದ ಲತಾಂಗಮೆ ಕಂಪಿಪಂತೆ ತೆ
ಳ್ದಿರೆ ಪೊಯೆ ತೋರ್ಪುದೇಳ್ದ ಬೆಮರಂತಿರೆ ತದ್ಗತಶೀಕರೋತ್ಕರಂ ॥೧೧೬॥

ಪರಿತಂದಾ ಗಿರಿಯೊಂದು ತಪ್ಪಲೆಳವುಲ್ಲಂ ಮೇದು ಮೈವೆರ್ಚಿ ನಿ
ರ್ಜರಕಾಂತಾನನಚಂದ್ರನಿಂದೊಸ[2]ರ್ದ[2] ಚಂದ್ರಾಶ್ಮಾಂಬುವಂ ಪೀರ್ದು ಕಿ
ನ್ನರಗೀತಕ್ಕೆ ಕಡಂಗಿ ಕಾಮದುಘಮುದ್ಯತ್ಕ್ಷೀರಮಂ ಕೆಚ್ಚಲಿಂ
ಸುರಿಯಲ್ತಳ್ತು ಸುಧಾಂಗನಾದನದಱೊಳ್ನಾಂದಿಂದುವೇನೆಂದಪೆಂ ॥೧೧೭॥

ಅರಿಗಿರಿವೈರಿ ವಾರಿಧರಗುಪ್ತಚರರ್ಕಳನಟ್ಟೆ ಕಂಡು ತ
ದ್ಗಿರಿ ನೆಱೆ ತಳ್ತ ಶೃಂಗಕರದಿಂ ಕಶೆಯಿಂ ಕಡುಕಾಯ್ದು ಪೊಯ್ವವೋ
ಲಿರೆ ಸೆಳೆಮಿಂಚು ಕಣ್ಬನಿವೊಲಲ್ಪರಿತರ್ಪವೊಲೊಪ್ಪೆ ವೃಷ್ಟಿ ಶೋ
ಕರವದ ಮಾಳ್ಕೆಯಿಂದವಱ ಪೆರ್ಮೊಳಗೊಪ್ಪುಗುಮಲ್ಲಿ[3]ತಪ್ಪಲೊಳ್[3] ॥೧೧೮॥

---

೧ ನೆ (ಮೈ, ಕ) ೨ ರ್ದ (ಮೂ) ೩ ಸಂತತಂ (ತಾ)

ಚರಿಪನಿಳಿಂಪಕಾಂತೆಯರ ಪಚ್ಚದ ಪಚ್ಚೆಯ ಕಾಂತಿ ಕಣ್ಗೆ ಮುಂ
ಬರಿಯೆ ಕಱುಂಕೆಗೆತ್ತೆಳಸಿ ಚಂದ್ರನ ಪುಲ್ಲೆ ತುಡುಂಕಲೆಂದು ನಿಂ
ದಿರೆ ಪರಿವೊಜ್ಜರಂಬಿಡಿದು ಪುಟ್ಟಿದ ಪುಲ್ಗಳನೀವರಲ್ಲಿ ತ
ತ್ತರುಣಿಯರಂದದರ್ಕೆ ನಿಜನೇತ್ರವ ನೇತ್ರದೆ ಪೋಲ್ತನಪ್ಪನಿಂ ॥೧೧೯॥

[1]ಎ[1]ಱಪ ಶರಧರದ ತುಱುಗ
ಲ್ಕಱಿವ ಘನೋಪಳಕದಂಬಮುಡುಗಣ[2]ಮ[2]ನೆ ಮೇಣ್
ತಱಿಸಂದು ನುಂಗಿ ಕಳ್ತಲೆ
ನೆಱಿಯುಗುಳ್ವೊಂದೊಪ್ಪಮೊಪ್ಪೆ ತಪ್ಪಲೊಳೆಸೆಗುಂ ॥೧೨೦॥

ಮುಗಿಲಿಂದೆ ತಟಿಲ್ಲತೆ ಮಿಗೆ
ಚಿಗಿದೊಗೆವಂದದೊಳೆ ನೆಗೆವ ಖಚರಿಯ ಮುಡಿಯಿಂ
ದುಗುವಲರ್ಗಳ್ಕರಮೆಸೆಗುಂ
ಮುಗಿಲಿಂ ಮುಗಿಲೊಗೆದು ಕಱಿವ ಕರಕಂಗಳವೋಲ್ ॥೧೨೧॥

ಗಿರಿಶೃಂಗಾಗ್ರದೆ ನಿಂದು ನೆಟ್ಟನಿದಿರೊಳ್ತೋರ್ಪಂದುವಂ ನೋಡಿ ಪಂ
ಕರುಹಂ ತಪ್ಪದಿದೆಂದು ಮಧ್ಯದ ಕಳಂಕಂ ಕಂಡು ಮತ್ತಾಳಿಯೆಂ
ದು ರಣತ್ಕಂಕಣಹಸ್ತಮಂ ನೆಗಪಿ ಸೋವುತ್ತಿರ್ಪ ಗಂಧರ್ವಸುಂ
ದರಿಯಂ ಕಿನ್ನರಿಯರ್ಕರಂ ನಗುವರಾ ಸ್ವರ್ಣಾಚಳಪ್ರಾಂತದೊಳ್ ॥೧೨೨॥

ನಗತಟನಂದನಸ್ಥಿತಲತಾಭವನಂಗಳೊಳಾಂತನಂಗಕೇ
ಳಿಗಳನೆ ಖೇಚರೀನಿವಹಮಾಗಸಕಾಗಳೆ ಪಾಱಿ ಪೋಗಲು
ಜ್ಜುಗಿಸಿ ಬಳಲ್ಕೆ ಪಾಱಲಳವಿಲ್ಲದೆ ಕಾರ್ಮುಗಿಲೇಱಿ ನಲ್ಲರೊ
ಳ್ನಗುತೆ ವಿಳಾಸದಿಂ ತೞರ್ವುದಲ್ಲಿಯ ಮಿಂಚಿನೆ ಚಂಚಲೇಕ್ಷಣಂ ॥೧೨೩॥

ಪೊಸಸುಸಿಲೊಳೆಸಗೆ ರಮಣಂ
ಮಿಸುಗುವ ನೆಲೆಮೊಲೆಯೊಳೆಸೆವ ನಖಹತಿಯನದಂ
ಮುಸುಕುದೆಱಿದೆಱಗಿ ನೋಡು
ತ್ತಸವಸದಿಂ ದಾರಿದಪ್ಪುವರ್ಖೇಚರಿಯರ್ ॥೧೨೪॥

೧ ಮೆ (ಮೈ, ಮೂ) ೨ ಮೆ (ತಾ: ಮೂ)

ಮುಳಿದು ನಿಜೇಶನೊಳ್ವಚರಿ ಕಾರ್ಮುಗಿಲೊಳ್ಮಱಿಗೊಂಡು ಗಾಳಿಯಿಂ
ತಳರ್ದೊಡದಾಗಸಕ್ಕೊಡನೆ ತಾಂ ತಳರುತ್ತಿರೆ ಸೋರ್ವ ಕರ್ಪಿನು
ತ್ಪಳದಳಮಾಲೆಯಾಂತ ಕಬರೀಭರದಿಂ ಕರಿವಾವ ಕರ್ಚಿ ಕಂ
ಗೊಳಿಸುವ ಸೋಗೆಯಂ ಕೆಳೆತನಕ್ಕದು ತಾಳ್ದುದೆನಲ್ವಿರಾಜಿಕುಂ ॥೧೨೫॥

॥ವ.॥ ಇಂತು ಸಕಳವಿಭವಸಮಗ್ರಸಮುಜ್ವಳವಿಳಾಸಂಬಡೆದು [1]ರಂ[1]ಜಿಪಾ ಪೊಂಬಟ್ಟದ ನಿತಂಬದೊಳಿಂಬುವಡೆದ ಜಂಬುಜಂಬೀರಪನಸಪಾಟಳಿರಸಾಲತಮಾಲತಾಲಹಿಂತಾಲ[2]ನಾರಿಕೇಳ[2] ನಾರಂಗಲುಂಗಲವಂಗಪೂಗಪುನ್ನಾಗನಾಗಕೇಸರಕರ್ಣಿಕಾರಖರ್ಜೂರಕರ್ಪೂರಕದಳೀಷಂಡ ಕಮಳಷಂಡಂಗಳಿಂದಿಡಿದು ಕಡುಬೆಡಂಗಾದ ಸಾರ್ವರ್ತುಕಮಾದ ಸದಮಳತಪೋವನದ ಪರಮ ಪವಿತ್ರತೆವೆತ್ತ ಪರ್ಣಶಾಲೆಯೊಳಿಟ್ಟ ವಿಭೂತಿಯ ತೊಟ್ಟ ರುದ್ರಾಕ್ಷೆಯುಟ್ಟ ಮೃಗಾಜಿನದ ಬಿಟ್ಟೆಳಲ್ವ ಕೆಂಜೆಡೆಯ ಕಟ್ಟಿದ ಕರಣಂಗಳ ನಟ್ಟ ನಿರೀಕ್ಷಣದ ಮುಟ್ಟಿ ಮಾಳ್ಪ ಜಪದ ಮಿಟ್ಟನೆ ಮಿಡುಕದಂಗದ ನೆಟ್ಟನೆ ನಿಂದ ಮನದ ತೊಟ್ಟನೆ ತೋರ್ಪ ಸಾತ್ವಿಕದ ದಿಟ್ಟಿಗಚ್ಚರಿಗೊಳಿಪ ಪಟ್ವಣಕದ ಕಡು[3]ಮಹಿಮೆ[3]ಯಾಂತ ತಪೋಧನರಿರ್ಪ ತಾಣದಲ್ಲಿ—

ಉಡುಗುತ್ತಲ್ಲಿರ್ಪುದುದ್ಯಚ್ಚಮರಿ ರಜಮನಾ ತಾಣದೊಳ್ ಹಸ್ತಿ ಕೈನೀ
ರಿಡುತಂ ಸಮ್ಮಾರ್ಜನಂಗೈವುದು ಸುರಿವುದು ಮುಕ್ತೌಘಮಂ ಮೇಘಮಂದಂ
ಬಡಿವಂತಲ್ಲಲ್ಲಿ ರಂಗಂಗೊಳಿಪುದು ಸುಮನೋರೇಣುವಿಂ ಮಾರುತಂ ಸಂ
ಗಡಮೆಲ್ಲಂ ಮೆಲ್ಲನಾ ತಾಪಸರ್ಗೆ ಪರಿಚಯಂ ಮಾಳ್ಪುವಾಗಳ್ಮೃಗಂಗಳ್ ॥೧೨೬॥

॥ವ.॥ ಮತ್ತಮಲ್ಲಿ—

ಸುಮಮಕರಂದದಿಂದೆ ಕಪಿ ಕೈದೊಳೆದಾ ದ್ರುಮಪತ್ರಪಾತ್ರೆಯಂ
ಸಮೆದದಜಲ್ಲಿ ತುಂಬಿ ತುಳಿವೊಂದದ ಪೂಗಳನ್ನೈದೆ ತುಂಬಿಕೊಂ
ಡಮರ್ದಮರ್ದಂತೆ ತೋರ್ಪ ಗಿಳಿಮುಟ್ಟದ ಪಣ್ಗೊನೆಯಾಂತು ಬಂದು ಸಂ
ಯಮಿಗಳ ಮುಂದೆ ನಿಂದೆಱಗಿ ಕಾಣ್ಕೆಯನಿತ್ತುದತೀವ ಭಕ್ತಿಯಿಂ ॥೧೨೭॥

॥ವ.॥ ಮತ್ತಮೊಂದು ಪವಿತ್ರಸತ್ರುಶಾಲೆಯಲ್ಲಿ—

ಹೋಮದ ಕುಂಡದಿಂ ಕಡೆಸಿಡಿಲ್ದು ಪೊದಳ್ದಿರೆ ಕಂಡು ಕೆಂಡಮಂ
ಕಾಮಿಸಿ ಗೇರಪಣ್ಣೆನುತೆ ಪಣ್ಣನೆ ಪೊರ್ದಿ ತುಡುಂಕೆ ಕೈಸುಡಲ್
ಭೂಮಿಗೆ ತರ್ಗಿ ಕುರ್ಗಿ ಮಿಗೆ ಪಲ್ದೆಱೆದುಃಪೆನುತೂದಿ ಪುರ್ಬಿಡು
ತ್ತಾ ಮುನಿಪುತ್ರರಂ ನಗಿಸಿ ಹಱಿನುತೇಡಿಸಿತೊಂದು [4]ಕೋಡಗಂ[4] ॥೧೨೮॥

---

೧ ರಾ(ಬ) ೨ ನಾಳಿಕೇರ (ಮೈ, ರಿ, ಬ) ೩ ಮೈಮೆ (ರಿ, ಕ) ೪ ಮರ್ಕಟಂ (ಬ)

॥ವ.॥ ಮತ್ತಮೊಂದುದೀರ್ಣಮಹಿಮಾಕೀರ್ಣವರ್ಣಪೂರ್ಣಪರ್ಣಶಾಲೆಯಲ್ಲಿ—

ಯಮಮುಖ್ಯಾಷ್ಟಾಂಗಯೋಗಂ ಸಮನಿಸೆ ಹೃದಯಾವಾಸದೊಳ್‌ಶಂಭುಪಾದಾ
ಬ್ಜಮನೋರಂತಿಟ್ಟು ಕಟ್ಟುರ್ಬಟೆಯ ಪವನನಂ ಕಟ್ಟಿ ಕೈಕೊಂಡು ಬೋಧ
ಕ್ರಮಮಂ ದೇಹೋಹಮೆಂಬುದನುಡುಗಿ ನಿಜಾನಂದಮಂ ನೆರ್ಮಿ ಭಿನ್ನ
ಭ್ರಮೆಯಂ ಕೀಳ್ತಿಕ್ಕಿ ಮುಕ್ತಿಪ್ರಮದೆಯನೊಲಿಸಲ್ಸಾಲ್ದರಿರ್ದರ್ಮುನೀಂದ್ರರ್
॥೧೨೯॥

॥ವ.॥ ಪೆಱತೊಂದು ಕುಸುಮಕಿಸಲಯಮಹಿತಮಂದಾರಮಹೀಜಾತಸಂಜಾತ ಮಧ್ಯಪ್ರದೇಶದಲ್ಲಿ—

ಶಿವಕಥೆವೇಳ್ವ ಶಂಕರಪುರಾಣಮನಾಲಿಪ ಶೈವತತ್ವಮಂ
ವಿವರಿಪ ಶಂಭುವಂ ಪದೆದು ಕೀರ್ತಿಪ ಹೃದ್ಗೃಹದಲ್ಲಿ ಶೈಲಜಾ
ಧವನ[1]ನೆ ನೆಟ್ಟು ಜಾನಿಪ ಮಹೇಶನನರ್ಚಿಪ ಸೋಮನಾಮಮಂ
ಸವಿನುಡಿಯಿಂದೆ ಬಣ್ಣಿಸುವ ಬರ್ದಿನ ತಾಪಸವರ್ಯರೊಪ್ಪಿದರ್ ॥೧೩೦॥

॥ವ.॥ ಅಲ್ಲಿ ಮತ್ತಮೊಂದು ತಳಿರ್ತ ತರುಣತಮಾಲತರುವನದ ತಳದ [2]ತಣ್ಣೆಳಲ ಪಳಿಕುವಾಸಱ[3]ಯ ಪರ್ಣಶಾಲೆಯಲ್ಲಿ—

ಕರಿಯನೆ ನೆರ್ಮಿ ಸಿಂಗಮುದನಂಟಿ ಮಹಾಶರಭಂ ಶಿರೋದ್ವಯಂ
ಕರಮದನೊಂದಿ ಸಾರ್ದು ಪುಲಿಪುಲ್ಲೆಯನಲ್ಲಿಯ ಮೌನಿಮಧ್ಯದ
ಲ್ಲಿರುತೆ ಮುದಂಬಡುತ್ತೆ ನೆರೆದಾಲಿಪುದದ್ಭುತಮೆಂಬಿನಂ ಪೊದ
ಳ್ದರಗಿಳಿವೋದುವೀಶ್ವರಪುರಾಣಮನಾದರದಿಂದನಾರತಂ ॥೧೩೧॥

ಎಳಮಿಂಚಂ ಪೋಲ್ವ ಬಂಬಲ್ಜಡೆ ಬಳೆದ ಘನಶ್ಮಶ್ರು ಭಸ್ಮತ್ರಿಪುಂಡ್ರಂ
ತೊಳಪುದ್ಯದ್ಭಾಳಮಾಲಂಬಿತ ವಿಳಸಿತ ರುದ್ರಾಕ್ಷಮಾಲಾಳಿ ಹಸ್ತೋ
ಜ್ವಳದಂಡಂ ಯೋಗಶಿಪಶಿಟ್ಟಂ ಮೃಗದ ಸದಜಿನಂ ವಲ್ಕಲಂ ಲಾಕುಳಂ ಮಂ
ಜುಳಮಂದಸ್ಮೇರವಕ್ತ್ರಂ ಮಿಸುಗೆ ಚರಿಯಿಪರ್ ತಪ್ಪಲೋಳ್‌ತಾಪಸೇಂದ್ರರ್
॥೧೩೨॥

॥ವ.॥ ಮತ್ತಮೊಂದು ನಗತಟದ ಸರಸಸರೋವರದ ತೀರದಲ್ಲಿ—

---

೧ ನ (ರಿ, ಬ, ಮೂ) ೨ ತಣ್ಣನೆ (ರಿ) ೩ ವ (ಮೂ, ಬ).

ಪಗೆಯಂ ಕೈವಶವಾಗಿಪೊಂದು ಬಗೆಯಂ ತಾಳ್ದಲ್ಲಿ ಕಾಸಾರವಾ
ರಿಗತಂ ತಾನೆನಿಸಿರ್ದು ಮಾಡಿ ತಪಮಂ ತತ್ಪಾಣಿಯಾದಂಬುಜಂ
ನಗದೊಳ್ ಬರ್ಪ ಮೃಗಾಂಕನಂ ಪಿಡಿದುದೆಂಬಂತುಚ್ಪಲಾಪ್ತಾಶ್ಮದಿಂ
ನೆಗಳ್ದೊಳ್ಗುಂಡಿಗೆಯಾಂತದಕ್ಷಿಣಕರಂ [೧]ತೋಱಿತ್ತು[೧] ಯೋಗೀಂದ್ರನಾ ॥೧೩೩॥

॥ವ॥ ಮತ್ತೊಂದೆಡೆಯೊಳಿತ್ತರಂಬಿಡಿದೊತ್ತರಿಸಿ ಬೆಳೆದಕ್ಷೀಣವೇಣುಕುಂಜ ಮಂಜುಳಸ್ಥಾನದಲ್ಲಿ—

ಒತ್ತರಿಸಿ ಸುತ್ತಿ ಮೆಯ್ಯೊ
ಳ್ಪುತ್ತಿಡೆ ಬೇರಿಳಿಯೆ ಜೆಡೆಗಳಿಡಿಕಿಱಿದಹಿಗಳ್
ಪತ್ತಿ ಪರಿದಾಡುತಿರೆ ನಡು
ನೆತ್ತಿಯ ಪೆರ್ಜೊಡರನೊರ್ವನೀಕ್ಷಿಸುತಿರ್ದಂ ॥೧೩೪॥

ಅಡರ್ದು ನಿಡುಜೆಡೆಯೆಡೆಯೊಳಹಿ
ಯಡಂಗೆ ತನ್ಮಸ್ತಕಸ್ಥಫಣಮಣಿ ಪದಪಂ
ಪಡೆದುದು ತನ್ಮುನಿಪನ ತಲೆ
ಯೆಡೆಯಱ ಚಿಜ್ಜ್ಯೋತಿ ಚಿಗಿದು ಪೊಱಪೊಣ್ಮಿದವೋಲ್ ॥೧೩೫॥

॥ವ॥ ಮತ್ತಮಲ್ಲಿ ಸಲ್ಲೀಲೆಯಿಂ ವಲ್ಲಭನೊಡನೆ ಮೆಲ್ಲನಿಳಿದು ತಳಿರ್ತ ಕಂಕೆಲ್ಲಿಯ ವನಮಧ್ಯದ ಮಲ್ಲಿಕಾಮಂಟಪದಲ್ಲಿ ಪಸರಿಸಿದ ಮಿಸುಪ ಕುಸುಮದೆಸಳ ಪೊಸವಸೆಯ ಮೇಲೆ ನಲ್ಲನೊಡನೆ ಚಲ್ಲದಿಂ ಕುಳ್ಳಿರ್ದು ಫುಲ್ಲಶರಕೇಳಿಯಂ ಮನಂದಣಿಯೆ ತನುಕರಗಲನುಭವಿಸಿ ಬಳಲ್ದಿಲರ್ವಟ್ಟೆಗೆ ಪಾಱಲಳವುಗೆಟ್ಟ ಬಟ್ಟಜವ್ವನದ ಬಿಜ್ಜೋದರಿಯರಂ ಪೆಗಲೊಳ್ಪೆಂಪಿಂ ತಳೆದು ತಳರ್ವ ವಿಪುಳವಿದ್ಯಾಧರರ್ಗೆ ಸಹಾಯಮಾಗಿ ಪೊತ್ತೆತ್ತಲುಜ್ಜುಗಿಪ ಕಾರ್ಮುಗಿಲ್ಗೆ ಕರ್ಬುವಿಲ್ಲಂ ಕೈವೀಸಿ ಕರೆದು ಕಳುಪಲೊಡನೆ ತಾನುಂ ಸಂಗಡಮಾಗಿ [೨]ಪೋಗಿ ಪೊ[೨]ತ್ತೆತ್ತುವ ಗಂಧವಹನ ಪಿಂದುಗೊಂಡು ಮಂಡಳಿಸಿ ಮುಱಿಮುಗಿಲಂತೆ ಪಾರ್ವ [೩]ಮದಮಧು[೩] ಕರಪ್ರಕರದಿಂ, ಮತ್ತಮೊಂದೆಡೆಯೊಳ್ ದರದಳಿತವಿಮಳದಳವಿಪುಳಪರಿಮಳಮಿಳಿತಕುಸುಮವಿಸರ ವಿಳಸಿತಮಧು[೪]ಮ[೪]ದಿತತರುಣಮಧುಕರನಿಕರಪರಿವೃತಮೃದುಳಕಿಸಲಯಮಹಿತ ಪಾರಿಜಾತಮಹೀಜಾತಮೂಲಹರಿನೀಲವಿಶಾಲಶಿಲಾತಲದೊಳ್ಸಂದಣಿಸಿ ಗೊಂದಣಂಗೊಂಡು ಕುಳ್ಳಿರ್ದ ಸುರಸುದತಿಯರ ನೆರವಿಯೊಳೊರ್ವ ಮನ್ನಣೆಯ ಕಿನ್ನರಕನ್ನೆ ತನ್ನ ಚೆನ್ನಕಿನ್ನರಿಯಂ ತೆಗೆದು ಮೇಳಂಗೈದಾಳಾಪಿಸಿ ಕೊರಲಬೆರಲ ಸಂಚುಗೂಡಿ

೧ ತೋಱಿತ್ತು (ಮೈ, ಮೂ) ೨ ಪೊ (ಬ) ೩ ಮಧು (ಮೂ) ೪ ಮು (ರಿ)

ನುಣ್ಚರಂದೆಗೆಯೆ ಕೇಳ್ದೊಡನೆ ಪೆಡೆಯೆತ್ತಿದ ಕಾಳಾಹಿಯೆಂಬಂತೆ ನಿಡುಜಡೆ ಕಡು ಬೆಡಂಗುವಡೆಯಲೆಳಸಿ ಬಳಸಿಬಂದು ನಿಂದು ಸುತ್ತಿ ಮುತ್ತಿ ಮೇ[೧]ವಂ[೧]ತೊಱೆದು ಮೆಯ್ಯುಂ ಮಱೆದಭ್ಯರ್ಣದೊಳಾಕರ್ಣಿಪ ತರುಣಹರಿಣಗಣಕ್ಕೆ ಸರಸೇಕ್ಷಣದ ಸವಿ ನೋಟಮನುಪದೇಶಿಪಂತೆ ದೆಸೆವಡೆದು ಮುಱಿದಿಟ್ಟಿಪ ದಿಟ್ಟಿ ನೆಱೆ ಮೆಱೆಯೆ ಮೊಗಸಸಿಯ ಮುಗುಳ್ನಗೆಜೊನ್ನದಿಂ ಮುನ್ನಲರ್ದ ಕನ್ನವುರದ ಕನ್ನೈದಿಲೊಳಿರ ದೆಱಗಿ ಝೇಂಕರಿ[೨]ಪ[೨] ಮಧುಕರಿ ಮದನನಾ[೩]ಣತಿ[೩]ಯಿಂ ಜಾಣೆಂದೊಡನೆ [೪]ಸುತ್ತಿ[೪]ಯೆಚ್ಚರಿಸಿದಪ್ಪುದೆಂಬಂತೆಸೆಯೆ ಕೇಳ್ವರ ಕರ್ಣಕುಹರಕಾಸಾರಂ ತುಂಬಿ ಪೊಱಸೂಸಿ ಪೊನಲಿಟ್ಟು ಪರಿವಂತೆ ಪಿಂಗದೆ ಸಂಗೀತಸುಧಾರಸವೃಷ್ಟಿಯಂ ಸುಧಾ ಕಾದಂಬಿನಿಯಂತೆ ಕಱೆಯೆ ಕೂರ್ಮೆಯಿಂ ಕೇಳ್ದು ವಸಂತಂ ಸಂತಸಂಬಟ್ಟು ಮರದುದಿಯೊಳಿರ್ದು [೫]ಮ[೫]ಚ್ಚಿ ಪುಷ್ಪಾಂಜಲಿಗಱೆದನೆಂಬಂತೆ ಪವನಪಾತದಿನಾ ಯುವತಿಯ ಮೇಲೆ ತತ್ಕುಜದ ಸೆಳೆಗೊಂಬಿನಿಂ [೬]ಕಳಿದು[೬] ಕವಿವ ಕಮ್ಮಲರ್ಗಳಿಂ, ಮತ್ತಮೊಂದೆಡೆಯೊಳ್ ಬಿಸಿಗದಿರನ ಬಿಸಿವಿಸಿಲ್ ಮೆಯ್ಯುಂ ಪೊಯ್ಯೆ ತನುಲತೆ ಮುಗುಳ್ತಂತೆ ತಳ್ತಿಡಿದು ತೀವಿದ ಘರ್ಮಜಳಕಣದಿಂ, ಭಗಣಮಂ ತಳೆದ ಗಗನ ಲಕ್ಷ್ಮಿ ನಗದ ಪೆರ್ಮೆಯನೊರ್ಮೆ ಕೂರ್ಮೆಯಿಂ ನೋಡಲಿಳಿತಂದಳೆಂ[೭]ಬಂತಂದ[೭] ಬಡೆದಿಳಿತಂದು ಕಂದರದೊಳ್ನಿಂದು ಕಂದಿದ ಮೊಗದಾವರೆಯಂ ಕಾಂತಿಗುಂದಿದ ಕ[೮]ಣ್ಣೈ[೮]ದಿಲಂ ಬಳಲ್ದ ಕುಚಕೋಕಮಿಥುನಮಂ ಕೊರಗಿದ ತೋಳ್ವಳ್ಳಿಯಂ ನೀರ್ವೊಗಿಸುವಂತೆ ವಿಪುಳಪುಳಿನವಿದಳಿತನಳಿನವಿಮಳಕುಮುದಕಲ್ಹಾರಸುರಭಿಮಿ ಳಿತತುಹಿನಶೀತಳಸಲಿಲಸಂಭೃತಸರಸಿಜಾಕರಮಂ ಸಂತಸಂ ಮಿಕ್ಕು ಪೊಕ್ಕು ಮುಗಿಲಿಂ ಮುತ್ತು ಸುತ್ತಂ ಸೂಸುವಂತೆ ಮುಡಿಯಿಂ ಮುಗುಳುದಿರೆ ಕುಚಕಮಳ ಕುಟ್ಮಳಕ್ಕೆ ಮುಖಚಂದ್ರನತ್ತಣಿಂ ಭೀತಿ ಬೇಡೆಂದು ಕುಸುಮ[೯]ಶ[೯]ರಂ ಪೊಸವಿಸಿಲ [೧೦]ಗವ[೧೦]ಸಿಣಿಗೆದೊಡಿಸಿದಂತೆ ಮನೋ[೧೧]ಮಣಂ ರತಿಸಮಯದೊಳ್ ನಿಜಕರದಿಂ ತೊಡೆದ ಕುಂಕುಮಪಂಕಂ ಜಳದೊಳೊಡವೆ[೧೨]ರೆ[೧೨]ದು ತರಳತರತರಂಗಪಾತದಿಂ ವಿಕಚಕನಕಕಮಳಪರಾಗಪಟಳಂ ಸುರಿದು ಪ[೧೩]ರೆ[೧೩]ದಂತೆ ಪಸರಿಸೆ ಕಮಲವನ ದೊಳೆಱಗಿದ ಪಱಮೆದುಱುಗಲೆಂಬಂತಲ್ಲಿ ಚಿಕುರನಿಕರಮೆಸೆಯೆ ಸಲಿಲಕೇಳಿ-ಯನಾಂತು ಬಳಲ್ಕೆಗ[೧೪]ಳಿ[೧೪]ದೈದಿ ತನ್ನಗದ ಕಾಂತಿಯೆನೆಳೆವಿಸಿಲ್ಗೆತ್ತು ಮೈಯೊಡ್ಡಿ-ಸಿಂದಂಬುಜಂ ತುಂಬಿಗಳ ಬಂಬಲಂ ಮೈದಡಪ್ಪುವಂತೆ ನುಣ್ಗುರುಳ್ಗಳಂ ನೆಳ-[೧೫]ಲು[೧೫]ವ ಕರಾಬ್ಜಂ ಕಂಗೊಳಿಸೆ ತೋರ್ಪ ಗಂಧರ್ವಸುಂದರಿಯರಿಂ, ಮತ್ತ

೧ ಪಂ (ರಿ, ಕ, ಮೈ) ೨ ಸುಪ (ಬ) ೩ ಗ್ಞೆ (ಬ) ೪ ಶ್ರುತಿ (ಕ) ಸುತಿ (ಮೈ) ೫ ಮೆ (ರಿ) ೬ ಕಳಚಿ (ಬ) ೭ ಬಂದಂ (ತಾ) ೮ ಣ್ಣೈ (ತಾ) ೯ ಸ (ಬ, ಮೂ) ೧೦ ಗೌಸಣಿಗೆಯ (ಬ) ಗವಸಿಣಿಗೆಯ (ತಾ) ಗವಸಣಗೆಯ (ಮೂ) ೧೧ ರ (ತಾ, ಬ, ಮೂ) ೧೨ ರ (ತಾ, ಬ,) ೧೩ ಳೆ (ಮೈ) ೧೪ ವು (ತಾ, ಬ, ಮೈ, ಮೂ)

ಮೊಂದೆಡೆಯೊಳ್ ಗಗನಕ್ಕೊಗೆವ ಮುಗಿಲೊಡನೆ ನೆಗೆದು [೧]ಪಾಱಲಲ್ಲಿ[೧] ನಿಜಾರುಣಾಧರಮನವಲೋಕಿಸಿ ರಸಾಲದಳಬಿಂಬಫಲಭ್ರಾಂತಿಯಿಂ ಕರ್ದುಂಕಲೆಂದೈತಂದು ನೆಟ್ಟನೆ ಕಟ್ಟಿದಿರೊಳ್ನಿಂದ ಪರಪುಟ್ಟಪಂಡಿತವಕ್ಕಿಗಳಂ ನಿಜಕರಾಗ್ರದಿಂ ಪಿಡಿದೊಡಗೊಂಡು ಪೋಗಿ ನಿಜಗೃಹದೊಳೋವಿಯಾ ಗಿಳಿಯ ಮುದ್ದುತನಕ್ಕೊಲ್ದು ವಾತ್ಸ್ಯಾಯನಮನೋದಿಸಿ ರಸಾಲರಮಣನೆಂಬ ಪೊಸವೆಸರಿಟ್ಟು ಕಳಕಂಠನ ಕಳರವಕ್ಕೆ ಮೆಚ್ಚಿ ನಿಚ್ಚಂ ಸವಿಸವೆಯದ ಸಾರಸಂಗೀತಮಂ ಕಲಿಸಿ ಮಾಕಂದ[೨]ಮಧುರ[೨]ನೆಂದು ನಾಮಕರಣಂಗೆಯ್ದನಂತರಂ ಸಿಂಗರಂ ಬಡೆದು ಕನಕನಗದ ನಂದನಮಧ್ಯದ ಮಂದಾರತರುಗಳ ತಳದ ತ[೩]ಣ್ಣೆ[೩]ೞಲ ತಳಿರ್ವಂದರಮಲ್ಲಿಕಾಕುಸುಮಮಾಲಿಕಾಲಂಕೃತಕುಸುಮಮಂಟಪದೊಳರೆವಿರಿದ ಕೆಂಜಾಜಿಯ ನನೆದುಱುಗಲಸಿಂಹಾಸನದ ಮೇಲೆ ತಳಿರಗದ್ದುಗೆಯಲ್ಲಿ ಚೈತ್ರನೆಂಬ ಚಿಪ್ಪಿಗಂ ಮಾಂದಳಿರ್ವಟ್ಟೆಯೊಳ್ ಶಿರೀಷಕುಸುಮಮಂ ತುಂಬಿ [೪]ಕಳಮ[೪] ಕಂಟಕಸೂಚಿಯಿಂ ಕಮಳಸೂತ್ರಮಂ[೫]ಕೊಯ್ದು[೫] ಪೊಲಿದಿರಿಸಿದ ಮಲಂಗು[೬]ಮೂಡೆಯ ಮೋಡಿಯೊಳೊಱಗಿ[೬] ಬಳಸಿ [೭]ಶಶಿ[೭]ವಸಂತಾದಿಗಳೋಲೈಸಿ [೮]ನಿಲೆ[೮] ಶೃಂಗಾರ ಸಾರ ಸರ್ವಸ್ವಮಂಗಂಬಡೆದಂತೆ ಕಂಗೊಳಿಪನಂಗಚಕ್ರೇಶ್ವರಂ ತನ್ನಂಗನೆಯಾದ ರತಿದೇವಿಯೊಡನೊಡ್ಡೋಲಗಂಗೊಟ್ಟಿರ್ಪ ಪೇಳ್[೯]ಯರ್[೯]ಱಿದು ಭೋಂಕನೈದಿ ಸಾದರಂ ಮಿಗೆ ರತಿಕಾಮರ್ಗೆ ಮಣಿದುಚಿತಸ್ಥಾನದೊಳ್ ಕುಳ್ಳಿರ್ದಾ ಪಿಕನಿಂ ಮಾರವೀರನ ಬೀರದ ಬಿ[೧೦]ರಿ[೧೦]ದಾವಳಿಯಂ ಪಾಡಿಸುತ್ತಮಾ ರಾಜಶುಕನಿಂ ತಾನುಸಿರ್ದ ಮದನ ವಿಜಯಮೆಂಬ ಸರಸಕಾವ್ಯಮಂ ಸಭೆ ಕೇಳ್ದು ತಲೆದೂಗಲೋದಿಸುತ್ತಮವೆರಡಂ ಕಾಣ್ಕೆಗೊಟ್ಟಿಚ್ಚೆಗೆರ್ತಿ ಪಚ್ಚೆವಿಲ್ಲರಿಂ ಮೆಚ್ಚುವಡೆದಚ್ಚರಿ ಮಿಗೆ ತಳ್ದೊರ್ಚ್ಚೇರೆಗಣ್ಣ ಪೆರ್ಚಿನರ್ಚರಿಯರಿಂ, ಮತ್ತಮೊಂದೆಡೆಯೊಳ್ ಸೋಗೆನವಿಲಂತೆಸೆವ ಸೋರ್ಮುಡಿಗೆ ಮೊಲ್ಲೆಯ ಮುಗುಳಂ ತುಱುಂಬಿ ಅರೆವೆಱೆಯಂತೆ ಮೆಱೆವ ಪಣೆಗೆ ಕಳಂಕನ ಮರ್ಚುವಂತೆ ಕತ್ತುರಿಯ ಬಟ್ಟಬೊಟ್ಟನಿಟ್ಟು ಮದನಂ ವದನಲಕ್ಷ್ಮಿಯಸೋಜೆಯಿಂ ಪೂಜಿಸಿದ ಸಂಪಗೆಯೆನೆ ಸೊಂಪುಗರೆವ ನಾಸಿಕಕ್ಕೆ ನಱುಸುಯ್ಗಂಪಂ ಪಡೆದು ರತಿಯ ಮುಡಿಗೆ ಮುಡಿಯಲ್ ಯೋಗ್ಯಮಕ್ಕೆಂದು ಮಲ್ಲಿಗೆಯ ಮುಗುಳಂ ಸೇ೯-ಪಂತಾಣಿಮುತ್ತಿನ ಮೂಕುತಿಯಂ ಸಾರ್ಚಿ ಮದನಮದಗಜದ ಕುಂಭದಂತಿಂಬುವಡೆದ ಬಟ್ಟಮೊಲೆಗೆ [೧೧]ತಲೆ[೧೧]ಮಾ[೧೨]ಲೆ[೧೨]ಯನಲಂಕರಿಪಂತೆ ಕಂಠಮಾಲೆಯಂ ನೆಲೆಗೊಳಿಸಿ ಕಂಜದಂತೆ ರಂಜಿಪ ಕರಯುಗಳಕ್ಕೆ ರವಿಕಿರಣಮಂ ತುಡಿಸುವಂತೆ ಸುವರ್ಣಮಣಿವಲಯಮಂ ಕೈಗೊಳಿಸಿ ರೋಹಣಾಚಲಮೆಂಬೂಹೆಗೊಳಗಪ್ಪ

---

೧ ಪಾರ್ವಲ್ಲಿ (ಮೈ, ಮೂ) ೨ ಮಧುಕರ (ತಾ, ಬ) ೩ ಣ್ಣೆ (ತಾ, ಬ) ೪ ಕಮಳ (ತಾ, ಬ, ಮೂ) ೫ ಕೋದು (ತಾ, ಮೈ) ೬ ಮೂಡೆಯುಂ ಪೊಡೆಯೊಳೊಱಗಿ (ಬ) ೭ ಸಸಿ (ಬ, ಮೈ. ಮೂ), ೮ ನಿಲ್ಲೆ (ಮೂ) ೯ ಯುನ (ತಾ, ಬ) ೧೦ ರು (ತಾ, ಬ) ರ. (ಮೂ). ೧೧ ತಾರಾ (ತಾ) ೧೨ ಲಿ (ಬ)

ನಿತಂಬಮಂಡಳಕ್ಕೆ ಮಾಲೆಗೊಂಡ ಮಣಿಗಣಮಂ ಸೇರಿಪಂತೆ ನೂತ್ನರತ್ನಕಾಂಚಿಯು ನಮರ್ಚಿಯನಂಗನಿಷಂಗಮೆನೆ ಕಂಗೊಳಿಪ ಜಂಘೆಗಳ್ಗಣಸಂ ಬಂಧಿಪಂತಂದುಗೆಯು ನಂದಂಗೊಳಿಸಿ ನುಣ್ದೊಡೆಗಳೆಂಬ ರಂಭಾಸ್ತಂಭಂಗಳ್ಕಂದದಂತೆ ಬೆಳ್ದಿಂಗಳಿಂ ಬಾಸಣಿಸುವಂತೆ ಬೆಳ್ವಟ್ಟೆಯನುಟ್ಟು ಸಿಂಗರಂಗೈದು ಕಡೆಗಣ್ಣ ಕದಿರ್ವೞುಗಲ್ಕುಡಿಮಿಂಚಂ ಕೆದಱೆ ಬಿಂಬಾಧರದ ಕೆಂಬೆಳಗಿನೊಡನೆ ಸುಲಿಪಲ್ಲ ನುಣ್ಬೆಳಗು [೧]ಮೊಗಸಿರಿಯ ಮೈಸಿರಿಯಂ[೧] ಪಸರಿಸೆ ಮಿಸುಪಂಗಲತೆಯ ಪೊಸಕಂಪು ದೆಸೆದೀವೆ ಮದವೇಳ್ದ ಮದನ ಗಜದ ಮದಲಕ್ಷ್ಮಿಯಂತೆ ಸೊರ್ಕುಂಜವ್ವನೆ ಸೊಗಯಿಪ ವಿಮಳ ಕಮಳಾಕರದ ತೀರದ ವಿಶದಶಶಿಮಣಿಭಿತ್ತಿಯಂ ನೆಮ್ಮಿ ಚೆನ್ನೆಸೆಯೆ ಸಿಂಗರಂಗೈದು ಕಾದಂಬಿನಿಯ ಬರವಂ ಬಯಸುವ ಮಯೂರನಂತೆ ತನ್ನ ಬರ[೨]ವಂ[೨] ಬಯಸು[೩]ತ್ತೆ[೩] ಕುಳ್ಳಿರ್ದ ಮನದನ್ನನೆಡೆಗೆ ತಡೆಯದೆಯ್ತರ್ಪಲ್ಲಿ ನಿಜಪ್ರತಿಬಿಂಬಮಂ [೪]ನೆಮ್ಮಿರ್ದ[೪] ಚಂದ್ರಕಾಂತಭಿತ್ತಿಯೊಳ್ಮಾರ್ಪೊಳೆಯಲ್ಪ್ರತಿಯುವತಿಯೆಂದು ಬಗೆದು ಕನಲ್ಕೆ ಕೈಮೀಱೆ ಮುಳಿದು ಮುಗಿಲ್ವಟ್ಟೆಗೆ ಗಳಿಲನೆ ನೆಗೆಯೆ ತನ್ನ ನೆಳಲ್ ಸಸಿಗಲ್ಲ ನೆಲಗಟ್ಟಿನೊಳ್ತೊಟ್ಟನೆ ತೋಱೆ ಮೋಹೋದ್ರೇಕದಿಂ ಮುಂದುಗಾಣದೆ ಧರೆಗಿಳಿದಳ್ಗಿತ್ತು ಮೂರ್ಛೆವೋದ ಮನದನ್ನನಂ ಕಂಡು ಕರುಣಾರಜ್ಜುವೆಳೆದಂತೆ ತಳ್ವದಿಳಿತಂದು ತೆಗೆದು ಬಿಗಿಯಪ್ಪುತ್ತೆ ಸುರತರುತಳವಿಳಸಿತವಿಕಚವಿಚಕಿಲನಿಚಯನಿಚಿತರುಚಿರತರಮಲ್ಲಿಕಾಮಂಟಪಕ್ಕೊಡಗೊಂಡು ಪೋಗಿ ನಳನಳಿಪೆಳೆದಳಿರ ಪೂವಸೆಯೊಳಿರ್ವರುಂ ಕುಳ್ಳಿರ್ದು ಬಳ್ಳಿವರಿವ ಕಟಾಕ್ಷದಿಂದಡರಿ ನೋಡಿ ಮದನಾನುರಾಗಂ ಕೈಗಣ್ಮೆ ಮನಂಬಂದ ಬಂಧದಿಂ ಸವಿಸವೆಯದ ಸುಸಿಲಸೊಗಮನನುಭವಿಸಿ ತದ್ದಂಪತಿಗಳ್ಪೋಗೆ ಪಾಸಿನೊಳ್ಪತ್ತಿದ ಕಜ್ಜಳಮಂ ಸೂಸಿದ ನರುದಂಬುಲಮನುದಿರ್ದಂಗರಾಗಮಂ ಕೆದರ್ದ ಮೃಗಮದರಜಮಂ ಜಗುಳ್ದ ಪೂಮಾಲೆಯಂ ಮುಗುಳ್ದ ಮುಸುರ್ವಳಿಗಳಂ ಕಂಡು ಕಾದಲರ್ನೆಱೆದು ತಳರ್ದ ತಾಣಮಿದೆಂದು ಜಾಣಿಂ ಕೆಳದಿಯರಂ ಕರೆದು ತೋಱಿ ಮುಗುಳ್ನಗೆನಗುತ್ತನಂಗಸಿಂಗಿತದಂಗಮಂ ಪಿಂಗದೆ ಪೊಗಳ್ವ ದೇವಾಂಗನೆಯರಿಂ, ಮತ್ತಮೊಂದೆಡೆಯೊಳಜಗರಮುಗುಳ್ದಗರಳದುರಿಯ ಪೆರ್ಬೊಗೆ ಪೊಯ್ಯೆ ಗಗನದಿಂ ಜಗುಳ್ದುರುಳ್ದ ವಿಧುರವಿಗಳಂತೆಸೆವ ರವಿಮಣಿಚಂದ್ರಕಾಂತಂಗಳಿಂ, ರವಿಶಶಿಗಳ್ಗೆ ರಾಹುಭ್ರಾಂತಿಗುಡುವಿಂದ್ರನೀಲದ [೫]ಕೋಡುಂಗಲ್ಗ[೫]ಳಿಂ, ಸಪ್ತಾಶ್ವನಶ್ವಂಗಳ್ಗೆ ಶಶ್ವದ್ದೂರ್ವಾಂಕುರಶಂಕೆಯಂ ಭೋಂಕನೊಡರ್ಚುವ ಪಚ್ಚೆಗಲ್ಗಳಿಂ, ಹರಿಯೊಳ್ಪುರುಡಿಸಿ ಗಿರಿವರಂ ವಜ್ರಮನಾಂತ ಬೆಡಂಗನಾಗಿಪ ವಜ್ರಶೃಂಗದಿಂ, ಹರನೋಲಗಕ್ಕೆ ಹರುಷದಿಂ ಪೋಗಿಬರ್ಪ ಸುರಖಚರಕಿನ್ನರರ್ಗಾವಾಸಮಾದ ರನ್ನಗವಿಗಳಿಂ, ತಾಪಸರೇಪೊಳ್ತುಂ ನೆಲೆಗೊಂಡ ತಪೋವ

---

೧ ಮೊಗಸಿರಿಯಂ (ತಾ) ೨ ಮಂ (ಮೈ) ೩ ತ್ತೆ (ಮೈ, ಮೂ, ಬ, ತಾ) ೪ ನೆಮ್ಮಿದ (ತಾ) ನೆಮ್ಮಿರ್ದ (ಬ, ಮೈ, ಕ) ೫ ಕೋಡ್ಗಲ್ಗ (ಮೂ) ಕೋಡುಗಲ್ಗ (ತಾ)

ನಂಗಳಿಂ, ಪಾ[೧]ಱುವ[೧] ಪಕ್ಕಿಗಳಿಂ, ನೆಗೆವ ಮೃಗೇಂದ್ರಂಗಳಿಂ, ಚಲ್ಲವರಿವ ಪುಲ್ಲೆಗಳಿಂ, ಸಮ್ಮದಂಬಡೆ[೨]ವ[೨] ಪೊಮ್ಮಱಿಗಳಿಂ, ಪರಿವ ಪುರುಷಾಮೃಗಂಗಳಿಂ, ನೆರೆದು ಪರಿವ ಕರಿಗಳಿಂ, ಸಾರಿಬರ್ಪ ಭೇರುಂಡಂಗಳಿಂ, ನಲಿವ ಪುಲಿಗಳಿಂ, ನಿಲುಂಬಿದ ಮೊ[೩]ಲಂ[೩]ಗಳಿಂ, ಪೆಡೆಯೆತ್ತುವ ಗಡಣದಹಿಗಳಿಂ, ಕೋಡಿಡುವ ಕೋಳ್ಮಿಗಂಗಳಿಂ, ಸರಿವ ಮಱಿಗಳಿಂ, ಮೆಲ್ಲನೆ ಬರ್ಪ [೪]ಜಲ್ಲಿಮಿಗ[೪]ಂಗಳಿಂ, ಬಹುವಿಧದ ವಿಹಗಂಗಳಿಂ, ನೂತನಂಬಡೆದ ಜ್ಯೋತಿರ್ಲತೆಗಳಿಂ, ರಮಣೀಯಮಾದಮರತರುಗಳಿಂ ಸುರುಚಿರಮಾದ ಸುರಧೇನುಗಳಿಂ, ಸಂತತಮೆಸೆವ ಚಿಂತಾಮಣಿಯ ಕಣಿಯಿಂ, ಪರುಷದಱಿಯಿಂ, ಪರಿವ ಸಿದ್ಧರಸದಿಂ, ಫಣಿಪತಿಗಮಾದೊಡಂ ಗಣಿಸಲರಿದಾದ ಘನಮಹಿಮೆಯಾಂತ ಶಿವಲೋಕಮಂ ತನ್ನ ನೆತ್ತಿಯೊಳ್ಪೊತ್ತಲಂಪಿನ ಪೆಂಪಿಂಗೆ ಪಕ್ಕಾದ ಸರ್ವಪರ್ವತ ಸಾರ್ವಭೌಮನಖರ್ವಸಂಪದಂ ಮಿಗೆ ಮೆಱೆವುತಿರ್ದುದಂತುಮಲ್ಲದೆಯುಂ—

ನಮದಮರವಧೂಟೀಕುಂತಳಸ್ರಸ್ತಮಾಲಾ
ಸಮುದಿತಮಕರಂದೋತ್ಸಿಕ್ತಪಾದಾಂಬುಜಾತೇ
ಕಮನಕಮಳಜಸ್ತ್ರೀಗೀಯಮಾನಾಂಕಮಾಲಾ
ಸಮುದಯೆ ದಯೆಯಿಂದಂ ದೇವಿ ರಕ್ಷಿಪ್ಪುದೆನ್ನಂ ॥೧೩೬॥

ಇದು ವಿನಮದಮರವರಮಕುಟತಟಘಟಿತಮಣಿಗಣಮಹಾಪ್ರಭಾಪಟಲ
ಪರಿವೃತಪರಶಿವಶ್ರೀಪಾದನಖಚಂದ್ರಸಾಂದ್ರರುಚಿರುಂದ್ರ
ಚಂದ್ರಿಕಾಚಂಚಚ್ಚಕೋರಾಯಮಾನ
ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವವಿರಚಿತಮಪ್ಪ
ರಾಜಶೇಖರವಿಳಾಸ ವಿ[೫]ಪು[೫]ಳಪ್ರಬಂಧದೊಳ್ ಪೀಠಿಕಾರಚನಾಸಮುದ್ರಗಿರಿವರ್ಣನಂ

ಅಂತು ಆಶ್ವಾಸಂ ೧ಕ್ಕಂ ಪದಂ ೧೩೬ಕ್ಕಂ ಮಂಗಳಂ
ಪ್ರಥಮಾಶ್ವಾಸಂ ಸಂಪೂರ್ಣಂ

ಮಂಗಳಮಹಾ

ಶ್ರೀ

---

೧ ರ್ವ(ತಾ, ಮೈ, ಮೂ) ರ್ವರುವ (ಕ) ೨ ದ (ಕ) ೩ ಲ (ಮೂ, ಕ) ೪ ಝಲ್ಲಿಮೃಗ (ಮೂ) ೫ ಮ (ಮೂ)

ದ್ವಿತೀಯಾಶ್ವಾಸಂ

ಶ್ರೀಪಾರ್ವತೀಪಯೋಧರ
ಲೇಪಿತಮೃಗಮದವಿಲಿಪ್ತವಕ್ಷಸ್ಥಳನು
ರ್ವೀಪಾಲನಶೀಲಂ ಕರು
ಣಾಪಾಂಗಂ ಪಾಲಿಕೆಮ್ಮನುಱೆ ಶಿವಲಿಂಗಂ ||೧||

ಅಂತೆಸೆವ ಮೇರುಗಿರಿಗೆ ಸ
ಮಂತೊಪ್ಪುವ ದಕ್ಷಿಣಾಶೆಯೊಳ್ಘನ ಧರಣೀ
ಕಾಂತೆಯ ಸೀಮಂತದ ರ
ತ್ನಂ ತಾನೆನೆ ಚೋಳಮಂಡಳಂ ಸೊಗಯಿಸುಗುಂ ||೨||

ದಳಿತಾಂಭೋಜಾಳಿ ತಳ್ತೊಪ್ಪುವ ಕೆಱೆ ಕುಮುದಂ ತೀವಿ ತೋರ್ಪಬ್ಜಷಂಡಂ
ಕಳಹಂಸಶ್ರೇಣಿಯಿಂ ರಂಜಿಪ ಪೊಳೆ ಬೆಳೆಯಿಂ ಬಾಳ್ವ[೧]ಕೆಯ್[೧] ಪೂಗಳಿಂ ಕ
ಣ್ಗೊಳಿಪುದ್ಯತ್ಪುಷ್ಪವಾಟೀಕುಳಮಲರ್ದಲರಿಂ ಕಾಯ್ಗಳಿಂ ಪಣ್ಗಳಿಂ ಮಂ
ಜುಳಮಾದುದ್ಯಾನಮಾ ನಾಡೊಳೆ ಪಿರಿದೆಸೆವುತ್ತಿರ್ಪುದಲ್ಲಲ್ಲಿ ನಿಚ್ಚಂ ||೩||

ತರುಸಂತಾನಮದೊಪ್ಪೆ ತನ್ನ ತಟದೊಳ್ಕೀರಾಟಕೆಂದೆಯ್ದಿ ಸಾ
ರ್ದಿರೆ ದಿವ್ಯದ್ವಿಪಮಿಂಬುಗೊಂಡು ಜಳಮಂ ರಂಭಾದಿಗಳ್ಸೇವಿಸು
ತ್ತಿರೆ ಕೂರ್ಪಿಂದವಗಾಹಿಸುತ್ತನಿಮಿಷವ್ರಾತಂ ಕರಂ ತೋಱೆ ನಿ
ರ್ಜರಗಂಗಾನದಿ ತಾನಿದೆಂಬ ತೆಱದಿಂ ಕಾವೇರಿ ಕಣ್ಗೊಪ್ಪುಗುಂ ||೪||

ಶರನಿಧಿಯೊಳೊಗೆದ ವಿಷಮಂ
ಧರಿಯಿಸಿ ಸುರರಂ ಸಮಂತು ಪೊರೆದಭವಂಗೀ
ಧರೆ ಪಾಸಿದ ನಡೆಮಡಿಯೆನೆ
ಶರಮೆಸೆದುದು ವಿಮಳಗುಣದಿನಾ ನದಿ ಪದಪಿಂ ||೫||

---

೧ ಕೈ (ಮ್ಯ, ಕ)

ದರದಳಿತಾಂಬುಜಾನನದೊಳೊಪ್ಪುವ ಕತ್ತುರಿಬೊಟ್ಟಿನಂತೆ ಸಾ
ರ್ದಿರಲಳಿ ತೊಟ್ಟ ಮುತ್ತುಗಳಿವೆಂಬಿನಮೊಪ್ಪಿರೆ ಸೀಕರಾಳಿ ಬೆ
ಳ್ನೊರೆ ಸಿರಿ[೧]ಕ[೧]ಂಡದಣ್ಪೆನೆ ವಿರಾಜಿಸೆ ಪದ್ಮಪರಾಗವಾಸೆ ವಾ
ಷ್ಟರಚಪಲಾಕ್ಷಿ ಪೊಚ್ಚಪೊಸವೆಣ್ಣಲೆ ಸಿಂಗರವಾಂತು ತೋಱಿದಳ್ ॥೬॥

ಪರಿಗತಕೃಷ್ಣವೇಣಿಯುರರೀಕೃತಪುಷ್ಕರೆ ಸಿಂಧುರಾಗಬಂ
ಧುರೆ ಧೃತತುಂಗಭದ್ರೆ ಜಿತಭಾನುಜೆ ಗೋಮತಿ ಧೂತಪಾಪೆ ಭಾ
ಸುರತರಲೋಕಪಾವನೆ ನತಾಘಲತಾಸಿ ಸಮಸ್ತದೇವತಾ
ವರಣೆ ಕವೇರಕನ್ಯೆ ಕೆಳೆಗೊಂಡಳನೇಕನದೀವಿಳಾಸಮಂ ॥೭॥

ಚಾರುಪಯೋಧರೆ ಮಹಿಮಾ
ಧಾರೆ ಸದಾನಿಮಿಷಸೇವ್ಯರಸಯುತೆ ವರಶೃಂ
ಗಾರಾಜಿತೆಯೆನಿಸುವ ಕಾ
ವೇರಿ ಧರಾಕಾಮಧೇನುವೆನಿಪುದು ಪುಸಿಯೇ ॥೮॥

॥ವ॥ ಎಂಬ ನೆಗಳ್ತೆವಡೆದಾ ತರಂಗಿ[೧]ಣಿಯು[೨] ತಡಿಗೊಂಡು ಬೆಳೆದರೆವಿರಿದ ಸರಸಿಜದರಲಸರಸ ಪರಿಮಳ[೩]ಕೆ[೩] ಮೊಱೆದೆಱಗು[೪]ವ[೪] ಪರಮೆವಱಿದುಱುಗಲಿಂ ತೊಱೆಯೆಱೆಯನೊಳ್ಪುರುಡಿಸಿ ನೀಲರತ್ನಮಂ ಧವಳನಳಿನಶುಕ್ತಿಯೊಳ್ಪಡೆದಪಳೆಂಬಂತಿಂಬುವಡೆ[೫]ದು ಪಾಳಿಯಂ[೫] ಜಳಕೇಳಿಗೈದು ತಳರ್ದ ತುಂಬುಜವ್ವನದ ನಿತಂಬಿನಿಯರ ಕುಂಭಕುಚದಿರುಂಬಿನೊಳಿಂಬುವಡೆದು ತುಂಬಿದ ಮಿಗಸೊರ್ಕುಗೆಸ[೭]ಱಿಂ[೭] ಮೈಗರ್ಚಿಕೊಳ್ವ ಮದಗಜಂಗಳ ಕಟಿತಟದ ಮದಕರ್ದಮದಿನೊಡವೆರೆದು ಕಲಸಿ ಕಲಂಕಿ ಕಡುಗರ್ಪನಾಳ್ದ ಕಾಳಿಂದಿಯಂತೆ ಕಣ್ಗೆವಂದು ತೀರದೇಶದ ಪುಳಿನತಳದೊಳೋರಣದಿನಡಿಯಿಡುವರಸಂಚೆ[೮]ವಱಿಗಳ[೮] ಮೆಲ್ನಡೆಗೆ ನಿಟ್ಟಿಪ ಬಟಜವ್ವನೆಯರ ದಿಟ್ಟಿ ತಾಗದಂತೆ ಕಟ್ಟೆಳ್ಕಱಿಂ ತೂಪಿಱಿದಪಳೆನೆ ತುಱುಂಗಿ ತೂಱಿ ಸಿಡಿವ ಸೀ[೯]ರ್ಪ[೯]ನಿ ಕಡುಬೆಡಂಗುವಡೆಯೆ ಸುಸಿಲೆಸಗಿ ಬಳಲ್ದು ಬಸವಳಿದು ಪಸಿದು ಜಕ್ಕವ[೧೦]ಕ್ಕಿ[೧೦] ಮೆಲಲೆಂದು ಸಾರ್ತಂದು ವ್ಯೈದುಮ್ಮೃಣಾಳಮಂ ಮುಱಿದೆತ್ತೆ ನೊಂದಳಿರವವ್ಯಾಜ[೧೧]ದಿನರಳ್ವ[೧೧] ನಳಿನಿಯಂ ನೆಱೆನೆಗೆವ ನಿಡುಮೀನ್ಗಂಗಳಿಂ ನಿಳ್ಕಿನೋಡಿ ಘು[೧೨]ಳು[೧೨]ಘುಳಿಸಿ ಮೊಱೆವ[೧೩]ನೆ[೧೩]ವದಿಂ ಪಲ್ಮೊಱೆದು ತೆಱೆದೋಳನೆತ್ತಿ ಕಳೆಗೊಂಡು ಪೊಡೆವಂತೆ ತಳ್ತುಪಾಯ್ವ ನಿಡುವಾಸೆಯುಂ ರಂಜಿಸಿ ನೀರಾಟಕೆಳಸಿ ತೀರದೇಶದೊಳ್[೧]ನಿಂ[೧]ದ

೧ ಖ (ಮೈ) ೨ ಣೀ (ಮೂ, ಮೈ) ೩ ಕ್ಕೆ (ಮೂ, ತಾ, ಬ) ೪ ವಂತೆ (ಮೈ) ೫ ದಮಧು (ಮೂ) ದಳಿಪಾಳಿ (ತಾ) ೬ ಗೈ (ಕ) ೭ ಱಿಂ (ಮೂ) ೮ ಗಳ (ತಾ) ೯ ರ್ಪ (ತಾ, ಮೂ, ಕ,) (ಬ) ೧೦ ಗಳು (ಮೂ) ೧೧ ದಿನಳ್ವ (ಮೈ, ಕ) ೧೨ ಳಿ (ಮೂ) ಳ (ಕ) ೧೩ ನ್ಯ (ಬ)

ವಾರನಾರಿಯರ ನಿಡುಜೆಡೆಯ ಪಡಿನೆಳಲನೊಳಕೊಂಡು ನಿಜಸಲಿಲನಿರ್ಮಲತೆಯಿಂ ನಾಗಲೋಕದ ನಾಗಿಣಿಯರಂ ತೋರ್ಪಂತೆ ತೋರ್ಕೆವಡೆದು ನೀರ್ಮೊಗೆಯಲೆಂದು ನಿಲುಂಬಿನಿಂದ ಪೌರನಿತಂಬಿನಿಯರ ಕರಘಟಿತಘಟಪಟಳಮಂ ಕಂಡಗಸ್ತ್ಯಜನಕಂಗಳನೇಕಂಗಳೀಂಟಲೇಳ್ತಂ೨ದ೨ವೆಂದಳ್ಕಿ ನಡುಂಗುವಂತೆ ಪವನಪ್ರಪಾತಚಲಿತ ಕ೩ಲ್ಲೋ೩ಲಮಾಲೆಯಿಂ ಕಂಪಿಸಿ ತುದಿಗೊಂ೪ಡ೪ ಬೆಳ್ನೊರೆಯಿಂ, ಕರೆಕತ್ತರಿಸಿದಂಬರ ದಂತಿಂಬುವಡೆದು ಮತ್ತಮಿತ್ತರಂಬಿಡಿದು ಬಿತ್ತರಂಬಡೆದು ೫ಬೆ೫ಳೆದ ಚೂತ ಚಂಪಕ ಕುಟಜ ಕುರವಕ ತಿಲಕ ಬಕವಕುಳ ಲಿಕುಚ ತಮಾಲ ತಾಲ ಹಿಂತಾಲ ಪೂಗ ಪುನ್ನಾಗ ಕದಳಿ ಕಂಕೆಲ್ಲಿ ನಾರಂಗ ೬ನಾರಿಕೇಳ೬ ಪನಸ ಪಾಟಲಿ ಜಂಬು ಜಂಬೀರ ಕದಂಬ ಕಪಿತ್ಥ ಲವಂಗ ದಾಡಿಮ ದ್ರಾಕ್ಷಾ ಮಾಲತಿ ಮಲ್ಲಿಕಾ ಜಾತಿ ಯೂಥಿಕಾಮುಖ ಲಲಿತಲತಾವಿತಾ೭ನವನದಿಂ೭ ಪರಿಶೋಭೆವಡೆದು ಜಪತಪೋನುಷ್ಠಾನಪರಾಯಣ ಪರಮತಪೋಧನನಿವಹಸ್ನಾನಪಾನಾನುಕೂಲೆಯೆನಿಸಿ ತನ್ನ ನೆನೆದರಂ ನಿರ್ಮ೮ಲ೮ರಂ ಮಾಡುತ್ತೆ ಕಂಡರಂ ಕಲುಷರಹಿತರೆನಿಸುತ್ತೆ ಮುಳುಂಗಿದರ ಮೋಹಮಂ ಪಜಿ೯ರ್ವುತ್ತೆ೯ ಸೇವಿಸಿದರ್ಗೆ ಸುಕೃತಮಂ ಸಾರ್ಚುತ್ತೆ ಮನಕ್ಕೆ ಮನೋಹರಮೆನಿಸಿ ನುತಿವೊಡತರ್ಕ್ಯಮಾಗಿ ಪರಮಪವಿತ್ರರೂಪಿಣಿ ಪ೧೦ರಿ೧೦ದೊಪ್ಪು೧೧ತ್ತಮಿರ್ಪ೧೧ಳಂತುಮಲ್ಲದೆಯುಂ—

ಇಳೆಯಂ ಪಾಲಿಪ ಸೈಪಿನೊಂದು ಬೆಳೆಯಂ ಚಂದ್ರಾ೧೨ಶ್ಮ೧೨ಸದ್ರಶ್ಮಿನಿ
ರ್ಮಳೆಯಂ ನಿರ್ಮಿತಶರ್ಮಧರ್ಮ೧೩ಫಳ೧೩ಯಂ ಪದ್ಮೋತ್ಪಲೋತ್ಫುಲ್ಲಸಂ
ಕುಳೆಯಂ ಕೋಕಬಳಾಕಹಂಸಬಳೆಯಂ ಡಿಂಡೀರಪಿಂಡೌಘಮಂ
ಜುಳಿಯಂ ಪೆಂಪಿನಲಂಪನಾಳ್ವ ಪೊಳೆಯಂ ಪೇಳ್ಬಣ್ಣಿಸಲ್ಬರ್ಕುಮೇ ॥೯॥

॥ವ॥ ಎನಿಸಿ ರಂಜಿಸಿದುರ್ವದದಜ ತಟನಿಕಟ೧೪ಪ್ರದೇ೧೪ಶದಲ್ಲಿ—

ಬಳಸಿರೆ ನೀಲನೀರಜವನಂ ಕಜೆಯಂಚಿನವೊಲ್ಪೊಡರ್ಪಿನಿಂ
ಬೆಳೆದೆಳೆಗೆಂಪನಾಂತ ಕಡೆಗರ್ದೆಗಳಂತರವರ್ಣದಂತೆ ಕಂ
ಗೊಳಿಸೆ ಶುಕಾಳಿ ಚಿತ್ರಮೆನೆ ರಂಜಿಸೆ ಪಚ್ಚೆಯ ಶಾಲೆಯಂ ಧರಾ
ಲಲನೆ ವಿಳಾಸದಿಂ ತಳೆದಳೆಂದೆನೆ ಶಾಲೆಯ ಗರ್ದೆ ತೋಱುಗುಂ ॥೧೦॥

೧ ಮಿಂ (ಬ) ೨ ದು (ಮೈ, ಕ) ೩ ಲ್ಲೋ್ಯ (ತಾ) ೪ ಡು (ತಾ, ಮೂ) ೫ ಬ (ಮೈ, ಮೂ, ಬ, ತಾ) ೬ ನಾಳಿಕೇರ (ಮೈ) ೭ ನದಿಂ (ಮೂ) ೮ ಳ (ಮೂ) ೯ ತೆ (ಬ, ಕ) ೧೦ ರೆ (ತಾ) ೧೧ ತ್ತಿರ್ದ (ಬ) ೧೨ ಸ್ಮ (ಬ, ಮೂ, ಕ) ೧೩ ಪ್ರದೆ (ಮೂ) ೧೪ ದೇ (ತಾ, ಕ)

॥ವ॥ ಅಂತುಮಲ್ಲದೆಯುಂ—

[೧]ತೂಗುತೆ ತೊನೆ[೧]ಯುತೆ ಬಳ್ಕುತೆ
ಬಾಗುತೆ ಕಂಪಿಡುತೆ ಕನಕರುಚಿದಾಳುತ್ತಂ
ರಾಗಿಸುತೆ ರಂಜಿಸುತೆ ಸೊಂ
ಪಾಗಿರ್ದುವು ಕಣ್ಗೆ ಗಂಧಶಾ[೨]ಲಿ[೨]ವನಂಗಳ್ ॥೧೧॥

ಗಿಳಿಗಳ ಬಳಗಂ ಗಳಗಳ
ನಿಳಿದೊಳಪೊಕ್ಕೆಳಸಿ ಬಳಸಿ ಖರಚಂಚುಪುಟಂ
ಗಳಿನುಡಿವುದೆಂದಗಿದು ನೀ
ರ್ಗಳನೊಳಪೊಕ್ಕಂತೆ ನೆಲ್ಲಗರ್ದೆಗಳೆ[೩]ಸೆ[೩]ಗುಂ ॥೧೨॥

ಪಾಲ್ದುಂಬಿದ ಸಾಲ್ದೆನೆಗಳ
ನೆಲ್ದುಱುಗಲನೊಲ್ದು ಸೀಳೆ ಗಿಳಿ ಭಯಭರದಿಂ
ಜೋಲ್ದಿಳೆಗಿಳಿವಂತಿರೆ ಬಂ
ಬಲ್ದೆಱೆಯೊಳ್ಪೊಳೆದು ಮಡಿಯ ನೀರೊಳ್ತೋರ್ಕುಂ ॥೧೩॥

ಅರಗಿಳಿ ಸೀಳ್ದೊಡೆ ಮಡಿಯೊಳ್
ಸುರಿದಿರೆ ನೆಲ್ವಾಲ್ತದಂಬುವಂ ಹಂಸಂ ಬೇ
ಱಿಸುತಮರ್ದೀಂಟೆ ಕಾಣುತೆ
ಶಿರಮೊಲೆವಂತೊಲೆವ ಕಳಮೆಗಳ್ಕಣ್ಗೆಸೆಗುಂ ॥೧೪॥

ಎಳಗಿಳಿಗಳ ಬಳಗಂ ಗಳ
ಗಳನಿಳಿತಂದೆಳಸಿ ಬಳಸಿ ಸುಳಿದೊಳ[೪]ಪುಗುತಂ[೪]
ನಳನಳಿಸಿ [೫]ಬೆಳೆದು[೫] ಕಳಿಯದ
ಕಳಮೆಯ ಕಣಿಶಂಗಳಂ ಕರಂ ಖಂಡಿಸುಗುಂ ॥೧೫॥

ಬಡನಡು ಬಳ್ಕೆ ಬಟ್ಟಮೊಲೆ ಮೇಲುದನೆತ್ತೆ ನಿತಂಬಮಂಡಳಂ
ಪೊಡರೆ ಕಪೋಲರಂಗದೊಳೆ ನರ್ತಿಸೆ [೬]ಕನ್ನ[೬]ವುರಂ ಪರಾಗಮಿ
ರ್ಕಡೆಗೆಡೆಯಾಡೆ ನೋಟಮಳಿವುತ್ತಿರೆ ಸೋರ್ಮುಡಿ ಬಂದುನಿಂದು ಪೆ
ಣ್ಗಡಣಮದಲ್ಲಿ ಪಾಱಿಪುದು ಕೈರವದಿಂದಿಡುತಂ ಶುಕಾಳಿಯಂ ॥೧೬॥

---

೧ ತೂಗುತ್ತೊನೆ (ಬ) ತೂಗುತೆತೊನ (ಮೈ)   ೨ ಳಿ (ಬ), ಳಿಯ (ಮೂ)   ೩ ಸ (ತಾ)
೪ ಪೊಗುತಂ (ಬ, ತಾ)   ೫ ಬೆಳದು (ತಾ, ಮೂ) ಬಳೆದು (ಬ)   ೬ ಕರ್ನ (ಮೂ)

॥ವ॥ ಮತ್ತಂ—

ತಾವರೆಗಾವೊಳಾಗಿಸಿದ ಬಿಲ್ಗ ದರ್ಜಿರೆಳೆಯೇಱಿಸುತ್ತೆ ಚೆ
ಲ್ವಾವರಿಸಿರ್ದ ತದ್ದಳದ [1]ಪಟ್ಟೆಯು[1] ಮಧ್ಯದೊಳಿಟ್ಟು ಕಟ್ಟಿ ಭೃಂ
ಗಾವಳಿಯೆಂಬ ಮಿಂಟೆವಿಡಿದಂಟಿಸಿ ಗೆಂಟಿನೊಳಿಟ್ಟು ಪಾಱಿಪರ್
ಕೀವಿದ ಕೀರಮಂಡಳಿಯನಲ್ಲಿಯ ಪಾಮರಿಯರ್ನಿರಂತರಂ ॥೧೭॥

॥ವ॥ ಅವರೊಳೊರ್ವ ಪಾಮರಿ—

ಅರಗಿಳಿಯಂ ಸೋವಲ್ ಸರ
ಸಿರುಹೇಕ್ಷಣೆ ನಿಂದು ಕುಮುದಮಂ ಕೀಳ್ತಿಡೆ ಶಂ
ಬರರಿಪುವಿಸೆ ಭೀಂಕೃತಿಯೊಡ
ವೆರೆದ ತದಸ್ತ್ರಮನೆ ಸಾಳಿರವಮದು ಪೋಲ್ಗುಂ ॥೧೮॥

॥ವ॥ ಮತ್ತಮೊಂದೆಡೆಯೊಳೊರ್ವ ಮತ್ತಕಾ[2]ಶಿ[2]ನಿ ಗಿಳಿಯಂ ಪಾಱಿಪಲ್ಲಿ—

ಎಳೆಯಳ ಕಣ್ಗ ದಿರೋಡುವ
ಗಿಳಿಗಳ ಬೆಂಬತ್ತಿ ಸುತ್ತಿ ಮುತ್ತಿರೆ ತೋರ್ಕುಂ
ಪೊಳೆವಿಡುವಲೆಯಿಡೆಯವಳವ
ನೊಳಗಾಗಿಸಿದಂತೆ ನೋಳ್ಪ ಪಥಿಕರ್ಗಾಗಳ್ ॥೧೯॥

॥ವ॥ ಮತ್ತಮೊಂದೆಡೆಯೊಳೊರ್ವಳ್[3]ವೃತ್ತಕುಚದ ಮತ್ತಗಜಗಮನೆ[3]—

ಏಱುಂಜವ್ವನೆ ಮೇಲುದು
ಜಾಱೆ ಕೆಲಂದೋಱೆ ತೋರಮೊಲೆಗಳ್ಮೊದಲೊಳ್
ಪಾಱಿಸಿದಳ್ ಯುವಧೃತಿಯಂ
ಪಾಱಿಸಿದಳ್ ಬಳ[4]ಕೆ[4] ಗಿಳಿಯ ಕರತಳರವದಿಂ ॥೨೦॥

॥ವ॥ ಇಂತನಂತಜನ ಮನಸ್ಸೂಚೀಸೂತ್ರಮಾದ ಕಳಮಕ್ಷೇತ್ರದನತಿದೂರದ ಭೂರಮೆಯ ಸಸಿಂಧೂರಸೀಮಂತರೇಖೆಯಂತೆ ಚೆಂಬುಡಿತಳ್ತು ಕಂಗೊಳಿಪ ಘಂಟಾಪಥದ ಪರಿಸರದ[5]ಲ್ಲಿ[5]—

---

೧ ಪಟ್ಟೆಯ (ಮೈ) ದಟಪಟ್ಟೆಯ (ಬ) ೨ ಮಿ (ಮೈ) ೩ ವೃತ್ತಕುಚದಮತ್ತಗಜಗಮನೆ (ಬ)
೪ ಕ (ತಾ, ಬ, ಮೂ) ೫ ಲಿ (ಮೈ)

[1]ಎಳಗೌಂಗೊಳ್ಗಂ[1]ಬ[1]ದಿಂ ಬಾಳೆಯ ತೊಲೆಯಿ[2]ನಳಿ[2]ಸ್ವಾರಕಲ್ಹಾರಪುಷ್ಪಂ
ಗಳ ಘಂಟಾಶ್ರೇಣಿಯಿಂ ಕೇತಕಿಯ ದಳದ ಕಿಳ್ಜಂತೆಯಿಂ ಬಾಳವೇರ್ವೂ
ಗಳ ಕೇರಿಂ ಬಾಲಸತ್ಪಲ್ಲವದ ಪೊದಕೆಯಿಂದಿಕ್ಷುದಂಡಂಗಳಿಂ ಕ
ಣ್ಗೊಳಿಕುಂ ನಾನಾಲತಾಂತಪ್ರಸರಸರಯುತಂಗಳ್ ಪ್ರಪಾಮಂಟಪಂಗಳ್ ॥೨೦॥

॥ವ॥ ಅಲ್ಲಿ—

ಪಚ್ಚಪಸಿವರೆಯದಲರ್ಗಳ
ಪಚ್ಚದ ಶತಪತ್ರಸೂತ್ರದಂಬರದ ತೊಳ
ಪ್ಪಚ್ಚಸಸಿಮೊಗದ ಸೊಗಯಿ
ಪ್ಪಚ್ಚರಸಿಯುರಂತೆ ಮೆಱೆವ ತರುಣಿಯರೆಸೆದರ್ ॥೨೨॥

॥ವ॥ ಅಂತೊಪ್ಪುವಶ್ರಾಂತಪಥಶ್ರಾಂತಪಾಂಥಸಂತಾನನಯನಪಾಂಥಪ್ರತಾನ
ಲಾವಣ್ಯರಸಪ್ರಪಾಶಾಲಿಯರಪ್ಪ ಬಾಲೆಯರೊಳೊರ್ವಳ್ ಲೀಲೆವಡೆದು—

ತೊಳಗುವ ಚಂದ್ರಕಾಂತಕಳಶಂಬಿಡಿದಂಬುಜನೇತ್ರೆ ನೀರನಂ
ಜಳಿಪುಟದಲ್ಲಿ ನಿಂದೆಱೆಯೆ ತನ್ಮಧುರಾಧರರಾಗಮಿಶ್ರಿತ
ಜ್ಜಳಮರುಣಾಂಬುವೆಂದುಸಿಕನಿರ್ಪುದನೀಕ್ಷಿಸಿ ನಕ್ಕೊಡಾಕೆಯು
ಜ್ಜ್ವಳದಶನಾಂಶುಮಿಶ್ರಮದು ಶಂಕೆಯನೋಡಿಸೆ ಪಾಂಥನೀಂಟಿದಂ ॥೨೩॥

ಕರತಳಗತಜಳಬಿಂಬಿತ
ತರುಣಿಯ ನೇತ್ರಮನೆ ನೋಡಿ ಪೆಱನೊರ್ವಂ ತ
ತ್ಪರಿಮಳಕೆಂದಿಟ್ಟ ಸಿತಾಂ
ಬುರುಹಮಿದೆಂದೀಂಟಲೊಲ್ಲದೀಕ್ಷಿಸುತಿರ್ದಂ ॥೨೪॥

॥ವ॥ ಪೆಱತೊರಿದು ಪಾನೀಯಶಾಲೆಯಲ್ಲಿ—

ಉಗುರ್ಗಳ ನುಣ್ಗದಿರ್ ತೊಳಪಪಾಂಗಶಶಿಪ್ರಭೆ ಸಾರಸೌರಭಂ
ಸೊಗಯಿಪ ಸುಯ್ಯೆಲರ್ಕರ[3]ಕ[3]ವಾರಿಯೊಳಾಗ[4]ಸೆ[4] ನಿರ್ಮಳತ್ವಮಂ
ನೆಗಳ್ದ ಶಿಶೈತ್ಯಮಂ ಮೃದುಸುಗಂಧಮನಿಂದುನಿಭಾಸ್ಯೆ ಸೂಸೆ ಮಾ
ರ್ಗಗನೆರ್ದೆ ತಣ್ಪನಾನೆ ತನು[5]ರ್ಘೋರಿ[5]ಪಿಸಿ ಕಂಪಿ[6]ಸೆ[6] ನೀರನೀಂಟಿದಂ ॥೨೫॥

೧ ಭ (ಪ್ಯೆ, ಮೂ) ೨ ನಳಿನ (ತಾ, ಬ, ಮೂ) ೩ ದ (ಮೂ) ೪ ಸಿ (ಮೂ)
೫ ಜೊಂ (ಮೂ,ಬ) ೬ ಸಿ (ಮೂ)

॥ವ॥ ಮತ್ತಮಲ್ಲಿ ಪೆಜತೊಂದಱಿವ[1]ಟ್[2]ಗೆಯೊಳೊರ್ವಂ—

ನೀರೆಱೆವಚ್ಚ ಜವ್ವನೆಯ ಮೇಲುದು ಮೆಲ್ಲನೆ ಜಾಱೆ ಗೌರರು
ಕ್ಚಾರುಕುಚಂಗಳೆಂಬ ಕಳಶಂಗಳ ಕಾಂತಿಪಯಃಪ್ರವಾಹಮಂ
ಪೀರುತೆ ಕಣ್ಗಳಿಂ ಮಱೆದು ನೀರ್ಗುಡಿವಂದಮನಂದು ನಿಂದು ನಿ
ಸ್ಸಾರಮುಖಂ ಮನೋಭವನ[2]ಬಾ[2]ಣದ ಬಾ[3]ರಿ[3]ಗೆ ಬಂದನಧ್ವಗಂ ॥೨೬॥

॥ವ॥ ಅಂತುಮಲ್ಲದೆಯುಂ—

ಅರಲಿಂ ಪಣ್ಣಿಂ ಮರಂ ಪೆಣ್ಗಿಳಿಯಿನಳಿಯಿನುದ್ಯಾನಮಂಭೋಜ[4]ದಿಂದೀ[4]
ವರದಿಂ ಕಾಸಾರಮಾಸಾರ[5]ದೆ[5] ಪೊಸಬೆಳೆಯಿಂ ಭೂಮಿ ಭೂಮೀಜದಿಂ ತ
ಣ್ಣೆರಲಿಂ ಮಾರ್ಗಂ ಮರಾಳೋತ್ಕರದೆ ನೆರೆದ ಚಕ್ರೌಘದಿಂ ಸಿಂಧು ಸಿಂಹೋ
ತ್ಕರದಿಂ ಪೇರಾನೆಯಿಂ ಕಾನನಮಿಡಿದೆಸೆಗುಂ ದೇಶದೊಳ್ನಿಂದಜಸ್ರಂ ॥೨೭॥

ನದಿಯಿಂ ನಂದನದಿಂ ಲತಾಪ್ರತತಿಯಿಂ ಪುಷ್ಪಾಳಿಯಿಂ ಪಾಳಿಯಿಂ
ಪುದಿದೆತ್ತಂ ನವಸೌರಭಂಬಡೆದ ಸದ್ಭೃಂಗಾಳಿಯಿಂ ಗಾಳಿಯಿಂ
ಮದವತ್ತ್ವಾಪ್ರಮುಖಪ್ರತರ್ಜನಕರ[6]ಸ್ತ್ರೀ[6]ಶಾಳಿಯಿಂ ಶಾಳಿಯಿಂ
ತದಿಳಾಮಂಡಳಮೊಪ್ಪುಗುಂ ಕ್ರಮುಕದೊಳ್ಪೊಂಬಾಳೆಯಿಂ ಬಾಳೆಯಿಂ ॥೨೮॥

॥ವ॥ ಮತ್ತಮಾ ಜನಪದಂ ಸಮುದ್ರದಂತೆ ಸದಾರವಿಭವೋಪೇತಮುಮನಂತಾತಿಶಯಾನ್ವಿತಮುಂ ನಾಕಲೋಕದಂತೆ ಸುರಾಗನಂದನಾಶ್ರಿತಮಂದಿರೌಘಮುಂ ವಿಮಳಾಪ್ಸರೋಗಣವಿರಾಜಿತಮುಂ ಅಳಕಾನಗರದಂತಗಣ್ಯಪುಣ್ಯಜನಮಿಳಿತಮುಂ ಧನಸನಾಥೈಲಬಿಲೋಪಯುಕ್ತಮುಂ ಅಂತಪುರದಂತೆ ಮಹಾಮಹಿಷೀಮಂಡಿತಮುಂ ಗೋರಾಜಿತಾಂತಸ್ಥಿತಿಘೋಷಾಂಚಿತಮುಂ ಕಾರ್ಗಾಲದಂತೆ ವಿತತಕಾಸಾರಘನವನೋರ್ಜಿತಮುಂ ಮಿಳಿತಶಿಳೀಮುಖಕದಂಬಸುಮನೋಗಂಧವಾಹವಿಜೃಂಭಿತಮುಂ ತಪೋವನದಂತೆವೋಲ್ ಪ್ರಪಾವನಾಡಂಬರಮುಮನೇಕಶಾಖಾಶ್ರಿತದ್ವಿಜಧ್ವನಿಮನೋಜ್ಞಮುಂ ಭೈಷಜ್ಯಸಂಗ್ರಹದಂತೆ ಬಹುಧಾನ್ಯಕಧಾತ್ರೀಸಂಯುಕ್ತಮುಂ ಸಾರರಸೌಷಧಿಸಮೇತಮುಂ ಸರೋವರದಂತೆ ಕಳಮುಹಿತಧ್ವನಿ[7]ಹಂಸೀಯಾನ[7]ಕಾಂತಮುಂ ಕಮಳಾಭಿರಾಮಮುಮೆನಿಸಿ ರಮಣೀ[8]ಯ[8]ಮಾಗಿ[9]ರ್ಪುದ[9]ಂತುಮಲ್ಲದೆ—

---

೧ ಟ್ಟಿ (ಮೈ) ೨ ಭಾ (ಬ) ೩ ಧೆ (ಮೂ) ೪ ಡಿಂ ಡೀ (ಮೂ) ೫ ವೆ (ಮೂ)
೬ ಶ್ರೀ (ಮೂ) ೭ ಹಂಸಿಯಾನ (ಮೂ) ೮ ಯ್ಯ (ಕ) ೯ ರ್ದಂ (ಬ)

ದ್ವಿಜಹತಿ ವನಿತಾಧರದೊಳ್
ಪ್ರಜಾತಿಪಾತಂ ಮದಾಳಿಕುಳದೊಳ್ಬನದೊ
ಳ್ಕುಜನಾಳೀಕಾಕರಸಂ
ಭಜನಂ ತಲೆದೋರ್ಕುಮಲ್ಲದಿಲ್ಲಾ ನಾಡೊಳ್[೧] ॥೨೯॥

ಬಡತನಮುಂ ಮಾಂದ್ಯಮುಮಿ
ಟ್ಟೆಡೆಯುಂ ಚಪಲತೆಯುಮಧಿಕತರ ಕುಟಿಲತೆಯುಂ
ಮಡದಿಯ ನಡು ನಡೆ ಮೊಲೆ ಕ *
ಣ್ಗಡೆ ಕುರುಳೊಳ್ತೋರ್ಕುಮಲ್ಲಿ ತಲೆದೋಱುಗುಮೇ ॥೩೦॥

ಎನಗೆ ಪಗೆ ಧರ್ಮಮದನಿದು
ವಿನಯದೆ ತಳೆದಿರ್ಪುದೆಂದು ಮುಳಿದಂತೆವೊಲಾ
ಜನಪದಮನಧರ್ಮಂ ತೊಱೆ
ದನಿಶಂ ತದ್ರಿಪುಧರಿತ್ರಿಯೊಳ್ನೆಲಸಿರ್ಕುಂ ॥೩೧॥

॥ವ॥ ಇಂತಖರ್ವ ವಿಭವಾವಾಸಮಾದ ಚೋಳದೇಶದ[೨]ಮಧ್ಯದಲ್ಲಿ[೨]—

ಕ್ಷಿತಿವಧು ತಾಳ್ದಲಂಕೃತಿಯಿದೆಂದೆನಿಸಿರ್ಪುದು ಸಾರವಸ್ತುಸಂ
ಗತಿ ಮಣಿಹರ್ಮ್ಯಸಂಹತಿ ಸುರೇಂದ್ರಪುರಾಕೃತಿ ಲೋಕನೇತ್ರನಿ
ರ್ವೃತಿಕರರಾಜಪದ್ಧತಿ ಸದಾಶ್ರಿತಸಂತತಿ ದತ್ತನಿರ್ಜರ
ಸ್ಥಿತಿ ನುತಿವೆತ್ತ ಧರ್ಮವತಿಯೆಂಬ ಪುರಂ ವಿತತಪ್ರಭಾವದಿಂ ॥೩೨॥

॥ವ॥ ಮತ್ತಮಾ ವಿಳಾಸೈಕದೇಶಮಾದಾ ಪುರದ ಬಹಿರ್ದೇಶದಲ್ಲಿ—

ಇರುಳೊಸರ್ವ ಚಂದ್ರಮಣಿಬಂ
ಧುರ ತತ್ಪುರಸಾಲದಂಬು ಬಳಯಿಸೆ [೩]ಬೆ[೩]ಳೆದಾ
ಪುರನಂದನಮಂ ಹರಹರ
ಸುರನಂದನಮೆಂದು ಬಣ್ಣಿಸಲ್ಬಗೆವುಗದೇ ॥೩೩॥

॥ವ॥ ಎಂಬ [೪]ಪಿ[೪]ರಿಯ ಸಿರಿಯನಪ್ಪು[೫]ಗ್ಗೈ[೫]ದು—

೧ ಲ್ಲಿ ತಲೆನೋಱುಗುಮೇ (ಮೂ, ಮೈ)* ಮೈ, ಪ್ರತಿಯಲ್ಲಿ ೩೦ನೆಯ ಪದ್ಯ ಹಾರಿದೆ. ೨ ಮಧ್ಯದೇಶದಲ್ಲಿ (ಉ, ಕ, ಮೈ, ಚ, ತಾ) ೩ ಬ (ಮೈ, ಕ, ಮೂ, ತಾ) ೪ ಹ (ಮೂ) ೫ ಕೈ (ಕ)

ಪರಿಗತರಂಭಾಸುಮನ
ಸ್ಫುರಿತಪ್ರಮದಾಳಿಮಂಜುಘೋಷಾಂಚಿತಮ
ಚ್ಚರಿವಡೆದು ಪೋಲ್ತು ಮೆಱೆದುದು
ಪುರನಂದನಮಮರ್ದು ಮಿಸುಪ ಸುರನಂದನಮಂ ॥೩೪॥

ಕಳರವಮಿಲ್ಲದಿರ್ಪ ಪಿಕ[1]ನಂ[1]ಚೆಗಳಾಡದ ಪೂಗೊಳಂ ಫಳಾ
ವಳಿ ಬಳಸಿಲ್ಲದಿರ್ಪ ಪೊಸಮಾವಿನಿವಾತುಗಳಾಡದಿರ್ಪ ಪೆ
ಣ್ಗಿಳಿಯಳಿರಾಜಿ ರಾಜಿಸದ ತಾವರೆ ಪೂಗುಡಿ ಮೂಡಿ ತೋಱದಿ
ರ್ಪೆಳಲತೆ ಮೆಲ್ಲಿತಲ್ಲದೆಲರಿಲ್ಲೆನೆ ತದ್ವನಮೇಂ ಮನೋಜ್ಞಮೋ ॥೩೫॥

॥ವ॥ ಮತ್ತಮಲ್ಲಿ—

ಅ[2]ರ[2]ನೇಱಿಲ್ನಿಂಬೆ ಕಂಕೆಲ್ಲಿ ಪಲಸು ಬಕುಳಂ ಬಾಳೆ ಪೇರೀಳೆ ತಾಳೀ
ತರು ತೇಗುಂ ಕೌಂಗು ಸಪ್ತಚ್ಛದ ಕದಳಿ ತಮಾಲಂ ಲಸಚ್ಚಂಪಕಂ ಪಾ
ದರಿ ಪುನ್ನಾಗಂ ರಸಾಲಂ ತಿಲಕ ಕುರವಕಂ ಕ[3]ರ್ಣಿ[3]ಕಾ[4]ರಂ[4] ಕದಂಬಂ
ಸಿರಿಸಂ ಶ್ರೀಪರ್ಣಿ ದಾಳಿಂಬಮರಮಮರ್ದು ಸಾಲ್ಗೊಂಡು ಕಣ್ಗೊಪ್ಪುತಿರ್ಕುಂ ॥೩೬॥

ಎಳನನೆ ಶೀವಿತೋರ್ಪ ಮೊನೆಮಲ್ಲಿಗೆ ತಾವರೆ ಶೀವಿತೋರ್ಪ ತಂ
ಗೊಳಮಳಿ ಶೀವಿತೋರ್ಪ ಮಧುದೂತಿಯಲರ್ತವೆ ಶೀವಿತೋರ್ಪ ಪಾ
ಟಳಿ ಗಿಳಿ ಶೀವಿತೋರ್ಪ ಪೊಸಮಾವು ತಳಿರ್ಬಿಡೆ ಶೀವಿತೋರ್ಪ ಮಂ
ಜುಳತರಮಾದಶೋಕೆ ಮೆಱೆದಿರ್ಪುದು ತದ್ವನಮಧ್ಯದೇಶದೊಳ್ ॥೩೭॥

॥ವ॥ ಮತ್ತಮಲ್ಲಿ—

ಬಲವರ್ಪಾಱಿಡಿ ಬಗ್ಗಿಪ
ಕಳಕಂಠಂ ತೊಂಡುಗೆಡೆವ ಗಿಳಿ ಪೂತೆಸೆದಿ
ರ್ಪಲರ್ಜೊಂಪಂ ಕಾತೊಱಗುವ ಫ
ಲಾಳಿ ತಳ್ತಿರೆ ರಸಾಲಭೂರುಹಮೆಸೆಗುಂ ॥೩೮॥

ಅಲರ್ಗಂಪಿಂಗೆಱಗಿರ್ದ ತುಂಬಿಗಳ ಬಂಬಲ್ಕಾರ್ಮುಗಿಲ್ಪಲ್ಲವಾ
ವಲಿ ವಿದ್ಯುತ್ತ್ವಚಯಂ ಪಿಕಪ್ರಕರನಾದಂ ಮೇಘನಾದಂ ನಿರಾ
ಕುಲಮೊಂದಿರ್ಪ ಶುಕಾಳಿ [5]ಶ[5]ಕ್ರಧನುಪೆಂಬಂತಾಗೆ ಮೇಘಾಗಮಂ
ಬೊಲದೇಂ ಸೂಸಿದುದೋ ಮರಂದರಸವೃಷ್ಟಿವ್ರಾತಮಂ ಮಾಮರಂ ॥೩೯॥

---

೧ ವಂ (ಮೂ) ೨ ರೆ (ಮೂ) (ಬ) ೩ ನಿಗ (ಮೈ) ೪ ರ (ಬ) ೫ ಚ (ಕ) (ತಾ)

ಸ್ಮರ[೧]ನ[೧]ಲ್ಲಿ ನೆಲಸಿ ನೆಲೆಗೊಂ
[೨]ಡಿ[೨]ರೆ ಮಾಮರದಲ್ಲಿ ಗಿರಿಶನುರಿಗಣ್ಣುರಿ ಬಂ
ದಿರದಡರ್ದು ಸುತ್ತಿಮುತ್ತಿದ
ಪರಿಯಂ ಪಸರಿಪುದು ಚೆಲ್ವ ಚೆಂದಳಿರ್ದು[೩]ಜು[೩]ಗಲ್ ॥೪೦॥

ಮಲ್ಲಿಗೆ ಮಾಮರದೆಳದಳಿ
ರಲ್ಲಿ ಮುಗುಳ್ತಡರೆ ಮುಗುಳ್ಗಳೆಸೆದವು ಸಂಧ್ಯಾ
ಸಲ್ಲಲಿತ ತಾರಕಾಳಿವೊ
ಲಲ್ಲಿಳಿವಾಱಡಿಗಳಿಳಿವ ತಮ[೪]ಮೆ[೪]ನಿಸಿರ್ಕುಂ ॥೪೧॥

ಅಳಿಗಳ ಗಿಳಿಗಳ ತಳಿರ್ಗಳ
ಫಳಂಗಳಲರ್ಗಳ ವಿಶೇಷವರ್ಣದಿನೆ[೫]ಸೆಗುಂ[೫]
ಥಳಥಳಿಪ [೬]ಪಂಚರತ್ನ[೬]ದ
ನಿಳಯಮಿದೆನೆ ಮದನನೃಪತಿಗದು ಮಧುರಚಿತಂ ॥೪೨॥

ತರುಣಾಮ್ರತರುಯುಗಳಮದ
ಕರಿಗಳ್ಕಾದಲ್ಕೆ ನಿಲೆ ಮನೋಜನ ಬಿನದ
ಕ್ಕಿರದಡರ್ದವನಾರ್ದಾರ್ದ
[೭]ಬ್ಬ[೭]ರಿಪರ ಸರಗೈವ ಪರಭೃತಂಗಳ್ಬೋಲ್ಗುಂ ॥೪೩॥

ತುದಿಗೇಱಿದೊಂದು ಕೀರಂ ಮರಕತಕಲಶಂ [೮]ಸಲ್[೮]ತ್ಫಲಂ ದರ್ಪಣಂ ಪ
[೯]ರ್ಬಿ[೯]ದ ಮಲ್ಲೀವಲ್ಲಿಯೇ [೧೦]ಬಲ್ವೊರಜಿ[೧೦]ನಿಚಿತಭೃಂಗವ್ರಜಂ ನೀಲಶೋಭಾ
ಸ್ಪದಮಾಲ್ಯಂ ಪುಷ್ಪಗುಚ್ಛಂ ಚಮರಮುರುಪಟಂ ಪಲ್ಲವಂ ಕೋಕಿಲವ್ರಾ
ತದ ನಾದಂ ವಾದ್ಯಮಾಗಲ್ಕುಸುಮಶರನ ತೇರಂತೆ ಚೆಲ್ವಾಯ್ತು ಚೂತಂ ॥೪೪॥

ಎಲರಲೆಯೆ ಕೆಲಕೆ ತೊಲಗಿದ
ಚಲಶಾಖೆಯ ತಳಿರ ತುಡುಕಲಾತುರಿಪ ಪಿಕಂ
ಗೆಲೆವಂದುದು ಮುಳಿದು ಕೆಲ
ಕ್ಕೊಲೆದಳ ಚೆಂದುಟಿಯ ಚುಂಬಿಸಲ್ತವಕಿಪನಂ ॥೪೫॥

---

೧ ನಿ (ತಾ) ೨ ಡು (ಬ) ೩ ಜಿ (ತಾ) ೪ ವೆ (ಬ) ೫ ರಮಂ (ತಾ) ೬ ಪಂಚವರ್ಣ (ಮೂ) ೭ ರ್ಬ (ಮೈ) ೮ ತ (ಮೂ) ೯ ರ್ವಿ (ತಾ) ೧೦ ಚಲ್ವರಜಿನಿ (ಮೂ)

॥ವ॥ ಮತ್ತಮಲ್ಲಿ—

ಕೆಂದಳಿರದು ಮಾಂದಳಿರೆನೆ
ಸಂದಣಿಸಿದ ಪಣ್ಗಳಳಿಗಳೆನೆ ತಾನುಂ ಮಾ
ಕಂದಮೆನಿಸಲ್ಕೆಗಳ್ಚಿದ
ಚಂದಮನಾಂತಂತೆ ನೇಱಿಲಲ್ಲೆಸೆದಿರ್ಕುಂ ॥೪೬॥

ಮಿಡಿ ಪಚ್ಚೆಯ ಪರಲೆನೆ ಕೆಂ
ಪಿಡಿದರೆವಣ್ಪದ್ಮರಾಗಮೆನೆ ತನಿವಣ್ಕ
ರ್ಪಿಡಿದಿಂದ್ರ ನೀಲಮೆನೆ ಮಣಿ
ಗಡಣಮನಾಂತಂತೆ ನೇಱಿಲೆಸೆದುದು ಬನದೊಳ್ ॥೪೭॥

ಆಮರ್ದಿನಿದನಿದಱಿನಿದನೆಲೆ
ಯಮರರೆ ಸರಿನೋಳ್ಪುದೆಂದು ನಿಜರಸಮನಿಳಾ
ರಮೆ ಮರಕತಕಳಶದೆ ತುಂ
ಬಿ ಮೇಲೆ ನೀಡಿದಪಳೆಂಬವೊಲ್ತೆಂಗೆಸೆಗುಂ ॥೪೮॥

ಬಿಡದಾಲವಾಲಜಲದೊಳ್
ಕಡುಗೆಂಪಿಡಿದಿಡಿದ ಬೀಜ ರದನದ ಚೆಲ್ವಂ
ನಡೆನೋಳ್ಪಂತಿರೆ ತೋರ್ಕುಂ
ಪಡಿನೆಳಲಿಂಬಾಗೆ[೧]ಬಾಗಿ ರಸದಾಳಿಂಬಂ ॥೪೯॥

ಜಲದ ಜಲದಕ್ಕೆ ಜಲವ
ತ್ಫಲಮೀವುದು ತೆಂಗಿದರ್ಕೆ ಕುಡುದಾಯ್ತೇನಂ
ಸಲಪಿದಿಳೆಗೆಂದೆಱಗಿ ನವ
ಫಲಂಗಳೀವಂತೆ ಬಾಗಿ ಬಾಳೆಗಳೆಸೆಗುಂ ॥೫೦॥

ಘನತರಫಳಮುಂ ಬೇರಿಂ
ಕೊನೆವರೆಗಂ ತಾಳ್ದ ಬಕ್ಕೆವಲಸಿನ ಪಣ್ಗ
ಳ್ಮನಸಿಜನ ಮಲಗು[೨]ಮೂ[೩]ಡೆಯ
ನನುಕರಿ[೨]ಪು[೩]ವು ನೋಳ್ಪ ಮನುಜನಿಕರಕಜಸ್ರಂ ॥೫೧॥

---

೧ ಬೀ (ತಾ) ೨ ಮೋ (ಬ) ೩ ಪ (ತಾ, ಮೂ, ಬ)

ಗಗನೇಚರಿಯರ್ಗಗನದೆ
ನೆಗೆತರು[೧]ತಂ[೧] ಬನದ ಕೌಂಗಿನೆಳೆಯಡಕೆಗಳಂ
ಮಿಗೆ ಪಚ್ಚೆವರಲಿವೆಂದು
ಜ್ಜುಗಿಪರ್ತೊಡಲೆಂದು ಬಂದುನಿಂದದಜ[೨]ಡೆಯೊಳ್ ॥೫೨॥

ಅಲರಂಬಂ ಕುಸುಮಸಮು
ಜ್ವಲಲಿಂಗಮನರ್ಚಿಸಲ್ಕೆ ನಿಲಿಸಿದ ದೀಪಾ
ವಳಿಯ ಘನಸ್ತಂಭಂಗಳ
ವೊಲದೇನೆಸೆದುವೊ [೨]ಸ[೨]ಪುಷ್ಪಚಂಪಕತರುಗಳ್ ॥೫೩॥

ಬನಗಳ್ತಲೆಯುಂ ಕಮಳಾ
ಪ್ತನ ಕದಿರುಂ ಕಾದಿ ಮಡಿವುತಳಿಯುಂ ಚಾಂಪೇ
ಯನಿಕಾಯಮಾದುವಲ್ಲದೊ
ಡೆ[೩]ನ[೩]ಸುಂ ತದ್ವಯಕೆ ಪಗೆತನಂ ಸಮನಿಪ್ಪುದೇ ॥೫೪॥

ಕೆಂಬಟ್ಟೆಯ [೪]ಗೂಡಾ[೪]ರಮ
ನಿಂಬಜ[೩]ದು ಬಸಂತನೆಯ್ದೆ ಪೊಯ್ದನೊ ಮದನಂ-
ಗೆಂಬಂತೆ ಮುಸುಕಿ ತಳಿರ್ಗಳಿ
ನೇಂ ಬಂದುದೊ ಕ[೫]ಣ್ಣ[೫]ನೇಕಶಾಖಮಶೋಕಂ ॥೫೫॥

ತಳಿರ್ಗಳೆ ದಳ್ಳುರಿ ಮುಸುಕಿ
ರ್ದಳಿಗಳೆ ಪೊಸಮಸಿಗಳಾಗೆ ಮದನನ ಬಾಣಾ
ವಳಿಯಂ ಕಾಸಲ್ ಚೈತ್ರೋ
ಜ್ವಳಕಾ[೬]ರು[೬]ಕನಿಟ್ಟ ಕಮ್ಮಟಂಬೊಲದೆಸೆಗುಂ ॥೫೬॥

ಅಲರ್ವಿಲ್ಲಂಗಜವೀರ ನಿನ್ನ ಪಗೆಯಾವಂ ಕಾಯ್ದವಂ ಬೈದು ಮೇ
ಣ್ಕಲುಷಂಗೂಡಿದೆಯೆಂದು ವರ್ಜಿಸಿದನೆನ್ನಂ ಬಂದೆನಿಂದಾಂ ನಿರಾ
ಕುಲಮೆನ್ನೊಂದೆಸಳಂ ತೊಡರ್ಚಿ ಬಿಡು ನಿನ್ನೀ ಬಿಲ್ಲೊಳಾಂ ಗೆಲ್ವೆನೆಂ
ದುಲಿವಂ[೭]ತುದ್ಭ್ರ[೭]ಮರಸ್ವನಂ ಸೊಗಯಿಸಿತ್ತಾ ತಾಣದೊಳ್ಕೈತಕಂ ॥೫೭॥

---

೧ ತಾ (ಮೈ, ಮೂ, ಬ) ೨ ಸು (ತಾ) ೩ ನು (ತಾ); ೪ ಗುಡಾ (ತಾ), ಗೊಢಾ(ಮೂ) ೫ ಣ್ಗೆ (ತಾ) ೬ ದು (ಕ) ೭ ತುದ (ತಾ)

ಹರನೊಳ್ಪುಸಿನುಡಿದಘಮಂ
ಪರಿಹರಿಸಲ್ಕಿಜರಜೋವಿಭೂತಿಯಿನಂಗಂ
ಬೊರೆದಕ್ಷಮಾಲೆಯಂ ಮೇ
ಣ್ತೆರುಪುವವೊಲ್ಭೃಂಗಮಾಲೆಯಿಂದದು ಮೆಱೆಗುಂ ॥೫೮॥

ಕೊಳನೊಂದಿರ್ದುದು ಕಣ್ಗೆ ಕೌತುಕಮನೀವುತ್ತಲ್ಲಿ [1]ಮತ್ತುದ್ಧ[1]ನಿ
ರ್ಮಳಪಾನೀಯದಿನುರ್ವಿಬರ್ಪ ತೆಱೆಯಿಂ ಕನ್ನೈದಿಲಿಂ ನೈದಿಲಿಂ
ದಳಿಯಿಂದಂ ಕಳಹಂಸೆಯಿಂ ಕಮಳದಿಂ ಕೋಕಂಗಳಿಂ ಮೀಂಗಳಿಂ
ಚಳಶೈವಾಳದಿನಿತ್ತರಂಬಿಡಿದ ಭೂಜಾತಾಳಿಯಿಂ ಪಾಳಿಯಿಂ ॥೫೯॥

ಅಲರಂಬನಂಬುಗಳ ಬೆಳೆ
ವೊಲಮಲರ್ವಕ್ಕಿಗಳ ಗೀತಶಾಲೆ ಸರೋಜೋ
ತ್ಪಲಸಖರ ರಾಣಿವಾಸದ
ನೆಲೆ ಮಂದಾನಿಲನ ಕೋಶಮಾ ಕಾಸಾರಂ ॥೬೦॥

ಪರಿಗತರಾಜಹಂಸರುಚಿರಂ ಜಿತಮಾನಸಮುನ್ನತಾಳಿಬೃಂ
ದರುಚಿವಿಕೀರ್ಣಸಾರಸರಜೋಮರುದನ್ವಿತಪುಷ್ಪಕಂ ಪಯೋ
ಧರವರಚಕ್ರಮಂಡಿತಸಮಂಗಳಸೌಮ್ಯಕವಿಪ್ರಯುಕ್ತಮಂ
ಬರದವೊಲೇಂ ಮನಂಗೊಳಿಸಿತೋ ಪೊಸಮೀಂಗಳಿನಂಬುಜಾಕರಂ ॥೬೧॥

॥ವ॥ ಅಂತುಮಲ್ಲದೆಯುಂ—

ಕಳಹಂಸೀಚಾರುಚಂಚೂದಳಿತಗಳಿತಬಾಲಾಬ್ಜಬೀಜಾಳಿಮುಕ್ತಾ
ಕಳಿತಂ ಷಟ್ಪಾದಪಕ್ಷಾಹತಿಪತಿತಪಯೋರುಟ್ಪರಾಗಾರುಣಶ್ರೀ
[2]ಮಿಳ[2]ದುದ್ಯದ್ವರ್ಣಕಂ ಕಂದಳಿತಕಮಳಚಿತ್ರಂ ಪ್ರವಿಷ್ಟಾರ್ಕರೋಚಿ
ರ್ಜ್ವಳಿತಂ ಕಾಸಾರಮೊಂದಾರತಿ ರತಿರಚಿತಂ ಕಂತುಗೆಂಬಂತೆ ತೋ[3]ರ್ಕು[3]ಂ ॥೬೨॥

ಸರದೊಳ್ಪಾರ್ಪೊಳೆವರ್ಕಮಂಡಳಮುಮ[4]ಲ್ಲೊಕ್ಕಿರ್ದ[4]ತೀರಕ್ಷಮಾ
ಜರಜಃಪೂರಿತಪುಷ್ಪಬೃಂದಮುಮದೇಂ ಚೆಲ್ವಾಯ್ತೊ ತತ್ಪಂಕಜಾ
ಕರಚಾರುತ್ವಕೆ ಮೆಚ್ಚಿ ತೂಗೆ ಶಿರಮಂ ಮೇಲಂಬರಶ್ರೀಯ ಸುಂ
ದರಸೀಮಂತದ ರತ್ನಮುಂ ಮುಡಿ[5]ಯ[5] ಪುಷ್ಪವ್ರಾತಮೊಕ್ಕಂದದಿಂ ॥೬೩॥

---

೧ ಮತ್ತಲಿ (ಮೈ, ತಾ, ಮೂ, ಕ) ೨ ವಿಮಳ (ಮೂ) ೩ ಕ್ಕುಂ (ತಾ) ೪ ಲ್ಲಿಕ್ಕಿರ್ದ (ಮೂ) ಲೊರ್ಕಿದ (ಕ) ೫ ಯು (ಕ).

ರತಿಕಾಮರ್ಮಲ್ಲಿಕಾಮಾಲತಿಗಳ ಲತಿಕಾಗೇಹದೊಳ್ತಾಳ್ದ[1]ಮೋ[1]ಘಂ
ರತಿಕೇಳಿಶ್ರಾಂತಿಯಂ ತತ್ಸರದೊಳೆ ಜಳಕಂಬೊಕ್ಕವರ್ಪೋರ್ಗೆ ಸೂಸಿ
ತ್ತು ತದೀಯಾಂಗಾಂಗರಾಗಂ ಪಿರಿದೆನೆ ಕರಮೊಪ್ಪಿತ್ತು ಕಂಜಾತಕಲ್ಪಾ
ರತಟಕ್ಷ್ಮಾಜಾತಪುಷ್ಪವ್ರಜರಜಮಳಿಪಕ್ಷಾನಿಲೋದ್ಧೂತಮೆತ್ತಂ ॥೬೪॥

ನಿಜಪತಿಯಭಿಧಾನಮನೀ
ದ್ವಿಜನಾಂತುದು ಮಾಣದೆಂದು ಹಂಸಂಗಾನೀ
ರಜನಿ ಪದೆದಿತ್ತ ಮುಕ್ತಾ
ಸ್ರಜಮೆನೆ ತತ್ತನುವೊಳಿಡಿದ ಜಳಕಣಮೆಸೆಗುಂ ॥೬೫॥

ನೀರಕ್ಷೀರಪರೀಕ್ಷಾ
ಧೀರತೆಗಾನಲ್ಲದಿಲ್ಲೆನುತೆ ಮುಡಿಗಿಕ್ಕಿ
ತ್ತಾ ರಾಜಹಂಸನೆನೆ ಖಗ
ವಾರದೆ ಗಱಿಗೆದಱೆ [2]ಜಱಿದ ಗಱಿ ನೆಱೆ [2]ಮೆಱೆಗುಂ ॥೬೬॥

ಮೊರೆ[3]ವಳಿ[3]ನಿಯ ರವಮಿಷದಿಂ
ದರವಿಂದಿನಿ ಪಾಡೆ ಮಚ್ಚಿ ಮುತ್ತಿನ ಸರಮಂ
ಸರಸಿ ತೆರೆಗೈಯೊಳೀವಂ
ತಿರೆ ಜಲಕಣಮಾಲೆ ಮೇಲದೇಂ ರಂಜಿಸಿತೋ ॥೬೭॥

ಅಂಬುಪ್ರತಿಬಿಂಬಿತರವಿ
ಬಿಂಬದೊಳೊಡವೆರೆಯಲೆಂದು ಕಮಳಿನಿ ಘನಮೋ
ಹಂಬಡೆದು ಮುೞುಗಿದಂತೆ ನಿ
ಲುಂಬಿದ ತೆರೆ ಪೊಯ್ಯೆ ಮುೞುಗುತುಂ ಮೋಹಿಸುಗುಂ ॥೬೮॥

ಆಱಡಿಯೆಱಗಿದೊಡೆ ಕೆಲಂ
ಜಾಱುತೆ ತರುಣಾಂಬುಜಂ ತರಂಗಾಹತಿಯಿಂ
ತೋಱೆದುದಿನಿಯಂ ಚುಂಬಿಸೆ
ನೀಱೆ ಮೊಗಂದಿಱುಪುವಂದಮಂ ಮುಳಿಸಿಂದಂ ॥೬೯॥

---

೧ ಮೇ (ಮೂ) ೨ ಪಾರಿಕಣಗಣ (ಮೂ) ೩ ಪಱು (ಮೂ)

ಅಲರ್ದ ಮೊಗದಿಂದೆ ನಱುದಂ
ಬುಲಮುಗುಳ್ದಳ್ಳಳಿನಿ ಪಚ್ಚೆವ[1]ಡಿ ಗದೊಳೆಂಬಂ
ತಲರ್ದಲರಿಂದುಗುತಂ ಕೀ
ಳಿಲೆಯೊ[2]ಳ್ಮಧು[2]ಮಿಶ್ರುತದ್ರುಜಂ ರಂಜಿಸುಗುಂ ॥೭೦॥

ದಳಿತಾಬ್ಜದಿಂ[3]ದ[3]ಮೊಂದೊಂ
ದಳಿಗಳ್ನೆಗೆ[4]ನೆ[4]ಗೆದು ಮ[5]ತ್ತಮೆ[5]ಱಗುತ್ತಿರೆ ತ
ನ್ನಳಿನಿ ಹರಿನೀಲದಿಂ ಕೆಂ
ದಳದೊಳ್ ತಿರಿಕಲ್ಲನಾಡುವಂತೆವೊಲೆಸೆಗುಂ ॥೭೧॥

॥ವ॥ ಮತ್ತಮಾ ಕಾಸಾರದಲ್ಲಿ—

ಕುವಳಯಕುಟ್ಮಳಾವಳಿಯ ಪೆರ್ಗಳೆಯಂ ನೆಗೆದೇಱಿ ಲಾಗಿಸು
ತ್ತೆ ವನಜವಲ್ಲರೀನಿಬಿಡಕಂಟಕಸೂಚಿನಿಬದ್ಧಯಂತ್ರದೊ
ಳ್ತವೆ ನುಸುಳ್ದೇಱಿ ಪಾಸೆವಿಳಿಯೊಳ್ಪರಿದಾಡಿ ತರಂಗಸಂಘುಸಂ
ಭವರವವಾದ್ಯಕಾಡಿದುದು ಕೂಡೆ ಝುಷಂ ಪೊಸಡೊಂಬನೆಂಬಿನಂ ॥೭೨॥

ತೊರೆದ ಪಯೋಧರಂ ನವಮರಂದರಸಾಮೃತಪೂರ್ಣಕುಟ್ಮಳಂ
ಪರಿಯದೆ ನಿಂದ ತುಂಬಿ ಸೊಡರ್ವಕ್ಕಿನ ಬೊಟ್ಟು ಫಲಾಶವಾಸವಿ
ಸ್ಫುರಿತಮರಾಳನೊಂದು [6]ಶಿಶು[6]ವಾಗಿರೆ ಬಾಣತಿಯಂತೆ ಕಣ್ಗೆದೇಂ
[7]ಸುರು[7]ಚಿರಮಾಯ್ತೊ ನೀರಜನಿ ನೈಜರಜೋರಜನೀವಿರಾಜಿತಂ ॥೭೩॥

ಜಗಮಂ ಪುಟ್ಟಿಪನೆನ್ನ ಸೂನು ಬುಧರಂತಲ್ತೆನ್ನದಿರ್ಕೆನ್ನವೋ
ಲ್ಜಗದೊಳ್ಪೂರ್ಣರಜೋಗುಣಾನ್ವಿತನದಂತಿರ್ಕಾತನಂ ಶೂಲಿ ಸು
ಮ್ಮಗೆ ಕೊಂದಂ ಗಡ ನೋಡಿಮೆಂದಜಕಪಾಲಂಬೊತ್ತು ಪೇಳ್ವಂತೆ ಹಂ
ಸಗತಾಂಭೋಜಮದೊಪ್ಪಿದತ್ತು ಮಧುಬಾಷ್ಪಾಳಿಸ್ವನಾರ್ತಸ್ವರಂ ॥೭೪॥

ತೀರಮಹೀರುಹನಿಕರಂ
ನೀರೊಳ್ಪ್ರತಿಬಿಂಬಿಸಿದೊಡೆ ಪೋಲ್ತುದು ತತ್ಕಾ
ಸಾರಂ ಬೃಂದಾರಕತರು
ವಾರಮನೊಳಕೊಂಡು ಪೆಂಪುವಡೆದಂಬುಧಿಯಂ ॥೭೫॥

---

೧ ಡು (ಮೂ) ೨ ಳಡು (ಕ) ೩ ದೆ (ಮೈ) ೪ ಗ (ಮೂ) ೫ ತ್ತೆಮಿ (ಮೂ) ತ್ತಮೊ (ಕ) ೬ ಶಿಕು (ಮೈ) ೭ ಸರು (ಮೂ); ಸುರ (ತಾ)

ನಳಿನೀನಾಳಮದೆಂಬ ಕೆಂ[1]ಬ[1]ಮನೆ[2]ಕಟ್ಟು[2]ತ್ತಲ್ಲಿ ಚಕ್ರಂಗಳಿಂ
ಬ ಲಸತ್ಸಂಗ್ರಹಣಂಗಳಂ ಪಿಡಿದು ಮೇಲೆತ್ತುತ್ತೆ ತತ್ಸೀಕರಾ
ವಳಿಘರ್ಮಾಂಬುವೆನಾಂತು ಪಂಕಜರಜೋಮೃದ್ಧೂಳಿಯುಕ್ತಂ ಸರ
ಸ್ಥಳದೊಳ್ಮಾರನ ಮಲ್ಲನಂತೆ ಸುಳಿದಂ ಮೈದೋಱಿ ಮಂದಾನಿಲಂ ॥೭೬॥

॥ವ॥ ಮತ್ತಮಾ ಪುರದ ಬಹಿರ್ವನಂ ದರದಳಿತಕುಸುಮವಿಸರವಿಳಸಿತ[3]ಪರಾಗ[3]ಪಟಲಸುರಭಿಲಲಿತಲತಾಲಿಂಗಿತತರುಣರಸಾಲತರುನಿಕರದೆಳೆಗೊಂಬಿನೊಳ್ಕುಳ್ಳಿರ್ದಂಕುರಮನವಲೋಕಿಸಿ ಭೋಂಕನೆ ತುಡುಂಕಿ ನಿಜಚಂಚುವಿಂದುಡಿದು ಕ[4]ರ್ದು[4]ಲಂಕೆ ಜಗುಳ್ವ ರಸಧಾರೆಯಂ [5]ಮಗುಳ್ದು[5]ಸೇವಿಸಿ ಚಂಚತ್ಪಂಚಶರನ ಬಂಚದರಂತೆ ಮುಂಚಿ ಪಂಚಮದಿಂಚರಮಂ ಪಂಚಮೆನೆ ನೆಗಳ್ದು ಸಂಗಡಿಸಿದ ಕೆಂಗಣ್ವಕ್ಕಿಗಳಿಂ, ಮತ್ತಮಲ್ಲಿ ಸಲ್ಲೀಲೆಯಿಂ ನಲ್ಲಳೊಡನೆ ಸುಸಿಲೆಸಗಿ ಬಳಲ್ದು ಬಾಯಾಱಿ [6]ಕ[6]ಟ್ಟಿದಿರೊಳ್ತೊಟ್ಟನೆಲರಲೆಯೆ ಸಾರೆವಂದು ಸೆಳೆಗೊಂಬಿನೊಳಿಂಬುವಡೆದ [7]ತನಿ[7]ವಣ್ಣಂಮನವಾರೆನೋಡಿ ಸಂತಸಂ ಮಿಕ್ಕು ಪೊಕ್ಕು ಪಕ್ಕದಿಂದಪ್ಪಿ ಮಿಂಚುವ [8]ಚಂ[8]ಚುವಿಂ ಸೆಳೆದು ಸೀಳ್ದು ಗಳಿಲನೆ[9]ಗಳಿಯಿಪ[9]ರ[10]ಸಾಸಾರಮಂ[10] ಮನೋರಮಣನಿನಿ[11]ಯುಳ[11]ಬಿಂಬಾಧರರಸಮಂ ಸವಿವಂತೆ ಸವಿದು ಚೀತ್ಕಾರಂ ಪೊಣ್ಮೆ ಕುಣ್ಮುಚ್ಚಿ ತನ್ನ[12]ನಚ್ಚಿನ[12]ನಲ್ಲಳಂ ಗಱಿಸನ್ನೆಯಿಂ ಕೆಲಕ್ಕೆ ಕ[13]ರೆ[13]ದಳ್ಕಱಿಂ [14]ಮು[14]ಕ್ಕುಳಿಸಿ [15]ಚಂಚು[15]ಗೂಡಿ ಗಾಡಿಯಿಂದೆಱೆದವಳ್ಗೂಡಿ ಕುಸುಮಪರಾಗ[16]ಮೆಂಬಂಗರಾಗ[16]ಮಂ ತಳೆದು ಮುಂದೆ ಮಂದಾನಿಲನಿನೊಗೆತಂದ ಚೆಂದಳಿರ್ದುಱುಗಲ್ಸೀಗುರಿಯಾಗೆ ಕೆಲದೊಳಲರ್ವಕ್ಕಿಗಳಿನೊಲೆವ ರಸಾಲಲತಾಸರಲಶಾಖಾಗ್ರದೊಳ್ತೂಗುವ ಪೂ[17]ಗು[17]ಡಿ ಧವಳ ಚಾಮರಮೆನಿಸೆ ಪಾಡುವ [18]ಪರಮೆ[18]ದುಱುಂಗಲ ಸರ ಸರವಸಂಗೀತಮಿಂಬುವಡೆಯೆ ಕಳಕಂಠನ ಕಂಠನಿನದಂ ವಂದಿಧ್ವನಿಯಂತೆಸೆಯೆ ನಟ್ಟಗೊಂಬಿನ ತು[19]ಟ್ಟ[19]ತುದಿಯೊಳಲರ್ವುಡಿ ನೆ[20]ಗೆ[20]ದು ಮುಂದೈಸಿ ಮಂಡಳಿ[21]ಸಿ[21]ಧವಳಾತಪತ್ರಲಕ್ಷ್ಮಿಯಂ ತಳೆಯೆ ರಾಜಶು[22]ಕ[22]ನಾಮಕ್ಕಿದುಚಿತಮೆಂಬಂತೆ ಮೆಱೆದು ಸೋಜಿಗಮೆನೆ ರಾಜಿಸುವ ರಾಜಶುಕಸಮಾಜದಿಂ, ಮತ್ತಮಲ್ಲಿ ಸಲ್ಲೀಲೆಯಿಂ ಮೆಲ್ಲನಲೆವ ಮೆಲ್ಲೆಲರಿಂದುಳ್ಳಲರ್ದ ಮಲ್ಲಿಗೆಯ ಮಕರಂದದೊಡವೆರೆದ ಪರಾಗಮೆಂಬ ಪೊಸಕೆಸರ್ಪತ್ತೆ ಕರ್ಚಿಕಳೆಯಲೆಂದು ಸಂದಣಿಸಿ [23]ಗೊಂದಣಿ[23]

೧ ಭ (ಮೂ, ಮೈ) ೨ ಕುರು (ಮೈ) ೩ ಪದ್ಮಪರಾಗ (ಬ) ೪ ದ್ರು (ಮೈ) ೫ ಮಗುಳ್ದು ಮಗುಳು (ಮೂ) ೬ ಇ (ಮೈ) ೭ ಳಿ (ಕ) ೮ ಚುಂ (ಮೂ) ಚಂಚುವಿನೆ (ಬ) ೯ ಗಳಿಪ (ಮೈ, ಬ) ೧೦ ಸಧಾರೆಯಂ (ತಾ) ೧೧ ಯಮಳ (ಕ) ೧೨ ನಚ್ಚಿನನಚ್ಚಿ (ಕ) ೧೩ ಠ (ಮೈ, ತಾ, ಕ, ಬ) ೧೪ ಮ (ತಾ) ೧೫ ಸಂ (ಮೂ) ೧೬ ಮೆಂಬರಾಗ (ಮೂ) ೧೭ ಗೂ (ತಾ) ೧೮ ಪರಮೇವರಿ (ಬ) ೧೯ ಟ್ಟು (ಕ) ೨೦ ನೆ (ಮೈ) ಗ (ಬ) ೨೧ ಸಿದ (ತಾ) ೨೨ ಕನ (ಮೂ) ೨೩ ಗೊಂದಣ (ಮೂ)

ಗೊಂಡ್ಯೈದುತ[೧]ರ[೧]ವಿಂದಾಕರದರವಿಂದಬೃಂದಮ[೨]ರಂದ[೨]ರಸದೊಳ್ಮುಳುಂಗಿ ಪಿಂಗದೆ ಪಸಿವಿನೆಸಕದಿಂದೆಸಳಕುಸುಂಕಱಾಳ್ಮುಸುಂಬಿಟ್ಟು ಮಿಸುಪ ಪೊಸಬಂಡನುಂಡು ಪಿಂಡುಗೊಂಡು ಮಂಡಳಿಸಿ ಕೆಲದ ಪುಂಡರೀಕದೊಳ್ಮಂಡಿಸಿದ ಮರಾಳಮಂಡಳಿಕಕಾಂಡಜಳವ [೩]ಮಂಡಳಿಗೆ[೩] ಶಂಕೆಯಂ ಭೋಂಕನಾಗಿಸಿ ಮೇಗಣ್ಗೆ ಪಾಱಿಸಿ ಪರಕಲಿಸಿ ಪಾ[೪]ಡು[೪]ವ ಪರಮೆ[೫]ವಱಿ[೫]ಗಳಿಂ, ಮತ್ತಂ [೬]ಜಾತಿಯೂಧಿಕಾ[೬] ಮಲ್ಲಿಕಾಮಾ[೭]ಲತೀ[೭]ಲತಾಮಂಟಪಂಗಳೊಳ್ನೆರೆದು ಸೇದೆವ[೮]ಟ್ಟ[೮] [೯]ಕಾದಲರ್[೯] [೧೦]ಸು[೧೦]ಯ್ಯೆಲರ ನರುಗಂಪಿನೊಡವೆರೆದು ಸೊಂಪುಗಱೆವ ಚಂಪಕಮುಕುಳದೀಪಂಗಳನಲೆದು ಫಲಭಾರಮಂ ಪೊಱಲಾಱದೆ ನಿಂದು ಬಳ್ಕಿ [೧೧]ಬಸವಳಿವ[೧೧] ಬಾಲರಸಾಲಂಗಳ ಮಕರಂದಘರ್ಮಜಲಕಣಮನು[೧೨]ದಿ[೧೨]ರ್ಚಿ [೧೩]ಮೈಸಾರ್ಚಿ ಸರಳ[೧೩] ಶಾಖೆಗಳಂ ಪೊತ್ತೆತ್ತಿ ಕುಸುಮವಿಸರಸುರಭಿ[೧೪]ರಜ[೧೪]ಮಂ ಕೊರಲ್ಮುಸಿವಿನಂ ಪೊತ್ತು ಪಿಂ[೧೫]ದು[೧೫]ಗೊಂಡು ಬರ್ಪಿಂದಿಂದಿರಬೃಂದದ ಝೇಂಕಾರರವವ್ಯಾಜದಿಂ ಪೊಱಲಾಱದೆ [೧೬]ನರಳ್ದು[೧೬] ನಿಂದುನಿಂದು ಬರ್ಪ ಮಂದಾನಿಲಂಗೆ ಕರುಣಿಸಿ ಕೈಗೊಟ್ಟುಪುವೆಂಬಂತೆ ಕೆಂದಳಿರಂದಂಬೆತ್ತಡ್ಡಗೊಂಬಿಂದೆಡ್ಡಮಾದನೇ[೧೭]ಕಾಶೋಕಾನೋಕಹಂಗಳಿಂ[೧೭], ಮತ್ತಂ ವಸಂತರಾಜಂ ವನಲಕ್ಷ್ಮಿಯೊಡನೆ ಸುಸಿಲೆಸಗಲೊಡನವಳ ನಿಡುಮುಡಿಯಿಂ ಕುಚಕುಂಭದಿಂ ತನುಲತೆಯಿಂ ಸುರಿದು ಪಸರಿಸಿದ ಕುಸುಮವಿಸರಕುಂಕುಮ[೧೮]ರೇಣು[೧೮] ಘರ್ಮಜಳಕಣಂಗಳೆಂಬಂತೆ[೧೯]ತರುತರುಗಳ[೧೯]ಸೆಳೆಗೊಂಬುಗಳೊಂದೊಂದನೊರಸೆ ಸು[೨೦]ತ್ತಂ[೨೦]ಸೂಸಿ ಬಿಡದೆಲ್ಲೆಡೆಯೊಳ್ಚೆಲ್ವಾದ ಲಲಿತಲತಾಂತಪರಾಗಮಕರಂದಸಂದೋಹ[೨೧]ದಿಂ[೨೧] ದಳಿತಧವಳಕುಸುಮವಿಸರದಿಂ ಕಳಕಂಠನ ಕಳಕಳಧ್ವನಿಯಿಂ ನಾಕಲೋಕದ ನಂದನಮಂ ನಗುವಂತೆ ನಳಿನಬಾಣನ ಕೇಳೀನಿಳಯಮೆಂಬಂತೆ ಬನಸಿರಿಯ ಬಿನದದೆಡೆಯಂತೆ ಚೈತ್ರರಾಜನ ಚಿತ್ರಶಾಲೆಯಂತಲರಂಬನ ಬಲದ ಗರುಡಿಯೆಂಬಂತೆ ಲತಾನರ್ತಕಿಯ ನರ್ತನಶಾಲೆಯಂತೆ ಕಲಕಂಠನ ಸಂಗೀತಭವನದಂತೆ ರಾಜಶುಕಂಗಳ ಭೋಜನ[೨೨]ಶಾಲೆ[೨೨]ಯಂತೆ ಮಧುಪಪಾಂಥಪ್ರಪಾಶಾಲೆಯಂತೆ ರಥಾಂಗಕಾಮು[೨೩]ಕರ[೨೩] ರತಿಶಾಲೆಯಂತೆ ಮನೋಹರಮಾಗಿರ್ಪುದಂತುಮಲ್ಲದೆಯುಂ—

---

೧ ರು (ಮೈ) ೨ ಕರಂದ (ಮೈ, ಮೂ) ೩ ಮಂಡಳಿಗ (ಮೈ) ೪ ಳು (ಮೈ, ಬ, ಮೂ) ೫ ದುರುಗಲಿಂ (ಬ) ಪರಿದುರುಗಲಿಂ (ತಾ) ೬ ಜಾತಿಯೂಲಿಕಾ (ಕ) ಜಾದಿಯೂಧಿಕಾ (ಮೈ) ೭ ತಿಕಾ (ಬ) ೮ ಟ್ಟು (ಬ) ೯ ಕಾದಲ್ (ಮೈ) ೧೦ ಸೂ (ಬ) ೧೧ ಬಸವಳಿದ (ಮೂ) ಬಸವ (ಮೈ) ೧೨ ರ (ಕ) ೧೩ ಸರಳ (ತಾ) ೧೪ ರಸ (ಮೂ); ಗಜ (ಕ) ೧೫ ಡು (ತಾ, ಮೂ) ೧೬ ನರಲ್ದು (ಮೂ) ೧೭ ಕಕೋಕಂಗಳಿಂ (ಮೂ) ೧೮ ರಜರೇಣು (ಮೂ) ೧೯ ತರುಣತರುಗಳ (ತಾ, ಬ) ೨೦ ತ್ತ (ತಾ) ೨೧ ದಿಂದೆ (ತಾ) ೨೨ ಸಾಲೆ (ಬ) ಶಾಲಿ (ತಾ) ೨೩ ಖ (ಮೈ, ಬ, ಮೂ)

ಸುರತರುಯುತನಂದನಮಂ
ಸುರತರುಣಿಯರೆಳಸದಿ[೧]ನಿ[೧]ಯರೊಡ[೨]ನೆಳ್ತರುತಂ[೨]
ಸುರತರುಚಿದಾಳ್ದು ಘನಭಾ
ಸುರತರುತಳದಲ್ಲಿ ನೆರೆವರಾ ಉಪವನದೊಳ್ ॥೭೭॥

॥ವ॥ ಇಂತೊಪ್ಪುವಾ ಪುರೋಪವನಮಧ್ಯದಲ್ಲಿ—

ನಳಿನಪರಾಗರಂಗಮನೊಡರ್ಚಿ ಮರಂದರಸಾಭಿಷಿಕ್ತಭೂ
ತಳದೊಳೆ ಸಾರ್ಚಿ ಚಂಪಕದ ಕುಟ್ಮಳದೀಪಮನೊಕ್ಕ ಪುಷ್ಪಸಂ
ಕುಳಮನೆ ಪಾಸಿ ತೋರಣಮನಾಗಿ[೩]ಸಿ[೩] ಚೆಂದಳಿರಿಂ[೪]ದೆಲರ್ಪಿಕೀ[೪]
ಕಳರುತಿ ವಾದ್ಯಮಾಗೆ ಭಜಿಪಂ ಸಲೆ ಕಂತು ಲತಾಂತಲಿಂಗಮಂ ॥೭೮॥

॥ವ॥ ಮತ್ತಮಾ ವನಂ ವೆನಧಿಯಂತೆ ವಲ್ಲಕಿಯಂತೆ ವರಪ್ರವಾಳಮಂಡಿತಮುಂ ಸುತ್ರಾಮನಂತೆ ಸುಜನನಂತೆ ಸುಮನೋಮನೋಜ್ಞಮುಂ ಕಮಳದಂತೆ ಕಳಹಂಸನಂತೆ ಕಮಳಾಕರಾಭಿರಾಮುಂ ನೀರಜದಂತೆ ನಿಷಂಗದಂತೆ ನಿಬಿಡ ಶಿಳೀಮುಖಮುಂ ರಾಜಚಿತ್ತದಂತೆ ರಮಣೀಹೃದಯದಂತೆ ರಸಾಲಸಮುದಂಚಿತಮುಂ ವಿರಹಿಯಂತೆ ವಿಧಿವಾಹನದಂತೆ ವಿಕಳಧ್ವನಿವಿಳಸಿತಮುಂ ಬಗೆಯಂತೆ ಬಾನಂತೆ ಬಹುಲತಾರಾರಾಜಿತಮುಂ ಸ[೫]ಗ್ಗ[೫]ದಂತೆ ಸಮರದಂತೆ [೬]ಸಂರಂಭಾನ್ವಿತ[೬]ಮುಮೆನಿಸಿದುದಂತುಮಲ್ಲದೆಯುಂ—

ಅಲಕಾಳಿರುಚಿರಮಾ ವನ
ವಲಯಂ ತಿಲಕೋಪಶೋಭಿಸರದಚ್ಛವಿಮಂ
ಜುಲಮಿಂದುಕಾಂತರುಚಿರೋ
ಜ್ವಲಾಧರಸ್ಥಾನಮಾಸ್ಯಮೆನೆ ನೆಲಸಿರಿಯಾ ॥೭೯॥

ಮೊರೆದೆತ್ತಂ ದಾನಧಾರಾಸುರಭಿಗೆಜಿಗುವಿಂದಿಂದಿರಶ್ರೇಣಿಯಂ ಪೊ
ಯ್ದು [೭]ರ[೭]ಟತ್ಕರ್ಣಾಗ್ರದಿಂದಂ [೮]ತ್ತ[೮]ಗುಳೆ ಮಗುಳೆ ತತ್ಪುಷ್ಕರಂಗರ್[೯]ದ್ದು[೯] ರಕ್ತಾಂ
ಬುರುಹಂಗೆತ್ತಾದುರ್ದ ಸಾರ್ತಂದೆಜಿಗೆ ಬಿದಿರ್ದು ದಂತಾಗ್ರ ಕುಂತಾಗ್ರಕಾಂತಿ
ಸ್ಫುರಣಂ ಕೈಗಣ್ಮೆ ತನ್ನಂದನದೆಡೆಯೊಳೆ [೧೦]ರಾಜಿ[೧೦]ಪುರ್ವಾಗಳ್ಗಜಂಗಳ್ ॥೮೦॥

---

೧ ನೆ (ಮೂ) ೨ ನೈತರುತಾ (ಮೂ) ೩ ಸೆ (ಮೈ, ಮೂ) ೪ ದೆಲರ್ಪಿ (ಮೂ, ಬ); ದಲೊರ್ಪಿರೇ (ಮೈ, ತಾ) ೫ ಗ್ಗ (ಬ) ೬ ರಂಭಾಸಂರಂಭಾನ್ವಿತ (ಬ, ತಾ); ಪರಸಂಭಾನ್ವಿತ (ಮೂ) ೭ ರು (ಮೂ) ೮ ತು (ಕ) ೯ ದು (ಕ) ೧೦ ರಾಜಿಸಿ (ತಾ)

॥ವ॥ ಮತ್ತಮಲ್ಲಿ—

ಕರಿವರಗಂಡಮಂಡಳಗಳನ್ಮದಕರ್ದಮಮು[೧]ಗ್ನ[೧]ಮತ್ತ ಷ
ಟ್ಚರಣಗಣಂ ವಿರಾಜಿಪುದು ತದ್ರದನದ್ಯುತಿಚಂದನಚ್ಛಟಾ
ಪರಿ[೨]ವಿ[೨]ಹಿತಂ ಸಿತಪ್ರಕಟಕುಂಭತಟಸ್ಫುಟಮೌಕ್ತಿಕವ್ರಜಂ
ಸುರಿವ ಮದಾಂಬುಧಾರೆಯೊಡಗೂಡಿ ಕರಂ ಪೊರಪೊಣ್ಮತೆಂಬಿನಂ ॥೮೧॥

ಭಯರಹಿತರ್ಜಯಸಹಿತರ್
ನಯವಿಹಿತರ್ಹಯಮನೇಱಿ ಬಹುವಿಧಗತಿ[೩]ಯಿಂ[೩]
ಠಯದಿಂ ಪರಿಯಿಪ [೪]ವೈಹಾ[೪]
ಳಿಯ ಬಯಲಿಂ ತಳ್ತು ತದ್ವನಂ ರಂಜಿಸುಗುಂ ॥೮೨॥

॥ವ॥ ಇಂತನಂತಜನವಿಲೋಚನರಮಣೀಯಮಾದ ವನವಳಯದಿಂ[೫]ದ[೫]ಮೊಳಗೆ

ಘನಸತ್ವೋವ್ಯನನಂತರತ್ನರುಚಿಲಾವಣ್ಯಪ್ರಭಾವಸ್ಥಿತಂ
ವಿನತಾನಂದನವಾಹಸಂ[೬]ಶ್ರೀ[೬]ಯನುದಾತ್ತಾಭಂಗವಿಕ್ರಾಂತವಾ
ಹಿನಿ ತಾನೀ ನರನಾಥನೆನ್ನವೊಲೆನುತ್ತಂಭೋಧಿ ತಾಂ ಬಂದು ಸಂ
ದನೆಯಿತ್ತಲ್ಲಿಯೆ ನಿಂದವೋಲ್ಪರಿ[೭]ಖೆ[೭] ಚೆಲ್ವಂ ಬೀಱಿ ಕಣ್ಗೊಪ್ಪುಗುಂ ॥೮೩॥

ಮಣಿದೆನೆಗಳ ಮಾಪೊರ್ಳಳ[೮]ಪಂ[೮]
[೯]ಫಣಿಪಸ್ಫಟಿ[೯]ಗೆತ್ತು ನೋಳ್ಪ ಖೇಚರಿಯರ ಕ
ಣ್ಬೊಣರ್ಗಳ್ಮಾಪೊರ್ಳಿವಂದಮ
ನಣಕಿಪುವಗಳಮಳಜಳದೊಳಂಬುಚರಂಗಳ್ ॥೮೪॥

ಆಂ ತಳೆದಿಳೆಯಂ ಭುಜದೊಳ್
ತಾಂ ತಳೆದಂ ನೃಪತಿಯೆಂದು ವೇಲಾಚಲಮೋ
ಠಂತ್ಯೈ[೧೦]ದಿ[೧೦] ನೋಡಿ[೧೧]ಕು[೧೧] ತುಕ
ಸ್ವಾಂತಂ ನಿಂದಂತೆ ಸಾಲಮೋಂ ಸೊಗಯಿಸಿತೋ ॥೮೫॥

ಖರಕರತುರಗೋತ್ಕರಖರ
ತರಖುರಘಟ್ಟನದಿನಾದ ಕುರುಪೆನೆ ಮೆಱೆಗುಂ
ಸುರುಚಿರಕೋಟಾಚಕ್ರದ
ತರವಿಡಿದಿಡಿದೆಸೆವ ಬಟ್ಟದೆನೆಯೆಡೆಯೆಡೆ[೧೨]ಯೊ[೧೨]ಳ್ ॥೮೬॥

---

೧ ಯಂ (ಕ) ೨ ಪಿ (ಬ, ಮೂ) ೩ ಯಾಂ (ಬ) ೪ ಮೈಯ್ಯೆ (ಮೂ) ೫ ದಂ (ಕ) ೬ ಶ (ಮೂ) ೭ ಗಿ (ಕ) ೮ ಪಂ (ಮೂ) ೯ ಫಣಿಪಂ ಸ್ಫುಟಂ (ಮೂ) ಫಣಿಸ್ಫಟಿ ೧೦ ದು (ಮೂ) ೧೧ ಕ್ಕೃ (ಮೂ) ೧೨ ಗ (ಕ, ತಾ)

ಘನಕೇತನಪಟದಗ್ರದೊ
ಳಿನಬಿಂಬಂ ಬಂದುನಿಂದು ಮಧ್ಯಂದಿನದೊ
ಳ್ಕನಕಮಯದರ್ಪಣಂ ತಾ
ನೆನೆ ಪೊಳೆವುದದೆಂದೊಡದನದೇಂ ವಣ್ಣಿಪುದೋ ॥೮೭॥

ಪೊಂದೆನೆಗಳ್ಪರಕರಕರ
ದಿಂದಂ ಕರ[೧]ಗು[೧]ಗುಮಿವೆಂದು ಪುರರಾಜಂ ನೀ
ರೊಂದಿದ ಸಿತಪಟತತಿಯಂ
ಕುಂದದೆ ಮುಸುಕಿದವೊಲಬ್ದ ಚಯಮಲ್ಲಿರ್ಕುಂ ॥೮೮॥

॥ವ॥ ಮತ್ತಂ—

ಆ ಪುರಧರ್ಮಹರ್ಮ್ಯರುಚಿ ಪೊಂಬಿಸಿಲಂತಿರೆ ರಾತ್ರಿಯೊಳ್ನಪ
ರ್ವಾಪಗೆಯೊಳ್ವಿರಾಜಿಪ ರಥಾಂಗಯುಗಂ ನೆರೆದಿರ್ಪುದಂಬುಜ
ಶ್ರೀಪರಿದೆತ್ತಮೋಸರಿಸಳಲ್ಲಿ ವಿಳಾಸದೆ ನಿಂದು ನಿರ್ಜರ
[೨]ಸ್ತ್ರೀ[೨]ಪದೆ[೩]ದೊ[೩]ತ್ತಿ ಮೇಲುದನಭೀಕ್ಷಿಪಳುತ್ಕುಚದೊಳ್ನಖಾಂಕಮಂ ॥೮೯॥

॥ವ॥ ಅಂತುಮಲ್ಲದೆಯುಂ—

ತ[೪]ಳ[೪]ರ್ವೆಳವೆಣ್ಗಳ ನಯನಾಂ
ಚಳರುಚಿಚಂದ್ರಿಕೆಯನಾಂತು ಪೊಂದೊಡಿಗೆಗಳು
ಜ್ವಳಕಿರಣಮೆಂಬ ಬಿಸಿಲಂ
ತಳೆದಲ್ಲಿಯ ಸೋಮಸೂರ್ಯವೀ[೫]ಧಿ[೫]ಗಳೆಸೆಗುಂ ॥೯೦॥

ಧೀರಜನರಿಂ ಶ್ರುತಿವಿಚಾರಪರರಿಂ ಲಸದುದಾರಗುಣರಿಂ ದುರಿತದೂರ ಶಿವಭಕ್ತಾ
ಚಾರಯುತರಿಂ ನಿಗಮಸಾರಮತರಿಂ ಸುಭಗದಾರರತರಿಂ ಹರಿಕುಮಾರವರಮಾರಾ
ಕಾರಮಹರಿಂ ವಿವಿಧವೀರಭಟರಿಂ ವಿಜಿತಶೂರಪರರಿಂ ತುರಗವಾರಗಜಶಿಕ್ಷಾ
ಭಾರವಹರಿಂ ಮಿಳಿದಪಾರಧನರಿಂ ಮೆಱೆಗುಮಾ ರುಚಿರಪಟ್ಟಣಮಿಳಾರಮಣಯುಕ್ತಂ ॥೯೧॥

ಆ ಧರ್ಮವತಿಯ ಪುರದ ಮ
ಹಾಧರ್ಮಯುತರ್ಗೆ ಸುರರ್ಗೆ ಮೈವೆತ್ತುದು ತಾಂ
ಸಾಧರ್ಮ್ಯಮೆಂದು ಬಿದಿ ಮಿಗೆ
ವೈಧ[೬]ರ್ಮ್ಯ[೬]ಮನನಿಮಿಷತೆಯನವರೊಳ್ಳಿಗ[೭]ಳ್ದಂ[೭] ॥೯೨॥

೧ ಗ (ಮೂ), ಗೂರು (ಕೆ), ನು (ತಾ) ೨ ಶ್ರೀ (ಮೂ) ೩ ದೆ (ಬ, ಮೂ, ತಾ) ೪ ಳಿ (ಮೂ) ೫ ಥಿ (ಮೈ) ೬ ರ್ಮ (ತಾ, ಬ, ಕ, ಮೂ) ೭ ಳ್ವಂ (ಮೈ)

ಶಿವಪದಪದ್ಮಮಂ ಪದೆದು ಪೂಜಿಪ ಶೈವಪುರಾಣಮಂ ಮಹೋ
ತ್ಸವದಿನೊಱಲ್ದು ಕೇಳ್ವ ಶಿವಭಕ್ತಸಮರ್ಚನೆಗೈವ ಸಂತತಂ
ಶಿವ[1]ಸ್ತವನಂ[1]ಗಳಂ ರಚಿಪ ಸಾರಶಿವಾಗಮಪೂಗದರ್ಥಮಂ
ವಿವರಿಪ ಶೈವವರ್ಯವರರಿಂ ಮೆಱೆದತ್ತು ಪುರಂ ನಿರಂತರಂ ॥೯೩॥

॥ವ॥ ಆ ನಗರಾಂತರಾಳದಲ್ಲಿ—

ಮನೆಮನೆದಪ್ಪದೊಪ್ಪಿದುದು ವೀಣೆಯ ಮೆಲ್ಲುಲಿ ರಾಜಕೀರನಿಂ
ಪಿನ ನುಡಿ ವಾಸದಿಂಚರಮುದಾರಮೃದಂಗರವಂ ಶಿವಸ್ತುತಿ
ಸ್ವನಮುರುಘಂಟಿಕಾರುತಿಯ [2]ಜೀಯ[2] ಜಯಧ್ವನಿ ಸಾಮಗಾನನಿ
ಸ್ವನಿತಮಶೇಷಶಾಸ್ತ್ರನಿನದಂ ಘನಶಂಖದ ನಾದಮಾವಗಂ ॥೯೪॥

॥ವ॥ ಮತ್ತಮಲ್ಲಿ—

ಧನದಂ ಭಿಕ್ಷುಸಖಂಗೆ
ಳ್ಪನಿತಂ ಧನಮೀಯದಾದನಾ ನಾಮಂ ಸು
ಮ್ಮನೆ ಬಂದುದೆಂದು ನಗುತುಂ
ಧನದಾಪ್ತನನಲ್ಲಿ ಮನ್ನಿಪರ್ಘನಧನದರ್ ॥೯೫॥

ಪುಲಿದೊವಲಂ ಗಜದ ಜಿನಮು
ನೆಲೆ ನೀನುಡದಿರ್ಬಿಡೆಂದು ಬಿಡಿಸುತೆ ಮೃಡನಂ
ಸುಲಲಿತದಿವ್ಯಾಂಬರಮಂ
ನಲಿದುಡಿಸುವ ದೂಸಿಗರ್ಕರಂ [3]ನೆಲಸಿರ್ಪರ್[3] ॥೯೬॥

ಸುರರೆಲ್ಲಂ ಸುತ್ತಲ್ಕಂ
ಬರಮೊಂದದು ಪಳೆಯದೆಂದು ಪಳಿದದನೆಸೆಗುಂ
ಪುರಜನರೆಲ್ಲಂ ಕೊಳಲಾ
ಪುರದೊಳ್ಬಹುನೂತನಾಂಬರಂಗಳ ಪಸರಂ ॥೯೭॥

ಶರಧಿ ನಿಜಾತ್ಮಜೆಯೆನಿಸುವ
ಸುರಲಕ್ಷ್ಮಿಗೆ [4]ಳಿ[4]ಪಿದಮಳರತ್ನವ್ರಾತಂ
ತರವಿಡಿದೆಸೆದಪುದೆನೆ ಸುಂ
ದರಮಾದುದು ರನ್ನವಸಿರದೊಳ್ಮಣಿವಿಸರಂ ॥೯೮॥

---

೧ ಸದನಂ (ಬ), ಸವನ (ಮೈ, ತಾ) ೨ ಜಯ (ಬ, ಕ) ೩ ನೆಲಸಿರ್ಕುಂ (ಮು) ೪ ಳಿಳು (ಬ, ಮೂ)

VIJAYA EVENING COLLEGE LIBRARY
BANGALORE 4
1617

॥ವ॥ ಮತ್ತಂ—

ಅರಸನ ತೋಳೊಳ್ಸಲೆ ನೆಲ
ಸಿರುತಂ ಮಣಿಗರ್ಭೆ ಪಡೆದ ಮಣಿಗಣಮದು ತ
ತ್ಪುರದೆಡೆಯೊಳ್ನೆಲಸಿದುದೆನೆ
ಸು[೧]ರು[೧]ಚಿರ ನವರತ್ನರಾಶಿ ಪಸರದೊಳೆಸೆಗುಂ ॥ ೯೯ ॥

ಅಳಿಕುಳನೀಲಚೇಲಮದು ಮೌಕ್ತಿಕವೃಂದಮನಾಂತು ಕಣ್ಗದೇಂ
ತೊಳಗಿದುದೋ ಪಳಚ್ಚನೆಸೆವಂಗಡಿವೀಧಿಯೊಳಲ್ಲಿ ಕೇತನಂ
ಗಳ ಗಳೆತಾಗಿ ತಟ್ಟುಗಿಯೆ ತಾರೆಗಳೊ[೨]ರ್ಬು[೨]ಳಿಗೂಡಿ ತದ್ಧರಾ
ವಳಯದ ಮೇಲೆ ತಾಂ ಪರಿದುಬೀಳ್ದ ನಭಸ್ಥಳಖಂಡದಂತೆವೋಲ್ ॥೧೦೦॥

ಅನುದಿನಮಿನಘನರುಚಿಯಂ
ಜನಿತೋತ್ಸವದಿಂದೆ ಸೇವಿಸಿದ ವನಜಂಗ
ಳ್ಚನ[೩]ಪ[೩]ನ ಪುರಸರದೆ ಪಳ
ಚ್ಚನೆ ಪೊಳೆದಲರ್ದಂತೆ ಕಂಚುವಸರಂ ತೋರ್ಕುಂ ॥೧೦೧॥

ಗಗನಶ್ರೀರವಿವೊಂದಂ
ಮಿಗೆ ತಳೆದೊಡೆ ಪುರುಡಿಸುತ್ತೆ ಪುರರಮೆ ತಳೆದ
ಳ್ಪಗಬಿಂಬಶತಮನೆಂದೆನೆ
ಸೊಗಯಿಸಿದುದು ತೊಳಪ ಕಂಚುಗಾಜಿರ ಪಸರಂ ॥೧೦೨॥

ವನಿತಾಮಧುರಾಧರದಿಂ
ಪನೆ ಬಯಸಿ ಬೆಳೆರ್ತುದೆನಿಪ ಬೆಳ್ಳಿಲೆ ಬಿಡದೇಂ
ನೆನೆಯಿಸಿದುದೊ ತರುಣೀಜನ
ಘನವಿರಹಾಪಾಂಡುಗಂಡಮಂಡಳದಿರವಂ ॥೧೦೩॥

ಸುರ[೪]ಯಿ[೪]ಯ ದುಂ[೫]ಡು[೫]ದಂಡೆ ಪೊಸಮಲ್ಲಿಗೆ[೬]ಯ್ಯೆ[೬]ಸರ[೭]ಮು[೭]ನ್ನದಾಳಿ ಬಂ
ಧುರನವಮಾಲತೀತ್ರಿಸರಮೊಪ್ಪುವಸಂಪಗೆ[೮]ವೂ[೮]ವಿನೋರ್ಜರಂ
ಸುರುಚಿರ ಕುಂದಬೃಂದದ ಶಿಖಾಸ್ರಜಮೆಂಬಿವನಬ್ಜಸೂತ್ರದಿಂ
ವಿರಚಿಪ ಮಾಲೆಗಾರ್ತಿಯರ ಮಂತಣಮೊಪ್ಪುಗುಮಲ್ಲಿ ಸಂತತಂ ॥೧೦೪॥

---

೧ ರ (ಮೂ, ಬ) ೨ ಬ್ಬು (ಮೂ), ಬ್ಬ (ಬ) ೩ ವ (ತಾ) ೪ ಗಿ (ಬ, ಮೂ, ತಾ)
೫ ಡ (ಮೊ, ಬ, ಕ) ೬ ಸರ (ಕ) ೭ ಮು (ಮೂ) ೮ ಪೂ (ಮೂ)

ಪರಿಮಳಸಂಭ್ರಮಭ್ರಮರವಿಭ್ರಮಭೃನ್ನಿಜದೃಷ್ಟಿ[೧]ಘೃ[೧]ಷ್ಟಭಾ
ಸುರಸುಮಮಾಲೆ[೨]ಯಂ[೨] ಸಮಘುತದ್ರುಜಮೊ[೩]ಕ್ಕಿ[೩]ರೆ ಪದ್ಮಪತ್ರದೊ
ಳ್ತರುಣವಿಟರ್ನಿರೀಕ್ಷಿಸಿ ಕದಂಬಕದಂಬಮಿದೆಂದು ಬಂದು ಸುಂ
ದರಿಯರ ಮುಂದೆ ನಿಂದು ಬೆಲೆಯಿತ್ತದನೊಯ್ವರತೀವ ರಾಗದಿಂ ॥೧೦೫॥

ನೀಲಪಟಾಂ[೪]ಚಿ[೪]ತ ಕಂಚುಕ
ಬಾಲಾಬಾಹಾಲತಾಗ್ರದೊಳ್ಮೆಱೆದುದು ಪೂ
ಮಾಲೆ ವಿದುಂತುದಮುಖದಿಂ
ಸಾಲಿಟ್ಟಿಳಿವಿಂದುವಮೃತಕಣಮಂಜರಿವೋಲ್ ॥೧೦೬॥

ತಾರಗೆಗಳನೋರಂತಿರೆ
ವಾರಿಜಮದು ತೆ[೫]ಗೆ[೫]ದು ಕಟ್ಟಿ ಸೆಱೆವೊಪ್ಪಿಸುವಂ
ತಾ ರವಿಗೆಸೆದುದು ರಮಣೀ
ಚಾರುಕರಂ ನೆಗಪೆ ಮಾಲೆಯಂ ಮಲ್ಲಿಗೆಯಾ ॥೧೦೭॥

॥ವ॥ ಇಂತೆಸೆವ ಮಾಲೆಗಾರ್ತಿಯರಂಗಡಿಯ ಮುಂಗ[೬]ಡೆ[೬]ಯಲ್ಲಿ—

ಮೊದಲೊಳ್ಕುಂಕುಮ[೭]ಮಿ[೭]ಟ್ಟು ಮತ್ತೆ ನವಕಸ್ತೂರೀರಜಂ[೮]ಬೊ[೮]ಯ್ದು ಮೇ
ಣ್ಬೆದುವಂ ಸಾರ್ಚಿ ವರಾಂಗಿ ಗಂಧಮನೊಡರ್ಚಲ್ತೆ[೯]ಯ್ದೆ[೯]ಕಣ್ಗೊಪ್ಪಿದ
ತ್ತದು ಚಂದ್ರಾಶ್ಮದ [೧೦]ಸಾಣೆ[೧೦]ಗಲ್ಕ್ರಮದೆ ಮೂವಣ್ಣಂಗಳಂ ತಾಳ್ದು ತ
ತ್ಸುದತೀಪಾಣಿಪಯೋಜಮರ್ದನಕೆ ಪಕ್ಕಾದಿಂದುವೆಂಬಂತೆವೋಲ್ ॥೧೦೮॥

ಚಂದ್ರಕಾಂತಶಿಲೆಯಲ್ಲಿ ನವಶ್ರೀಖಂಡಮನಿಟ್ಟು ಕರಾಬ್ಜದಿಂ
ಚಂದ್ರಿಕಾಲಸದಪಾಂಗೆಯರುದ್ಯತ್ಸೌರಭನಿಶ್ವಸಿತಾಂಗೆಯರ್
ಸಾಂದ್ರಚಂದನದ ಘಟ್ಟಿಗೆ ನೀರಂ ಪಾರದೆ ಮಾಳ್ಪುದನೀಕ್ಷಿಸು
ತ್ತಿಂದ್ರನಂದನನ ಪೋಲ್ವ ಭುಜಂಗರ್ ಕೌತುಕದಿಂ ತಲೆದೂಗುವರ್ ॥೧೦೯॥

ಹಾರಂ ಕುಂತಳಮುಯ್ಯಲಾಡೆ ಜಘನಾಭೋಗಂ ಪಯೋಭೃದ್ವಯಂ
ಸಾರಂ ನರ್ತನಮಾಡೆ ಚಿಟ್ಟುಮುಱಿಯಂ ಪೆಣ್ದುಂಬಿಯುಂ ಘ್ರಾಣಸಂ
ಚಾರಂ ಮಾರುತನಾಡೆ ಪಾಯ್ವಳಿಗಳಿಂ ಕರ್ಣೋತ್ಪಲಂ ವೇಣಿಯುಂ
ಸೇರುತ್ತಂ ತಿರಿಕಲ್ಲನಾಡೆ ತೆಗೆವರ್ ಶ್ರೀಖಂಡಮಂ ಬಾಲೆಯರ್ ॥೧೧೦॥

---

೧ ಧೃ (ಮೂ) ೨ ಯಿಂ (ಮೈ, ಕ, ಬ) ೩ ಪ್ರಿ (ಮೂ) ೪ ಕಿ (ತಾ)
೫ ಗ (ಮೂ), ಗಿ (ತಾ) ೬ ಡಿ (ಬ, ಕ) ೭ ವಿ (ಮೈ) ೮ ಪೊ (ಬ) ೯ ಯ್ದೆ
(ಮು) ೧೦ ಸಾಣ (ಮೂ), ಸಾಣೆ (ಬ)

॥ವ॥ ಮತ್ತಮಾ ಸುಗಂಧವಿಪಣಿಯಲ್ಲಿ—

ತುಱುಬಿದ ಯೂಥಿಕಾಕುಸುಮಮಂಜರಿಯೊಳ್ನಱುಗಂಪನುಂಡು ಪಾ
ರ್ದೆಱಗಲೊಡರ್ಚಿ ಮಂಡಳಿಸಿ ಮಲ್ಲಳಿಗೊಳ್ವಳಿವಿಂಡು ಕಾರ್ಮುಗಿ
ಲ್ಗೆಱಗಳ ಸಾಲ್ಗಳಿಂ ಸುರಿವ ರತ್ನದ ವೃಷ್ಟಿಯದಾಗೆ ಗಂಧಮಂ
[1]ನೆಂಜು ತೆಗೆವಚ್ಚಜವ್ವನೆಯ ಸೋರ್ಮುಡಿ ತಾಂ ನವಿಲಂತೆ ನರ್ತಿಕುಂ ॥೧೧೧॥

[2]ನೃ[2]ಪಸೇವಾಯಾತ ಪೃಥ್ವೀಪತಿಸುತವೃತತೂರ್ಯಪ್ರಣಾದಂ ಪಯಃಪಾ
ನಪರವ್ಯಾಯಾತಗಂಧದ್ವಿಪಗಣಘನಘಂಟಾಪ್ರಘೋಷಂ ಪಣಸ್ತ್ರೀ
ವಿಪುಳಾಗಾರಸ್ಥಳೀ ನಿರ್ಗಮಿತ ವಿಟವಪುಃಸೌರಭವ್ಯಾಪ್ತಭೃಂಗೀ
ಚಪಲಧ್ವಾನಂ ಕರಂ ರಂಜಿಸೆ ಬಗೆಗೊಳಿಕುಂ ತತ್ಪುರೀರಾಜಮಾರ್ಗಂ ॥೧೧೨॥

॥ವ॥ ಅದಲ್ಲದೆಯುಂ—

ನಡೆವೆಳವೆಣ್ಗಳುನ್ನತಕುಚಂಗಳ ಕುಂಕುಮರೇಣು ಸೂಸೆ ಸೋ
ರ್ಮುಡಿಯೆಡೆಯಲ್ಲಿ ತಾಳ್ದ ಮೃಗನಾಭಿಜಪುಷ್ಪರಜಃಪ್ರತಾನಮೊ
ರ್ಗುಡಿಸಿರೆ ಬೀದಿಯಲ್ಲಿ ಬಿದುವೊಳ್ ಬಿಡದೊಟ್ಟಿಕೊಳುತ್ತೆ ಗಂಧಮಂ
ಪಡೆದೆಡೆಯಾಡುತಿರ್ಪ ಕರಿ ತಾಳ್ದುದು ಗಂಧಗಜಾಭಿಧಾನಮಂ ॥೧೧೩॥

ಲೋಲಾಕ್ಷಿಯರ್ಸೈದುತ್ತಿರೆ
ಸಾಲಿಟ್ಟವರಳಕಗಂಧಕೊಡನೈತರುತಂ
ರೋಲಂಬಮಾಲೆ ಮೇಲದು
ನೀಲದ ನಡೆತೋರಣಂಬೊಲೇನೊಪ್ಪಿದುದೋ ॥೧೧೪॥

[3]ಕಿ[3]ಳಿರ್ವಶ್ವಂಗಳ ನಿನದಂ
ತಳರ್ವ ಗಜಂಗಳ ನಿಬದ್ಧನಿಗಳಧ್ವನಿ ಕೆಂ
ದಳಿರ್ವಣ್ಣದ ಕೇತನದೊಳ್
ಮಿಳಿರ್ವುರು ಘಂಟಾನಿನಾದಮಲ್ಲಿಡಿದಿರ್ಕುಂ ॥೧೧೫॥

ಪಚ್ಚೆಯ ತೋರಣಂ ಕನಕ[4]ದುಯ್ಯಲ[4]ಪೂರ್ವಸುರೇಂದ್ರರತ್ನದಿಂ
ದಚ್ಚರಿದಿರ್ದ ವೇದಿಕೆ ಸುಧಾಕರಕಾಂತದ ಸೆಜ್ಜೆ ಕಾಂತಿಯಂ
ಬಿಚ್ಚಳಿಪಚ್ಚಬಜ್ಜರಗದಂ ನವಮೌಕ್ತಿಕಸೌಧಮಾಲೆ ಕ
ಣ್ಗಚ್ಚರಿಯಾದ ರನ್ನವನೆ ರಯ್ಯಮದಲ್ಲಿಯ ಸೂಳೆಗೇರಿಯೊಳ್ ॥೧೧೬॥

೧ ಚೆ (ಕ) ೨ ತ (ಕ) ೩ ಗಿ (ಬ, ಮೂ) ೪ ದುರ್ಯ್ಯಲ (ಬ) ಮಯು ಲ (ತಾ)

ಕಾಮಶಾಸ್ತ್ರಮನೋದುಗುಂ ಗಿಳಿ ಪೇಳ್ಗುಮಂತದರರ್ಥಮಂ
ಪ್ರೇಮದಿಂ ಬಳಿಸಾರ್ದು ಸಾರಿಕೆ ಬೀಣೆಯಂ ನೆಱೆ ಬಾಜಿಕುಂ
ಸೋಮರತ್ನ [೧]ಸಂ[೧]ಜೀವಪುತ್ರಿಕೆ ಪಾಡುಗುಂ ಕಳಕಂಠಿಗಳ್
ಕಾಮನುದ್ಗಮಚಾಪನೋಲಗಿಸಿರ್ಪನಚ್ಚರಿಯೆಂಬಿನಂ ॥೧೧೭॥

ಅಲ್ಲಿ ಮಣಿಭವನದೊಳ್
ಸಲ್ಲಲಿತ ಸೌಧದೊಳ್
ಪೊಸತಪ್ಪ ಸೆಜ್ಜೆಯೊಳ್
ಮಿಸುಪ ನೆಲೆವನೆಗಳೊಳ್
ಪನ್ನೀರ್ಗಳಿಂ ಮಿಂದು
ಚೆನ್ನೆಸೆಯಲೈತಂದು
ಬಿಳಿಯ ಸಪುರಮನುಟ್ಟು
ಪೊಳೆವಂದುಗೆಯನಿಟ್ಟು
ಮುಂಚುತಂ ಸಡಗರಿಸಿ
ಕಾಂಚಿಯನಲಂಕರಿಸಿ
ಘುಸೃಣರಸದಣ್ಪಿಟ್ಟು
ಮಿಸು[೨]ನಿ[೨]ರವಕೆ[೩]ಯ[೩]ದೊಟ್ಟು
ತೊಳತೊಳಪ ತೋರಮಾಣಿಕದ ಮಾಲೆಯನಾಂತು
ಥಳಥಳಿಪ ಪಂಚರತ್ನದ ಪದಕಮುಮನಾಂತು
ಭುಜಮಕರಿಕೆಯ ಬಾಹುಪೂರಕಟಕಂಗಳಂ
ನಿಜರುಚಿಯನುಗುಳ್ವ ನವರತ್ನದುಂಗುರಗಳಂ
ತಳೆದಾಣಿಮುತ್ತುಗಳ ಹ[೪]ತ್ತೆ[೪]ಸರಮಂ ಧರಿಸಿ
ಕಳೆವೆತ್ತ ಪೊಸರತ್ನದೋಲೆಯನಲಂಕರಿಸಿ
ತೋರಮುತ್ತಿನ ಮೂಕುತಿಯನಾಂತು ಕಂಪೆಸೆವ
ಸಾರಮೃಗಮದದ ತಿಲಕಮನಾಂತು ನುಣ್ಪೆಸೆವ
ತೆಳ್ಗದಂಪಿಂಗೆ ಮಕರಿಕೆಯನಂದಂಗೊಳಿಸಿ
ಒಳ್ಗುರುಳ್ಗೆ ಮುತ್ತಿನ ಬಲೆಯನೊಲ್ದು ಕೈಗೊಳಿಸಿ
ಮಾಲತಿಯ ಮಾಲೆಯಂ ನಿಡುಜೆಡೆಯೊಳಳವಡಿಸಿ
ಲೀಲೆಯಿಂ ಕರ್ಣದೊಳ್ಕರ್ಣಪೂರಮನಿ[೫]ರಿ[೫]ಸಿ

೧ ಸು (ಮೂ) ೨ ಪ (ಬ) ೩ ಗೆ (ಕ) ೪ ತ್ತ (ತಾ, ಮೈ) ೫ ಲಿ (ಕ)

ಕಡೆಗಣ್ಣ ಕಾಂತಿ ಕುಸುಮಾಸ್ತ್ರಮಂ ಕರೆ[೧]ವು[೧]ತಿರೆ
ಕುಡುವುರ್ಬು ಕುಡುವಿಲ್ಲ ಚೆಲ್ವ ಸೈಗಱೆ[೧]ವು[೧]ತಿರೆ
ಕೆಂಬಲ್ಲ ನುಂಬೆಳಗು ದೆಸೆದೆಸೆಗೆ ಪಸರಿಸಿರೆ
ಬಿಂಬಾಧರದ ಕಾಂತಿ ಕೆಂಬರಲನಿಳಿಪುತಿರೆ
ತೊ[೨]ಡ[೨]ವೆಳಗು ಥಳಥಳಿಸೆ
ಬಿಡುಮುಡಿಯನಳಿ ಬಳಸೆ
ಮುಖರಸಂ ತುಳ್ಕುತಿರೆ
ನಖದ ರುಚಿ ನಿಳ್ಕುತಿರೆ
ನಡೆಗಂಚೆ ತೊಡರುತಿರೆ
ನುಡಿಗೆ ಗಿಳಿವೊಡನೆ ಬರೆ
ಮೊಲೆ ಮೇಲುದೊತ್ತರಿಸೆ
ಸಲೆ ಚೆಲ್ವು ಬಿತ್ತರಿಸೆ
ಘನನಿತಂಬಂ ಜ[೩]ಡಿ[೩]ಯೆ
ತನುಮಧ್ಯಮದು ಸೆಡೆಯೆ
ನೋ[೪]ಡೆ[೪] ನಡೆಗೆಡಿಸುತಂ
ಕೂ[೪]ಡೆ[೪] ಕೆಳೆಗೊಳಿಸುತಂ
ಬೇಟಮಂ ಪೆರ್ಚಿಸುತೆ
ಕೂಟಮಂ ಮಚ್ಚಿಸುತೆ
ಕಳಗಳದ ಕಳರವದ
ಚಳದಳಕ ಮಿಳದ[೫]ಳಿ[೫]ಕೆ
ದೆಳನಗೆಯ ಕಳೆಯುಗೆಯ
ಸರಸಿಜದ ಕ್ಷಿ[೬]ಸಿ[೬]ರಿಮೊಗದ
ಗುರುಕುಚದ ವರಕಚದ
ಚದುರಿಡಿದ ಮೃದುವಡೆದ
ಸವಿನುಡಿಯ ತಳಿರಡಿಯ
ಪುರವಾರನಾರಿಯರ್
ಪರಮಸುಕುಮಾರಿಯರ್
ಸುರತರಣಧೀರೆಯರ್
ಸರಸಗುಣಸಾರೆಯರ್

---

೧ ಯು (ತಾ) ೨ ಡೆ (ತಾ) ೩ ಡೆ (ತಾ) ೪ ಡಿ (ಮೈ) ೫ ಳ (ಕ) ೬ ಸ (ತಾ)

ಪೊಸದೇಸಿವೆತ್ತು ಸಂತತಮಿಂತು ರಾಜಿಪರ್
ಕುಸುಮಶರನಂ ರತಿಯನನುದಿನಂ ಪೂಜಿಪರ್

ಆ ವಾರಾಂಗನೆಯರ್ಕಳಾಸ್ಯಕಮಳಂ ಮಂದಸ್ಮಿತಜ್ಯೋತ್ಸ್ನೆಯಿಂ
ತೀವಿ[೧]ದರ್ುಂ[೧] ನಯನೋತ್ಪಳಂ ಕನಕ ತಾಟಂ[೨]ಕ[೨]ರ್ಕಬಿಂಬಪ್ರಭಾ
ಶ್ರೀವಿನ್ಯಾಸಕಮಾಗಿಯುಂ ಮುಗಿದುದಿಲ್ಲೇಕೆಂಬೊಡೀ ತಾಣದೊಳ್
ಕಾವಂ ಕಿತ್ತಡಿಯಿರ್ಪ್ಪನಾತನ ಮಹತ್ವಂ ತಾನಿದೆಂಬರ್ಬುಧರ್ ॥೧೧೮॥

ಕೆಂಬವಳಂಬೊಲೊಪ್ಪುವರುಣಾಧರಮಂ ಗಿಳಿ ಬಿಂಬಮೆಂದು ತಾಂ
ಚುಂಬಿಸಲಾಟಿಸುತ್ತಿರೆ ಕರಾಗ್ರದೊಳೊಯ್ಯನೆ ನೋಡಿ ತಮ್ಮ ಬಾ
ಯ್ದಂಬುಲಮಿಕ್ಕೆ ವಾರವಧುಗಳ್ ಸವಿದಾಸ್ಯದೆ ಕೆಂಪನಾಂತುದ
[೩]ಲ್ಲೆ[೩]ಂಬೊಡದೆಂತು ಸಾರ್ದುದೊ ತದಂಚಿತ ಚಂಚುಗೆ ಕೆಂಬರಲ್ಗದಿರ್ ॥೧೧೯॥

॥ವ॥ ಮತ್ತಂ—

ಉದಯಂಬೆತ್ತೊಪ್ಪುವರ್ಕಂ ಘನರುಚಿಕಲಶಂ ಕಾಂಚನೋದಂಚಿತಂ ಪ
ರ್ಬಿದ ಸಂಧ್ಯಾರಾಗಮೊಪ್ಪಂಬಡೆದೆಸೆವ ಮಹಾಪದ್ಮರಾಗಾಂಶು ತಾನಾ
ಗೆ ದಿಟಂ ಪೂರ್ವಾದ್ರಿಯೆಂಬಂತೆಸೆಗುಮವಿರತಂ ಭೂಮಿಕಾಧಾರಕಂ ಕಾಂ
ತಿದಸದ್ವಾತಾಯನಪ್ರಸ್ಫುರಿತಮಮರ್ದುಗಾಣಿಕ್ಯಮಾಣಿಕ್ಯಹರ್ಮ್ಯಂ ॥೧೨೦॥

॥ವ॥ ಅಂತೆಸೆವ ನಿರ್ಮಿತಶರ್ಮಭರ್ಮಹರ್ಮ್ಯದೊಳ್ಕುರ್ಮೆಯಿಂ ಪೆರ್ಮೆವೆತ್ತು —

ಪದಪದಮರ್ದಿರೆ ಸುಧಾಸಾ
ರದ ರದನಚ್ಛದದ ರದದ ರುಚಿ ಬೆರಸೆ ಲಸ
ನ್ಮದ ಮದನಾಗಮಮಂ ತ
ಪ್ಪದೆ ಪದೆದುಪದೇಶಿಪರ್ವಿದಗ್ಧೆಯರದಳಿ[೩]ೊಳ್ ॥೧೨೧॥

॥ವ॥ ಮತ್ತಂ—

ನೆಲೆವಾಡದ ನೆಲೆನೆಲೆಯೊಳ್
ನೆಲೆಮೊಲೆಯೊಳ್ತಳೆದು ವೀಣೆಯಂ ಬಾಜಿಸು[೪]ತುಂ[೪]
ನೆಲೆಗೊಂಡಿರ್ಪುದು ಸತತಂ
ನೆಲೆಯಾದ ಲತಾಂಗದಂಗನಾಜನಮಾಗಳ್ ॥೧೨೨॥

---

೧ ದರ್ಗಂ (ಮೂ). ೨ ಕಾ (ಬ, ಮೂ, ತಾ) ೩ ತ್ರಿ (ಮೂ) ೪ ತಂ (ಬ, ಮೂ, ತಾ)

ಇದು ಚಿತ್ರಂ ಬಾಳೆಮೀನ್ಮಿಂಚನೆ ಕಱಿದಪುದಂಭೋರುಹಂ ಚಂದ್ರಿಕಾಸಂ
ಪದಮಂ ಬೀಱುತ್ತಮಿಲ್ಲಿರ್ದಪುದು[1] ಮಧುಕರಶ್ರೇಣಿ ತಾರಾಳಿಯಂ ತಾ
ಳ್ದುದು ಚಾಂಪೇಯಪ್ರಸೂನಂ ವಿಚಕಿಲಮುಕುಲಂಬೆತ್ತುದೆಂದಲ್ಲಿ ಹರ್ಮ್ಯಾ
ಗ್ರದ ವಾರಸ್ತ್ರೀಯರಂ ಶಂಕಿಪರವಯವಮಂ ನೋಡಿದರ್ ಭ್ರಾಂತಿಯಿಂದಂ ॥೧೨೩॥

॥ವ॥ ಅಂತುಮಲ್ಲದೆಯುಂ—

ಪುರಸೌಧಾಗ್ರಸ್ಥಿತಾತ್ಮೇಶ್ವರವಿರಹಶಿಖಾವಹ್ನಿಖಾತಪ್ತಕಾಂತಾ
ಕರಕಂಜಾತಾಸಿತಾಂಭೋರುಹನಿ[2]ಹಿತ ತದುದ್ಯದ್ರುಜಃಪುಂಜಮಂಜು
ಸ್ಫುರದಂಕಾಂಕಂ ಮೃಗಾಂಕಂ ತದಧಿಕಮುಖರುಕ್ತಸ್ಕರಂ ಪೂರ್ಣನಪ್ಪಂ
ವರಯುಕ್ತದ್ಯೋಷಿದಾಸ್ಯಾಹೃತಸಕಲಕಲಂ ಸಕ್ರಮಂ ಕುಂದುತಿರ್ಪಂ ॥೧೨೪॥

॥ವ॥ ಮತ್ತಮಾ ಪುಟಭೇದನಸ್ಫುಟಪ್ರದೇಶದಲ್ಲಿ—

ವರವೇದಂ ವಾದ್ಯನಾದಂ ನೆರೆದಿರೆ ಕುಸುಮಾಮೋದಮಾಹ್ಲಾದವಾದಂ
ನರವಾರಂ ನರ್ತಕೀರಂಜಿತನಟನಮುದಾರಾಂಗನಾಗೀತಸಾರಂ
ಸ್ಫುರದತ್ಯಂತಾಂಶು ತತ್ಯನ್ವಿತನವಮಣಿಭಿತ್ಯಂಚಿತಂ ದೇವನುತ್ಯಂ
ಸುರಕಾಂತಂ ತನ್ನಿಶಾಂತಂ ಕರಮೆಸೆಗುಮನಂತಪ್ರದೀಪಾಳ್ಯುಪಾಂತಂ ॥೧೨೫॥

॥ವ॥ ಮತ್ತಂ—

ತುಂಗಮೃದಂಗಮಂಗಳರವಂ ಕಹಳಾಧ್ವನಿ ತಾಳನಿಸ್ವನಂ
ರಂಗದಪಾಂಗಸಂಗತನಟೀನವನರ್ತನಮಾಗಮಪ್ರಘೋ
ಷಂಗಳಭಂಗಶಂಖನಿನದಂ ಬಿನದಂಬಡೆದಿರ್ದ ಭಕ್ತಲೋ
ಕಂಗಳ ಕಂಗಳಂಗವಿಸೆ ಸಂಗಳಿಸಿರ್ಪುವು ಲಿಂಗಗೇಹದೊಳ್ ॥೧೨೬॥

ಆ ಲಿಂಗಾಲಯಶಿಖರ
ಸ್ಥೂಲೋನ್ನತಕನಕಕಳಶಮದು ಗಗನಶ್ರೀ
ಪಾಲಂಗೀವುದು [3]ಕಾನಕ[3]
ಚೇಲದ ಚೆಲ್ವಂ ನಿರಂತರಂ ನಿಜರುಚಿಯಿಂ ॥೧೨೭॥

ಮೃಡಸೇವೆಗೆ ಬಿಡುಗಣ್ಣ
ರ್ನಡೆತರಲೆಂದಜನೊಡರ್ಚಿ ನಿಚ್ಚಣಿಗೆಯನಿ
ರ್ಕಡೆಯಿಟ್ಟನೆಂಬ ಪೆಂಪಂ
ಬಡೆದಂಬರಚುಂಬಿಗೋಪುರಂ ಕರಮೆಸೆಗುಂ ॥೧೨೮॥

---

೧ ತ್ತಲ್ಲಿಮಿರ್ದಪುದ (ಮೂ) ೨ ಯು (ತಾ. ಮೈ) ೩ ಕನಕಾ (ಮೂ); ಕನಕದ (ಕಾ)

ಅಮರಾಪಗೆಯೊಳ್ಮಿಂದಂ
ದಮರಿಯರಾ ಗೋಪುರಾಗ್ರದೊಳ್ನಿಂದದಜ
ಗ್ರಿಮಕನಕಕಲಶರುಚಿಯನ
ಹಿಮಕರಕರಮೆಂದು ಕೇಶಮಂ ಪಸರಿಸುವರ್ ॥೧೨೯॥

ಹರಗೃಹದಿಂ ನೆಗೆದು ನಭೋಂ
ತರಕ್ಕೆದುವ ಧೂಪಧೂಮದಾಮೋದಕ್ಕಂ
ಬರಲಕ್ಷ್ಮಿ ನಿಜಶಿರೋಜೋ
ತ್ಕರಮಂ ಬಿರ್ಚಿದವೊಲಬ್ದ ಮಗ್ರುದೊಳೆಸೆಗುಂ ॥೧೩೦॥

ಅಲ್ಲಿ ಧರಾಸುರವಿಸರಂ
ಮೆಲ್ಲನೆ ಮಾಳ್ಪತುಳಹೋಮಧೂಮಂ ಪುಗೆ ಕ
ಣ್ಣಲ್ಲಿ ಸಲೆ ಮೇಲೆ ನಡೆಯಲ್
ಸಲ್ಲದೆ ರವಿ ದಕ್ಷಿಣೋತ್ತರಾಯಣನೆನಿಪಂ ॥೧೩೧॥

॥ವ॥ ಇಂತನಂತವಿಭವಸನಾಥಮಾಗಿ ಪೆರ್ಮೆವೆತ್ತಾ ಪುರಮಧ್ಯದಲ್ಲಿ—

ಕನಕಕವಾಟಕೋಟಿಘಟಿತಸ್ಫುಟರತ್ನಮರೀಚಿವೀಚಿ ಚಂ
ದನ ಘನಸಾರಸೌರಭಸಮಾವೃತಭೃಂಗರಮಾಧಿವಾಸವಾ
ಸನಳಿನಮಿಂದುಕಾಂತಗೃಹಕಾಂತಿಜಳಂ ಲಲನಾಕ್ಷಿಕೈರವಂ
ಘನತರರಾಜಹಂಸನಿರೆ ರಾಜಗೃಹಂ ಕೊಳದಂತೆ ರಂಜಿಕುಂ ॥೧೩೨॥

॥ವ॥ ಅಂತೊಪ್ಪವಂತಃಪುರದ ವಜ್ರಮಯಬಹಿಃಪ್ರಾಕಾರದಂತರಾಳದೊಳಗೆ—

ಮರಕತರತ್ನದ ಪೊಸ ಮಂ
[1]ದಿ[1]ರದೊಳ್ಹಯರಾಜಿ ಮೆಱೆದುದದಱುದ್ರುಚಿತ
ಳ್ತಿರೆ ತತ್ತ್ರತಾಪಮದು ಭಾ
ಸ್ಕರಾಶ್ವವೃಂದಮನೆ ತಂದು ಸೆಱೆಯಿ[2]ಕ್ಕಿದ[2]ವೋಲ್ ॥೧೩೩॥

ತಾರಾಚಲಘನಗುಹೆಯೊಳ
ಗೈರಾವತಮಿರ್ಪ ತೆಱದೆ ಶಶಿಮಣಿಸೌಧಾ
ಗಾರದೆ ತದ್ರುಚಿಧವಳಾ
ಕಾರಾನ್ವಿತಭದ್ರಗಜಮದೇನೊಪ್ಪಿದುದೋ ॥೧೩೪॥

---

೧ ದು (ಕ, ಬ, ತಾ) ೨ ಕ್ಕುವ (ಮೂ,); ಕ್ಕಿವ (ಕ)

ತೊಳಪ ನಿಜರುಚಿಸುಧೆಗೆ ಬಗೆ
ಯೆಳಸಿ ಕರಂ ನಿಂದ ಭೀಕರಾಹಿಗಳನಿದೇಂ
ತಳೆದುದೊ ಪೇಳೆನೆ ಶಸ್ತ್ರಾ
ವಳಿಯಂ ತಳೆದಮಳ ಶಸ್ತ್ರಶಾ[೧]ಲೆ[೧]ಯದೆಸೆಗುಂ ॥೧೩೫॥

॥ವ॥ ಅದಲ್ಲದೆಯುಂ—

ವರಕರ್ಪೂರಪರಾಗರಂಗಮುರುಕಸ್ತೂರೀಪ್ರಲಿಪ್ತಂ ಸುಮೋ
ತ್ಕರಮಾಲಾಕಲಿತಂ ಪ್ರದೀಪಪಟುಧೂಪಾಮೋ[೨]ದ[೨]ಚಿತ್ರಾಂಬರಾ
ವರಣಂ ರತ್ನವಿತಾನರಂಜಿತಮುದಂಚತ್ಪಂಚವಾದ್ಯಂ ಸುಧಾ
ಕರಕಾಂತೋಪಳನಿರ್ಮಿತಂ ಗಿರಿಶಪೂಜಾಮಂದಿರಂ ರಂಜಿಕುಂ ॥೧೩೬॥

॥ವ॥ ಮತ್ತಮಂತಃಪುರಮೆಂಬ ಸರೋವರದ ಸಿರಿಯ ಕರುಮಾಡಂಗಳಂತೆಸೆವ ಕರುಮಾಡಂಗಳುಂ, ಕರುಮಾಡಂಗಳ ಸೊದೆವೆಳಗಂ ಸೊದೆಗೆತ್ತು ಸಾರೆವರ್ಪ ದೀಹ ದಂಚೆಗಳುಂ, ದೀಹದಂಚೆಗಳ್ಗೆ ಕಾರ್ಮುಗಿಲೆಂಬ ಶಂಕೆಗೊಟ್ಟಿದಿರ್ಚುವಿಂದ್ರನೀಲ ನಿಳಯಂಗಳು[೩]ಮಿಂದ್ರನೀಲ[೩]ನಿಳಯಂಗಳ [೪]ಕ[೪]ಬೊರ್ಳಪಂ ಕಳ್ತಲೆಗೆತ್ತಗಲ್ವ ಗೃಹಸರೋವರಚಕ್ರಂಗಳುಂ, ಗೃಹಸರೋವರಚಕ್ರಂಗಳ್ಗೆ ಪಾಸೆಯೆಂಬಾಸೆಗೊಡುವ ಬಾಸೆದ[೫]ಳೆ[೫]ದು ನೀರ್ಮುಳುಗುವ ನಿತಂಬಿನಿಯರುಂ, ನೀರ್ಮುಳುಗುವ ನಿತಂಬಿನಿಯರ ನಿಡುಜೆಡೆಯಂ ಜಳೋರಗಮೆಂದು ತಡಿವಿಡಿದು ನೋಳ್ಪ ನೃಪಕುಮಾರಿ-ಯರುಂ, ನೃಪಕುಮಾರಿಯರ ಕಟಾಕ್ಷರಂಚಿಯಂ ವಿಚಕಿಲಮಾಲೆಯೆಂದೆಱಗಲವ್ವಳಿಪ ಮದಮಧುಪಂಗಳುಂ, ಮದಮಧುಪಂಗಳ್ಗೆ ಪುಷ್ಕರಭ್ರಾಂತಿಗೊಡುವ ಪುಷ್ಕರದಿಂ ಮೆಱೆವ ಮದಕಳಭಂಗಳುಂ, ಮದಕಳಭಂಗಳಂ ಮೇಚಕಾಚಲಮೆಂದಾರೋಹಿಪ ಲೀಲಾಮಯೂರಂಗಳುಂ, ಲೀಲಾಮಯೂರಂಗಳ್ಗೆ ಪೊಸಮಿಂಚಂ ಪಸರಿಪ ಮಿಸುನಿವ ನೆಗಳುಂ, ಮಿಸುನಿವನೆಗಳ ಮಿಸುಪಕಾಂತಿಯಂ ಬಿಸಿಲೆಂದು ಪೆಱದೆಗೆವ ಚಪಲ ಚಕೋರಂಗಳುಂ, ಚಪಲಚಕೋರಂಗಳ್ಗೆ ಚಂದ್ರಿಕೆಯಂ ಪರಪುವ ಚಂದ್ರಮಣಿ ಕುಟ್ಟಿಮಂಗಳುಂ, ಚಂದ್ರಮಣಿಕುಟ್ಟಿಮಂಗಳಂ ತಿಳಿಗೊಳಂಗಳೆಂದಡಿಯಿಡಲಂಜಿ ಪೆಡಂಮೆಟ್ಟುವ ಕಿಱುವೆಂಡಿರುಂ, ಕಿಱುವೆಂಡಿರಲತಗೆಯಡಿವಜ್ಜೆಯಂ ಕಂಡು ಮಾಂದಳಿರೆಂದು ಕರ್ದುಂಕುವ ಕೇಳಿಕಳಕಂ[೬]ಠಿ[೬]ಗಳುಂ, ಕೇಳಿಕಳಕಂಠಿಗಳಂ ಪುರುಳಿಗಳೆನಿಸಿ ಮಾಳ್ಪ ಪಸುರ್ವರಲಪಂಜರಂಗಳುಂ, ಪಸುರ್ವರಲಪಂಜರಂಗಳೊಳ್ಮಾರ್ಪೊಳೆವ ನಿಜ ತುಂಡಪ್ರತಿಬಿಂಬಮಂ ಬಿಂಬಫಳಂಗೆತ್ತು ತುಡುಂಕುವ ತಾಮ್ರತುಂಡಂಗಳುಂ, ಸಂಗಳಿಸಿ ಮಂಗಳಮಂ ಕಂಗೊಳಿಸಿರ್ದುವಂತುಮಲ್ಲ[೭]ದೆ[೭]—

೧ ಲಿ (ತಾ, ಬ) ೨ ದಿ (ಬ, ಕ) ೩ ನೀಲ (ಬ) ೪ ಕಾ (ತಾ, ಮೂ)
೫ ಳಿ (ತಾ, ಕ) ೬ ಠಂ (ಬ) ೭ ದೆಯುಂ (ತಾ)

ರಮಣೀಕಂಕಣಕಿಂಕಿಣೀಕ್ವಣಿತಮಿಂದ್ವಾಸ್ಯಾಕರಾಂಭೋರುಹ
ಭ್ರಮಿತಾಂಭೋಜಮಿಳದ್ಭ್ರಮದ್ಭ್ರಮರಝೇಂಕಾರಂ ಸುಬಿಂಬಾಧರಾ
ಸಮುದಂಚತ್ಕರಶಾರಿಕಾಶುಕರವಂ ಕೂಜತ್ಪಿಕಾಲಾಪಿನೀ
ಕ್ರಮಸಂವಾದಿತಸಾಧುನಾದವಹ ವೀಣಾರಾವಮಲ್ಲೊಪ್ಪುಗುಂ ॥೧೩೭॥

ಕರುಮಾಡಂ ಕಣ್ಗೆ ವಂದತ್ತಮೃತಕರಶಿಲಾನಿರ್ಮಿತಂ ಭರ್ಮಬದ್ಧ
ಸ್ಫುರದುದ್ಯತ್ಪದ್ಮರಾಗಾಂಚಿತಕಲಶಮಿನಗ್ರಾವದಿವ್ಯದ್ವಿಟಂ ಕಾ
ವರಣಂ ವೈಢೂರ್ಯವೇದೀವಿದಿತಮುರುಹರಿತ್ಕುಟ್ಟಿಮಂ ವಜ್ರಕುಡ್ಯಂ
ಹರಿನೀಲಸ್ತಂಭಮುದ್ವಿದ್ರುಮಲಸದರರಂ ಮೌಕ್ತಿಕದ್ವಾರಬಂಧಂ ॥೧೩೮॥

ಸೊದೆವೆಳಗಂ ಸುಧೆಗೆತ್ತಾ
ಬಿದಿಯ ಮರಾಳಂ ಸರಾಗಮುರುತರಸೌಧಾ
ಗ್ರದೆ ನಿಂದುದೆಂಬ ಭಾವಮ
ನೊದವಿಪ್ಪುದಿರುಳದಱ ತುದಿಗೆ ಬಂದ ಮೃಗಾಂಕಂ ॥೧೩೯॥

ಅದಱಗ್ರದಲ್ಲಿ ಪಾಡುವ
ಸುದತಿಯ ಗೀತಮನೆ ಕೇಳ್ದು ಸುರಪಶು ಸುರಿದ
ಗ್ಗದ ಪಾಲ್ಸರಿ ಪಸರಿಸಿತೆನೆ
ಬಿದುಗದಿರ್ಗೆನಿಳಿಪ ಸೊದೆಯದೇಂ ಸೊಗಯಿಸಿತೋ ॥೧೪೦॥

ಅಮರಿಯರಾ ನೃಪಹರ್ಮ್ಯಾ
ಗ್ರಮಹಾಧ್ವಜಪಟದ ಮಱೆಯೊಳಡಗಿರೆ ಬಿನದ
ಕ್ಕಮರರಸವಸದೆ ತನ್ಮುಕು
ರಮನವರ ಕಪೋಲಮೆಂದು ಚುಂಬಿಸುತಿರ್ಪರ್ ॥೧೪೧॥

ಕಡೆಗಣ್ಣಿಂ ಕಾವನಂಬಂ ಕಱೆವುತೆ ಕುಡಿವುರ್ವಿಂದೆ ಜರ್ವುತ್ತೆ ಮುಂಗೈ
ಯೆಡೆಯೊಳ್ಕುಳ್ಳಿರ್ದ ಕೀರಂ ನುಡಿದ ನುಡಿಯನಾಕರ್ಣಿಸುತ್ತೊರ್ಮೆ ಕೈಯೊ
ಳ್ಪಿಡಿದಂಭೋಜಾತದಿಂ ಸುಯ್ಗೆಱಪಳಿಗಳ ಸೋವುತ್ತೆ ಮಂದಸ್ಮಿತಂ ಮುಂ
ದಿಡೆ ಚಂಚಜ್ಜ್ಯೋತ್ಸ್ನೆಯಂ ಸೌಧದೊಳೆಸೆವುದಳುಂಬಂ ನೃಪಸ್ತ್ರೀಕದಂಬಂ ॥೧೪೨॥

ಹಿಮಷಂಡಂ ಫೇನಖಂಡಂ ತುರಗತತಿ ತರಂಗಾಳಿ ಪೇರಾನೆ ನೀರಾ
ನೆ ಮಹಾಹರ್ಮ್ಯಂ ವಿಭೀತಾಚಲಮಭವಗೃಹಂ [1]ಭೈತ್ರಮುತ್ಕೇತು ತತ್ಕೇ
ತುಮಣಿವ್ರಾತಂ ತದುದ್ಯನ್ಮಣಿಗಣಮುರುಸೌಧಾಂಶುದುಗ್ಧಂ ಧರಿತ್ರೀ
ರಮಣಾಗಾರಂ ಮಣಿದ್ವೀಪಮಿದೆನೆ ಪುರಿ ರತ್ನಾಕರಂಬೋಲ್ಮನೋಜ್ಞಂ ॥೧೪೩॥

---

೧ ಚೈ (ಕ)

ಆ ನಗರಿಯೊಳೆಸೆದಿರ್ಪಂ
[1]ಶ್ರೀ[1]ನಾಯಕವಿಭವನಭವಪದಭಕ್ತನಿಳಾ
ಮಾನಿನಿಯರಸಂ ಸರಸಂ
ಭೂನುತಸತ್ಯೇಂದ್ರ ಚೋಳ[2]ರಾಜನರೇಂದ್ರಂ[2] ॥೧೪೪॥

ವ್ಯಾನಮ್ರ ಶ್ರೀಮುಖಸುರವಧೂವಕ್ತ್ರಪದ್ಮಪ್ರಭಾಂಭ
ಸ್ನಾನೋನ್ಮೀಲತ್ಪದಕಮಳೆ ಕಲ್ಯಾಣಿ ಕಲ್ಯಾಣಶೈಲಾ
ನೂನಾಸ್ಥಾನಾಶ್ರಿತಸಿತಗಳಾಂಕಸ್ಥಳಾರೂಢೆಗೌರೀ
ನೀನೆನ್ನಂ ರಕ್ಷಿಪುದು ಸತತಂ ಸತ್ಯವಾಣೀಮೃಡಾನೀ ॥೧೪೫॥

ಇದು ವಿನಮದಮರವರಮಕುಟತಟಘಟಿತಮಣಿಗಣಮಹಾಪ್ರಭಾಪಟಲ
ಪರಿವೃತಪರಶಿವಶ್ರೀಪಾದನಖಚಂದ್ರಸಾಂದ್ರರುಚಿರುಂದ್ರ
ಚಂದ್ರಿಕಾಚಂಚಚ್ಚಕೋರಾಯಮಾನ
ಸರಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವವಿರಚಿತಮಪ್ಪ
ರಾಜಶೇಖರವಿಳಾಸ ವಿಪುಳಪ್ರಬಂಧದೊಳ್ ದ್ರಾವಿಡದೇಶಾದಿವರ್ಣನಂ
ದ್ವಿತೀಯಾಶ್ವಾಸಂ ಸಂಪೂರ್ಣಂ

ಅಂತು ಆಶ್ವಾಸ ೨ ಕ್ಕಂ ಪದಂಗಳು ೨೮೧ ಕ್ಕಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

---

೧ ಆ (ಕ) ೨ ರಾಜಾಹಯದಿಂ (ಕ, ಬ, ತಾ)

ತೃತೀಯಾಶ್ವಾಸಂ

ಶ್ರೀ ತುಹಿನಗಿರಿಸುತಾಕರ
ಜಾತಕ್ಷತಕಲಿತಕಂಧರಂ ನಿಜರುಚಿನಿ
ರ್ಧೂತತಯಮಿಹೃದಯತಮಸಂ
ಪ್ರೀತಿಯೊಳೆಮಗೀಗೆ ಸೌಖ್ಯಮಂ ಶಿವಲಿಂಗಂ ॥೧॥

ಹರಚರಣಾರವಿಂದಮಕರಂದಮಧುವ್ರತನೀಶಭಕ್ತ ಭ
ಕ್ತಿರಸಸುಧಾಬ್ಧಿ ಸೋಮನಭಿರಾಮಶಿವಸ್ತುತಿಪೂರ್ಣಕರ್ಣನೀ
ಶ್ವರಯಜನಾನುರಕ್ತನಭಿಯುಕ್ತಗುರೂಕ್ತಮತಾನುವರ್ತಿ ಶಂ
ಕರ[೧]ಪ[೧]ರಮಂತ್ರತಂತ್ರನಿಪುಣಾಗ್ರಣಿ ಭೂವರ[೨]ವಾರ[೨]ಶೇಖರಂ ॥೨॥

ಅಕಳಂಕಾನನಮಿಂದುವಂ ಗೆಲೆ ಧರಾ[೩]ಭಾರಾವಹಂ[೩] ಬಾಹುದಿ
ವ್ಯಕರಿಶ್ರೀಕರಮಂ ಕರಂ [೪]ಜಱಿಯೆ[೪] ಚಂಚದ್ರಶ್ಮಿವಿಸ್ಮೇರದೃ
ಷ್ಟಿಕಲಾಪೇಕ್ಷಣಮಬ್ಜಮಂ ಪೞಿಯೆ ಸೌಂದರ್ಯಾಂಗನೀಶಾಂಘ್ರಿ ಸೇ
ವಕನಾ ದರ್ಪಕನಂ ತಿರಸ್ಕರಿಸಿದಂ ಶ್ರೀಚೋೞಭೂಪಾ[೫]ಳ[೫]ಕಂ ॥೩॥

ಕುಳಭೂಭೃತ್ಪರಿಪಂಥಿ ಪಾವಕಮುಖಂ ಪಾಕಾಪಹಂ ಧ್ವಸ್ತದು
ರ್ಬಳನುದ್ವೀತಕುಲೀನವೃತ್ತಿ ಸತತಂ ಸಂಕ್ರಂದನಂ ಸದ್ಗುಣೋ
ಜ್ವಳಸತ್ಯೇಂದ್ರನರೇಂದ್ರರುಂದ್ರಯಶಮಂ ಗಂಧರ್ವರಿಂ ಕೇಳ್ದು ನಾ
ಣ್ದೞೆದಾಗಳ್ಗಡ ನಿದ್ರೆಗೆಯ್ದಪನೆ ಪಕ್ಷಸ್ಪಂದಮಂ ಮಾಳ್ಪನೇ ॥೪॥

॥ವ॥ ಅಂತುಮಲ್ಲದೆಯುಂ—

ಸುರನದಿಯಲ್ಲಿ ಮಿಂದು ಸುರಮಾರ್ಗಕಚೌಘಮನೆಯ್ದೆ ಬಿೞ್ಕೆ ವಿ
ಸ್ಫುರಿತತದುತ್ತ್ರತಾಪತಪನಾತಪ[೬]ದಾ[೬]ಱಿಸಿ ಸೂಡಿ ತಾರಕೋ
ತ್ಕರಕುಸುಮಂಗಳಂ ತಳೆದು ಚಂದ್ರಿಕೆಯೆಂಬ ವಿಶಾಲಚೇಲಮಂ
ಧರಣಿಪಕೀರ್ತಿಕಾಂತೆ ವಿಧುದರ್ಪಣಮಂ ನೆಱಿನಿಂದು ನಿಟ್ಟಿಪಳ್ ॥೫॥

---

೧ ವ (ಮೈ) ೨ ರಾಜ (ಮೂ) ೩ ಭಾಭಾರಮಂ (ಕ) ೪ ಜಯುಸೆ (ತಾ)
೫ ಲ (ಮೂ) ೬ ವಾ (ಮೂ)

ವದನಂ ಚಂದ್ರನಿಭಂ ವಿಲೋಚನಯುಗಂ ಪಂಕೇಜಪತ್ರಪ್ರಭಂ
ರದನಂ ವಜ್ರಸಮಂ ಪ್ರವಾಳಸದೃಶಂ ದಂತಚ್ಛದಂ ಮಂಗಳಾ
ಸ್ಪದನಾಸಾಮುಕುಳಂ ಸುಚಂಪಕಸುಮಪ್ರಖ್ಯಂ ಗಳಂ ಶಂಖಸಂ
ಪದಮುದ್ಯದ್ಭುಜಯುಗ್ಮಮೇ ಭುಜಗರಾಜಸ್ಪರ್ಧಿ ಭೂಪಾಳನಾ ॥೬॥

ರೂಪದು ಪುಷ್ಪಚಾಪನನುದಗ್ರಯಶಂ ಶಶಿಯಂ ಸುಭಾಗ್ಯಮಾ
ಶ್ರೀಪತಿಯಂ ಪ್ರತಾಪಮಿನನಂ ಘನಧೈರ್ಯಗುಣಂ ಧರಾಧ್ರಮಂ
ಕೋಪಮದಗ್ನಿಯಂ ಸು[೧]ರ[೧]ತರಂಗಿಣಿಯಂ ದಯೆ ಗೆಲ್ದುತೋಱದಾ
ಭೂಪನ ಖಡ್ಗಮೊಂದೆ ಸಲೆ ಗೆಲ್ದು[೨]ದೆ[೨] ವೈರಿನರಾಧಿನಾಥರಾ ॥೭॥

ತ್ವರಿತಗತಿಪ್ರಯುಕ್ತತುರಗೋತ್ಕರಸತ್ಖುರಘಟ್ಟನೋತ್ಥಿತೋ
[೩]ದ್ಧ[೩]ರರಜಮರ್ಕಮಂಡಲಮನಾವರಿಸುತ್ತಿರೆ ತತ್ಪ್ರತಾಪದಿಂ
ಪರಿಭವಮಾಂತ ಮಾಳ್ಕೆಯೊಳೆ ಮಾಸಿದ ದರ್ಪಣದಂತದೊಪ್ಪೆ ನಿ
ರ್ಜರಕರಿ ಪಾಂಶುಕೇಳಿಯನೊಡರ್ಚುಗುಮಲ್ಲಿ ಜಯಪ್ರಯಾಣದೊಳ್ ॥೮॥

ಕೃತಶುಂಭದ್ವೇಷೆ ಚಂಚತ್ತನುವಿಬುಧಪತಿಸ್ತುತ್ಯೆ ಕಲ್ಯಾಣಿ ತೇಜೋ
ನ್ವಿತೆ ದೃಪ್ಯಚ್ಚಂಡಮುಂಡಪ್ರಹರಿಣಿ ರಿಪುದು[೪]ರ್ಗ[೪]ಘ್ನಿ ಸೌವರ್ಣಕೋಶ
ಸ್ಥಿತೆ ರೌದ್ರಶ್ರೀಸಮಾಲಂಬಿತೆ ಶುಭಕರವಿಖ್ಯಾತೆ ರಕ್ತಾಂಗವಿಭ್ರಾ
ಜಿತೆ ವಿದ್ಯುದ್ಯೋತಿ ತದ್ಭೂಭುಜನಸಿಲತಿಕಾಕಾಳಿ ಕಣ್ಗೊಪ್ಪುತಿ[೫]ರ್ಪ[೫]ಳ್ ॥೯॥

॥ವ॥ ಮತ್ತಮಾ— [೬]ನೃಪೇಂದ್ರನು[೬]ಪೇಂದ್ರನಂತೆ ಸದಾನಂದಕರಾಜಿತನುಂ, ಕಮಳಭವನಂತೆ ಸಕಳವಿಬುಧಸಂಸೇವಿತಸಾರಸೋನ್ನತಪೀಠಾ[೭]ಸೀ[೭]ನನುಂ, ಸುರೇಂದ್ರನಂತೆ ಸಹಸ್ರನೇತ್ರಾಶ್ರಿತ ವಿಪುಳವಿಗ್ರಹಪರಬಲಾಪಹನುಂ, ವೀತಿಹೋತ್ರ-ನಂತೆ[೮]ವಿತತ[೮]ಕಾಂತಾರತಮೋಹ[೯]ನುಂ[೯], ದಂಡಧರನಂತೆ ಕುಜನತಾಪಕಾರಿಯುಂ, ರಾಕ್ಷಸೇಶ್ವರನಂತೆ ಸದಾನವವಿಭವನುಂ ಪಾಶಹಸ್ತನಂತೆ ಘನಸಿಂಧುರಾಜಿತಾ-[೧೦]ಪ್ರಮೇಯ[೧೦]ಬಲನುಂ, ಸಮೀರಣನಂತೆ [೧೧]ನಿಜಸತ್ವ[೧೧]ಸಮುದ್ಧೂತಪರಭೂಪ-ರಾಗನುಂ, ಧನೇಶ್ವರನಂತೆ ಮಹಾಪದ್ಮಾಶ್ರಿತಕೋಶನುಮೀಶಾನನಂತೆ ಚಂದ್ರೋಪಲ ಸಿತಾಂಗವೃಷೇಂದ್ರಗಮನನುಂ, [೧೨]ವಿರುದ್ಧ[೧೨]–ಕೃತಪದ್ಮಾನಂದನಾಗಿಯುಂ ಸಕಳ ಕಳಾನಿಧಿಯುಂ ಕುವಲಯಾಧಿಪನಾಗಿಯುಮನಂತರತ್ನನುಂ, ಪ್ರಬಳತೇಜಸ್ವಿ ಯಾಗಿಯುಮಂಧಕಾರಾತಿರುಚಿಯುಂ ಮಹಾಮಹಿಮರಾಶಿಯಾಗಿಯುಂ ಸುರಾಗನುಂ

---

೧ ತ (ಕ) ೨ ದು (ಮೂ) ವೆ (ಕ) ೩ ದ್ಧ (ಕ) ೪ ರ್ಗಾ (ಮೂ) ೫ ದರ್ಪ (ಬ, ಮೂ) ೬ ನೃಪಂ ಉ (ಮೂ) ೭ ಸೆ (ರಿ) ೮ ವಿತ (ತಾ) ೯ ನನುಂ (ಮೂ) ೧೦ ಪ್ರಿಯ (ಮೂ) ೧೧ ನಿಜತ್ವ (ಕ) ೧೨ ವಿರೋಧಾಭಾಸ (ಮೂ) ವಿರುದ (ರಿ)

ಸುಧರ್ಮಾಧಿಷ್ಠಿತನಾಗಿಯುಂ ಗೋತ್ರಪ್ರಿಯನುಂ, ಭೂಜನಕುಳಾಶ್ರಯನಾಗಿಯುಮವನಸ್ವಭಾವನುಂ, ಮಹಿತನಯಯುಕ್ತನಾಗಿಯುಮನವಗ್ರಹನುಮತನುವಿಭೂತಿವಿಳಸಿತನಾಗಿಯು[೧]ಮಶೇಷಾ[೧]ಭರಣಕರನೆನಿಸಿರ್ದನಂತುಮಲ್ಲ[೨]ದೆ[೨] —

ವನದಂತಿಂದ್ರನ ಲೋಕದಂತೆ ಸುಮನೋವಾಸಂ ಸುಧಾಧಾಮನಂ
ತಿನನಂತುತ್ಕಮಲಾಶ್ರಯಂ ಗಗನದಂತಬ್ಜಾಕ್ಷನಂತೈದೆ ದಿ
ವ್ಯನವೀನದ್ವಿಜರಾಜರಂಜಿತಸಭಂ ಸತ್ಕಾವ್ಯದಂತಬ್ಧಿಯಂ
ತೆ ನಿತಾಂತಂ ಸರಸಂ ವಿರಾಜಿಸಿದನಾ ರಾಜೇಂದ್ರಪಂಚಾನನಂ ॥೧೦॥

ಪತಿನಿದ್ರಾಸಕ್ತನಾದಂ ಜಡಧಿಯೊಳದಱಿಂ ಜಾಡ್ಯನಾದಂತೆ ಭಂಗಾ
ನ್ವಿತನಾದಂ ತಂದೆ ಕುಂಭೋದ್ಭವನಿನದು ವಲಂ ತಳ್ತ ಪಾಂಗಿಂದೆ ಪುತ್ರಂ
ಕೃತಶಂಭುದ್ವೇಷದಿಂ ಮೈಯಳಿದನದು ಮಧುಸ್ನೇಹದಿಂದಾದವೋಲೆಂ
ದು ತದುದ್ವ್ಯಾಮೋಹಮಂ ತಾಂ ತೊಱೆದು ಸಿರಿ ನರಾಧೀಶನಂ ಸಾರ್ದು-
ಬಾ[೩]ಳ್ದ[೩]ಳ್ ॥೧೧॥

॥ವ॥ ಇಂತೊಪ್ಪುವಿಳಾಕಾಂತನಂತಃಪುರಕಮಳದೊಳ್ಕಮಳೆಯಂತೆ ಕಮನೀಯತೆಯನಪ್ಪುಕೆಯ್ದು —

ಅಮೃತಮಯವಾಣಿ ಪರಿಲಸ
ದಮೃತಾಧರೆಯಮೃತಕಿರಣಮಂಡಲಮುಖಿ ತಾ
ನಮೃತಮತಿಯೆಂಬ ಪೆರ್ವೆಸ
ರಮರ್ದಿರೆ ತನ್ನೃಪಮಹಿಳೆ ಕರೆಮೆಸೆದಿ[೪]ರ್ದ[೪]ಳ್ ॥೧೨॥

ಲೋಕಾಲೋಕನಚಿತ್ರಪುತ್ರಿಕೆ ಲಸಲ್ಲಾವಣ್ಯಲಕ್ಷ್ಮೀಮುಖ
ಶ್ರೀಕಲ್ಯಾಣಯಶೋನಿಧಾನೆ ರತಿರತ್ನಜ್ಯೋತಿ ವಿಖ್ಯಾತಶೈ
ವಾಕೂಪಾರಶಶಾಂಕಮಂಡಳಿ ಕಳಾಸಸ್ಯಾವಳೀಧಾತ್ರಿ ಸು
ಶ್ಲೋಕಾನೇಕಗುಣಾಬ್ಜಪದ್ಮಿನಿ ವಿಳಾಸಂಬೆತ್ತು ಕಣ್ಗೊಪ್ಪಿದಳ್ ॥೧೩॥

ಕಳರವಜಿತಕೋಕಿಳೆ ಕೋ
ಮಳೆ ಮಳಯಜಗಂಧಿ ಗಂಧಗಜಪತಿಗತಿ ಮಂ
ಜುಳೆ ಮಧುಕರಕುಂತಳೆ ಮಂ
ಗಳಮಯೆ ಮಾಧುರ್ಯಗುಣಗಣೋಜ್ವಳೆ ಮೆಱೆದಳ್ ॥೧೪॥

---

೧ ಮಶೇಷ (ರಿ, ಬ, ತಾ); ಮಹಾಶೇಷ (ಮೈ) ೨ ದೆಯುಂ (ತಾ) ೩ ಳ್ವ (ಕ)
೪ ರ್ಪ(ರಿ), ರ್ಪ (ಕ)

ಪಾಱಿದ ತುಂಬಿಯಂ ಕಱಿಯೊಳೊಂದಿರದಿಂದುವನಿಂದುದರ್ಶನ
ಕ್ಕಾಱಡಿಗೊಳ್ವದಂಬುರುಹಮಂ ಬಿಱಿಸಾಗದ ರನ್ನಮಂ ಕಿಲಂ
ಜಾಱಿದ ಚಕ್ರಮಂ ಜಱಿದು ಬೀಳದ ನುಣ್ಮಳಲೊಟ್ಟಿಲಂ ಫಲಂ
ದೋಱಿದ ಬಾಳೆಯಂ ಬಲಿಯದೊಪ್ಪುವಶೋಕನವಪ್ರವಾಳಮಂ ॥೧೫॥

ಪಡೆಯದುದಂ ಮುಂ ಪಡೆದಂ
ಜಡಜಭವಂ ಜಡನೆನಿಪ್ಪ ನುಡಿಯ ತೊಡಂಕಂ
ಬಿಡಿಸಲೊಡರ್ಚಿದನೆಂದೆನೆ
ಮಡದಿಯ ದಿವ್ಯಾಂಗಮೇಂ ಮನಂಗೊಳಿಸಿದುದೋ ॥೧೬॥

॥ವ॥ ಅಂತಮಲ್ಲದೆಯುಂ—

ಸುಲಿಪಲ್ಕೆಂಬವಳಂಬೊಲೊಪ್ಪುವಧರಂ ಭೃಂಗಾಳಕಂ ನುಣ್ಣೊಸ
ಲ್ತಿಲಪುಷ್ಪೋಪಮನಾಸಿಕಂ ನಗೆಮೊಗಂ ನೀಳ್ದಕ್ಷಿಗಳ್ನುಣ್ಗೊರಲ್
ವಿಲಸದ್ದೋರ್ಲತೆ ಕೆಂದಳಂ ಘನಕುಚಂ ಗಂಭೀರನಾಭೀಲಸ
ದ್ವಲಯಂ ಪೂರ್ಣನಿತಂಬಮೊಳ್ದೊಡೆ ಪದಾಬ್ಜಂ ಮಂಜುಳಂ ಕಾಂತೆಯಾ ॥೧೭॥

ಕುಮುದನಯನಂ ಕುಂದಸ್ಮೇರಂ ಲಸದ್ಬಿಸಜಾನನಂ
ಸಮದಗಮನಂ ಸಾಮೋದಾಂಗಂ ಸುಧಾಮಧುರಾಧರಂ
ತಿಮಿರಚಿಕುರಂ ತೀಕ್ಷ್ಣಾಪಾಂಗಂ ಘನಂ ಜಘನಸ್ಥಳಂ
ಕಮಳಚರಣಂ ಕಣ್ಗೊಪ್ಪಿತ್ತಾ ಧರಾಧಿಪಕಾಂತೆಯಾ ॥೧೮॥

॥ವ॥ ಮತ್ತಂ—

ತನುಗಳವಟ್ಟರೂಪು ಘನರೂಪನಲಂಕರಿಪಚ್ಚ ಜೌವನಂ
ಮನಕಿನಿದಾದ ಜೌವನಕೆ ತಕ್ಕ ವಿಳಾಸತೆ [೧]ಸತ್ಸ್ವಿಳಾಸಮಂ
ಘನಮನೆ ಮಾಳ್ಪ ಜಾಣ್ಮೆ ಪೊಸಜಾಣ್ಮೆಯನುರ್ವಿಪ ಸದ್ಗುಣಂ ನೃಪಾರಿ
ಗನೆಗೆಸೆದತ್ತು ಸದ್ಗುಣಮನೇಳ್ಗೆಯೊಳೊಂದಿಪ ಶೈವಸಂಪದಂ ॥೧೯॥

ಕಲಹಂಸೀಯಾನೆ ಕಂಜಕ್ರಮೆ ಕುಮುದವಿಶಾಲಾಕ್ಷಿ ಸಚ್ಚಂದ್ರಿಕಾಮಂ
ಜುಲಲೀಲಾಪಾಂಗೆ ಕುಂದಸ್ಮಿತೆ ಘನಕಬರೀಭಾರೆ ಭೂಭೃನ್ನಿತಂಬೋ
ಜ್ವಲೆ ಸಿಂಹೀಮಧ್ಯೆ ಬಿಂಬಾಧರೆ ಶುಕವಿಲಸದ್ವಾಣಿ ತಾನಾದಪಾಂಗಿಂ
ದೆ ಲತಾತನ್ವಂಗಿ ಕಲ್ಪದ್ರುಮಸಮನೃಪನೊಳ್ಕೂಡಿ [೨]ಬಾಳ್ದ[೩]ತ್ತಮಿರ್ದಳ್ ॥೨೦॥

---

೧ ಡ (ತಾ) ೨ ನ (ಮೂ) ೩ ತ (ಬ ಮೂ ಕ)

ಗುಣಮನೊಳಕೈದು ತೋರ್ಕುಂ
ಮಣಿ ಮಹಿಯೊಳದೆಂಬುದುಚಿತಮವನೀಶಶಿರೋ
ಮಣಿಯನೊಳಕೈದುದಾ ಪೆ
ಣ್ಮಣಿಯ ಗುಣಂ ತಾನಿದೆಂಬುದೇನಚ್ಚರಿಯೋ ॥೨೧॥

॥ವ॥ ಮತ್ತಮಾ ಸತ್ಯೇಂದ್ರನರೇಂದ್ರಂಗೆ—

ಶಿವಲಿಂಗಾರ್ಚಕನಾರ್ಯಸಂಗತಿರತಂ ತೇಜೋನ್ವಿತಂ ರಾಜನೀ
ತಿವಿದಂ ವಿದ್ವದಮರ್ತ್ಯರತ್ನನಮಳಸ್ವಾಂತಂ ಪರಕ್ಷ್ಮಾಧವ
ಸ್ತವನೀಯಂ ಸಮದರ್ಶಿ ಸದ್ಗುಣಯುತಂ ಸತ್ಕೀರ್ತಿಯುಕ್ತಂ ನಯಾಂ
ಕವಚಸ್ಕಂ ಪತಿಮೋಹಿನಾಮದಿನಲಂಪಿಂ ಮಂತ್ರಿಪಂ[1]ರಂ[1]ಜಿಪಂ ॥೨೨॥

ಅರಸನ ಧರ್ಮಕೋಶಮೆರಡಂ ಪರಿವರ್ಧಿಪನೀಶಭಕ್ತರೈ
ತರೆ ಪೊಡಮಟ್ಟು ಪೂಜಿಪನರಾತಿನರಾಧಿಪರೆಲ್ಲರಂ ನಿಜೇ
ಶ್ವರಚರಣಾಬ್ಜಕಾನತರನಾಗಿಪನುತ್ತಮಮಂತ್ರ[2]ಶ[3]ಕ್ತಿವಿ
ಸ್ಫುರಿತನಿಜಪ್ರತಾಪದಿನವಂ ಪತಿಮೋಹಿಯೆನಿಪ್ಪ ಮಂತ್ರಿಪಂ ॥೨೩॥

ಪರರಾಜಶ್ರೀಕರಾಕರ್ಷಣಕರಣಕರಂ ಸೂರ್ಯಸೂತಂಬೊಲಂಭೋ
ಧರವಾಹಂಬೋಲ್ವಿಪಕ್ಷಕ್ಷಿತಿಭೃದುರುಬಲಧ್ವಂಸಿ ಪದ್ಮಂಬೊಲುದ್ಯ
ತ್ಪರಿಣದ್ಧಶ್ರೀಗುಣಾಂ[4]ಕಂ[4] ರಜನಿಕುವಲಯಂಬೋಲ್ವಲಂ ಸೋಮಪಾದಾ
ಬ್ಜರುಚಿಸ್ನಿಗ್ಧಂ ಸದಾಮೋದರಸರಸನುದಂಚತ್ಸಮುದ್ರಂಬೊಲಾತಂ ॥೨೪॥

ಆ ಮಂತ್ರಿಮೌಲಿಮಣಿಗೆ ಮ
ಹಾಮಹಿಮಮಹೀಶಮೌಲಿಮಣಿ ಚೋಳಧರಾ
ಭಾಮಾಧಿಪತಿ ಮನೋಜ್ಞ
ಶ್ರೀಮಹಿತಂ ಪೃಥುಳಭಾಗ್ಯಮಂ ಪದೆದಿತ್ತಂ ॥೨೫॥

॥ವ॥ ಅಂತಿತ್ತ ಸಂಪದಮನನವರತಮನುಭವಿಸುತ್ತಮಿರ್ದು—

ತನಯರ್ಕಳ್ತನಗಿಲ್ಲಮೆಂದು ಪಿರಿದಾಯಾಸಕ್ಕೆ ಪಕ್ಕಾದ ಕಾ
ಮಿನಿಯಂ ಸಂತ[4]ಮಿ[4]ಡು[5]ತ್ತೆ[5] ಚಿದ್ಘನಶಿವಾಚಾರ್ಯಾಂಘ್ರಿಯಂ ಪೊರ್ದಿ ಸೇ
ವನೆ[6]ಗೆ[6]ಯ್ಯುತ್ತವರಿತ್ತ ಮಂತ್ರಬಲದಿಂ ಸತ್ಪುತ್ರನಂ ಪೆತ್ತು ತ
ತ್ತನಯಾನಂದಿತನಿರ್ದನಾ ನೃಪಸಭಾವಾರಾಶಿಚಂದ್ರೋದಯಂ ॥೨೬॥

---

೧ ರಾ (ಅ) ೨ ಭ (ಅ) ೩ ಗಂ (ಮೂ) ೪ ವಿ (ಮೂ) ೫ ತ್ತ (ತಾ) ೬ ಗ (ಮೈ, ಮೂ, ಕ)

॥ವ॥ ಅಂತಾ ಪತಿಮೋಹಿಮಂತ್ರಿಪಂ ನಿಜಸುತಂಗೆ ಮಿತವಚನನಾಭಿಧಾನಮನಿ-
[೧]ಟ್ಟು[೧]ಕಟ್ಟ[೨]ಳ್ಕ[೨]ಱಿಂ ಸಲಪುತ್ತಮಿರ್ಪಿನಮೊಂದು ದಿವಸಂ—

ಹರಿಪೀಠಾಸೀನನುದ್ಯತ್ಸಚಿವನಿಚಯಸಂಯುಕ್ತನುದ್ದೀಪ್ತದಿವ್ಯಾ
ಭರಣಾಂಚತ್ಕಾಯನುರ್ವೀಶ್ವರನಿಕರನಿಷೇವ್ಯಾಂಘ್ರಿಪದ್ಮಂ ಪಯೋಭೃ
ದ್ಭರನಮ್ರಾಂಗಾಂಗನಾಚಾಲಿತಚಮರರುಹದ್ವಂದ್ವಪಾರ್ಶ್ವಂ ಜಯ[೩]ಸ್ವ
ಸ್ವ[೩]ರಭಾಸ್ವದ್ವಂದಿವೃಂದಸ್ತುತನವನಿಪನೊಡ್ಡೋಲಗಂಗೊಟ್ಟನಾಗಳ್ ॥೨೭॥

॥ವ॥ ಅಂತೊಡ್ಡೋಲಗಂಗೊಟ್ಟಿರ್ದು ನಿಜಾಮಾತ್ಯನಪ್ಪ ಪತಿಮೋಹಿಯಂ
ನಿರೀಕ್ಷಿಸಿ—

ಲೀಲೆಮಿಗೆ ನುಡಿದನಾ ನರ
ಪಾಲಂ ಪತಿಮೋಹಿಯೊಡನೆ ಪದಪಿಂ ಪರಮೋ
ಕ್ಷಾಲಂಬಮೆನಿಪ ಕಾಶಿಗೆ
ಕಾಲಾರಿಗೆ ಪೋಗಿ ಜ[೪]ಹ್ನ[೪]ಜಾಂಬುಗಳಿಂದಂ ॥೨೮॥

ತುಂಬಿ ಸಹಸ್ರಕುಂಭದಭಿಷೇಕಮನಾಗಿ[೫]ಪೆ[೫]ನಾಗಮೋಕ್ತಮಾ
ರ್ಗಂಬಿಡದಂಬಿಕಾಪತಿಗೆ ಮನ್ಮನದಿಷ್ಟಮಿದಲ್ತೆ ತಳ್ವದೇ
ಳೆಂಬುದುಮಿಂಬುವೆತ್ತ ಪಣೆಗತ್ತುಱಿಬೊಟ್ಟು ತದಂಘ್ರಿಪದ್ಮದೊ
ಳ್ತುಂ[೬]ಬಿಯಿ[೬]ದೆಂಬವೋಲಮರ್ದುಪತ್ತಿರೆ ತಾಂ ಪೊಡಮಟ್ಟು ಮಂತ್ರಿಪಂ ॥೨೯॥

ನುಡಿದನೆಲೆ ಜೀಯ ನಿಮ್ಮೊ
ಳ್ಮೃಡನೆಂದುಂ ನೆಲಸಿನಿಂದನದಱಿಂ ನೀಮಿ
ರ್ದೆಡೆ ಕಾಶಿಯಲ್ತೆ ಬೇಱಿ
ನ್ನೆಡೆಯಾಡಲದೇಕೆ ತರಿಪೆನಾ ನದಿಯುದ[೭]ಮಂ[೭] ॥೩೦॥

ಜವದಿಂದಿಲ್ಲಿಗೆನುತ್ತೆ ಧರ್ಮವತಿಗೇಳ್ನೊರ್ಗಾವುದಂಬೆತ್ತ ಶಾಂ
ಭವಲೀಲಾಗೃಹಮಾದ ಕಾಶಿಯ ನದೀತೋಯಂಗಳಂ ಮಂಗಳೋ
ತ್ಸವದಿಂ ಭೂವರವೃಂದಮಂ ನಿಲಿಸಿ ಸಾಲ್ಗೊಂಬಂತುಟೋರೋರ್ವಱಿಂ
ದವನಂದ್ಯೈದಿಸಿದಂ ಸುವರ್ಣಘಟದಿಂ ತಾನೆಂದೊಡೇಂ ಪೆರ್ಮೆಯೋ ॥೩೧॥

---

೧ ತ್ತು (ಮೂ) ೨ ಕ್ಕ (ಮೈ) ೩ ಶ್ವ; ಸ್ವ (ಮೂ) ಶ್ವ; ಶ್ವ (ಮೈ) ೪ ನ್ನು (ಮೂ, ಬ), ನ್ನ (ತಾ) ೫ ಸೆ (ಮೈ) ೬ ಬೆಯಿ (ಮೂ), ಬೆಯ (ತಾ) ೭ ಕಂ (ಮೂ), ಹಂ (ಕ), ಧಂ (ಬ)

॥ವ॥ ಅಂತು ಘನಕನಕಘಟಸಹಸ್ರದಿಂ ಭಾಗೀರಥೀಭದ್ರಮಯಾಂಬುವನ್ನೈದಿಸಲೊಡನೆ ಸಂಭ್ರಮಂ ಮಿಗೆ—

ತಳೆದಾನಂದಮನಾ ನರೇಂದ್ರತಿಳಕಂ ಪೂಜಾಗೃಹಂಬೊಕ್ಕು ನಿ
ರ್ಮಳಕಾಯಂ ಭಸಿತಾಕ್ಷಮಾಲಿಕೆಗಳಂ ತಾಳ್ದಂಗದೊಳ್ತನ್ನದೀ
ಜಳದಿಂ ಮಂತ್ರಯುತಂ ಶಿವಾಗಮವಿದಂ ತೂರ್ಯಸ್ವನಂ ಪೊಣ್ಮೆ ಮಂ
ಗಳಲಿಂಗಕ್ಕಭಿಷೇಕಮಂ ರಚಿಸಿದಂ ಮಾಹೇಶ್ವರಪ್ರಾವೃತಂ ॥೩೨॥

॥ವ॥ ಅನಂತರಂ[1]—

ಘನಘನಸಾರಕುಂಕುಮವಿಲೇಪನದಿಂ ಧವಳಾಕ್ಷತಂಗಳಿಂ
ವನರುಹಕೈರವಪ್ರಸರದಿಂ ನವಸೌರಭದಿವ್ಯಧೂಪದಿಂ
ದಿನರುಚಿದೀಪದಿಂದಿನಿದನಪ್ಪಿದ ಸಾರಸುಧಾನ್ನದಿಂ ಹಿಮಾಂ
ಕನಿಯುತವೀಟಿಕಾವಿತತಿಯಿಂ ನೃಪನರ್ಚಿಸಿದಂ ಕಪರ್ದಿಯಂ ॥೩೩॥

॥ವ॥ ಅಂತುಮಾ ರಾಜಮೌ[2]ಲಿ[2]ಮಣಿಗೆ ರಾಜದ್ರಾಜಮೌಲಿ ಮಣಿಮಣಿದು ರಾಜವದುಪಚಾರಮನೋಜೆ[3]ಮಿಗೆ[3]ರಚಿಸಿ—

ತನು ರೋಮಾಂಚಮನೊಂದೆ ಮುಂದೆ ನಯನಾನಂದಾಶ್ರುಗಳ್ಜಾಱೆ[3]ತೋ
ಱೆ ನವಂ ಗದ್ಗದಮುಣ್ಮೆ ಪೊಣ್ಮೆ ನಡುಕಂ ಘರ್ಮಾಂಬು ಕೈಗಣ್ಮೆ ಜಾ
ಣ್ಮೆ ನಿತಾಂತಂ ದೃಢಯೋಗರಾಗರಸದಿಂ ಚಿತ್ತಾಬ್ಧಿ ನೀರೇಱೆ ಮೀ
ಱೆ ನರೇಂದ್ರಂ ಶಿವಲಿಂಗಸಂಗರತಿಯಂ ತಳ್ತಪ್ಪಿದಂತೊಪ್ಪಿದಂ ॥೩೪॥

॥ವ॥ ಮತ್ತಮಾಗಳ್—

ನುತಿಗೆಯ್ದಂ ನುತರಾಜರಾಜನಗಜಾತಾಕಾಂತನಂ ಕಾಂತನಂ
ಸಿತ ಶೂಲಾಹತನಾಗನಾಗಭರಣ[4]ಭ್ರಾಜಿಷ್ಣುವಂ ಜಿಷ್ಣುವಂ[4]
ದಿತನಂ ವಿಶ್ರುತದೇವದೇವನನುದಾರಶ್ರೀದನಂ ಶ್ರೀದನಂ
ದಿತನಂ ದರ್ಪಿತ ಭಾವ ಭಾವಜತಮಃಶ್ರೀಸೋಮನಂ ಸೋಮನಂ ॥೩೫॥

॥ವ॥ ಅದೆಂತೆನೆ—

ಶ್ರೀಮತ್ಪೂರ್ಣಸುಖಾಬ್ಧಿ ನಿತ್ಯನಿರುಪಾ[5]ಧಿ[5]ಜ್ಯೋತಿ ವಿಖ್ಯಾತಮಾ
ಯಾಮೋಹಾಮಯದೂರ ಸಾರನಿಗಮಾಂತಾಭೇದ್ಯಸದ್ರೂಪ ಚಿ
ದ್ವ್ಯೋಮಾಕಾರ ಯಮೀಂದ್ರಮಾನಸಸಮುಲ್ಲಾಸಾಸ್ಪದಾವಾಸ ನಿ
ಷ್ಕಾಮಪ್ರೇಮಮಹೇಶ ರಕ್ಷಿಸೊಲವಿಂ ಶ್ರೀಶೈಲಜಾವಲ್ಲಭಾ ॥೩೬॥

---

೧ ರದಲ್ಲಿ (ಮೈ) ೨ ಳಿ (ಮೈ, ಮೂ) ೩ ಯಿಂ (ತಾ) ೪ ಭ್ರಾಜಿಷ್ಣುವಂ (ಕ)
೫ ಧಿಕ (ಮೈ), ತೀ (ತಾ)

ತಳೆದತ್ತಬ್ಜಭವಾಂಡನಾಮವಭವದ್ವಾಮಾಕ್ಷಿಸಂಜಾತಭೂ
ವೆಳ[1]ಯಂ ಮೇಣದನೋವಿ ಮಿತ್ರವೆಸರಂ ತಾಳ್ದಿರ್ದುದಾ ದಕ್ಷಿಣೋ
ಜ್ವಳನೇತ್ರಂ ಪಣೆಗಣ್ಣದಂ ದಹಿಸುಗುಂ ಕಾಲಾಗ್ನಿರೂಪಂ ನಿರಾ
ಕುಳಮಿಂತಾಗಿರೆ ನಿರ್ವಿಕಾರನೆನಿಪೈ ಶ್ರೀಶೈಲಜಾವಲ್ಲಭಾ ॥೩೭॥

ಪೆದೆವಿಲ್ಗಳ್ತಳೆದಿರ್ಕುಮೀ ಧರಣಿಯಂ ಸೂತಂ ಕರಂ ಪುಟ್ಟಿಪಂ
ಪದಪಿಂದೀ ಭುವನಂಗಳಂ ಪೊರೆಗುಮಾ[2]ಬಾ[2]ಣಂ ರಥಾಂಗಂಗಳಂ
ತದನುದ್ಯದ್ರುಚಿಯಿಂ ವಲಂ ಬೆಳಗುಗುಂ ನಿನ್ನಶ್ವಮಾ ಕರ್ಮಬ್ರ
ಹ್ಮದ ಪಾಂಗಂ ಸಲೆ ಬೋಧಿಕುಂ ಬುಧರ್ಗೆ ಕೇಳ್ ಶ್ರೀಶೈಲಜಾವಲ್ಲಭಾ ॥೩೮॥

ಪರಿಮುಖ್ಯಾಮರರಂ ಪಡ[3]ಲ್ವ[3]ಡಿಸಿ ಲೋಕಾನೀಕಮುಂ ಪರ್ಬಿ ಪ
ರ್ಬಿರದೇಳ್ತರ್ಪವೊಲೊತ್ತಿ ಸುತ್ತಿ ಪರಿತರ್ಪತ್ಯುಗ್ರಹಾಲಾಹಲೋ
ತ್ಕರಮಂ ತಾಳದೊಡೋವೊ ದೇವಸತಿಯರ್ ಸೀಮಂತಸಿಂಧೂರರಾ
ಗರಜಶ್ರೀಯನದೆಂತು ತಾಳ್ದಪರೊ ಪೇಳ್ ಶ್ರೀಶೈಲಜಾವಲ್ಲಭಾ ॥೩೯॥

ಶಿವ ನಿ[4]ನ್ನಂ[4]ಘ್ರಿಯನಾವನೊರ್ಮೆ ನೆನೆವಂ ಸದ್ಭಕ್ತಿಯಿಂದಾತನಂ
ದಿವಿಜರ್ಕಳ್ನೆನೆವರ್ ತ್ವದಂಘ್ರಿಗೆಱಪಂ ತಾನಾವನಾತಂಗೆ ಯೋ
ಗಿವರರ್ ತಾವೆಱಪರ್ಭವನ್ನುತಿಯನಾವಂ ಮಾಳ್ಪನಾ ಧನ್ಯನಂ
ಸವಿವಾತಿಂ ನುತಿಗೆಯ್ವುದಾಗಮಚಯಂ ಶ್ರೀಶೈಲಜಾವಲ್ಲಭಾ ॥೪೦॥

ನಿಗಮಂಗಳ್ಗೆ ಕಾಣಲಾರ್ತವೆ ಭವತ್ಪಾದಾಬ್ಜಮಂ ನಿನ್ನನೇಂ
ಪೊಗಳಲ್ ಶಕ್ತರೆ ವಿಷ್ಣುಮುಖ್ಯವಿಬುಧಯೋಗೀಂದ್ರರುಂ ಭಾವದೃ
ಷ್ಟಿಗಳಿಂ ಲಕ್ಷಿಸಲೇಂ ಸಮರ್ಥರೆ ಭವದ್ಭಕ್ತರ್ಕ[5]ಳೇ[5]ಕಾಣಲುಂ
ಪೊಗಳಲ್ಲಕ್ಷಿಸಲುಂ ವಲಂ ನೆರೆದಪರ್ ಶ್ರೀಶೈಲಜಾವಲ್ಲಭಾ ॥೪೧॥

ಭವದೊಳ್ಬರ್ಪಮರರ್ಕಳಂ ಭವವಿಮುಕ್ತ್ಯರ್ಥಂ ಶರಣ್ಬೊಕ್ಕೊಡೇ
ನವರೇನೀವರೆ ಮುಕ್ತಿಯಂ ಭವಹರಂ ನೀನಲ್ಲದಿಷ್ಟಾರ್ಥಮಂ
ತವೆ ಮಾಡಲ್ಸುರಪಾದಪಂ ನೆಱೆಗುಮೀ ಬರ್ಬೂರವೃಕ್ಷಂಗಳೀ
ವವೆ ಕೇಳಂತಿರೆ ನೀನೆ ಮೋಕ್ಷವರದಂ ಶ್ರೀಶೈಲಜಾವಲ್ಲಭಾ ॥೪೨॥

---

೧ ಳೆ (ಮೈ, ಕ, ಮೂ) ೨ ಬ (ತಾ) ೩ ಲ್ವಿ (ಮೂ) ೪ ಮ್ಮಾಂ (ಮೂ, ತಾ)
೫ ಳೇಂ (ಸ್ವೀ. ಪಾ)

[1]ಸು[1]ಲಭಂ ದೇವ ಭವತ್ಪದಾಬ್ಜಭಜನಾಸಕ್ತರ್ಗೆ ಧರ್ಮಾರ್ಥಕಾ
[2]ಮಲ[2]ಸ[3]ನ್ಮು[4]ಕ್ತಿಗಳೆಂಬುದಂ ತಿಳಿದುಮೆನ್ನೀ ಮಾನಸಂ ನಿನ್ನ ನಿ
ಶ್ಚಲಭಕ್ತಿಸ್ಪೃಹೆಯಾನದಿರ್ಪ ತೆಱ[5]ನೇಂ[6] ಪೇಳ್ಮೋಹಮೋ ತನ್ನ ಮಂ
ಜುಲಪುತ್ರಾಂಗಮನಿಕ್ಕಿದೊಂದು ಮುಳಿಸೋ ಶ್ರೀಶೈಲಜಾವಲ್ಲಭಾ ॥೪೩॥

ಕರದೊಳ್ತಾಳ್ದ ನಿಜೇಷ್ಟಲಿಂಗದೆ ಮನಂ ಪಂಚಾಕ್ಷರಂ ವಕ್ತ್ರದೊ
ಳ್ಕೊರಲೊಳ್ತಳ್ತಶಿವಾಕ್ಷಿಮಾಲೆ ಭಸಿತಾಲೇಪಂ ಲಲಾಟಾಗ್ರದೊಳ್
ಗುರುಪಾದಾಂಬುಜಸೇವೆ ಕಾಯದೊಳೊಡಂಬಟ್ಟಿರ್ಪ ಭಕ್ತಂಗದಾ
ರ್ಸರಿ ನೀನಾತನಧೀನನಲ್ತೆ ಸತತಂ ಶ್ರೀಶೈಲಜಾವಲ್ಲಭಾ ॥೪೪॥

॥ವ॥ ಅಂತು ಪೊಗಳ್ದು ಪೊಡಮಟ್ಟು ಮಗುಳ್ದು ಲಿಂಗಪೂಜೆಯಂ ಸಾಂಗಮೆನೆ ರಚಿಸಿದನಂತರಂ—

ಧನಕನಕವಸನಮಣಿಭರ
ಣನಿವಹ ನವಗಂಧಮಾಲ್ಯವೀಟಿಕೆಗಳಿನಂ
ದನುನಯದಿಂದರ್ಚಿಸಿದಂ
ಜನನಾಮಯಹರಣಶರಣಚರಣಾಂಬುಜಮಂ ॥೪೫॥

॥ವ॥ ಅಂತರ್ಚಿಸಿ ಪೊಗಳ್ದು ಮಗುಳ್ದೆಱಗಿ ಕೈಂಕರ್ಯಮನಾಂತವರ ಕಾರುಣ್ಯಮಂ ಪಡೆದರಸನನವರತಮಿಂತು ಪೊ[5]ಳ್ತು[5]ಗಳೆವು[6]ತ್ತಮಿ[6]ರ್ದನನ್ನೆವರಮಂತ ಪುರದೊಳಮೃತಮತಿಮಹಾದೇವಿಯೊಂದು ಪುಣ್ಯವಾಸರದ ಸುಪ್ರಭಾತಸಮಯದೊಳ್ ಶಿವಲಿಂಗಪೂಜಾನಂತರಂ ಪುರಾಣಮಂ ಕೇಳ್ವಲ್ಲಿ ಮಾರ್ಕಂಡೇಯಚರಿತಂ ಬರೆವರೆ ತದ್ಬಾಲಲೀಲೆಯುಮನಾಕರ್ಣಿಸಿ ತನಗೆ ತನಯನಿಲ್ಲಪ್ಪುದಱಿಂ ನೆನೆದು ಬಿಸುಸುಯ್ದು ಕೆಲದೊಳಿರ್ದ ಕೆಳದಿಯೊಡನೆಯಿಂತೆಂದಳ್—

ಎಳವರೆಯದೊಳೆಳೆಯರ್ಕಳ
ನೆಳಸುತೆ ನಳಿದೋಳ್ಗಳಿಂದೆ ಬಿಗಿದಪ್ಪಿ ಮನಂ
ಗೊಳೆ ತಳ್ತು ನೋಡಿ ಮುದ್ದಿಪ
ವಿಳಾಸಮೊಂದಕ್ಕೆ ನೋಂತುದಿಲ್ಲಾಂ ಕೆಳದೀ ॥೪೬॥

೧ ಶು (ಬ) ೨ ಮಮ (ಮೈ, ಕ) ೩ ದ್ಮು (ಬ) ೪ ನೋ (ಮೂ) ೫ ತ್ತು (ಮೂ) ೬ ತ್ತಿ (ಮೂ)

ಶಿವಭಕ್ತಿಯಿಲ್ಲದನ ಬಾ
ಳ್ಕವಿತ್ವ[1]ಮಿ[1]ಲ್ಲದನ ಜಾಣ್ಮೆ ಕಳೆಯಿಲ್ಲದ ಪೆ
ಣ್ಜವಮಿಲ್ಲದಶ್ವಮುಂ ತನು
ಭವನಿಲ್ಲದ ಭಾಗ್ಯಮೆಂತುಮೇಂ ಮೆಱೆದಪು[2]ದೇ[2] ॥೪೭॥

ಅರಳೆಲೆ ಮಾಗಾಯ್ಕುಣಿವು
ತ್ತಿರೆ ನುಣ್ಣೊಸಲೊಳ್ಕದಂಪಿನೊಳ್ಮೃದುಹಾಸ
ಸ್ಫುರಿತಂ [3]ಮೊ[3]ಳೆವಲ್ಮಿನುಗು
ತ್ತಿರೆ ಪರಿದಾಡುವ ಕುಮಾರನೆಂದಾದಪನೋ ॥೪೮॥

ಕರತಳದಿಂದೆನ್ನಯ ನು
ಣ್ಬೆರಲಂ ಪಿಡಿದೇಳ್ದು ಜನನಿ ನಡೆದಪೆನೆನುತೊಂ
ದೆರಡಡಿಯನಿಟ್ಟು ನಿಱಿಯಂ
ಭರದಿಂ ತಳ್ಕೈಪ ಮಗನನೆಂದೀಕ್ಷಿಪೆನೋ ॥೪೯॥

ಅರ[4]ಸ[4]ನ ಪಿಂದೆಸೆಯೊಳ್ಮೆ
ಗರೆದೆಲ್ಲಿರ್ದಪೆನೊ ಜನನಿ ಪೇಳೆನುತೊಲವಿಂ
ಪರಿತಂದೆಳೆನಗೆ ಮಿನುಗು
ತ್ತಿರೆ ಕುವರಂ ಕೊರಲನೆಂದು ಬಿಗಿ[5]ಯ[5]ಪ್ಪುವನೋ ॥೫೦॥

ಮಗನಂ ತಳ್ತಮರ್ದಪ್ಪಿ ನೋಡಿ ಮೊಗಮಂ ಮುಂಡಾಡಿ ನೇಹಂ ಮನಂ
ಬುಗೆ ಮಾತಾಡಿಸಿ ಲಲ್ಲೆಗೆಯ್ದು ನಗಿಸುತ್ತಿರ್ಕೈಗಳಂ ಸಾರ್ಚಿ ಮಂ
[6]ಡೆ[6]ಗೆ ಬಟ್ಟಾಡಿ ಕೆಲಕ್ಕೆ ಚಿಮ್ಮಿ ಮೊಲೆವಾಲಂ ಮತ್ತೆ ಬಾಯ್ಗೂಡಿ ಮೆ
ಲ್ಲ[7]ಗೆ[7]ತೊಟ್ಟಿಲ್ಗಿರದಿಟ್ಟು ತೂಗುವೆಳೆವೆಣ್ಣೇಂ ನೋಂಪಿಯಂ ನೋಂತಳೋ ॥೫೧॥

ಪಡಿನೆಳಲಂ ಮಣಿಕುಟ್ಟಿಮ
ದೆಡೆಯೊಳ್ಕಡೆನೋಡಿನೋಡಿ ದಾಯೆನುತಂ ಕೈ
ದುಡುಕಲದು ತುಡುಕೆ ನಗೆ ನಗೆ
ಕಡುಬಿನದಂಬಡೆವ ಕಂದನೆಂದಾದಪನೋ ॥೫೨॥

---

೧ ವಿ (ಬ) ೨ ದೋ (ರ) ೩ ಪೊ (ರ) ೪ ಸಿ (ಬ) ೫ ದ (ಮೈ) ೬ ಡಿ (ಮೂ, ಬ)
೭ ನೆ (ಮೂ, ತಾ)

[1]ಇಂ[1]ತು ಪಲುಂಬಿ ಪಂಬಲಿಸಿ ಭೂಷಣಮಂ ತೆಗೆದಿಟ್ಟು ಚಿತ್ತದೊ
ಳ್ಚಿಂತೆಯನಾಂತು ಕಾಂತೆ ಬಿಸುಸು[2]ಯ್ಯೆ[2]ಲರಿಂ ತನುವಲ್ಲಿ ಕಂದಿತೆಂ
ಬಂತಿರೆ ತಮ್ಮೊಳಾಳಿಯರಿದೇನೆನುತಳ್ಕಿರೆ ತಳ್ವದೈದಿದೇ
ಕಾಂತನಿಕೇತನಕ್ಕೆ ಧರಣೀಪತಿ ಬಂದೊಳಪೊಕ್ಕು ನೋಡಿದಂ ॥೫೩॥

ಎಡಗೈಯಿಂದೊತ್ತಿ ಶಯ್ಯಾತಳಮನಿನಿಸು ಜಾಱಿರ್ದುದಂ ಮೇಲುದಂ ಪೊಱ
ಗಡಗಂ ಗ[3]ಳ್ಕಿ[3]ಂದು ಶಬ್ದಂಗುಡೆ ಬಲದ ಕರಾಂಭೋಜದಿಂದೇಱನೂಂಕು
ತ್ತೊಡನುತ್ತುಂಗಸ್ತನಾಗ್ರಕ್ಕಿಳಿವ ಮುಡಿಯನಾಂತೌಂಕುತಂ ಕಂಠದಿಂ ಮುಂ
ಗಡೆಯೊಳ್ಕಂಡೇಳ್ವಳಂ ಕೈವಿಡಿದವಳೊಡನರ್ಧಾಸನಂಗೊಂಡನಾಗಳ್ ॥೫೪॥

॥ವ॥ ಅಂತು ಕು[4]ಳ್ಳಿ[4]ರ್ದ ಕೂರ್ಮೆಯಿಂ[5]ನಿರೀ[5]ಕ್ಷಿಸಿ—

ಮೃಗಮದಗಂಧಿ ನಿನ್ನ ಮೊಗಮೆಂಬ ಸುಧಾಕರಬಿಂಬಮಿಂದು ಬೆ
ಳ್ನಗೆತಿಳಿಜೊನ್ನಮಂ ತೊಱೆದುದಿಂದುಟಿಚಂದಳಿರಿರ್ಪುಗುಂದಿದ
ತ್ತಗಲದ ರಾಗಸಾ[6]ಗ[6]ರದ ಪೆರ್ಚುಗೆ ತ[7]ಗಿ[7]ದುದಕ್ಷಿಕೈರವಂ
ಮಿಗೆ ಕೊರಗಿತ್ತು ಚಿತ್ತ ಪರಿತಾಪಮಹಾ[8]ತ[8]ಪದಿಂ ಮನೋರಮೇ ॥೫೫॥

॥ವ॥ ಅಂತುಮಲ್ಲದೆಯುಂ—

ಕರಕಮಳಂ ಕಪೋಳಶಶಿಬಿಂಬಮನಪ್ಪಿದುದೇಕೆ ನಿನ್ನ ಭಾ
ಸುರನಯನೋತ್ಪಳೋದ್ಗಳಿತ ಕಜ್ಜಳವಜ್ಜಳಬಿಂದುವೃಂದ ಷ
ಟ್ಚರಣಗಣಂ [9]ಕುಚಾಬ್ಜಮುಕುಳಕ್ಕೆ[9]ಱಗಿರ್ದಪುದೇಕೆ ಸುಯ್ಯೆಲ
ರ್ಕೊರಗಿಪುದೇಕೆ ಪೇಳಧರಪಲ್ಲವಮಂ ತರಳಾಯತೇಕ್ಷಣೇ ॥೫೬॥

ಅರುಣಾಂಬುಜನಾಳಮನಾ
ವರಿಸಿದ ನವಫೇನಪಿಂಡಮಾಲೆಯ ಚೆಲ್ವಂ
ಪರಿಭವಿಸಿ ಮೆಱೆದುದೇಕಿ-
ಲ್ಲರಸಿ ಪದಾಗ್ರದೊಳೆ ಮೌಕ್ತಿಕದ ಪದಕಟಕಂ ॥೫೭॥

೧ ಅಂ (ಮೂ) ೨ ಯ್ಯ (ರ) ೩ ಳ್ಕೆ (ತಾ, ರ) ೪ ಳ್ಳೆ (ಬ) ೫ ದೀ (ಬ) ೬ ದ (ಬ) ೭ ಗ್ಗಿ (ಬ, ಮೂ) ೮ ತಾ (ಮೂ) ೯ ಕುಚಾಬ್ಜಕ್ಕೆ ಮುಕುಳಕ್ಕೆ (ಮೈ), ಕುಚಾಬ್ಜ ಮುಕುಳಕ್ಕೆ (ಮೂ)

ಗುರುಜಘನಬಿಂಬಶಂಬರ
ಹರ ಕರಿವರಕುಂಭಮಿಂಬುವಡೆದುದಿದಿಲ್ಲೇ
ಕರವಿಂದಾನನೆ ಮಣಿಗಣ
ಸುರುಚಿರತರಮೇಖ[೧]ಲಾ[೧]ಶಿರೋಮಾಲಿಕೆ[೨]ಯಿಂ[೨] ॥೫೮॥

ಅಲರ್ಗಣೆಯನರ್ಚಿಸಿದ ವಿಚ
ಕಿಲಮಾಲೆಯನಾಂತ ಪೂರ್ಣಕುಂ[೩]ಭದ[೩] ಚೆಲ್ವಂ
ಗೆಲೆವಂದುದಿಲ್ಲ ಕುಚಮಂ
ಡಲಮಿದು ತರಳಾಕ್ಷಿ ಮುತ್ತಿನೇಕಾವಳಿ[೪]ಯಿಂ[೪] ॥೫೯॥

ಮದನಮಣಿದರ್ಪಣದ ಪದ
ಪೊದವಿದ ಕದಪಿದು ಪೊದಳ್ದ ಮಕರಿಕೆಯಂ ತಾ
ಳದೆ [೫]ಕಜ಼ುವೆರಸದ[೫] ಶಶಿಬಿಂ
ಬದ ಪೋಲ್ವೆಯನಾಳ್ದುದೇಕೆ ಕಮಳದಳಾಕ್ಷೀ ॥೬೦॥

ವದನಾಂಬುಜಲಕ್ಷ್ಮಿಯನ
ಪ್ಪಿದ ವೇಣ್ಯಸಿತಾಹಿಭೀತಬಾಲೇಂದುವಿದೆಂ
ಬುದನೆನಿಸದೇಕೆ ನೊಸಲೊ
ಳ್ಸದಮಳತರಭಸಿತಲಸಿತತಿಲಕಂ ರಮಣೀ ॥೬೧॥

[೬]ಮೊಗ[೭]ಸಸಿ[೭]ನಯನಾಂಭೋ[೬]ರುಹ
ಯುಗಳಮನಮರ್ದಪ್ಪಿ ನಿಂದುದೆಂಬೀ ಪುರುಡಿಂ
ಜಗುಳ್ದಂತೆ ತೋರ್ಪುದಿಲ್ಲೆಲೆ
ಮೃಗಾಕ್ಷಿ ಪೇಳೇಕೆ ಕ[೮]ರ್ಣ[೮]ಪೂರದ ನೈದಿಲ್ ॥೬೨॥

ಕಾರಿರುಳೊಳಮರ್ದ ತಾರಗೆ
ಗೋರಗೆಯೆನಿಸಿರ್ದುದಿಲ್ಲ[೯]ರಲ್[೯]ಮುಡಿಯೊಳಿದೇಂ
ಕಾರಣಮು[೧೦]ಜು[೧೦]ಂಪೆನ್ನೊಳ್ಮದ
ವಾರಣಮೃದುಯಾನೆ ನಿನ್ನ ಮನದುಮ್ಮಳಮಂ ॥೬೩॥

---

೧ ಲ (ಮೂ) ೨ ಯಾ (ಮೂ) ೩ ಭಂ (ಮೂ) ೪ ಯಾ (ಮೂ) ೫ ಕಜ಼ವೆರೆವೆರಸದ (ತಾ) ೬ ಮೊಗಸಸಿಯಾಂಬುರುಹ (ಬ) ೭ ಶಶಿ (ಮೂ) ೮ ರ್ನ (ಬ) ೯ ಲರ್ (ತಾ, ಬ), ರಳ್ (ಮೂ), ದಿಲ್ (ವೈ) ೧೦ ಜು (ತಾ)

ಮದಕೋಕಿಳಕಳರವೆ ಸಂ
ಮದಕರಮೃದುವಾಣಿ ನಿನ್ನ ಮೊಗದೊಳ್ಪೊರಪೊ
ಣ್ಮದೊಡಳಿರವಮಿಲ್ಲದ ಪ
ದ್ಮದೊಳೆಣೆವಂದೆನಗೆ ಮಾಳ್ಪುದಿದು ಮನದಳಲಂ ॥೬೪॥

ಆರಿಂದಾದುದು ಚಿಂತಾ
ಭಾರಂ ಶಶಿವದನೆ ಪೇಳ್ವುದೆನ್ನೊಡನೆಂದಾ
ಭೂರಮಣಂ ಬೆಸಗೊಂಳೆಂಕರ
ವಾರಿಜಮಂ ಮುಗಿದು ಮಧುರಭಾಷಿಣಿ ನುಡಿದಳ್ ॥೬೫॥

ಅವಧರಿಪುದಖಿಳಧರಣೀ
ಧವನಿವಹಕಿರೀಟಕೋಟಿಮಣಿಗಣಘೃಣಿಸಂ
ಭವ ನವರವಿರುಚಿರುಚಿರಾಂ
ಘ್ರಿವನೇರುಹಯುಗಳ ದೇವ ದೇವಿಯರಿರವಂ ॥೬೬॥

ವಾಸ್ತವಪುರಾಣದೊಳ್ಪೃಥು
ಳಸ್ತನಿ ಕೇಳ್ದಳ್ಮೃಕಂಡುಜೋಪಾಖ್ಯಾನ
ನ್ಯಸ್ತಮೃಕಂಡುಜಲೀಲಾ
ವಿಸ್ತಾರಮನೆಲ್ಲಮಂ ವಸುಂಧರೆಯರಸಾ ॥೬೭॥

ತನಗಿಲ್ಲಪ್ಪುದಱಿಂದಂ
ತನಯರ್ಬಿಸುಸುಯ್ದು ಬಿಸುಟು ಮಣಿಭರಣಮನೀ
ವನಿತೆ ವಸಂತಂ ತೊಲಗಿದ
ವನಲತೆಯೆನೆ ಬಿನ್ನನಿರ್ಪಳೆಲೆ ಧರಣೀಶಾ ॥೬೮॥

ತನುವಲ್ಲಿಗೆ ಫಳಮಾವುದೊ
ತನಯಂ ತತ್ತನಯನಿಲ್ಲದಿರೆ ವಿಫಳಂ ಕೇ
ಳ್ತನುವಲ್ಲಿಯದಱಿನೀ ಮಾ
ನಿನಿಗೆ ಕರಂ ಚಿಂತೆ ನೆಗಳ್ದುದವನಿಪತಿಳಕಾ ॥೬೯॥

---

೧ ೪ (ಕ) ೨ ೦ (೦)

ದೇವಿಯರ ಚಿತ್ತದನುವಿದು
ದೇವರ್ಕಿತ್ತುವಿಪುದೆಂದು ನುಡಿದಳ ನುಡಿಯಂ
ಭಾವಿಸಿ ಕಾಂತೆಯ ಚಿಂತೆಯ
ನಾ ವಿಭು ತಾಂ ಪೆರ್ಚುಗೊಂಡು ತಳೆದಿಂತೆಂದಂ ॥೭೦॥

ಶಿವಮತವಾರ್ಧಿವರ್ಧನಶಶಾಂಕನನಂಗಜಮರ್ದನಾರ್ಚನೋ
ತ್ಸವಸವನಪ್ರದೀಕ್ಷಿತನನಬ್ಜಕಳಾಧರಭಕ್ತಬೃಂದಬಾಂ
ಧವನನುಮೇಶಲಾಂಛನಧರಾಂಘ್ರಿಸರೋರುಹಭಕ್ತಿಯುಕ್ತನಂ
ಕುವರನನೀಗಳೆನ್ನ ಬಗೆಯುಂ ಬಯಸಿರ್ದಪುದಂಬುಜಾನನೇ ॥೭೧॥

॥ವ॥ ಎಂದು ನುಡಿದಿ[1]ನಿ[1]ಯನನುಕೂಲವಚನಮಂ ಕೇ[2]ಳ್ದು[2]—

ವದನಸ್ಥಿತವಾಣಿಯ ಕ
ಣ್ಗದಿರು[3]ರ್ವಿ[3]ದುದೆಂಬ ಭಾವಮಂ ಬೀಱಿ [4]ಲಸ[4]
ದ್ರುದನದ್ಯುತಿ ಪಸರಿಸೆ ತ
ತ್ಸುದತಿ ಮೃದೂಕ್ತಿಯೊಳೆ ಕಾಂತನೊಡನಿಂತೆಂದಳ್ ॥೭೨॥

ಪರರಾಜಾಶೇಷತೇಜಸ್ಥಿತಿ ಕೆಡೆ ಕಮಳಾಮೋದಮಿಂಬಾಗೆ ಧಾತ್ರೀ
ಪರಿತೋಷಂ ಪೆರ್ಚೆ ಪೂರ್ವಕ್ಷಿತಿಭೃದಧಿಕರಾಗಂ ಸಮಂತಾಗೆ ಸನ್ಮಾ
ರ್ಗರುಚಿಪ್ರಸ್ಫೂರ್ತಿ ಚೆಲ್ವಾಗಿರೆ ಕರಮುದಯಂಗೊಂಬ ಬಾಲಾರ್ಕನಂ ಮ
ದ್ವರಚೇತಃಪದ್ಮಮೀಗಳ್ಬಯಸಿದಪುದು ಕೇಳ್ಭೂಮಿಪಾಲಾವತಂಸಾ ॥೭೩॥

ಗಿಳಿವಱಿ ಮೆಱೆಯುದ ನಂದನ
ಮಳಿಶಿಶು ವಿಹರಿಸದ ಪೂಗೊಳಂ ಕಳರವದಿಂ
ದೆಳೆಯಂಚೆಯಡಿಯಿಡದ ತ
ಣ್ಬುಳಿಲರ್ಭಕನಾಡದಂಗಳಂ ಮಂಜುಳಮೇ ॥೭೪॥

ಎನೆ ನೃಪನೆಂದಂ ಕೇಳಂ
ಗನೆ ನೀನೆಂದಂತೆ ತನಯನಂ ಪಡೆಯದೆ ಬಾ
[5]ಳ್ವ[5]ನ ಸಂಸಾರಮಸಾರಂ
ತೆನೆಯಿಲ್ಲದ [6]ನವ[6]ಪಲಾಲದಂತಿರೆ ಧರೆಯೊಳ್ ॥೭೫॥

---

೧ ನೆ (ಮೈ, ಕ) ೨ ಳ್ದೊ (ಮೈ) ೩ ಬಿ (ಕ) ೪ ಸೆಲಸ (ಕ) ೫ ಳ (ಕ)
೬ ವನ (ಮೂ, ಮೈ)

ಸುರತರರುವಿರೆ ಸಿರಿವಡೆವುದು
ಪಿರಿದೆ ಸರೋಜಾಕ್ಷಿ ಮದ್ಗುರೂತ್ತಮನೊಲ್ದೊ
ಪ್ಪಿರೆ ತತ್ಪ್ರಸಾದಬಲದಿಂ
ಪಿರಿದು ಮದಿಷ್ಟಮನೆ ಪಡೆಯಲಕ್ಕುಮಮೋಘಂ ॥೭೬॥

ಅದಱಿಂ ಚಿಂತೆಯನುಳಿವುದು
ಸುದತಿ ಸುಧಾಕರಧರಾಂಘ್ರಿಯಂ ಪೂಜಿಪುದ
ಭ್ಯುದಯಕರಧರ್ಮಮಂ ಮಾ
ಳ್ಪುದು ದೊಱೆದಪುದಲ್ತೆ ಭವದಭೀಪ್ಸಿತಮಬಲೇ[೧] ॥೭೭॥

ಇಂತೆಂದು ತಿಳಿಪೆ ಧರಣೀ
ಕಾಂತಂ ಬಗೆವಿಡಿದು ಚಿಂತೆಯಂ ತಾ[೨]ನುಳಿದ
ಳ್ಕಾಂತೆ ಬಿಡದಾಪ್ತವಚನದಿ
ನೇಂ ತಿಳಿವೊಡೆ ಚಿಂತೆಗೌಷಧಂ ಪೆಱತುಂಟೇ ॥೭೮॥

॥ವ॥ ಅನಿತಱೊಳವರ ಮನೋರಥಮಂ ನಿಮಿರ್ಚಲೆಂದು ಸೈಪು ಸಾಕಾರತೆ ವೆತ್ತು ಬ[೩]ರ್ಪಂ[೪]ತೆ—

ಘನಮಹಿಮರ್ಸುವೃತ್ತರಭವಾರ್ಚಕರುಜ್ವಲಲಿಂಗಸಂಗಸ
ಜ್ಜನವಿನುತರ್ಶಿವಾಗಮವಿಶಾರದರಾರ್ಯರುದಾತ್ತಕೀರ್ತಿಮಂ
ಡನರುಚಿತಜ್ಞರಪ್ರತಿಮವೇದಶಿರೋಮಣಿ ಪಂಚವರ್ಣಚಿಂ
ತನನಿಜಚಿತ್ತಚಿದ್ಘನಶಿವಾರ್ಯಗುರೂತ್ತಮರೆಯ್ದೆ ಸಾದರಂ ॥೭೯॥

ಮಣಿಮಯತೋರಣಂ ಮುಕುರತೋರಣಮೊಪ್ಪಿರೆ ಮಂಗಳಧ್ವಜಂ
ಕುಣಿಯೆ ಗಜವ್ರಜಂ ರಥಪದಾತಿತುರಂಗಮಸಂಘಮಲ್ಲಿ ಸಂ
ದಣಿಗೊಳೆ ಭೂರಿಭೇರಿಯ ಘನಸ್ವನಮೊಂದೆ ದಿಗಂತಮಂ ಗುರು
ಪ್ರಣತಿಸಮುತ್ಸುಕಂ ಮುದದಿನಂದಿದಿರ್ಗೊಂಡಳ[೪]ನ[೪]ವಂ ನರಾಧಿಪಂ ॥೮೦॥

॥ವ॥ ಅಂತಿದಿರ್ಗೊಂಡು ಕಟ್ಟಿದಿರೊಳ್ಕಂಡು ಪುಷ್ಪಾಂಜಲಿಗೆದರ್ದು ಸಾಷ್ಟಾಂಗ ಪ್ರಣತನಾಗಿ ಸಾತ್ವಿಕಂ ಮಿಗೆ ನಿರೀಕ್ಷಿಸಿ ನಿಜಹೃದಯನಳಿನಮಿನ್ನೆವರಮಿಂತಿರ್ದುದೆಂದ [೫]ಱಿ[೫]ಪುವಂತೆ ಕರಕಂಜಮಂ ಮುಗಿದು ನಲವಿಂ ನುತಿಗೆಯ್ದು ಪರಮಾನಂದಂ ಮಿಗೆ ಪರಕೆಯಂ ಕೈಕೊಂಡು ಕೃತಾರ್ಥತೆಯನಪ್ಪುಕೆಯ್ದು ಕನ[೬]ಕ[೬]ಮಯ ಸುಖಾಸನದೊಳ್

---

೧ ಲೇ (ಮೂ, ಕ) ೨ ನ (ಮೂ) ೩ ಪ್ಪ (ಮೂ) ೪ ನಿ (ಮೂ) ೫ ಱು (ತಾ ಕ, ಮೂ); ಱ (ಬ, ರಿ) ೬ ಕನಕ (ಮೂ)

ಕೈಗೊಟ್ಟು ಮೂರ್ತಿಗೊಳಿಸಿ ಮಕುಟವರ್ಧನರ್ ಬಳಸಿಬರೆ ಮಹೋತ್ಸವಂ ಬೆರಸು ಧರ್ಮಮಂ ತರ್ಪ ದಾನದಂತೆ ಜಸಮಂ ತರ್ಪ ಜಯದಂತೆ ಸುಖಮಂ ತರ್ಪ ಸುಕೃತದಂತೆ ಸಾಹಸಮಂ ತರ್ಪ ಸತ್ಯದಂತೆ ವಿನಯಮಂ ತರ್ಪ ವಿವೇಕದಂತೆ ಪರಿಮಳಮಂ ತರ್ಪ [೧]ಪವಮಾನ[೧]ನಂತೆ ಶಿವನೊಲವಂ ತರ್ಪ ಶಿವಯೋಗದಂತೆ ಗುರುಕುಲೋತ್ತಂಸನಂ ನೃಪಕುಲೋತ್ತಂಸನಂತಃಪುರ[೨]ಕೊ[೨]ಡಗೊಂಡು ಬಂದು ಮಣಿಖಚಿತದಿವ್ಯಸಿಂಹಾಸನದೊಳ್ಮೂರ್ತಿಗೊಳಿಸಿ ಪರಿಮಳೋದಕದಿಂ ಪಾದಪ್ರಕ್ಷಾಲನಂಗೈದು ಸಾದರಂ ಮಿಗೆ ಪಾದತೀರ್ಥಮಂ ತಳೆದು ವಿವಿಧೋಪಚಾರಂಗೈದು ಸಚಿವನುಂ ತಾನುಂ ಸಮುಚಿತಾಸನದೊಳ್ತದನುಜ್ಞೆಯಿಂ ಕುಳ್ಳಿರ್ದು ಬಳ್ಳಿವರಿವ ಭಕ್ತಿಗಡರ್ಪಾಗಿ ತದೀಯ ಕಟಾಕ್ಷ[೩]ರುಚಿರರು[೩]ಚಿ ಸಾಂದ್ರಚಂದ್ರಿಕೆಯಿಂದಾನಂದಸುಧಾಬ್ಧಿ ತೆರೆಮಸಗಿದಂತೆ ಪಲ್ವೆಳಗು ಪಸರಿಸೆ ಮೆಲ್ಲನಿಂತೆಂದಂ—

ಪಾವನದೇಶಿಕಾನ್ವಯಪಯೋಜದಿನೇಶ್ವರ ನಿಮ್ಮ ಪಾದಸಂ
ಸೇವನೆಯಿಂದರಲ್ದುದು ಮದೀಯ ಮನಃಕಮಳಂ ವಿವೇಕಮೆಂ
ಬಾ ವಿಮಳಾಕ್ಷಿಗಾದುದಖಿಳಾರ್ಥನಿರೀಕ್ಷಣಮಿಂದು ಧನ್ಯ ಸ
ದ್ಭಾವಮನಾಂತೆನೆನ್ನವೊಲದಾರ್ ಕೃತಕೃತ್ಯರಿಳಾತಳಾಗ್ರದೊಳ್ ॥೮೧॥

ಎನೆ ಕೇಳ್ದು [೪]ಹರ್ಷ[೪]ಮೊಗೆತರೆ
ಮನಕ್ಕೆ ಕರುಣಾವಲೋಕನಂಗೈದೆಲೆ ಭೂ
ವನಿತೇಶ ನಿನ್ನ ಮನದಿ
ಷ್ಟನಿಯೋಜನೆಗೆಯ್ವೆವಾವುದದನ[೫]ಱಿ[೫]ಪೆಂದರ್ ॥೮೨॥

॥ವ॥ ಎನೆ ಮುದಂಬಡೆದು—

ದೇವ ಬಯಸಿರ್ದಪುದು ಮ
ದ್ಭಾವಂ ಭವದೀಯ ವದನದಿಂ ತಿಳಿದಪೆನೆಂ
ದಾ ವಿಮಳಮೆನಿಪ ಶಿವಲೀ
ಲಾವಳಿಯಂ ಪೇಳ್ವುದೆನಗದಂ ದಯೆಯಿಂದಂ ॥೮೩॥

॥ವ॥ ಎಂದು ಭಕ್ತಿಭರದಿಂ ಪುತ್ರವರಮಂ ಬೇಳ್ಪುದಂ ಮಱ[೬]ದಿಂತೆಂದು ಬಿನ್ನಪಂಗೆಯ್ದ ನರೇಂದ್ರನ ಬಗೆಗೆ [೬]ಮ[೬]ಚ್ಚಿ ಸಂತಸಂಬಟ್ಟು ನೀಡುಂ ನಿರೀಕ್ಷಿಸಿ ನಿಖಿಳ ಶ್ರುತಿಪುರಾಣಾಗಮಸಾರಮಪ್ಪ ಶಿವಲೀಲೆಯಂ ಪೇಳಲುಜ್ಜುಗಿಸಿ—

---

೧ ಪವನ (ಮೂ, ಬ) ೨ ಕ್ಕೊ (ಮೈ, ತಾ) ೩ ರುಚಿವರ (ಮೂ) ೪ ಹರುಷ (ಮೂ) ೫ ಱು (ಮೈ, ತಾ, ಮೂ, ಬ) ೬ ಮೆ (ಮೂ, ತಾ)

ಹೃದಯಕಮಲದೊಳೆ ನೆಲಸಿದ
ಮದನಾರಿಯ ಮಕುಟದಗ್ರದೆ[೧]ಳ[೧]ವೆಱ[೨]ಗದಿರು
ಣ್ಮೆದುದೆನೆ ಪಸರಿಸೆ ವಿಳಸ
ದ್ರುದನದ್ಯುತಿ ಮೊಗದೊಳಾಗಳವರಿಂತೆಂದರ್ ॥೮೪॥

ಮೊದಲೊಳ್ನಿಷ್ಕಳಮಾಗಿ ನಿರ್ವಿಕೃತಿಯಿಂ ತಾನೊಂದೆ ಸಚ್ಚಿತ್ಸುಖಾ
ಸ್ಪದಲಿಂಗಂ [೨]ಸ[೨]ತಮಾಗಿ ಪೂರ್ಣಮುರುಷಟ್ತ್ರಿಂಶತ್ಸ್ವರಂ ಶಕ್ತಿಯಂ
ಗದ ಸಂಪರ್ಕದೆ ಘಟ್ಟಿಗೊಂಡ ತೆಱನೆಯ್ಯಂತಾ ಮಹೇಶತ್ವಮಾಂ
ತದು ತದ್ದೇಹದೊಳೊಲ್ದು ತಾಳ್ದುದುರುಲೀಲಾಜಾಲಮಂ ಭೂಮಿಪಾ ॥೮೫॥

॥ವ॥ ಅದೆಂತೆಂದೊಡೆ—

ಸುರಗೋರ್ವರೋರ್ವರನಿತ್ತು ದಕ್ಷನೊಸೆದಿ[೩]ರ್ಪ[೩]ತ್ತೇಳ್ತನೂಜಾತೆಯರ್
ಸರಿಯೆಂಬಂತಿರೆ ಕೂಡಿರೆಂದು ಕುಡೆ ಮೀಱುತ್ತೊರ್ವಳೊಳ್ಪ್ರೀತಿ ಸಂ
ದಿರೆ[೪]ಶಾ[೪]ಪಂಗುಡೆ ಕಂದಿ ಕುಂದಿ ತಪಮಂ ತಾನಾಂತಿರ[೫]ಲ್ಕ[೫]ಚ್ಚಿ ಶಂ
ಕರನಾಕಾಶನದೀಮೃಣಾಳಮೆನೆ ತಚ್ಚಂದ್ರಾರ್ಧಮಂ ಸೂಡಿದಂ ॥೮೬॥

ಮಂದಾರಾಮಳಪುಷ್ಪದೊಳ್ಪರಿಮಳಂ ಶ್ರೀದೇವಸದ್ರತ್ನದೊ
ಳ್ಚೆಂದಂಬೆತ್ತೆಸೆದಿರ್ಪ ಕಾಂತಿ ನೆಲೆಗೊಂಡಿರ್ಪಂತೆ ತನ್ನೊಳ್ಸದಾ
ನಂದಂಬೆತ್ತೆಸೆದಿರ್ಪುಮಾರಮಣಿಯೊಳ್ಕೂಡಿರ್ದಜಾಂಡಂಗಳಂ
ಕಂದರ್ಪಾರಿ ನಿಮಿರ್ಚಿ ಸಾರ್ಚಿ ಸುಮನಃಸಂಪ್ರೀತಿಯಂ ಮಾಡಿದಂ ॥೮೭॥

ಒರ್ಮೆ ಜಗತ್ರಯಕ್ಕೆ ಲಯಮಂ ರಯದಿಂದೆ [೬]ನೆಗಳ್ಚಿ[೬] ತನ್ನ ಚಿ
ದ್ಧರ್ಮಮನಳ್ಕಱಿಂ ನೆನೆಯೆ ತಾಂ ವೃಷಭಾಕೃತಿಗೊಂಡು ಮುಂದಿರ
ಲ್ಕೂರ್ಮೆಯೊಳೇಱಿ ನಿಂದನಿದು ಚಿತ್ರಮಿಳಾತಳದಲ್ಲಿ ಧರ್ಮಿ ಮೇ
ಣ್ಧರ್ಮದೊಳಿರ್ಪುದೆಂದು ವಿಬುಧರ್ಪೊಗಳುತ್ತಿರೆ ಪಾರ್ವತೀಶ್ವರಂ ॥೮೮॥

ಸ್ಫೂರ್ಜದ್ಗರ್ಜದ್ಘನಾಡಂಬರರವ[೭]ಡ[೭]ಮರುಧ್ವಾನಮಿಂಬಾಗೆ ಗಂಗಾ
ವಾರ್ಜಂಗಳ್ಸೀಕರಂಗಳ್ಸುರಿಯೆ ಮೊರೆಯೆ ಸರ್ಪಾಳಿ ಚಂಡೇಭಚರ್ಮಂ
ಪರ್ಜನ್ಯಾಭಂ ಕಟೀಮಂಡಳದಿ ಪೊಡರೆ ಕಾಲಾನಲಾಕ್ಷಿಸ್ಫುರದ್ರೋ
ಚಿರ್ಜಾಲಂ ಪೊಣ್ಮೆ ದಿಗ್ಭಿತ್ತಿಗಳೊಡೆಯೆ ಹರಂ ತಾಂಡವಂ[೮]ಗೈವು[೮]ತಿರ್ದಂ ॥೮೯॥

---

೧ ಳೆ (ಮೂ) ೨ ರ (ಮೂ) ೩ ಪ್ಪ (ಮೂ) ೪ ತಾ (ಕ) ೫ ಲ್ಮೆ (ತಾ)
೬ ನೆಗೆಳ್ಚೆ (ಮೈ, ಮೂ), ನಿಮಿರ್ಚಿ (ಬ) ೭ ದ (ಕ) ೮ ಗೆಯ್ವು (ತಾ)

ತಪಮಿರ್ಪದ್ರಿಜೆಯಲ್ಲಿಗೈದಿ ವಟುವೇಷಂ[೧]ಬೊ[೧]ತ್ತು ನಾನಾಪ್ರಪಂ
ಚಪರಾಲಾಪಮನಾಡಿ ನೋಡಿ ಮನಮಂ[೨]ಮೆ[೨]ಚ್ಚುತ್ತೆ ಪೋಗೆಂದು ತ
ದ್ವಿಪುಳಾವಾಸಕಲಂಪಿನಿಂ ಕಳುಪಿ ಬಂದಾನಂದದಿಂ ನಿರ್ಜರಾ
ಧಿಪರೇಳ್ತಂದಿರೆ ಶಂಭು ಕೂರ್ತು ಪಸೆನಿಂದಂ ತನ್ಮಹಾದೇವಿಯೊಳ್ ||೯೦||

[೩]ಅಧರಿತ[೩]ಮನ್ಮಥಾಕೃತಿ ಮನೋಹರಮೂರ್ತಿ ವಿಳಾಸ[೪]ವಾಂ[೪]ತು ಬಂ
ದಧಿಗತರೂಪಯವ್ವನಸುರೇಂದ್ರಪುರೀಸುದತೀವಿತಾನಮಂ
ಮಧುಸಖಬಾಣಪಾತಕೊಳಗಾಗಿಸಿ ಭಿಕ್ಷೆಯನಲ್ಲಿ ಬೇಡುತಂ
ವಿಧುಧರನೊರ್ಮೆ ತಾಳ್ದನಧಿಕೋತ್ಸುಕಭಿಕ್ಷುಕಲೀಲೆಯಂ ನೃಪಾ ||೯೧||

ಅಂಬಿನ ಶತ್ರು ಸತ್ತಿಗೆಯದಕ್ಕಗಿದಿರ್ಪ ರಥಂ ನಿಜಾಶ್ವಮಾ
ಲಂಬಿ[೫]ಸೆ[೫] ಕೋಡೊಳಿಟ್ಟು ಪೊರೆವಾನೆಯದಂ ಮದವೇಱಿಪಾತನೇ
ನಂಬುಗೆವೆತ್ತ ಮಂತ್ರಿ ಗುಣಮಂ ಪರಿಪಾಲಿಪ ಬಿಲ್ಬಲಂ ತದ
ಸ್ತ್ರಾಂಬಕಿಯಾಗಲೆಚ್ಚ ಮುಗುಳಂಬನನೀಕ್ಷಿಸಿ ಸುಟ್ಟನೀಶ್ವರಂ ||೯೨||

ಶ್ವೇತನೆನಿಪ್ಪ ಪಾತಕಿ ಪಣಾಂಗನೆಗೆಂದರಲಂ ತರುತ್ತೆ ಧಾ
ತ್ರೀ[೬]ತಳದಲ್ಲಿ ಬೀಳೆ[೬] [೭]ಗಿರಿಶಂಗೆ ಸಮರ್ಪಣಮೆಂದ[೭]ಸೈಪು ರಂ
ಭಾತರುಣೀರತಂಗು[೮]ಡ[೮]ಲವಳ್ಕ್ರಗೆ ಬೋಧಿಸೆ ತನ್ನನರ್ಚಿಸಿ
ಪಾರ್ತನನೊಯ್ಯಲೈದಿದ ಕೃತಾಂತನನರ್ದಿಸಿದಂ ಮಹೇಶ್ವರಂ ||೯೩||

ನಾರಿ ಶರಂ ತದಂಗಜನೆ ಸಾರಥಿ ತತ್ಪದಶತ್ರುಮಿತ್ರರೇ
ಸೇರಿದ ಗಾಲಿಗಳ್ ತದಹಿತಂ ಪೆದೆ ತದ್ಧೃತಮೇ ರಥಂ[೯]ತದಾ
ಧಾರಮೆ ಬಿಲ್ತದಗ್ರುಚರತೃಪ್ತಿವಿಧಾಯಕಮಶ್ವಮಾಗೆ ತ
ಚ್ಚೋರಸಜಾತಿಜಾತಪುರಮಂ ಪುರವೈರಿ ಕನಲ್ದು ಚುರ್ಚಿದಂ ||೯೪||

ವರಕಂಜೋದ್ಭವನಿಂ ವರಂಬಡೆದು ದಿಕ್ಪಾಲರ್ಕಳಂ ಪೊಯ್ದು ತ
ತ್ತರುಣೀವೃಂದಮನೆಯ್ದೆ ತಂದು ಸೆಱೆಯಂ ದೈತ್ಯಾರಿಯಂ ಕಟ್ಟಿ ಮೇ
ಲಿರದಿಟ್ಟಂದು ಜಲಂಧರಂ ಬರೆ ಜಯಾರ್ಥಂ ವಾರ್ಧಿಯೊಳ್ಚಕ್ರಮಂ
ಬರೆದಂಗುಷ್ಠದಿನೆತ್ತಿಸುತ್ತೆ ತಲೆಗೊಯ್ದಂ ಶರ್ವನಾ ಚಕ್ರದಿಂ ||೯೫||

---

೧ ಡೆ (ಮೂ, ರಿ) ೨ ಪು (ಮೈ, ಮೂ, ಕ) ೩ ಅದರಿನ (ಮೂ) ೪ ವೊಂ (ಮೂ ೫ ಸಿ (ಮೂ ತಾ) ೬ ತಳದೊಳ್ ಬೀಳಲ್ (ಮೈ) ೭ ಶಶಿಧರಂಗೆ ಸಮರ್ಪಣಮೆಂದ (ಮೈ, ಮೂ); ಪರಮೇಶ ಸಮರ್ಪಣಮೆಂದ (ಬ); ಬೀಳೆ ಸಮರ್ಪಣ (ಕ) ೮ ಡೆ (ಮೈ); ಡಳ್ (ಮೂ) ೯ ನಿಜಾ (ಮೂ)

ಪುಟ್ಟಿಪೆನೀ ಜಗತ್ರಯಮನೆನ್ನೊಳಿ ವಿಶ್ವಮಿದಿರ್ಕುಮಾಗಳುಂ
ನೆಟ್ಟನೆ ಬೊಮ್ಮನಾನೆನುತಹಂಕರಿಸುತ್ತಿರೆ ವಿಷ್ಣು ವೇದಮುಂ
ಪುಟ್ಟಿಸಿದಾತನೆಮ್ಮನಭವಂ ಪರಬೊಮ್ಮವೆನಲ್ಕನಲ್ದು ಬೊ
ಬ್ಬಿಟ್ಟೊಡೆ ಬೊಮ್ಮನೊಂದು ತಲೆಯಂ ಪಱಿದಾಂತನವಂ ಸದಾಶಿವಂ ॥೯೬॥

ದಕ್ಷನೊಡರ್ಚೆ ಮಾರಣಮಹಾಮಖಮಂ ನಿಜವೈರದಿಂದೆ ಕೇ
ಳ್ದಕ್ಷಯರೂಪೆ ತತ್ಸುತೆಯೆನಿಪ್ಪುದನಂಬಿಕೆ ಪೋಗಿ ನೀ[೧]ಗೆ[೧]ಕೇ
ಳ್ದಾಕ್ಷಣಮುಗ್ರಮೂರ್ತಿ[೨]ದಳೆದೈದಿ[೨] ತದಾಪ್ತರನಿಕ್ಕಿ ಸೊರ್ಕಿದಾ
ದಕ್ಷನ ಮಸ್ತಕಂಗಡಿದು ವೀರಸಮಾಹ್ವಯನಾದನೀಶ್ವರಂ ॥೯೭॥

ಘೋರಹಿರಣ್ಯಕಾಕ್ಷರುಧಿರೋನ್ಮದಿರಾಮದಮತ್ತನಾಗಿ ದೈ
ತ್ಯಾರಿ ನೃಸಿಂಹಮೂರ್ತಿದಳೆದರ್ದಿಸುತಂತಿರೆ ಲೋಕಮಂ ಮನೋ
ಜಾರಿ ವಿಚಾರಿಸುತ್ತೆ ಶರಭಾಕೃತಿದಾಳ್ದಿರದೈದಿ ಸೀಳ್ದು ರ
ಕ್ತಾರುಣಚರ್ಮಮಂ ತಳೆದತಿದ್ಯುತಿ ತತ್ತಮಮಂ ಕಳಲ್ಚಿದಂ ॥೯೮॥

ಕ್ಷೀರಾಂಭೋರಾಶಿಯೊಳ್ ಶ್ರೀಪತಿಯಿರೆ ಬಿದಿಯೇಳ್ತಂದು ಯುದ್ಧಂಗುಡಲ್ತ
ಳ್ತೋರೋರ್ವರ್ಪಾಶುಪತ್ಯಾಸ್ತ್ರದಿನಿಡೆ ಶಿಖಿಯಿಂ ಬೇಯೆ ಲೋಕಂ ಕೃಪಾಕೂ
ಪಾರಂ ವಾರಾಶಿಯೊ[೩]ಳ್ಪ್ರ[೩]ಜ್ವಲಿಸಿ[೪]ಬಳೆ[೪]ದು ತನ್ಮಧ್ಯದೊಳ್ ಲಿಂಗರೂಪಂ
ಸಾರುತ್ತಂದರ್ಧನಾರೀಶ್ವರನವರ್ಗಖಿಳರ್ಗಳ್ಕಱಿಂ ತಣ್ಪುಗೈದಂ ॥೯೯॥

ಮಗಳೆಂದೀಕ್ಷಿಸದಂಟೆ ಭಾರತಿ ಮೃಗೀರೂಪಿಂದವಳ್ಸಾರೆ ತಾಂ
ಮಿಗೆ ತನ್ನೊಂದು ಪಶುತ್ವಮಂ ಪ್ರಕಟಿಪಂತಾಂತಲ್ಲಿ ತದ್ರೂಪಮಂ
ಬಗೆಗೊಂಡಟ್ಟಲವಳ್ ಶಿವಂಗವಿದಿಡಲ್ ಶ್ವಾಕಾರದಿಂ ವೇದಮಂ
ಘ್ರುಗಳಂ ಘ್ರಾಣಿಸುತೆಯ್ದೆ ತಚ್ಛಿರಮನೆಚ್ಚಂ ಕೇಳ್ಕಿರಾತೇಶ್ವರಂ ॥೧೦೦॥

ಆಱಡಿಗೊಂಡು ಮೂಱಡಿಯನಾ ಬಲಿಯಿಂ ಬಲಿಗೊಂಡು ಭೂಮಿಯಂ
ಮೂಱಡಿಯಾಂತು ಮೀಱಿ ಬಳೆದಿತ್ತನನಿಕ್ಕಿ ರಸಾತಳಕ್ಕೆ ನಿಂ
ದಾಱಡಿವಣ್ಣದಾಗಸಕೆ ಕಾಲಿಡೆ ಖಂಡಿಸೆ ಬೊಮ್ಮನಿಟ್ಟ ನೀ
ರ್ಮಾಱಡಿಯಿಂದೆ ಕೊಲ್ವನನೆ ಕೊಂದವನಸ್ಥಿಯನಾಂತನಾ ಹರಂ ॥೧೦೧॥

---

೧ ಗಿ (ತಾ) ೨ ತಳೆದೆಯ್ದು (ಮೂ) ೩ ಳ್ಪ್ರ (ಬ, ಮೂ, ಕೆ) ೪ ಳ (ಮೈ,); ಳಿ, (ಕೆ)

ನುಣ್ಮಣಲಿಂದೆ ಮಾಡಿ ಶಿವಲಿಂಗಮನರ್ಚಿಸಿ ಧೇನುವೃಂದಮಂ
ಜಾಣ್ಮೆಗೆ ತಂದು ಪಾಲ್ಗಱೆಯೆ ಕಂಡೊದೆಯುತ್ತಿರೆ ತಂದೆ ಬಂದ[೧]ದಂ[೧]
ಪೊಣ್ಮೆ ಕನಲ್ಕೆ ಕೈಗೊಡಲಿಯಿಂದವನಂ ಪೊಡೆದಿಕ್ಕಿ ಮಿಕ್ಕು ಕೈ
ಗಣ್ಮಿದ ಚಂಡನೆನ್ನ ಸುತನೆಂದು ಗಣೇಶತೆಯಿತ್ತನೀಶ್ವರಂ ॥೧೦೨॥

ದೂರ್ವಾಸಂ ಶಂಭುನಿರ್ಮಾಲ್ಯಮನಮರವರಂಗೀಯೆ ತಾನೊಲ್ಲದಿರ್ಪಾ
ಗರ್ವಂಗಂಡಬ್ಧಿಯೊಳ್ಮೀಣ್ಣೆ[೨]ರಪೆ[೨] ಸಿರಿಯನೀಶಾಜ್ಞೆಯಿಂ ಶೇಷನಂ ತಂ
ದುರ್ವೀರ್ಧ್ರುಕ್ಕುರ್ವಿ ಸುತ್ತುತ್ತೊಡನೆ ಕಡೆಯೆ ದೇವಾದಿದೇವರ್ಮಹಾಶಾ
ಪೂರ್ವಂ ಪುಟ್ಟಿರ್ದ ಮೃತ್ಯುಪ್ರಭವವಿಷಮನದಂ ಕಂಠದೊಳ್ ಶರ್ವನಾಂತಂ ॥೧೦೩॥

ಸುರರಿಪುಬಾಧೆಗಳ್ಕತೆ ಮುರಾರಿ ಪುರಾರಿಪದಾರವಿಂದಮಂ
ಸರಸಿಜದಿಂ ಸಹಸ್ರದೆ ಸಮರ್ಚಿಪ ವೇಳೆಯೊಳೊಂದು ಕುಂದೆ ಕ
ಣ್ಮಲರಲನನೂನಭಕ್ತಿಭರದಿಂ ತೆಗೆದೇಱಿಸೆ [೩]ಮು[೩]ಚ್ಚಿ ಚಕ್ರಮಂ
ಸುರುಚಿರಲೋಚನಾಬ್ಜಮನಮರ್ತ್ಯನದೀಧರನಿತ್ತನುರ್ವಿಪಾ ॥೧೦೪॥

ವಾರಣದೈತ್ಯವೈರಿ ವರವಾರಣವಕ್ತ್ರನನೊಲ್ದು ಪೆತ್ತು ದಿ
ವ್ಯಾರುಣರತ್ನಮಂಡನಮನಿತ್ತು ಚತುರ್ದಶವಿದ್ಯೆಗಳ್ಗಿವಂ
ಕಾರಣನೆಂಬವೋಲ್ನೆಗಳ್ದು ಕಟ್ಟಿ ಗಣಾಧಿಪಪಟ್ಟಮಂ ಭವೋ
ತ್ತಾರಣಪಂಚವಕ್ತ್ರನೆಸೆದಂ ಕನಕಾದ್ರಿಯೊಳದ್ರಿಜಾನ್ವಿತಂ ॥೧೦೫॥

ಅಸುರನ ಬಾಧೆಗಳ್ಕೆ ಶಿಖಿಯಂ ಕರೆದಟ್ಟೆ ಮೃಡಂ ಮೃಡಾನಿಯೊ
ಳ್ಸಸಿಲೆಸಪಲ್ಲಿಗೆಯ್ದುತದು ತದ್ಘನವೀರ್ಯಮನೀಂಟೆ ವಹ್ನಿ ವ
ಕ್ತ್ರಸಮಿತಿ ಗರ್ಭವಾಂತು ಶರದೊಳ್ಬಸಿಱಿಂ ಕೊ[೪]ಱಿ[೪]ದಿಕ್ಕೆ ಕೃತ್ತಿಕಾ
ವಿಸರವಿವರ್ಧಿತಂ ಗುಹಸಮಾಹ್ವಯನೊಪ್ಪಿದನಾ ಮೃಡಾಂಕದೊಳ್ ॥೧೦೬॥

ಪದಕಟಕಾಹಿಗಳ್ಕೆ ಕಳೆಗುಂದೆ ರವೀಂದುಗಳಲ್ಲಿ ಕಿಳ್ತು ಸೂ
ಸಿದ ನವರೌಪ್ಯಕಿಂಕಿಣಿಗಳಂತಿರೆ ತೋಱಿ ಪೊದಳ್ದ ತಾರೆಗಳ್
ವಿದಿತ ನಭಃಕಟಾಹತಟಮಂ [೫]ಬ[೫]ಗಿ[೬]ದು[೬]ರ್ವಿ ಶಿವೈ[೭]ಕ[೭]ಪಾದ[೮]ವಾ
ಳ್ದುದು[೮] ಬಹಿರಂಬುಸಂಭವನವಾಂಬುಜಮೆಂಬ ಬೆಡಂಗನುರ್ವಿಪಾ ॥೧೦೭॥

೧ ವಂ (ಮೂ) ೨ ರಪಿ (ಮೈ, ತಾ) ೩ ಮೆ (ತಾ) ೪ ಱ (ಮೂ, ಬ) ೫ ಬಿ ಮೂ)
೬ ದೂ (ತಾ, ಬ) ೭ ಕ್ಕ (ಮೂ) ೮ ಪಾಳು (ತಾ)

ತಿಳಿಯದೆ ಮುಕ್ತಿ ತನ್ನ ಪದಭಕ್ತಿಯಿನಪ್ಪುದೆನಿಪ್ಪುದಂ ಕಳಂ
ಕಳಿಯದೆ ಚಿತ್ತದೊಳ್ನೆಗಳ್ದು ಕರ್ಮಕಲಾಪಮನನ್ಯಮಾರ್ಗದೊ
ಳ್ತೊಳಲಿ ಭವಕ್ಕೆ ಬರ್ಪ ಪಶುವರ್ಗಕೆ ಬೋಧಿಸಿ ಮೋಕ್ಷ[1]ವೀ[1]ಯಲೆಂ
ದೆಳಸಿ ಕೃಪಾಳು ತಾಳ್ದನೆಲೆ ಚೋಳ ಸುಖಾವಹಮೂರ್ತಿಲೀಲೆಯಂ ॥೧೦೮॥

ವಿಳಸದ್ವಿದ್ಯುಜ್ಜಟಾಮಂಡಳಮಮರನದೀಚಂದ್ರಖಂಡಾನ್ವಿತಂ ಮಂ
ಜುಳಗಂಡಂ ಸರ್ಪಕರ್ಣಾಭರಣಕಲಿತಮಾಸ್ಯಂ ಮೃದುಸ್ಮೇರಮಿಂದೂ
ಜ್ವಳಮಂಗಂ ಕಣ್ಗೆ ಚೆಲ್ವಾಗಿರೆ ವಟತರುಮೂಲಸ್ಥಿತಂ ಜ್ಞಾನಮುದ್ರಾಂ
ಗುಳಿಯಿಂ ಶಿ[2]ಷ್ಟ[2]ಪ್ರಬೋಧಪ್ರದನೆಸೆದನವಂ ದಕ್ಷಿಣಾಮೂರ್ತಿದೇವಂ ॥೧೦೯॥

ಹರಿಬೊಮ್ಮರ್ಜಗದೀಶರಾವೆನುತಹಂಕಾರಕ್ಕೆ ಪಕ್ಕಾಗುತಿ
ರ್ವರೆ ಕಾದುತ್ತಿರೆ ಕೋಟಿಸೂರ್ಯರುಚಿಯಿಂ ತನ್ಮಧ್ಯದೊಳ್ಮೂಡಿ ತಾ
ನುರುಲಿಂಗಾಕೃತಿಯಾಗೆ ಸೂಕರಮರಾಳಾಕಾರದಿಂ ಪೋಗಿಯುಂ
ವರಪನ್ಮೂಲಮನಾನನಾಬ್ಜಮನವರ್ಕಾಣಲ್ಕದೇನಾರ್ತರೇ ॥೧೧೦॥

ಕಳೆ ಸಿರಿ [3]ಧರ್ಮ[3]ಮುತ್ಸವಮಭೀಪ್ಸಿತಮಂಗಳಮಂದಮಾತ್ಮನಿ
ರ್ಮಳತೆ ಚಿರಾಯು ವೈರಿಪುರಶೂನ್ಯತೆ ತಜ್ಜಯಮೇಳ್ಗೆಯಾರ್ಪನ
ರ್ಗಳಕೃತಿಶಾಂತಿಯೊಳ್ಪುಬಲಮಾಶ್ರಿತರಕ್ಷಣೆ ಪೆರ್ಮೆ ಕೂರ್ಮೆ ವ
ತ್ಸಳತೆ ಜಸಂ ಸುಲೀಲೆ ಸುಖಮುಜ್ವಳವಿದ್ಯೆ ವಿಮುಕ್ತಿಯೆಂಬಿವಂ ॥೧೧೧॥

ಪಡೆವಂ ಪ್ರಮೋದದಿಂ ಕೇ
ಳ್ದೊಡೆ [4]ಕೇಳ್ವರ[4]ನಾವನಾದೊಡಂ ಪೊಡವಿಯೊಳೀ
ಮೃಡನ ಘನಪಂಚವಿಂಶತಿ
ವಡೆದೀ ಲೀಲೆಗಳನೆಲೆ ನರೇಂದ್ರಲಲಾಮಾ ॥೧೧೨॥

ಎನೆ ಕೇಳ್ದಾನಂದದುಗ್ಧಾಂಬುಧಿಯೊಳೆ ಮುಳುಗು[5]ತ್ತ್ರೇಳ್ದವೊ[5]ಲ್ಕಂಪಮುಂ ಜು
ಮ್ಮನೆ ರೋಮಾಂಚಂಗಳುಂ ಸಂಜನಿಸೆ ಬಗೆಗಡರ್ಪಾಗೆ ಕೌತೂಹಲಂ ಭೋಂ
ಕನೆ ತಾನೇಳ್ದಂಘ್ರಿಪದ್ಮಕ್ಕಮರ್ದು ಮಣಿದು ಬಾಳ್ದೆಂ ಕೃತಾರ್ಥಾತ್ಮನಾದೆಂ
ಮುನಿಮುಖ್ಯಾರಾಧ್ಯ ನಿಮ್ಮಿಂದೆನುತೆ ನುತಿಸು[6]ತಂ[6] ಮಂತ್ರಿಯುಂ ತಾನುಮಿರ್ದರ್ ॥೧೧೩॥

---

೧ ಮೀ (ಮೂ) ೨ ಷ್ಯ (ಮೂ, ಬ) ೩ ಮರ್ಧ (ಮೂ) ೪ ನರ (ಮೂ)
೫ ತ್ತಾಳ್ದೇಳ್ದವೊಲ್ (ಮೈ) ೬ ತುಂ (ರಿ)

ಸಾರಸಾರಸಮಾನಲೋಚನಕಾಂತಕಾಂತಿಯುತಾನನೇ
ಭೂರಿಭೂರಿಪುಸ್ಸಂಘಸಂಹೃತಿಶಕ್ತಿಶಕ್ತಿಸಮನ್ವಿತೇ
ಮಾರಮಾರಣದಕ್ಷದಕ್ಷಮದಾಪಹಾಂಕವಿರಾಜಿತೇ
ಧೀರಧೀರತಿಪಾಲಪಾಲನಶೀಲೆ ಪಾಲಿಪುದಂಬಿಕೇ ॥೧೧೪॥

ಇದು ವಿನಮದಮರವರಮಕುಟತಟಘಟಿತಮಣಿಗಣಮಹಾ
ಪ್ರಭಾಪಟಲಪರಿವೃತಪರಶಿವಶ್ರೀಪಾದನಖಚಂದ್ರಸಾಂದ್ರ
ರುಚಿರುಂದ್ರಚಂದ್ರಿಕಾಚಂಚಚ್ಚಕೋರಾಯಮಾನಸರಸ
ಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವವಿರಚಿತಮಪ್ಪ ರಾಜಶೇಖರವಿಳಾಸ
ವಿಪುಳಪ್ರಬಂಧದೊಳ್ ಕಥಾವತರಣ

ಶಿವಲೀಲಾವರ್ಣನಂ ತೃತೀಯಾಶ್ವಾಸಂ
ಸಂಪೂರ್ಣಂ

ಅಂತು ಆಶ್ವಾಸ ೩ಕ್ಕಂ ಪದನು ೩೯೫ಕ್ಕಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

ಚತುರ್ಥಾಶ್ವಾಸಂ

ಶ್ರೀಶರ್ವಾಣೀಹೃದಯಕು
ಶೇಶಯಹಂಸಂ ನಿಜಾಂಘ್ರಿಸೇವಕಜನತಾ
ಪಾಶಹ[೧]ರಂ[೧]ಪಶುಪತಿ ಪರ
ಮೇಶಂ ಪೊರೆಗೆಮ್ಮನಾವಗಂ ಶಿವಲಿಂಗಂ ॥೧॥

ಮುಡಿಗಂಪಿಂಗಾರ್ದು ಸಾರ್ತಂದೆಱಗೆ ಪರಮೆಗಳ್ಮಂಜುಮಂಜೀರನಾದ
ಕ್ಕೊಡನೊಂದೊಂದಾಗಿ ಪಿಂದ್ಮೈತರೆ ವಿಮಳಮರಾಳಂಗಳಾಳೀಜನಂ ಪಿಂ
ಗಡೆಯೊಳ್ಕೂರ್ತೈದೆ ಶೋಭಾವತಿ ಮೃದುಗತಿಯಿಂ ಬಂದು ಪೂವಿ[೨]ಲ್ವಿನಮ್ರಂ[೨]
ಬಡೆವಂತಂಗಂ ಬಳುಂಕಲ್ಮಣಿದಳವರ ದಿವ್ಯಾಂಘ್ರಿಯೊಳ್ ದೇವಿಯಾಗಳ್ ॥೨॥

ಪರಸಿದರಧಿಕೋತ್ಸವದಿಂ
ಗುರುಗಳ್ಮಗುಳ್ದವಳ ಮನದಭೀಷ್ಟಮನಿಂತೆಂ
ದಿರದಱಿದರ್ ಶಿವಶಿವ ಶಂ
ಕರಶರಣರ ಮಹಿಮೆ ಮಹಿಗೆ ಸಾಧಾರಣಮೇ ॥೩॥

ಧರಣಿಪನುಂ ಸಚಿವನುಮ
ಚ್ಚರಿವಡುತಿರೆ ಮಗಳೆ ಬಾರೆನುತ್ತೀಕ್ಷಿಸಿ ಶಂ
ಕರನಡಿದಳಿರಂ ಜಾನಿಸಿ
ತರಳೆಗೆ ಪಂಚಾಕ್ಷರೋಪದೇಶಂಗೆಯ್ದರ್ ॥೪॥

ತರುಣಿ ಭವದೀಯ ಪುಣ್ಯೋ
ದರದೊಳ್ಪುಟ್ಟುಗುಮಿನಾನ್ವಯಾಂಬುಧಿಚಂದ್ರಂ
ಹರಮಂತ್ರಮಿದನೆ ಜಪಿಸು
ತ್ತಿರೆ ತಪ್ಪದಿದೆಂದು ದೇಶಿಕಂ ಕರುಣಿಸಿದಂ ॥೫॥

---

೧ ರ (ಮೂ) ೨ ಲ್ನಮತ್ವಂ (ಬ); ಲ್ನಮಂ (ಕ); ಲ್ನಮಾ (ಮೂ); ಲ್ನಮ್ರತ್ವಂ (ಧಾ)

ಎನೆ ನಂಬಿ ನಲಿದು ಮನದೊಳ್
ನನೆಕೊನೆವೋದಳ್ಗುರೂಕ್ತಿಯಂ ಬಗೆಗೊಂಡಳ್
ಜನಪತಿಯ ವದನಮಂ ಕ
ಣ್ಗೊನೆಯಿಂ ನಡೆನೋಡಿ ನಾಡೆ[1]ಮು[1]ದಮಂ ತಳೆದಳ್ ॥ ೬ ॥

॥ವ॥ ಅನಂತರಂ—

ಆ ದಂಪತಿಯ ಸಪರ್ಯೆಯ
ನಾದಂ ಕೈ[2]ಕೊಂ[2]ಡು ನೆನೆದುದಂ ನೆಗಳ್ದು ಮಹಾ
ಮೋದಂ ಮಿಗೆ ನಿಜ ದೇಶಕೆ
ಪೋದರ್ಚಿದ್ಘನ[3]ಶಿವಾರ್ಯ[3]ರುತ್ತಮಕಾರ್ಯರ್ ॥ ೭ ॥

॥ವ॥ ಅಂತವರ್ಪೋಗಲೊಡನಿತ್ತಲ್—

ಶಿವಲಿಂಗಾರ್ಚನೆಗೆಯ್ವುತಂ ಶಿವಕಥಾಪೀಯೂಷಮಂ ಕರ್ಣದಿಂ
ಸವಿವುತ್ತಂ ಶಿವಯೋಗಿವೃಂದಚರಣಾಂಭೋಜಂಗಳಂ ಪೂಜಿಸು
ತ್ತವರಿರ್ವರ್ ಗುರುವಿತ್ತ ಮಂತ್ರಮನದಂ ಚಿತ್ತಾಂತದೊಳ್ಜಾನಿಸು
ತ್ತೆ ವಧೂವಲ್ಲಭರಿರ್ದರುತ್ಸವಯುತರ್ ನಾನಾ ವಿನೋದಂಗಳಿಂ ॥ ೮ ॥

॥ವ॥ ಅಂತಿರ್ಪಿನಮೊಂದುದಿವಸಂ—

ಮೊಗದೊಳಗೊಂದೆರಳ[4]ಳ್ಕ್ರೊ[4]ಡ[5]ವಿ[5]ಮೂಡೆ ಬೆಮ[6]ರ್ನ[6]ಸುದೋಱೆ ಕಾಂತಿಕೆಯ್
ಮಿಗೆ ಕದಪುಜ್ವಳಂಬಡೆಯೆ ಮೆಲ್ಲಗೆ ಲಜ್ಜೆಯನೊತ್ತುಗೊಂಡು ತಾ
ನೊಗೆಯೆ ಘನಸ್ತನಂ ಬಿಗಿಯೆ ಸುಯ್ಬಿಸುಪಾಂತಿರೆ ಲೋಚನಾಂಚ[7]ಲಂ[7]
ಸೊಗಯಿಸೆ ಕೆಂಕಮಾಗಿ ಸತಿ ಪುಷ್ಪಿತೆಯಾದಳದೊಂದು ಬಿಂಕದಿಂ ॥ ೯ ॥

ಕರತಳದಲ್ಲಿ ತಾಳ್ದ ಸೆಳೆ[8]ವುಲ್ಲ[8]ಟ್ಟೆಳೆಗೆಂಪಿನ ಸೀರೆ ರನ್ನದಾ
ಭರಣಮುರೋಜದೊಳ್ತಳೆದ ಕುಂಕುಮಲೇಪನಮಂದವೀಯೆ ಬಿಂ
ಬರುಚಿರದಂತವಾಸೆ ವನಿತಾಮಣಿ ಮಾಣಿಕವಾಂತು ನೋಳ್ಪ ಭೂ
ವರನ ವಿಲೋಚನಕ್ಕೆ ಪೊಸಮಾಣಿಕಪುತ್ಥಳಿಯಂತಿರೊಪ್ಪಿದಳ್ ॥೧೦॥

॥ವ॥ ಅಂತೆಸೆದು ಕಾಂತೆ ಚತುರ್ಥ[9]ದಿವಸ[9]ದೊಳ್ ಕೆಳದಿಯರ್ ಸೂಸುವ
ಸುಗಂಧಸಲಿಲದಿಂ ಮಂಗಳಮಜ್ಜನಂಗೆಯ್ದನಂತರಂ—

---

೧ (ಮ) (ತಾ) ೨ ಗೊಂ (ಮೂ) ೩ ಶಿವಾಚಾರ್ಯ (ಬ) ೪ ಳ್ಕೊ (ಕೆ) ೫ ವೆ (ರಿ) ೬ ನೆ (ಮೂ) ೭ ಳಂ (ಮೂ) ೮ ದು (ಧಾ) ೯ ದಿವ (ತಾ)

ಪರಿಪೂರ್ಣಚಂದ್ರಬಿಂಬದ
ಸಿರಿ ಕೆಂಗದಿರಂ ಕಳಲ್ಚಿ ತಳೆ[1]ವ[1]ಂತಿರೆ ಬಂ
ಧುರಚಂದ್ರಿಕೆಯಂ ರಾಗಾಂ
ಬರಮಂ ತಾನುಳಿದು ತಳೆದಳಮಳಾಂಬರಮಂ ॥೧೧॥

ವಿಳಸತ್ಕರ್ಪೂರರಸಂಮಿಶ್ರಿತಮಳಯಜಲಿಪ್ತಾಂಗಿ ಮುಕ್ತಾವಳೀಮಂ
ಜುಳಭೂಷಾಭೂಷ್ಯೆ ಮಲ್ಲೀಕುಸುಮಮಿಳಿತಧಮ್ಮಿಲ್ಲೆ ಶುಭ್ರಾಂಬರಶ್ರೀ
ಕಲಿತಶ್ರೋಣೀತಟಪ್ರೋಜ್ವ[2]ಳೆ[2] ಭಸಿತಲಲಾಮಾಭಿರಾಮಾರ್ಧಚಂದ್ರಾ
ಭಲಲಾಟಸ್ಥಾನೆ ಚಂದ್ರೋಪಳದ ಪರಿಜಿದೆಂಬಂತೆ ಕಣ್ಗೊಪ್ಪುತಿರ್ದಳ್ ॥೧೨॥

॥ವ॥ ಆ ಸಮಯದಲ್ಲಿ—

ವರರಾತ್ರೀಕಾಂತೆ ಸೂರ್ಯಾಸ್ತಮಯಸಮಯದೊಳ್ ಸಂಜೆಗೆಂಪೆಂಬ ರಾಗಾಂ
ಬರಮಂ ತಾನುಟ್ಟು ತೊಟ್ಟೊಪ್ಪುವ ನವಭಗಣಸ್ವಚ್ಛಮುಕ್ತಾಳಿಯಂ ಸಿಂ
ಗರಿಸುತ್ತಂ ಪದ್ಮಕೋಶಸ್ತನೆ ಚಪಲಚಕೋರಾಕ್ಷಿ ನಿಂದಿರ್ದೊಡಂದಿಂ
ದಿರದಿ[3]ಕ್ಕಿಂ[3]ಬಾಳಿ ತೋರ್ಪ ಮುಕುರಮೆನೆ ಕರಂ ಮೂಡಿ[4]ತಬ್ಜಾರಿಬಿಂಬಂ[4] ॥೧೩॥

॥ವ॥ ಅಂತುಮಲ್ಲದೆಯುಂ—

ತನಗಿದಿರ್ವಂದು ನಿಂದ ರಜನೀವಧುವಂ ನಸುಸೋಂಕಿದಾಕ್ಷಣಂ
ಘನತಿಮಿರಾಸಿತಾಂಬರಮದೊಯ್ಯನೆ ಜಾಜ[5] ಸುಧಾಂಶುವಲ್ಲಭಂ
ಮನದೊಲವಿಂದೆ ತನ್ನ ವಿತತಾಂಶುಕಮಂ ಪೊದಿಸುತ್ತೆ ಕೂಡುತಿ
ರ್ಪನಿತಜ[5]ೊಳಲ್ಲಿ ಚಲ್ಲಿದಳಕಾಳಿಯ ಮೊಗ್ಗೆಗಳಲ್ತೆ ತಾರೆಗಳ್ ॥೧೪॥

॥ವ॥ ಎನಿಸಿ ರಂಜಿಸುತ್ತಮಿರ್ಪಿನಮಾಗಳಮೃತ[6]ಮ[6]ತಿಮಹಾದೇವಿ ಪರ್ಬಿದ ಬೆಳ್ದಿಂಗಳೊಳ್ ಬೆಳ್ದಿಂಗಳಧಿದೇ[7]ವಿ[7]ಯಂತೆ ಬೆ[8]ಳ್ವ[8]ಸದನಂಬಡೆದಿರ್ದು ಮಂಗಳಾಂಗಿ ಲಿಂಗಪೂಜಾಗೃ[8]ಹಂ[8] ಬೊಕ್ಕು ಸಾಂಗಮೆನೆ ಲಿಂಗಪೂಜೆಗೆಯ್ದು ನಿಜೇಶ್ವರನೊಡನೆ ಹರಪ್ರಸಾದಸುಧಾಸ್ವಾದನಂಗೆಯ್ದು ಪರಿತುಷ್ಟಿವಡೆದು ಪರಿಮಳಿಪ ಕೈಗಟ್ಟಿಯಂ ಕೊಂಡು ಕರ್ಪೂರಪರಿಮಳಂಬೆ[9]ರ್[9]ದ ಸರಸತಾಂಬೂಲಮಂ ಸಖಿ ನೀಡೆ ತಳೆದು ವಿವಿಧವಿನಿಯೋಗದ ವಿಳಾಸಿನಿಯರ್ ಬಳಸಿಬರೆ ಮಣಿಪಾವುಗೆಯಂ ಮೆಟ್ಟಿ ವಿಳಾಸಂ

---

೧ ದ (ಮೂ) ೨ ಳ (ಮೂ) ೩ ಕ್ಕಿರ (ಮೂ) ದಿಕ್ಕಿಂ (ಕೆ) ೪ ದತ್ತಬ್ಜಬಿಂಬಗ (ಮೈ, ಕ, ಧಾ, ಬ, ತಾ) ೫ ವ (ಮೈ, ಧಾ, ಬ, ತಾ) ೬ ವತೆ (ಮೂ) ೭ ಳ್ಪ (ಧಾ, ಮೂ) ೮ ಹಮಂ (ಬ, ಮೂ) ೯ ರ (ಮೈ, ತಾ, ಬ) ರಸಿ (ಮೂ)

ಮಿಗೆ ವಿದಗ್ಧಸಖಿ[೧]ಯು[೧] ಕರತಳಮಂ ಪಿಡಿದು ಮುಡಿಗಂಪಿಂಗೆ ಪಱಿಮೆವಱಿ-ಗಳೆಱಗಿ ನೇವರಿಸಿದಳಕಮಂ ಕೆದಱಿದಂತೆ ಕೆಳದಿ [೨]ಪಿಡಿದ ಕೆಂಡ[೨]ಸಂಪಗೆಯ ಬಿಱಿಮುಗುಳಾಲವಟ್ಟಂ ಬಟ್ಟಮೊಗಕ್ಕೆ ಕಟ್ಟಿದಿರೊಳೆಸೆವ ಬಟ್ಟವೆಱೆಯ ದಿಟ್ಟಿ [೩]ತಾಗ-ದಂತೆ ಮಱೆಗೆಯ್ದಂತೆ [೩]ಮೆಱೆಯೆ ಮಿಱುಪ ಸುಲಿಪಲ್ಲ ನುಣ್ಬೆಳಗು ಕಿಱುವೆಳ್ದಿಂ-ಗಳಂ ಕಱೆಯೆ ಕಡೆಗಣ್ಣಕಾಂತಿ ಕಾವನಲರಂಬಂ ಕೆದಱೆ ಬಿಂಬಾರಧದ ಕೆಂಬೆಳಗು ಮುಂಬಱಿದು ಕುಂಭಕುಚಕ್ಕೆ ಕೆಂಬರಲಸರಮಂ ಕೆಳೆಗೊಳಿಸೆ ಉಡಿನೂಲೊಳ್ತೊ-ಡರ್ಚಿದ ವಿವಿಧನವರತ್ನಕಿರಣಮುಟ್ಟ ಧವಳಾಂಬರಮಂ ಚಿತ್ರಾಂಬರಮನೊಡರ್ಚೆ ಮಂಜುಮಂಜೀರಸಂಜನಿತಧ್ವನಿ ಪದನಖಮಯೂಖಮಾಲಾನರ್ತನಕ್ಕೆ ಜತಿ[೪]ಗು[೪]ಡೆ ಮಂದಯಾನದಿಂ ನಡೆತಂದು ಮುನ್ನಂ ಕೈಗೈದು ತನ್ನ ಬರ[೫]ವಂ[೫] ಬಯಸುತ್ತೆ ಮನೋರಮಣನಿರ್ದ ಮಣಿಭವನಮಂ ಸಾರ್ವಲ್ಲಿ ನೆವಂಗೊಂಡು ಕೆಳದಿಯರ್ ತೊ-ಲಂಗೆ ವಿಳಾಸದಿಂದೊಳಪೊಕ್ಕಳವಿಗಳಿದ ಸಂತಸದಿಂ ಕಾಂತನಿರ್ದ ಸಿರಿಮಂಚದಂಚೆ ದುಪ್ಪುಳದಡಿಕಿಲ್ವಾಸಿನೊಳ್ ಮೆಲ್ಲನೆ ಚಲ್ಲದಿಂ ಕುಳ್ಳಿರ್ದು ಬ[೬]ಳ್ಳಿ[೬]ವಱಿವ ನೇಹ-ದಿಂದೊಡನೆ ಸಡಗರಿಸಿ ಗಾಡಿಮಿಗೆ ನೋಡುತ್ತಮಿರ್ಪಾಗಳ್—

ಮೊಳೆದೋರ್ಪ ಪುಳಕವಂಗದೊ
ಳೆಳಸುವ ಕರಣಂಗಳುಣ್ಮುವಿನಿವಾತು ಸುಖಂ
ದಳೆವ ಬಗೆ ಮೃದುಹಸಿತಮಂ
ಜುಳವದನಂ ಮೆಱೆಯೆ ಸಾರ್ದರೊರ್ವರನೊರ್ವರ್ ॥೧೫॥

ಕಾರಿರುಳ ತರಳತಾರಗೆ
ಗೋರಗೆಯೆನೆ [೭]ಕು[೭]ರುಳೊಳೆಸೆಯೆ ಮಲ್ಲಿಗೆ ಮಿಗೆ ನೀ
ಹಾರಕರವದನೆ ಮದನಾ
ಕಾರಮನೋರಮಣನಂಕದೊಳ್ ಕುಳ್ಳಿರ್ದಳ್ ॥೧೬॥

ನಿಮಿರ್ದಂಗಂ ಕಡುಚೆಲ್ವನೀಯೆ ವಳಿಗಳ್ ಮೈಗುಂದೆ ಮಧ್ಯಂ ಬಳುಂ
ಕೆ ಮರಲ್ದಕ್ಷಿ ವಿಳಾಸಮಂ ಕಱೆಯೆ ಕಕ್ಷಸ್ಥಾನದೊ[೮]ಳ್ಗಂ[೮]ಪು ಶೀ
ಡೆ ಮನೋ[೯]ಜ್ಞ[೯]ಸ್ತನಮುರ್ಬೆ ಕಂಕಣಝಣತ್ಕಾರಂ ಪೊಣ್ಮೆ ಸಂ
ಭ್ರಮದಿಂ ತೋಳ್ಗಳನೆತ್ತಿ ಕಂಚುಕಮನಾಗಳ್ ಪಾಣಿಯಿಂ ನೂಂಕಿದಳ್* ॥೧೮॥

---

೧ ಯರ (ಮೂ, ಮೈ) ೨ ಪಿಡಿದುಕೊಂಡ (ರಿ) ಸಂಪಂಗೆ (ಮೈ) ಮುಡಿಸಂಪಂಗೆ (ಕ) ೩ ತಾಗದಂತೆ ಮೆಱೆಯೆ (ಮೂ) ೪ ಗೂ (ಬ) ಗೊ (ರಿ) ೫ ಮಂ (ತಾ, ಮೂ, ಮೈ, ಕ) ೬ ಳಿ (ಮೂ) ೭ ಕೊ (ಮೂ) ೮ ಳ್ಕಂ (ಧಾ) ೯ ಜ (ಮೂ)
* ಈ ಪದ್ಯ ಬ ಪ್ರತಿಯಲ್ಲಿಲ್ಲ.

॥ವ॥ ಅನಂತರಂ—

ಪದೆದಾಲಿಂಗಿಸಿ ಮುದ್ದುಗೆಯ್ದು ಮೊಗದೊಳ್ವಕ್ತ್ರಾಬ್ಜಮಂ ಸಾರ್ಚಿ ಸಾ
ರ್ಚಿದ ರಾಗಾಧರಮಂ ಕರ್ದುಂಕಿ ರತಿರಾಗಾಂಭೋಧಿ ಮೈವೆರ್ಚುವಂ
ದದೆ ನಾನಾಕಳೆಗೂಡಿ ತಳ್ತು ತನುವೊಂದೆಂಬಂತೆ ಸಂಭೋಗಸಂ
ಪದಮಂ ತಾಂ ಪಡೆದಂ ಪಯೋಜಮುಖಿಯೊಳ್ಭೂಪಾ[1]ಳ[1]ಪ್ರಪ್ಪಾಯುಧಂ ॥೧೮॥

ಜನಿತಾನಂದಾಶ್ರುಪೂರ್ಣಂ ನಯನಮಧಿಕಘರ್ಮಾಂಬುಕೀರ್ಣಂ ಕಪೋಲಂ
ತನುರೋಮಾಂಚಪ್ರಯುಕ್ತಂ ಮೃದುಹಸಿತಸುಧಾಸಿಕ್ತಮಾಸ್ಯಾಂಬುಜಂಚುಂ
ಬನಕಿಂ[2]ಚ[2]ನ್ಮುಕ್ತರಾಗಂ ಲಸದಧರ[3]ದ[3]ಳಂ ಚಿತ್ತಮಾತ್ತಾನುರಾಗಂ
ಸ್ತನಮಾ ಲುಪ್ತಾಂಗರಾಗಂ ರಸಭರಜಘನಾಭೋಗಮನ್ಯೋನ್ಯಯೋಗಂ ॥೧೯॥

ತನುಲತೆ ಘರ್ಮವಾರಿಕಣಕುಟ್ಮಳ[4]ಮಾಂ[4]ತಿರೆ ವಕ್ತ್ರಪದ್ಮದೊಳ್
ಜನಿಯಿಸೆ ಸೊಂಪು ಕಂಪುವೆರಸಿರ್ದೆಳಸುಯ್ಯೆಲರುರ್ವಿ ತೀಡೆ ಭೋಂ
ಕನೆ ಕುರುಳೆಂಬ ತುಂಬಿ ನಲಿದಾಡೆ ತಳಿರ್ತಿರೆ ರಾಗ[5]ವಾ[5]ಂತು ತ
ನ್ಮನವೆನಿಸಿರ್ಪ ಮಾವು ರತಿಚೈತ್ರದೊಳೊಪ್ಪಿದರೊಲ್ದು ಕಾದಲರ್ ॥೨೦॥

॥ವ॥ ಇಂತು ಸಮಾನುರಾಗಸಂಜನಿತಸಮರತಿಸುಖಾನುಭವಪರಿಣತಾಂತಃಕರಣರಾಗಿ ಕಾದಲರ್ ಸುಖನಿದ್ರೆಗೆಯ್ವು[6]ತ್ತುಮಿರೆಯಿರೆ[6] ನಿಶಾವಸಾನ-ಸಮಯದ[7]ಲ್ಲಿ—

ಮದವದ್ಭದ್ರಗಜೇಂದ್ರಮಂ ಸುರಸರಿತ್ಸಂಜಾತಕಂಜಾತಮಂ
ಸದಲಂಕಾರವೃಷೇಂದ್ರನಂ ವಿತತರೋಚಿರ್ಗಾತ್ರನಂ ಮಿತ್ರನಂ
ಬಿ[8]ದು[8]ಳ್ಗಲ್ಗನ್ನಡಿಯಂ ಸುಧಾಬ್ಧಿಯನಮರ್ತ್ಯಾಧಾರವಂ ಮೇರುವಂ
ಮುದದಿಂ ಸ್ವಪ್ನದೆ ಕಂಡಳಾ ವಧುಕಳಾಶ್ರೀಸಾಂದ್ರನಂ ಚಂದ್ರನಂ ॥೨೧॥

॥ವ॥ ಮತ್ತಮಾಗಳ್—

ನೆರೆಯೊಳ್ನೈದಿಲೆ ನಾಣ್ಚಿಪಂತೆನಗೆ ತಾರಾನಾರಿಯರ್ನೋಡೆ ಬಂ
ದಿರುಳೆನ್ನಂ ಕರದಿಂದೆ ಮುಟ್ಟಿದನಿವಂ ದೋಷಾಕರಂ ವಕ್ತ್ರಮಂ
ಭರದಿಂ ಮುಚ್ಚಿದೆನೆಂದಿನಂಗಳಿನಿನಾದವ್ಯಾಜದಿಂ ಪೇಳೆ ತಾ
ವರೆ ಪಾದಾಗ್ರದೆ ನೂಂಕಿದಂ ಮುಳಿದವಂ ವಾರಾಶಿಯೊಳ್ ಚಂದ್ರನಂ ॥೨೨॥

---

೧ ಲ (ಧಾ, ಬ, ಮೂ) ೨ ಚ (ಧಾ, ರಿ) ೩ ಗ (ಮೂ, ಕ) ಘ (ತಾ) ೪ ವಾಂ (ಬ) ೫ ಮಾ (ಕ) ೬ ತ್ತಿರೆ (ಮೂ) ೭ ದಲ್ಲಿ (ಧಾ) ೮ ದ (ಬ)

ದಿನಮಣಿ ನೀನೆಲೆ ವನಿತಾ
ಜನಮಣಿಯಾನೆಂದು ಚುಂಬಿಸಿದ ಪೂರ್ವದಿಶಾಂ
ಗನೆಯ ಮುಖಕುಂಕುಮಮಂ ನೆ
ಟ್ಟನೆ ತಳ್ತಂತೆಸೆದುದರುಣರುಚಿ ದಿನಕರನಾ ॥೨೩॥

॥ವ॥ ಮತ್ತಂ—

ಭುವನಜಭವಾಂಡಭವನಕೆ
ಸವೆದು[೧]ರು[೧]ರವಿಬಿಂಬಮೆಂಬ ಬಾದಣದೊಳಪೊ
ಕ್ಕವಿರಳತದಂಡದ ಬಹಿಃ
ಸುವರ್ಣರುಚಿ ಪರ್ಬಿದಂತೆ ಕೆಂಬಿಸಿಲೆಸೆಗುಂ ॥೨೪॥

ಪರೆದಿರೆ ನುಣ್ಗುರುಳ್ ನೊಸಲೊಳಾಳ್ದಿರೆ ಕಣ್ಗಡೆ ಕೆಂಪನಿ[೨]ಟ್ಟ[೨]ಕ
ಸ್ತುರಿಯ ಲಲಾಮಮುಚ್ಚಳಿಯದಂತಿರದೊಪ್ಪಿರೆ ಕೇಶಬಂಧಮೊಂ
ದಿರೆ ಶಿಥಿಲತ್ವಮಂ ನಸುಬೆಮರ್ ಕುಚಮಧ್ಯದೊ[೩]ಳು[೩]ಣ್ಮೆ ಸುಯ್ಯೆಲರ್
ತರಹರವಾಂತು ಸೂಸೆ ಸತಿಯುಪ್ಪವಡಂಬಡೆದೊಪ್ಪಿ ತೋಱಿದಳ್ ॥೨೫॥

॥ವ॥ ಆಗಳ್—

ಜಳಪಕ್ಷಿಗಳುಲಿಯಿಂದಂ
ಕಳಹಂಸಂ ಕಮಳತಲ್ಪದಿಂದೇಳ್ವವೊಲೊ
ಲ್ದು[೪]ಳಿ[೪]ಯುರಸನೆಳ್ದನಾ ಮಂ
ಗಳಪಾಠಕರುಲಿಯಿನಮಳತಲ್ಪಸ್ಥಳದಿಂ ॥೨೬॥

॥ವ॥ ಅಂತಿರ್ವರುಮೆಳ್ದು ಶಿವಸ್ಮರಣಪರಿಣತಾಂತಃ[೫]ಕ[೫]ರಣರುಮಪೂರ್ವಸುರಭಿ ಜಲಪರಿರಚಿತಸ್ನಾನರುಂ ಪರಿವೃತಧೌತವಸನಸಮಂಚಿತಕೋಮಳಕ[೬]ಳೇ[೬]ವರರುಂ ವಿರಚಿತಶಿವಲಿಂಗಪೂಜಾನೂನವಿಧಾನರುಂ ತತ್ಪದಾಂಬುಪ್ರಸಾದಾ[೭]ಸ್ವಾ[೭]ದನಾನಂದ ಕಂದಳಿತಹೃದಯರುಂ ಯಥೋಚಿತಪ್ರದಾನಏನಥಾವಿನನಾನಾದಾನ್ಮಾನಮಾನಿತಾ ಸಮಾನಮಾಹೇಶ್ವರಪ್ರತಾನರುಮಭಿನವಾಭರಣಗಣಪರಿಕಲಿತದಿವ್ಯಾಂಗರುಮತಿ ಸುಗಂಧತಾಂಬೂಲಮಧುರತರಮುಖಾಂತರ್ವಳಯರುಮಮೃತಮತಿ ಸತ್ಯೇಂದ್ರನರೇಂದ್ರರುಮತ್ಯಂತಪ್ರಮೋದದಿಂ ರತಿಮದನರಂ ಪಳಿವ ವಿಳಾಸದಿಂ ಕತಿಪಯಾಪ್ತಸಖೀ

೧ ದು (ಮೂ) ೨ ತ್ತು (ಮೂ) ೩ ೞಂ (ಮೂ) ೪ ರೆ (ಮೂ) ೫ ಷ್ಕ (ರಿ)
೬ ಲೇ (ಮೂ) ೭ ಸ್ಪ (ಧಾ)

12

ಜನಂಬೆರಸು ಕೇಳೀನಿಳಯದ ಕನತ್ಕನಕಪರ್ಯ್ಯಂಕಪೀಠಮನಳಂಕರಿಸಿ ಕುಳ್ಳಿ-ರ್ದಾಗಳ್—

ಮೊಗಸಸಿ ತಿಳಿಜೊನ್ನಮನೊ
ಲ್ದುಗುವಂತಿರೆ ತುಳ್ಕೆ ರದನರುಚಿ ರಮಣಂಗಾ
ಮೃಗಲೋಚನೆ ಪೇಳ್ದಳ್ಮುದ
ಮೊಗೆತರೆ ತಾಂ ಕಂಡ ಕನಸನೆಲ್ಲಮನಾಗಳ್ ॥೨೭॥

ಕೇ[೧]ಳ್ದದನೊಂ[೧]ದಿನಿಸುಳಿಯದೆ
ತಾಳ್ದತಿ ಮುದ[೨]ಮಂ[೨]ತನೂರುಹಂ ಗುಡಿಗಟ್ಟು
ತ್ತೇ[೩]ಳ್ದಿ[೩]ರೆ ತನುವೊಳ್ತರುಣಿಗೆ
ಪೇಳ್ದಂ ತತ್ಫಳಮನರಸನಿಂತೆಂದಾಗಳ್ ॥೨೮॥

ಕರಿಯಿಂ ಭದ್ರಯುತಂ ಸರೋಜದೆ ಗುಣಾಧಾರಂ ವೃಷಾಧೀಶನಿಂ
ಹರಭಕ್ತಂ ಕಮಳಾಪ್ತನಿಂ ಪ್ರಬಳತೇಜೋಯುಕ್ತನಾದರ್ಶದಿಂ
ಪರಸಂಪ್ರೀತಿದನಬ್ಧಿಯಿಂದತಿಗಭೀರಂ ಮೇರುವಿಂ ಭೂಮಿಭೃ
ದ್ವರನಬ್ಜಾಹಿತನಿಂ ಕಳಾನಿಧಿಕುಮಾರಂ ಪುಟ್ಟುವಂ ನಿ[೪]ಶ್ಚ[೪]ಯಂ ॥೨೯॥

॥ವ॥ ಎಂದ ಮನೋರಮಣನ ಮಾತಂ ಮನದೆಗೊಂಡು ಮನೋರಥಂ ಕೈಸಾರ್ದಂತೆ ನಂಬಿ ನಲವೇಱಿ ಮೀಱಿ ಪರಮಹರ್ಷಮನೊಳಕೊಂಡಿರುತ್ತ-ಮಿರೆಯಿರೆ—

ಹೃದಯದೊಳೊದವಿದ ಶಿವಮಂ
ತ್ರದ ಕಳೆ ಸುಮುಹೂರ್ತದೊಳ್ ಶಿವಪ್ರೇರಣೆಯಿಂ
ಸುದತಿಯ ಪುಣ್ಯೋದರದೊಳ್
ಪದಪಿಂದಿಳಿತಂದು ನೆಲಸೆ ಬಳೆದುದು ಗರ್ಭಂ ॥೩೦॥

ವಳಿಗಳ್ಪಿಂಗಿದುವಾಸ್ಯಮಿಂದುರುಚಿಯಂ ಕೈಕೊಂಡುದಾ ನಾಭಿ ಗು
ಣ್ಪಾಳಿದೊಪ್ಪಿತ್ತು ವಿಲಾಸಯಾನಮದು ಮಾಂದ್ಯಂಬೆತ್ತುದಂಭೋಜಕು
ಟ್ಮಳವಕ್ಷೋರುಹದಗ್ರಮಾಳ್ದುದೆಳೆಗರ್ಪಂ ನುಣ್ಗದಿರ್ದೇಹದೊ
ಳ್ಕೆಳೆಗೊಂಡತ್ತು ತನೂದರಂ ಬಳೆದುದಾ ತ[೫]ನ್ವ[೫]ಂಗಿಗಾ ಗರ್ಭದೊಳ್ ॥೩೧॥

---

೧ ಳ್ದನೊಂ (ಮೈ) ೨ ವಂ (ತಾ) ೩ ಳ್ತಿ (ಧಾ), ಳ್ಕಿ (ಮೂ) ೪ ಚ್ಚ (ಧಾ)
೫ ನ್ವಾ (ಮೂ)

ಎಳೆಮುತ್ತಿನಂತೆ ಬೆಮರು
ಜ್ವಳಬಿಂದುಗಳಿರೆ ಬೆಳರ್ತ ತರುಣಿಯ ವದನಂ
ಸೆಳೆದುದು ಕಾವನ ಕೈಯೊಳ್
ತೊಳಗುವ ಶಶಿಮಣಿಯ ಮಣಿಯ ಮುಕುರದ ಚೆಲ್ವಂ ॥೩೨॥

ತೊಲಗೆ ರಜಂ ತಮಮದು ಪೊಱ
ತೊಲಂಗುವಂತೆಸೆಯೆ ಮೇಚಕಂ ಚೂಚಕಮಾ
ಲಲನೆಗೆ ತನುವೊಳ್ ಸತ್ವಂ
ಬಲಿದಂತೆ ಬೆಳರ್ತುದುದರದಮಳಾರ್ಭಕನಿಂ ॥೩೩॥

ಶೃಂಗಾರವಸ್ತು ತೀವಿದ
ಗಾಂಗೇಯಕರಂಡಮೆನಿಸಿ ಮೊಲೆಚೂಚಕಮೇಂ
ಕಂಗೊಳಿಸಿದುದೊ ತದಗ್ರದೆ
ಸಂಗಳಿಸಿದ ನೀಲಮಣಿಯ ಕಿ[1]ಱು[1]ಮು[2]ಚ್ಚ[2]ಳವೊಲ್ ॥೩೪॥

ಜನದೃಷ್ಟಿ ತಾಗೆ ನಡು ಬಡ
[3]ಮೆ[3]ನಿಸುತ್ತಿರೆ ಕಾವನಿಟ್ಟ ಕಾಪಿನ ಗೆರೆಯೆಂ
ದೆನೆ ಮಿ[4]ಸು[4]ಗೆ ಬಾಸೆಯದಱಿಂ
ಘನಮೆನಿಸಿತಿದೆನಿಸಿ ತೀವಿ[5]ಬ[5]ಳೆದುದು ಗರ್ಭಂ ॥೩೫॥

ಎನಿತೆನಿತು ವದನವಿಧು ಬೆ
ಳ್ಪನೆ ತಳೆದುಜ್ವಳಿಸಿದುದು ಪಯೋಧರಚಕ್ರಾ
ನನಮನಿತನಿತು ಕರಂಗಿದು
ದೆನೆ ಪಗೆಗಾದಧಿಕತೇಜಮಂ ಸೈರಿಪರಾರ್ ॥೩೬॥

ತರುಣಮರಾಳಮಂ ತಳೆದು ಕೊರ್ಬಿದಕೋಶಮನಾಂತಪದ್ಮಿನೀ
ತರುಣಿ ತರಂಗದಿಂ ನೆಗೆವ ಸೀರ್ಪನಿ ತಳ್ತಿರೆ ಭೃಂಗಮಾಲೆ ಮೇ
ಲಿರೆ ಮೆಱೆವಂತೆ ಪುತ್ರನೆಡೆಗೊಂಡುರುಗರ್ಭಮನಾಂತು ಜಾಡ್ಯಮೊಂ
ದಿರೆ ಬೆಮರುಣ್ಮೆ ಬಾಸೆ ಕಡುಗರ್ಪಿಡಿದೊಪ್ಪಿರೆ ನೀಱೆ ಶೋಱೆದಳ್ ॥೩೭॥

---

೧ ಱಿ (ಧಾ) ೨ ಚ್ಚು (ತಾ) ೩ ವೆ (ಮೈ, ಕ, ಬ, ತಾ) ೪ ಸು (ರಿ) ೫ ಬೆ (ಬ)

ಬಳೆದುದು ಪೊಡೆಯುಂ ಜಘನಾ
ಚಳಮುಂ ಕರ್ಪಿಡಿದುದಳಕಮುಂ ಚೂಚಕಮುಂ
ತಳೆದುದು ಮಾಂದ್ಯಮನತಿಮಂ
ಜುಳಗತಿಯುಂ ನುಡಿಯುಮಾ ಮೃದುಸ್ಮಿತಮುಖಿಯಾ ॥೩೮॥

ಮುಂಬಯಕೆಯಾಂತುದವಳ ಮ
ನಂ ಬಾಲಕನೊಲ್ದ ಬಯಕೆಯೆನೆ ಮೃಡಲೀಲಾ
ಡಂಬರಕಥಾಸುಧಾರಸ
ಮಂ ಬಿಡದೀಂಟಲ್ಕೆ ಶೈವನಿಧಿ ಶಶಿಮುಖಿಯಾ ॥೩೯॥

ಪುರಹರಪುರಾಣಮಂ ಶಂ
ಕರಚರಿತಮನಭವಕಾವ್ಯಮಂ ಭವಹರಭಾ
ಸುರಕೃತಿಯಂ ಗಿರಿಜಾವರ
ವರಚರಿತಮನಬಲೆ ಕೇಳ್ದು ಮುದಮಂ ತಳೆ೧ದಳ್ ॥೪೦॥

ಪರಿಮಳವಾರಿಯಿಂ ಜಳಕಮಾಗಿಪ ನಲ್ಲಳೆಸಿಕ್ಕುವಂಗರಾ
ಗರಚನೆಗೈವ ಮಾಲ್ಯಮನೆ ಸೂಡುವ ಸಿಂಗರಗೈವ ವೇಣಿಯಂ
ವಿರಚಿಪ ದರ್ಪಣಂಬಿಡಿವ ಬೆಳ್ಳಿಲೆಯಂ ಮಡಿದೀವ ದಿವ್ಯಚಾ
ಮರಮನೆ ಬೀಸುವಗ್ಗದ ವಿದಗ್ಧೆಯರೊಪ್ಪಿರೆ ದೇವಿ ರಂಜಿಪಳ್ ॥೪೧॥

ಸಚಿವನ ಪತ್ನಿ ತುಂಬಿದಱುದಿಂಗಳ ಗರ್ಭದೊಳೊಲ್ದು ಬಂದು ತಂ
ದುಚಿತಸುವಸ್ತುವಿತ್ತು ಕಲಸೋಗರಮಂ ನಲಿದಿಕ್ಕಿ ಭೂಷಣ
ಪ್ರಚಯಮನಿಟ್ಟು ಪೇರೊಸಗೆಗೆಯ್ದು ಸಖೀಜನದೊಂದುಗೂಡಿ ಸ
ದ್ರುಚಿ ಮಿಗೆ ಮಾಡಿ ಸತ್ಕ್ರಿಯೆಯನಂಗನೆಗಾ ವಧು ಪೋದಳಳ್ಕಱಿಂ ॥೪೨॥

ಮಲಯಜದಣ್ಪು ಮಲ್ಲಿಗೆಯ ಚೊಲ್ಲೆಯಮಬ್ಜಗುಣಾಂಬರಂ ಸಮು
ಜ್ವಲತರಚಂಪಕಪ್ರಸವಕಾಂಚಿ ಸರೋರುಹಕರ್ಣಪೂರಮು
ತ್ಪಲಕಟಕಂ ಮೃಣಾಲವಲಯಂ ಸುರಹೊನ್ನೆಯ ಹಾರಮಿಂದುಮಂ
ಡಲಮಧುರಾಸ್ಯೆಗೊಪ್ಪಿದುದು ನಿರ್ಭರಗರ್ಭವಿಳಾಸದೇಳ್ಗೆಯೊಳ್ ॥೪೩॥

॥ವ॥ ಇಂತೊಪ್ಪುತ್ತಮಿರೆಯಿರೆ—

---

೧ ದ (ಮೈ, ಕ)

ಒಂದುದಿನಮವನಿಪಂ ಪದ
ಪಿಂದಿ[೧]ನಿ[೧]ಯಳ ಗರ್ಭದಂದಮಂ ನೋಡಲ್ಚಿ
ತ್ತಂ ದಳವೇಱುತ್ತಿರೆ ಬಂ
ದಂದೊಳಪೊಕ್ಕಂ ತದೀಯಮಣಿಮಯಗೃಹಮಂ ॥೪೪॥

ಕರಗತಕಂಕಣಕ್ವಣಿತಮುಣ್ಮಿರೆ ಪೊಂದೆಱೆಯಂ ಸವೇಗಮೋ
ಸರಿಸೆ ಸಖೀಜನಂ ಶಶಿಕಳಾಕೃತಿಯಂ ಸತಿಯಂ ನರೇಂದ್ರನಾ
ದರಿಸಿ ನಿರೀಕ್ಷೆಗೆಯ್ವನಿತಱಲ್ಲಿದಿರೇಳ್ವಳನೇಳಲೀಯದಂ
ತಿರಿಸಿ ಸಮೀಪದೊಳ್ನೆಲಸಿದಂ ಮಣಿಕಾಂಚನಮಂಚತಳ್ಪದೊಳ್ ॥೪೫॥

ಕುವಲಯಮಿತ್ರಗರ್ಭೆ ಪುರುಹೂತದಿಶಾವಧು ಬೆಳ್ಪನಾಂತಿರ
ಲ್ತವಕದೆ ನೋಡಿನೋಡಿ ನಲಿವಂತೆ ಚಕೋರಯುಗಂ ಮೃಗಾಕ್ಷಿ ಸ
ತ್ಕುವಲಯಮಿತ್ರಗರ್ಭೆಯೆನಿಸುತ್ತೆ ಬೆಳರ್ತಿರೆ ನೋಡಿನೋಡಿ ಭೂ
ನವ ಧವಿಲೋಚನದ್ವಯಮದೇಂ ಮುದವಾಂತುದೊ ರಾಗರಂಜಿತಂ ॥೪೬॥

ಇ[೨]ನಿ[೨]ಯಳ ಮೃದುಕರತಳಮಂ
ವಿನಯದೆ ಪಿಡಿದಾಸ್ಯಮಂ ನಿರೀಕ್ಷಿಸಿ ಕುರುಳಂ
ಕೊನೆಯುಗುರಿಂ ತಿರ್ದುತೆ ಮೆ
ಲ್ಲನೆ ಪಲ್ಗದಿರುರ್ವೆ ನಗುತೆ ನೃಪನಿಂತೆಂದಂ ॥೪೭॥

ಬಱಿದೆ ಪಯೋಧರನಾಮಂ
ಮೆಱೆಯದೆನುತ್ತಾಂತುದೊಳಗೆ ಪಯಮನುರೋಜಂ
ಸೆಱೆವಿಡಿದುದದಱ ಬಣ್ಣಮ
ನುಱೆ ಚೂಚಕದೊಳ್ [೩]ಸರೋರುಹಾಯತನಯನೇ[೩] ॥೪೮॥

ಮದನಗುಣರುಚಿಯನಾಂತುದು
ಮದನಾರಿಶರಾಸನಾಗ್ರಮಮರಾಧ್ವಂ ತೋ
ರ್ಪುದು ನಳಿನಂ ಶಶಿರುಚಿದಾ
ಳ್ದುದು ನಿನ್ನೊಳ್ಕಾಂತೆ ಪೇಳದೇಂ ಕೌತುಕಮೋ ॥೪೯॥

॥ವ॥ ಎಂದು ನುಡಿವರಸನ ಸರಸೋಕ್ತಿಗೆ ಮನದೊಳ್ಮುದಮಂ ಮಾತಿನೊಳ್ಮಾ-

---

೧ ನೆ (ಮೈ, ಮೂ) ೨ ನೆ (ತಾ, ಧಾ, ಕ, ಮೂ, ಮೈ) ೩ ಸರೋಜಹಾಯತ ನಯನೇ (ಮೈ, ಮೂ)

ಧುರ್ಯಮಂ ಮೊಗದೊಳ್ ಲಜ್ಜೆಯಂ ಕಟಾಕ್ಷದೊಳ್ ಕಟ್ಟಳ್ಕಱಂ ತಳೆದು ವಿಳಾಸಂ ಬಡೆದೊಪ್ಪುತ್ತಮಿರೆಯಿರೆ—

ನವಮಾಸಂ ನೆಱೆ[1]ದುದು ಮಾ
ನವಪತಿಪತ್ನಿಯ ಪೊದಳ್ದ ಗರ್ಭಕೆ ಸಖಿಯರ್
ನವಹರ್ಷಂದಳೆದಿರ್ದರ್
ನವಗ್ರಹಂ ಸುಕರವೃತ್ತಿದಾಳ್ದತ್ತಾಗಳ್ ॥೫೦॥

ನಳಿನಿ ಮರಾಳಮನೆಸೆವು
ತ್ಪಳಿನಿ ಸುಗಂಧಮನುದಾರಕೃತಿ ಸಿತಯಶಮಂ
ತಿಳಿಜೊನ್ನಮನಿಂದೂಜ್ವಳ
ಕಳೆಗಂಪಡೆವವೊಲಬಳೆ ಪಡೆದಳಮಳಾರ್ಭಕನಂ ॥೫೧॥

ನಳಿನಂಗಳಂತೆ ಸಖಿಯರ
ವಿಳಸಿತವದನಂಗಳಲರೆ ಗರ್ಭಾಚಳ[2]ದಿಂ
ದೆಳೆನೇಸಱಂತೆ ರಾಗೋ
ಜ್ವಳರುಚಿ ತಾನುದಿಸಿ ತೊಳಗಿದಂ ನೃಪತನಯಂ ॥೫೨॥

ಬಲಗ[3]ಣ್ಕೆತ್ತಿ[3]ದುದೀಶ್ವರಾರ್ಚಕರ ಕೈಲಾಸಾದ್ರಿಯೊಳ್ಶಂಕರಂ
ನಲಿದಂ ಭೂರಮೆಯುತ್ಸವಂಬಡೆದಳಿಂದ್ರಾದ್ಯರ್ಮುದಂಬಟ್ಟರೀ
ನೆಲದೊಳ್ಬಾಳ್ವ ಜನಾಳಿ ಕೇ[4]ಳ್ದು[4]ಗುಡಿಗಟ್ಟಿತ್ತಲ್ಲಿ ಬಂ[5]ಧು[7]ಕ್ಷಿತೀ
ಶಲಸನ್ಮಾನಸವಾರ್ಧಿ ಪೆರ್ಚಿದುದು ತತ್ಪುತ್ರೋದಯೋತ್ಸಾಹದೊಳ್ ॥೫೩॥

॥ವ॥ [6]ಅಂತುಮಲ್ಲದೆಯುಂ—

ಕಳೆಯೇಱೆ ನಳಿನಸಖನು
ಜ್ವಳಿಸಿದನಿಳೆ ಪುಳಕವಾಂತುದಖಿಳರ್ ಮುದಮಂ
ತಳೆದರ್ ಕೆಳದಿಯರೊಸಗೆಯ
ನಿಳಾಧಿಪರ್ಗಱಿಪಿ ಸೆಳೆದರುಚಿತಮನಾಗಳ್ ॥೫೪॥

॥ವ॥ ಆಗಳ್ ಸಂಭ್ರಮಂಬೆರಸು—

---

೧ ಪ (ಮೂ, ತಾ) ೨ ಳ (ಮೂ) ೩ ಣ್ಕೆತ್ತಿ (ಮೂ) ಣ್ಗೆತ್ತಿ (ಬ) ೪ ಳಿ (ಮೈ)
೫ ದು (ಮೂ, ಮೈ, ಕ) ೬ ಅದಲ್ಲದೆಯುಂ (ಮೂ)೭ ತ (ಮೂ)

ವಿಳಸತ್ಕಾಶ್ಮೀರರಾಗಂಬಡೆದ ತನು ಬೆಡಂಗಾಗೆ ಮಂದಸ್ಮಿತಂ ಮಂ
ಜುಳವಕ್ತ್ರಾಂಭೋಜದೊಳ್ಕಂಗೊಳಿ[೧]ಸೆ[೧] ಕುಣಿಯೆ ವಕ್ಷೋಜಕೋಕದ್ವಯಂ ಮೇ
ಲಳಿಪಿಂಡಂಗಾಂಗರಾಗಕ್ಕೆಳಸಿ ಬಳಸೆ ಬಂದಳ್ ಪ್ರತೀಹಾರಿ ಸಂಧ್ಯೋ
ಜ್ವಳೆ ಪುತ್ರಾದಿತ್ಯಬಿಂಬೋದಯಮನಱಿಪುವೊಂದುಜ್ಜುಗಂಬೆತ್ತು ಬೇಗಂ ॥೫೫॥

॥ವ॥ ಅಂತು ಸತ್ವರಂ ಪರಿತಂದು ನಿಂದು ವಿಮಳಹಾರಾಂಶುಚಂದ್ರಿಕೆಯಿಂ ಕರಾರುಣಸರಸಿಜಂ ಮುಗಿದುದೆಂಬಂತಂಜಲಿಪುಟಂ ರಂಜಿಸೆ ಬಿಂಬಾಧರದ ಕೆಂಬೆಳಗ[೨]ನೊ[೨]ತ್ತರಿಸಿ ವಿಶದದಶನರುಚಿನಿಚಯಂ ಪಸರಿಸುತ್ತಿರೆ ಕಣ್ಗದಿರ್ ತಣ್ಗದಿರಂತೆ ಸಭಾಸದರ ನಯನಕುಮುದಮನಲರ್ಚೆ ನಲವಿನಿಂದೊಡ್ಡೋಲಗಂಗೊಟ್ಟು ಪಟ್ಟವಣೆಯೊಳ್ಕುಳ್ಳಿರ್ದ ನರೇಶ್ವರಂಗೆ ದೇ[೩]ವಾ[೩] ಪಿರಿ[೪]ದೊ[೪]ಸಗೆಯೆಂದಿಂತೆಂದಳ್—

ಅವನಿಪಸಾರ್ವಭೌಮ ಭವದೀಯಮನೋರಮೆ ಸನ್ಮುಹೂರ್ತದೊಳ್
ಕುವರನನೀಗಳೊಲ್ದು ಪಡೆದಳ್ ಗುಡಿಗಟ್ಟಿಪುದೆಂದು ಪೇಳ್ದ ತ
ದ್ಯುವತಿಗನರ್ಘ್ಯಮಂಡನಮನೊಲ್ದು ಚಿತಂಗುಡು[೫]ತೀ[೫]ಕ್ಷಿಸಲ್ ಮಹೋ
ತ್ಸವಮನನೇಳ್ದನೇಳೆ ಪುಳಕಾಂಕುರ[೬]ವಂ[೬]ಗದೊಳಾ ನರಾಧಿಪಂ ॥೫೬॥

॥ವ॥ ಅಂತೇಳ್ದು ನಡೆಗೊಳ್ವಾಗಳ್ ಜಯರವಮು[೭]ಖ[೭]ರಮುಖನಿಖಿಲವಂದಿವೃಂದಪರಿಪ[೮]ಠಿ[೮]ತಸರಸವಿರಚಿತರುಚಿರತರನಿಜಬಿರು[೯]ದ[೯] ಗದ್ಯಪದ್ಯಸಮುದಯಸಮುದ್ಘೋಷಸಹಚರಿತಮೃದುಮೃದಂಗಪಟುಪಟಹಶಂಖತಾಳಕಹಳಾವೇಣುವೀಣಾದ್ಯನೇಕಲೋಕಕರ್ಣಕೌತುಕಕರವಿ[೧೦]ತ[೧೦]ತಾನವದ್ಯವಾದ್ಯರವಂ ದಶದಿಶೆಯೊಳ್ಪರ್ಬಿ ಪಸರಿಸೆಯುಂ ಪರಿವೃತಮಕುಟವರ್ಧನನಿಕರಮಕುಟತಟಘಟಿತಮಂಜುಮಾಣಿಕ್ಯ[೧೧]ಮಂಜರೀ[೧೧]ಸಂಜನಿತ[೧೩]ತೇಜಃಪುಂ[೧೨]ಜಂ[೧೨]ಕಂಜಸ[೧೩]ಖಕರನಿಕರದಂತೆ ತಳ್ತಳಿಸಿ[೧೪]ಪೊ[೧೪]ಳೆಯೆಯುಂ ಶುಂಭ[೧೫]ನ್ನಿ[೧೫]ತಂಬಬಿಂಬಕುಂ[೧೬]ಭಿ[೧೬] ಕುಂಭಸ್ಥಳೋಪಲಂಬಿತ ಕೌಸುಂಭಾಂಬರಚುಂಬಿತಜೃಂಭನ್ಮಣಿಮಯಮೇಖಲಾವಲಯಕಲಿತಕಲಕಿಂಕಿಣೀಗಣಝುಣಝುಣರ[೧೭]ಣಿ[೧೭]ತ[೧೮]ಸು[೧೮]ಕರ ಕಂಕಣರವಸು[೧೯]ರು[೧೯]ಚಿರಕರಸರಸಿಜ[೨೦]ಬಾ[೨೦]ಲಾಚಯ ಲೀಲಾ[೨೧]ಚಾ[೨೧]ಲಿತಚಾರುಚಾಮರಂ ಪಾರ್ಶ್ವಯುಗದೊಳ್ ಪರಿರಂಜಿಸೆಯುಂ ನಡೆತಂದು ಪರಿವರ್ಜಿತಾಶೇಷಪರಿಜನಂ ನಿಜಕರಗ್ರಹೀತಾ-ಮಾತ್ಯ ಕರಪಲ್ಲವನುಲ್ಲಸಿತಹೃದಯಂ ಪ್ರಸನ್ನಮುಖಂ ಪ್ರಸೂತಿಸದನಾಭಿಮುಖನಾಗಿ

---

೧ ಸಿ (ಮೂ, ತಾ) ೨ ವೊ (ತಾ) ೩ ವ (ಮೂ) ೪ ಯೊ (ವ್ಯ, ಬ) ೫ ತ್ರೀ (ತಾ)
೬ ಮಂ (ಮೂ) ೭ ಖು (ರಿ) ೮ ತಂ (ರಿ) ೯ ದು (ರಿ) ೧೦ ವಿತಾನ (ರಿ)
೧೧ ರಂಜಿತ ಮಂಜೀರ...(ತಾ) ೧೨ ಜ (ಮೂ), ಜಃ (ಬ) ೧೩ ತೇಜಃಕಂಜ (ತಾ)
೧೪ ಬೆ (ಮೂ) ೧೫ ನಿ (ಮೂ,ಕ,ಧಾ) ೧೬ ಭೀ (ಮೂ) ೧೭ ಚಿ (ಮೈ) ೧೮ ಸಂ (ಮೈ)
೧೯ ರ (ಧಾ, ಬ) ೨೦ ಬ (ಮೂ) ೨೧ ಜಾ (ಮೂ)

ಬರ್ಪಲ್ಲಿ ನಿಜಾಂತಃಪುರದೊಳ್ ಸಡಗರಿಪ ವಿಳಾಸಿನಿಯರಿಂ ಗುಡಿಗಟ್ಟುವ ಪೌರಜನದಿಂದೆಡೆಯಾಡುವ ಬಂಧುವರ್ಗದಿಂ ಪೊಡೆವ ಮಂಗಳ[1]ವಱ[1]ಗಳಿಂ ಮಿಳಿರ್ವ ಕೇತನಂಗಳಿಂ ತಳಿವ ಲಾಜೆಗಳಿಂ ಪೊಳೆದೆತ್ತುವಾರತಿಗಳಿಂ ಕೆಳೆಗೊಳಿಪ ರಂಗವಲ್ಲಿಗಳಿಂ ಬೆಳಗುವ ಮಣಿದೀ[2]ಪಿ[2]ಕೆಗಳಿಂದಿಳಿಪಿದ ಫಳಾವಳಿಗಳಿಂ ಗೃಹ ರಕ್ಷೆಗೆಯ್ವ ಸಹಚರಿಯರಿಂ ವಿಹರಣಂಗೊಂ[3]ಬ[3]ವಿದಗ್ಧೆಯರಿಂ ನೆರಪು[4]ವ[4] ರಕ್ಷಾಸಾಧನಂಗಳಿಂ ಪರಪುವ ಧೂಪಧೂಮಂಗಳಿಂ ಹರಗೃಹಕೊಯ್ವ ಬಾ[5]ಯಿ[5]ನಂಗಳಿಂ ಪರಸುವ [6]ಮಾ[6]ಹೇಶ್ವರರಿಂದತಿಸಂಭ್ರಮನಪ್ಪುಕೆಯ್ದು ಕಣ್ಗೆ ಕೌತುಕಮಂ ಮನಕ್ಕೆ ಸಂತಸಮನೀವುತ್ತಿರೆ ನಿರೀಕ್ಷಣೆಗೆಯ್ಯಲೆಳಸಿ ಗಳಿಲನೆಯ್ತಂದು ಕುಲ-ವೃದ್ಧೆಯರ್ ತೋಱೆ ಕುಮಾರನಂ ನೋಡಿ ಸುಧಾಕರನಂ ಕಂಡ ಸುಧಾಬ್ಧಿ ಪೆರ್ಚು-ವಂತೆ ಮೈವೆರ್ಚಿ ಶಿವಪ್ರಸಾದಮಹಿಮೆಯಂ ಬಗೆದು ಬಗೆಯೊಳ್ಮ[7]ದಂದಳೆದಿರ್ಪನ್ನೆಗಂ[7]—

ಗುರುಗಳ್ಬಂದು ಶಿವಾಂಘ್ರಿವಾರಿಪರಿಸೇಕಂಗೆಯ್ದು ಕಾರುಣ್ಯದಿಂ
ಪರಸುತ್ತಿಟ್ಟು ವಿಭೂತಿಯಂ ಪಣೆಯೊಳಾಗಳ್ ಶೈವಮಂತ್ರಂಗಳಿಂ
ಪರಿಶುದ್ಧಪ್ರಭುಲಿಂಗಮಂ ಧರಿಸಿ ಬಾಲಂಗೊಲ್ದು ಮಾಹೇಶ್ವರಾ
ವರಣರ್ಮಾಡಿಸಿದರ್ ಮಹೋ[8]ತ್ಸವ[8]ದಿನೊಪ್ಪಲ್ ಜಾತಕರ್ಮಂಗಳಂ ॥೫೭॥

ಹರಮಂತ್ರೋದ್ಭವನೀತನಿನ್ನುಮದನೇ ಸಂರಕ್ಷಿಪಂ ತಪ್ಪದೆಂ
ದಿರದಾಳೋಚಿಸಿ ಮಂತ್ರಲಕ್ಷ್ಯವೆಸರಂ ಭೂಕಾಂತಸಂತಾನದೊ
ಳ್ದೊರೆವೆತ್ತಗ್ಗದ ಕೀರ್ತಿವೆತ್ತೆಸೆವನೆಂದನ್ವರ್ಥಮಂ ರಾಜಶೇ
ಖರನೆಂದಿತ್ತಭಿಧಾನಮಂ ತಳೆರ್ದರಾಚಾರ್ಯರ್ಮಹೋತ್ಸಾಹದಿಂ ॥೫೮॥

॥ ವ ॥ ಅನಂತರಮುರಸನತಿಪ್ರಮೋದದಿನಪರಿಮಿತಧನಕನಕವಸನಮಾಲ್ಯಮಣಿ ಭೂಷಣಂಗಳಿಂ[9]ಮಾ[9]ಹೇಶ್ವ[10]ರಾ[10]ರಾಧನಂಗೆಯ್ದು ಸಾನುರಾಗಂ ನಾನಾದಾನಂಗಳ [11]ನ[11]ನೂನಮೆನೆ ನೆಗಳ್ದು ಪೆರ್ಮೆವೆ[12]ತ್ತು[12]ಕೂರ್ಮೆಯಿಂ ಶಿವಕಥಾಕಮನೀಯ ಮಾಣಿಕ್ಯಮಂಜರೀಕರ್ಣಪೂರಂ ಶಿವಚರಣಸಮರ್ಚನಸಾಮ್ರಾಜ್ಯಧುರಂಧರಂ ಶಿವ-ಲಿಂಗಪತಂಗಸಂಗತಮಂಗಳಹೃದಯನಳಿನಂ ಶಿವಧರ್ಮಕಮಳಾಕರವಿಮಳಮ-ರಾಳಂ ಶಿವಶರಣಜನಮನೋವನವಸಂತಂ ಸತ್ಯೇಂದ್ರಚೋಳಧರಣೀಶ್ವರಂ ಸಚಿವ ಸಮೇತಂ ಸಕಲಧರಣೀಪಾಲರೋಲೈಸುತ್ತಿರೆ ಸಾಮ್ರಾಜ್ಯಸಂಜನಿತಸುಖಮನನು-ಭವಿಸುತ್ತಮಿರೆಯಿರೆ—

---

೧ ರವ (ಧಾ) ೨ ಪಿ (ಧಾ) ೩ ಗೈವ (ಮೂ) ೪ ವಾರಕ್ಷ (ಬ), ಪರಕ್ಷ (ತಾ, ಮೂ) ೫ ಗಿ (ಮೂ) ೬ ಮ (ಮೂ) ೭ ಮುಂದಂಬಡೆದಿರ್ಪನ್ನೆಗಂ (ಮೂ), ಮುದಮಂತಳೆ (ಬ) ೮ ತ್ಸಹ(ರಿ) ೯ ಮ (ಮೂ) ೧೦ ರ, ರಾ (ಧಾ) ೧೧ + ಹೃದಯ ಸಂತೋಷದಿ (ತಾ, ಧಾ) ೧೨ ತ್ತ (ವ್ಯೆ, ಮೂ, ಬ)

ಪನ್ನೆರಡುದಿನದೊಳಿಟ್ಟರ್
ಸನ್ನುತಸುಕುಮಾರಕಂಗೆ ಮಣಿದೊಟ್ಟಿಲನೆ
ತ್ತನ್ನೆಗಳ್ದಿರೆ ವಾದ್ಯರವಂ
ಕನ್ನೆಯರಿರ[೧]ದೆ[೧]ಯ್ದೆ ಮಾಡಿದರ್ ಮಂಗಳಮಂ ॥೫೯॥

॥ವ॥ ತನ್ಮಹೋತ್ಸವಾನಂತರಂ—

ತೊಳಗುವ ರನ್ನದೊಟ್ಟಿಲೊಳೆ ಪಟ್ಟಿರಿಸುತ್ತೆ ಕುಮಾರನಂ ಮುದಂ
ದಳೆದೆಳೆವೆಣ್ಗಳೊಲ್ದು ರಸನಾಂಚಲದೊಳ್ ದನಿದೋಱಿ ಕಂದ ಜೋ
ವಿಳಸಿತರೂಪ ಜೋ ವಿನಯಭೂಷಣ ಜೋ ಸುಕುಮಾರ ಜೋ ಸುಧಾ
ನಿಳಯ ಸುವಾಣಿ ಜೋ ಸುಭಗ ಜೋ ವಿಭು ಜೋಯೆನುತೊಪ್ಪಿ ತೂಗಿದರ್ ॥೬೦॥

ಮಂಗಳಾಕರ ಜೋ ಮನೋಹರ ಜೋ ಮಹೇಶ್ವರ ಜೋ ಮಹಾ
ಲಿಂಗಸಂಗತ ಜೋ ಮುದನ್ವಿತ ಜೋ ಮೃದುಸ್ಮಿತ ಜೋ ಜನೋ
ತ್ತುಂಗವಂದಿತ ಜೋ ಜಗನ್ನುತ ಜೋ ಜ[೨]ಯೋ[೨]ನ್ನತ ಜೋಯೆನು
ತ್ತಂಗನಾಜನಮೆಯ್ದೆ ಪಾಡುತೆ ಜೋಗುಳಂ ಮಿಗೆ ತೂಗಿದರ್ ॥೬೧॥

ಅರಿನೃಪರ ಸಿರಿಯ ಸೆಱಿ[೩]ಯಂ
ತರಳಂ ತಾನಿಂತು ಪಿಡಿವೆನೆಂದ[೪]ಱು[೪]ಪುವವೋಲ್
ಸರಳಕರಾಂಗುಲಿಯಿಂದಂ
ತರುಣೀಜನದಳಿಕದಳಕಮಂ ಬ[೪]ರ[೪]ಸೆ[೫]ಳೆ[೫]ವಂ ॥೬೨॥

ನಿರುಪಾಧಿಕಪ್ರಕಾಶಾಂ
ತರಣಿಜ್ಯೋತಿಗೆ ಸಮಾನಮಲ್ತೆಂದು ಕರಂ
ಪರಿಹಾಸಂಗೆಯ್ವಂತಿರೆ
ತರುಣಂ ಮಣಿದೀಪಮಂ ನಿರೀಕ್ಷಿಸಿ ನಗುವಂ ॥೬೩॥

ಶಿವನ ಜಡೆಮುಡಿಯ ಶಶಿಕಳೆ
ಭುವನದೊಳೀ ಕುವರವರಿಜುವಡೆದುದಯಿಸಿತೆಂ
ಬವೊಲೆಸೆದು ಕಳೆಗಳೊಡವೆರೆ
ಯೆ ವಿಳಾಸಂಬೆತ್ತು ಬಳೆದನವನಿಪತನಯಂ ॥೬೪॥

---

೧ ದೈ (ಮೈ, ಕ, ಬ, ಮೂ) ೨ ನೋ (ತಾ) ೩ ಜಿ (ಬ) ೪ ರೆ (ಬ, ತಾ, ಧಾ)
೫ ಳ (ಮೂ)

ದರಹಸನಾಮೃತವರವ
ಲ್ಲರಿಯಂಕುರದಂತೆ ತೋಱೆ ಮೊಳೆವಲ್ಲದಕಂ
ಬುರುಹಮುಖಿ ಸುರಿವವೋಲ್ಪಾ
ಲ್ಸರಿಯು ಪಯೋಧರದಿನಮೃತಮಂ ಪೊ¹ದೆ¹ದಿತ್ತಳ್ ॥೬೫॥

॥ವ॥ ಮತ್ತಮತಿಸ್ನೇ²ಹಂ²ಬೆರಸು—

ಬರೆ ತೆಗೆದಪ್ಪಿ ಚೀನವಸನಾಂಚಲಮಂ ನಸುನೂಂ³ಕಿ³ಹಾರಮಂ
ಕರತಳದಿಂ ಕೆಲಕ್ಕೆ ತೆಗೆದೊಯ್ಯನೆ ಸೋಗಿಲೊಳಿಟ್ಟು ನೇಹದಿಂ
ತೊರೆದಿರದೆಚ್ಚುಪಾಯ್ವ ಮೊಲೆವಾಲ್ಗಳನಳ್ಕಱೊಳೂಡಿ ನೋಡಿ ಭಾ
ಸುರಸುಕುಮಾರನಂ ನಲಿದಳಂಗನೆ ಪೂರ್ಣವಿಳಾಸದೇಳ್ಗೆಯಿಂ ॥೬೬॥

ಈ ತೋಳೊಳಾಂತು ತೋರ್ಪೆನಿ
ಳಾತಳಮಂ ಶತ್ರುಭೂಪರಂ⁴ಜಯಿ⁴ಸುವೆನೆ
ನ್ನೀ ತೋಳೊಳೆಂದು ತೋರ್ಪವೊ
ಲಾ ತೋಳಾಡಿಸುವನವನಿಪಾಲಕತನಯಂ ॥೬೭॥

ಸವಿನಗೆಯೆಂಬಮರ್ದಿನ ಸೊನೆ
ಕವಿತರ್ಪವೊಲಾಗೆ ಸುರಿವ ಲಾಲಾಜಳಮು
ಣ್ಮುವ ಮೊಳೆವಲ್ಮಿನುಗುತ್ತಿರೆ
ಕುವರಂ ಕುಳ್ಳಿರ್ದು ಜನನಿಯೊಳ್ಬಿನದಿಸುವಂ ॥೬೮॥

॥ವ॥ ಅಂತುಮಲ್ಲದೆಯುಂ—

ನೆಲವೆರ್ಚುವ ಪೆಣ್ಗಳ ಕರ
ತಲದಿಂ ಕರತಲಕೆ ಬರ್ಪ ಬಾಲಕನಾಗ
ಳ್ಗೆಲೆವಂದಂ ಕೆಂದಾವರೆ
ಯಲರಿಂದಲರ್ಗೆಯ್ದೆ ತಳರ್ವ ಹಂಸಾರ್ಭಕನಂ ॥೬೯॥

ನಗಿಸುತ್ತಿರ್ಕೈಗಳಿಂ ಮಸ್ತಕ⁵ಮಂ⁵ನೆಳವಿ ಮುದ್ದೀವುದೆಂದಪ್ಪಿ ಶಿಷ್ಟೋ
ಕ್ತಿಗಳಂ⁶ತಾಂ ಪೇಳ್ದು ಪೇ⁷ಳ್ವ⁷ಂತಿರೆ⁶ ಕಲಿಸಿ ತೊದಲ್ವಾತು ಚೆಲ್ವಾಗೆ ವಾಮಾ
ಕ್ಷಿಗೆ ಪುರ್ಬಿಂ ಜರ್ಬಿನಿಂ ನೋಡೆನುತಜುಪಿ ನೃಪಂ ಯತ್ನದಿಂ ಪಂಚವರ್ಣ
ಪ್ರಗತಾಂಬಾಪಾಣಿಕೀರಪ್ರಭತನಯನಿನಾಸಂದಮಂ ತಾಳ್ದನಾಗಳ್ ॥೭೦॥

---

೧ ಡೆ (ಮೂ) ೨ ಹಮಂ (ಧಾ) ೩ ಕೆ (ರಿ) ೪ ಜಯ (ತಾ, ಬ, ಧಾ, ಕ); ಜೈ (ಮೂ)
೫ ವ (ಮೂ) ೬ ತಾಂ ಪೇಳ್ವಂತಿರೆ (ಮೈ, ಕ) ೭ ಳ್ದಂ (ಮೂ)

[೧]ತೆ[೧]ರಳಂಗೊಪ್ಪಿರ್ದುದೊಳ್ಮಾಣಿಕದರಳೆಲೆ ನೀಲಂಗಳಿಂ ತಳ್ತ ಕರ್ಣಾ
ಭರಣಂ ನುಣ್ಮುತ್ತಿನೇಕಾವಳಿ ಮಿಸುಪ ಹರಿದ್ರತ್ನಮೊಂದಿರ್ದ ಮುಂಗೈ
ಸರಮುದ್ಯತ್ಸ್ವರ್ಣದಿಂ ಕೀಲಿಸಿದ ಪುಲಿಯುಗುರ್ಪುಷ್ಯರಾಗಾಂಗದಂ ಬ
ಜ್ಜರದಿಂದಿಂಬಾದ ಪೊಂಗೆಜ್ಜೆಗಳೊಡನೆ ಬೆಡಂಗಾದ ಮಂಜೀರಯುಗ್ಮಂ ॥೭೧॥

ಎಳೆನಗೆಯು[೨]ಣ್ಮೆ[೨] ಮುದ್ದುಮೊಗದೊಳ್ಮಱಿಯಂಚೆಯನಟ್ಟಲೆಂದು ಮಂ
ಜುಳತರಮಾ[೩]ಗೆ[೩] ದಟ್ಟಡಿಯನಿಕ್ಕುವ ಬಾಲಕನಂಗದೊಂದು ಮಾ
ರ್ಪೊಳಪಿರೆ ನೀಲಕುಟ್ಟಿಮದೊಳುರ್ವರೆ ತಜ್ಜನನೀಸಪತ್ನಿ ತಾಂ
ತಳೆದಳೊ ತತ್ಸಮಾತ್ಮಭವನಂ ಪುರುಡಿಂದೆನೆ ಕಣ್ಗೆ ರಂಜಿಕುಂ ॥೭೨॥

ಪೊಳೆವಿಂದೂಪಳಕುಟ್ಟಿಮಸ್ಥಳದೊಳೆತ್ತಂ ಸೂಸೆ ತೀವಿರ್ದ ನಿ
ರ್ಮಳಕರ್ಪೂರರಜಂಗಳಿಂ ತಳೆದು ಧೂಳೀಕೇಳಿಯಂ ಗಂ[೪]ಡಳ[೪]ದೊಳ್
ಮಿಳಿರ್ದಾಡುತ್ತಿರೆ ಕುಂಡಲಂ ಝಣರೆನಲ್ಪೊಂಗೆಜ್ಜೆವೊಂದೊಂದು ಪ
ಲ್ಮೊಳೆ ಚೆಲ್ವಾಗಿರೆ ಮುದ್ದುವೀಱಿ ನಗುತೇಳ್ತಂದಪ್ಪುವಂ ಮಾತೆಯಂ ॥೭೩॥

ಅರಳೆಲೆ ನೊಸಲೊ[೫]ಳ್ಚಲಿಸು
ತ್ತಿರೆ[೫] ಮಣಿ[೬]ಮಾಂ[೬]ಗಾಯ್ಗಳೊಲೆಯೆ ಕಿ[೭]ಱು[೭]ಗೆಜ್ಜೆಗಳಾ
ವರಿಸಿ ದನಿಗುಡೆ ಮೃದುಸ್ಮಿತ
ಮಿರೆ ಮೊಗದೊಳ್ಮುದ್ದುವೀಱಿ ಕುಣಿವಂ ಕುವರಂ ॥೭೪॥

॥ವ॥ ಇಂತನಂತವಿಳಾಸಮುಂ ಮೆಱೆದು—

ವಿಳಸತ್ಪೂರ್ವಾದ್ರಿಯೊಳ್ ಭಾಸುರತರುಣದಿನಾಧೀಶಬಿಂಬಂ ಸುಧಾಬ್ಧಿ
ಸ್ಥಳದೊಳ್ಬಾಲಂ ಮರಾಳಂ ಮಳಯಜವನದೊಳ್ಕುಂಜರೇಂದ್ರಾರ್ಭಕಂ ಮೇ
ಣ್ಬಳೆವಂತತ್ಯಂತತೇಜಂ ವಿಮಳತೆ ವಿ[೮]ಸರ[೮]ದ್ಭದ್ರಮೊಂದಾಗಿ ತನ್ನೊಳ್
ಬಳೆಯಲ್ ಸತ್ಯೇಂದ್ರನಂತಃಪುರದೊಳೆ ಬಳೆದಂ ಸತ್ತ್ವಸಾರಂ ಕುಮಾರಂ ॥೭೫॥

॥ವ॥ ಇಂತು ಬಳೆವುತ್ತಮಿರೆಯಿರೆ—

೧ ಕ (ಕಾ) ೨ ಮೊ (ಧಾ) ೩ ದ (ಮೂ) ೪ ಗ (ತಾ, ಧಾ) ೫ ಳ್ಚಾಲಿಸುತಿರೆ (ರಿ)
೬ ಮೂ (ತಾ, ಬ, ಧಾ, ಮೂ) ೭ ಱಿ (ಬ, ಧಾ) ೮ ಳಸ, (ಮೂ)

ಜನಪತಿಪುತ್ರನಂ[೧]ಶುಭ[೧]ಮುಹೂರ್ತದೊಳೋರಗೆಗೊಂಡ ಮಂತ್ರಿಪು
ತ್ರನೊಳೊಡಗೂಡಿ ಮಂಗಳವಿಳಾಸಮೊಡಂಬಡೆ ಸರ್ವವಿದ್ಯೆ ಸಂ
ಜನಿಪವೊಲೋದಲಿಟ್ಟು ಮುದಮೊಂದಿರೆ ಕಲ್ತರನೂನವಿದ್ಯೆಯಂ
ಘನತರಶಸ್ತ್ರಶಾಸ್ತ್ರಹಯಹಸ್ತಿ[೨]ವಿಶೇಷಕ[೨]ವಾಹಕತ್ವಮಂ ||೭೬||

||ವ|| ಇಂತು ಪರಿಣತಾಖಿಳರಾಜವಿದ್ಯಾವಿಶಾರದರೆನಿ[೩]ಸೆ[೩] —

ಕಲಿಪಂಗೆ ನೆರೆಯದಧಿಕೋ
ಜ್ವಲಕಲೆ ಕೈಸಾರ್ದುದಮಳಮತಿಮತಿಗೆ ಸುಧಾ
ಜಲನಿಧಿಗಿಲ್ಲದ ಕಳೆಗಳ್
ನೆಲೆಗೊಂ[೪]ಡ[೪]ವೊಲಮಳಕಮಲರಿಪುಕಳೆಗಾಗಳ್ ||೭೭||

||ವ|| ಎಂದಧಿಕಬುಧಕದಂಬಂ ಪೊಗಳುತ್ತ[೫]ಮಿರೆಯಿರೆ[೫] —

ಸಮಚರಿತರ್ಸಮವಿ[೬]ನ[೬]ಯರ್
ಸಮಾನವ[೭]ಯಸ[೭]ರ್ಸಮಪ್ರಭರ್ಸಮವಿದ್ಯರ್
ಸಮರೂಪರ್ಸಮಗುಣರು
ತ್ತಮನೃಪಸುತಮಂತ್ರಿಪುತ್ರರಿರ್ವರ್ಬಳೆದರ್ ||೭೮||

ಅವರಿರ್ವರಿರವನುರ್ವರೆ
[೮]ಯುವ[೮]ರೀಕ್ಷಿಸುತಂ ಸಹೋದರರ್ನಿಜಮೆಂಬರ್
ವಿವಿಧವಿಳಾಸದಿನಾ ನೃಪ
ಯುವತಿಯುಮಾ ನೃಪನುಮಳ್ಕಱಿಂ ಸರಿಗಾಣ್ಬರ್ ||೭೯||

ನಡೆ ನಗೆ ಪುಗೆ ಮಾಂದ್ಯದೊಳೊ
[೯]ಳ್ದೊ[೯]ಡೆ ನುಡಿ ಕಡುನುಣ್ಪನಾನೆ ರಾಗದೊಳೆ ಮನಂ
ಕಡೆಗಣ್ಡೊಡರ್ದಿರೆ ಜವ್ವನ
ಮಡಿಯಿಟ್ಟುದು ಮಂತ್ರಿಪುತ್ರನಂಗದೊಳಾಗಳ್ ||೮೦||

---

೧ ಸು (ಮೂ) ೨ ವಿಶೇಷ (ಮೂ) ೩ ಸಿ (ತಾ, ಮೂ) ೪ ಳ್ವ (ಮೈ, ತಾ, ಕ, ಟ) ೫ ಮಿರೆ (ಬ, ಕ, ರಿ) ೬ ನೆ (ಮು, ಬ) ೭ ಯ (ತಾ, ಮೂ, ಧಾ) ೮ ನಿ (ತಾ) ೯ ಳ್ಪೊ (ಧಾ), ಳ್ಕೊ (ಮೂ), ಳ್ತೊ (ರಿ)

ಜಾಣ್ಮೆಗೆ ಜವ್ವನಂ ನೆಱೆದುದುಣ್ಮಿದ ಜವ್ವನಕೆಯ್ದೆ ಜಾಣ್ಮೆಕೈ
ಗಣ್ಮಿದುದೇಳ್ಗೆವೆತ್ತ ಸೊಬಗಿಂಗಳವಟ್ಟುದು ಚೆ[೧]ಲ್ವು[೧] ಚೆಲ್ವು[೨]ಮಂ[೨]
ಕಣ್ಮನಕೊಪ್ಪುವಂತೆ ಸೊಬಗೊಂದಿದುದಗ್ಗದ ಲೀಲೆಗುತ್ಸವಂ
ಪೊಣ್ಮಿದುದುತ್ಸವಕ್ಕೆಸೆದುದಗ್ಗದ ಲೀಲೆ ತದಂಗಸಂಗದಿಂ ॥೮೧॥

॥ವ॥ ಆಗಳಾ ಮಿತವಚನನತಿವಿತತಕೌತುಕಾವಹನೆನಿಸಿ—

ಶತಪತ್ರಾಯತಲೋಚನಂ ನಗೆಮೊಗಂ ಬಿಂಬಾಧರಂ ವಜ್ರರಂ
ಜಿತದಂತಾವಳಿ ದೀರ್ಘಬಾಹುಯುಗಳಂ [೩]ವಿದ್ಯುತ್ಕ[೩]ಪೋಲದ್ವಯಂ
ವಿತತೋ[೪]ರ[೪]ಸ್ಥಲಮುನ್ನತಾಂಸಮರುಣಾಂಭೋಜಸ್ಫುರತ್ಪಾಣಿ ರಂ
ಜಿತರಂಭೋರು ಬೆಡಂಗುವಿಱೆ ತಳೆದಂ ಸೌಂದರ್ಯಸೌಭಾಗ್ಯಮಂ ॥೮೨॥

॥ವ॥ ಇಂತು ಸ[೫]ಮಾ[೫]ರೂಢಪ್ರೌಢಯೌವನಾಲಂಕೃತಸಹಜಸೌಂದರ್ಯಮಾಧುರ್ಯಧುರಂಧರತೆಯನಪ್ಪುಕೈದಾರ್ಯಜನವಿನುತಗುಣಗಣಾಭರಣಭೂಷಿತನುಂ ವಿತತಸಿತಯಶಃಸುಧರ್ಮಸಮುದಿತದಯಾನ್ವಿತನಿರ್ಮಲಾಂ[೬]ತಃ[೬]ಕರಣನುಮಮಿತಶೌರ್ಯಧೈರ್ಯಚಾತುರ್ಯಗಾಂಭೀರ್ಯಪ್ರಕಟಿತನಿಜಪ್ರಭಾವನುಂ [೭]ಪರಮ[೭]ಶಿವಚರಣಾರವಿಂದಾಮಂದಮಕರಂದಪಾನಮತ್ತಮಧುಕರಾಯ[೮]ಮಾನ[೮]ನುಮಖಿಳಕಳಾನೈಪುಣ್ಯಜನವರೇಣ್ಯನುಮೆನಿಸಿ ಪೊಗಳ್ತೆವಡೆದು ರಂಜಿ[೯]ಪ[೯] ಮಿತವಚನನೊಡನೆ ಕೆಳೆಗೊಂಡು[೧೦]ಶೈಶವದಶೆಯಂ[೧೦]ವಿ[೧೧]ಸ[೧೧]ರ್ಜಿಸಲುಪಕ್ರಮಿಸಿ ರಾಜಶೇಖರಕುಮಾರನೋಜೆಯಿಂ ರಾಜಿಸುತ್ತಮಿ[೧೨]ರ್ಪಾಗಳ್[೧೨]—

ಅನುಪಮಚಿನ್ಹನಾರ್ಯಗುರುಗಳ್ ಪಿರಿದುತ್ಸವದಿಂದೆ ಬಂದು ತ
ಜ್ಜನಪತಿಪುತ್ರನಂ ಸಚಿವಪುತ್ರನುಮಂ ನಡೆ ನೋಡಿ ಚಿತ್ತದೊಳ್
ನನೆಕೊನೆವೋಗಿ ರಾಗಿಸಿ ಮಹಾಶಿವದೀಕ್ಷೆಯನೊಲ್ದು ಮಾ[೧೩]ಡಿ[೧೩]ಪಾ
ವನಶಿವತತ್ತ್ವಮಂ ತಿ[೧೪]ಳಿ[೧೪]ಪಿ ಲಿಂಗಸಮರ್ಚಕರಂ ನಿಮಿರ್ಚಿದರ್ ॥೮೩॥

॥ವ॥ ಅಂತು ಶಿವದೀಕ್ಷೆಯಂ ರಚಿಸಿ ಶಿವಮಂತ್ರೋಪದೇಶಂಗೆಯ್ದು ಕೃಪಾರಸಭರಕಟಾಕ್ಷದಿನಭೀಕ್ಷಿಸಿ ಮತ್ತಮಿಂತೆಂದರ್—

---

೧ ಲ್ವ (ಬ) ೨ ವಂ (ಮೂ) ೩ ದಿಧ್ಯತ್ಕ (ಧಾ) ೪ ರು (ಮೂ, ರಿ) ೫ ಮ (ಮೂ), ಮಾನ (ತಾ) ೬ ತಪ್ (ಬ) ೭ ಪರ (ರಿ) ೮ ಮಾನಮಾನಸ (ಮೈ, ಮೂ) ೯ ಪ (ಮೂ) ೧೦ ಶಶವದಸೆ (ತಾ) ೧೧ ವ (ಮೂ) ೧೨ ದಿರ್ಪಾಗಳ್ (ಮೂ); ಪ್ಪಾಗಳ್ (ತಾ); ರ್ಪಾಗಳು (ಬ) ೧೩ ಡಿದ (ಮೂ) ೧೪ ಳು (ಮೂ)

ಇದು ಶಿವಮಂತ್ರಕೋಟಿಗೆ ತವರ್ಮನೆ ನೋಡಿದು ಶೈವಶಾಸ್ತ್ರಭೂ
ಜದ ಘನಮೂಲಮಿಂತಿದು ಚಿದಂಗನೆಯುಜ್ವಳದರ್ಪಣಂ ಪೊದ
ಳ್ದಿದು ಪರಮುಕ್ತಿಕಾಂತೆಯ ಶಿರೋಮಣಿ ತಾನಿದು ಮುನ್ನಿ[1]ನಾ[1]ರ್ಯರ
ಗ್ಗದ ನಿಧಿ ನೋಳ್ಪೊಡಿಂತಿದು ಮಹಾಮುನಿಚಿತ್ತಸರೋಜಷಟ್ಪದಂ ॥೮೪॥

ನಿರಯಾಂಭೋರಾಶಿಯೊಳ್ಮೇಣ್ಮುಳುಗಿ ಬಹುತರಕ್ಲೇಶದಿಂ ಬೇವ ಪಾಪಾ
ತ್ಮರನಂದೈತಂದು ನೋಡುತ್ತಮಿತಮಹಿಮಸಾನಂದಯೋಗೀಂದ್ರನೊಲ್ದು
ಚ್ಚರಿಪನ್ನಂ ಕರ್ಣಮಂ ಸೋಂಕಿದನಿತಱೊಳವರ್ಗಿತ್ತು ರುದ್ರತ್ವಮಂ ತಾಂ
ಪೊರೆದತ್ತೀ ಮಂತ್ರಕೋಟಿಸ್ಫುಟಮಕುಟಮಹಾರತ್ನಷಡ್ವರ್ಣಮಂತ್ರಂ ॥೮೫॥

ತನುಕೃತತಾಪನಾಗದತಿದೂರಕೆ ಪೋಗದೆ ಯತ್ನದಿಂ ಮರು
ನ್ಮನಮನೊಱಲ್ದು ಕಟ್ಟದೆ ಮಹಾದ್ರಿಯ ಮೆಟ್ಟದೆ ಕಂದಮೂಲಮಂ
ಮನದೊಲವಿಂ[2]ದೆ[2]ಮೆಲ್ಲದೆ ವನಾಂತದೆ ನಿಲ್ಲದೆ ಸುಮ್ಮನೊರ್ಮೆ ಮೆ
ಲ್ಲನೆ ನುಡಿದಂಗೆ ಮುಕ್ತಿಗುಡುತಿರ್ಪುದಿದೆಂದೊಡದಾರೊ ಬಣ್ಣಿಪರ್ ॥೮೬॥

ಹರವದನಚಂದ್ರಬಿಂಬದಿ
ನಿರದೊಗೆದುದನೂನವೇದವಟತರುಪಂಚಾ
ಕ್ಷ[3]ರಬೀಜದಿನುರುಶಾಖಾ
ವಿರಾಜಿತಂ ಪಲ್ಲವಾಂಚಿತಂ ಫಳಮಿಳಿತಂ ॥೮೭॥

[4]ಸ್ಮೃ[4]ತಿವಿತತಪುರಾಣೌಘದೊ
ಳತಿಶಯಮಾ ಶ್ರುತಿಸಮೂಹಮದಱೊಳ್ನಿಸದಂ ।
ಶತರುದ್ರೀಯಮದತಿಶಯ
ಮತಿಶಯಮು[5]ದಱಲ್ಲಿ[5]ಪಂಚಮುಖಪರಮಂತ್ರಂ ॥೮೮॥

ಅಮೃತಪ್ರದಮಾನೆಂಬುದ
ನಮರ್ತ್ಯಮರ್ತ್ಯರ್ಗಳಿಗ[6]ಱಿ[6]ಪುವಂತಿತ್ತುದು ತಾ
ನಮಮ ಶತಮನ್ಯು[7]ಗುಪಮ
ನ್ಯುಮುನಿ[7]ಗಮೃತಮಂ ಷಡಕ್ಷರಂ ಶಿವಮಂತ್ರಂ ॥೮೯॥

ಕಾಮಿತವಸ್ತುವಂ ನೆಗಳಲಾರ್ಪುದು ಕಾಮದುಘಂ ಸುರರ್ಗೆ ಚಿಂ
ತಾಮಣಿ ಚಿಂತಿತೇಷ್ಟಮನಮರ್ತ್ಯಗುಮಾರಯೆ ಕಲ್ಪಿತಾರ್ಥಮಂ
ನೇಮಿಪುದಲ್ತೆ ಕಲ್ಪತರು ಕಾಮಿತಚಿಂತಿತಕಲ್ಪಿತೇತ್ತರೋ
ದ್ದಾಮಮಹಾಪದಪ್ರದಮಿದೆಂದೊಳ್[8]ಡಿ[8]ದರ್ಕೆಣೆ ಬರ್ಪುದಾವುದೋ ॥೯೦॥

---

೧ ರಾ (ಪ್ಮೂ) ೨ ದ (ತಾ, ಮೂ) ೩ ರಿ (ರಿ) ೪ ಕ್ರ (ಮೂ) ೫ ದಲ್ಲಿ (ಮೂ)
೬ ಱು (ತಾ, ಬ, ಧಾ, ಕ, ಮೂ) ೭ ನುತ್ಯೋಪಮನ್ಯುಮುನಿ (ಬ, ಕ); ಗಮುಮುನಿ
(ಧಾ, ಮ್ಯ) ೮ ಡೆ (ಮೂ)

ಘನೆಮುಕ್ತಿಕಾಂತೆಗಿದು ತಾಂ
ಜನನಿ ಲಸದ್ಭಕ್ತಿಯುವತಿಗಿದು ಕೆಳದಿ ಪುರಾ
ತನರ ಮತದಿಂದೆ ಶರಣಾಂ
ಗನೆಗಭವನನೆಳೆದುತರ್ಪ ದೂದವಿ ಪೆಱ[೧]ತೇಂ[೧] ॥೯೧॥

ದುರಿತೌಘಧ್ವಾಂತವಿಧ್ವಂಸನಖರಕರಮತ್ಯುಗ್ರಮೃತ್ಯುಗ್ರಹಾದ್ರಿ
ಸ್ಫುರದುದ್ಯದ್ವಜ್ರಮುಜ್ಜೃಂಭಿತಭವನಿವಹಾಂಭೋಧಿಕುಂಭೋದ್ಭವಂ ದು
ರ್ಘರದುರ್ಮಂತ್ರಾಭ್ರವಿಭ್ರಂಶನಪಟುಪವನಂ ದಂಡಭೃಚ್ಚಂಡಕಾಕೋ
ದರಮೇಘಜ್ಯೋತಿಪಂಚಾಕ್ಷರಮಿದು ಶಿವತಂತ್ರೋದಿತಂ ದಿವ್ಯಮಂತ್ರಂ ॥೯೨॥

ಈ ಮಂತ್ರದಮಿತಮಹಿಮೆಯ
ನೀ ಮಹಿತಮಹೀತಳಾಗ್ರದೊಳ್ಬಣ್ಣಿಸಲಾರ್
ಸಾಮರ್ಥ್ಯಸಮೇತರ್ ಶೇ
ಷಾಮರಗುರುತಾಮರಸಭವರ್ನೆಱೆದಪರೇ ॥೯೩॥

ತನುವಿಲ್ಲದತನುವಿಧ್ವಂ
ಸನಂಗೆ ತನು ಪೇಳಲೊಂದು ಪೆಸರಿಲ್ಲದ ಚಿ
ದ್ಘನಲಿಂಗಕ್ಕಿದು ಪೆಸರೆಂ
ದೆನೆ ಬಣ್ಣಿಪರಾರೊ ಪಂಚವರ್ಣದ ಘನಮಂ ॥೯೪॥

ಅದಱಿಂದೆ ನಂಬಿ ಜಪಿಸಿದೊ
ಡಿದಱಿಂ ದೊಱೆಕೊಳ್ಗುಮಮಳಶಿವಪದಮಿಂತ
ಲ್ಲದೆ ಪೆಱತು ಮಾರ್ಗದಿಂದ
ಪ್ಪುದು ತಾನೆಂಬುದು ನಭಃ[೨]ಪಯೋಜ[೨]ಪ್ರಾಯಂ ॥೯೫॥

ಚರಚರಣಾಂಬುವಂ ತಳೆದು ತದ್ಘನಶೇಷಮನೆಯ್ದೆ ಕೊಂಡು ಶಂ
ಕರಶರಣರ್ಕಳಂ ಸವಿನಯಂ ಮಿಗೆ ಮನ್ನಿಸಿ ಪೆಂಪುವೆತ್ತ ಭಾ
ಸುರಭಸಿತಾಕ್ಷಮಾಲಿಕೆಯನಂಗದೊಳಾಂತು ನಿಜಾರ್ಯಪೂಜೆಯಂ
ವಿರಚಿಸಿ ಲಿಂಗಮಂ ಭಜಿಸಿದಂಗಿದು ಸಿದ್ಧಿಪುದೀಶ್ವರಾ[೩]ಜ್ಞೆ[೩]ಯಿಂ ॥೯೬॥

॥ವ॥ ಎಂದು ಸಾಂಗಮೆನೆ ತಿ[೪]ಳಿ[೪]ಪಿದಾಗಳ್—

---

೧ ತೋ (ಧಾ) ೨ ಪ್ರಯೋಜ (ಮೂ, ಮೈ); ಪ್ರಯೋಜನ (ರಿ) ೩ ಗ್ಞೆ (ತಾ), ಗ್ನೆ (ಮೂ)
೪ ಳು (ಮೂ, ರಿ)

ಹೃ[೧]ದ[೧]ಯ[೨]ಪಯೋ[೨]ಜದ ಪರಿಮಳ
ಮಿದು [೩]ಚೇತ[೩]ಸ್ತಂಭದಗ್ರಮಣಿದೀಪಿಕೆ ಮೇ
ಣಿದು ಮಾನಸಮುಕುರದ ಪೊಳ
ಪಿದು ತಾನೆನಿಸಿದುದು ಗುರುನಿರೂಪಿತಮಂತ್ರಂ ॥ ೯೭ ॥

ಬಗೆಗೊಗೆದುದಧಿಕಮುದಮುಱೆ
ನೆಗೆದುದು ರೋಮಾಂಚಮಂಗದೊಳ್ ಸುಖಜಳಮ
ಕ್ಷಿಗಳಿಂ ಕಳಿದಿಳಿದುದು ಮೆ
ಲ್ಲಗೆ ಬೆಮರುಣ್ಮಿದುದು ಸಚಿವಸುತನೃಪಸುತರಾ ॥ ೯೮ ॥

॥ವ॥ ಇಂತೊಗೆದ ಸಾತ್ವಿಕಂಬೆರಸು ನಿತ್ಯಸತ್ಯಸಮಗ್ರೋದಗ್ರಪ್ರಭಾವರಾ ಶ್ರೀಗುರುಚರಣನಖಚಂದ್ರನಂ ನೊಸ[೪]ಲ್ವೆ[೪]ಱೆಯಿನಾಲಿಂಗಿಪಂತೆ ಪದೆದೆಱಗಿ ನಿಂದು ಕರಾಬ್ಜಮಂ ಮುಗಿದು—

ಜಯಜಯರವಮುಣ್ಮೆರೆ ಸಂ
ಶಯರಹಿತಾಶಯಸಮೇತರಾನಂದಯುತರ್
ಭಯಭಕ್ತಿವೆಱಸು ನುತಿಸಿದ
ರಯಕರಣಕರರ್ ಕುಮಾರರಾ ಗುರುವರನಂ ॥ ೯೯ ॥

ದುರಿತಾಬ್ಜಸುಧಾಕರ ಭೀ
ಕರಭವಬಂಧನತಮೋದಿವಾಕರ ಮಹಿಮಾ
ಕರ ವಿತತಕೃಪಾಕರಕೇ
ಕರ ಜಯ ಜಗತೀಜನೋತ್ತಮಸ್ತುತಿಪಾತ್ರಾ ॥೧೦೦॥

ತನುವಂ ಮನವಂ ಘನಜೀ
ವನಮಂ ಪರಿಶುದ್ಧಿಗೊಳಿಸಿ ಶಿವಚಿತ್ಕಳೆ ಪಾ
ವನಪಂಚಾಕ್ಷರಮಂತ್ರಮ
ನನುಗೊಳಿಸಿದಿರಾರ್ಯಕುಲಕುಶೇಶಯಮಿಹಿರಾ ॥೧೦೧॥

ನಿಗಮಾಂತಭೂಮಿಕಾಂ[೫]ತಃ[೫]
ಪ್ರಗತಶಿವಾದ್ವೈತಚಿನ್ಮಹಾನಿಧಿಯನಿದಂ
ವಿಗತಾಂಜನನಱಿದೆಮಗುಱೆ
ತೆಗೆದಿತ್ತುದು ಚಿತ್ರಮಲ್ತೆ ನೀಂ ಗುರು[೬]ವ[೬]ರ್ಯಾ ॥೧೦೨॥

---

೧ ದಿ (ಬ) ೨ ಸರೋ (ಬ) ೩ ಚಿತ್ತ (ತಾ, ಕ, ಧಾ) ೪ ಲ್ಬೆ (ಮೂ) ಲ್ಧೆ (ರಿ)
೫ ತಂ (ಪೂ) ೬ ವಾ (ಮೈ, ಬ)

॥ವ॥ ಎಂದು ವಿಪುಳತರಭಕ್ತಿಯಿಂ ವಿವಿಧಸ್ತುತಿಗಳಿಂ ಪೊಗಳ್ದು ಸಾಷ್ಟಾಂಗ ಪ್ರಣಾಮಂಗೆಯ್ದು ನಿರತಿಶಯವ[೧]ಸು[೧] [೨]ವಸ[೨]ನಮಣಿಭರಣಂಗಳಿಂ ಪೂಜಿಸಿ ಪೂರ್ಣ ಮನೋರಥಂಬಡೆದು ಮಗುಳ್ದು ಪೊಡಮೊಡಲೊಡನೆ—

॥ಶ್ಲೋ॥ ಯಾಭ್ಯಾಮುಮಾಸ್ಯನೇತ್ರಾಬ್ಜ ನೀಲಾಬ್ಜೇ ಸುವಿಕಾಸಿತೇ
ಸದಾ ಶಂಭೋಃ [೩]ಖರತ್ನಾಬ್ಜ[೩]ನೇತ್ರೇ ತೇವೋऽವತಾಂ ಚಿರಂ॥

ಪ್ರಾಂಚತ್ಪಂಚಮರುದ್ವಿಹಾರನಗರೀ ಪಂಚಾಸ್ತ್ರಹೃದ್ಭೀಕರೀ
ಪಂಚಾಚಾರಪರೋಕ್ಷಸಂಚಯಚರೀ ಪಂಚನನಾಂತಃಪುರೀ
ಪಂಕೀಭೂತಜಗತ್ಪ್ರಪಂಚಲಹರೀ ಪಂಚಪ್ರಮಾಮಂಜರೀ
ಪಂಚಬ್ರಹ್ಮಧರೀ ಮಹಾಸುಖಕರೀ ಪಂಚಾಕ್ಷರೀ ಪಾತು ವಃ

॥ವ॥ ಎಂದಮೋಘಪ್ರಭಾವರಾಶೀರ್ವಾದಂಗೆಯ್ದು ತತ್ಪಿತೃಗಳಿಂ ಪೂಜೆಗೊಂಡ-ಖಂಡವಿಭವಂ ಮಿಗೆ ನಿಜದೇಶಕ್ಕೆ ತಳರ್ದರನ್ನೆವರಮಿತ್ತಲ್—

ವಿತತಮಹೋತ್ಸವಂಬೆರಸು ಸತ್ಕುಲ ಸದ್ಗುಣ ಸದ್ವಯಸ್ಸಮು
ನ್ನತಮತಿಯುಕ್ತಿಯಂ ಕಮಳಲೋಚನೆಯೆಂಬ ಮನೋಜ್ಞಕನ್ನೆಯುಂ
ಮಿತವಚನಂಗೆ ಚೋಳಧರಣೀಪತಿ ಮಾಡಿ ವಿವಾಹಮಂ ಸಮು
ಸ್ಥಿತಿಪೃಥುಸಂಪದಂಗೊಳಿಸಿ ರಂಜಿಸಿದಂ ಬುಧಕಲ್ಪ[೪]ಭೂ[೪]ರುಹಂ ॥೧೦೪॥

॥ವ॥ ಅಂತೆಸಗಲೊಡನೆ—

ಸುದತೀಸಸ್ಮೇರವಕ್ತ್ರಾಂಬುಜಪರಿಮಳಮಂ ಘ್ರಾಣದಿಂ ತದ್ವಚಃಸಂ
ಪದಮಂ ಶ್ರೋತ್ರಂಗಳಿಂ ತನ್ಮೃ[೫]ದು[೫]ಳತರತನುಸ್ಪರ್ಶಮಂ ದೇಹದಿಂ ತ
ದ್ವಿದಿತೋದ್ಯದ್ರೂಪಮಂ ನೇತ್ರದಿನಧರಸುಧಾಸಾರಮಂ ಜಿಹ್ವೆಯಿಂ ಸಂ
ಮುದದಿಂದಂ ಸೇವಿಸುತ್ತಂ ಮಿತವಚನಕುಮಾರಂ ಕರಂ ರಂಜಿಸಿ[೬]ರ್ದಂ[೬] ॥೧೦೫॥

॥ವ॥ ಇಂತತಿಪ್ರಮೋದದಿನವನಭಿನವಸಂಸಾರಸುಖಮನನವರತಮನುಭವಿಸುತ್ತ ಮಿರ್ದನಿರ್ಪನ್ನೆಗಂ—

---

೧ ಸ್ತು (ತಾ, ಧಾ, ಮೂ) ೨ ವಾಹ (ಧಾ, ೩ ಶತ್ರಾಬ್ಜೇ (ರಿ) ೪ ವಾ (ಕೆ)
೫ ದ (ಮೂ) ೬ ರ್ಪಂ (ವ್ಯೆ, ರಿ)

ಕರತಳಪಲ್ಲವಕ್ಕೆ ನವರಾಗತೆ ನೇತ್ರಸರೋರುಹಕ್ಕೆ ಭಾ
ಸುರತೆ ಮುಖೇಂದುಬಿಂಬಕಮಳಾಂಶುವಿಳಾಸತೆ ಕೋಮಳಾಂಗಬಂ
ಧುರಹರಿಚಂದನಕ್ಕೆ ಕಮನೀಯತೆ ಸಾರ್ದಿರೆ ಯೌವನೋದಯ
ಸ್ಫುರಿತವಸಂತಮೆಯ್ದಿದುದು ತನ್ನೃಪನಂದನರಂಜನಾಸ್ಪದಂ ॥೧೦೬॥

॥ವ॥ ಅಂತೆಯ್ದಿದ ನಱುಜವ್ವನದ ಸಿರಿಯಂ ಮೈಸಿರಿಯೊಡನೆ ಕೇಳಿಯಿಂ ಕೆಳೆಗೊಳಿಸಿ—

ನಿಡಗಣ್ ಪಂಕಜಪತ್ರಮಂ ಪಳಿಯೆ ವಕ್ತ್ರಂ ವಾರಿಜಾರಾತಿಯಂ
ಜಡಿಯಲ್ ಜಂಘ್ನ[1]ಸುತಾತರಂಗತತಿ[2]ಯಂ [3]ತಳ್ಪೊಯ್ಯೆ ಬಾಹುದ್ವಯಂ
ಕುಡುವುರ್ವಿಕ್ಷುಧನುರ್ಲತಾಲಲಿತಮಂ ಕೀಳ್ಮಾಡೆ ಪೊಂಬಾಳೆಯಂ
ತೊಡೆ ಚೋಡಾಡೆ ನರೇಂದ್ರಸೂನು ತಳೆದಂ ತಾರುಣ್ಯಲಾವಣ್ಯಮಂ ॥೧೦೭॥

ಆ ನರನಾಥಚಂದ್ರನ ಮುಖೇಂದುವನೀಕ್ಷಿಸಿ ಗಾಡಿಕಾರ್ತಿಯರ್
ಮಾನಸಮಧ್ಯದೊಳ್ ತಳೆಯೆ ತನ್ನೃಪಮೂರ್ತಿಯನಂದು ಕಾಣುತಂ
ಮೀನಪತಾಕನೆೈದು[4]ಸರಲಿಂ[4] ಪುರುಡಿಂ[5]ದಿ[5]ಸೆ ನೊಂದು ಬೆಂದು ಕಾ
ಮಾನಲನಿಂ ಲತಾಭವನದೊಳ್ ಪೊರಳ್ವರ್ ನವನಂದನಂಗಳೊಳ್ ॥೧೦೮॥

॥ವ॥ ಅಂತುಮಲ್ಲದೆಯುಂ—

ಅಮೃತಾಂಬುಧಿಯ ಗುಣಂಗಳ
ನಮೃತಕರಂ ತಾಳ್ದು ತೋರ್ಪವೊಲ್ ಕ್ರಮದಿಂ ತಾ
ನಮಮ ತಳೆದೊಪ್ಪಿದಂ ಸಕ
ಳಮನೋಜ್ಞಂ ಜನಕನಮಳ[6]ಚಿತ್ರ[6]ರಗುಣಗಣಮಂ ॥೧೦೯॥

ಪಿರಿದು ಸಿರಿಯಿರೆಯುಮವನೀ
ಶ್ವರತನಯಂ ವಿಮಳಗುಣಮನೊಳಕೊಂಡೆಸೆದಂ
ಸರಸಿಜಮೆನೆ ಮಿತ್ರರುಚಿ
ಸ್ಫುರಿತಾಮೋದಾವಹಂ ಸದಾಳಿನಿ[7]ಷೇ[7]ವ್ಯಂ ॥೧೧೦॥

೧ ನ್ಹು (ಬ) ೨ ಯ (ಮೂ) ೩ ಸರದಿಂ (ರಿ, ಕ) ಶರದಿಂ (ಬ,ಧಾ) ೪ ದೆ (ರಿ, ಮೂ, ಧಾ) ೫ ವ (ಬ) ೬ ಸೇ ವ್ಯೆ, ಭಾ, ಮೂ, ಬ)

ವಿತರಣದಿಂದೆ ದಿವ್ಯನಗಮಂ ನಗಮಂ ಘನಧೈರ್ಯದಿಂದೆ ವಿ
ಶ್ರುತಯಶದಿಂದೆ ಪದ್ಮರಿಪುವಂ ರಿಪುವಂ ನಿಜತೇಜದಿಂದೆ ಮಂ
ಡಿತಮತಿಯಿಂದೆ ಪದ್ಮಜನಿಯಂ ಜನಿಯಂ ಶಿವಮಂತ್ರದಿಂದೆ ರಂ
ಜಿತಗುಣರಾಜಿರಾಜಿತನವಂ ಜ[1]ಯಿ[1]ಸಿರ್ದನುದಾತ್ತವೈಭವಂ ॥೧೧೧॥

॥ವ॥ ಇಂತುಮಾ ಮ[2]ಹೀ[2]ಕಾಂತಸುತಂ ಪೊಗಳ್ತೆವಡೆದೊಪ್ಪುತ್ತಮಿರ್ದೊಂದು ಶುಭದಿನದಲ್ಲಿ—

ಬರೆ ಧರಣೀಶಪುತ್ರರೊಡನುಗ್ಘಡಿಸುತ್ತಿರೆ ವಂದಿವೃಂದಮೇ
ಳ್ತರೆ ಬಳಿಯೊಳ್ಮಹಾಸಚಿವಸಂತತಿ ರತ್ನವಿಭೂಷಣಾಂಶು ನೇ
ತ್ರರುಚಿ ಮುಖಪ್ರಕಾಶಮೊಡನೊಪ್ಪಿರೆ ಮುಪ್ಪುರಿಗೊಂಡು ರಾಜಶೇ
ಖರನತುಳೋತ್ಸ[3]ವಂ[3] ಜನಕನೋಲಗಮಂ ಪು[4]ಗು[4]ತಂ[5]ದ[5]ನಳ್ಕಜ[3]ಂ ॥೧೧೨॥

॥ವ॥ ಅಂತು ತತ್ಪಾದಸೇವೆಗೆಯ್ವಲೆಂದೋ[6]ಯ್ವ[6]ನೆ ಬರ್ಪಾಗಳ್—

ಇದಿರೊಳ್ಕಂಡಿ[7]ರದೇ[7]ಳ್ವ ಮಂಡಳಿಕರಂ ಕೈಸನ್ನೆಯಿಂದೇಳಲೀ
ಯ[8]ದೆ[8] ಹೋ ಸಮ್ಮುಖಮೆಂಬ ವಂದಿಜನಮಂ ಕಣ್ಸನ್ನೆಯಿಂದೊತ್ತಿ ಸಂ
ಮದಮಂ ತಾಳ್ದುಮದಕ್ಕೆ ಪಕ್ಕುಗುಡದಾ ಸತ್ಯೇಂದ್ರಚೋಳೇಂದ್ರಸ
ತ್ಪದಪದ್ಮಕ್ಕೆ ಮರಂದಮಂ ಪಡೆದು ಮೌಲಿ[9]ದ್ಯೋ[9]ತಿಯಿಂ ಮೊಳ್ಗಿದಂ ॥೧೧೩॥

॥ವ॥ ಅಂತು ಪೊಡಮಡಲೊಡನೆ—

ತೆಗೆದು ಬಿಗಿ[10]ಂದ[10]ಪ್ಪಿ ಪರಸು
ತ್ತಗಣಿತಸಂಭ್ರಮದೆ ನೃಪತಿಯರ್ಧಾಸನದ
ಲ್ಲಿಗೆ ಸೆಳೆಯೆ ವಿನಯದಿಂ ಮೆ
ಲ್ಲಗೆ [11]ಜಗಳ್ದ[11]ತದಂಘ್ರಿಯೊತ್ತಿನೊಳ್ಕುಳ್ಳಿರ್ದಂ ॥೧೧೪॥

॥ವ॥ ಆಗಳ್—

ಪರಿಮಳಮನುಂಡು ವಿಕಚಾಂ
ಬುರುಹದೊಳೆರಡೊಂದುಗೂಡಿ ಸುಳಿವಳಿಗಳಿವೆಂ
ಬಿರವನನುಕರಿಸಿ ಯುವಮುಖ
ಸರಸಿಜದೊಳ್ನೃಪನ ಕಣ್ಗಳೇಂ ತೊಳ[12]ಲಿದವೋ[12] ॥೧೧೫॥

೧ ಯ (ಬ, ಕ, ರಿ, ಧಾ) ೨ ಹಿಮಾ (ಮೈ, ಬ) ೩ ವ (ಮೂ) ೪ ಗ (ಬ) ೫ ತ (ಧಾ) ೬ ಡ (ಮೂ) ೭ ದಿರೇ (ರಿ, ಬ) ೮ ದ (ಮೂ) ೯ ಜ್ಯೋ (ರಿ) ೧೦ ಯ (ಬ) ೧೧ ಜಗುಳ್ದ (ಮೈ), ಜಗಳ್ದು (ಧಾ) ೧೨ ಗಿದವೋ (ಬ), ವಿದವೋ (ಕ, ತಾ)

॥ವ॥ ಅಂತು [೧]ನಿಡು[೧]ನೇಹದಿಂ ನೀರಿಕ್ಷಿಸಿ ಮಹೀಪತಿ ಪತಿಮೋಹಿಮಂತ್ರಿಪತಿ-ಯೊಡನಿಂತೆಂದಂ—

ಧರಣೀತಳಭಾರಮನೀ
ತರುಣಂ ತಳೆಯಲ್ಕೆ ನೆಜ[೨]ದನೀ[೨]ತನ[೨]ಭುಜಘೂ
ಧರದೊಳಿದನಿ[೩]ಳಿ[೩]ಪಿ ಪುರಹರ
ಚರಣೈಕಧ್ಯಾನಮಾಂತು ಸುಖದಿಂದಿರ್ಪೆಂ ॥೧೧೬॥

ಎಂದೊಡಮಾತ್ಯನೊಡಂಬ
ಟ್ಟೆಂದನಿಳಾರಮಣ ಕಜ್ಜಮಿದು ಲೇಸು ಸದಾ
ನಂದನಿಧಿನಂದನಂಗೊಲ
ವಿಂದಂ ಬಗೆದಂತೆ ಮಾಳ್ಪುದತುಳೋತ್ಸವಮಂ ॥೧೧೭॥

॥ವ॥ ಎಂಬ [೪]ಹಿ[೪]ತೋಕ್ತಿಯನವಧರಿಸಿ [೫]ಮಹೌ[೫]ಹೂರ್ತಿಕರ್ಸ[೬]ಮ[೬]ಕಟ್ಟಿದ [೭]ಸು[೭]ಮುಹೂರ್ತದೊಳತುಳ[೮]ತರ[೮]ಸಂಭ್ರಮಂಬೆರಸು—

[೯]ಧರಣೀಕಾಂತೆರ್ಗೆ[೯] ಸಂತಸಂ ರಿಪುಮಹೀಕಾಂತರ್ಗೆ ಸಂತಾಪಮಿಂ
ದಿರೆಗಾನಂದರಸಂ ಬುಧಪ್ರಕರದಾರಿದ್ರ್ಯಕ್ಕೆ ವಿಚ್ಛೇದಮೀ
ಶ್ವರಭಕ್ತರ್ಗತಿಸಂಮುದಂ ನೆಗಳೆ ಸತ್ಯೇಂದ್ರಕ್ಷಿತೀನಾಥನಾ
ದರದಿಂದಾತ್ಮಭವಂಗೆ ಪಟ್ಟಮನಮಂನೋತ್ಸಾಹದಿಂ ಕಟ್ಟಿದಂ ॥೧೧೮॥

ಸಕಳೋರ್ವೀಪಾಲರೆಲ್ಲರ್ನೆರೆದು ಪಿರಿದು ಸತ್ಪ್ರೇಮದಿಂ ಬಂದು ಸಂದು
ತ್ಸಕಮಂ ಮುಂದಿಟ್ಟು ಕಪ್ಪಂಬಿಡಿದು ಕರಿತುರಗಂಗಳಂ ಪೊಂಗಳಂ ಮೌ
ಳಿಕಳಾಪದ್ಯೋತಮೆತ್ತಂ ಪಸರಿಸೆ ಮಣಿದಂಘ್ರಿದ್ವಯೋಪಾಂತದೊಳ್ ನಿಂ
ದಕಳಂಕರ್ಸೇವಿಸು[೧೦]ತ್ತೊಪ್ಪಿರೆ[೧೦] ಮೆ[೧೧]ಜ[೧೧]ದನಿಳಾಭೃತ್ಸುತಂ ಪಟ್ಟಬದ್ಧಂ ॥೧೧೯॥

॥ವ॥ ಅಲ್ಲಿಂ ಬಳಿಯಿಂ—

ಶಿವಲಿಂಗಾಂಘ್ರಿಸ[೧೨]ಮ[೧೨]ರ್ಚನೈಕಸುಖದಿಂದೋರೊರ್ಮೆ ವಿಖ್ಯಾತಶಾಂ
ಭವಲೀಲಾಕಥನಪ್ರಸಂಗರಸದಿಂದೋರೊರ್ಮೆ ಮಾಹೇಶ್ವರ
ಪ್ರವಿರಾಜತ್ಪದಪದ್ಮಸೇವನದಿನಂದೋರೊರ್ಮೆ [೧೩]ಸತ್ಯೇಂದ್ರ[೧೩]ಭೂ
ಧವಬೃಂದಾರಕನಿಂತು ಪೊಳ್ತುಗಳೆದಂ ಸನ್ಮಾರ್ಗ ಸಾರೋದಯಂ ॥೧೨೦॥

---

೧ ನುಡಿ (ಧಾ) ೨ ತಲ (ಬ) ೩ ಳ (ಮೂ) ೪ ಮಹಿ (ಮೈ) ೫ ಮೂ (ತಾ, ಬ) ೬ ಸಮಂ (ತಾ, ರಿ) ೭ ಮು (ಮೂ) ೮ ಸಂಭ್ರಮ... (ಮೂ) ೯ ಧರಿಣೀಕಾಂತಿಗೆ (ತಾ, ಬ) ೧೦ ತ್ತಿರೆ (ಮೂ) ೧೧ ರ (ಬ) ೧೨ ಮಾ (ಮೂ) ೧೩ ಸತ್ಯೇಂದ್ರ (ಮೂ)

॥ವ॥ ಅಂತುಮಲ್ಲದೆಯುಂ—

ಮದಮದವದ್ಗಜವ್ರಜಮನಿಕ್ಕಿ ದುರೀಷಣಭೀಷಣಾಹಿಯಂ
ಸದೆದತನುಗ್ರಹಾಗ್ರಹಮನರ್ದಿಸಿ ಮರ್ದಿಸಿ ರಾಗರೋಗಮಂ
[೧]ಕೆದರ್ದು[೧] ವಿಮೋಹಸಾಹಸಮನುನ್ನತಸನ್ನುತವೃತ್ತಿವೆತ್ತು ತಾ
ಳ್ದಿದನವ[೨]ನೀಶನೀಶ[೨]ಪದಮಂ ಪದಪಿಂ ಹೃದಯಾಂತರಾಳದೊಳ್ ॥೧೨೧॥

॥ವ॥ ಅಂತುಮಾ ಸತ್ಯೇಂಧ್ರನರೇಂದ್ರನುಪೇಂದ್ರವಂದ್ಯನನಾರಾಧಿಸುತ್ತಮಿರೆಯಿರೆ—

ಅನುರಕ್ತತೆಯಂ ಪ್ರಕೃತಿಯೊ
ಳನುವರ್ತನೆಯಂ ಸ್ವಕೀಯಜನಬೃಂದದೊಳಂ
ದನುಕೂಲತೆಯಂ ಶರಣರೊ
ಳನುಗೊಳಿಸಿದನಹಿತತಿಮಿರಮಿಹಿರಂ ಕುವರಂ ॥೧೨೨॥

॥ವ॥ ಅಂತುಮಲ್ಲದೆಯುಂ—

ಜಿತಶತ್ರುಪ್ರಕರಂ ಸಮಾಹಿತಹಿತೋದ್ಯೋಗಂ ಕ್ಷಮಾಧಾರಣೋ
ಚಿತಕೃತ್ಯಂ ಸದುಪಾಯತಂತ್ರನಿಪುಣಂ ಮಂತ್ರಪ್ರವೀಣಂ ವಶೀ
ಕೃತಸತ್ವಂ ಸದಯಸ್ವಭಾವನನಿಶಂ ಶಕ್ತಿಪ್ರಯುಕ್ತಂ ಶಿವಾ
ನ್ವಿತನಿರ್ದಂ ಪಿತನಂತೆ ಪೂರ್ಣವಿಭವಂ ವಿಶ್ವಂಭರಾವಲ್ಲಭಂ ॥೧೨೩॥

ಸಿರಿಯೊಳ್ ಶ್ರೀಕಾಂತನೆಂತಂತತುಳಕಳೆಗಳೊಳ್ ಕಂಜಸಂಜಾತನೆಂತಂ
ತರಿವರ್ಗಧ್ವಂಸದೊಳ್ ಧೂರ್ಜಟಿಯ ತನುಜನೆಂತಂತೆ ಗಾಂಭೀರ್ಯದೊಳ್ ಭಾ
ಸುರಪಾರಾವಾರಮೆಂತಂತಧಿಕವಿಭವದೊಳ್ ಶಕ್ರ[೩]ನೆಂ[೩]ತಂತೆ ದಾನೋ
ತ್ಕರದೊಳ್ಮಂದಾರಮೆಂತಂತೆಸೆದನಭಿನವಂ ಭಾರತೀಭಾಗ[೪]ಧೇಯಂ[೪] ॥೧೨೪॥

ಶ್ರೀಮತ್ಕಳಾಧರಕಳಾಧರೆ ದಿವ್ಯದೇವಾ
ರಾಮಾರಮಾರಮಸಮರ್ಚಿತಪಾದಪದ್ಮೇ
[೫]ಕಾಮಪ್ರಿಯಾ[೫]ಪ್ರ[೬]ಣ[೬]ತೆ ಪಾರ್ವತಿ ಪಾಲಿಸೆನ್ನಂ
ಭೀಮಾಘಮರ್ದಿನಿ ಭವಾರ್ದಿನಿ ನೀಂ ಭವಾನೀ ॥೧೨೫॥

---

೧ ಕೆದರಿ (ಮೂ, ಮೈ), ಕೆಡದು (ಕ) ೨ ನೀಶ (ಮೂ) ೩ ನ (ಮೂ) ೪ ದೇಹಂ (ಬ) ಕಾದಸ್ತ್ರೀಪಿಯಾ (ತಾ) ೬ ಣು (ಮೂ, ಬ), ಯೆ (ಮೂ)

ಇದು ವಿನಮದಮರವರಮಕುಟತಟಘಟಿತಮಣಿಗಣಮಹಾಪ್ರಭಾಪಟಲಪರಿವೃತ
ಪರಶಿವಶ್ರೀಪಾದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾಚಂಚಚ್ಚಕೋ
ರಾಯಮಾನ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀ ಷಡೆಕ್ಷ[೧]ರಿ[೧]ದೇವವಿರಚಿತಮಪ್ಪ ರಾಜಶೇಖರವಿಳಾಸ
ವಿಪುಳಪ್ರಬಂಧದೊಳ್ ರಾಜಶೇಖರಾಭ್ಯುದಯ
[೨]ವ್ಯಾವರ್ಣನಂ[೨]ಚತುರ್ಥಾಶ್ವಾಸಂ

ಸಂಪೂರ್ಣಂ

ಅಂತು ಆಶ್ವಾಸ ನಾಲ್ಕಕ್ಕಂ ಪದ ೫೨೦ ಕ್ಕಂ ಸಮಾಪ್ತಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

---

೧ ರ (ಬ), ವರ್ಣನಂ (ತೌ)

ಪಂಚಮಾಶ್ವಾಸಂ

ಶ್ರೀಗೌರೀಕುಚಘುಸೃಣಪ
ರಾಗಾರುಣವಕ್ಷನುಕ್ಷಲಕ್ಷ್ಮಂ ವಿಳಸ
ದ್ಭೋಗೀಂದ್ರಕಂಕಣಂ ಗುಣ
ಸಾಗರನೆಮಗೀಗೆ[೧]ಭಕ್ತಿಯಂ[೧] ಶಿವಲಿಂಗಂ ॥೧॥

॥ವ॥ ಮತ್ತಮಾ ನರೇಂದ್ರಕುಮಾರನಗಣಿತಗುಣಮಣಿಗಣರೋಹಣ[೨]ಧರ[೨]ಣೀಧ-
ರನುಂ ಶಿವಶರಣಚರಣಚಾಮೀಕರಾರವಿಂದಸಂದೋಹಪರಾಗಸಾರಕಾಶ್ಮೀರಲಲಾಮ
ಲಲಾಟತಟನುಮಭಿನವವಿಭವಾತಿಶಯತಿರಸ್ಕೃತಭರತ[೩]ಭಗೀರಥ[೩] ದಶರಥಪ್ರಮುಖ
ನಿಖಿಳಪಾರ್ಥಿವಪ್ರತಾನನುಂ ಸಮಧಿಗತಸಂಪೂಜ್ಯರಾಜ್ಯಲಕ್ಷ್ಮೀರಕ್ಷಣವಿಚಕ್ಷಣದಕ್ಷಿಣ-
ದೋಸ್ತಂಭಸಂರಂಭೋತ್ತಂಭಿತಾಸಿದಂಭೋಳಿದಳಿತಾರಿಕುಂಭಿಕುಂಭಿನೀ ಧರಶುಂಭ
ತ್ಕುಂಭತಟಗಳಿತವಿಪುಳವಿಮಳಮುಕ್ತಾಫಳಾವಳೀಪರಿಷ್ಕೃತಮಹಿತಮಹಾಮಹಿಮಾ
ನೀಕನುಂ ಸಮದಸಮಸ್ತಸಾಮಂತಸೀಮಂತಿನೀಸೀಮಂತಸಿಂಧೂರಪೂರಪಲ್ಲವಪ್ರಸರ
ರಸಹರಣ[೪]ಚರಣ[೪] ವಿತತಪ್ರತಾಪತಪನಕರನಿಕರಪರಿವೃತಪದ್ಮಸದ್ಮಾಂಡಭಾಂಡ ಬಹಿ
ಸ್ತಮ[೫]ಸ್ತೋ[೫]ಮನುಮಮಂದಕುಂದಮಂದಾರಚಂದ್ರಿಕಾಡಿಂಡೀರಪಿಂಡಪುಂಡರೀಕ
ಪಾಂಡುರಾಖಂಡಯಶಃಶ್ರೀಖಂಡಮಂಡಿತನಿಖಿಳದಿಕ್ಕಾಮಿನೀಸ್ತನಕಳಶಕನತ್ಕಪೋಳ
ಮಂಡಳನುಂ ಸುಕವಿನಿಕರದಾರಿದ್ರ್ಯವಿದ್ರಾವಣದ್ರವಿಣ[೬]ಧಾರಧಾರಾಧರ[೬]ಕರಾಗ್ರ ಪರಿ
[೭]ಹತ[೭]ಸುರ[೮]ಧ[೮]ರಾರುಹಪ್ರಭಾವನುಂ ಬುಧಕದಂಬಹೃದ್ಯಾನವದ್ಯವಿದ್ಯಾನ[೯]ದ್ಯಾ[೯]
ಶ್ರಯಕ್ಷೀರಪಾರಾವಾರನುಮಮಂದಸೌಂದರ್ಯಸಂದೋಹಮಂದೀಕೃತಕಂದರ್ಪದ-
ರ್ಪನುಮನವರತವಿನಮದವನೀಧವನಿವಹ ಮಕುಟತಟಘಟಿತಮಣಿಕಿರಣಪಟಲಪಾಟ
ಲಿತಪದನಖಸುಧಾಕರನುಮಖರ್ವಶೌರ್ಯಧೈರ್ಯ[೧೦]ಚಾತು[೧೦]ರ್ಯ[೧೧]ಮಾಧು
ರ್ಯ[೧೧]ಸೌಕುಮಾರ್ಯಸ್ಥೈರ್ಯಗಾಂಭೀರ್ಯಪರಿಷ್ಕರಣ[೧೨]ಗುಣ[೧೨]ಭೂಷಿತನುಮಭಿ
ನವಶಿವಭಕ್ತಿಸಂಪದಾಮೋದಸಮುದಯಮಧುರತರಹೃದಯಪಯೋಜನುಮೆನಿಸಿ
ಪೊಗಳ್ತೆವಡೆದು—

---

೧ ಸೌಖ್ಯಮಂ (ತಾ) ೨ ರಿ (ತಾ) ೩ ಭಗೀರಥ ಸುರಥ (ಮು, ಮೈ) ೪ ಚಣ (ಮೈ, ಮೂ, ಕ, ತಾ) ಚರಣನುಂ (ಮೂ) ೫ ಸೋ (ರಿ) ೬ ಧಾರಧರ (ಬ) ಧಾರಧಾರಾ (ಮೈ) ೭ ಹಸಿತ (ಮೈ, ಮೂ, ಕ, ಬ) ೮ ಧಾ (ಮೈ) ೯ ದ್ಯಾದ್ಯಾ (ಮೂ) ೧೦ ತೂ (ಬ, ರಿ) ೧೧ ಧೂ (ರಿ, ಬ, ಮೂ) ೧೨ ಗುಣಗುಣ (ಮೂ).

ಲವೆತ್ತ ತಾಪನಿಧಿ ಜಿತ
ಬಲಪ್ರಭಂ ವಿತತರಣದೆ ವಿತರಣದೆ ಮಹಾ
ಬಲಯುತರನರ್ಥಿಜನಮಂ
ತಲೆವಾಗಿಸುವಂ ಸಮಂತು ತಲೆದೂಗಿಸುವಂ ॥೨॥

ಶಶಿಶಂಖಂ ತಾರಕಾಮೌಕ್ತಿಕಮಮರನದೀಸಂಗ[೧]ತಂ[೧] ಪೂರ್ವದಿಕ್ಸ
ವ್ಯಶಿ[೨]ಖಾ[೨]ವದ್ವಾಡಬಂ ದಿಗ್ಗಜಜಲಗಜಮುರ್ವೀಧರವ್ರಾತಭೀತಾ
ದ್ರಿಶತಂ ನಾಗಾಂಬುನಾಗಂ ಮನುಜಜಳಮನುಷ್ಯಂ ಮಹಾಕೂರ್ಮಕೂರ್ಮಂ
ವಿಶದಂ ತತ್ಕೀರ್ತಿದುಗ್ಧಾಂಬುಧಿ ಗಗನಘನಶ್ರೀಶನಂ ತಾಳ್ದು ತೋರ್ಕುಂ ॥೩॥

॥ವ॥ ಅಂತುಮಲ್ಲದೆಯುಂ—

ಎಸ[೩]ಳೆ[೩]ದೆಸೆ ಮಿಸುನಿವೆ[೪]ಟ್ಟುಂ[೪]
ಪೊಸಕ[೫]ರ್ಣಿ[೫]ಕೆ ಶರಧಿ ಮಧು ಮಧುವ್ರತಮೆ ಮುಗಿಲ್
ನಿಸದಮೆನೆ ಭುವನಭುವನಜ
ಮೆಸೆದುದು ಭೂಧವನ ಕೀರ್ತಿ ಕಮಳಾಕರದೊಳ್ ॥೪॥

ತುರಗಖುರಾಗ್ರಘಾತಕೃತಭೂತಳರಂಧ್ರವಿನಿರ್ಗತಾಹಿರಾ
ಜರು[೬]ಚಿ[೬]ರಶೀರ್ಷರತ್ನದೃಢಬೀಜಕರಾಂಕುರತತ್ತ್ರತಾಪವ
ಲ್ಲರಿ ರವಿರೋಚಿಯೆಂಬ ವಿಷದಿಂ ದಶದಿಕ್ಕನೆ ಪರ್ಬಿಪೆತ್ತುದೋ
ಖರಕರಪುಷ್ಪಮಂ ಕನಕಭೂಧ್ರಬೃಹತ್ಫಳಮಂ ಮಹೀಶನಾ ॥೫॥

॥ವ॥ ಮತ್ತಂ—

ಅಮಮ ಮಹೀರಮಣನ ತೇ
ಜಮನೇನೆಂಬೆಂ ಪೊದಳ್ದ ರವಿಶ[೭]ತ[೭]ರುಚಿಯಿಂ
ದಮರ್ದು ಪೊಱವಳಯಮಂ [೮]ಹೇಳ
ಮಮಯಮಿದೆನಿಸಿತ್ತ ಜಾಂಡಮಂಡಳಮನಿತಂ ॥೬॥

---

೧ ತಃ (ಮೂ) ೨ ಕಾ (ಮೂ) ೩ ಳು (ರಿ) ೪ ಟ್ಟಂ (ಮೈ, ಮೂ, ಧಾ) ೫ ರ್ನಿ (ತಾ, ಕ, ಧಾ, ಬ) ೬ ಚ (ಮೂ) ೭ ಶಿ (ಮೂ) ೮ ಹಿ (ರಿ)

ಪ್ರಮುಖಪ್ರಬಂಧಂಗಳಂ ಪೇಳ್ದು ಕೇಳ್ವರ ಚಿತ್ತಮಂ ಕವರ್ತೆಗೊಳ್ವ ಕವೀಂ[೧]ದ್ರ[೧] ಬೃಂದದಿಂ ಮತ್ತಂ-ಮಧುರಮಂದ್ರತಾರಸ್ವರಂಗಳಿಂ ಶ್ರುತಿವೆರಸಿ ಕೇಳ್ವರ ಕಿವಿಗೆ ಸವಿಯಂ ಸೈಗಱೆದು ರಂಗು ರಕ್ತಿದೋ[೨]ಱ[೨] ಶುದ್ಧಮಿಶ್ರಸಂಕೀರ್ಣರಾಗಂಗಳಿಂ ರಂಜಿಸಿ ಪಾಡಿ ಮೋಹಿಪ ಸಂಗೀತವಿಶಾರದರಿನನೀಶ್ವರಾನ್ಯೇಶ್ವರಾನೇಕೇಶ್ವರಾಭಿಮತ ವಾದಿವಾದಮಂ ಶ್ರುತ್ಯುಕ್ತಿಯುಕ್ತಿಗಳಿಂ ನಿರಾಕರಿಸಿ ನಿಜಶಿವಾಧಿಕ್ಯಸ್ಥಾಪನಂಗೆ[೩]ಯ್ವ[೩] ವೇದವೇದಾಂತಾದಿಕೋವಿದರಾದ ವಾದಿಗಳಿಂ, ಮತ್ತಂ-ಪದಪದಾರ್ಥವಿಭಾಗಂಗೆಯ್ದು ಮೃದುಮಧುರೋಚ್ಚಾರಣಂಗಳಿಂ ವ್ಯಕ್ತಿಗೆಯ್ದು ಸೂಕ್ತಿಸುಧಾಬ್ಧಿಯೊಳ್ ಮನಮನವಗಾಹಂಗೆಯ್ವುವ[೪]ವಾವಧೂಕ[೪]ವರೇಣ್ಯರಿಂ, ಮತ್ತಂ-ಮಣಿಮಕುಟಂಗಳೊಂದೊಂದನೊರಸೆ ಸಂದಣಿಗೊಂಡು ಮಿಸುಪ ನೊಸಲ್ವೆಱೆ[೫]ಯಂ ಪದಕಮಳದೊಳ್ ಸಂತಂ[೫]ಗೆಯ್ವುವಂತೆ[೫] ಮಣಿಮಣಿದನರ್ಘ್ಯಕರಿತುರಗರಥರತ್ನಾದಿಗಳಂ ಕಪ್ಪಂಬಿಡಿದು ಕರುಣಂಬಡೆಯಲೆಂದು ನಿಂದಂಗ ವಂಗ ಕಳಿಂಗ ತ್ರಿಲಿಂಗ ಮಗಧ ಮಾಳವ ಗೌಳ ಪಾಂಚಾಳ ನೇಪಾಳ ಹಿಂದೂಳ ಕೇರಳ ಕಾಶ್ಮೀರ ಸೌವೀರ ವಿದರ್ಭ ಬರ್ಬರ ಗುರ್ಜರಾದಿ ದೇಶಾಧೀ[೬]ಶ್ವ[೬]ರರಿಂ, [೭]ಶಕ್ತಿತ್ರಯ[೭] ಚತು[೮]ರು[೮]ಪಾಯ ಪಂಚತಂತ್ರ ಷಡ್ಗುಣ ಸಪ್ತಾಂಗಕ್ರಮವಿಚಕ್ಷಣ[೯]ರೆ[೯]ನಿಸಿ ಮಂತಣಂಗೊಂಡ ಮಂತ್ರಿಗಳ ಸಂತತಿಯಿಂ, ಕೈಯೆತ್ತಿ ರಯ್ಯಮೆನೆ ಪೊಗಳ್ವ ವಂದಿವೃಂದದಿಂ, ಪೊಗಳ್ವ ಪಾಠಕ ಪ್ರತಾನದಿಂ,[೧೦]ಸೇರಿ[೧೦]ನಿಂದ ವೀರಭಟ[೧೧]ವಾರದಿಂ[೧೧], ತರಂಗೊಂಡ ತುರಂ[೧೨]ಗ[೧೨] ಸಂಘದಿಂ, [೧೩]ಓ[೧೩]ರಣಿಸಿ ನಿಂದ ವಾರಣಾರೋಹಕವ್ಯೂಹದಿಂ ಕಿಷ್ಕಿಂಧತೆಯನಪ್ಪುಕೈದಮಂದಸೌಂದರ್ಯಮನೊಳಕೊಂಡು ಸುರೇಂದ್ರಸಭೆಯಂತೆ ವಿಬುಧಾಲಂಕೃತಮುಂ ವಿರಿಂಚಿಸಭೆಯಂತೆ ರಾಜಹಂಸರಾಜಿತಮುಂ ರಾಮಸಭೆಯಂತೆ ಸುಪ್ರವೀರವಿಳಸಿತಮುಂ ಹರಿಸಭೆಯಂತೆವೋಲ್ ಶ್ರೀಧ[೧೪]ರ[೧೪]ರಾಜಿತಮುಂ ಶಿವಸಭೆಯಂತೆ ಸದಾನಂದಿಬಂಧುರಮೆನಿಸಿ ನರೇಂದ್ರನೊಡ್ಡೋಲಗಮಾಲೋಕಕ್ಕೆ ಕೌತುಕಮನಿತ್ತೀಲೋಕಕ್ಕಿದೇ ಪಿರಿದೆನಿಸಿ ಪರಿರಂಜಿಸುತಿರ್ದುದಂತುಮಲ್ಲದೆಯುಂ—

ಮರುದಾಕೀರ್ಣಲಸದ್ಘನಪ್ರಸವತಾರಾರಾಜಿತಂ ಹಂಸಬಂ
ಧುರಸಾಪಾಳಿರುಚಿಪ್ರದಾನ ಕವಿರಾಜಾಲಂಕೃತಂ ದಿವ್ಯಸಿಂ
ಧುರಸತ್ವಾವಹರಮ್ಯಮಾತ್ತಕಮಲಾಪಾಂಗಪ್ರಭಾಭಾಸುರಂ
ಸರದಂತಂಬರದಂತೆ ರಂಜಿಸಿದುದಾ ರಾಜೇಂದ್ರನೊಡ್ಡೋಲಗಂ ॥೨೦॥

೧ ದ್ರರ (ಮೂ) ೨ ಜಿ (ಮೂ) ೩ ಯ್ದು (ತಾ) ೪ ವೈದಿಕ (ಮೂ) ೫ ಗೆಯ್ದಂತೆ (ಮೈ) ಗೆಯ್ವಂತೆ (ಮೂ, ಕ) ಗೈಯ್ವುವಂತೆ (ತಾ) ೬ ಶ (ಮೂ) ೭ ಶಕ್ತಿತ್ರಿತಯ (ಮೂ) ೮ ರೋ (ಮೂ) ೯ ವೆ (ರಿ) ೧೦ ಸಾರೆ (ಮೂ) ೧೧ ರಿಂ (ತಾ, ಧಾ) ೧೨ ಗ (ಮೂ) ೧೩ ವಾ (ರಿ, ತಾ, ಮೂ) ೧೪ ರಾ (ಮೈ, ಬ)

ಪೆ[೧]ಱ[೧]ಸಾರ್ಗುರ್ಜರ ಕುಳ್ಳಿರಿಲ್ಲಿ ಮಗಧಕ್ಷ್ಮಾಪಾಲ ನೀಂ ಕಾಣ್ಕೆಯಂ
ನೆಱೆ ನೀಡಂಗ ಕಳಿಂಗ ಪಿಂಗು ಕಡೆನಿಲ್ ಕರ್ಣಾಟಕಾಧೀಶ ಬಂ
ದೆಱಗೈ ಕೇರಳ ಪಾಂಡ್ಯ ನೀಂ ಗಳಪದಿರ್ ಪಾಂಚಾಳ ಲಾಳಂಗೆ ನೀಂ
ತೆಱಪಂ ಮಾಡೆನುತಲ್ಲಿ ಕಂಚುಕಿಗಳಾಗಳ್ ಗರ್ಜಿಸುತ್ತೊಪಿದರ್ ॥೨೦॥

ಇದು ಕಾಶ್ಮೀರಮಹೀಶನಿತ್ತ ಮದವನ್ಮಾತಂಗಸಂಘಾತಮಿಂ
ತಿದು ಕಾಂಭೋಜನರೇಂದ್ರನಟ್ಟಿದ ಹಯವ್ರಾತಂ ಧರಾಧೀಶ ನೋ
ಡಿದು ಪಾಂಚಾಲನಲಂಪಿನಿಂ ಕಳುಪಿದುದ್ಯದ್ರತ್ನಸಂತಾನಮಿಂ
ತಿದು ನೇಪಾಳನೃಪಾಳದತ್ತವಿಳಸನ್ಮುಕ್ತಾವಳೀಭೂಷಣಂ ॥೨೧॥

॥ವ॥ ಎಂದು ದೂತರ್ಬೇಱೆಬೇಱೆ ಚಪ್ಪನ್ನದೇಶದರಸರ್ ಕಳುಪಿದ ಕಪ್ಪಂಗಳನೊಪ್ಪಿಸುತ್ತಮಿರ್ಪನ್ನೆಗಂ—

ಪ್ರಾಂಚತ್ಕಾಂಚನವೇತ್ರಮಂಜುಳಕರಂ ಕೂರ್ಪಾಸವಿಭ್ರಾಜಿತಂ
ಚಂಚತ್ಕುಂಡಲಮಂಡಿತಂ ಗತಿಚಲತ್ಪೀನೋದರಂ ದೀರ್ಘದೇ
ಹಂ ಚಿತ್ರಾಂಬರಸಂವೃತೋರು ಪೃಥುಮಧ್ಯಂ ಮಸ್ತಕಾವೇಷ್ಟಿತೋ
ದಂಚತ್ಪೀತಪಟಂ ಪ್ರಸನ್ನವದನಂ ಬಂದಂ ಪ್ರತೀಹಾರಕಂ ॥೨೩॥

॥ವ॥ [೨]ಇ[೨]ಂತು ಬಂದು ನಿಂದು ನಿಜನಿಟಿಲತಟಘಟಿತಕರಪುಟನಾಗಿ ದೇವಾ ಬಿನ್ನಪಮೀಗಳೊರ್ವನಪೂರ್ವಾಗತಕಿರಾತದೂತನಭಿನವಕಾರ್ಯವಿಜ್ಞಾಪನೋತ್ಸುಕಂ ದ್ವಾರದೇಶದೊಳ್ ಬಂದಿರ್ದಪನೆಂಬುದುಮವನಿಪನಪಾಂಗಪ್ರೇರಣೆಯಿಂ ಬರವೇಳೆಂಬುದುಮವಂ ಪೋಗಿ ತಳ್ವದಾ ಕ್ರವ್ಯಾಧನಾಮವ್ಯಾಧನಂ [೩]ಪು[೩]-[೪]ಗಿಸಿದಾಗಳ್[೪]—

ತಳಿರ ತಲೆಗಟ್ಟು ದಂತದ
ಬಳೆ ಕತ್ತುರಿಬೊಟ್ಟು ಮುತ್ತಿನೇಕಾವಳಿ[೫]ಬಿ[೫]ಲ್
[೬]ಪೊ[೬]ಳೆವಂಬು ಬೆನ್ನ ನಿಡುಬ
ತ್ತಳಿಕೆ ವಿರಾಜಿಸೆ ಪುಳಿಂದನಂದೊಳಪೊಕ್ಕಂ ॥೨೪॥

೧ ರೆ (ಮೂ) ೨ ಇ (ಧಾ) ೩ ಪೊ (ತಾ, ಬ, ಧಾ) ೩-೪ ಪೊಗಿಸಿದಾಗಳ್ (ಮು, ಮೈ) ೫ ವಿ (ತಾ, ಧಾ) ೬ ಪೊ (ಬ, ಧಾ)

॥ವ॥ ಅಂತೊಳಪೊಕ್ಕು ಮಹಾಸ್ಥಾನಮಂ ಕಂಡು ಕೌತುಕಂಬಟ್ಟವನತಶಿರಸ್ಕಂ ಮೆಲ್ಲನೆಯ್ತಂ೧ದನ೧ತಿದೂರದೊಳ್ ಮೆಯ್ಯಿಕ್ಕಿ ಮಣಿದು—

ಕತ್ತುರಿವೀಣೆಯನಿಭದಲೆ
ಮುತ್ತಂ ಫಣಿಮಣಿಯನಮರ್ದಜೇಂಗೊಡಮಂ ಕಂ
ಪೊತ್ತರಿಸುವ ಬಾವನ್ನಮ
ನಿತ್ತಂ ಕಾಣ್ಕೆಯನಿಳಾಧಿಪಂಗೆ ಪುಳಿಂದಂ ॥೨೫॥

॥ವ॥ ಅಂತಿತ್ತು ತನ್ನ ಕಕ್ಷ೨ತಳ೨ದೊಳಿಱುಂಕಿದ ಪೊಂಬುಲಿಯ ಚರ್ಮದ ಕಕ್ಷಪಾಳಿಕೆಯೊಳಳವಟ್ಟ ನಿಗ್ಗವದ ಕರಂಡಕದೊಳಗೆ ಮುದ್ರಿಸಿರ್ದನರ್ಘ್ಯ-ಮಣಿಯಂ ಬಾಲದಿನಮಣಿಯಂ ತುಡುಂಕುವ ರಾಹು೩ವೆ೩ನಿಸಿ ನಿಜಕರಮೆಸೆಯೆ ತುಡುಂಕಿ ತೆಗೆದು ತತ್ಪಾದಪೀಠದೊಳಿ೪ಳಿ೪ಪಿದಾಗಳ್—

ಆ ಮಣಿ ಮೆಱೆದುದು ತರುಣನ
ಭೋಮಣಿ ನಿಜ ಸುಪ್ರತಾಪವಿಜಿತಂ ಪರಿತಂ
ದಾ ಮಹಿತರಾಜಶೇಖರ
ಭೂಮೀಶ್ವರನಂಘ್ರಿಕಮಳಮಂ ಸೇವಿಪವೋಲ್ ॥೨೬॥

॥ವ॥ ಮತ್ತಂ—

ಹರಿಯುರದೊಳೆಸೆವ ಕೌಸ್ತುಭ
ದಿರವಂ ಪರಿಭವಿಸಿ ಮೆಱೆದುದದು ಹರಿನೀಲ
ಸ್ಫುರಿತಪದಾಂಬುಜಪೀಠೋ
ಪರಿಮುಸ್ಥಿತಮರುಣರುಚಿರರುಚಿಪರಿಮಿಳಿತಂ ॥೨೭॥

॥ವ॥ ಇಂತೆಸೆವನರ್ಘ್ಯಮಣಿಯಂ ನೃಪಶಿರೋಮಣಿ ನಿರೀಕ್ಷಿಸಿ ಕೌತುಕಮನಾಳ್ದತಿ ಪ್ರಸನ್ನಮಧುರದೃಷ್ಟಿಯಿಂ ನೋಳ್ಪಾಗಳಾ ಕಟಾಕ್ಷಮಭಯಂಗುಡೆ ಕೈಂಕರ್ಯ-ಮನಪ್ಪುಕೈದವಂ ನಿಜಾಗಮನವಿಜ್ಞಾಪನೋತ್ಕಂಠತೆಯಿಂದಿಂತೆಂದಂ—

---

೧ ದು ಅ (ತಾ) ೨ ಸ್ಥಳ (ಧಾ); × (ಮೂ) ೩ ಪೆ (ಬ) ೪ ಳು (ಮೂ)

ಸೊಗಯಿಪ ದಕ್ಷಿಣಾಂಬುಧಿಯ ತೀರದೊಳಿರ್ಪುದು ಜೇಡರೊ ಗಿ[೧]ನಿಂ
ನಗರಮದೊಂದು ಸಂದ ಪೆಸರಿಂದೆ ಪುಳಿಂದಪುರಂ ಪೊಡರ್ಪಿನಿಂ
ದಗಣಿತಭಾಗ್ಯದಿಂ ಮೆಱೆವನಾ ಪುರದೊಳ್ಕಲಿಕಾಲಮೇಘನಾ
ಮಗತಕಿರಾತನಾಥನವನೀಶ್ವರ ನಿನ್ನ ಪದಾಬ್ಜಕಿಂಕರಂ ॥೨೮॥

ಶೂರನನವರತ ಘನಕಾಂ
ತಾರಾಂತರಚಾರಿ ಕರ್ಕಶಾಂಗಂ ಮೃಗಯಾ
ಧೀರಂ ಧೀವರವರನವ
ನೋರಂತೊಪ್ಪಿರ್ದನಿರ್ಪ ಸಮನಂತರದೊಳ್ ॥೨೯॥

ಘನಸಮಯಾತ್ಮನಾಥವಿರಹಾತುರೆ ಭೂವಧು ಭೂಮಿಭೃದ್ಘನ
ಸ್ತನೆ ಶಿಶಿರೋಪಸೇವನೆಯನೊಂದಿರೆ [೨]ಬಂದಿರೆ ಚೈತ್ರ[೩]ನಾಗಳಾ
ತನ ಬರವಿಂದೆ ಕಾಮಶಿಖಿ ಪೆರ್ಚಿರೆ ತಾಪಮನಾಂತಳೆಂಬ ಭಾ
ವನೆಯನೊಡರ್ಚಿ ಕಾಯ್ಪಿಸಗೆ ಬೇಸಗೆ ಪರ್ಬಿತು ಲೋಕಮೆಲ್ಲಮಂ ॥೩೦॥

ಹರಿರಂಭಾಪರಿರಂಭಿಯಾದನನಿಲಾ[೪]ಪ್ತಂ ಪುಂಡರೀಕಾಶ್ರಯ
ಸ್ಥಿರನಾಚ್ಛಾಯೆಯೊಳೊಂದಿದಂ ಯಮನಮರ್ತ್ಯಾರಾತಿನಾಥಂ ನಿಶಾ
ಕರನಂಭೋಧಿಗತಂ ಜಲಾಧಿಪತಿಯುದ್ಯಾನಾನ್ವಿತಂ ವಾಯು ಶಂ
ಕರಮಿತ್ರಂ ಹಿಮವದ್ದ್ವಿಶಾನಿಲಯನೀಶಾನಂ ಧೃತೇಂದ್ವಾಪಗಂ ॥೩೦॥

॥ವ॥ ಅಂತುಮಲ್ಲದೆಯುಂ—

ದೆಸೆವೆಣ್ಗಳ್ ಬಿಸುವಿಸಿಲಿಂ
ಬಸವಳಿ[೫]ದುಃಪೆಂದು ಸುಯ್ದು ಬಿಸುಸುಯ್ಯೆಲರಂ
ಬೆಸಕಮನೊಡರ್ಚಿ ಬೀಸಿದು
ವಸದೃಶಸೋಷ್ಣಪ್ರಭಂಜನಂ ಬೇಸಗೆಯೊಳ್ ॥೩೨॥

---

೧ ಗ್ಗಿ (ಧಾ, ಮೂ, ಬ) ೨ ಚೈತ್ರ (ಮೂ) ೩ ನೆ (ಬ) ೪ ತ್ಪಂ (ರಿ, ಮೂ)
೫ ದುಪ್ಪೆ (ತಾ, ದಾ, ಬೆ)

ಪಟುತದ್ದೋರ್ದಂಡ ಚಂಡೋದ್ಭಟವಿಕಟಮಹಾರಾಹು ಶತ್ರುಕ್ಷಿತೀಶ
ಸ್ಫುಟಕೀರ್ತ್ಯುದ್ಯತ್ತ್ರತಾಪಪ್ರಬಳಕಮಳರಿಪ್ವಾಪ್ತಬಿಂಬಂಗಳಂ ಸಂ
ಘಟಿಸು[೧]ತ್ತೋರೋರ್ಮೆ[೧] ನುಂಗಿ[೨]ತ್ತ[೨]ಜಳಜಳ[೩]ಧರ[೩]-[೪]ದ್ಯೋ[೪]ತಿಖ[೫]ಡ್ಗೋ[೫]
ಗ್ರ[೬]ಜಿಹ್ವೋ[೬]
ತ್ಕಟನೋ[೭]ಜಃ[೭]ಕ್ಷ್ವೇಡವೈಶ್ವಾನರನಹಿತಮಹಾಭೀಕರಂ ಕಂಚುಕಾಢ್ಯಂ ॥ ೭ ॥

ರಿಪುಬಳಕಮಳಾಕರಮಂ
ನೃಪದ್ವಿಪಂ ಮಿಕ್ಕು ಪೊಕ್ಕು ಕೀಳ್ತುಳಿತ್ತಿತ್ತುಳ
ಗ್ರಪರಶಿರಃಪದ್ಮಂಗಳ
ನಪರಿಮಿತಮದಂ ಕರಾಗ್ರದಿಂ ಭದ್ರಗುಣಂ ॥ ೮ ॥

ಕುಚಕಾಶ್ಮೀರವಿಲೇಪನಂ ಬಿರಿಯೆ ಹೃತ್ಕಾಮಾಗ್ನಿಯಿಂ ಮೌಕ್ತಿಕ
ಪ್ರಚಯಂ ಪಾಱೆ ಸಿಡಿಲ್ದು ತಾಳ್ದುದು ಘನಗ್ರೀಷ್ಮಾತಪಂ ಪೊಯ್ಯೆ ಸೀ
ಳ್ದ ಚಲದ್ಗಂಧಗಜೇಂದ್ರಕುಂಭದ ಗಳನ್ಮುಕ್ತಾಫಳಶ್ರೀಯನಾ
ಖಚರಸ್ತುತ್ಯನರಾಧಿನಾಯಕನ ವೈರಿವ್ರಾತಕಾಂತಾಳಿಯಾ ॥ ೯ ॥

ನುಡಿಯೆ ಶುಕವ್ರಜಂ ಜಡಿದು ಮುತ್ತುಗುಮೀಗಳೆನುತ್ತೆ ಮೌನದಿಂ
ನಿಡುಜಡೆಗಾಣೆ ಕೇಕಿ ಕವಿದೆಯ್ದುಗುಮೆಂದು ಮುಸುಂಕಿ ಮೇಲುದಂ
ನಡೆಯೆ ಮೃಗೇಂದ್ರನಿಂದು ನಡೆತಂದಪುದೆಂದು ಬಿಗುರ್ತು ನಿಂದು ಪಾ
ವ[೮]ತದರ್ಳಿವಂದೆಯಂ ತಿರಗಿವರ್ಸುಗಿವರ್ತ[೯]ದ[೯]ರಾತಿ[೧೦]ಕಾಂತೆಯರ್[೧೦] ॥೧೦॥

ಸರಸಿಜಸಖನಾ ನರಪತಿ
ಯರಿಗಳ ಸೌಧಾಗ್ರದಲ್ಲಿ ಮೊಳೆತೆಳೆವುಲ್ಗಾ
ತುರಿಪ ತುರಂಗಮನರುಣಂ
ಬರಸೆಳೆದು ಮರ[೧೧]ಳ್ಚಿ[೧೧]ನಡೆವನೆಡದೊಳ್ ಬಲದೊಳ್ ॥೧೧॥

ಸುಂದರಿ ಬಾರ ಸಾರಸ[೧೨]ಕ[೧೨]ಳಾಯತಲೋಚನೆ ನೋಡದಿರ್ಪುದೇ
ನಿಂದೆಲೆ ರಾಜಪತ್ನಿ ಪೊಸಪಣ್ಗಳ ನಲ್ಗು[೧೩]ಟು[೧೩]ಕಿಕ್ಕು ಪಂಚಬಾ
ಣಂ ದಯೆಗೆಯ್ಗೆ ಕೇಳ್ನಿನಗೆ ಬಿಂಬಫಳಾಧರೆಯೆಂದು ಸಾರಿಕಾ
ಬೃಂದಮರಾತಿಮಂದಿರದೊಳೆಂಬು[೧೪]ದು[೧೪]ಬಂದ ಪುಳಿಂದಿಯರ್ಕಳಿಂ ॥೧೨॥

---

೧ ತ್ತೋರ್ಮೋರ್ಮೆ (ಧಾ, ಮೈ, ಬ) ೨ ತ್ತು (ಬ, ಕ) ೩ ಧಾರಾ (ತಾ) ೪ ಜ್ಯೋ (ಮು, ಮೈ) ೫ ಡ್ರೋ (ರಿ) ೬ ಜಿಂಹೋ (ಬ, ತಾ, ಮೂ, ಧಾ) ೭ ಜ (ಮೂ) ೮ ತ್ತು (ಮೈ), ತ್ತ (ಮು) ೯ ದಾ (ತಾ) ೧೦ ಯರ್ (ಮೂ) ೧೧ ಳ್ಚಿ (ಮೂ) ೧೨ ದ (ಮೂ) ೧೩ ಟ (ರಿ) ೧೪ ದ (ಮೈ, ಕ)

ಕನಸಿನೊಳೆಯ್ದೆ ಕಂಡು ನೃಪಭೀಷಣಮೂರ್ತಿಯನಲ್ಲಿ ಭೀತಿಗೊಂ
ಡನುವಿಸು[೧]ತೇಳ್ವ[೧]ವೇಳೆಯೊಳೆ ತದ್ವನದೊಳ್ ಮೃಗರಾಜನೆಯ್ದೆ ಗ
ರ್ಜನೆಗುಡೆ ತದ್ರಣಾದ್ಭುತವಿಜೃಂಭಿತಗರ್ಜನೆಗೆತ್ತು ತೀವ್ರಕಂ
ಪನಮೆರ್ದೆಗಾಗೆ ತಲ್ಲಣಿಸಿ ಮಲ್ಲಳಿಗೊಳ್ವ[೨]ರ[೨]ರಾತಿಭೂವರರ್ ॥೧೩॥

ಕೃತಪದ್ಮಾನಂದನಾಲಂಬಿತರುಚಿವಿಭವಂ ಮಂಡಲಂಗೊಂಡು ಧಾತ್ರೀ
ಪತಿಮಾ[೩]ರ್ತಂ[೩]ಡಂ ಸುಗೋತ್ರಸ್ಥಿತನೆಸೆಯೆ ರಿಪುಸ್ತ್ರೀಜನಾ[೪]ಕ್ಷ್ಯುತ್ಪ[೪]ಲಂ ದು
ಸ್ಥಿತಿಯಿಂ ಸಂಕೋಚಮಂ ತಾಳ್ದಿರೆ ಕಳಿದಿಳಿವಿಂದಿಂದಿರಂಬೋಲ್ವದಾಬ್ಜ
ಚ್ಯುತಮೊಪ್ಪಿತ್ತನ್ಯರಾ[೫]ಜಾ[೫]ಸ್ತ[೬]ಮಯಸಮಯದೊ[೬]ಳ್ಕಂಕಣಂ ಕಜ್ಜಳಾಂಕಂ ॥೧೪॥

ಸುರಧೇನು ಪಯೋಧರಮಂ
ಸುರಕುಜದೆಳೆದಳಿರನಮ[೭]ರ[೭]ಮಣಿಯಂ ಬೆರಲುಂ
ಕರಮುಂ ನಖಮುಂ ಪರಿಜಿಂ
ವರವಿತರಣದಿಂದೆ ಪಳಿಗುಮಾ ನೃಪಸುತನಾ ॥೧೫॥

॥ವ॥ ಎಂಬತಿಶಯಪ್ರಶಸ್ತಿಯಂ ಪಡೆದು—

ಪ್ರಣತಪ್ರತ್ಯರ್ಥಿಪೃಥ್ವೀಧವನಿವಹಕಿರೀಟಾಗ್ರಮಾಣಿಕ್ಯಮಾಲಾ
ಘೃಣಿಚಂಚಚ್ಚಂಚಲಾಂಚತ್ಸುರಪಮಣಿಮಹಾಪೀಠಮೇಘಸ್ಥಪಾದಂ
ಗುಣಭಾಸ್ವದ್ರತ್ನರತ್ನಾಕರನಭವಲಸದ್ಭಕ್ತನಾ ರಾಜಚೂಡಾ
ಮಣಿ ಪೆಂಪಂ ತಾಳ್ದು ಕಣ್ಗೊಪ್ಪಿದನಮಮ ಕಳಾಕಾಮಿನೀಜೀವಿತೇಶಂ ॥೧೬॥

॥ವ॥ ಇಂತೊಪ್ಪುತ್ತಮಿರ್ದೊಂ[೮]ದು ಸುವಾಸರದ ಸುಪ್ರ[೮]ಭಾತಸಮಯದೊಳೀ
ಶ್ವರಾರ್ಚನಂಗೆಯ್ದನಂತರಂ—

ಮಣಿಕೋಟೀರಾಂಶುವೆತ್ತಂ ತುಱುಗೆ ಮಿಱುಗೆ ಹಾರಾಂಶು ಗಂಡಂಗಳೊಳ್ಮೇ
ಙ್ಕಣಿವೃತ್ತಂ ತೋಱೆ ಕರ್ಣಾಭರಣಕಮನಮುಕ್ತಾಂಶು ದಂತಾಂಶುಕೋದ್ಯ
ನ್ಮಣಿಯಂ ದಂತಾಂಶು ತೀವುತ್ತೆಸೆಯೆ ಮಿಸುಗೆ ವಕ್ತ್ರಾಂಶು ವಜ್ರಾವಳೀಕಂ
ಕಣವಿಸ್ಫಾರಾಂಶು ವಿಭ್ರಾಜಿಸೆ ಕನಕಲಸತ್ಪೀಠದೊಳ್ ಭೂಪನಿರ್ದಂ ॥೧೭॥

---

೧ ತೆಳೆ (ಕ) ೨ ರಾ (ತಾ) ೩ ರ್ತಾ (ಮೂ, ಧಾ, ಕ) ೪ ಕ್ಷಂ ತ್ಪ (ತಾ, ಮು) ಕ್ಷ್ಯುತ್ಫ (ಬ) ೫ ಜ (ಬ) ೬ ಮಯದೊ (ಮೂ) ೭ ಳ (ಮೂ) ೮ ಸುಪ್ರಭಾತ (ಮೂ)

ಪಾಡುವ ಗಾಯಕರ್ ಕುಣಿವ ನಚ್ಚಣಿಯರ್ ಕರವೆತ್ತಿ ಕೀರ್ತನಂ
ಮಾಡುವ ಮಾಗಧರ್ನುತಿಪ ಸತ್ಕವಿಗಳ್ ಮಣಿದೇಳ್ದು ಕಪ್ಪಮಂ
ನೀಡುವ [೧]ಮನ್ನೆ[೧]ಯರ್ ಜಯಸುಖೀಭವವಾದಕಶೈವಕೋವಿದರ್
ಕೂಡಿರೆ ಚೆಲ್ವುವೆತ್ತುದು ಸಭಾಸದನಂ ವಸುಧಾಧಿನಾಥನಾ ॥೧೮॥

ಚರಣರಣನ್ಮಂಜೀರ
ಸ್ವನಮುಣ್ಮಿರೆ ಬಂದು ನಿಂದು ಸುಂದರಿಯರ್ ಕೇ
ಕರಕರರುಹರುಚಿ ಬೆರಸು
ತ್ತಿರೆ ಬೀಸಿದರೆಸೆವ ಧವಳತರಚಾಮರಮಂ ॥೧೯॥

॥ವ॥ ಮತ್ತಮಾ ಮಣಿಗಣಖಚಿತ ರುಚಿರತರಕನಕಮಯದಿವ್ಯಸಿಂಹಾಸನದಿಕ್ಕೆಲದೊಳ್ ಬಿಂಕದಿಂ ಕೊಂಕಿನಿಂದು ಕಂಕಣಝುಣತ್ಕೃತಿ ಪೊಣ್ಮೆ ಜಾಣ್ಮೆಯಿಂದೆಳೆಗಾಳಿಯ ಲೆಪದಿಂ ಲಲಿತರಸಾಲಲತೆ ನೆಗೆದು ಮಂಜುಮಂಜರಿ[೨]ಯಂ[೨] ಪಸರಿಪಂತೆ ಸೂಳಱಿದು ತೋಳಂ ನೆಗಪಿ ಚಾಮರಮಂ ಬೀಸುವ ಚಾಮರಗ್ರಾಹಿಣಿಯರಿಂ, ಪರಿವಿಡಿ[೩]ಯಿಂ ತರಂ[೩]ಬಿಡಿದು ಕಂದರ್ಪನಂ ಪಿಂದುಗಳೆವಂದಮಂ ತಳೆದುನಿಂದ ರಾಜಪುತ್ರರಿಂದೆಡೆಯಾಡುವ ಪಡಿಯ[೪]ಱ[೪]ತಿಯರ ಕಡೆಗಣ್ಣ ಕುಡಿವೆಳಗೆಂಬ ಬಳ್ಳಿಮಿಂಚಿಂಗೆ ಭಯಂಬಡೆದು ಪೆಡಂಮೆಟ್ಟುವ ರಾಜಹಂಸಸಮಾಜಮನೋಜೆಯಿಂ ಕರೆದುಚಿತಸ್ಥಾನದೊಳ್ ನಿಲಿಪ ವೇತ್ರ[೫]ಧ[೫]ರರಿಂ, ಮತ್ತಂ—ಮುಡಿಯೊಳಿಟ್ಟ ಮುಗುಳಮಾಲೆಯ ಪಣೆ[೬]ಗ[೬]ಮರ್ಚಿದ ಮೃಗಮದತಿಲಕದ ಪರಿಮಳಕ್ಕೆ ಬೆರಸಿ ಪರಿಮುರಿಯಾಡುವ ಮಱಿದುಂಬಿಗಳ ಬಂಬಲಂ ಪೊಡೆವ ಕರತಳಂ ಕಳ್ತಲೆಯ ಬೆಂಕೊಳ್ವ ಕಮಳದಂತೆ ಕಮನೀಯಮಾಗೆ ಬಿಂಬಾಧರದ ಕೆಂಬೆಳಗು ಸುಲಿಪಲ್ಲ ಸೂಸುವೆಳಗಿನೊಡವೆ[೭]ರೆ[೭]ದು ವದನವಿಧುಮಂಡಳದ ಪಾಟಲದ್ಯುತಿಯಂತೆ ಪಸರಿಸಿ ಬೀದಿವರಿಯೆ ಕುಡಿನಿಮಿರ್ದ ಕಡೆಗಣ್ಗಳ್ಕರ್ಣಪೂರಮಾದ ಕನ್ನೈದಿಲೊಳ್ಪಳಂಚುವಂತೆ ಥಳಥಳಿಸಿ ಪೊಳೆಯೆ ತೊಳಪ ನಾಸಿಕೆಯೆಂಬ ಸಂಪಗೆಯ ಬಿ[೮]ರಿ[೮]ಮುಗುಳ ಪರಿಸರದೊಳಱಿಯದೆಱಗಿ ಭಯಂಬಡೆದು ಬೆಮರ್ತ ಮೃಗಮದತಿಲಕಮೆಂಬ ಮಱಿದುಂಬಿಯ ನುಣ್ಬೆಮರ್ವನಿಯುದಱ ಬೆಂಬಳಿಯೊೞಿದಾಲಂಬಿಪಂತೆ ನಾಸಾಮಣಿ ಮನೋಜ್ಞಮಾಗೆ ಮೀಂಬಳ್ಕೆ[೯]ಯಿ[೯]ಗೆಯುಂ ಚೆಂಬೊನ್ನಕುಂಭಮುಂ ಸಂಭ್ರಮದಿನರ್ಚಿಸಿದ ವಿಚಕಿಲಮುಕುಲಮಾಲೆಯಂತೆ ಕುಚತಟದೊಳ್ ಕಂಠಮಾಲೆ ಲೀಲೆವಡೆಯೆ ಅಳಿವೆದೆಯುಂ ಸಡಿಲ್ಚಿ ನಿಲಿಸಿದ ತನುಚಾಪಲತೆಯಂತೆ ತನುಲತೆ ನಿಡುಜೆಡೆಯಿಂ ಕಡುಬೆಡಂಗುವ-

---

೧ ಮಾನ್ಯೆ (ತಾ) ೨ ಯು (ಮೂ) ೩ ದಿತ್ತರಂ (ಮು) ಯಿಂತರ (ಧಾ, ತಾ) ಯಿಂ ಇತ್ತರಂ (ಬ) ೪ ಱಿ (ಮೂ) ೫ ಧಾ (ತಾ, ಬ) ೬ ಯೊಳ (ಬ) ೭ ರ (ಬ, ತಾ) ೮ ರು (ಧಾ) ೯ ವಿ (ಮೂ, ಮೈ)

ಡೆಯೆ ಬಿಸಿನಿ ಬಿಸಿಲನುಟ್ಟಳೆಂಬಂತೆ ಬಿಗಿದುಟ್ಟ ಮಿಸುನಿವಟ್ಟೆ ಮಿಸುಗುತ್ತಿರೆ ವಿಸ-ಟಂ[೧]ಬ[೧]ರಿದು ಕುಸುಮ[೨]ಶ[೨]ರವಿಸರಮಂ ಪಸರಿಪ ಕಟಾಕ್ಷರೋಚಿಯಿಂ ರಾಜಪುತ್ರರಂ [೩]ಮರುಳ್ಗೊಳಿಸಿ[೩] ಸಾಲ್ಗೊಂಡು ನಿಂದ ವಾರಾಂಗನೆಯರಿಂ, ಮತ್ತಂ-ಮೊಳಗುವಮದ್ದಳೆಯ ಪೋಷಿಪಾವುಜದಿಂಚರಂಗಱೆವ ಬಂಚ[೪]ದ[೪] ಪಾಂಗಱಿದು ಪಾಡುವ ಸಂಗೀತದ ಸೂಳಱಿದೊತ್ತುವ ತಾಳದ ಮಧುರತರನಿನದಂ ಬೆರೆದು ಮೇಳಂಗೊಂಡ ವೇಳೆಯೊಳ್ ಸಮಯಸಮುಚಿತನೈಪಥ್ಯಂಗೆಯ್ದು ಝುಗಝುಗಿಪ ಜವನಿಕೆಯ ಮಱೆಯೊಳ್ ಕಂದರ್ಪವಿವಾಹದೊಳಂದಂಬಡೆದ ಪೊಂದೆಱೆಯುಂ ಮಱೆಗೊಂಡು ನಿಂದ ರತಿಯಂ ಪೋಲ್ತು ನಿಂದಿರ್ಪುದುಂ ನಾಂದಿಯನೋದಿ ಸೂತ್ರಧಾರಕಂ ಭೋಂಕನೆ ತೆಱೆದೆಗೆಯೆ ಶೃಂಗಾರರಸವಂಗಂಬಡೆದಂತೆ ಕಂಗೊಳಿಸಿ ನಿಂದಂಗಪ್ರಭೆ ಮಗುಳ್ದು ತೆಱೆವಿಡಿದಂತಾಗೆ ನಿಜಕಟಾಕ್ಷ[೫]ಶ[೫]ರಮಿರ್ದಂತೆ ಮುಗುಳ್ಗಣೆಗಳೇವಾಳ್ತೆಯೆಂದು ಕಾವನ ಕರತಳದಿನವಂ ಕವರ್ತೆಗೊಂಡು ಚೆ[೬]ಲ್ಲು[೬]ವಂತೆ ಪುಷ್ಪಪುಟಹಸ್ತದಿಂ ಪುಷ್ಪಾಂಜಲಿಯಂ ಕೆದರ್ದು ಮೊದಲೊಳ್ಮೋಹಿಸಿ ಸಭಾಸದ[೭]ರಂಗರಂಗ[೭]ದೊಳಪಾಂಗಪ್ರಭೆ ನರ್ತಿಸುತ್ತಿರೆ ಮಂದಾನಿಲನಿನಾಂದೋಳಿಪ ಕನಕಲತೆ-ಯಂತಾಂದೋಳನಶೋಭೆದೋಱಿ ಮಡುಗಟ್ಟಿದ ಮುಖರಸದೊಳ್ ತೇಂಕಿ ತೇಲ್ವ ಚಪಲಶಫರಂಗಳೆಂಬಂತೆ ಚಂಚಲಾಕ್ಷಿ[೮]ಗಳಸೆಯೆ[೮] ಮಿಂಚು ನಚ್ಚಣಿವರಿಜುವಸೆದು ನರ್ತಿಪುವೆಂಬಂತೆ ಚಮತ್ಕೃತಿ[೯]ವೀಱಿ ಮಂಜುಸಿಂಜಿತಂ ನೆಗಳೆ ಮೆಯ್ಯೊಳ್ಗಾನಮಂ ಕೆಯ್ಯೊಳಭಿನಯಮಂ ದೃಷ್ಟಿಯೊಳ್ ರಸಮಂ ಪದತಳದೊಳ್ ತಾಳಮಂ ಬೀಸರಂಬೊಗಲೀಯದೆ ಸೆಱೆವಿಡಿದುರ್ರೂರ್ಪು ನೇರು ಲಾಗು ಲವಣೆಯಡಪು ತಿರುಪು ಕೈಮಱೆ ಕಳಾಸ ಕೂಟಮಾನಂಗಳಂ ಸಂಗಳಿಸಿ ರಸಭಾವಂದಪ್ಪದೆ ಗಾಡಿಗಮಕಂಗುಂದದೆ ಬೆಡಂಗು ಬಿನ್ನಣಂ ಬೆರ್ಪಡದೆ[೧೦]ವೋಜೆ[೧೦]ಒಯ್ಯಾರ ಮೋಸರಿಸದೆ ಶುದ್ಧ ದೇಶೀಯಕ್ರಮದಿಂ ಚತುರ್ವಿಧನರ್ತನಮಂ ಚತುರಜ[೧೧]ನಮ[೧೧]ಚ್ಚುವಂತೆ ತೋರ್ಪ ನರ್ತಕಿಯರಿಂ, ಮತ್ತಂ—ರಸವಿಸರಂ ಪಸರಿಸೆ ಸೊಂಪು ಪೊಂಪುಳಿವೋಗೆ ರೀತಿ ಕೌತುಕಮನೀಯೆ ಜಾತಿ ಜಾಣ್ಬಡೆಯೆ ಭಾವಂ ಭಾವಜನ[೧೨]ಪೊ[೧೨]ವಿನಂಬಿನಂತೆ ಮನಮಂ ನಾಂಟೆಯಲಂಕೃತಿ ಚಮತ್ಕೃತಿವೀಱೆ ಗುಣಗಣ ಮಣಿಯರಮೆನಿಸೆ ವೃತ್ತಿ ಬಿತ್ತರಂಬಡೆಯೆ ಪಾಕಂ ಲೋಕೋತ್ತರಮೆನಿಸೆ ಶಯ್ಯೆ ರಮ್ಯಮಾಗೆ ಬಂಧಮಗುಂದಲೆವಡೆಯೆ ದೋಷಮಂ ದೂರೀಕರಿಸಿ ಭಾಷಾ ಭೇದದಿಂ ನವೀನಮೆನಿಸಿ ಸವಿನುಡಿಗಳಿಂ ಸರಸತರಮೆನಿಸಿ ಗದ್ಯಪದ್ಯಚಂ[೧೩]ಪು[೧೩]

---

೧ ಪ (ತಾ) ೨ ಸ (ತಾ) ೩ ಪುಳ್ಗೊಳಿಸಿ (ರಿ) ೪ ರ (ಮೂ) ೫ ಭ (ರಿ) ೬ ಲು (ರಿ) ೭ ರಾಂಗ (ಮೈ, ಕ) ೮ ಮೆಱೆದೆಸೆಯೆ (ಮೂ) ೯ ರು (ಧಾ, ಮೂ, ಮೈ, ಕ) ೧೦ ವಾಜೆ (ಮೂ); ಪೋಜ (ಬ) ೧೧ ನಾಮೆ (ರಿ) ನಮೆ (ರಿ, ತಾ, ಧಾ) ೧೨ ಹೂ (ತಾ, ಬ, ಧಾ, ಕ) ೧೩ ಬು (ರಿ, ಮೈ, ಕ, ಧಾ, ತಾ) ಬುಕ (ಬ)

ಪೊಡವಿಯಜ[೩]ತಖಿಳಜಳಮಂ
ಕುಡಿದುಂ ತೃಷೆಯಡಗದಾ ಮರೀ[೧]ಚೀ[೧]ಜಳಮಂ
ತಡೆಯದೆ ಕುಡಿಯಲ್ ಮಿಗೆ ಬಾ
[೨]ಯ್ವಿ[೨]ಡುವಂತಿರೆ ಬಿರಿದ ಬೀ[೩]ಡೆ[೩]ಗಳ್ಬಿಡದೆ[೪]ಸೆಗುಂ ॥೩೩॥

ಪುಡಿ ತನಿಗೆಂಡದ ಬೂದಿಯ
ಪಡಿ ನೆಲಮಟ್ಬೊಲೆಯ ತೊಲೆಯಲರ್ ಬಿರಯಿಯ ಬಾ
ಯೆಡೆಯೆಲರ್ಗೆಣೆಯುರಿಗಿದು ಸರಿ
ಕಡುವಿಸಿಲೆನಿಸಿರೆ ನಿದಾ[೫]ಘ[೫]ಮೇಂ ಪಸರಿಸಿತೋ ॥೩೪॥

ದಿನಮಣಿಮಣಿಶಾಣೋ[೬]ಪ[೬]ಲ
ವಿನಿಹಿತಘೃಷ್ಟಾರ್ಕಕಿರಣಖರಖಡ್ಗಲತಾ
ಜನಿತಸ್ಫುಲಿಂಗಸಂಘಮಿ
ದೆನೆ ತದ್ವಿಸ್ಫುರಿತವಹ್ನಿಕಣತತಿಯೆಸೆಗುಂ ॥೩೫॥

ಇಳೆ ಕಾಯ್ಪೇಱಿದುದಬ್ಧಿ ನೀರ್ದೆಗೆದುದಾಶಾದಂತಿ ಬಾಯ್ವಿಟ್ಟುದು
ರ್ಕಳಿದರ್ ದಿಗ್ವರರಂಜಿದರ್ ದಿವಿಜರು[೭]ರ್ವೀಧ್ರ[೭]ವ್ರಜಂ ಸೀಳ್ದುದು
ಜ್ವಳಮಾದತ್ತಿನಬಿಂಬಮಂಬುಚರಮೆಲ್ಲಂ ಬೇಗೆಗೊಂಡತ್ತು ಬಾಂ
ಬೊಳೆ ಬತ್ತಿತ್ತು ಮರೀಚಿ ಪೊಣ್ಮಿದುದರಣ್ಯಂ ಬೆಂದುದಾ ಗ್ರೀಷ್ಮದೊಳ್ ॥೩೬॥

॥ವ॥ ಅಂತುಮಲ್ಲದೆಯುಂ—

[೮]ಅಗ[೮]ಶಿಖರಂ ಛಿಳಿಛಿಟಿಲೆನೆ
ಮಿಗೆ ಸಿಡಿದುದು ಧಗಧಗಸ್ವನಂ ನಿಮಿರೆ ವನಂ
ಭುಗಿಲನುರಿದುದು ಖಗವ್ರಜ
ಮೃಗತತಿಘೂರ್[೯]ಘೂ[೯]ರಿಲನೆಯ್ದೆ ಬೆಂದುದು ಬಿಸಿಲೊಳ್ ॥೩೭॥

೧ ಚಿಕ (ಬ); ಚಿಯೆ (ಮೈ) ೨ ಯ್ಬು (ಮೂ) ೩ ಟೆ (ಮೂ, ಮೈ)
೪ ಳ್ಕರಮೆ (ತಾ) ೫ ಗ (ತಾ) ೬ ಫ (ಮೈ) ೭ ರ್ವಿಂದ್ರ (ಮೂ) ವ್ರಿಂದ್ರ (ಮೈ)
೮ ಆ (ಮೂ) ೯ ಗ (ಬ, ಮೂ)

ಕೊಳದಂಬು ಬತ್ತೆ [೧]ಚು[೧]ಯ್ಯಂ
ದೊಳಗಣ ನಳಿನಾಳಿ ಕರಿಕುವರಿಗುಮೆನುತ್ತಂ
ಜಳಜಸಖಂ ಜಳಕಿರಣಾ
ವಳಿಯಂ ಪಿಳಿದಂತೆವೋಲ್ ಮರೀಚಿ[೨]ಕೆ[೨] ಮೆಱೆಗುಂ ॥೩೮॥

॥ವ॥ ಮತ್ತಮಲ್ಲಿ—

ನೋಡಿ ಮರೀಚಿಕಾಜಲಮನಂಬುವಿದೆಂದೆಳಸುತ್ತೆ ಬಂದು ಕೈ
ನೀಡಿ ಕಲಂಕಿ ಪೊಕ್ಕು ತೆ[೩]ಗೆ[೩]ದಿಕ್ಕುತೆ ಪುಷ್ಕರಮಂ ನಿಜಾಸ್ಯದೊಳ್
ಬಾಡಿ ಬಳಲ್ದು ಬಲ್ಪಳಿದು ಘೀಳಿಡುತಂಗದೊ[೪]ಳೆ[೪]ತ್ತಲುಂ ಪುಗು[೫]ಳ್[೫]
ಮೂಡಿರೆ ಬೀಳ್ದುದರ್ಕಕರಕಲ್ಪಿತಸಂಜ್ವರನೊಂದು ಕುಂಜರಂ ॥೩೯॥

ಬಾಯ್ಬಿಡು[೬]ತ್ತೇ[೬]ಯ್ದಿದ ಮಱಿಯಂ
ತಾಯ್ಬಿಡಿ ನಡೆನೋಡಿ ಬಾಡಿ ತಾಪಂ ಮೊದಲಿಂ
ದಯ್ವಡಿ ನೆಗಳ್ದಿರೆ ತೆಗೆದೇಂ
ಕಯ್ಬಿಡಿದೂ[೭]ಡಿ[೭]ದುದೊ ಸೋಷ್ಣಜಳಮಂ ಬಸುಱಿಂ ॥೪೦॥

ನಡುನೆತ್ತಿ ಬಿರಿದು ಮುತ್ತುಗ
ಖೊ[೮]ಡೆ[೮]ದುಚ್ಚಳಿಸುತ್ತೆ ಪಾರೆ ಪರ್ನಿ[೯]ಗೇ[೯]ತ್ತು ನವಿಲ್
ತುಡು[೧೦]ಕೆ[೧೦]ನಿಜಚಂಚುವಂ ಸುಡೆ
ಮಿಡುಕಿದುದು ನಿದಾಘತಪ್ತಕರಿಸಂಕುಳದಾ ॥೪೧॥

ತಳಮಂ ಸುಡೆ ನೆಲನಡಿಯಿಡ
ಲಳವಲ್ಲದೆ ನಿಂದ ಸಿಂ[೧೧]ಧು[೧೧]ರಂಗಳ ನೆಳಲೊಳ್
ಬಳಿಗೊಂಡು ನಿಂದು ಬಿಸಿಲುಪ
ಟಳಮಂ ಕಳಿಗುಂ ಕ್ಷಣಂ ಮೃಗೇಂದ್ರಕದಂಬಂ ॥೪೨॥

---

೧ ಷೀ (ಮೂ) ೨ ಕಿ (ದಾ) ೩ ಗ (ಬ, ಮೂ) ೪ ಳಿ (ಮೂ) ೫ ಲ್ (ಮೂ)
೬ ತ್ರೈ (ತಾ, ಬ, ಧಾ, ಮು, ಮೈ) ೭ ದಿ (ಅ, ರಿ) ೮ ಡ (ತಾ, ಧಾ, ಮೂ, ಮೈ)
೯ ಕೆ (ಮೂ) ೧೦ ಕಿ (ಮೈ); ೦ಕಿ (ಧಾ) ೧೧ ಧೂ (ಬ)

ಕಡುಗಾದ ಪೆಡೆವಣೆಗೆ ತಲೆ
ಗೊಡಪುತ್ತಂ ಭಯಮನುಳಿದು ಪುಗೆ ಸೋಗೆಯ ಸೊಂ
[೧]ಪಂ[೧]ಡರ್ದ ಪೊಸ್ವಪೀಲಿಯೊಳ್ ಫಣಿ
ಬಿಡದುರಿದುದದೆಂದೊಡದನದಾರ್ ಬಣ್ಣಿಸುವರ್ ॥೪೩॥

ಪೆಡೆಯಂ ಕೊಡೆಯಂತಿರೆ ಪಿಡಿ
ದಡಿಯೊಳ್ ನೆಱೆನಿಂದ ಮ[೨]ಱಿ[೨]ಯನಾನನದೆಲರಿಂ
ಬಿಡದಾಶ್ವಾಸಿಸಿ ಮಱುಕಂ
ಬಡೆದೋವುತ್ತಿರ್ದುದುರಗಿ ಪರ್ಬಿದ ಬಿಸಿಲೊಳ್ ॥೪೪॥

ಅಳುರ್ವ ಬಿಸಿವಿಸಿಲ ಬೇಗೆಯ
ನಿಳೆ ಸೈರಿಸಲಾಱದಭ್ರಗಂಗಾಜಳದೊಳ್
ಮುಳುಗಲಿರದೇಳ್ವವೋಲ್ ಕಂ
ಗೊಳಿಸಿತು ಸುಟ್ಟುರೆ ಸರೇಣು ಪಸರಿಸೆ ನಭದೊಳ್ ॥೪೫॥

ಸಿಡಿದುದು ದಂತಿದಂತಮದು ಸಂಗಡಮಾಗಿರೆ ಕುಂಭಮೌಕ್ತಿಕಂ
ಪೆಡೆವಣೆ ಪಾಱೆ ನೆತ್ತಿ ಬಿರಿದತ್ತಹಿವೃಂದದ ಸಿಂಹಕೇಸರಂ
ಬಿಡದುರಿದತ್ತು ಪಕ್ಕಿಗಳ ನುಣ್ಗಱಿ[೩]ಸೀದುದ[೩]ರಣ್ಯದಲ್ಲಿ ಸಂ
[೪]ಗಳ[೪]ಡಿಸಿದ ರುಕ್ಷರೋಮತತಿ ಬೆಂದುದು ಬೇಸಗೆಯುಗ್ರಮೆಂತುಟೋ ॥೪೬॥

ಹಿಮತಾಂಬೂಲರಸಾರುಣಾಧರಮುದಂಚದ್ಘರ್ಮವಾ[೫]ರ್ಬಿ[೫]ಂದುವಿ
ಶ್ರಮುಖಂ ಕೌಸುಮತಾಲವೃಂತಪವನವ್ಯಸ್ತಾಳಕಂ ಚಂದನಾಂ
ಕಮಹೋತ್ತುಂಗಕುಚಂ ನಿತಂಬಶಿಥಿಲ[೬]ಕ್ಷೌಮಾಂ[೬]ಬರಂ ನವ್ಯಪು
ಷ್ಪಮನೋಜ್ಞಾಭರಣಂ ನಿದಾಘದೊಳೆ ಕಣ್ಗೆಂಬಾಯ್ತು ಕಾಂತಾಜನಂ ॥೪೭॥

---

೧ ಪೊ (ಬ) ೨ ರೆ (ಮೂ) ೩ ನಿದ (ಮೂ) ೪ ದ (ಧಾ) ೫ ರಿರ್ಬಿ (ಬ)
೬ ಕೌಸುಂಭಾ (ಬ)

ಕೊಳದಬ್ಜವ್ರಜಮಂ ಕರಂ ಕೊರಗಿಪಂ ಸೂರಂ ಸಖಿಂ ತಾಪಮಿ
ತ್ತಿಳೆಯೊಳ್ತಾನಿದು ಕಾಲದೊಂದು ಗುಣಮಕ್ಕುಂ ನೋಡಿಮೆಂದಾ[೧]ಯು[೧]ವಾ
ಸ್ಯಳಸತ್ಪಂಕಜಮಳ್ಕಿ ಬಂದು ನವಯೋಷಿದ್ವಕ್ತ್ರಪೂರ್ಣೇಂದುವಂ
ಕೆಳೆಗೊಂಡತ್ತೆನೆ ಮಿತ್ರನಾದೊಡಮದೇಂ ಕಾಯ್ವಾತನಂ ಕೂರ್ಪರಾರ್ ॥೪೮॥

ಹಿಮಕರಕಾಂತಿಕಾಂತಹಿಮ[೨]ಮಿಶ್ರಿ[೨]ತಚಂದನ[೩]ಪಲಿಪ್ತಕುಂ
ಕುಮಸವಕರ್ದಮಾರ್ದ್ರರಮಣೀಕಮನೀಯಘನಸ್ತನಂಗಳಂ
ಸಮುದಿತಮಾನಮಾನಸರೊಱಲ್ದಮರ್ದಪ್ಪಿ ತದಂಗ[೪]ಯು[೪]ಷ್ಟಿಸಂ
[೪]ಕ್ರ[೪]ಮಿತನಿಜಾಂಗರಲ್ಲಿ ಕಳಿವರ್ ಪೊಸಜೇಸಗೆಯೊಂದು ಜೇಗೆಯಂ ॥೪೯॥

ಗಿರಿಶೃಂಗೋತ್ತುಂಗಚಂಚಚ್ಚಟುಲಖರ[೫]ರುಚಿ[೫]ಗ್ರಾವವದಗ್ರಂಗಳೊಳ್[೬]ನಿಂ[೬]
ದುರುಕಾಂತಾರಾಂತರಾಳಪ್ರಭವದವಭಯಭ್ರಾಂತನಾನಾಮೃಗೌಘಂ
ನೆರೆ[೭]ದೆ[೭]ತ್ತಂ ನಿಂದು ತಾಪಂಗಳೆದಿರೆ ಬಳಿಯೊಳ್ ತತ್ತಪಸ್ತೇಜಮೆಂಬಂ
ತಿರೆ ಪರ್ಬಿರ್ದರ್ಕತೇಜಂ ಮೆಱೆದರಘಹರಧ್ಯಾನಸಾಂದ್ರರ್ ಮುನೀಂದ್ರರ್ ॥೫೦॥

॥ವ॥ ಇಂತಳವಿಗಳಿದಳುರ್ದ ಘನನಿದಾಘಕಾಲದೊಳ್ ಕಾಲನಿಭಕಾಲಮೇಘಂ ಕಾಲಮೇಘಂಗಳೆ ಮನುಜರೂಪುವಡೆದಂತೆಸೆವತಿಬಳರೆನಿಪ ಕಿರಾತರ್ವೆರಸು ಬೇಂಟೆ ವೋಗಲೆಂದು ಸಮದ ಸ[೮]ಮು[೮]ತ್ಸುಕಚಿತ್ತನಾಗಿ—

ಸುಲಿಪಲ್ಕೊಂಕಿರ್ದಪುರ್ಬಂಬುದನಿಭತನು ಕೆಂಗಣ್ಗಳೊಳ್ಮೀಸೆ ಚೆಲ್ವಾ
ಗೆ ಲಸನ್ಮತ್ತೇಭಮುಕ್ತಾಭರಣಮೆಸೆಯೆ ಕೂರ್ಪಾಸಮಂ ತೊಟ್ಟು ಕಟ್ಟು
ತ್ತೆ ಲತಾಸಂದೋಹದಿಂ ಕೇಶಮನಮರೆ ಧನುರ್ಬಾಣಮಂ ತಾಳ್ದು ಕೆರ್ಪಂ
ನಲವಿಂ ಮೆಟ್ಟುತ್ತೆ ಕೂರ್ನಾಯ್ವೆರಸಿ ಶಬರರೊಂದಾಗಿ ಬಂದಂ ಪುಳಿಂದಂ ॥೫೧॥

॥ವ॥ ಮತ್ತಮಾಗಳ್—

---

೧ ಯ (ಮೂ) ೨ ವಿಶ್ರು (ಬ) ೩ ಯು (ಮೂ) ೪ ಶ್ರ (ಧಾ) ೫ ಕರ (ಧಾ, ಮೂ)
೬ ಮಿಂ (ಮೂ) ೭ ದ (ಮೂ) ೮ ಮುದು (ಮೈ),

ಬಿಡು[೧]ವ[೧]ಲೆ ಸೊರ್ಕ್ಕುಮದುರ್ಪ ಪ[೨]ದ[೨]ವಿ[೩]ಲ್ಮ[೩]ಡಿವಿಲ್ಲೆಲೆಯಂ[೪]ಬು[೪] ಮಿಟ್ಟಿ ಪೇ
ರಡಿ ಬಡಿ[೫]ಗೋ[೫]ಲ್ತುಪಾಕಮಿಡುಗಲ್ಲೆರೆ[೬]ಪೆ[೬]ರ್ಬಲೆ ಕೂಳಿಗಾಳಮಂ
[೭]ಟಿ[೭]ಡುವಲೆ ದೀಹದೇಣ ನುಡಿಗಲ್ಲಿಯಡಾಯುಧಮಡ್ಡಣಂ ಸೊಡರ್
ಗಿಡಗಮೆನಿಪ್ಪಿವಂ ಪಿಡಿದು ಬೇಂಟೆಗೆ ಸಂದ ಪುಳಿಂದ[೮]ರೆ[೮]ಯ್ದಿದರ್ ॥೫೨॥

॥ವ॥ ಇಂತೈತರೆ ಪುಳಿಂದಪತಿ ಪುಳಿಂದಪುರದುತ್ತರದಿಶಾಭಾಗದ ಜೀಮೂತವಸನ ಮೆಂಬ ಗಿರಿಯ ಸಾರ್ಕೆ[೯]ಗೆ[೯]ಯ್ತುರ್ಪಿನಮಾ ಗಿರಿಯ ತಪ್ಪಲಲ್ಲಿ—

ಹರಹಸ್ತಾಗ್ರದವ್ರೋಲಹೀನಕಟಕೋಪೇತಂ ಮರುನ್ಮಾರ್ಗದಂ
ತಿರೆ ಚಂಚತ್ಖಗರಾಜರುಕ್ಷಯುತಮಂಭೋರಾಶಿಯಂತಾತ್ತಸಿಂ
ಧುರಸಾಟೋಪಹರಿಪ್ರಯುಕ್ತಮದು ಯ[೧೦]ಜ್ಞಾ[೧೦]ಗಾರದಂತುತ್ಕಟ
ಸ್ವರಸಂದೀಪ್ತಶಿ[೧೧]ಖಿ[೧೧]ದ್ವಿಜಂ ಗಹನ[೧೨]ಮೊ[೧೨]ಂದೊಪ್ಪಿತ್ತದೇಂ ಬಣ್ಣಿಪೆಂ ॥೫೩॥

॥ವ॥ ಅಂತುಮಲ್ಲದೆಯುಂ—

ಪಟುಪಂಚಾಸ್ಯಾಗ್ರಪಾದೋನ್ಮುಖನಖಮುಖನಿರ್ಭಿನ್ನಗಂಧೇಭಕುಂಭ
ಸ್ಫುಟಕುಂಭೋನ್ಮುಕ್ತಮುಕ್ತಾಕಣಗಣಕಟದಾನಾಂಬುಸಮ್ಮಿಶ್ರರಕ್ತೋ
ತ್ಕಟಧಾರಾಪಾತಪಂಕಪ್ರಗತಮೃಗಪ[೧೩]ದ[೧೩]ಪ್ರೇಕ್ಷಣೋಲ್ಲಾಸಭಿಲ್ಲೋ
ದ್ಭಟಭಾಷಾಘೋಷಮಿಶ್ರಶ್ರುತಿಕಟುವಿಹಗಧ್ವಾನಕಾಂತಂ ವನಾಂತಂ ॥೫೪॥

ಕಟಕಂಡೂತಿನಿವಾರಣೈಕಮತಿ ಮತ್ತೇಭೌಘಸಂಘೃಷ್ಟತ
ತ್ಕಟದಾನ[೧೪]ದ್ರವ[೧೪]ಚಿ[೧೫]ಹ್ನ[೧೫]ಚಂದ್ರಮಣಿಚಂದ್ರದ್ಯೋತಸದ್ಯಸ್ಸ್ಫುರ
ತ್ಕಟಕೋಪಾಂತಚರತ್ಕಿರಾತವನಿತಾಕರ್ಣೋತ್ಪಲಾಕರ್ಷಿಮ
ರ್ಕಟಶಾಬಾಶ್ರಿತಶಾಖಿಪಾದಪಯುತಂ ಕಣ್ಗೊಪ್ಪಿತಾ ಕಾನನಂ ॥೫೫॥

ಅದಲ್ಲದೆಯುಮಡಸಿ ನಿಡಿದೆನಿಸಿ ಕಡುವೆಳೆದುದ್ದಂಡತಾಳತರುಗಳ ಚೂಳಿಕೆಯಿಂ ಗಾಳಿಯ[೧೬]ಲೆ[೧೬]ಪದಿಂ ಘಳಿಲೆನೆಪಾಸಱಿಯೊಳೊಡನೆ ಬೀಳ್ದೊಡೆದ ಮಧುಘಟಪಟಲ ಪಕ್ವಫಳಪ್ರತಾನದ ರಸಂಗಳ್ ಸಂಗಳಿಸಿ ಪರಿದಾಗಳದಂ [೧೭]ಕಂಡು ಕುಡಿ[೧೭]ಕುಡಿದು ನ[೧೮]ಕ್ಕಿ[೧೮]ಮಿಕ್ಕು ಸೊಕ್ಕೇಱಿ ಪಡಿನೆಳಲಂ ಪಳಿಕಿನೊ[೧೯]ಡ್ಡು[೧೯]ಗಲ್ಲೊಳ್ಕಂಡು

---

೧ ವೆ (ಬ) ೨ ದೆ (ಬ) ೩ ಲ್ಮ (ಮೂ); ೪ ಬ (ಮೈ) ೫ ಕೋ (ಮೈ, ಮೂ) ೬ ಪೇ (ಮೂ) ೭ ಪಿ (ಮೈ, ಮೂ) ೮ ರೈ (ಬ, ಮೂ, ಮೈ) ೯ ಗೈ (ಮೈ ಮೂ, ಬ) ಗೆಯಿ (ರಿ, ತಾ) ೧೦ ಗ್ನಾ (ಮೂ) ೧೧ ಖ (ಮೈ) ೧೨ ಮೆ (ಮೂ) ದಃ (ಮೂ) ೧೪ ಪ್ರಜ (ಮೂ) ೧೫ ನ್ಹ (ಬ) ೧೬ ಲೇ (ಮೂ) ೧೭ ಕುಡಿ (ತಾ, ಮೈ) ೧೮ ಕ್ಕು (ಬ) ೧೯ ಡ್ಡ (ತಾ, ರಿ) ಡ್ಡು (ಮೂ)

ಪೆಣ್ಗೋಡಗಮೆಂದು[೧]ಪ[೧]ತ್ತೆಸಾರ್ದುಱು[೨]ಗಿಸಿ[೨]ನೋಡಿ ಬ[೩]ೞಿ[೩]ಯಂ ಬೆರಂಟಿಪುರ್ಬಿಗ್ಕೆ ಪಲ್ಲಂ ಕಿಱಿದು ಹಱ್ಱಿಂದು[೪]ರ್ಝುಂಕಿ[೪]ಸಿ ಸಮಾನವಿಕೃತಿಗಂಡು ಸರಸರನೆ ಸಾರೆ ವಂ[೫]ದು[೫] ಕೆಲದೊ[೬]ಳ್[೬]ಕ್ಕಿರ್ದಾನೆದಲೆಯ ನೆತ್ತರ್ಪುರ್ದಿದ ಮುತ್ತಂ ದಾಳಿಂಬಬೀಜಂ ಗೆತ್ತೆತ್ತಿ ಕಳ್ಕನೆ ಮುಕ್ಕಲೊಡನೆ ಪಲ್ಗಳ್ಮುಕ್ಕುವೋಗೆ ನೋಡಿಮೆಂಬಂತೆ ಬೋಡು-ಪಾಯಂ ತೆಱೆದೇಡಿಪಕೋಡಗಂಗಳಂ ನೀಡುಂ ನೋಡಿ ನಗೆಗಡಲೊ[೭]ಳೋ[೭]ಲಾಡುವ ಪೇಡಪೆಣ್ಗಳಿಂ, ಕರಿಕರಾಗ್ರದಿಂ ಮುಱಿದ ತೀರ ತದುಕಿನ ಮರದ ನಿಡು-ಗೋಡೊಳಱಿಯದೆಱಗಿ ಮಱಿವೆರಸಿ ಕುಳ್ಳಿರ್ದು ಪಸಿಯು ಪಗಿನದೊಳ್ಕಾಲ್ ಜಿಗಿ[೮]ಲ್ತು[೮] ತಳ್ಳಂಕಂಗೊಳ್ವ ಸಮಯದೊಳ್ ತು[೯]ಟ್ಟ[೯]ತುದಿವರೆಗಂ ಸುರ್ಬು-ಗೊಂಡು ಪರ್ಬಿದ ಕರ್ಬ[೧೦]ಳಿ[೧೦]ಯ ಪೆರ್ಬಳ್ಳಿಯ ಬಳಿಯನಡರ್ದು ಪಿಡಿಯಲೆಳಸಿ ಘಳಿಲನೆ ಸಾ[೧೧]ರೆ[೧೧]ವರ್ಪ ಘೋರಲುಬ್ಧಕನಂ ಕಂಡಗಿದು ನೆಗೆಯಲುಜ್ಜುಗಿಸಿ ಪಕ್ಕವಂ[೧೨]ಬಿದಿರ್ದು[೧೨] ಪಾರಲಳವಲ್ಲದೆ [೧೩]ನಡನಡನೆ[೧೩] ನಡುಗಿ ಸಿಡಿಮಿಡಿ-ಗೊಂಡೆಱಕೆಗಳೆಳಲೆ ಕೊರಲ್ಕುಸಿಯೆ ಜೋಲ್ದು [೧೪]ನೇಲ್ವ[೧೪]ಪೆರ್ಬಕ್ಕಿಗಳಿಂ, ಮು[೧೫]ತ್ತೊಂ[೧೫]ದೆಡೆಯೊಳ್ಮಱಿಯನೆಱೆಗೊಳ್ವ ಪಿರಿಯ ಪಾವಂ ಪಿಡಿದ ಕರಿಯಂ ಸೀಳ್ವಸಿಂಹಮಂ ಪೋಳ್ವಶರಭಮಂ ಮಾಲಾಕಾರದಿಂ ಸಾಲ್ಗೊಂಡೆತ್ತಿ ನಭೋಮಂಡ-ಳ[೧೬]ಕೆ[೧೬] [೧೭]ಜಿ[೧೭]ಗಿದೊಗೆದು ನೆಗೆವ ಭೇರುಂಡಂಗಳಿಂ, ಪೊಲಂಬುದಪ್ಪಿದ ಮಱಿಯಂ ನೆನೆದು ನೇಹಂ ಮಿಗೆ ಕೆಚ್ಚಲುರ್ವಿ ಮೊಲೆತೊಱೆದೆಚ್ಚು ಪಾಯ್ದುಗುತರ್ಪ ವನಮಹಿಷಿಗಳ ಪಾಲಧಾರೆಯಂ ಮಿಕ್ಕು ನಕ್ಕುತೊಡವರ್ಪಕಾನನಬಿಡಾಲಂಗಳಿಂ, ವನತರುಗಳೊಂದೊಂದನೊರಸೆ ಪುಟ್ಟಿದನಲ[೧೮]ನ[೧೮]ವಿಗಳಿದೊಗೆದ [೧೯]ಪೆರ್ವೊಗೆಗೆ[೧೯] ಪುಳುಗಳ್ಪೊಗೆ ನಟ್ಟಗೊಂಬಿನೊಳ್ ಮಿಸುಪ ಜೇನ[೨೦]ವುಟ್ಟೆ[೨೦]ಗಳ ಮಧುರಸಮಂ ಬ[೨೧]ಳಿ[೨೧]ಯನಡರ್ದು ಪೀರ್ವ[೨೨]ಮ[೨೨]ರವಾವುಗಳಿಂ, ಪು[೨೩]ಲ್ಲಂ[೨೩]ಮೇಯಲೆಳಸಿ ಬಂದು ಮೆಯ್ಯ[೨೪]ತೀಂಟೆ[೨೪]ಗೆ ಪುಲಿ ಪೊ[೨೫]ರ[೨೫]ಳ್ದು ಪೋದ ತಾಣದೊಳ್ ನಿಂದು ಗ[೨೬]ರ್ಬಿಂ[೨೬]ಗಗಿದುರ್ಬುಗ್ಗುಂದಿ ಹಮ್ಮೈದಂಬೋದ ಹರಿಣಂಗಳಿಂ, ಪೂಗೊಯ್ವ ಪುಳಿಂದಿ ಪಾಡುವ ಸಂಗೀತದಿಂಚರಕ್ಕೆ ಶ್ರುತಿಗುಡುವಂತೆಸೆವ ಪವನ-

---

೧ ಹ (ಬ, ರಿ) ೨ ರಗಿ (ಮೂ) ೩ ದಿ (ಮೂ) ೪ ರ್ಝೀಂಕರಿ (ಮೂ) ೫ ವರೆ (ಮೈ) ವಂದುರೆ (ಮೂ) ೬ ಳೊ (ಬ, ಮೂ) ಳೊಳ (ತಾ) ೭ ಖಾ (ಬ) ೮ ಲ್ದು (ಬ, ಮೂ) ೯ ಟ್ಟು (ಬ) ಧಾ (ತಾ) ೧೦ ಳ್ಳಿ (ತಾ) ೧೧ ರ (ಮೂ) ೧೨ ಬಿಡಿದು (ಬ) ೧೩ ಗಡಗಡನೆ (ತಾ) ೧೪ ನೆಗೆವ (ಮೈ) ೧೫ ತ್ತಮೊಂ (ಮೂ) ೧೬ ಕ್ಕೆ (ಮೂ, ಮೈ) ೧೭ ಚಿ (ರಿ) ೧೮ ನಿಂದ (ಬ) ೧೯ ಪೆರ್ಬೊಗೆಯಿಂ (ಮೂ) ೨೦ ಹುಟ್ಟಿ (ತಾ) ವುಟ್ಟಿ (ಮೈ, ಮೂ) ೨೧ ಳ್ಳಿ (ಬ) ೨೨ ವ (ಮೈ) ೨೩ ಲ್ಲ (ರಿ, ಮೂ) ೨೪ ತಿಂಟೆ (ಬ) ತಿಂತಿ (ರಿ, ತಾ) ೨೫ ದ (ಮೂ) ೨೬ ರ್ಜಿ (ಧಾ, ಮೂ, ರಿ)

ಪೂರಿತಕೀಚಕರಂಧ್ರನಿನದಕ್ಕೆ ಪೆಡೆಯೆತ್ತಿ ನಿಲುಂಬಿ ನಲಿವ ಫಣಿಗಳಿಂ, ಕೋಳ್ಕುಟ್ಟಿ ದಾಡೆಯಂ ಮಸೆದು ಮಸಕಂ ಮಿಗೆ ಮೊಗಮಂ ನೆಗಪಿ ತೃಣಮಂ ತುಂಡಿಸಿ ಬಾಲಂ ನಿಮಿರೆ ಕಾಲಂ: ತೂಗಿ ಮರವಾಯ್ದು ಪರಿದಿದಿರ್ಚಿ ಕಡುಗಮಂ ಪಿಡಿದು [೧]ಜಂ[೧]ಡಿದು ಝುಂಕಿಸಿ ದಂಡೆ[೨]ಗೊಂಡ[೨] ಶಬರನಂ ಮಿಡಿಯಿಂ ಬ[೩]ಳಿರಿ[೩]ವರೆಗಮೆತ್ತುವ ಸಮುತ್ತುಂಗ ವರಾಹಂಗಳಿಂ, ಅಳವಿಗಳಿಯದ್ವೈತರೆ ನೆಗೆದೆಱಗಿ ಗಜಱಿ ಗರ್ಜಿಸಿ ಕುಂಭಿಕುಂಭಸ್ಥಳಮಂ ಕೂರುಗುರ್ಗಳಿಂ ಸೀಳ್ದು ಸಿಱುಂಬಳಾಡಿ ಸಿಡಿಲ್ಸಿಡಿವಂತೆ ನಗಾದಿತ್ಯಕ್ಕೆ ನೆಗೆವ ಮೃಗೇಂದ್ರಂಗಳಿಂ ವಿಜೃಂಭಿಸಿ ಕಣ್ಗೆ ಕೌತು[೪]ಕಾ[೪]ವಹಮಾಗಿರ್ದುದಲ್ಲಿ—

ಎಲವಂ ಸಂಪಗೆ ಹೊನ್ನೆ ಚೆನ್ನೆ ಕವಳಂ ಕಾರಾಚಮಾಚಂ ಪುಲಿಂ
[೫]ಲೆರಂ[೫] ಗುರ್ಗುಳಮತ್ತಿ ಮತ್ತಿ ಮಧುಕಂ ಮಂ[೬]ಗಾ[೬]ರೆ ಪಚ್ಚಾ[೭]ರಿ[೭]ದಿಂ
[೮]ತ[೮]ಲವಮಾಲಂ ಬೆಳವಿಂಗಳಂ ಪುಣಿಸೆ ಜಾಲಂ ಬೇಲಮಂಕೋಲ್[೯]ಬೋ[೯]
[೧೦]ಬ್ಬ[೧೦]ಲಿ ಮಾವಂಬಟೆ ಕಕ್ಕೆ ಬಿಕ್ಕೆ ಬಕುಳಂ ಬೇವೆತ್ತುಕಂ ಕಿಂಶುಕಂ ॥೫೬॥

॥ವ॥ ಮತ್ತಂ—

ವರುಣನ ಕುಂತದುತ್ಕರದ ಕೇತುವ ಕೇಕಿವಿಳಾಸದರ್ಭೆಕೋ
ಪರೆಯ ವಿಲೂನ[೧೧]ನಾ[೧೧]ಸೆಯ ಸುರೂಪೆಯ ಪಾಣ್ಬೆಯ ಮೇಘನಾದದಿಂ
ದಿರೆಯ ಪಟೀರದೇಳ್ಗೆಯ ಕಪೋತದ ಬೊಟ್ಟಿನ ಕೆಂಡದಬ್ಬಿನೀ
ಪರನಭಿಧಾನಮಂ ತಳೆದ ಭೂರುಹಮೊಪ್ಪುಗುಮಾ ವನಾಂತದೊಳ್ ॥೫೭॥

ಅರಳಿ ಕಡವೊಡವು [೧೨]ತಂ[೧೨]ಡಸಿ
ಯರನೆ[೧೩]ಲ್ಲಿ[೧೩] ಬಿದಿರ್ಪತಂಗಮರುಟಾಳಂ ಪಾ
ದರಿ [೧೪]ಬಾ[೧೪]ಗೆ ತೇಗು ಪನೆ ಕಂ
ಮರಮೆಸಳೆಯೆನಿಪ್ಪ ವಿ[೧೫]ಪ್ರು[೧೫]ವಾ ಪೆರ್ಗಾಡೊಳ್ ॥೫೮॥

ಗರುಡಂ ಗೀಜಗನಂಚೆ ಕೊಂಚೆ ಗಿ[೧೬]ಡಾ[೧೬]ಗಂ ಕಾ[೧೭]ಬ[೧೭]ಕ್ಕಿ ಪಾರಾವತಂ
ಪರಪುಟ್ಟಂ ಚರಣಾಯುಧಂ ಶಕುನಿ ಕಂಕಂ ತೊಂಡಿಗಂ ಸೋರೆ ತಿ
ತ್ತಿ[೧೮]ರೆ[೧೮]ಕೋಕಂ ಪಿಕಳಂಬಕಂ ಶಿಖಿ ಶುಕಂ ಬಾನಾಡಿ ಪೆರ್ಬಕ್ಕಿ[೧೯]ಹೆಂ[೧೯]
ಗುರು ಕಾಕಂ ಚಿಲುಕೂಲಿ ರತ್ನಖಗಮಿರ್ಕುಂ ತದ್ವನಾಗೌಘದೊಳ್ ॥೫೯॥

---

೧ ಝು (ಮೂ) ೨ ಗೊದವ (ಧಾ) ೩ ದಿ (ತಾ) ೪ ಕ (ಮೂ) ೫ ಲ್ಲೆರ್ (ಬ); ಲ್ಗೆರ್ (ಧಾ, ಡಿ); ೬ ಗ್ಗಾ (ರಿ, ಮೈ, ಮೂ) ೭ ಲ (ಮೂ) ೮ ಡಿ (ಮೂ) ೯ ಬ (ಬ) ೧೦ ಬ್ಬಿ (ತಾ) ೧೧ ವಾ (ರಿ) ೧೨ ತ (ಮೈ, ಧಾ) ೧೩ ಯಂ (ಮೈ, ಮೂ) ೧೪ ಬ (ಮೂ) ೧೫ ಪ್ಪ (ಬ) ೧೬ ಡ (ತಾ, ಮೂ) ೧೭ ಬ್ಬ (ರಿ) ೧೮ ರೆ (ಡಿ) ೧೯ ಹಿಂ (ರಿ, ಮೈ, ಧಾ)

ಸುರಪತಿಯ ಬೆಳ್ಗಡಿಯ ರಥ
ಚರಣದ ಪಾವಕನ ಮುನಿಯ ಧರ್ಮಜನ ಲಸ
ತ್ತುರಗದ ಗಜಗಂಡದ ಭಾ
ಸುರವಾದ್ಯದ ಪೆಸರ ಖಗಕುಳಂ ಕರಮೆಸೆಗುಂ ॥೬೦॥

ಹರಿ ಕರಿ ಶಶ ಜಂಬುಕ [1]ವ್ಯ[1]ಕ
ರುರುಮಾರ್ಜಾಲೋಷ್ಟ್ರ ಶರಭ ಸೈರಿಭ ಶಾಖಾ
ಚರ[2]ಗ[2]ವಯವರಾಹೋರಗ
ತರಕ್ಷು ರುಕ್ಷಾ[3]ದಿ[3] ಸತ್ವಗಣ್ಯಮರಣ್ಯಂ ॥೬೧॥

ಜರದಜಗರಫೂತ್ಕೃತಿ ಕೇ
ಸರಿಭಾತ್ಕೃತಿ ಕರಿಕರಾಗ್ರಸೀತ್ಕೃತಿ ಶಾಖಾ
ಚರಕೀತ್ಕೃತಿ ವಿಹಗಸಮು
ತ್ಕರಚೀತ್ಕೃತಿ ತೀವಿ ವಿಪಿನದೊಳ್ ಬಿಡದೆಸೆಗುಂ ॥೬೨॥

॥ವ॥ ಮತ್ತಂ—

ಕೋಡಿಡುವಾನೆಗಳ್ ಪರಿವ ಪುಲ್ಲೆಗಳೊಲ್ದೊಡಗೂಡಿ ಮೇದು ಮೆ
ಲ್ಲಾಡುವ ಸೈರಿಭಂಗಳುಱೆ ಲಂಘಿಪ ಕೇಸರಿಗಳ್ ಧರಿತ್ರಿಯಂ
ತೋಡುವ ಸೂಕರಂಗಳಡಿಯಿಟ್ಟೆಸೆವೆಂಟಡಿಗಳ್ ಕನಲ್ಕೆಯಿಂ
ನೋಡಿ ಕಡಂಗಿ ಗರ್ಜಿಪ ತರಕ್ಷುಗಳೊಪ್ಪುಗುಮಾ ವನಾಂತದೊಳ್ ॥೬೩॥

॥ವ॥ ಮತ್ತಮಾ ಪೇರಡವಿಯಲ್ಲಿ—

ನೆಲ[4]ವೊ[4]ಱೆಯಂ ತಾಂ ತಳೆದೆ
ಮ್ಮಲಸತೆಯಂ ಕಳೆದು ಪೊರೆದುದೀ ಗಿರಿಯೆಂದಾ
ನೆಲದ[5]ಳ[5]ದ ಕರಿಗಳೇಳ್ತಂ
ದಲಸದೆ ಸೇವಿಪವೊಲದಱೊಳಾನೆಗಳೆಸೆಗುಂ ॥೬೪॥

೧ ಬ (ವ್ಯೈ) ೨ ಗತ (ಮೂ) ೩ ತಿ (ಮೂ) ೪ ದೊ (ತಾ) ೫ ಳೆ (ಬ, ಮೂ).

ಮಱಿ ಪಸಿ[೧]ದೆಯ್ದೆ[೧] ತಾಂ ಮೊಲೆಗುಡಲ್ನೆರೆದಿರ್ಪುದುಮಂಗಸಂಗಮ
ಕ್ಕೆಱಗಲೊಡರ್ಚೆ ಹಸ್ತಿ ಜವದಿಂ ಪಿಡಿ ಮುಂದೆಸೆಗಾಂತು ನಿಂದು ಬಾ
ಯ್ದೆಱಿದದಱಗ್ರಪಲ್ಲವಮನಾಂತಣಲೊಳ್ದಳಿರೂಡಿ ನೇಹಮಂ
ಮೆಱೆದದಕಿತ್ತುದಂತೆ ಮೊಲೆಯಂ ಪತಿಯಿಂ ಸುತನಲ್ತೆ ಪೆಗ್ಗಳಂ ॥೬೫॥

ಕೊಳದೊಳೆ ಮಿಂದು ಪಂಕಜರಜಂಗಳನಂಗದೊಳೊಟ್ಟಿಕೊಂಡು ಮಂ
ಡಳಿಸಿ ಮದಕ್ಕೆ ಸಾ[೨]ರ್ವ[೨] ಮಱಿದುಂಬಿಯ ನೀಲದ ಮಾಲೆಯಾಂತು ಮಂ
ಜುಳಗತಿಮತ್ತಹಸ್ತಿ ಪಿಡಿಯಿರ್ಪೆಡೆಗೆಯ್ದಿ ಭುಜಂಗಲೀಲೆಯಂ
ತಳೆದೆಳೆಮುತ್ತನೊತ್ತೆಗುಡುವಂತಿರೆ ಸೂಸಿತು ವಾ[೩]ಷ್ಕ[೩]ಣೌಘಮಂ ॥೬೬॥

॥ವ॥ ಅದಲ್ಲದೆಯುಂ—

ಒಳಗಿದು ತಳೆದುದು ಮುಕ್ತಾ
ಫಳಮಂ ಪೊರಗಿಂದ್ರನೀಲಮಣಿಗಣಮನೆನು
ತ್ತಿಳೆ ಪೊಗಳೆ ಕಟತಟದ ಮದ
ಕಳಿವಿಂಡೆಱಗಿರೆ ಕರೀಂದ್ರಮೇಂ ರಂಜಿಸಿತೋ ॥೬೭॥

ಕರಿ ಪೆರ್ಬಾವನಮರ್ಚಿ ಪುಷ್ಕರದೆ ಬೀಸುತ್ತಿಟ್ಟೊಡಾಕಾಶದೊಳ್
ಗರಳಾಗ್ನಿಸ್ಫುಟವಿಸ್ಫುಲಿಂಗತತಿ ಸೂಸುತ್ತಿರ್ಪವೋಲ್ ತೋಱಿ ಮು
ನ್ನೆರೆಗೊಂಡಾಮಿಷಖಂಡಸಂಹತಿ ತಮೋವಿಭ್ರಾಂತಿಯಿಂದಳ್ಕಿ ಭಾ
ಸ್ಕರನೇಳ್ತರ್ಪುದನೊತ್ತಿ ಖಂಡಿಸಿ ಖಗೇಶಂ ರಕ್ಷಿಸಿತ್ತರ್ಕ[೪]ನಂ[೪] ॥೬೮॥

ಸು[೫]ರು[೫]ಚಿರ ಪುಷ್ಕರಾಕರಜಲಾಂತರಮಗ್ನಕರೀಂದ್ರರುಂದ್ರಪು
ಷ್ಕರಮದು ಪುಷ್ಕರಂಬೊಲಿರೆ ತದ್ಭ್ರಮೆಯಿಂದಳಿ ಪಾಯೆ ಪೊಣ್ಮೆ ಪೂ
ತ್ಕರಿ[೬]ಸೆ[೬] ಸಿಡಿಲ್ದ ಸೀರ್ಪನಿಗಳೊಪ್ಪಿರೆ ಧೂಮದವೋಲ್ ವಿರಾಜಿಸಿ
ತ್ತುರರೆ ತುಫಾಕದಿಂ ನೆಗೆವ ಗುಂಡಿನವೋಲ್ ಝಷಕೇತುವೀರನಾ ॥೬೯॥

೧ ದ್ದೈದಿ (ಬ) ೨ ರ್ದ (ರಿ) ೩ ರ್ಕ (ತಾ, ಮೂ, ಧಾ) ೪ ನಾ (ಮೂ) ೫ ರ (ರಿ, ತಾ, ಧಾ, ಮೈ, ಮೂ) ೬ ಸಿ (ಮೈ)

ಕರಿ ಮುರಿಯೆ ನಳಿನಮಂ ಪಂ
ಕರುಹಾಕರದೊಳ್ ಮದಾಳಿ ರವಿಗವಿದಿಡುವಂ
ತಿರೆ ಮೊರೆದು ನೆಗೆಯೆ ತತ್ಸರ
ಮಿರದಳ್ವಂತೂರ್ಮಿರವದಿನೇಂ ರಂಜಿಸಿತೋ ॥೨೦॥

ಬವರಂ[೧]ಗೆ[೧]ಯ್ದ ಗಜಂಗಳ
ನಿವಹ[೨]ದ[೨] ನಿಗ್ಗವಮದುಡಿದು ಸೂಸಿರೆ ನೆಲದೊಳ್
ತವೆ ಪಸಿದ [೩]ಪುಲ್ಲೆ[೩]ಮಱಿಗಳ್
ತವಕದೆ ಬಿಸಮೆಂದು ತುಡಕುಗುಂ ತದ್ವನದೊಳ್ ॥೨೧॥

ಒಡವರ್ಪುದು ಕಡೆವೋಪುದು
ನಡೆ ನೋಳ್ಪುದು ಪಿಂದೆ ನಿಲ್ವುದತ್ತಿತ್ತಂ ಕೈ
ದುಡುಕುವುದಂತಿಂತೊಲೆವುದು
ಪಿಡಿಗೆ ಮುದಂಬಡೆದುದೊಂದು ಕಳಭಂ [೪]ಬ[೪]ಳ[೪]ನದೊಳ್ ॥೨೨॥

॥ವ॥ ಮತ್ತೊಂದು ಮಳಯಜಮಹೀಜದಲ್ಲಿ—

ಮರಗೊಂಬಂ ಮುಱಿವಲ್ಲಿ [೫]ತ[೫]ಳ್ತ[೫]ಮರವಾವೊಂದಾತ್ಮಶುಂಡಾ[೬]ಗ್ರ[೬]ದೊಳ್
ಭರದಿಂ ಪೊಕ್ಕೊಡೆ ಬೀಸಿ ಫೂತ್ಕರಿಸಿ ಕೊಂಬಂ ಪುಷ್ಕರಾಗ್ರಕ್ಕೆ ಸಂ
ಸರಿಪಂತಿಟ್ಟು ಕು[೭]ನು[೭]ಂಗಿ ಬಲ್ಪಳಿದು ಘೀಳಿಟ್ಟಳ್ಕಿ ಬಾಯ್ವಿಟ್ಟು ಶೋ
ಕರಸಂದಾಳ್ದುದಿಭಂ ವೃಥಾನ್ಯಪರಿಭಂಗಂ ಭಂಗಮಂ ಸಾರ್ಚದೇ ॥೨೩॥

ಕರಮೆಸೆದತ್ತು ತಳ್ತ ಸರಿಯಿಂ ದರಿಯಿಂ ಜರಿಯಿಂ ಮೃಗಂಗಳಿಂ
ತರತರಮಾಗಿ ತೋರ್ಪ ಮರದಿಂ ಸರದಿಂ ನೆರೆದಿಂಬುಗೊಂಡ ಭೀ
ಕರತರಲುಬ್ಧಕಪ್ರಕರದಿಂ ಝುರದಿಂ ಪರಿದಿಂಪನಾಳ್ದ ಭಾ
ಸುರ ನದಿಯಿಂ [೮]ಪೊ[೮]ಳದಳ್ದ ಮಱಿಯಿಂ ಹರಿಯಿಂ ಕರಿಯಿಂದೆ ಕಾನನಂ ॥೨೪॥

---

೧ ಗೈ (ಮೂ, ಮೈ) ೨ ಮ (ಮೈ) ೩ ಪುಲ್ಲೆ (ಮೈ; ರಿ; ತಾ; ಧಾ) ೪ ವ (ರಿ)
೫ ಳ್ತು (ರಿ, ಮೂ, ಮೈ) ೬ ಲ (ಮೂ) ೭ ನ (ಮೂ) ೮ ಪು (ಮೂ).

॥ವ॥ ಮತ್ತಮಾವನಂ ಘನಾಗಮದಂತೆ ಘನಕದಂಬಮುಕ್ತಕವಿಲಸಿತಮುಂ, ವಸುದೇವಭವನದಂತನಿರುದ್ಧ ಬಲಕೃಷ್ಣ ಸಾರಸಮಂಚಿತಮುಂ, ದಾನಧಾರೆಯಂತೆ ಪುಂಡರೀಕ ಗಂ[೧]ಡಕ[೧]ಮಂಡಿತಮುಂ, ಯುಧಿಷ್ಠಿರಸದ್ಮದಂತೆ ವೃಕೋದರ ವಿಲಸದರ್ಜುನ ನಕುಲಾಧಿಷ್ಠಿತಮುಂ, ಸುಜನಹೃದಯದಂತನೇಕ ಪರಿಪೂರ್ಣ ಗುಣಸಮನ್ವಿತಮುಂ[೨] ಕುಜಾತಿಸ[೩]ಮೃ[೩]ದ್ಧಮಾಗಿಯುಂ ದ್ವಿಜಾತಿಮನೋಜ್ಞಮುಂ, ಪರಿಗತ ಶಬರೋಪಯುಕ್ತಮಾಗಿಯು[೪]ಮವಿ[೪]ಗ್ರಹಸಮಗ್ರಸ್ಥಳಮುಂ, ದ್ವಿಪವಿಲಸಿತಮಾಗಿಯುಮಗಣಿತವಜ್ರೋಪರಂಜಿತಮುಂ, ವಿತತಕರಾಕೋರ್ಪಲಸಿತಮಾಗಿಯುಂ ಬಹುಲತಾ[೫]ರಾರಾ[೫]ಜಿತಮುಂ, ತತತಾಪಸಸಮು[೬]ಚ್ಚ[೬]ಯಮಾಗಿಯುಮಶೋಕಸಂಗತಮೆನಿಸಿ[೭]ದುರ್[೭]ದಂತುಮಲ್ಲದೆಯುಂ—

ಹರಿಣೀ ಮತ್ತೇಭವಿಕ್ರೀಡಿತ ಲಲಿತಮಯೂರಾನ್ವಿತಂ ಛಂದಮಂ ಶಂ
ಬರಭಾಸ್ವತ್ಪುಂಡರೀಕಸ್ಫುರಿತ ಹರಿಮರುದ್ಭ್ರಾಜಿತಂ ವಾರ್ಧಿಯಂ ಬಂ
ಧುರಭಾರದ್ವಾಜ[೮]ಶಾಂ[೮]ಡಿಲ್ಯಕ ಶುಕವಿಮದಾಗಸ್ತ್ಯಕಂ ತಾಪಸಪ್ರೋ
ತ್ಕರಮಂ ಸೋಮಾರ್ಕರುಕ್ಷಾಂಚಿತಮ[೯]ದು[೯] ನಭಮಂ ಪೋಲ್ತು ಚೆಲ್ವಾಯ್ತರಣ್ಯಂ
॥೭೫॥

ವರತರುವಲ್ಲರೀಪ್ರಕರದಿಂ ಕರದಿಂ ಕರೆದಿಂಬುವೆತ್ತು ಸಂ
ಚರಿಸುವ ಕಿನ್ನರಪ್ರಸರದಿಂ ಸರದಿಂ ಸರದಿಂದುಕಾಂತಿನಿ
ರ್ಝರಸಲಿಲಂಗಳಿಂ ಬದರಿಯಿಂ ದರಿಯಿಂ ದರಿಯಿಂದಗಲ್ದನಿಂ
ದುರುಮುನಿವೃಂದದಿಂದೆ ಹರಿಯಿಂ ಹರಿಯಿಂ ಹರಿಯಿಂದದೊಪ್ಪುಗುಂ ॥೭೬॥

॥ವ॥ ಸಂತತಮಿಂತೊಪ್ಪುವ ಕಾಂತಾರಾಂತರಾಳದಲ್ಲಿ—

ಪಡಿನೆಳಲಂ ಮೃಗೇಂದ್ರನುಜಿ ಚಂದ್ರಶಿಲಾತಳದಲ್ಲಿ ಕಂಡು ಕಾ
ಯ್ಪಡರಲಿದಿರ್ಚೆ ಮತ್ತದುಮಿದಿರ್ಚಿರೆ ಗಂ[೧೦]ಗ[೧೦]ರ್ಜಿಸೆ ಮೇಘನಾದದಿಂ
ದೊಡನದು ಗಂ[೧೧]ಗ[೧೧]ರ್ಜಿಸುತ್ತಿರೆ ಪಳಂಚಿ ವಿಲಂಘಿಸಿ ಪಾಯ್ದುಪೊಯ್ದು ತಾಂ
ಮಡಿದುದು ಶುದ್ಧರಲ್ಲಿ ನಿಜದೋಷಮನೊಂದಿಸೆ ಕೆಟ್ಟುಪೋಗರೇ ॥೭೭॥

---

೧ ಡ (ಮೂ) ೨ +ವಿರುದ್ಧ (ರಿ) ೩ ಮು (ಮೂ) ೪ ಪಿ (ಮೂ) ೫ ರಾ (ಮೈ) ೬ ಚ (ತಾ) ೭ ದು (ತಾ, ಬ, ಧಾ) ೮ ಶೌ (ಮೂ) ೯ ಘು (ಕ) ೧೦ ಘ (ತಾ, ಮೈ, ಮೂ,

ಮೊಳೆವುಲ್ಲಂ ಮೇದು ಮಧ್ಯಂದಿನದ ಬಿ[೧]ಱು[೧]ವಿಸಿಲ್ತಾಗೆ ಬೆನ್ನಂ ಭರಂಗೊಂ
ಡೆಳಸುತ್ತಂ ಪಲ್ವಲಾಂಭಃಪ್ಲವದೆ ಮುಳು[೨]ಗಿ[೨] ತತ್ಕರ್ದಮಂ ಪತ್ತೆ ನಿಂದಾ
ವಳಿಸುತ್ತೊಂದೊಂದಱೊಳ್ ಕೋಡಿಡುತೆ ಮುಗುಳ್ದು ಮೆಲ್ಕಾಡುತಂ
ಕಾಡೊಳೊಪ್ಪಂ
ದಳಿದಿರ್ದತ್ತಭ್ರಕಾಯಂ ಪ್ರಥುಮಹಿಷನಿಕಾಯಂ ಕರಂ ಪ್ರೋತ್ಸುಕಾಯಂ ॥೭೮॥

ಕಡುಪಸಿವೆತ್ತೆ ಪುತ್ತಿನೆಡೆಯೊಳ್ ಮೊಗಮಿಕ್ಕುತಿರುಂಪೆಗೆಂದು ಮ
ತ್ತೆಡೆವಿಡದೂದುತಿರ್ಪಿನಮದೊಂದು ಮಹೋರಗಮಾನನಾಗ್ರಮಂ
ಪಿಡಿದಡರ್ದಲ್ಲಿ ನೇಲುತಿರೆ ಸುಂಡಿಲವೋಲ್ [೩]ನೊ[೩]ರೆ ಪಾಯೆ ಪಲ್ಗಳಂ
ತೊಡನೆಸೆದತ್ತು ಬಲ್ಗರಡಿ ಕಾನನದೊಳ್ ಕರಿಪೋತದಂತೆವೋಲ್ ॥೭೯॥

ಮಿಡಿವಿಲ್ವಿಡಿದು ಪುಳಿಂದಿಯ
ರಿಡೆ ಗಜಮೌಕ್ತಿಕದ ಮೀಂಟೆಯಂಬರದೆಡೆಯೊಳ್
ನಡೆದು ಪಗಲುಳ್ಕು ಬೀಳ್ವವೊ
ಲೊಡನೆಸೆದುದು ಮೃಗದ ಕೇಡನ[೪]ಱು[೪]ಪಲ್ ಬನದೊಳ್ ॥೮೦॥

॥ವ॥ ಇಂತಸದಳಮೆಸೆವಾ ಪೇರಡವಿಯಂ ಬೇಂಟೆಯಾಡಲೆಂದು ಬಿಯದರ್ಸದಂ
ಣಿಸಿ ಪೊಕ್ಕುಮಿಕ್ಕು ಮೀಱಿ ಸಂಭ್ರಮಿಸಿ ಸರುವಿಡಿದು ಹ[೫]ಣಿ[೫]ಯಿರ್ಪೆಡೆಗೆಯ್ತಂದು—

ಇದು ಕರಿ ಪೋದ ತಾಣಮಿದು ಸೈರಿಭ[೬]ಮೆಯ್ದಿ[೬]ದ ದಾರಿ ನೋ[೭]ಳ್ಪೊ[೭]ಡಿಂ
ತಿದು ಪುಲಿಯಿರ್ದ ಬಳ್ಮೆಳೆಯಿದೆಕ್ಕಲನೇಳ್ದಡಿಯಿಟ್ಟ ಬಟ್ಟೆ ನೋ
ಡಿದು ಹರಿ ನಿಂದ ಪಜ್ಜೆಯಿದೆವೊಕ್ಕಮದಾಂಬುವಿದಾಸ್ಯಫೇನಮಿಂ
ತಿದೆ ತನಿಗರ್ಬು ತಳ್ತಿದೆ ಕೆಸರ್ಪರಿಗೊಂಡಿದೆ ಹಸ್ತಿಮೌಕ್ತಿಕಂ ॥೮೧॥

॥ವ॥ ಎಂದು ಕುಱು[೮]ಪು[೮]ಗೊಂಡನುವಿಸುತ್ತೆ ಮತ್ತೆ ಮಾಣದೆ—

ಮರಗೊಂಬಂ ಪರಿದೇಱಿನೋಳ್ಪ ಮೆಳೆಯಿಂದಂ ಸೋವುತಲ್ಲಲ್ಲಿ ಬೇ
[೯]ಹ[೯]ರಿಸುತ್ತಂ ಪೊದಱಿಂ ತೆರಳ್ಚು[೧೦]ವ[೧೦]ಡಿಗಂಡಾರಯ್ವ ನೀರ್ದಾಣದೋ
ವರಿಯೋಳ್ಕಾವ ಕಡಂಗಿ ಕಂಡು ಮಿಗಮಂ ಬೆಂಕೊಂಬ ಬೇಡರ್ನರೇ
ಶ್ವರ ಕೇಳ್ ಪರ್ಬಿದರಣ್ಯದೊಳ್ ಪರಿದರೇನೆಂಬೆಂ ತದಾಟೋಪಮಂ ॥೮೨॥

---

೧ ಸು (ಮೂ) ೨ ಗೆ (ತಾ) ೩ ನೆ (ಮೂ) ೪ ಱು (ತಾ, ಮೂ) ಱ (ರಿ) ೫ ರಿ (ಮೂ) ೬ ಮೈದಿ (ಮೈ, ಮೂ) ೭ ಳ್ಪ (ತಾ, ಧಾ) ೮ ಪ (ಮೂ) ೯ ಹಿ (ಮೈ, ರಿ) ೧೦ ವಿ (ಮೂ).

ಸರಳಿಪ ಪುಲ್ಲೆವೋಡುವ ಮೊಲಂ ಬಿಡದಾಲಿಪ ಹಸ್ತಿ ನಿಲ್ವ ಸೂ
ಕರನಡಿಗೊಳ್ವ ಪೆರ್ಮಱಿಯಡಂಗುವ ಪೆರ್ಬುಲಿ ಪಾರ್ವ ಪಕ್ಕಿಗಳ್
ಕೊರಗುವ ಖಡ್ಗಿ ಲಂಘಿಪ ವೃಕಂ ಮುಱಿದೇಳ್ವ ಮೃಗೇಂದ್ರನೆತ್ತಲುಂ
ನೆರೆದಿರೆ ಕಾಡೊಳುಣ್ಮಿದುದು ಬೇಡರ ಬೇಂಟೆಯ ವಾದ್ಯದಬ್ಬರಂ ॥೮೩॥

ನಡೆ ಬಿಡು ನಾಯ್ಗಳಂ ತೊಡು ಸರಲ್ಗಳನಾರ್ದೆಸೆ ಸುತ್ತು ಪತ್ತು ಬೊ
ಬ್ಬಿಡು ಬಡಿಕೋಲ್ಗಳಿಂದಿಡು ಮೊಲಂಗಳನೇಳ್ ಬಲೆವೀಸಿ ಪುಲ್ಲೆಯಂ
ಕೆಡಪು ಕಡಂಗಿ ಪೊಯ್ ಪುಲಿಯ[1]ನೀಟ[1]ಯೊಳಾಂತಿಡು ಪಂದಿಯಂ ಪಡ
[2]ಲ್ವ[2]ಡಿಸು ಗಜಂಗಳಂ ಕುಳಿಯೊಳೆಂಬ ರವಂ ಪಿರಿದಾಯ್ತರಣ್ಯದೊಳ್ ॥೮೪॥

॥ವ॥ ಆಗಳಲ್ಲಿ [3]ಪೆಱತೊಂದು[3]ತಾಣದಲ್ಲಿ—

ಚವರಿ[4]ಮಿ[4]ಗಕ್ಕೆ ನುಣ್ಗುರುಳನಗ್ಗದ ಹಸ್ತಿಗೆ ನೀಳ್ದ ಹಸ್ತಮುಂ
ಕವಲಿರಿದಿರ್ದ ಕೊಂಬಿನ ಮೃಗವ್ರಜಕಿರ್ಬೆರಲಂ ದ್ವಿಪಾರಿಗು
ಣ್ಮುವ ರಸನಾಗ್ರಮುಂ ಪುಲಿಗೆ ಕೈಯೆರಡಂ ನಿಮಿರ್ದೆತ್ತಿ ಪಂದಿಗೊ
ಪ್ಪುವ ಪೊಳಕೈಯ ತೋರ್ಪರರೆಬರ್ ಬಿಯದರ್ ಸಲೆ ಸನ್ನೆವೇಂಟೆಯೊಳ್
॥೮೫॥

॥ವ॥ ಆಗಳವರೊಳೊರ್ವ ಪುಳಿಂದಂ ತನ್ನ ಪೆಸರ [5]ಪೇ[5]ರಡಿಯ ಹಾಸಮಂ ಕಳಿದು ಮೈದಡಪಿ ಕೈಚಿಟುಂಕೆಗೆಯ್ದು ಪುಲ್ಲೆಯಂ ತೋಱಿ ಬಿಡಲೊಡನೆ—

ಬೆದರ್ವ ಮನಂ ಬೆ[6]ರ್ಚು[6]ವ ಕ
ಣ್ಣದಿರ್ವಂಗಂ ನಟ್ಟ ಕಿವಿಗಳೊಡನೊಡನಿಳಿವ
ಗ್ಗದ ಸುಯ್ ಪೊಯ್ವಳ್ಳೆ ಪೊದ
ಳ್ದೊದವೆ ಜವಂಗುಂದದೆರಳೆ ಸರಳಿಸಿತಾಗಳ್ ॥೮೬॥

ನೆಗೆವ ಕುಡಿವಾಲಮುಣ್ಮುವ
ಬಗೆ ಬಳ್ಕುವ ನಡುವಗುರ್ವಿಪಾನನಮಿರೆ ತ
ನ್ಮೃಗಮಂ ಬಳಿವಿಡಿದಟ್ಟು
ತ್ತಗಲದೆ ಪಿಡಿದತ್ತು ಜಾಯಿಲಂ ತದ್ವನದೊಳ್ ॥೮೭॥

---

೧ ನಿಟ್ಟ (ತಾ, ಮೂ, ಬ) ೨ ಲ್ವಿ (ಮೂ) ೩ ಮತ್ತೊಂದು (ಮೂ) ೪ ವ್ಯ (ಮು, ಮೈ) ೫ ಪೆಸ (ಮೂ) ೬ ಚ್ಚು (ಮೂ)

॥ವ॥ ಅಲ್ಲಿ ಕೆಲ[೧]ಂಬರ್[೧]ಕಿರಾತೆಯರ್ ನೆರೆದು—

ವದನಾಬ್ಜವಿರೋಧಿಯನಾ
ಬಿದುವಂ ಕೆಳೆಗೊಂ[೨]ಡು[೨]ದಲ್ಲದೆಮ್ಮೀಕ್ಷಣದಂ
ದದ ಕಣ್ಣುಂಟೆಮಗೆಂದಿ
ರ್ಪುದಿ[೩]ದೆಂ[೩]ದಿಸುವಂತೆ ಪುಲ್ಲೆಯಂ ಪದೆದೆಚ್ಚರ್ ॥೮೮॥

॥ವ॥ ಅದಲ್ಲದೆಯುಂ—

ಕಿಡಿ ಪುಟ್ಟುತ್ತಿರೆ ದಾಡೆಯಂ ಮಸೆದು ಕಿಗ್ಗಣ್ಣಿಕ್ಕಿನೋಡುತ್ತೆ ಮೈ
ಗೊಡಪುತ್ತಬ್ಬರಮಾಲಿಸುತ್ತೆ ಮೊಗಮಂ ತೂಗುತ್ತೆ ವಾಲಾಗ್ರಮಂ
ಮಿಡುಕು[೪]ತ್ತು[೪]ಬ್ಬರಿಸುತ್ತೆ ರೋಮಚಯಮಂ ಮೀಂಟುತ್ತೆ ಕಂದಂಗಳಂ
ಕೆಡಪುತ್ತಂಗದೊಳುರ್ದಿ ಬಲ್ಮರಗಳಂ ಬಂದತ್ತದೊಂದೆಕ್ಕಲಂ ॥೮೯॥

॥ವ॥ ಆಗಳ್—

ಪೋಗದಿರೆಂದು ಗರ್ಜಿಪ ಕಿರಾತನ ಮಾತದು ತನ್ನ ಕರ್ಣಮಂ
ತಾಗದ ಮುನ್ನಮುಣ್ಮಿ ಕಿಡಿ ಕಣ್ಕಡೆಯೊಳ್ಕಿಟಿ ದಾಡೆಗುಟ್ಟಿ ತಾಂ
ತಾ[೫]ಗ[೫]ಲಿದಿರ್ಚಿ ಕೋಡುಡಿದ ಕಾಲನ ಸೈರಿಭದಂತೆ ಬರ್ಪಿನಂ
ತೂಗಿ ಕರಾಗ್ರದಿಂದೆ ಪೊಳೆ[೬]ವೀ[೬]ಟ್ಟಿಯೊಳಿಟ್ಟನದಂ ವನೇಚರಂ ॥೯೦॥

ಇಡೆ[೭]ಪ[೭]ಣೆಯನಡಸಿ ಕಂದಮ
ನೊಡೆದುಚ್ಚಳಿಸಿರೆ ಸರೋಷಮತಿ ಮಗುಳ್ದಿದಿರಂ
ನಡೆ[೮]ದದಣಸಿನ[೮] ಮೊನೆಯಿಂ
ದೊ[೯]ಪನಿಕ್ಕಿತು ಪಾಯ್ದು ಪಂದಿಯವನಂ ವನದೊಳ್ ॥೯೧॥

ಕುಸಿದ ಪರಾಂಗಮುಜ್ವ[೧೦]ಳ್[೧೦]ತ್ ಪಿಂಗಳಲೋಚನಮುಗ್ರದಂಷ್ಟ್ರಮಾ
ರ್ಪುಸೆ[೧೧]ಂವ[೧೧]ಮನಂ ಧರಿತ್ರಿಯೊಳೆ ಚಾಲಿಪ ಬಾಲ[೧೧]ಮ[೧೧]ಗುರ್ವಿಪಾನನಂ
ನಸುನೆಗೆದಿರ್ದ ತೋರತಲೆ ಮುಂಗಡೆ ಸಾರ್ಚಿದ ಕಾಲರಲ್ದ ಮೂ
ಗೆಸೆಯೆ ತರಕ್ಷುದಂಶಶತಸಂವೃತಮಿರ್ದುದದೊಂದು ತಾಣದೊಳ್ ॥೯೨॥

---

೧ ಬರ್ (ಮೂ, ಬ) ೨ ಡ (ಮೂ) ೩ ಪ (ಮೂ) ೪ ತ್ತ (ಮೂ) ೫ ನ (ಮೂ) ೬ ದಿ (ಮೂ); ವೀ (ಬ) ೭ ಫ (ಬ) ೮ ದಧರಣೀಸನ (ಮೂ) ೯ ಪ (ಮೂ) ೧೦ ದ (ಮೂ) ೧೧ ಮು (ಮೈ, ಮೂ)

॥ವ॥ ಇಂತತಿ[೧]ಭ[೧]ಯಾವಹಮಾಗಿ ತೋ[೨]ರ್ಪ[೨]—

ಪುಲಿ ಪೊಱಮಟ್ಟು ಕಟ್ಟಿದಿರೊಳಬ್ಬರಿಸುತ್ತಿರೆ ಬೊಬ್ಬೆಗೊಟ್ಟು ಗಂ
ಡುಲಿವೆರಸುತ್ತೆ ಪತ್ತಿ ಜಡಿದಾಯುಧದಿಂ ಪೊಡೆದಿಕ್ಕಿ ಮಿಕ್ಕು ನಿ
ಶ್ಚಲನೆನಿಸುತ್ತೆ ನಿಂದಿರೆ ಪುಳಿಂದನನಪ್ಪಿದಳಾಗಳಾತನಾ
ಲಲನೆ ತದೀಯ ದಕ್ಷಿಣಭುಜಾಗ್ರಮನಾ ಜಯಲಕ್ಷ್ಮಿಯೆಂಬಿನಂ ॥೯೩॥

॥ವ॥ ಮತ್ತಮೊಂದೆಡೆಯಲ್ಲಿ—

ಮೞೆಯೊಳಗಿರ್ದು ಮೇವ [೩]ಮಿ[೩]ಗಮುಂ ಮಿಗೆ ಪೆರ್ಬುಲಿ ಕಂಡು ಕಾಣದಂ
ತಳವಿಗೆ ತರ್ಗಿ ಕುರ್ಗುತುಸಿರಿಕ್ಕದೆ ಬಂದು [೪]ಹ[೪]ಣುಂಗಿ ಪಾರ್ವ ತ
ನ್ನಳವನಭೀಕ್ಷಿಸುತ್ತೆ ಸಲೆ ಗರ್ಜಿಸಿ ಕಾಯ್ದು ಕಡಂಗಿ ಪಾಯ್ದು ಪೊ
ಯ್ದಿಳೆಗಿರದಿಕ್ಕಿ [೫]ಘು[೫]ರ್ಘುರಿತಕಂಠಮದೀಂಟಿತು ರಕ್ತ[೬]ವಾರಿ[೬]ಯಂ ॥೯೪॥

॥ವ॥ ಅದಲ್ಲದೆಯುಂ—

ಕೆಟ್ಟಿದಿರಲ್ಲಿ ಗರ್ಜಿಸೆ ತರಕ್ಷುತರಂ ತರಳಾಯತಾಕ್ಷಿ ಕಂ
ಗೆಟ್ಟಮರ್ದಪ್ಪಲಂಜದಿರೆನುತ್ತವಳಂ ಬಿಗಿದಪ್ಪುತಿರ್ಪಿನಂ
ತೊಟ್ಟನೆ ಪಾಯೆ ಪಜ್ಜೆಯಿಡದಲ್ಲಿಯೆ ನಿಂದು ಕಡಂಗಿ ಖಡ್ಗದಿಂ
ದ[೭]ಟ್ಟಿ[೭] ನೆಲಕ್ಕೆ ಬೀೞ್ವಿನಮದಂ ಸದೆದಂ ಶಬರಾಧಿನಾಯಕಂ ॥೯೫॥

॥ವ॥ ಅಲ್ಲಿ ಮತ್ತೊರ್ವನೆಳೆಜವ್ವನದ ಪುಳಿಂದಂ—

ಮುನಿದಿರ್ದ[೮]ನಿ[೮]ಯಳ್[೯]ಪುಲಿ ಗ
ರ್ಜನೆ[೯]ಗರ್ಡೆ ಭಯಮುತ್ತು ಕೊರಲನಮರ್ದಪ್ಪಿರೆ ತೊ
ಟ್ಟನೆ ಬಿಟ್ಟಂಬ[೧೦]ಂದನುರ್ಚಿರೆ[೧೦]ಂ
ಮನದೊಳ್ಮುದಮುಂ ವಿಷಾದಮುಂ ಕೈಕೊಂಡಂ ॥೯೬॥

---

೧ ಶ (ಮೂ) ೨ ಪರ್ಪ (ಮೈ) ೩ ಮೃ (ಮೊ) ೪ ಹು (ಮೂ) ೫ ಘು (ಮೈ, ಬ, ದಾ) ೬ ಧಾರೆ (ಮೂ) ೭ ಟ್ಟಿ (ರಿ) ೮ ನೆ (ರಿ) ೯ ಗೊ (ಬ, ಧಾ, ಮೂ, ಮೈ) ೧೦ ನುದಿರ್ಚಿರೆ (ಮೂ)

॥ವ॥ ಮತ್ತಮೊರ್ವಂ—

ಎಳೆವೇಡಿತಿಯ ಕುಚಂಗಳ್
ಬಳೆಯೆ ಬಳಂಗುಂದಿ ಮಾಣ್ದನೆಂಬೀ ನೆವಮಂ
ತಳೆದವನೆ ಪೋಲ್ತ ಕುಂಭಂ
ಗಳನಾಂತಾನೆಗಳನೆಯ್ದಿ ಕೊಲ್ಲಂ ಭಿಲ್ಲಂ ॥ ೯೭ ॥

ಬಲಗಾಲ್ಪಿಂದೆಸೆಗಾಗೆ ವಾಮಪದಮಂ ಮುಂದಿಟ್ಟು ದೋರ್ಮೂಲಮುಂ
ಮೊಲೆಯಗ್ರಂ ತಲೆದೋಱೆ ತೆಳ್ನಡು ಬಳುಂಕಲ್ ನುಣ್ಗೊರಲ್ಕೊಂಕೆ ಕೋ
ಮಲೆ ನಿಂದಂಬಕದಗ್ರಮಂಬುದುದಿ ಲಕ್ಷ್ಯಂ ಮುಟ್ಟಿಯೊಂದಾಗೆ ತೋ
ಳ್ವಲಮಂ ತೋಱಲೊಡರ್ಚೆ ತೆಚ್ಚಳಿನೆಯಂ ಭಾಪೆಂಬಿನಂ ದ್ವೀಪಿಯಂ ॥ ೯೮ ॥

ಪೊದಱಿಂದಂ ಪೊಱಮಟ್ಟು ಕಟ್ಟಿದಿರೊಳಾರ್ಪಿಂ ಗರ್ಜಿಸುತ್ತಿರ್ಪ ಬ
ಗ್ಗದ ಬಲ್ಗಂಡಿಕೆಗಂಡು ಗಂಡುಗಲಿ ಬೇಡಂ ದಂಡೆಯಂ ಕೊಂಡು ನಿಂ
ದಿದಿರೊಳ್ ಪಾಯ್ದುದಕಿತ್ತು ಕೈಮುರಿಗೆಯಂ ಕೈಗಣ್ಮಿ ಪೊಕ್ಕೆತ್ತಿ ಖ
ಡ್ಗದೆ ಬೆನ್ನೊಳ್ಮೊನೆದೋಱೆ ಮೀಱೆ ತಿವಿದಂ ತತ್ಕಾಳಮೇಘಾಹ್ವಯಂ ॥ ೯೯ ॥

ತೆಗೆನೆಗೆದರ್ಧಚಂದ್ರಶರದಿಂ ಶಬರಂ ಕರಿಕಂಠಮೂಲಮಂ
ಬಗೆದಿಸೆ ರಕ್ತಸಿಕ್ತಮದು ಮೌಕ್ತಿಕಮೊಂದಮದೊರ್ಪ್ಪೆ ನೆತ್ತಿಯೊಳ್
ನೆಗೆದೆಸೆದತ್ತು ಪಶ್ಚಿಮನಗಾಗ್ರದೊಳೊಂದಿರೆ ಸಂಜೆಗೆಂಪು ತ
ಳ್ತೊಗೆದ ಕುಜಪ್ರಯುಕ್ತ ಮೃಗಲಾಂಛನಲೇಖೆ[1]ಯಿ[1]ದೆಂಬ ಮಾಳ್ಕೆಯಿಂ ॥೧೦೦॥

॥ವ॥ ಅದಲ್ಲದೆ ಪೆಱತೊಂದು ಪಥಪ್ರದೇಶದಲ್ಲಿ—

ಸುಸಿಲೆಸಗುತ್ತೆ ಸೇದೆದಳೆದಾಗಳೆ ಭಿಲ್ಲಿಯುಮಲ್ಲಿ ಭಿಲ್ಲನುಂ
ಪೊಸಪಿಡಿಗೂಡಲೆಂದು ನಡೆತಂ[2]ದ[2] ಮದೇಭದ ಕುಂಭಮೌಕ್ತಿಕ
ಪ್ರಸರದ ಲೋಭದಿಂ[3]ದಿ[3]ಸಲೆರಳ್ಬರಿಯೊಳ್ಗಱಿಯಂಬು ತುಂಬೆ ಕ
ಣ್ಗೆಸೆದುದದುಣ್ಮಿದೊಳ್ಗಱಿಗಳಂ ತಳೆದಂಜನಶೈಲಮೆಂಬಿನಂ ॥೧೦೧॥

---

೧ ಯ (ಮೂ) ೨ ದು (ಮೂ, ಮೈ) ೩ ದೆ (ಥ, ಮೂ, ಮೈ)

॥ವ॥ ಅಲ್ಲಿಂ ಪೆಱತೊಂದೆಡೆಯೊಳ್—

ಕರಿನೀಲಾಚಲದಗ್ರದೊಳ್ಕಱಿಯ ಬಲ್ಪಿಂ ಕಾಲಮೇಘಂ ಶರೋ
ತ್ಕರಮಂ ಗರ್ಜಿಸಿ ಜಿಷ್ಣುಚಾಪಮನದಂ ಕೈಕೊಂಡು ತದ್ಧಾತುನಿ
ರ್ಝರಮಾಗಳ್ ಪರಿವಂತೆ ರಕ್ತರಸಪೂರಂ ಸೂಸೆ ಮತ್ತಲ್ಲಿ ಸೀ
ಕರಮೆತ್ತಂ ಸಿಡಿವಂತೆ ತಳ್ತು ಸಿಡಿದತ್ತಾ ರಕ್ತಮುಕ್ತಾಫಳಂ ॥೧೦೨॥

ಪಸಲೆಗೆ ಬಂದ ಪುಲ್ಲೆಯನೆರಳ್ದೆಸೆಯೊಳ್ಕಿಱುವೇಡರಿರ್ವರಾ
[೧]ರ್ದಿ[೧]ಸೆ ಸರಿಸಕ್ಕೆ ನಿಂ[೨]ದು[೨] ನೆಗೆದತ್ತದು ಸತ್ವರಮಾಗಸಕ್ಕೆ ಬೆ
ಕ್ಕಸವೆನೆ ತಳ್ತು [೩]ಪಾಯ್ವ[೩]ಕಣೆಗಳ್ ಕೊಱಿದಿಕ್ಕಿದುವಿರ್ವರಂ ನಿರೀ
ಕ್ಷಿಸೆ ಪರನಿರ್ನಿಮಿತ್ತ ಹನನೋದ್ಯಮಮಾತ್ಮವಿನಾಶಕಾರಣಂ ॥೧೦೩॥

ಎಲೆ[೪]ವ[೪]ಱಿಯಲ್ಲಿ ಪೂದಿಱಿಯಲೆಂದಿರೆ ನಿಂದು ಪುಳಿಂದಿ ಕಂಡು ಬ
ಲ್ಮೊಲೆಯನದೊರ್ವ ಬಾಲಶಬರಂ ಕರಿಕುಂಭಮಿದೆಂದು ಬಾಣಮಂ
ನಲಿದಿಸೆ ಮಧ್ಯದೊಳ್ಪೊಡೆಯಲಂತದನಾ ಕ್ಷಣಮೆಳ್ದ ಸಿಂಹಮಂ
ತಲೆಗಡಿದಲ್ಲಿ ಬೀಳ್ದುದೆನೆ ಸದ್ವಿಧಿಯುಕ್ತರನಾರೊ ಕೊಂದಪರ್ ॥೧೦೪॥

ನಸೆಮುಸಪೊಂದೆ ನುಣ್ಬಸಲೆಯೊಳ್ಸುಸಿಲಾಂತೆಸೆವೇಣನಂ ವಿಲಂ
ಬಿಸದಿಸಲೆಂದು[೫]ಬಂದನ[೫] ಪುಳಿಂದನ ವಕ್ಷಮನುದ್ಗಮಾಸ್ತ್ರದಿಂ
ದಿಸೆ ಕುಸುಮಾಸ್ತ್ರನಾರ್ಪಳಿದು ಕೂರ್ಪಳ ಕೈವಿಡಿದೆಯ್ದಿ ಪಲ್ಲವ
ಪ್ರಸರಸಮೇತಮಾದ ಮೆಳೆಯೊಳ್ ಪೊಸಪೂವಸೆಯಲ್ಲಿ ಕೂಡಿದಂ ॥೧೦೫॥

ಬಿಂಕದ ಶಂಖದ ಮೇಲಣ
ಪಂಕಜರಿಪುಬಿಂಬದಮೃತಫಳದಿನಿರಸಮಂ
ತಾಂ ಕುಡಿದು ಮಿಕ್ಕ ಮಧುರಸ
ಮಂ ಕನಸಿನೊಳಾದೊಡಂಟಿ ನೋಡಂ ಬೇಡಂ ॥೧೦೬॥

॥ವ॥ ಮ[೬]ತ್ತಮೊ[೬]ರ್ವಂ—

---

೧ ರ್ದೆ (ತಾ) ೨ ದ (ಮೂ) ೩ ಪಾಯ್ದು (ಮೂ); ಪೊಯ್ದು (ರಿ) ೪ ಮ (ಬ, ಮೂ) ೫ ಬಂದ (ಮೂ) ೬ ತ್ತೋ (ಬ)

ಕಾಡಲಗೊರ್ಂಚಲಂ ಮು[1]ಱಿ[1]ದು ಸೋರ್ಮುಡಿಗಿಟ್ಟು ಮರಂದದೊಳ್ಪದಂ
ಗೂಡಿ ಕುರುಂಗನಾಭಿಯನುರೋಜಕೆ ಲೇಪಿಸಿ ಪಲ್ಲವಂಗಳಂ
ಜೋಡಿಸಿ ಕಟ್ಟಿ ಪೆರ್ಚಿದ ನಿತಂಬಕೆ ಸಾರ್ಚಿ ಕರೀಂದ್ರಕುಂಭದೊಳ್
ಮೂಡಿದ ಮುತ್ತನೆತ್ತಿ ಸರದಿಂ ಸರಗಟ್ಟಿ ಕೊರಲ್ಗೆ ಕೂರ್ಮೆಯಿಂ ॥೧೦೭॥

ತೊಡಿಸುತ್ತಂ ನಡೆನೋಡಿ ಗಾಡಿವಿಗೆ ಜೇಡಂ ಬೇಡಿದೊಳ್ವಣ್ಣನಿ
ತ್ತಡಿಯೊಳ್ ಮುಳ್ಮೊನೆ ನಾಂಟದಂತೆ ನಡೆ[2]ಸು[2]ತ್ತಲ್ಲಲ್ಲಿ ಸಲ್ಲೀಲೆಯಿಂ
ದೊಡಗೂಡುತ್ತೆ ಮಡಲ್ತ ಪೆರ್ಮೆಳೆಗಳೊಳ್ಚೆಲ್ವಾದರಲ್ವಾಸಿನೊಳ್
ಪಡೆದಂ ಸಮ್ಮದಮಂ ನಿಜಾಂಗಜಿತಚಂಚದ್ವಲ್ಲಿಯೊಳ್ ಭಿಲ್ಲಿಯೊಳ್ ॥೧೦೮॥

॥ವ॥ ಅಲ್ಲಿ ಮತ್ತೊಂದೆಡೆಯೊಳ್ ತಳಿರ್ತಶೋಕೆಯ ತಳದ ತಣ್ಣೆಳಲ ಪಳಿಳಿಕಿನ ಪಾಸಜ[3]ೆಯಲ್ಲಿ—

ತೊಳಗುವ ದಂತದೋಲೆ ಸುಲಿಪಲ್ ತಳಿರೊಳ್ಪುಡೆ ಹಸ್ತಿಮಸ್ತಕ
ಸ್ಥಳದೆಳೆಮುತ್ತಿನೆಕ್ಕಸರಮಬ್ಜಪರಾಗದ ಜೊಟ್ಟು ಸೂಡಿದು
ತ್ಪಳದಳಮಾಲೆ ಗುಂಜಿದೊಡಮೊಪ್ಪುವ ಪುಲ್ಗಳ ಕಂಕಣಂ ಕರಂ
ಪೊಳೆವಲರ್ಗಣ್ಮುಗುಳ್ಮೊಲೆಗಳೊಪ್ಪೆ ಪುಳಿಂದಿಯರೊಪ್ಪಿ ತೋಱಿದರ್ ॥೧೦೯॥

॥ವ॥ ಮತ್ತಂ—

ನೆಲೆಮೊಲೆಗಳ್ಕದಕ್ಕದಿಸೆ ತಾಳ್ದ ತಳಿರ್ಮುಡಿಯಿಂದೆ ಸೂಸೆ ಕ
ಣ್ಮಲರ್ಗಳ ಕಾಂತಿ ಸಂದಣಿಸೆ ನರ್ತಿಸು[4]ತ[4]ಂತಿರೆ ದಂತದೋಲೆಗ
ಳ್ಗಲಕೆನೆ ಕೈಯ ನುಣ್ಬಳೆ ಪುಳಿಂದಿಯರಂದದೆ ನಿಂದು ಸೂವಿಯು
ಜ್ವಲರವಮೊಪ್ಪಿರಲ್ ಚಳಿಸಿದರ್ ಬಿದಿರಕ್ಕಿಯನಲ್ಲಿ ರಾಗದಿಂ ॥೧೧೦॥

॥ವ॥ ಅವರೊಳೊರ್ವ ಕಿಱುವೇಡಿತಿ—

ತಳಿರಂ ಸುತ್ತಿ ವನೇಚರಿ
ವಿಳಾಸದಿಂ ಗಿರಿನಿತಂಬದೊಳ್ಮುತ್ತುಗಳಂ
ತಳೆದೆಸೆದಳಪರದಿಗ್ವ[5]ಧು[5]
ತಳೆ[6]ವಂ[6]ತಿರೆ ಸಂಜೆವೆರಸಿ ತಾರಾಗಣಮಂ ॥೧೧೧॥

---

೧ ಡಿ (ಮೂ) ೨ ಪು (ರಿ) ೩ ಉ (ಬ, ಮೂ) ೪ ವ (ಮೂ) ೫ ಧೂ (ಬ) ೬ ದಂ (ಮೂ)

॥ವ॥ ಪೆಱತೊಂದೆಡೆ[1]ಯಲ್ಲಿ[1]—

ಮುಡಿಯೊಳ್ಮಲ್ಲೆಯ ಸೂಡಿ ಗುಂಜಿದೊಡವಂ ಕೈಗೆಯ್ದು ಕಸ್ತೂರಿಯಂ
ತೊಡೆದುದ್ಯತ್ಕುಚಕುಂಭದೊಳ್ ತಳಿರ್ಗಳಂ ತಾನುಟ್ಟು ಪಚ್ಚೋಲೆದಾ
ಳ್ದೊಡನಾಂತೊಳ್ಗಱಿಯಂಬುಮಂ ಬಿದಿರ ಬಿಲ್ಲಂ ಬೇಡವೆಣ್ಬಂದು ನಿಂ
ದೆಡೆಯೊಳ್ನಿಲ್ವನನಂಗನಾಂತು ಮುಗುಳಂಬಂ ಪುಷ್ಪಕೋದಂಡಮಂ ॥೧೧೨॥

॥ವ॥ ಇಂತನಂತವಿಳಾಸದಿಂ ಪುಳಿಂದಸುಂದರಿಯರ್ವಿಹರಿಸುತ್ತಮಿರೆಯಿರೆ—

ತಿವಿದು ಮೃಗಾರಿಯಂ ಸದೆದು ಬಲ್ಮಱಿಯಂ ಪೊಡೆದಿಕ್ಕಿ ಸಿಂ[2]ಹ[2]ಮಂ
ಕವಿ[3]ದಿ[3]ಸುತಾನೆಯಂ ತಱಿದು ಸೈರಿಭಮಂ ಪರಿದಿಟ್ಟು ಪಂದಿಯಂ
ತವಿಸಿ ವೃಕೌಘಮಂ ಬಡಿದು ಬಲ್ಮೊಲನಂ ಬಲೆಗಿಟ್ಟು ಪುಲ್ಲೆಯಂ
ಬವರಿಗೊಳುತ್ತೆ ಬೇಡವಡೆಯಾಡಿದುದಗ್ಗದ ಬೇಂಟೆಯಂ ನೃಪಾ ॥೧೧೩॥

॥ವ॥ ಇಂತು ಬೇಂಟೆಯಾಡಿದನಂತರಂ—

ಪೊಂಬುಲಿಸಮ್ಮಮಾನೆದಲೆಮುತ್ತು ಮೊಲಂಗಳ ಬಿಕ್ಕು ಪೂತಿವೆ
ಕ್ಕಂಬರಗಾಳಿ ಜೇನ್ಪುಣಿಸೆವಣ್ಪೊಸನಾರ್ ಕಿಡಿದಾಡೆ ನಿಗ್ಗವಂ
ಶಂಬರಮಿಂಬುವೆತ್ತ ಚಮರಂ ಜತು ಪೇರುಡು ಪೀಲಿಯೆಂಬಿವಂ
ತುಂಬಿದ ಕಂಬಿಯಂ ತಳೆದದೇಂ ತಳರ್ದತ್ತೊ ಪುಳಿಂದಸಂಕುಳಂ ॥೧೧೪॥

॥ವ॥ ಇಂತು ಪನ್ನತಿಕೆಯಿಂ ಪಲವೇಂಟೆ[4]ಯನಾ[4]ಡಿ ಕಾಡೊಡೆಯಂ ತೋಡಿಲ್ಲದ ತೊಱೆವೇಂಟೆಯಾಡಲೆಳಸು[5]ತಿ[5]ಱಿಗೂಳಿ ಹಂಜರಗೂಳಿಡುಗಾಣಂ ಸೊರ್ಕುಸಿಲ್ಕು-ಱಿಲ್ಕಿಱುಗೂಳಿ ಪೆರ್ಗೂಳಿ ಕೊಡಂಬೆಯಿಡಿರ್ಗಿಱುಗಟ್ಟಿಗೆಯರೆಮಡ್ಡಿ ಸೂಸುಗೂಳ್ಗ-ಳೆಂಬಿವಂ ಕೊಂಡು ಪೊಳ್ತಂ ಸನ್ನೆಯಂ ಜಾತಿಯಂ ಜವಂಗೆಡದಱಿವ ಬಿನ್ನಣಂಬಡೆದ ಬೇಡರೊಡವರೆ ನೀಡುಂ ಪ[6]ರಿ[6]ವ ಪೆರ್ದೊರೆಗೆಯ್ದಿ ಸಾರ್ದು ಪೆರ್ದೆಪ್ಪಮನೇಱಿ ನಿಂದು ನಿರೀಕ್ಷಿಸಿ ತಾಣಮಱಿದು ಪರೀಕ್ಷಿಸಿ ಸೂಸುಗೂಳಂ ತಳಿದು ತಳ್ವದೆ ಬರ್ಪ ಭರಮನಱಿದು ಮೂಸಿದೊಡೆ ನಾಸಾಗ್ರಮನುರ್ಚುವ,ನಕ್ಕಿದೊಡೆ ನಾಲಗೆಯೊಳ್ನಡುವ, ಪೊಳೆದೊಡೆ ಬೆನ್ನೊಳ್ಮೂಡುವೊರಸಿದೊಡೆ ಬರಿಯಂ ಕೊಱೆವ ಉಗುಳ್ದೊಡೆ ಕೀಳ್ದಾಳಿಗೆಯೊಳ್ನಾಂಟುವ ಪಲವುಂ ಬಗೆಯ ಗಾಣಂಗಳಂ, ಬಿರ್ಚುವಲೆ, ಬಳ್ಳಿವಲೆ, ಗೋರಿವಲೆ, ಖಂಡವಲೆಗಳೆಂಬಿವಂ ಬೀಸರಂಬುಗದೆ ಬಿಚ್ಚಿ ಬೀಸಿದಾಗಳ್—

---

೧ ಯೊಳ್ (ಬ, ಮೂ) ೨ ಹ್ವ (ರಿ) ೩ ದೆ (ಚಾ, ಧಾ, ಮೂ) ೪ ಯಾ (ದ)
೫ ತ್ತಿ (ಮೈ, ಧಾ) ೬ ರಿಕಿಸು (ಮೂ)

ಗಱಿಮೀನ್ಸೀಗುಡಿ ಗೆಂಡೆಮೀನ್ಪವಳವಾಯಂ ಬಾಳೆಮೀನ್ಬಾ[೧]ವು[೧]ಮೀ
ನ್ಕಿಱುಮೀ[೨]ನ್ಕೆಂಗಱಿಯು[೨]ಚ್ಚಿ ಕುಚ್ಚ[೩]ಲ[೩]ಳ[೪]ತ್ರಿ[೪]ಗಂ ಕಾಗೆಂಡೆ ಕೆಂಕಲ್ಸರಿತ್
ಕೊಜವಂ ಚೇಳ್ಪಸಿಗಂ ಸಸಿಲ್ಗೊದಳೆಮೀನ್ಪೊಂಜೊಪ್ಪುಮೀನ್ಪಂದಿಮೀ
ನ್ಪೆಱಿ[೫]ಮೀನ್ಪಗ್ಗಡೆ ಬಣ್ಣಮೀನೆನಿಪಿವೆಲ್ಲಂ ಬೀಳ್ದುವಾ ತಾಣದೊಳ್ ॥೧೧೫॥

॥ವ॥ ಅಂ[೫]ತ್ರ[೫]ವೆಲ್ಲಮಂ ಗುದಿಗೆಯ್ದು ಕಾಳಮೇಘಂ ತಡಿಗೆಯ್ದು ನಿಂದಿರ್ಪಿನ-ಮಾಗಳೊಂದುದ್ದಂಡಪ್ರಚಂಡಕಂಠೀರವಂ ಗೆಂಟಿನೊಳ್ ವಿಲಯಾಗ್ನಿ ಮೈವೆತ್ತುದೆಂಬ ಗುರ್ವನೊಳಕೊಂಡು ಗರ್ವಿಸಿ ನಿಂದು—

ಘನನಿನದಕ್ಕಿದರ್ಗಳಮೆನಿಪ್ಪವೊಲಿಂದ್ರಗಜೇಂದ್ರ[೬]ಮ[೬]ಳ್ಕೆ ಗ
ರ್ಜನೆಗುಡುತೆಳ್ದು ಲಂಘಿಸಿ ವಿಜೃಂಭಿಸಿ ಕುಂಭಿಶಿರಃಪ್ರದೇಶಮಂ
ಕೊನೆಯುಗುರಿಂದೆ ಸೀಳ್ದು ರುಧಿರೋನ್ಮದಕೃನ್ಮಧುವೀಂಟಿ ಗೆಂಟಿನೊಳ್
ತೊನೆದು ಕುನುಂಗಿ ಕುಪ್ಪಳಿಸಿ ಕಣ್ಗಿಡಿ ಸಾಲಿಡೆ ನೋಡಿ ಜೇಡರಂ ॥೧೧೬॥

ನೆಗೆದುದು ಪಾಯ್ದು ಪೊಯ್ದುದೊಡಲಿರ್ಕಡಿಯಾಗಿರೆ ಖಂಡದಿಂಡೆಯಂ
ತೆಗೆತೆಗೆದಿಟ್ಟುದೊಟ್ಟಜೆಯನೊಟ್ಟಿದುದಟ್ಟಿಯನಟ್ಟಿ ಗಂಡುಗೊಂ
ಡುಗಿ[೭]ಬ[೭]ಗಿಮಾಡಿ ಮಾರ್ಮಲೆ[೮]ತ[೮]ಲ ವೀರಕಿರಾತರನೊ[೯]ರ್ಕ[೯]ಲಿಕ್ಕಿ ಧಾ
ತ್ರಿಗೆ ಪೊಸರಕ್ತಪೂರಮೆಸಗಿತ್ತದು ಕೇಸರಿ ಕೇಳ್ಧರಾಧಿಪಾ ॥೧೧೭॥

॥ವ॥ ಆಗಳ್—

ನಡುಗುವ ಕಾಲ್ಗಳುಬ್ಬರಿಸಿ ಸೂಸುವ ಸುಯ್ ಬೆಮರೇಱಿದಾನನಂ
[೧೦]ಪೊಡೆವೆರ್ದೆ[೧೦] ಪೊಯ್ವ್ವಕಿರ್ಬ್ಬರಿ ಸಿಡುಂಬಿನ ಮುಳ್ಗಳ[೧೧]ಗಾ[೧೧]ಯಮಂಗದೊಳ್
ಬಿಡೆ ಬೆದರ್ವಕ್ಷಿ ಬೆರ್ಚುವ ಮನಸ್ಥಿತಿ ತೋಱೆ ಪುಳಿಂದನೈದುತೆ
ಪ್ಪೊಡೆಯನ ಮುಂದೆ ಕೈಮುಗಿದು ನಿಂದವನೆಂದನಿದಂ ಧರಾಧಿಪಾ ॥೧೧೮॥

ಎಲೆ ಶಬರೇಶ ನೋಡಿದೆಯಿದೇಳ್ತಗುತಿರ್ದಪುದಿತ್ತ ನಿನ್ನ ಪೆ
ರ್ಬಲಮುಡಿದಸ್ಥಿಯಿಂ ಸುರಿವ ರೋಹಿತದಿಂ ಕಡಿವೋದ ಕಾಲ್ಗಳಿಂ
[೧೨]ತೊಲಗಿದ ತೋಳ್ಗಳಿಂ[೧೨] ಪಱಿದ ಪೆರ್ಗರುಳಿಂ ಪೊಱಮಟ್ಟ ಖಂಡದಿಂ
ವಿಲಯದ ಮೃತ್ಯುವಂತೆ ತವೆ ಕೊಂದುದು ತಿಂದುದದೊಂದಿಭಾಂತಕಂ ॥೧೧೯॥

---

೧ ರು (ತಾ) ೨ ನ್ಕೆಂಗಱಿಮ (ಧಾ); ನ್ಕೆಂಗುಱುಯ (ತಾ) ಕೆಂಗುಱು (ರಿ) ೩ ಲಿ (ತಾ) ೪ ರಿ (ಮೂ) ೫ ತಿ (ಮೂ,ಬ) ೬ ಪ (ಮೂ) ೭ ಬಿ (ಮೂ,ತಾ) ೮ ವ (ಮೂ) ೯ ಕ್ಕಿ (ಮೈ) ೧೦ ಪೊಡೆವೆರ್ವದೆ (ಮೂ, ಬ) ೧೧ ಘಾ (ರಿ, ಬ, ಮೂ ಧಾ) ೧೨ × (ಮೂ)

॥ವ॥ ಎಂದ ಕಿರಾತದೂತೋಕ್ತಿಯಂ ಕೇಳ್ದು—

ಘನಕೋಪಾಟೋಪಮಂ ತಾಳ್ದರುಣತರತರತ್ತಾರನೇತ್ರಂ ತತಸ್ಪಂ
ದನಯುಕ್ತೋಷ್ಠಂ ಪ್ರಬದ್ಧಭ್ರುಕುಟಿನಿಟಿಲನುತ್ಕೀರ್ಣಘರ್ಮಾಂಬುಭೀಷ್ಮಾ
ನನನುದ್ವೃತ್ತಖಡ್ಗಮೊಂದಂ ಪಿಡಿದು ಜಡಿದದೇಂ ಧೀರನೋ ಧೀವರಂ ಭೋಂ
ಕನೆ ಬಂದಂ ದೇವ ಕೇಳ್ ಭೀಕರಕರಿರಿಪುವಿರ್ಪಲ್ಲಿಗಾ ಕಾಳಮೇಘಂ ॥೧೭೦॥

॥ವ॥ ಅಂತು ಪರಿತ್ರಾಸನಿರ್ಯಾತಕಿರಾತಸಂಜಾತಮೊಡವರೆ ಪನ್ನತಿಕೆಯಿಂ ಬರ್ಪಾಗಳ್ ಮುಂದೆ ಮಂದೈಸಿ ಮಡುಗಟ್ಟಿದ ನೆತ್ತರ ಪೆರ್ವೊನಲಿಂ ಕುಪ್ಪಳಿಸಿ ಗುಪ್ಪೆಗೊಂಡ [೧]ದೊಂ[೧]ಡೆಗರುಳ್ಗಳಿಂ ಪಿಂಡುಗೊಂಡು ಜೊಂಡೇಳ್ದ ಕಾಳ್ಮಿದುಳ ಕೋಳ್ಗೆಸಱಿಂದರೆದೆಱೆದ ಕಣ್ಗಳಿಂ ಕೆದರ್ದ ತಲೆನವಿರಿಂದೆ ಜಿಗಿಜಿಗಿಯಾದ ಪೊ[೨]ಡೆ[೨]ಯಿಂದರೆಗರ್ಚಿದ ನಾಲಗೆಯಿಂ ಕೆಲದೊಳೊಕ್ಕ ಬಿಲ್ಸರಲ್ಗಳಿಂ ಕಡಿವಡೆದ ತೋಳ್ಗಳಿಂ ದುಡಿದ ನಡುಗಳಿಂ ಜರಿದ ಮುಡುಪಿಂ ಪಾಸಿ[೩]ಪಸರಿಸಿ[೩]ದಂತೆ ಬಿಳ್ದ ಪೆರ್ಣಂ-ಗಳಿಂದತಿಭಯಾವಹಮಾದ ಬಟ್ಟೆಯಂ ನಿಟ್ಟಿಸುತ್ತಿರೆ ತೊಟ್ಟನೆ ಕಟ್ಟಿದಿರೊಳತಿ ಭೀಕರಾಕೃತಿವೆತ್ತು ಮುರಿದೇಳ್ದುರಿಗೆದರ್ವ ಕಣ್ಗಳಿಂ ನುಂಗುವಂತೆ ನಿರೀಕ್ಷಿಸಿ, ಸಂಧ್ಯಾರುಣಿತಪಶ್ಚಿಮಾಚಲಗುಹಾವಿವರದಂತಿರ್ಪ ಬಾಯಂ ತೆಱೆದು ಕಲ್ಪಾಂತ ಕಠೋರಘನಘನಧ್ವನಿಯನೇಳಿಪಂತೆ ಗಜರಿ ಗರ್ಜಿಸಿ ನಿಂದವ್ವಳಿಸಲುಜ್ಜುಗಿಪಾಗಳ್—

ನಡೆನಡೆಯಿದಿರ್ಚಿದಿರ್ಚೊ
ರ್ಗೊಡೆಯದಿರೊರ್ಗೊಡೆಯದಿರ್ಕರಂ ಕರವಾಳಿಂ
ಪೊಡೆಪೊಡೆಯೆನುತ್ತೆ ನಾಲ್ಕುಂ
ಕಡೆಯೊಳ್ ಕವಿದರ್ ಕಿರಾತರವನೀನಾಥಾ ॥೧೭೧॥

॥ವ॥ ಆಗಳ್ ವಿಲಯಾಗ್ನಿ ಮೈವೆತ್ತಂತೆ ಮಾಮಸಕಂ ಮಸ[೪]ಗಿ[೪]—

ಜಲ[೫]ಮಂ[೫] ಪೊಕ್ಕ ಲುಲಾಯಮಂ ಪರಿದು ಪುತ್ತೇಱಿರ್ದ ಭಲ್ಲೂಕಮಂ
ಸಲೆ ಪುಲ್ಗರ್ಚಿದ ಪುಲ್ಲೆಯಂ ಕುಜದ ಕೊಂಬಂ ಸಾರ್ದ ಸತ್ಪಕ್ಷಿಸಂ
ಕುಲಮಂ ಕುಂದದೆ ಕೊಂದಘುಕ್ಕಿದೆ ಫಲಂ ನೋಡೆಂಬವೊಲ್ಬೇಡರಂ
ಬ[೬]ಲಿ[೬]ಗೊಂಡತ್ತು ಬಲಾಹಕಧ್ವನಿಮಿಳತ್ಕಂಠೋಗ್ರ ಕಂಠೀರವಂ ॥೧೭೨॥

---

೧ ದಂ (ಧಾ) ೨ ರೆ (ಷು) ೩ ಪರಪಿ (ಷು, ಬ) ೪ ಕಿ (ರಿ) ೫ ವಂ (ಮು)
೬ ಲ (ಮು)

॥ವ॥ ಅಂತದಂ ಕಂಡು ಕಾಲಮೇಘಂ ಪ್ರಳಯಕಾಲಮೇಘದಂತೆ ಗ[೧]ಜ[೧]ರಿ ಗರ್ಜಿಸಿ ಕೆರಳ್ದು ಕಿಡಿಕಿಡಿ[೨]ಯೋ[೨]ಗಿ ನೋಡಿ—

ಜಡಿದಸಿಯಂ ಝುಳುಂಪಿಸಿ ಕರಾಗ್ರದೊಳೆತ್ತಿ ಕಡಂಗಿ ಸಾರ್ದು ಬೊ
ಬ್ಬಿಡುತೆ ಪಳಂಚಿ ದಂಡಗೊಡುತಾರೆ ಪುಳಿಂದರಮಂದಸತ್ವದಿಂ
ಕೆಡೆಕೆಡೆಯೆಂದು ಪೊಯ್ದನದನಿರ್ಕಡಿಯಾಗಿರೆ ನಿನ್ನ ಭೃತ್ಯನಾ
ಕಡುಗಲಿಕಾಳಮೇಘನವನೀಶ್ವರಶೇಖರರಾಜಶೇಖರಾ ॥೧೨೩॥

॥ವ॥ ಅಂತು ಪೊಯ್ದನಂತರಂ—

ಸೀಳ್ದು ತದೀಯಮಸ್ತಕದ ಮಾಣಿಕಮಂ ನಡೆನೋಡಿ ಕೌತುಕ[೩]ಂ
ದಾಳ್ದಿದನರ್ಘ್ಯಮೆಂದು ಬಗೆಯುತ್ತಿರೆ ಬಂದುದಿದೆಮ್ಮ ದೇಶದಿಂ
ಕೇಳ್ದಿ[೪]ಟ[೪]ಮೆಮ್ಮದೀ ಮಣಿಯೆನುತ್ತಿರದೆಯ್ದಿ ತೊಡಂಕಿ ಸಿಂ[೪]ಹ[೪]ಳ
ಕ್ಕಾಳ್ದನ ಬಂಟರುರ್ವಿ ಮಿಗೆ ಕಾ[೫]ಳಿ[೫]ಗಮಂ ತೆಗೆದರ್ ಧರಾಧಿಪಾ ॥೧೨೪॥

॥ವ॥ ಆಗಳ್—

ಕಳೆದೆನ್ನಂ ಕಲಿಕಾಲಮೇಘನೆಲೆ ನೀಂ ಪೋಗಲ್ಲಿಗಾ ರಾಜಶೇ
ಖರನೆಮ್ಮಾಳ್ದನವಂಗೆ ಕಾಣ್ಕೆಗೊಡು ಕೊಳ್ಳೆಂದಿತ್ತು ತದ್ರತ್ನಮಂ
ಭರದಿಂದಂ ಕಳುಪುತ್ತೆ ಮತ್ತವರೊಳಿನ್ನುಂ ಕಾದುತಿರ್ದಪ್ಪನೀ
ಪರಿಯಂ ನಿಮ್ಮಡಿಗಿಂದು ಬಿನ್ನವಿಸಲಾಂ ಬಂದೆಂ ನೃಪಾಲೋತ್ತಮಾ ॥೧೨೫॥

॥ವ॥ ಮತ್ತಮಾ ಸಿಂಹಳಂ—

ಈ ಮಣಿಗೋರಗೆಯೆನಿಪ ಮ
ಹಾಮಣಿಯೊಳವೆಂಬ ಬಿಂಕದಿಂದಂಬುಧಿಯೊಳ್
ಶ್ರೀಮಹಿಮೆಯಾಂತೆನಾನೆಂ
ಬೀ ಮದದಿಂದೆನಗೆ ದೊರೆಯದಾರ್ ದೊರೆಯೆಂಬಂ ॥೧೨೬॥

॥ವ॥ ಎಂದು[೬]ಸಿ[೬]ರ್ದು ಮತ್ತಮಿರದೆ—

೧ ದ (ಮೂ) ೨ ಯಾ (ಧಾ) ೩ ರ (ತಾ, ಬ, ಧಾ, ಮೂ, ಮೈ) ೪ ಹ್ವ (ಬಾ, ಮೂ) ೫ ಳ (ತಾ, ಬಾ, ಧಾ, ಮೂ, ಮೈ) ೬ ಸು (ಮೈ, ಬ, ಮೂ)

ದೇವರಡಿಗಂಡು ಕ[೧]ಪ್ಪ[೧]ಮು
ನೀವರ್ ಚಪ್ಪನ್ನದೇಶದರಸರ್ ವಸುರ
ತ್ನಾವಳಿಯನತುಳಿಸಿಂಹಳ
ನೇವೇಳ್ವೆಂ ಗಣಿಸದಾಗಳುಂ ಬೆಱ[೩]ತಿರ್ಪಂ ॥೧೨೭॥

॥ವ॥ ಎನೆ ನಿರೀಕ್ಷಿಪರಸಂಗೆ ದೇವಾ, ಸಿಂಹಳೇಂದ್ರನೆಂದುಂ ಕಪ್ಪಮಿತ್ತನಲ್ತೆಂದು ಗ[೨]ಣ[೨]ಕಗಣಮಣಿಯರಂ ನಿಂದು ಕೈಮುಗಿದು ಪೇಳೆ ಕೇಳ್ದು ಕೆರಳ್ದು—

ಸೊರ್ಕೊಗೆದಬ್ಧಿಯ ಮಧ್ಯದೊ
ಳುರ್ಕಿದ ಸಿಂಹಳನ ಮದಕಿದೌಷಧಮೆನಿಕುಂ
ತೋರ್ಕೆವಡೆದೆಸೆವ ಬಾಳು ಪೊ
ಣರ್ಕೆಗೆ ಪೊಡೆಯಿಪುದು ಭೇರಿಯಂ ಭರದಿಂದಂ ॥೧೨೮॥

॥ವ॥ ಎಂದು ನಿಜಮಂತ್ರಿವದನಮಂ ನೋಡಿ ಮತ್ತಮಿಂತೆಂದಂ—

ಜಳನಿಧಿಯೊಳಿರ್ಪನೆಂಬ
ಗ್ಗಳಿಕೆಯದಂತಿರ್ಕೆ ಮಿಕ್ಕ ಲೋಕಾಂತರದೊಳ್
ಬಳವೆರಸಿ ನಿಂದೊಡಂ ತ
ನ್ನಳವಂ ಬಱಿ[೨]ಕಯ್ದು ತೋರ್ಪೆನೆನ್ನಯ ಬಳ[೪]ವಂ[೪] ॥೧೨೯॥

ಇಂತೆನೆ ದೇವ ದೇವಪತಿಮುಖ್ಯದಿಶಾಧಿಪರಳ್ಕುತಿರ್ಪರೋ
ರಂತೆ ಭವತ್ಪ್ರತಾಪವಿಭವಕ್ಕಿನೆ ಗಣ್ಯನೆ ಸಿಂಹಳಂ ಮಹಾ
ದಂತಿಗಳಂ ಬೆಗಳ್ಗೊಳಿಪ ಸಿಂಹಕೆ ಲಕ್ಷ್ಯಮೆ ಪುಲ್ಮೃಗಂ ಮಹೀ
ಕಾಂತವರೇಣ್ಯ ಮಾಳ್ಪುದೆನಗೀ ಬೆಸನಂ ಸೆಱ[೩]ಗಟ್ಟಿ ತಂದಪೆಂ ॥೧೩೦॥

॥ವ॥ ಎಂದು ನುಡಿದ ಮಿತವಚನಕುಮಾರನ ವದನಾರವಿಂದಮಂ ನೋಡಿ—

ವಿತತಚತುರಂಗಬಳಸಂ
ಯುತನತಿಸಾಹಸಿ ಸರೋಧಿಮಧ್ಯಸ್ಥಿತನು
ದ್ಧತನಾ ಸಿಂಹಳನಲ್ಲದೊ
ಡಿತರರವೋಲ್ ಕಪ್ಪಮಿತ್ತದೇಂ ಸೇವಿ[೪]ಸ[೪]ನೇ ॥೧೩೧॥

---

೧ ರ್ಪ (ತಾ, ಬ, ಮೂ, ಮೈ) ೨ ಣಿ (ತಾ) ೩ ಮಂ (ತಾ), ರ್ಪ (ಧಾ) ೪ ಪ (ತಾ, ಮೈ, ಮೂ.)

॥ವ॥ ಇಂ೧ತೌದ್ಧತ್ಯ೧ಸಾಹಸಸಮಗ್ರನಾಗಿರ್ಪನಾದೊಡಂ—

ನಿನ್ನಿಂ ತೀರದ ಕಜ್ಜಮ
ದಿನ್ನೆನಗೊಂದುಂಟೆ ನಿಜದಿನಂತಾದೊಡಮೇ
ನೆನ್ನಯ ಭುಜಕಂ೨ಡೂಹ್ಯತಿ೨
ಯನ್ನೆಗಳ್ವೆಂ ತೋರ್ಪೆನೆನ್ನ ಸಾಹಸದಿರವಂ ॥೧೩೨॥

ಎಂದಲ್ಲಿಂದೇ೩ಳ್ದ೩ಮಾತ್ಯಂಬೆರಸು ಭಳದಿನ್ನೈತಂದು ತದ್ರತ್ನಮಂ ತಾಂ
ಮುಂದಿಟ್ಟಾದ್ಯಂತಕಾರ್ಯಸ್ಥಿತಿಯನೊಸೆದು ವಿಜ್ಞಾಪನಂಗೆಯ್ದು ಮಂದಾ
ನಂದಂಬೆತ್ತಂಘ್ರಿಕಂಜಕ್ಕೆಱಗಿ ಪರಕೆಯಂ ಕೊಂಡು ಚೋಳೇಂದ್ರನಿಂ ತಾ
ಳ್ದಂದೊಲ್ದಾದೇಶಮಂ ತದ್ರಣಕೆ ತೆರಳಲುದ್ಯುಕ್ತನಾದಂ ಕುಮಾರಂ ॥೧೩೪॥

ಮಾತೆ ಮಹೀಧ್ರಜಾತೆ ಮಹನೀಯಸುರಾಸುರಸೇವ್ಯಪಾದಕಂ
ಜಾತೆ ಕಳಾ೪ಪ್ರಣೀತೆ೪ಕಮನೀಯಕಟಾಕ್ಷೆ ಸುರಕ್ಷಿತಾಮರ
ವ್ರಾತೆ ರಸಾಧಿಭೂತೆ ರಮಣೀಯರಮಾರತಿಮುಖ್ಯಶಕ್ತಿವಿ
ಖ್ಯಾತೆ ವಿನೀತೆ ಭೂತಪತಿವಲ್ಲಭೆ ಪಾಲಿಪುದೆನ್ನನಂಬಿಕೇ ॥೧೩೪॥

ಇದು ವಿನಮದಮರವರಮಕುಟತಟಘಟಿತಮಣಿಗಣಮಹಾಪ್ರಭಾಪಟಲಪರಿವೃತ
ಪರಶಿವಶ್ರೀಪಾದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾಚಂಚಚ್ಚಕೋ
ರಾಯಮಾನ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀ ಷಡಕ್ಷ೫ರಿ೫ದೇವವಿರಚಿತಮಪ್ಪ ರಾಜಶೇಖರವಿಳಾಸ
ವಿಪುಳಪ್ರಬಂಧದೊಳ್ ಕಿರಾತದೂತಾಗಮನ
ಮೃಗಯಾವರ್ಣನಂ ಪಂಚಮಾಶ್ವಾಸಂ
ಮಂಗಳಮಸ್ತು
ಅಂತು ಆಶ್ವಾಸ ಐದಕ್ಕಂ ಪದ ೬೫೪ ಕ್ಕಂ

ಮಂಗಳಮಹಾ
ಶ್ರೀ ಶ್ರೀ ಶ್ರೀ

---

೧ ತೌದ್ಯತ್ (ಮೂ, ಲ) ೨ ಡೂತಿ (ಮೂ) ೩ ಳ್ವ (ಮೂ) ೪ ಪ್ರವೀಣತೆ (ಕ)
೫ ರ (ಧಾ)

ಷಷ್ಠಾಶ್ವಾಸಂ

ಶ್ರೀನಗರಾಜಸುತಾಮಧು
ರಾನನವಿಧುಬಿಂಬಚುಂಬನಸ್ವೀಕೃತಪಂ
ಚಾನನನಘ[೧]ಮದಗಜಪಂ[೧]
ಚಾನನನೆಮಗೀಗೆ ಸೌಖ್ಯಮಂ ಶಿವಲಿಂಗಂ ॥೧॥

॥ವ॥ ಆಗಳಾ ರಾಜಶೇಖರನರೇಂ[೨]ದ್ರನ[೨] ವಿಜಯಯಾತ್ರೆಗೆ [೩]ಸ[೩]ಹಾಯಂ ಬರ್ಪಂತೆ ಶರದಂ ಬರಲೊಡನೆ—

ಮೊಳೆವೋದತ್ತಬ್ಜಕಂದಂ ಕೊಳದೊಳೆ ಬೆಳೆದಾಳ್ದತ್ತಿಳಾಮಂಡಳಂ ಮಂ
ಡಳಿಗೊಂಡಾಗಳ್ ಮರಾಳಾವಳಿ ನಗದ ಬಿಲದ್ವಾರದಿಂದೇಳ್ದುದಾಶಾ
ವಳಯಂ ತೋರ್ಪಟ್ಟುದಬ್ಜಂ ಪಳಚನಲರ್ದುದಬ್ಜಾರಿಬಿಂಬಂ ಕಳಂಕಂ
ಕಳ[೪]ಳಿ[೪]ದತ್ತೆಂಬಂತೆ ನೀ[೫]ಡುಂ[೫] ತೊ[೬]ಳ[೬]ಗಿತ್ತು ತಿಳಿದತ್ತಾಪಗಾವಾರಿಪೂರಂ ॥೨॥

॥ವ॥ ಅಂತುಮಲ್ಲದೆಯುಂ—

ಅತಿನಿರ್ಮಲತೆಯನೀ ಮಲಿ
ನತೆಯಾಂತ ಪಯೋ[೭]ದ[೭]ಮಾಲೆಗಾಗಿಷೆ ಶರದಂ
ವಿತತಸಿತದ್ಯುತಿತತಿರಂ
ಜಿತಚಂದ್ರಂಗೀವನೆಂಬುದೊಂದಚ್ಚರಿಯೇ ॥೩॥

ಘನನಾಮಂ ಲೋಕದೊಳ್[೮]ಪೆರ್ಗೆ[೮]ಗೆಡೆಯೆ[೮]ನಿಸಿ[೯]ತ್ತ[೯]ಕ್ಕಟಾ ಕೆಮ್ಮನೀ ಮಿ
ತ್ರನ ತೇಜಕ್ಕಡ್ಡಲಾದೆಂ ದ್ವಿಜಗತಿಗೆಡಿಸಿರ್ದೆಂ ಜಗತ್ಪಂಕಮನ್ನಿಂ
ಜನಿಸಿತ್ತಾ ರಾಜಹಂಸಾಹಿತನೆನಿಸಿದೆನೆಂ[೧೦]ದುಂ[೧೦] ಜಡಗ್ರಾಹಿಯಾನಾ
ದೆನೆನುತ್ತಂ ಚಿಂತೆಯಿಂ ಬೆಳ್ಪಡರ್ದುದೆನೆ ತದಬ್ದಂ ಶರನ್ಮೇಘಮಿರ್ಕುಂ ॥೪॥

॥ವ॥ ಮತ್ತಂ—

---

೧ ಮದಪಂಚಾನನ (ರಿ, ಮೂ) ೨ ದ್ರೆ (ಮೂ) ೩ ಸಾ (ರಿ) ೪ ಳೀ (ಮೂ)
೫ ದಂ (ಮೂ) ೬ ಲ (ಮೂ) ೭ ಧರ (ಮೂ) ೮ ಗಿಡಿಸೆರ್ಪ (ರಿ) ಯಾಗಿಸಿ (ಮೂ)
೧೦ ದು (ಮೈ, ಮೂ)

ಅಡ್ಡಮಿರೆ ಕಾರಕಾರ್ಮುಗಿ
ಲೊಡ್ಡಣಮಿಳೆಗಿಳಿಯುದೊತ್ತರಿಸಿ ಮುಂದೈಸು
ತ್ತಿದ್ದಮೆನೆ ನಿಂದ ಚಂದ್ರಿಕೆ
[1]ಯೊಂ[1]ದ್ದನೆ ಬೆಳ್ಮುಗಿಲದೇಂ ಮನಂಗೊಳಿಸಿದುದೋ ॥ ೫ ॥

ಬಾಂಬೊಳೆಯೊಳಗಿದು ಮುಳಿಗಿ
ರ್ದಂಬುದಮುದು ತೊಲಗೆ ನೆಗೆದು ನಿಂದಂಚೆಯ ಪಿಂ
ಡೆಂಬಂತಿರೆ ಬೆಳ್ಮುಗಿಲದ
ಜಿ[2]ಂ ಬೀಳ್ವ ತುಷಾರಮದಱ ಗಜಿ[2]ವನಿಯೆನಿಕುಂ ॥ ೬ ॥

ನಾಕಪುಂಡರೀಕಮಂಬರಾಪಗಾಪಯಸ್ಥಿತಾ
ಸ್ತೋಕಪುಂಡರೀಕರಾಜಿಯಂ ಕರಾಗ್ರದಿಂದೆ ಕೀ
ಳ್ತೀಕಕಾಲದಲ್ಲಿ ಚೆಲ್ಲಿದಂತೆವೋಲ್ ಮೃಣಾಳನಾ
ಳೀಕದಂಬಶುಭ್ರಮಭ್ರಮಭ್ರದೊಳ್ವಿರಾಜಿಕುಂ ॥ ೭ ॥

ಹರಿದಶ್ವಾಶ್ವಾಸ್ಯದಿಂದಂ ಸುರಿದು ಪ[3]ರೆ[3]ದು ಪೆಂಪಾಳ್ದ ಫೇನೌಘಮೋ ನಿ
ರ್ಜರಗಂಗಾತೀರರಾಜದ್ಧವಳವಿಪುಳಕಂಜಾತಸಂಜಾತಮೋ ವಿ
ಸ್ಫುರಿತಾನಂತಪ್ರಮುಕ್ತಪ್ರವಿತತಸಿತನಿರ್ಮೋಕಮೋ ವ್ಯೋಮಲಕ್ಷ್ಮೀ
ಪರಿವೀತಶ್ವೇತಚೇಲಾಂಚಲಮೊಯೆನೆ ದ[4]ಲಿಂ[4]ಬಾಯ್ತು ಶುಭ್ರಾಭ್ರಜಾಲಂ ॥ ೮ ॥

ತಡಿವಿಡಿದೇಕಪಾದದೊಳೆ ನಿಂದರೆಗಣ್ಮುಗಿದಾತ್ಮಚಂಚುವಂ
ನಿಡುಗೊರಲಿಂ ಮರಲ್ಚಿ ನಿಜಪಕ್ಷದೊಳೊಯ್ಯನೆ ಸಾರ್ಚಿ ಮೌನಮಂ
ಪಿಡಿದೆಡೆಗೆಯ್ದಿದಂಬುಚರಮಂ ಜವದಿಂ ತವೆ ನುಂಗಿ ಸಾರ್ದು ಸಾ
ಲ್ವಿಡಿದೆಡೆಗೊಂಡನೇಕಬಕಪಜ್ತ್ತಿಗಳಿಂ ಕೆಜ[5] ತಳ್ತು ರಂಜಿಕುಂ ॥ ೯ ॥

ಪರಿದೈತಂದರಸಂಚೆಯಂ ಕಳರೆಳದು ಭೃಂಗೀನಾದದಿಂದಿತ್ತು ಗಂ
ಧರಜಃಪೂರ್ಣಮ[6]ರಂ[6]ದದರ್ಘ್ಯಮನ[6]ಮ[6]ರ್ಚುತ್ತಂಬುರುಟ್ಪೀಠಮಂ
ಮರುದಾನೀತದಳಾಂಬರಂಬೊದಿಸುಣಲ್ಕಿತ್ತಬ್ಜಬೀಜಂಗಳಂ
ಶರದಂಭೋಜಿನಿ ಮಾಡಿದಳ್ ದ್ವಿಜವರಂಗಾತಿಥ್ಯಸತ್ಕಾರಮಂ ॥೧೦॥

---

೧ ವೊ (ತಾ) ೨ ರಿ (ಧಾ) ೩ ಲ್ಲಿ (ಮೈ) ೪ ರ (ಮೂ) ೫ ಕರಂ (ಮೈ)
೬ ವ (ತಾ)

॥ವ॥ ಇಂತೊಗೆತಂದ ಶರದೃತುವಿನೊಳಾ ಕುಮಾರಂ ವಿಜಯಯಾತ್ರೆಗೆ ಪೋಗಲುಜ್ಜುಗಿಸಿ ಪೊಱಮಟ್ಟು ಪೊಱಗಿಕ್ಕಿದ ಪಟ್ಟವಣೆಯನಲಂಕರಿಸಿಕುಳ್ಳಿರ್ದಮಾತ್ಯ-ವದನಾರವಿಂದಮಂ ನಡೆನೋಡಿ ಸಮರಪ್ರಸ್ಥಾನಭೇರಿಯಂ ಪೊಡೆಯಿಸೆಂಬುದು-ಮವಂ[೧]ತಂ[೧]ತ್ರಾಧ್ಯಕ್ಷನಪ್ಪ ಮೇಘನಾದನಂ ಬರಿಸಿ ಬೆಸಸುವುದುಮವಂ ಬಂದು ಕನತ್ಕನಕಕೋಣಮಂ ಪಿಡಿದಡಸಿ ಪೊಡೆ[೨]ದಾ[೨]ಗಳ್—

ಕಡಲೇಳುಂ ಕದಡೇಳ್ದು ತುಳ್ಕೆ ಫಣಿರಾಜಂ ಬಳ್ಕೆ ದಿಕ್ಪಾಲಕರ್
ಸೆಡೆಯಲ್ದಿಕ್ಕರಿವೃಂದಮಳ್ಕೆ ಭಗಣಂ ಸಾಯ್ದು[೩]ಳ್ಕೆ[೩]ಭೂಭೃತ್ಕುಳಂ
ಕಡುಪಿಂ ಕಂಪಿಸೆ ಪದ್ಮಜಾಂಡಘಟಮಂ ತುಂಬಿತ್ತು ಕಲ್ಪಾಂತದು
ಗ್ಘಡದಂಭೋದರ[೪]ವಂ[೪]ಬೊಲಿಂಬುವಡೆದಾ ಗಂಭೀರಭೇರೀರವಂ ॥೧೧॥

॥ವ॥ [೫]ಅದಂ[೫]ಕೇಳ್ದು ಕಡುಸಡಗರಂಮಿಕ್ಕು ಮಾ[೬]ರಂ[೬]ಕಮಾವುತಂಗಿಕ್ಕಿದ ಬಿರುದಿನ ತೊಡರ್ ಝುಣಝುಣಿಸಲೇಳ್ದು ಸಪ್ತಮದಾವಸ್ಥೆಯಿಂ ಮುಂದುಗಾಣದೆ ಬಲ್ಗಂ[೭]ಬ[೭]ಮಂ ಮುಱಿದು ನಿಗಳಮಂ ಪಱಿದು ನಿಟ್ಟೋಟದಿಂ ಬೀದಿವರಿದಾಱಿ ಕಾಱರನಱಿಯಟ್ಟಿ ಕೆಂಗ[೮]ಣ್ಮ[೮]ಸಗಿ ಕೇರ್ಗಳಂ ನುರ್ಗಿ ಸಿಲ್ಕಿದರಂ ಸೀಳ್ದು ಕಂಡರಂ ಕಾಲ್ಗೆಡಿಸಿ ಪೊಡೆದು ಕಡಂಗಿ ಕಾಯ್ಪೇಱಿ ದಿಕ್ಕುಂಭಿಗಳಳ್ಕೆ ಬೃಂಹಿತಂಗೆಯ್ದುಂಗಡಿಗಳನ[೯]ಣೇ[೯]ದು ಪೊಯ್ದು ಮಾಮಸಕಂ ಮಸಗಿ ಕೋಲಾಹಲಮನೆಸಗಿ ಬಾಳೆಮೀನಂತೆ ಭರಿಕಯ್ಯ ನೆಳಲೊಳ್ಪರಿವ, ಕುಸಿದಿಟ್ಟಚಕ್ರದಂತೆ ಕುನುಂಗಿಪರಿವ, ಸು[೧೦]ಂಟು[೧೦]ರೆಗಾಳಿಯಂತೆ ಸುಳಿಸುಳಿದು ಪರಿವ, ತೋರಣದೊಳ್ನುಸುಳ್ವಂತೆ ತಲೆದಗಿರ್ಪರಿವ ಕಳಕಳಮನಾಲಿಸು[೧೧]ತ್ತ[೧೧]ಡ್ಡವರಿಯೊಳಾಂತುನಿಂದಿದಿರ್ಚಿ ಪರಿವೊಟ್ಟಜೆಯಿಂ [೧೨]ಸಿಲ್ಕಿದರಂ[೧೨]ಪಿಡಿವ ಜಡಿವ [೧೩]ಜಾ[೧೩]ಡಿಸುವ ತುಡುಂಕಿತೆಗೆವಡಂಗಿಪಾಯ್ವ [೧೪]ಕಡಂಗಿ ಪೊಯ್ದು[೧೪]ತ್ತಿಯಿಳಿಪುವ ಪೊತ್ತುಪರಿವ ಸುತ್ತಿತೆಗೆವ ಮೆಟ್ಟಿಸೀಳ್ವ ಕಟ್ಟುಬ್ಬಟೆಯ ದುಷ್ಟಗಜಂಗಳಂ ಸರಿಸದೊಳ್ನಿಂದು[೧೫]ಸರಂ[೧೫]ದೋಱಿ ಸಮ್ಮುಖಂಗೆಯ್ದು ಗಜಾರಿಗರ್ಜನೆಯಿಂ ಗಜರಿಗರ್ಜಿಸಿ[೧೬]ನೆರೆದು[೧೬]ನೋಳ್ಪ ಪುರಜನ[೧೭]ಮರಿದಂ[೧೭]ದೆಸೆ ಸರಸರನೆ ಪರಿದು ಭರಿಕಯ್ಯಂ ಪಿಡಿದವರ್ದು ಬಿದುವನಪ್ಪಳಿಸಿ ಜಪ್ಪ[೧೮]ರಿ[೧೮]ಸಿ ಕೂರಂಕುಶಮನಿಕ್ಕಿ ಸೆಳೆದೆಳೆ[೧೯]ದಂ[೧೯]ಗುಟದ ತುದಿಯಿಂ ಕರ್ಣಮೂಲಮನ[೨೦]ಣೆ[೨೦]ಂದಲೆದು

೧ ತ (ಮೈ) ೨ ವಾ (ಮೈ, ಮೂ) ೩ ಕ್ಕೆ (ಮೂ) ೪ ವೆಂ (ಮೂ) ೫ ಅಂತದಂ (ಮೈ) ೬ ರಾಂ (ಮೂ) ೭ ಭ (ಮು, ಮೈ) ೮ ಳ್ಳ (ಮೈ) ೯ ಣೆ (ರಿ) ೧೦ ಟ್ಟು (ಮೈ) ೧೧ ತ (ಮೈ) ೧೨ ಗರ್ಜನೆಯಿಂ ಸಿಲ್ಕಿದಪಂ (ಮೂ) ೧೩ ಝಾ (ಮೂ) ೧೪ ತೊಡಂಕಿಪಾಯ ಕಡಂಗಿಸುತತೆಗೆವ (ಮೂ) ೧೫ ಸಂಗರಂ (ಮೂ) ೧೬ ನೆರೆ (ತಾ) ೧೭ ಮರಿ (ತಾ, ಮೂ) ೧೮ ಳಿ (ಮೈ) ೧೯ ದು (ಮೂ) ೨೦ ಣೆ (ರಿ)

ನೋಂಕಿ ಶಂಕೆಯಿಲ್ಲದೆ[೧]ಬಂದು ಪಿಂಡಾನೆಗಳೊಂದು[೧]ಗೂಡಿ ಶಿಕ್ಷೋಪಕ[೨]ರಣಂ[೨]
ಬೆರಸು ಸುಳಿದೇಱುವ ಸುತ್ತಂ ಮೆ[೩]ಟ್ಟಿಸು[೩]ವ ವಿ[೪]ಸ[೪]ಟಂಬರಿ[೫]ವಡ್ಡ[೫]ತ್ರರದೊಳಿ-
ಕ್ಕುವ [೬]ಥ[೬]ಟ್ಟುವರಿಯಿಪ ತೇರ್ರೈಪ ಬೋಳೈಪ ಬೋಹರದೊಳ್ಸೆಱೆಗೆಯ್ವ ಚೌಪ
ಟದೇಱಾಟದೊಳ್ ಚದುರಂ ತೋರ್ಪ ಕಯ್ಗೊಲೆ ಬಾಯ್ಗೊಲೆ ಮಯ್ಗೊಲೆ ಕಾಲ್ಗೊಲೆ
ಕೋಳ್ಗೊಲೆಯಂ ಕಲಿಪ ಕಡುಬಿನ್ನಣಂಬಡೆದು ಕಟ್ಟಾಳ್ತನಂಬೆತ್ತಿಂತು ಗಜಾ-
ರೋಹಣಧುರೀಣರಾದಾ ಧೋರಣರ್ನೆರೆಸೆರೆದು [೭]ಪರಿಪರಿ[೭]ದು ಬೇಱೆ ಬೇಱೆ ನಿಜ
ಗಜಂಗಳಂ ಪಣ್ಣಿ ಕೈಗೈದು ಪೂರ್ವಾಸನಮನವಷ್ಟಂಭಿಸಿ ಸಂಭ್ರಮಂ ಮಿಗೆ ನೆರಪಿ-
ದಾಗಳ್ ಕೋಡಮೊನೆಯೊಳ್ತಗುಳ್ಚಿದ [೮]ಸೂನಗಿಗತ್ತಿ[೮]ಯ, ಕೊನೆಗೊಡಂಕೆಯೊಳ್
ತೊನೆವ ಬಿಳಿಯ ಚಾಮರದ, ಬಿದುವೊಳ್ಪರೆದು ಬರ್ಚಿಸಿದ ಸಿಂಧೂರದ ಬರ್ಜಣೆಯ,
ಪಣೆವಾಸಱೆಯೊಳಮರ್ಚಿ ರಚಿಸಿದ ತಮಾಲರೇಖೆಯ, ತಲೆವಳಸಿ ನೆಲೆಗೊಳಿಸಿದ
ಮಾಣಿಕ್ಯದ ತಲೆವಾಲೆಯ ಪರಿಸರದೊಳೆಳಲೆವಿಟ್ಟ ಕನಕದರಳೆಲೆಮಾಲೆಯ, ಕಟ
ತಟದೊಳ್[೯]ಳ್[೯] ಪಿದಾಣಿಮುತ್ತಿನಚ್ಚಕುಚ್ಚಗಳ, ಕನಕಘಂಟೆಗಳ್ಮೊಳಿರ್ವಕೊರಲ, ಮಿ
ಸುನಿಯ ತೊಂಗಲ್ವರಜಿಯ[೧೦]ಂಚಿ[೧೦]ನ್ನಮಣಿಪುದಿದ [೧೧]ಪ[೧೧]ಕ್ಕಗಂಟೆಯ, ಬೆನ್ನೊ-
ಳೆತ್ತಿದ ಕದಳೀಸ್ತಂಭದ, [೧೨]ಋ[೧೨]ಕ್ಷಚರ್ಮದ ಪಕ್ಷರ[೧೩]ಕ್ಷೆ[೧೩]ಯ, ಮೇಲೆ ಪೊಡೆವ
ಬೀರಡೌಡೆಯ, ಪಿಂಗಾಲೊಳೆಳಲ್ವ ಭಾರಿಸಂಕಲೆಯ, ಝುಣಝುಣಿಪ ಪೊನ್ನಂದು
ಗೆಯ, ವಿಳಾಸಮುಳವಡೆ ಬಳವೈರಿಯೊಳ್ಪಳಂಚಲೆಂದು ನೀಲಾಚಲಂಗಳ್ಸಾಲಿಟ್ಟು
ವೆಂಬ ಬಿಂಕಮನಂಕಿಸಿ ಕಣ್ಗೆವಂದ ಗಂಧಸಿಂಧುರಸಂದೋಹದಿಂ, ಮತ್ತಂ–
ಕಿಳಿರ್ವ ಗೋಳಿಗೆಯ[೧೪]ದ[೧೪]ನಿ ಕಿವಿವುಗದ ಮುನ್ನಂ ಮಂದರದೊಳಂದಂಬಡೆದು
ನಿಂದ ಬಲ್ಗೆ[೧೫]ಚ್ಚಿ[೧೫]ನ ಮುಂಡಿಗೆಯಂ ಮುಱಿದು ಪಿಂಗಾಲ್ಗೆ ತೊಡರ್ಚಿ[೧೬]ದಗ್ಗ–
ದಗ್ಗರಣೆಯಂ[೧೬] [೧೭]ಭಟಭಟನೆ[೧೭] [೧೮]ಕೀಳ್ತು[೧೮] [೧೯]ಕಿಳಿರ್ದು[೧೯] ಪಿಡಿಯಲೊಡರ್ಚಿ
ತಡೆದು ತೊಡಂಕಿ ತುಡುಂಕಿದ ಗೋ[೨೦]ವ[೨೦]ನಂ ಕೊಡಪಿ ಕೆಡಪಿ ಕಡೆವಾಯ್ದುನಡು
ವೀ[೨೧]ದಿ[೨೧]ಗೆ ಕಡುವೇಗದಿಂ ಪರಿತಂದು ನಿಂದು ನೆರೆದ ಜನಂ ಕಲ್ಲೊಳಿಟ್ಟ ಕವಡಿಕೆಯ
ರಾಶಿಯಂತೆ ಝುಲ್ಲನೆ ಕೆದಱೆ ಖರಖುರಾಗ್ರಘಾತಜಾತವಿತತಧರಾತಳರಜಃಪಟಲಂ
ರವಿಮಂಡಳಮನಂಡ[೨೨]ಲೆ[೨೨]ದು ಮುಸುಂಕೆ ವಿಸಟಂಬರಿವ[೨೩]ಸೂ[೨೩]ಕಳಾಶ್ವಂಗಳ

---

೧ ಪಿಂಡಾನೆಗಳು (ಮೈ, ಮೂ) ೨ ಣಂಗಳಂ ಮೂ) ೩ ಟ್ಟೆ (ಧಾ) ೪ ಸು (ರಿ, ಧಾ) ೫ ಉಸುಡವ್ಡ (ರಿ, ಧಾ) ೬ ಧ (ಮೂ); ದ (ತಾ) ೭ ಪರಿದುಪರಿ (ಮೈ) ೮ ಸೂನ ಗತ್ತಿ (ರಿ, ಮೂ) ೯ ಳು (ಮೂ) ೧೦ ಬೆ (ರಿ. ಮೈ) ೧೧ ಪ್ರ (ಮೂ) ೧೨ ರು (ಮೈ) ಜು (ತಾ) ೧೩ ಕ್ಕೆ (ತಾ) ೧೪ ಧ್ವ (ಮೂ) ೧೫ ರ್ಚಿ (ತಾ) ೧೬ ದಗ್ಗಣೆ ಯಂ (ತಾ) ೧೭ ದಟದಟ (ಮೈ) ೧೮ ಪರಿದುಕೀಳ್ತು (ಧಾ) ೧೯ ಕುಳ್ಳಿರ್ದು (ರಿ. ತಾ, ಧಾ) ೨೦ ವಳ (ಮೂ) ೨೧ ದಿ (ಮೂ, ಮೈ) ೨೨ ಳೆ (ರಿ, ಮೈ) ೨೩ ಸು (ಧಾ)

ಸಂ[೧]ಕ[೧]ಣಿಯಂ ಬಗೆಯದೆ ಮುಂಕೊಂಡು [೨]ಶಂಕಿಸದೇಱಿ[೨]ಮೀಱಿ ಬೀದಿಗೊಂಡು ಪರಿಯಿಪಾಗಳ್ ಮುಂಗಾಲ್ಗಳಂ ನೆಗಪಿ ನಿಲ್ವ, ಪಿಂಗಾಲ್ಗಳಂ ಕೀಳ್ತುದಾಂಟುವ ಪೊಱ[೩]ಕಾ[೩]ಲ್ಗೊಳ್ವ ಮರಳಿ ಮೆಟ್ಟುವ [೪]ಬರಿವರಿವ[೪]ಸರಳಿಸಿಪಾಯ್ವ ಚಪ್ಪರಿಸುತುಪ್ಪರಿಪ, ಮಿಡಿವ, ಕಡೆಗಣಿಸಿಪಾರ್ವ, ದುಂಡಿಪ, ದಿಂಡು[೫]ವಾ[೫]ಯ್ವ, ಬವರಿವರಿವ, ಚಮ್ಮಟಿಗೆಗೆ ಚಳಿಯದ, ಕಡಿಯಾಣಮಂ ಕೈಕೊಳದ ಬಗೆಯಂ ಬ[೬]ಗೆ[೬]ದಂತೆ ಕಂಡು ಮನಮಱಿದು ಮೈಯಱಿದು ಪೊಲಂಬಱಿದು ಪೊಳ್ತಱಿದು ದನಿಯಱಿದು ದೆಸೆಯಱಿದು ಬೋಳೈಸಿ ಹಜ್ಜೆಗೊಳಿಸಿ ತೊಡೆ ಮಡ ದನಿ ಚಮ್ಮಟಿಗೆಗಳಿನೊಯ್ಯನೊಯ್ಯನೆ ಮೈವಳಿಗೆ ತಂದೊಡಂಬಡಿಸಿ ಕಡಂಗಿ ನಡೆಯಿಪ ಪೊಳಯಿಪ ದೂವಾಳಿಪ ಪೊಱ[೭]ಮ[೭]ಡಿಪಿದಿರೇಱಿಪಡ್ಡಂಬರಿಯಿಪ[೮]ವಾಘೆಯೊಳ್ಸರಿ[೮]ಸಂಗೊಂಡೊಂದೆ ಮೆಯ್ಯೊಳ್ಸೊಳಱಿದೇಱುವ ಸುತ್ತೇಱುವ ಬಿತ್ತರಂಬಡೆದ ವಾಹಳಿತನದೊಳ್ ನಳನನಿಳಿಕ್ಕೈವ ಶಾಳಿಹೋತ್ರನನಾಳಿಗೊಳ್ವ ಘೋಳಾಯಿಲರ್ ನೆರೆದು ಕನತ್ಕನಕಕವಚಮಂ ತೊಟ್ಟು ಕಾಲ್ಗುಪ್ಪಸಮನಿಟ್ಟು ಸೀಸಕಮಂ ಸಿಂಗರಿಸಿ ಬಾಹುರಕ್ಕೆಯನಾಂತು ಸಾಮ್ರಾಣಿಯಂ ಬಿಗಿದುಡೆಯೊಳ್ಪೊಂಜುರಿಗೆಯಂ ಕಟ್ಟಿ ಗಱಿಗಣೆಗಳ್ತುಱುಗಿದ ಪೊನ್ನ ಬತ್ತಳಿಕೆಯಂ ಬೆನ್ನೊಳ್ತಳೆದು ತರಕಸಮನೆಡವೆಗಲೊಳ್ತೊಡರ್ಚಿ ಪಂಚವಣ್ಣದ ಪಟ್ಟೆಯ ಬಿರುದಿನ ಬೀರಗಚ್ಚೆಗಟ್ಟಿರ್ದ ಪಿರಿಯರ್ ನೇರ್ಜೆ[೯]ಯಮನೋಜೆಯಿಂದೆತ್ತಿ ಪಿಡಿದು ಸಮರಸಮಯಸಮುಚಿತ[೧೦]ನ್ನೈ[೧೦]ಂಪಥ್ಯಂಬಡೆದಬ್ಬರಿಸಿ ಬೊಬ್ಬೆಗೊಟ್ಟೇಱಿ, ಸರಭಸಂ ಪರಿಯಿಪಾಗಳ್ ಪೊನ್ನ ಕಡಿವಾಣದ [೧೧]ರನ್ನ[೧೧]ಮೊಗರಂಬದ ಕಿವಿಯ ಚಾಮರದ ಸುತ್ತುರ್ಝಲ್ಲರಿಯ ನೆತ್ತಿಯ ಬೆಳ್ಗಱಿಯ ನೊಸಲ ಕನ್ನಡಿಯ ರೇವಂತಮಾಲೆಯ ಗರ್ಗರದ ತರಜೆಗತ್ತರಿಯ ಪೊರ್ಕುಳಘಂಟೆಯ ಪೊಂಬೆಸೆದ ಗುಬ್ಬಿಯ ಪಾರಿವದ ಸಂಧ್ಯಾರಾಗದ ದೇವಾಂಗದ ನವರಂಗದ ಸುವರ್ಣಪಳಿಯ ಪಳದಿಯ ಜೋನೆಗವಳಿಯ ಪಲಬಗೆಯ ಪಲ್ಲಣದ ಪಕ್ಕಜಲ್ಲಿಯ ಪದ್ಮರಾಗದ ಪಾವುಡದ ಪರುಠವಣೆ ಪಸರಿಸೆ ಶರಧಿಮಥನಸಮಯದೊಳ್ ಘುಳುಘುಳಿಸಿಘಳಿಲನೆ ಪರಿವ ಪೆರ್ದೆರೆಯ ದೊರೆಗೆವಂದು ರಯದಿಂ ಪರಿದು ನೆರೆದು ತರಂಗೊಂಡ ತು[೧೨]ರ[೧೨]ಗಸಂಘಾತದಿಂ, ಮತ್ತಂ—ಪೂಡಿದ ಹಯಂಗಳ ಜೋಡಿಸಿದ ಚಕ್ರಂಗಳ ಮುಗಿಲೊಳ್ಪಳಂಚುವ ಪಳಯಿಗೆಯ ಸುವರ್ಣ[೧೩]ದೊಡ್ಡು[೧೩]ವಲಗೆಯ ನೆಗಪಿನೆಟ್ಟ ಘನತ್ರಿಶೂಲದ ಕೆಲದೊಳಿಳಿಪಿದಂಬಿನ ಪೊದೆಯ ಸಾರ್ಚಿ ನಿಲಿಸಿದ ಶರಾಸನದ ಕೀಳ್ಮೊಳೆಯೊಳಿಳಿಪಿದ ಪಾಱುಂಬಳೆಯ ಸಂಗಳಿಸಿದ ಮುಕುರತೋರಣದ ಮುಂಗಡೆಯೊಳಿಕ್ಕುವ ಧವಳಚಾಮರದ ಮೇಲೆ ಮೆಱೆವ ಮೇಘಾಡಂಬರದ ರಣಕಬಳರಕ್ಕೆಮರ್ದುಗಳ್ಪುದಿದ ಭರಣಿಗಳ ಪೊಸಸವಗ ಸೀಸ-

---

೧ ತ (ಮೂ) ೨ ಸೈರಿಸದೆ ಶಂಕಿಸದೆ (ಮೂ) ೩ ಗಾ (ಧಾ) ೪ ಬವರಿವರಿಪ (ತಾ, ಧಾ) ೫ ಪಾ (ರಿ, ಮೂ) ೬ ಗೆಯು (ಮೂ) ೭ ಪ (ಮೈ) ೮ ರಾಘವಾಘೆ (ಮೂ, ಮೈ) ೯ ನೆಜ್ಜೆ (ತಾ) ೧೦ ನೇ (ಮೈ) ೧೧ ರನ್ನದ (ತಾ, ಮೈ, ಮೂ) ೧೨ ರಂ (ತಾ) ೧೩ ದ (ತಾ)

ಕಂಗಳ ಪೆಟ್ಟಿಗೆಗಳ ಚಕ್ರಚೀತ್ಕೃತಿಗೆ ಜತಿಗುಡುವ ಮಾಲೆಘಂಟೆಯ [೧]ಸಾರಿ[೧]ನಿಂದ ಧೀರಸಾರಥಿಯ ಸಮ್ಮುಖದೊಳ್ಬಿರುದನುಗ್ಘಡಿಪ ವಂದಿವೃಂದದ ಸಂಭ್ರಮಂಬೆರಸು ನಿಂದ ನಿಜರಥಂಗಳಂ ಬೀರಸಿರಿಯ ಮಣಿಮಂಚನೇಱುವಂತೇಱಿ ಮಣಿಮಕುಟ ಕಿರಣಮಿನರುಚಿಯನೊತ್ತರಿಸೆ ಕಲಿತಕರ್ಣಾಭರಣಕಾಂತಿ ಕಪೋಲದೊಳ್ನರ್ತಿಸೆ ತೊಡೆದ ಯಕ್ಷಕರ್ದಮದ ಕಡುಗಂಪಿಂಗೆ ಮದಾಳಿ ಮೊರೆದೆಱಗೆ ಕನಕಕವಚರುಚಿರರುಚಿಯೊಳ್ ಹಾರರುಚಿ ಮಲ್ಲಗಾಳೆಗಮನೊಡರ್ಚೆ ಭುಜವಲ್ಲರಿಯ ಮಂಜರಿಯ ಸಿರಿಯಂ ಭುಜಕೀರ್ತಿ ತಳೆದು ತೇಜಂಬೊಳೆಯೆ ಪೊಂದೊಡರನುಣ್ಗದಿರ್ ಚರಣಾಂಬುಜಕ್ಕೆ ಪೊಸವಿ[೨]ಸಿ[೨]ಲಂ ಪಸರಿಸೆ ಪಸದನಸಿರಿ ಮಿಸುಗೆ ರಥಾರೋಹಣನಿಪುಣತೆಯೊಳ್ ಪಾರ್ಥನಂ ಪಳಿವ ಪಾರ್ಥಿವಸಮುದಯಂ ಮುದಂದಳೆದೇಱಿ ಪನ್ನತಿಕೆಯಿಂ ಪರಿಯಿಪಾಗಳಂಬುಧಿಯ ತರಂಗದ ಬೆಂಬಳಿಯೊಳ್ಪರಿವ ವಹಿತ್ರಂಗಳಂತೆ [೩]ತುರಂಗ[೩]ದ ಬೆಂಬಳಿಯೊಳ್ಪರಿದು ಪಾಳಿವೆತ್ತ ರಥಂಗಳಿಂ, ಮತ್ತಂ ರಣರಂಗದೊಳಿದಿರ್ಚಿದ ವೀ[೪]ರ[೪]ನಂ ಸದೆದು ಬಿಸುಡುವ, ತೊಡಂಕಿದ ವೀರನನಡಂಗೆ ಪೊಯ್ವ, ವಂಚಿಸಿಪಾಯ್ವವೀರನಂ ಸಂಚಮುಱಿದೆಱಗುವ, ಕೋಲಗದೆ ನಿಂದ ವೀರನಂ ತಲೆಗಡಿದುರುಳ್ಚುವ, ಮೂದಲಿಪವೀರನಂ [೫]ತ್ರಾ[೫]ದಲೆಗಾಣಿಪ, ಮಾಯದ ವೀರನಂ ನೋಯಲಿಱಿದು ಕೆಡಪುವ, ಪರಾಕ್ರಮಕ್ಕೆ ಪಕ್ಕಾದ[೬]ಡ[೬]ವಣೆವಱಿಯ ಕಾಲ ಸರಪ[೭]ಳಿ[೭]ಯ ಬಾವುಲಿಯ ಬೊಂಬೆಯ ಭುಜಕೀರ್ತಿಮುಖದ ಬೀರ[೮]ಜೇಗಟೆ[೮]ಯ ಬೆನ್ನ ಚಮರದ, ಪಳದಿಯ ಸೀಗುರಿಯ, ಪಗಲಕೈದೀವಿಗೆಯ, ವಜ್ರದಂಕುಶದ ವಿಜಯ ಪತಾಕೆಯ, ಪುಲಿಯ ಚರ್ಮದ, ಪಲುಬಿಯ ಗಱಿಯ, ಕೋಳಕಚ್ಚಳಿಯ ಕೊಂಗಳ್ಘಂಟೆಯ, ಜೋಡುಶಂಖದ, ಜಗಜಂಪಿನ ಸತ್ತಿಗೆಯ ಪಲಬಿರುದುಗಳ್ನಿಗಳ್ತಿವಡೆಂಪಿ ಘುಡುಘುಡಿಸಿ ಜಡಿದು ಪಿಡಿದ ಕರವಾಳಕಕ್ಕಡೆಯ ಸಬಳದು[೯]ಲ್ಬ[೯]ಣದ ಕುಂತದ [೧೦]ಕೌಕ್ಷೇಯಕದ[೧೦]ಡ್ಡಣದದಡಾಯುಧದ ಮು[೧೧]ಸ[೧೧]ಲದ ಮುದ್ಗರದ ಪರಶುವಿನ ಪಟ್ಟಿಯದ ಪಾಶದಂಕುಶದ ವಂಕಿಯ ಲೌ[೧೨]ಡಿ[೧೨]ಯ ಜವದಾಡೆಯ [೧೩]ಚಾ[೧೩]ಪದ ಚಕ್ರದ ಶರದ ಶೂಲದ ಸೆಲ್ಲೆಹದ ಬಲ್ಲೆಹದ ಪೊಡರ್ಪು ಪಡಿತಳಿಸೆ ಸಿಡಿಲಪಡೆ ಕಾಲನ ಕಾಯ್ಪುಗೊಂಡು ಕಟ್ಟಾಳ್ತನಂಬೆತ್ತಂತೆ ಮಿಱಿದು ನೆರೆದ ಪದಾತಿವ್ಯೂಹದಿಂ, ಮತ್ತಂ—ಮೊರೆವ ಚಂಬಕವಱಿಯ ಮೊಳಗುವ ಪಳಹದ ಸೂಳೈಪ ನಿಸ್ಸಾಳದ ಪೂರಯಿಪ ಶಂಖದ [೧೪]ಡಮಡ[೧೪]ಮೆಂಬ ಡಿಂಡಿಮದ ಭೋರೆಂಬ ಕಹಳೆಯ ಬೊಬ್ಬಿಡುವ ಬೀರಮು[೧೫]ರ್ದ[೧೫]ಳೆಯ ಜತಿ[೧೬]ಗು[೧೬]ಡುವ ತಂಬಟದ ಬೆಂಬಳಿವಿಡಿದಬೊಂಬುಳಿಯ

೧ ಸಾಲೇರಿ (ಮೂ) ೨ ಸ (ತಾ) ೩ ರಥತುರಂಗ (ಮೂ) ೪ ರವರ (ಮೂ) ೫ ಕಂ (ಮೂ) ೬ ಕುಡ (ಮೂ) ೭ ಣಿ (ಮೂ) ೮ ಜೇಘಂಟೆ (ತಾ), ಜಾಗಟೆ (ಮೂ) ೯ ಬ್ಬ (ಮೂ) ೧೦ ಕೌಂಕ್ಷೇಯಕದ (ಧಾ) ೧೧ ಸು (ಮೂ) ೧೨ ಡೆ (ರಿ, ಮೂ) ೧೩ ಚೌ (ರಿ) ೧೪ ಢಮಾಢಮ (ತಾ) ೧೫ ದ್ದ (ಮೈ, ಮೂ) ೧೬ ಗೊ (ತಾ, ಮೂ)

ಗಿಱಿಂಬ ಗಿಱಿಗೆಟಿಯ ನಿಬಿಡತರಪಟುರಂಟನದೊಡನೆ ಘುಡಿಘುಡಿಪ ಸುಭಟ-
ಪಟಲಕಳಕಳಂ, ರಥಚಕ್ರಚಟುಲಚೀತ್ಕಾರಂ ಮತ್ತಮಾತಂಗಸಂಘಾತಸಮುದಿತ
ಬೃಹದ್ಬೃಂಹಿತಂ ತರಂಗತರಳತುರಂಗಸಂಘಹೇಷಾಸಮುದ್ಘೋಷಣಂಬೆರಸಿ ನಭೋ
ಮಂಡಳಮನಳ್ಳಿಱಿದಳುರ್ಕೆಗೊಳೆ ಸೇನಾರಜಂ ಬಾನಂಬಾಸಣಿಸೆ ಕರತಳದೊಳೊರೆ-
ಗಳೆದು ಝಳುಂಪಿಸುವ ಕೈದುಗಳ ಬಳ್ಳಿವೆಳಗು ಬಳಸಿ ಬಳೆದು ಕವಲಿಱಿದು ಕವಿಯೆ
ನೀಳ್ದ ಪತಾಕೆಗಳ ಪಸರಿಸಿದ ಪಟಪಟಲಂ ಪದ್ಮಸಖರುಚಿಯಂ ಪರಿಭವಿಸೆ ಪೆರ್ಮೆವೆತ್ತು
ಕಲ್ಪಾಂತದೊಳ್ಕವಿತರ್ಪ ಕಡಲಂತೆ ಘುಳಿಘುಳಿಸಿ ನೆನೆವ ಮನಕ್ಕಂ, ನೋಳ್ಪ ಕಣ್ಗಂ,
ನುತಿಪ ರಸನೆಗಮಸದಳಮೆನಿಸಿ ಜಗದಗಲಕ್ಕೆ ತೆಕ್ಕನೆ ತೀವಿದ ಚತುರಂಗಬಲಮಂ
ಚತುರಚಮೂಪತಿ ತೋಱಿದಾಗಳದಂ ಕಂಡು ಕೌತುಕಂಗೊಂಡಾರ್ಪುಮಿಗೆ ರಾಜ-
ಶೇಖರರಾಜೇಂದ್ರನೋಜೆಯಿಂದಾಜಿಸನ್ನದ್ಧನಾಗಿ ಯಥೋಚಿತನೈಪಥ್ಯಂದಳೆದಮಾತ್ಯ
ಸಮೇತಂ ಪಣ್ಣಿಬಂದಿಭೇಂದ್ರಮನೇಱಿ ಸಮರಸಸಮುಚಿತಸಂಭ್ರಮಂ ಮಿಗೆ ಶುಭ
ಮುಹೂರ್ತದೊಳ್ ಶಿಬಿರಕ್ಕೆ ನಡೆತರ್ಪಾಗಳ್—

ಬಳವದ್ದೋರ್ದಂಡದಂಡಾಧಿಪಮಿತವಚನಾಮಾತ್ಯರ್ಗೊಂಧೊಂಧಿಭೇಂದ್ರಂ
ಗಳನ್ನಾರ್ಪಿಂದೇಱಿ ಪಿಂದೈತರೆ ರವಿಶಶಿವಂಶೋದ್ಭವರ್ ಸದ್ವರೂಥಂ
ಗಳೊಳ್ಳೊಪ್ಪಂಬೆತ್ತು ಸುತ್ತುತ್ತೊಡವರೆ ಚತುರಂ ಚಾತುರಂಗಾನ್ವಿತಂ ಮಂ
ಜುಳಖಡ್ಗನ್ಯಸ್ತಹಸ್ತಂ ತಳರ್ದನಹಿತಸೇನಾಬ್ಜನೀಕುಂಜರೇಂದ್ರಂ ॥೧೨॥

॥ವ॥ ಮತ್ತಂ—

ಖರಖಡ್ಗಪ್ರಾಂಶುವಿದ್ಯುದ್ದ್ಯುತಿಪರಿಗೆಗಳಂಭೋಧರಂಗಳ್ಗಜಪ್ರೋ
ತ್ಕರಶುಂಭದ್ಬೃಂಹಿತಂ ಪೆರ್ಮೊಳಗು ಮಣಿರಥಶ್ರೇಣಿ ಶಕ್ರಾಯುಧಂ ಬಂ
ಧುರಮಾಗುತ್ತಿರ್ಪಿನಂ ತದ್ರಿಪುಮದದವಮಂ ನಂದಿಸಲ್‌ಬರ್ಪ ಕಾರಂ
ತಿರೆ ಬಂದಂ ಸತ್ಕದಂಬಪ್ರಹಿತಕರಕವಿಖ್ಯಾತನಾ ಭೂಮಿಪಾಲಂ ॥೧೩॥

॥ವ॥ ಅಂತು ಬರ್ಪಾಗಳ್—

ಕಮಠೇಂದ್ರಂ ತೆಕ್ಕೆಗೊಂಡೊಂದಿದ ವಿನಮಿತಕಂಠಾಹಿಪಂ ಸಿಂಬಿಯೆಂಬೀ
ಕ್ಷಮೆದೋರ್ಪಂಬೆತ್ತು ಬೆನ್ನಲ್ಲಿರೆ ಬಲಭರಮಂ ತಾಳ್ದು ಬಾಳ್ದಂ ಪತಾಕಾ
ಕ್ರಮಿತಾಕಾಶಾಧ್ವದೊಳ್ ತತ್ಪಟಪಟಲದೊಳಿಟ್ಟಾಸ್ಯಮಂ ತದ್ರಜಃ ಸಂ
ಕ್ರಮಜಾತ ಕ್ಲೇಶಮಂ ಮೇಣ್ಕಳಿದರನಿಮಿಷರ್ ನಿರ್ನಿಮೇಷಾಕ್ಷಿಗಾಗಳ್ ॥೧೪॥

---

೧ ರವಸ (ರಿ, ಧಾ, ಮೂ) ೨ ಮತ್ತಂ (ರಿ, ತಾ, ಧಾ) ೩ ಘುಡುಘುಡಿಸಿ (ಮೈ, ಮೂ)
೪ ಪ (ಮೂ) ೫ × (ಮೈ) ೬ ಪ್ಪಾ (ಮೂ) ೭ ತಾ (ತಾ)

ಬಳವಿಪುಳಕೇತು ತುಡಿಕಿದೊ
ಡಳದಿರ್ಗಳಿತಂದಿಂದು ತನ್ನೃಪಾಳನ ಮಱ[೩]ಯಂ
ಗಳಿಲನೆ ಪುಗಲ್ಕೆ ಬಂದಂ
ತೆಳೆಮುತ್ತಿನ ಮೇಘಡಂಬರಂ ಬಗೆಗೊಳಿಕುಂ ‖೧೫‖

ಮದಜಳದಿಂದೆ ಮಳ್ಗಿಪುದು ಘೂರಜಮುಂ ಗಜರಾಜಿ ವಾಜಿ ಮ
ತ್ತದನೆ ಖುರಾಗ್ರದಿಂ ನೆಗೆಪುಗುಂ ಧ್ವಜಪಜ್ತಿ ಮುಸುಂಕಿ ಸೂರ್ಯನಂ
ಪದೆದೆಳೆಮರ್ಬನುರ್ಬಿಪುದು ಮತ್ತದನಾಗಳೆ ಖಡ್ಗಕಾಂತಿ ಪೊ
ಯ್ವುದು ಬಳಿಕೆಂ[೨]ದೊ[೨]ಡೇವೊಗಳ್ವೆನಾ ಜಗತೀಶಜಯಪ್ರಯಾಣಮುಂ ‖೧೬‖

ರಿಪುದುರ್ಗಧ್ವಾಂತವಿಧ್ವಂಸನಖರಕರನೀ ಬಂದನೀ ಬಂದನನ್ಯೋ
ರ್ವಿಪಗರ್ವೋರ್ವೀಧ್ರಸಂಭೇದನಪವಿಧರನೀ ಬಂದನೀ ಬಂದನುದ್ರಿ
ಕ್ತಪರಕ್ಷ್ಮಾಪಪ್ರತಾಪೋತ್ಕದಳಕಳಭನೀ ಬಂದನೀ ಬಂದನೆಂದು
ರ್ವಿಪಟುಪ್ರಧ್ವಾನಮಂ ಬೀಱಿದುವು ಕಹಳೆಗಳ್ ಮುಂದೆ ವಿಸ್ತಾರದಿಂದಂ ‖೧೭‖

‖ವ‖ ಮತ್ತಮಾ ಸೈನ್ಯಮುದ್ಯಾನದಂತೆ ಮಹಾಗಜಾತಿಶೋಭಿತಮುಂ ರಣಾಜಿರಂಗದಂತೆ ಮನೋಗಮನವಾಜಿರಂಜಿತಮುಮಯೋಧ್ಯಾನಗರದಂತೆ ಸಮಾಶ್ರಿತಮಹಾದಶರಥಸಮಂಚಿತಮುಂ, ತ್ರಿವಿಕ್ರಮಮೂರ್ತಿಯಂತೆ ವಿಪುಳಪದಾತಿಮಂಡಿತಮುಂ, ಘನಾಗಮದಂತೆ ಜಿಷ್ಣುಚಾಪಶರಕರಕೋದಂಚಿತಮುಂ, ನಭಸ್ಥಳದಂತೆ ಸಮುಚ್ಚಾಮರಸಳಮಂಚಿತಮುಂ, ಪೃಥುಳಪುರದಂತೆ ಮಿಳಿತಘಂಟಾಧ್ವನಿಕೇತನಾಲಂಬಿತಮುಂ, ಸುರಲೋಕದಂತೆ ಮುಕ್ತಾಮಯಾತಪತ್ರಸ್ಮಿತ ವಿಭವಮುಂ, ಸಾಮ್ರಾಜ್ಯದಂತೆ ಸಮುತ್ಕೀರ್ಣಧರಾಪ್ಸರಾಗಮುಂ ಶರಧಿತಟದಂತೆ ಮಹಾಪ್ರಭಾವನೀಪಾಲಂಕೃತಮುಮೆನಿಸಿ ಸಡಗರಿಸಿ ನಡೆತಪ್ಪಾಗಳ್—

ಇದಿರೊಳ್ಕಣ್ಗೊಪ್ಪಿತಬ್ಜೋದ್ಭವನ ಭವನಮಂ ಮುಟ್ಟಿ ತತ್ಸೃಷ್ಟಿಶಿಲ್ಪ
ಕ್ಕಿದೆ ಪಾಳಿಸ್ತಂಭಮೆಂಬಂತಮರೆ ಸುರನದೀಸುಪ್ರವಾಹಂ ಪಟಂಬೋ
ಲ್ತುದಿಯೊಳ್ ಭಾಸ್ವದ್ವಿಭಾಸ್ವನ್ಮುಕುರಮಿರೆ ಸರಿನ್ನಿರ್ಝರಂ ಚಾಮರಂಬೋ
ಲ್ಪದೆದೊಪ್ಪಂಬೆತ್ತು ತೋಱುತ್ತಿರೆ [೫]ಮಣಿ[೫]ಕಟಕಖ್ಯಾತಧಾತ್ರೀಧರೇಂ[೪]ದ್ರಂ[೪] ‖೧೮‖

---

೧ ಗ (ಮೂ, ತಾ) ೨ ದ (ರಿ) ೩ ವ (ರಿ) ೪ ಮುಂ (ಮೂ) ೫ ಮೇಣೀ (ಮೈ)
೬ ದ್ರ (ತಾ); ದ್ರಾ (ಧಾ)

ಕೆಲದೊಳೆ ತಳ್ತು ಮೇವ ಮುಗಿಲೊಪ್ಪುವ ಕರ್ಣತಳಂ ರದದ್ವಯಂ
ವಿಳಸಿತವಜ್ರಶೃಂಗಯುಗಮಂತದಱಂತರದಲ್ಲಿ ಬಿಳ್ದು ನೇ
ಲ್ದೊಲೆವ ಮಹೋರಗಂ ಕರಮೊಸರ್ದುಗುವಂಬುಮದಾಂಬು ಗುಂಡುಗ
ಲ್ತಲೆ ತನಗಾಗೆ ತದ್ಗಿರಿಕರೀಂದ್ರಮದೊಪ್ಪಿತು ಕಣ್ಗೆ ಭೂಪನಾ ॥೧೯॥

॥ವ॥ ಆ ನಗದ[1]ಗ್ರ[1]ಪ್ರದೇಶದಲ್ಲಿ—

ವಿಳಸತ್ಸಂಧ್ಯಾರುಣಪ್ರದ್ಯುತಿಗೆ ರುಧಿರವಿಭ್ರಾಂತಿಯಿಂ ಬಗ್ಗವಿಂಡ
ವ್ವಳಿಕುಂ ಬಾಯ್ವಿಟ್ಟು ತತ್ಕಾಲದೊಳೊಗೆ[2]ದ[2] ಸರಕ್ತೋಡುವಂ ಬೇಡವೆಣ್ಕೈ
ದಳಮಂ ಕೊಂಡೊಯ್ದು ಕೊಯ್ಯಲ್ಕೆಳಸುವಳೆರವಣ್ಣೆಂದು ಶೋಣಾಂಶುಮನ್ಮಂ
ಡಳಮಂ ತಾಳೀಫಳಂಗೆತ್ತೆಳಸಿ ತುಡುಕುಗುಂ ಬಾಲಶಾಖಾಚರಂಗಳ್ ॥೨೦॥

ಕಟಕಚರಕರಟಿ ನಿಜ[3]ಕ[3]ಟ
ತಟ ಕಂಡೂಹ[4]ರಣ[4] ಸಮುದಪುಷ್ಕರದೆ ನಭ
ಸ್ಫುಟಶಶಿಯನಬ್ಜಮೆಂದು
ತ್ಕಟಿಸಿ ತುಡುಂಕಿದೊಡೆ ತನ್ಮದಂ ಕಱಿಯೆನಿಕುಂ ॥೨೧॥

ಹರಿಮಣಿ[5]ಯ[5]ಱಿಯೊಳ್ಮಿಱುಗು
ತ್ತಿರೆ ವೃತ್ತತೆವೆತ್ತ ದಿನಕರೋಪಲಮಿದು ಭಾ
ಸ್ಕರಬಿಂಬಮೆಂದು ಬಂದಾ
ಗರಣದ ಸಮಯದೆ ವಿಧುಂತುದಂ ಪಿಡಿವುದದಂ ॥೨೨॥

॥ವ॥ ಮತ್ತಂ—

ತಡಿಯೊಳ್ನೀರ್ಗೊಂಬ ಕಾಡಾನೆಗಳಿನಳಿಗಳಿಂ ತಳ್ತ ಕಂಜಾತದಿಂ ಜಾ
ಣ್ಬಡೆದೆತ್ತಂ ಕೂಡಿ ಕೋಲಾಹಲಮನೆಸಪ ಚಕ್ರಾಳಿಯಿಂ ಪಾಳಿಯಿಂ ಮೆ
ಲ್ನಡೆದೋರ್ಪುದ್ಯನ್ಮರಾಳಾವಳಿಯಿನೊಳಗೆ ಮೇಲ್ವಾಯ್ವ ಮತ್ಸ್ಯಂಗಳಿಂ ಪೆಂ
ಪಿಡಿದೊಪ್ಪಿತ್ತಲ್ಲಿ ಫೇನಸ್ಮಿತೆಯೆನಿಸುವ ಪೊಚ್ಚಂ ಪೊದಳ್ದೊಪ್ಪದಿಂದಂ ॥೨೩॥

ನೆಲವೆಣ್ಣ ಗಿರಿನಿತಂಬ
ಸ್ಥಲಮದು ತನಿವೆರ್ಚೆ ಕಿಳ್ತು ಕೆಲಸೂಸಿದ ಮೇ
ಖಲೆಯೆನಿಸಿ ಮೆಱಿದುದಂಬೂ
ಜ್ವಲಕಣಮುಕ್ತಾಮನೋಜ್ಞಮಾ ನದಿ ಪದಪಿಂ ॥೨೪॥

---

೧ × (ಮೂ) ೨ ದು (ಮೂ) ೩ ತ (ಮೂ) ೪ ೩ಿಯ (ತಾ) ೫ ಮ (ವ್ಯೆ).

॥ವ॥ ಮತ್ತಮಿತ್ತರಂಬಿಡಿದೊತ್ತರಿಸಿ ಬೆಳೆದ ಮರದುಱುಗಲ್ಗಿರದೆಱಗಿ ಮುಱಿವ ಕರಿಕರಕಂಜಿ ನೀರ್ವೊಕ್ಕು ನಡುಗುವಂತೆ ತೆರೆವೊಯ್ಲಿಂ ಕಂಪಿಪದಱಿ ಪಡಿನೆಳಲ್ ಪರಿರಂಜಿಸೆಯುಂ ನಡುವಗಲೊಳ್ ಕಮು[೧]ನೀ[೧]ರನೊಳೊಡವೆರೆ[೨]ದ[೨] ಬಳಲ್ಕೆಗಳೆಯಲೆಳಸಿ ಘಳಿಲನೊಳಪೊಕ್ಕು ಮೈದೊಳೆದು ನಡುನೀರೊ[೩]ಳೊ[೩]ಗೆದ ನಳಿನಮಂ ಮುಱಿಯಲೆಳಸಿ ಮಗುಳ್ದು ತೆರೆವಿಡಿದೀಸುವೆಳೆವೇಡಿತಿಯ ಗುರುತರನಿತಂಬಬಿಂಬಮಂ ಮುಳುಂಗಿ ತೋರ್ಪ ಕರಿಣಿಯ ಶಿರಂಗೆತ್ತು ತುಡುಂಕು ತೊಡರ್ಚೆ ತಡಿಯೊಳ್ನಿಂದು ನಿಳ್ಕಿನೀಡಿದ ಮದಗಜದ ಕರದ ಮಾರ್ಪೊಳಪು ನಿಜಸ್ವಚ್ಛತೆಯಿಂ ರಸಾತಳದಹಿ ಕಣ್ಗೆ ಕಾಣಿಪಂತೆ ಕಮನೀಯಮಾಗಿಯುಂ, ಪುಳಿನತಳದೊಳೆಣೆವಕ್ಕಿಗ[೪]ಳುಡಿದುಡಿದು[೪] ಸೂಸಿದ ಮೃದುಮೃಣಾಳನಾಳತಂತು[೫]ಜಾಲಕ[೫]ದೊಳೊಯ್ಯನೊಯ್ಯನೆ ರಯ್ಯಮೆನೆ ನಡೆವೆಡೆಯೊಳಡಿ ತೊಡಂಕಿ ತಡೆಗೆಡೆವ ತರುಣಮರಾಳಂಗಳಂ ಕಂಡು ಗಹಗಹಿಸಿ ನಗುವಂತೆ ಘುಳುಘುಳಿಸಿ ನೊಱೆವಿಂಡು ಪಸರಿಸೆಯುಮಾ ಪೆರ್ವೊಳೆ[೬]ಪ[೬]ರಿಯುಡುಗದ ಸಿರಿಯನೊಳಕೊಂಡು ಭೂಮಂಡಳಕ್ಕೆ ಮಂಡನಮೆನಿಸಿ ರಂಜಿಸಿರ್ಪುದದಱ ತೀರದಾ ಮಣಿಕಟಕನಗೇಂದ್ರಕಟಕದೊಳ್ನರೇಂದ್ರಕಟಕಂ ಪಾಳಿಯಿಂ ಪಾಳೆಯಂಗೆಯ್ದು—

ಚತುರಂಭೋನಿಧಿವರೆಗಂ
ಚತುರಂಗಬಲಂ ಪೊದಳ್ದು ಬಿಡೆ ಪದ್ಮಜನೇಂ
ಚತುರನೊ ತದ್ಭಾರಮನಹಿ
ಪತಿ ಪೊರಲೆಂದಂದೊಡರ್ಚಿದಂ ಬಹುಶಿರಮಂ ॥೨೫॥

॥ವ॥ ತನ್ಮಧ್ಯದೇಶದಲ್ಲಿ—

ಪಳದಿಯ ಪಚ್ಚೆಯ ಪಟ್ಟೆಯ
ತಳಿರ್ವಟ್ಟೆಯ ಗುಡಿಗಳೊಡನೆ ಬಳಸಿರೆ ಕಣ್ಗೇಂ
ತೊಳಗಿದುದೊ ನಡುವೆ ತನ್ನೃಪ
ತಿಳಕನ ನಲ್ಮೆಸುನಿವೆಸೆ[೭]ದ[೭] ಪೊಸಗೂ[೮]ಡಾ[೮]ರಂ ॥೨೬॥

॥ವ॥ ಅಂತದಱೊಳಾ ಕುಮಾರಂ ವಸಿಯಿಸಿರೆಯಿರೆ—

---

೧ ವೀ (ತಾ) ೨ ದು (ರಿ) ೩ ಳೆನೆ (ಮೂ) ೪ ಳುಡಿದು (ತಾ) ೫ ಜಾಳ (ತಾ), ಜಾಲ (ಮೂ) ೬ ಪಿ (ಮೈ) ೭ ವ (ತಾ, ಧಾ) ೮ ಥಾ (ತಾ, ಮೂ, ಮೈ).

ಆ ಸೇನಾರಜದಿಂ ಪರಿ
ಧೂಸರಮಾದುರುನಿಜಾಂಗಮಂ ತೊಳೆಯಲ್ಕೆಂ
ದೋಸರಿಸದೆ ಪೊಕ್ಕಂತಿರೆ
ವಾಸರಕರನಪರವಾರಿನಿಧಿಯೊಳ್ ಪೊಕ್ಕಂ ॥೨೭॥

॥ವ॥ ಆಗಳ್—

ಒಗೆದಿಂದ್ರಾಶಾದ್ರಿಯೆಂದೆಂಬ ವರ್ತುಳಪವಿಮಯಸ್ತಂಭದೊಳ್ ಸಂಜೆಯೊಳ್ ನೆ
ಟ್ಟಗಿದಿರ್ಚಿ ದರ್ಧಂಥಕಾರಾಸುರನನಡಸಿ ಸೀಳ್ದೊತ್ತಿ ಪಾಯ್ದೊಳ್ಗ ದಿರ್ಕೂ
ರುಗುರಿಂ ರಕ್ತಾಂಬುವಿಂ [೧]ತಾಂ[೧]ನನೆದನೆನಿಸಿ ಕೆಂಪೇಱಿ ನೈಜಾಂಶುರಕ್ತಂ
ಭಗಣಂ ತತ್ಸೀಕರಂಬೊಲ್ಮೆಱೆಯೆ ಶಶಿನೃಸಿಂಹಂ ಕರಂ ಕಣ್ಗೆವಂದಂ ॥೨೮॥

॥ವ॥ ಇಂತೊಗೆದ ಯಾಮಿನೀಪ್ರಥಮಯಾಮದಲ್ಲಿ—

ಶಿವಪಾದಾಂಭೋ[೨]ಜಮುಂ[೨]ಪೂಜಿಸಿ ಸಚಿವಸಮೇತಂ ಮಹಾಭಕ್ತಿಯಿಂ ಭ
ದ್ರವಿಳಾಸಂಬೆತ್ತು, ನಾನಾರಣಕರಣಜಯೋದ್ಯೋಗಪೂಗಪ್ರಸಂಗೋ
ತ್ಸವದಿಂ ಮಾತಂಗವಾಜಿಪ್ರತತಿವಿತ್ತ[೩]ತ್ತ[೩]ಸಲ್ಲಕ್ಷಣಾಲಾಪದಿಂ ಶ
ಸ್ತ್ರವಿಶೇಷಾಸ್ತ್ರಪ್ರಪಂಚಪ್ರವಚದೆ ನಿ[೪]ಸೆ[೪]ಯಂ ನೂಂಕಿದಂ ಮಂತ್ರಲಕ್ಷಂ ॥೨೯॥

ಮನಸಿಜನಿಭಂಗೆ ಸತ್ಯೇಂ
ದ್ರನರೇಂದ್ರತನೂಭವಂಗೆ ಪೂರ್ವಾಂಗನೆ ಪೆಂ
ಪಿನೊಳೆತ್ತಿದ ವಿಜಯಾರತಿ
ಯೆನೆ ಕೆಂಪಿಡಿದರ್ಕಬಿಂಬಮುದಯಿಸಿತಾಗಳ್ ॥೩೦॥

॥ವ॥ ಆ ಸಮಯದೊಳಾ ರಾಜಶೇಖರಂ ರಾಜಶೇಖರಪೂಜೆಗೆಯ್ದು ಯಥೋಚಿತಪ್ರಾತರಾಚಾರಮಂ ನಿರ್ವರ್ತಿಸಿ ಮಿತವಚನನೊಡನೇಳ್ದು ನಡೆಗೊಂಡು ದಂಡನಾ[೫]ಥ[೫]ಮುಖಮಂಡಲಮಂ ನಡೆನೋಳ್ಪುದುಂ ತದ್ಭ್ರೂವಿಕ್ಷೇಪಣಪ್ರೇರಿತಂ ಮೇಘನಾದನಾದರದಿಂ ಬಂದು ಸಮರಸನ್ನಾಹಭೇರಿಯಂ ಪೊಂಗುಡುಪಂ ಪಿಡಿದಡಸಿ ಪೊಡೆಯಲೊಡನೆ—

೧ ತಾ (ಮೂ, ಧಾ, ಮೈ) ೨ ಜಾತಮುಂ (ಮೂ) ೩ ತಿ (ರಿ) ೪ ಸಿ (ತಾ, ಮೂ, ಧಾ, ಮೈ)
೫ ಥನ (ಧಾ)

ದಿಗಿಭಂಗಳ್ಕಡುಬೆರ್ಚೆ[1]ಕರ್ಚೆ[1]ರಿಪುವರ್ಗಂ ಪುಲ್ಗಳಂ ತಾಯ್ಮಣ
ಲ್ಪೆಗೆವಂತಬ್ಧಿ ತುಳುಂಕೆ ಶಂಕೆಮಿಗೆ ದಿಕ್ಪಾಲರ್ಕರಂ ಬಳ್ಕೆ ಪ
ನ್ನಗರಾಜಂ ಪೆಡೆತರ್ಗೆ ಕುರ್ಗೆ ಕುಳಭೂಭೃನ್ಮಸ್ತಕಂ ಸೀಳೆ ಧಾ
ತ್ರಿಗೆ ತಾಂ ಪರ್ಬಿದುದುರ್ಬಿ ದಾಂಧಳಧಳಸ್ಫಾರೋರುಭೇರೀರವಂ ॥೩೧॥

ಆ ರವಮಂ ಜಳಧರರದ ಮ
ಹಾರವಮಂ ಕೇಳ್ದ ಸಿಂಹದಂತಿರೆ ಕೇಳ್ದಾ
ಧೀರೋತ್ತಮಸಿಂಹಳಧರ
ಣೀರಮಣಂ ಕೆರಳ್ದು ನೋಡಿದಂ ನಾಲ್ದೆಸೆಯಂ ॥೩೨॥

॥ವ॥ ಅಂತು ನೋಳ್ಪಾಗಳ್ ನಿಜಸಭಾಸದರೆಲ್ಲರ[೨]ದ್ಭು[೨]ತಾಕ್ರಾಂತಸ್ವಾಂತರಾಗಿ-ರ್ಪಿನಮೊರ್ವ ಚರಂ ತ್ವರಿತಗತಿಯಿಂ ಬಂದು—

ದಡದಡಿಘಡಿ ಪಡಿಮಾತಂ
ಪಡೆಯಲೊಡರ್ಚುವ ಮನಂ ತಡಂಬಡಿಪ ತಳರ್
ನುಡಿಯುಡಿಗಡಿಗೊಡನೊಡನಿ
ಟ್ಟೆಡೆಗೊಂಡಿರೆ ನುಡಿದನಾಗಳಾ ಚರಮುಖ್ಯಂ ॥೩೩॥

"ಎಲೆಎಲೆ ದೇವದೇವ ಪಿರಿದದ್ಭುತಮದ್ಭುತಮೇನನೆಂದಪೆಂ,
ನೆಲನಿರದೀದುದೋ, ದೆಸೆಯೆ ತಾಂ ಬೆಸಲಾದುದೊ, ಪೆತ್ತುದೋ ನಭಂ,
ಬಲಮಿದೆ ಬಂದುದದ್ರಿ ಪುಡಿಯಪ್ಪಿನಮುಗ್ಗದರಣ್ಯಮೆಲ್ಲಮುಂ
ನೆಲಸರಿಯಪ್ಪಿನಂ ಘನತರಂಗಿಣಿ ಪಂಕಿಳಮಾಗುತಿರ್ಪಿನಂ" ॥೩೪॥

॥ವ॥ ಅದೆತ್ತ[೩]ಣ[೩]ದೆಂಬುದುಮಾತನಿಂತೆಂದಂ—

"ಚತುರಂಭೋಧಿಪರೀತಭೂತಳದ ಭೂಪರ್ ಕಪ್ಪಮಂ ತರ್ಪರು
ದ್ಧತವೃತ್ತಪ್ರಭವಿಷ್ಣುಸಿಂಹಳನದೆಂದುಂ ತೆತ್ತನಲ್ಲೆಂದು ಪೇ
ಳೆ ತದುದ್ಯದ್ಗಣಕಾಳಿ ಕೇಳ್ದು ಕೆರಳ್ದಾ ಸತ್ಯೇಂದ್ರಚೋಳೇಂದ್ರಚಂ
ದ್ರತನುಪ್ರೋದ್ಭವರಾಜಶೇಖರನರೇಂದ್ರಂ ಬಂದಪಂ ಭೂಮಿಪಾ ॥೩೫॥

॥ವ॥ ಎಂ[೪]ಬ[೪] ಮಾತಂ ಕೇಳ್ದತ್ಯಂತಕೋಪಾರೂಢನಾಗಿ—

೧ × (ಮೂ) ೨ ರ್ಭು (ತಾ) ೩ ಣ್ತು (ಮೈ, ಮೂ) ೪ ದ (ಮೂ)

ಕುಡಿನಿಮಿರ್ದ ಪುರ್ಬುಕುಣಿವು
ತ್ತೊಡನಿರೆ ನೆಱೆಮುರಿದು ಮೀಸೆಯಂ ಕಣ್ಗಳ ಕೆಂ
ಗಿಡಿ ಸಾಲಿಡೆ ಕರವಾಳಂ
ಜಡಿದಂತೆಂತೆಲವೊ ಮಗುಳ್ದು ಪೇಳೆನುತೆಳ್ದಂ ॥೩೬॥

॥ವ॥ ಅಂತೆಳ್ದು ನೆಲನದಿರೆ ಗಜರಿ ಗರ್ಜಿಸಿ—

ತಾಂ ಗಡ ಶೂರಂ ಗಡ ಕ
ಪ್ಪಂಗೊಡೆನಾಂ ಗಡ ಕನಲ್ದು ಬರ್ಪಂ ಗಡ ಯು
ದ್ಧಂ ಗಡ ಗೆಲ್ಲಂ ಗಡ ಬಳಿ
ಕಂ ಗೆಲ್ಲದೇಕಿರ್ಪನಿರ್ಪನಮಮ ಸಮರ್ಥಂ ॥೩೭॥

ಲಾಳನನಿಕ್ಕಿ ಮಾಳವನನಳ್ಕಿಸಿ ಗೂರ್ಜರನಂ ಪೊರಳ್ಚಿ ಪಾಂ
ಚಾಳನನೊತ್ತಿ ಮಾಗಧನನರ್ದಿಸಿ ಕೊಂಕಣನಂ ತೆರಳ್ಚಿ ನೇ
ಪಾಳನನಟ್ಟಿ ಕೇರಳನನೋಡಿಸಿ ಬರ್ಬರನಂ ಕಲಂಕಿ[೧]ದೀ[೧]
ಚೋಳನ ಚನ್ನಪನ್ನತಿಕೆಯುನ್ನತಿ ಕೊಳ್ವುದೆ ಸಿಂಹಳೇಂದ್ರನೊಳ್ ॥೩೮॥

॥ವ॥ ಎಂದು ಮತ್ತಮಿಂತೆಂದಂ—

ನಿಜಭುಜದರ್ಪಮಂ ಮುಱಿವೆನೆನ್ನದಟಂ ತವೆ ತೋರ್ಪೆನಾಂತ ತ
ಧ್ವಜಿನಿಯನಿಕ್ಕಿ ಭೂತಗಣಕೌತಣಮಂ ಮಿಗೆ ಮಾಳ್ಪೆನಪ್ಸರೋಂ
ಬುಜಮುಖಿಯರ್ಕಳಿಷ್ಟಮನೊಡರ್ಚುವೆನಾಗಸದೊಳ್ ನಿರೀಕ್ಷಿಪ
ಬ್ಜಜಭವನಕ್ಷಿಗಳ್ಗೆ ನವಕೌತುಕಮಂ ರಣದೊಳ್ ನಿಮಿರ್ಚುವೆಂ ॥೩೯॥

ಇಂತೆಂದತ್ಯಂತರೋಷಾವೃತಮತಿಯದಟಿಂದೆಳ್ದು ಭೇರೀರವಂ ದಿ
ಕ್ಕಾಂತಾಸ್ವಾಂತಾತಿಭೀತಪ್ರದಮೆನಿಸೆ ತದಂಭೋಧಿಯಿಂದ[೨]ಬ್ಧಿಯೊಂ[೨]ದೇ
ಳ್ದಂತುದ್ಯತ್ಸೇನೆ ಕೋಲಾಹಲಮನೆಸಗಿ ಕೂಡಿರ್ಪಿನಂ ಕೂರ್ಪಿನಿಂ ಭೂ
ಕಾಂತಾವ್ರಾತಾವೃತಂ ಪೆರ್ವಡಗನಡರ್ದು ತತ್ಸಂಯುತಂ ಬಂದನಾಗಳ್ ॥೪೦॥

ಅಂತೇಳ್ತಂದಪರಿಮಿತಬಲಜಲಧಿಯಂ ಕಳಿದು ನೆಲನೆಲ್ಲಮನಳುರ್ಕೆಗೊಂಡು ಘುಳು
ಘುಳಿಸಿ ರಯದಿಂ ಪರಿತರ್ಪಾಗಳ್—

---

೧ ದಿರ್ (ಮೈ) ೨ [ಬ್ದ ಮೊ?]

ದಿಗಿಭಂಗಳ್ಬೆಗಡೊಂದೆ ಭಾನುರಥದಶ್ವಂ ಬೆರ್ಚೆ ಪಾತಾಳಪ
ನ್ನಗರಳ್ಕುತ್ತಿರೆ ಖೇಚರರ್ಬೆದಱಿ ಮತ್ತೇಭಪ್ರತಾನಂ ತುರಂ
ಗಿಗಣಂ ತೇರ್ಗಳ ಪಂಙ್ತಿ ಪಾದಚರಬೃಂದಂ ಬೃಂಹಿತಂ ಹೇಷಿತಂ
ಪ್ರಗತಂ ಚೀತ್ಕೃತಿ ಬೊಬ್ಬೆಯುರ್ಬ್ಬಿರೆ ಕರಂ ಸಾಲ್ಗೊಂಡದೇಂ ಬಂದುದೋ ॥೪೧॥

ಖರರುಚಿಬಿಂಬಮಂಬರಧುನೀತರುಣಾಂಬುಜದಂತೆ ತೋಱೆ, ವಿ
ಸ್ಫುರಿತಪತಾಕೆ ಮೇಲಲೆಯೆ ಸೂಸುತೆ ಪರ್ಬಿದ ತದ್ರಜಕ್ಕೆ ತಾಂ
ದೊರೆಯೆನಿಸುತ್ತೆ,ಸುತ್ತಿಡಿದು ಸಾಸಿರಕಣ್ಬುಗೆ ಸೈನ್ಯರೇಣುವಿಂ
ಧಿರನಿರದಂತ[1]ಱಿಂ[1] ಬಲವಿರೋಧಿಸಮಾಹ್ವಯಮಾಂತನಾಗನೇ ॥೪೨॥

ಗಗನಗಹನದೊ[2]ಳೆ[2]ಗಮಿಯಿಪ
ಖಗಕ್ಕೆ ಪತ್ತಿಂದ್ರಧೀವರಂ ಬೀಸಿದ ರೇ
ಣುಗಣ ನವಜಾಲ[3]ಕೊ[3]ಳಗಾ
ಯ್ತೊಗುಮಿಗೆಯಿಂದನಿಮಿಷಪ್ರತಾನಂ ಚಿತ್ರಂ ॥೪೩॥

॥ವ॥ ಅಂತೇಳ್ತಂದದ್ಭುತಂ ಮಿಗೆ ತತ್ಸೈನ್ಯಮನತಿದೂರದೊಳ್ದಿರ್ಕೆ ಬಿಟ್ಟಿರ್ಪುದು-
ಮುಭಯಬಲಚಮೂಪತಿನಿಯಾಮಿತರ್ ಸಮರಸನ್ನಾಹಭೇರಿಯಂ ತಂತ್ರಾಧ್ಯಕ್ಷರ್
ಕಡಂಗಿ ಪೊಡೆದಾಗಳ್—

[4]ಬ[4]ಳೆದು ನೆಗೆತಂದು ದಾಂಧಳ
ಧಳಂಧಳಧ್ವನಿಯುಳುರ್ಕೆಗೊಳೆ ಶಬ್ದಗುಣಂ
ತಿಳಿಪೊಡದಕಾಯ್ತು ಗಗನ
ಸ್ಥಳಿಗಲ್ಲದೊಡಲ್ಲಿ ಶಬ್ದಮೇಂ ಸಮನಿಕುಮೋ ॥೪೪॥

॥ವ॥ ಅನಂತರಮಿಂತಳವಿಗಳಿದ ಕಳಕಳಮನೊಳಕೊಂಡೊಡ್ಡಿ ನಿಂದುಭಯ
ಬಲದೊಳ್ಳುಭಯಬಲಾಧ್ಯಕ್ಷರ್ ಕಡಂಗಿ ಕೈವೀಸಿದಾಗಳ್ ಪ್ರಚಂಡಪ್ರತಾಪಮಂಡಿತರು
ದ್ದಂಡಕೋದಂಡದಂಡಮನಡಸಿ ಪಿಡಿದು ಜೇವೊಡೆದು ಪಿಂಗದೆ ಮುಂಗಡೆಗಾಂತು
ತಱಿಸಂದು ನಿಂದು—

ಡೊಣೆಯಿಂ ಕಣೆಯಂ ತೆಗೆತೆಗೆ
ದಣಿಯರಮನೆ ಪೂಡಿ ನೋಡಿ ಗುಱಿಯಂ ಮಣಿಕಾಲ್
ಮಣಿಯೆ ಭುಜಮೊಗೆಯೆ ಕುಂಡಲ
ಮಣಿ ಕುಣಿಯೆ ಧನುರ್ಧರರ್ಕಳದಟಿಂದೆಚ್ಚರ್ ॥೪೫॥

---

೧ ಱಿಂ (ಮೂ) ೨ ಳು (ಮೂ) ೩ ಕ್ಕೊ (ಮೈ) ೪ ಬೆ (ತಾ).

ಹೊಂಕೃತಿ ಬಿಲ್ಗಾಱರ ಗುಣ-
ಠಂಕೃತಿ ಚಾಪಪ್ರ[1]ಮು[1]ಕ್ತಶರನಿಕರಮಹಾ
ಭೀಂಕೃತಿ ನೋಳ್ಪಮರರ್ಗೆ ಭ
ಯಂಕೃತಿಗೆಯ್ದುದು ತದೀಯರಣಭೂತಳದೊಳ್ ॥೪೬॥

ನೆ[2]ಱೆ[2]ನುರ್ಚಿಪಾಯ್ದು ನೆತ್ತ
ತ್ತುಱುಗೆ ಪರಿಕ್ಷುಬ್ಧಬಲಜಲಧಿಯೊಳ್ಕೆಂಬಾ
ವುಱೆ ಮೊಱೆದು ಪಱೆವ ತೆಱದಿಂ
ಗಱಿಗಣೆ ನೆಱೆ ಮೊಱೆದು ಪಱಿ[3]ದು[3]ವೆರಡುಂ ಬಲದೊಳ್ ॥೪೭॥

ಅಂಬೆರ್ದೆಯನುರ್ಚೆ ಕಿಳ್ತುದ
ಱಿಂ ಬಳಿಕೆಚ್ಚವನನೊರ್ವ[4]ನಿಸೆ[4]ಕೊಂದುದು ತಾ
ನೆಂಬಾಗಳಾತನಂ ಗುಣ
ಮಂ ಬಿಟ್ಟತಿಚಪಳರಲ್ಲಿ ಗುಣಮಱಸುವುದೇ ॥೪೮॥

ಅರಿಗಳಸುಪವನನಂ ತಾ
ನಿರದೊಳಕೈದಾಶುಗತ್ವಮಂ ಪ್ರಕಟಿಸಿದ
ತ್ತರರೆ ಶರಮನ್ಯರೊಡನೊಂ
ದಿರೆ ತದ್ಧರ್ಮಂ ಧರಿತ್ರಿಯೊಳ್ದೊರೆಕೊಳದೇ ॥೪೯॥

ಎಡೆಯೊಳೆ ಬರ್ಪ ಬಾಣಮನೆ ಖಂಡಿಪ ಚಾಪಮನೆರ್ಚು ತೊಟ್ಟನಿ
ರ್ಕಡಿಯನೆ ಮಾಳ್ಪ ತೊಟ್ಟ ಬೆರಲಂ ತವೆ ತುಂಡಿಪ ಬಿಲ್ಲಬಿನ್ನಣಂ
ಬಿಡದೆಡೆಗೊಂಡ ಧನ್ವಿಜಯಮೆಚ್ಚೊಡೆ ಪಾಯ್ದುದು ಪಾಱಿದತ್ತು ತ
ಳ್ತಡಸಿದುದುರ್ಚಿ ನಟ್ಟುದೊಡನಿಕ್ಕಿದುದುರ್ಕಿದ ಶೂರರಂ ಶರಂ ॥೫೦॥

ತಳಿರೊಡೆದಸುಗೆಗಳೊ ದವಾ
ನಳ[5]ನ[5]ಡಸಿದ ಪಾದಪಂಗಳೋ ಪೇಳನೆ ಕಂ
ಗೊಳಿಸಿದರುರು ಶರಹತಿಪರಿ
ಗಳಿತಕ್ಷತಜಾತಕಲಿತಕಾಯರಜೇಯರ್ ॥೫೧॥

---

೧ ಯು (ತಾ) ೨ ರೆ (ಮೂ) ೩ ದ (ಮೂ) ೪ ಸಿನೆ (ಮೂ) ೫ ವ (ಮೂ)

॥ವ॥ ಇಂತು ಕಡುಗಲಿತನಂ ಕೈಮಿಕ್ಕು ಕಾದುವ ಧನುರ್ಧರರ ಕಡುಂ[೧]ಪಂ[೧] ಕಂಡು ಕಡುವಹಿಲದಿಂ ಕಾಯ್ಪೇಱಿ ಖಡ್ಗಮಂ ಪಿಡಿದೊಡ್ಡುಗೊಂಡಡ್ಡಣಕಾಱರಾರ್ದು ಸಾರ್ದು ಸಂರಂಭಸಂಭ್ರಮಮಿಂಬುವಡೆಯೆ ತಡೆಯದೆ ಪಡಿತಳಿಸಿಗೊಂದಣಿಸಿ ನಿಂದು—

ಪೊಡೆಯೆ ಕಡಿವಡೆದ ರುಂಡಮ
ನೆಡಗೈಯಿಂದಡಸಿ ಪಿಡಿದು ಬಿಡದುದ್ಧರಿಸು
ತ್ತೊಡನೆ ನಡೆದಿಕ್ಕಿದನನಿ
ರ್ಕಡಿಗೆಯ್ವಭಟರ್ಕಳಮರರಂ [೨]ಮಚ್ಚಿ[೨]ಸಿದರ್ ॥೫೨॥

॥ವ॥ ಅದಲ್ಲದೆಯುಂ—

ಕರತಳಖಡ್ಗಮಂ ಜಡಿದು ಪಾಂಗಱಿದಡ್ಡಣಮೊಡ್ಡಿನಿಂದು, ಖೇ
ಚರರರಿದೆಂಬಿನಂ ಪೊಡೆವ,ಪೊಯ್ವ, ತಱಿಂಬುವ,ಘಟ್ಟಿಮಾಳ್ಪ, ಮುಂ
ಬರಿ[೩]ವ[೩],ಮ[೪]ರ[೪]ಳ್ಚುವಬ್ಬರಿಪ,ಗ[೫]ರ್ವಿರ್ಜ[೫]ಪ ಬೊಬ್ಬಿರಿವಾರ್ವ, ಪೋರ್ವ, ಮೊ
ಗ್ಗರಿಪ ತೊಡಂಕುವಗ್ಗಲಿಪ,ಬಿನ್ನಣಮೊಪ್ಪೆ ಕಡಂಗಿ ಕಾದಿದರ್ ॥೫೩॥

॥ವ॥ ಮತ್ತಮಲ್ಲಿ—

ಅಡ್ಡಣಮೊಡ್ಡಿದ ಕಾರ್ಮುಗಿ
ಲೊಡ್ಡಣಮಿರದಿಱಿದು ವಂಚಿಪಸಿಮಿಂಚುವ ಮಿಂ
ಚೆಡ್ಡಮೆನಿಸಿರೆ ಸಿಡಿಲ್ವಡೆ
ಯೊಡ್ಡೆನೆ ಘುಡುಘುಡಿಸಿ ಕಾದಿದರ್ ಕಲಿಸುಭಟರ್ ॥೫೪॥

ಕರವಾಳ್ಮುಱಿವೊನೆಗೊಂಡು
ರ್ಚಿರೆ ಬೆನ್ನೊಳ್ಕೂಡೆ ನಡೆದು ತೊಡರ್ದಿರೆ ಬಿಡದೊ
ರ್ವರೊಳೊರ್ವರ್ ಮುಷ್ಟಾಮು
ಷ್ಟಿರಣಂ ನೆಗಳ್ದುದು ನಖಾ[೬]ನಖೀಸ್ಫುಟ[೬]ಯುದ್ಧಂ ॥೫೫॥

ಕರತಳದ ಹರಿಗೆ ಕವಿದೊ
ಪ್ಪಿರೆ ಖರ್ಪರದಂತೆ ಮೇಲೆ ಬಲರೇಣುಧರಾ
ಭರಮಂ ಪೊಱಲುಜ್ಜುಗಿಪು
ದ್ಧುರ ಕೂರ್ಮನನೊರ್ವನಡಿಯೊಳನುಕರಿಸಿರ್ದಂ ॥೫೬॥

---

೧ ಪು (ರಿ) ೨ ಮೆಚ್ಚಿ (ತಾ); ಮರ್ಚಿ (ಮೈ) ೩ ದು (ಮೂ) ೪ ರು (ಧಾ) ೫ ರ್ಜ (ಮೈ. ಕ. ತಾ) ; ರ್ಜಿ (ಮೂ) ೬ ನಖಿಯಂ (ಮೈ)

ಕರುಳದು ಪೊಡೆಯಿಂ ಪೊಱಸೂ
ಸಿರೆ ಸೂಸದೆ ಶೌರ್ಯಮುರ್ವಿ ಕರವಾಳಿಂ ಪೊ
ಯ್ದರಿಯನಿಱದಿಕ್ಕಿ ಮಿಕ್ಕ-
ರ್ಕರುಳಿಲ್ಲದ ಕಲಿತನಕ್ಕೆ ಪಕ್ಕಾಗಿರ್ದರ್ ॥೫೭॥

॥ವ॥ ಆಗಳಂತದಂ ಕಂಡು ಸಮರಸಮುತ್ಸುಕಾಂತ[1]ರಂಗಿಗಳ್ ತುರಂಗಿಗಳ್[1] ತುಂಗತುರಂಗಸಂಘಮಂ ಪಿಂಗದೆ ಮುಂಗಡೆಗೆ ಸಂಗಡಿಸುತೊಡನೆ ಘುಡುಘುಡಿಸು ತೊಡಮಡಸನ್ನೆಯಿಂದೌಂಕಿ ನೂಂಕಿದಾಗಳ್—

ಕುಳಿಗೊಳಿಸಿ ಕೊ[2]ಳ[2]ಗಿನಿಂ ಕೊಳು
ಗುಳದಿಳೆಯಂ ನೆಗಪಿ ಮಿಗೆ ತದುದ್ರಜಮಂ ಬಾಂ
ಬೊಳೆಯಂ ಕದಡೇಳಿಸಿ ಮೇ
ಣ್ಕೆಳಿರ್ದತಿರಯದಿಂದೆ ಪರಿ[3]ದುವ[3]ಲ್ಲಿ ಹಯಂಗಳ್ ॥೫೮॥

॥ವ॥ ಅಂತುಮಲ್ಲದೆಯುಂ—

ಶರಧಿಮಥನದೊಳೆ ನೊರೆಗಳ
ನೆರವಿಯನಿರದಾಂತು ಪರಿವ ತೆರೆಗಳ ಸಿರಿಯಂ
ಧರಿಸಿ ಪರಿದುದು ತುರಂಗೋ
ತ್ಕರಮಾನೆನಫೇನಖಂಡಷಂಡದಿನಾಗಳ್ ॥೫೯॥

ಒಟ್ಟಜೆಯಿಂ ಪೆಗಲೊಳ್ತಿಗೆ
ದಿಟ್ಟಗ್ಗದ ಪಟ್ಟೆಯಂಗಳಂ ಝು[4]ಳಿ[4]ಪಿಸಿ ಬೊ
ಬ್ಬಿಟ್ಟಡಸಿ ಪೊಕ್ಕು ಮಿಕ್ಕಾ
ರ್ದಿಟ್ಟಣಿಸಿ ಪಳಂಚಿದರ್ ತುರಂಗಿಗಳದಱ[5]ೊಳ್ ॥೬೦॥

ಕಿಡಿನೆಗೆ[5]ವ[5] ಕಣ್ಗಳೆತ್ತಿದ
ಕಡುಗಂ ಕಡುಗರ್ಕಿದೌಡು ಗಂಟಿಕ್ಕಿದ ಪು
ರ್ಬಡಿಗಡಿಗೆ ಕುಣಿವ ಮೀಸೆಗ
ಳೊಡನೊಡನೆ ಭ[1]ಯಾ[1]ವಹಂ ಹಯಾರೋಹಕರಾ ॥೬೧॥

---

[1] ತುರಂಗಿಗಳ್ (ತಾ); ತರಂಗಿಗಳ್ (ಪ್ರೈ) [2] ಳು (ರಿ) [3] ದ (ಮೊ) [4] ಳು (ಮೂ) [5] ದ (ಮೂ), ಯ (ಮೂ)

[೧]ಒ[೧]ಡೆದುಡಿವಂತೆ [೨]ಪೊ[೨]ಯ್ದು ಕರಖೇಟಕಮಂ ಪೊಡೆದಿಕ್ಕಿ ಸೀಸಕಂ
ಪುಡಿಪುಡಿಯಪ್ಪಿನಂ ಕಡಿದು ಕಂದಮನಿರ್ಕಡಿಗೆಯ್ದು ವಾಜಿಯಂ
ಸಿಡಿಯೆ ಶಿರಂ ಕಱು[೩]ತ್ತು[೩] ತಱಿದಬ್ಬರಿಸುತ್ತತುಳಪ್ರತಾಪಮೊ
ಗ್ಗಡಿಸಿದವೋಲ್ ತುರಂಗಿಗಳಿರಳ್ಬಲದೊಳ್ಕಡುಪಾಂತು ಕಾದಿದರ್ ॥೬೨॥

ಎರಡುಂ ಬಱಿಗಳ ಪೊಂಬ
ಕ್ಕರಿಕೆಗಳೊಳ್ತುಱುಗಿ ನಟ್ಟು ಗಱಿಗಣೆ ಗಱಿಯಂ
ತಿರೆ ಪುರುಷೋತ್ತಮರೇಱಿದ
ತುರಂಗತತಿ ಗರುಡಬಳಮನೇ[೪]ನಿ[೪]ಳಿಸಿದುದೋ ॥೬೩॥

ನಿಡುನೇ[೫]ಜೆ[೫]ಯದಿನದೊರ್ವಂ
ಜಡಿದಿೞಿದೆತ್ತಿದೊಡೆ ಮತ್ತ[೬]ವಂ[೬] ಕರವಾಳಿಂ
ಪೊಡೆದಂ ಮೇಗಣಿನಾ ಮೊನೆ
ವಿಡಿದಿಳಿತಂದವನನಾ ತುರಂಗಸಮೇತಂ ॥೬೪॥

॥ವ॥ ಅಲ್ಲಿ ನಡೆ[೭]ಸೂ[೭]ಲಂಗಳಂ ಪಿಡಿದು ನಡೆವಂತೆ—

ನೇ[೮]ಜೆ[೮]ಯದಿಂದಿೞಿದೆತ್ತಿ ನಿ
ಜೌಜಮನೆ ಬಿಡೌಜಸರ್ಗೆ ತೋರ್ಪಂತಸುಹೃ
ದ್ರಾಜಿಯನೆ ವಾಜಿವಾಹಕ
ರಾಜಿ ಮಹಾಜಿಯೊಳೆ ತಳರ್ದುದದ್ಭುತಮೊಗೆಯಲ್ ॥೬೫॥

॥ವ॥ ಇಂತು ತಕ್ಕುಗೆಡದೆ ಮಿಕ್ಕು ಪೊಕ್ಕುಪೊಣರ್ವ[೯]ಸಗರ್ವಗಂಧರ್ವ[೯] ವಾಹಕಸಮೂಹದ ಸಾಹಸದಾಹವದ ಮೋಹರಮಂ ಕಾಹುರದ ಮೋಡಿಯಿಂ ನೋಡಿ ನೀಡುಂ ತೋಡಿಲ್ಲದ ಪಾಡುಪಂಥಂಗೊಂಡು ಸಮ್ಮದಂಮಿಗೆ [೧೦]ಸ[೧೦]ಮ್ಮುಖದ ಧೀರಸಾರಥಿಯಂ ಪುರ್ಬಿಂ ಜರ್ಬಿ ಜವಂಗೆಡದುಭಯಬಲವರೂಥಿಗಳ್ ನಿಜವರೂಥಯೂಥಂಗಳಂ ಪಿಂಗದೆ ಮುಂಗಡೆಗಾಂತಿದಿರ್ಚಿ ಸಾರ್ಚಿ ಪರಿಯಿಪಾಗಳ್-

೧ ಕ (ಮೂ) ; ಒದೆ (ತಾ) ೨ ಪಾ (ಮೂ) ೩ ತ್ತೆ (ತಾ) ; ಬ್ತು (ಮೂ) ೪ ನೇ (ಮೂ, ತಾ, ಧಾ) ೫ ಜಿ (ತಾ) ೬ ಮಾ (ಮೂ) ೭ ಶೂ (ತಾ, ಮೂ) ೮ ಜಿ (ತಾ) ೯ ಗಂಧರ್ವ (ಮೈ) ೧೦ ಸಸ (ಮೂ)

ಕಾಲನ ಕಲ್ಲಗಾಣದ ಸಮುದ್ಗತಚೀತ್ಕೃತಿಯಂತೆ ಪೊಣ್ಮೆ ಪೆ
ರ್ಗಾಲಿಯ ಚೀತ್ಕೃತಿಧ್ವನಿ ತಮುದ್ಭಟಹೂಂಕೃತಿಯಂತೆ ತಾಡಿ ತ
ಜ್ಯಾಲತೆಯೊಂದು ಠಂಕೃತಿ ವಿಜೃಂಭಿಸೆ ಮೃತ್ಯು ಬಹುತ್ವಮಾಂತವೋ
ಲ್ಸಾ[೧]ಲಿ[೧]ಱಿದೊತ್ತಿದರ್ ಸಮರಪೂರ್ಣಮನೋರಥರಾ ಮಹಾರಥರ್ ॥೬೬॥

॥ವ॥ ಅಂತು ನಿಜರಥಂಗಳನೊತ್ತುತಿದಿರ್ಚಿ ನಿಂದು—

ಜೋಡಿಸಿದಶ್ವಕಂಧರಮನೊಂದೆ ಶರಾಗ್ರದೆ ಖಂಡಿಪಂತೆರ
ಳ್ಮಾಡುವ ನೀಳ್ದ ಕೇತುಮಣಿ[೨]ದಂ[೨]ಡಮನೊಡ್ಡಿದ ಸೂತವಕ್ಷಮಂ
ತೋಡುವ ಮೇಘಡಂಬರಮನಿರ್ಕಡಿಮಾಳ್ಪ ಪೊದಳ್ದ ಲೋಹದೊಳ್
ಜೋಡನಡರ್ತು ತುಂಡಿಪ ವರೂಥಿಗಳೊ[೩]ಟ್ಟ[೩]ಜೆಯಿಂ ಪಳಂಚಿದರ್ ॥೬೭॥

ಗಱಿಗಣೆಗಳ್ಕೆಱಿನುರ್ಚಿದ
ತೆಱಿಪೊ[೪]ಳ್ಬೊ[೪]ಱಿ[೫]ಪಾ[೫]ಯ್ದು ರಕ್ತರಸಖಂಡಂಗಳ್
ತುಱುಗಿರೆ ವರೂಥಿಗಳ್ಕೆಱಿ
ಮೆಱಿದರ್ಕುಸುಮಿತ ಜಪಾಕ್ಷಿ[೬]ತೇ[೬]ಜಂಗಳ್ವೋಲ್ ॥೬೮॥

ಕಣೆ ಪಣೆಯೊಳ್ನಡೆ ಕಿಳ್ತಾ
ಕಣೆಯಿಂದೆಚ್ಚವನ ಪಣೆಯನೊಡನಿಸೆ ಕಿಳ್ತಾ
ಕಣೆ[೭]ಯಂ[೭] ಮೊದಲಂತೆವೊಲಾ
ಪಣೆಯೊ[೮]ಳ್ನಾಂ[೮]ಟಿಸಿದನವನದೇಂ ಬಿನ್ನಣಿಯೋ ॥೬೯॥

॥ವ॥ ಇಂತ[೯]ದಿ[೯]ರದಿದಿರ್ಚಿ ಪೊಣರ್ಚುವ ವರೂಥಿಗಳ ತಂಡದ ಗಂಡುಗೊಂಡ[೧೦]ಬಂ[೧೦]ಡಣಮಂ ಕಂಡು ಪಿಂಡುಗೊಂಡು ಮಂಡಳಿಸಿ ದಂಡಿ[೧೧]ಗಾಂತ[೧೧] ಚಂಡಗಜಾರೋಹಕರುದ್ದಂಡವೇದಂಡಂಗಳನಳಂಕೆವೆತ್ತಂಕುಶಮನಿಕ್ಕಿ ಜಂಕಿಸಿ ಭೋಂಕನೆದಾರ್ದು ಸಾರ್ದೌಂಕಿ ಕೂಂ[೧೨]ಕಿ[೧೨] ನೂಂಕಿದಾಗಳ್—

ನಭದೊಳ್ಮೊಳ್ಕೆಱಿದಾಡೆ ಸಿಂಗರದ ಸಿಂಧುರ ಡಿಂಡಿಮಧ್ವಾನಮು
ಣ್ಮೆ ಭಟಾನೀಕದ ಬೊಬ್ಬೆ ಪರ್ಬಿರೆ ಲುಠದ್ಘಂಟಾರವಂ ಪೊಣ್ಮೆ ಮೇ
ಣಿಭಯೂಥಂ ಪರಿದತ್ತು ನಿಶ್ಚಳಿತಕರ್ಣಂ ಕ್ಷಿಪ್ತಹಸ್ತಂ ರದ
ಪ್ರಭೆ ಚೆಲ್ವಾಗೆ ಮದಾಂಬು ಸೂಸೆ ಸಮರಕ್ರೀಡಾಮಹೋತ್ಸಾಹದಿಂ ॥೭೦॥

---

೧ ಲ (ಮೂ) ೨ ರುಂ (ಮೂ) ೩ ಟ್ಟೋ (ತಾ, ಮೂ) ೪ ಳ್ಬ (ಮೂ)
೫ ಪಾ (ಮೈ) ೬ ತಿ (ರಿ, ಮೈ, ಧಾ, ತಾ, ಕೆ, ೭ ಯಿಂ (ರಿ, ಮೂ) ೮ ಳ್ನಾ (ರಿ)
೯ ಧೀ (ಮೂ, ಥ) ೧೦ ಭ (ಮೈ, ಮೂ) ೧೧ ಗೊಂಡ (ಮೂ) ೧೨ ಕಿಸಿ (ತಾ, ಧಾ)

ನೆಗಪಿ [೧]ಭ[೧]ರಿಕ್ಕೈಯನಬ್ದಾಂ
ಬುಗಳಂ ಬರೆ ಪೀರ್ದು ಕರ್ಣಚಾಲನದಿನವಂ
ಮಿಗೆ ಪರಿಯಿಪ ಮದಕರಿಗ
ಳ್ಬಗೆಗೊಂಡೊಡನೊಡ್ಡಿ ನಿಂದುವೆರಡುಂ ಬಲದೊಳ್ ॥೭೧॥

॥ವ॥ ಅಂತೊಡ್ಡಿ ನಿಂದು—

ಭರಿಕ್ಕೈಯಿಂ ಭರಿಕ್ಕೈಯನಾಂತು ಮುಱಿದೊತ್ತುತ್ತೆತ್ತಿ ಪತ್ತುತ್ತೆ ದೀ
ರ್ಘರ[೨]ದಾ[೨]ಗ್ರಂಗಳಿನೊಂದನೊಂದಿಱಿದು ಜೋದರ್ಬೊಬ್ಬಿಡಲ್ಮೇಲೆ ರ
ಕ್ತರಸಂ ವಕ್ತ್ರದಿನೆಚ್ಚು ಪಾಯೆ ಮೊಳಕಾಲೊಳ್ದಂಡೆಗೊಂಡೊಡ್ಡಿ ನಿಂ
ದೆರಡುಂ ಪೆರ್ಬಲದಗ್ಗದಾನೆಗಳ ಮೊತ್ತಂ ತಾಗಿತಂತಾಜಿಯೊಳ್ ॥೭೨॥

॥ವ॥ ಮತ್ತಮಲ್ಲಿ—

ಪ್ರತಿರ[೩]ದ[೩]ನಿರದನಹತಿವಿಗ
ಳಿತವಿತತಕ್ಷತಜಜಳಮನುಗುತರ್ಪ ಮದೋ
ದ್ಧತಹಸ್ತಿರುಧಿರವೃಷ್ಟಿಯ
ನತಿಶಯಮೆನೆ ಕಱಿವ ಜಳದಮೆನೆ ಕಣ್ಗೊಳಿಕುಂ ॥೭೩॥

ಮುಂಬಿಡದೊ[೪]ಕ್ಕು[೪] ಕಾಳ್ಪುರಮದಾದ ಮದೋದಕದೊಂದುಗೂಡಿ ರ
ಕ್ತಾಂಬುರದಪ್ರಘಾತಲಪನೋದ್ಗಳಿತಂ ಪರಿಗೊಂಡು ಪಾಯ್ದು ತ
ಳ್ತಂಬುಜಮಿತ್ರಜಾಂಬುಪರಿಮಿಶ್ರಿತಶೋಣನದೀಪ್ರವಾಹಮೆಂ
ದೆಂಬ ಬೆಡಂಗನಂಬರಚರಾಕ್ಷಿಗೆ ಬೀಱಿದುದಾ ರಣೋರ್ವಿಯೊಳ್ ॥೭೪॥

॥ವ॥ ಮತ್ತಮಲ್ಲಿ ರಣದೇವತೆಯನುದ್ದೇಶಿಸಿ—

ಸೂನಗಿಗತ್ತಿ ಬೆನ್ನ ನಡುಬಾರೊಳೆ ಕೋದಿರೆ ಬೀರಸಿಂಗರಂ
ತಾನಮರ್ದೊಪ್ಪೆ ನೇಲ್ದು ಜಡಿದಾತ್ಮಕರಾಸಿಯನುರ್ಬಿ ಬೊ[೫]ಬ್ಬೆ[೫]ಗೊ
ಟ್ಟಾನೆಯ ಕೊಂಬದಾಗೆ ಸಿಡಿವಂಜರಮುದ್ಧೃತ ಹಸ್ತದಂಡಮಾ
ಬಾನೊಳೆ ತಳ್ತು ತೋಱಿ ಸಿಡಿಯಾಡುವ[೬] ಮಾಳ್ಕೆಯೊಳೊರ್ವನೊಪ್ಪಿದಂ[೬] ॥೭೫॥

॥ವ॥ ಅದಲ್ಲದೆಯುಂ—

---

೧ ಬ (ರಿ, ಮೂ) ೨ ಥಾ (ಮೂ) ೩ ಥ (ಮೈ) ೪ ರ್ಕ (ಮೂ) ೫ ರ್ಬೆ (ಮೂ)
೬ ಮತ್ತಮಾರಣಾಗ್ರಮೆಂತೊಪ್ಪುಗುಂ (ಧಾ)

ಇದಿರೊಳಿದಿರ್ಚಿ ನಿಂದ ಕಲಿಯಂ ಕರಿ ತನ್ನ ಕರಾಗ್ರದಿಂ ತುಡುಂ
ಕಿದುದಿರದಿಟ್ಟುದಾಗಸಕೆ ಮೇಣ್ಬರೆ ಕೊಂಬನಮರ್ಚಿ ಸಾರ್ಚಿದ
ತ್ತದಿರದವಂ ಕರಾಸಿಯೊಳೆ ತತ್ಕರಮಂ ಕಡಿದಲ್ಲಿ ಬಿಳ್ದನಾ
ಪದದೊಳೆ ತತ್ಕರೀಂದ್ರಶಿರದೊಳ್ ಸುರನಾರಿಯರೊಯ್ದರಾತನಂ ॥೭೬॥

ಭೂರಿರಥಾಂಗಚೀತ್ಕೃತಿ ಧನುರ್ಗುಣಠಂಕೃತಿ ಮತ್ತವಾರಣ
ಸ್ಫಾರಕರಾಗ್ರಫೂತ್ಕೃತಿ ಭಟಸ್ಫುಟಹೂಂಕೃತಿ ವಾಜಿವಾಹಕೋ
ದಾರಕರಾಸಿಘಟ್ಟನಠಣತ್ಕೃತಿ ತಾಡಿತಖೇಟಕೌಘವಿ
ಸ್ಫಾರಚಳಚ್ಛಟತ್ಕೃತಿ ಚಮತ್ಕೃತಿಯಾದುದು ಯುದ್ಧರಂಗದೊಳ್ ॥೭೭॥

ಕರತಳಖಡ್ಗಘಟ್ಟನಸಮುದ್ಭವವಿಸ್ಫುರಿತಸ್ಫುಲಿಂಗಮಂ
ಬರತಳಮುಚ್ಚಳದ್ರುಧಿರಶಂಬರಸಂಭೃತಮುರ್ವಿರಂಗದ
ಶ್ವರಥಭಟೇಭಭೂರಿರವಸಂಗತಮೆಣ್ದೆಸೆಯಾಗೆ ಲೋಕಭೀ
ಕರಮೆನಿಸಿತ್ತು ಭೂತಗಣಚಿತ್ತಮಹೋತ್ಸವಕಾರಣಂ ರಣಂ ॥೭೮॥

ಇಡಿಕಿಱಿದಿರ್ದುದೆಲ್ಲೆಡೆಯೊಳಟ್ಟೆಗಳೊಟ್ಟಜೆ ಮೂಳೆಯೋಳಿ ಪೇ
ರಡಗುಗಳೇಱಿ ಕಾಳಿಜದ ಪಾಳಿ ತೊವಲ್ಲಳ ಸಾಲ್ಗಳಂಗದಂ
ಗಡಿ ಪೊಸಕಂಡದಿಂಡೆ ನೆಣದುಲ್ಬಣ[೧]ಯ[೧]ಂತ್ರದ ಮಂತಣಂ ಸಿಡಿ
ಲ್ದಿಡಿದುರು ರುಂಡಮಂಡಳಿ ಪೆಣಂಗಳ ಜಂಗುಳಿ ನೆತ್ತರೆತ್ತರಂ ॥೭೯॥

ರಿಪುವಿಜಯವಿಜಯನಿಭಭಟ
ಚಪಲಶರೋತ್ಕರ್ಷವರ್ಷದಿಂ ತೀವಿ ಜನಾ
ಸ್ಯಪರಂಪರೆಯಿಂ ಪಡೆದಂ
ವಿಪುಳಸರಿತ್ಪತಿ ಪೊದಳ್ದ ಶರನಿಧಿ[೨]ವೆ[೨]ಸರಂ ॥೮೦॥

॥ವ॥ ಇಂತಾಗಲೊಡ[೩]ನಾಗಳ[೩]ದಿರ್ಚಿ ಪೋಗದೆ ಸಮುಸಮರಂಗೆ[೪]ಯ್ವ[೪]ರಾತಿಬಲಮಂ ಕಂಡು ಕಾಯ್ಪುಗೊಂಡು ರಾಜಶೇಖರರಾಜೇಂದ್ರಂ ಮಿತವಚನಂಬೆರಸು ನಿಜಗಜೇಂದ್ರಮನಣೆದಲೆದು ನೂಂಕಿದಾಗಳ್—

೧ ಮ (ರಿ, ಕ, ಮೈ, ಮೂ) ೨ ಪೆ (ಮೂ) ೩ ನಿ (ರಿ) ೪ ಯ್ಧ (ಧಾ)

ಘನಶುಂಡಾದಂಡಪಾತಚ್ಯುತಖರಕರಬಿಂಬಂಬೊಲಿಂಬಾಗೆ, ಶುಂಭ
ತ್ಕನದುದ್ಯದ್ದರ್ಪಣಂ, ಫಾಲದೊಳೆ ಸೃಣಿಚಲತ್ಕುಂಭಕೂಟಾಗ್ರಸಂಘ
ಟ್ಟನದಿಂ ಬಿಳ್ದರ್ಧಚಂದ್ರಂಬೊಲಿರೆ ಪೃಥುಶಿರೋಮಧ್ಯದೊಳ್ಮುಕ್ತದಾನಾಂ
ಬುನಿಯಱಕ್ತಂ ಕರ್ಣಮುಬ್ದಂ ತೊಡರ್ದರ್ವೊಲಿರೆ ಕಣ್ಗೊಪ್ಪಿ ಬಂದತ್ತಿಭೇಂದ್ರಂ ॥೮೧॥

ಆ ಗಜೇಂದ್ರದಗ್ರದೊಳ್ಪೊಣರ್ಕೆಗಾಂತುಬರ್ಪ ರಿಪುಬಲಬಲಾಹಕಪ್ರಬಲಜಂಝಾಪ್ರಭಂಜನನಂ ಕಂಡು ಸಿಂಹಳೇಂದ್ರಂ ಸಮರಸಮುತ್ಸಾಹ[1]ಮಾನಸಂ ಮಾನಸಂಯುತಂ[1] ತನ್ನ ಪನ್ನತಿಕೆವೆತ್ತ ಪಾರ್ಥಿವಕುಮಾರರೊಂದುಗೂಡಿ ಗಂಧಸಿಂಧುರಸ್ಕಂಧಾರೂಢನಾಗಿ ಕಡುವಹಿಲದಿನಿದಿರ್ಚಿ ಬರ್ಪಾಗಳ್—

ಬಡಬನಳುರ್ಕೆಯೊ, ಭೈರವ
ನಡರ್ಪೊ, ಮಿಳ್ತುವಿನ ದರ್ಪಮೋ, ವಿಳಯದ ಮುಂ
ಗಡೆಯ ಸಿಡಿಲೇಳ್ಗೆಯೋ, ಮಾ
ರ್ಪಡೆಯೋಯೆಂದೆನೆ ಕಱು[2]ತ್ತು[2]ತಾಗಿತ್ತಾಗಳ್ ॥೮೨॥

ಪೊಡೆದುದು, ಪೊಯ್ದುದಟ್ಟಿದುದು ಮೆಟ್ಟಿದುದಿಟ್ಟುದು, ಪೊಟ್ಟೆಯಿಂ ಕರು
ಳ್ಗಡಣೆಸಿ ಪಾಯ್ವಿನಂ ತುಳಿದುದೆತ್ತಿದುದೊತ್ತಿದುದತ್ತಮಿತ್ತಲುಂ
ಕೆಡಪಿದುದೀಳ್ದು ಸೀಳ್ದುಧುಱಿ ತೂಳ್ದುದು, ಪೋಳ್ದುದು ನೀಳ್ದಹಸ್ತದಿಂ,
ಪಡಿಬಲಮಂ, ಮಹಾರಣವಿದಾರಣದಾರುಣಮತ್ತವಾರಣಂ ॥೮೩॥

ಗಿರಿಯನಿಱಿದಿಱಿದು ಕೆಡಪಿದೊ
ಡಿರದದಱಗ್ರದ ಮರಂಗಳುರುಳ್ವಂತಿರೆ ತ
ತ್ಕರಿ ಕರಿಯನಿಱಿದು ಕೆಡಪಿದೊ
ಡುರುಳ್ದರ್ಜೋದರ್ ತದಗ್ರದಿಂ ರಣಧರೆಯೊಳ್ ॥೮೪॥

॥ವ॥ ಮತ್ತಂ—

ಕಡುಪಿಂ ಕರಿ ನಿಜಕರದಿಂ
ಪಿಡಿಪಿಡಿದಿಟ್ಟುದು ಪೊಣರ್ಚಿದರಿತುಭಟರನಿ
ಟ್ಟೆಡೆಗೊಂಡಚ್ಚರಸಿಯರಿ
ರ್ಪೆಡಗಿವಱೊಳಗಾಯ್ದುಕೊಳ್ಳಿಮೆಂದೊಪ್ಪಿಪವೋಲ್ ॥೮೫॥

---

೧ ಮಾನಸಂಯುತಂ (ಧಾ); ಮಾನಸಯುತಂ (ಮೈ); ಮಾನಸಂಮಾನಸಂಯುತಂ (ತಾ)
೨ ತ್ತೆ (ತಾ)

॥ ವ ॥ ಆಗಳ್ ಪ್ರಚಂಡಬಳನೆಂಬ ಸಿಂಹಳನ [೧]ಪಡೆವಳಂ[೧]ಪಡಿತಳಿಸುತಿದಿರ್ಚಿ-ವರಲವನಾರೋಹಿಸಿರ್ದ—

ರಥಮಂ ನುರ್ಗೊತ್ತುತೆ ಸಾ
ರಥಿಯಂ ತೊಡೆವಿಡಿದಿಭಂ ನಭಕ್ಕಿಡೆ ದಿನಕೃ
ದ್ರಥದೊಳಗೆ ಬಿಳ್ದು ತತ್ಸಾ
ರಥಿಯೆನಿಸಿದನವನನೂರುವರುಣತೆಯಿಂದಂ ॥೮೬॥

॥ ವ ॥ ಅದಲ್ಲದೆಯುಮಾ ಪಡೆವಳನೂರುದಂಡಮಂ ಕದಳೀಕಾಂಡಮಂ ಮುಱಿವಂತೆ ಮುಱಿದವನ ಭುಜಮಂ [೨]ಕರೀರ[೨]ಮಂ ಕಿಳ್ವಂತೆ ಕಿಳ್ತವನ ರುಂಡ[೩]ಮಂ[೩] ಪುಂಡರೀಕಮಂ ಪಱಿವಂತೆ ಪಱಿದು, ಕೊಳುಗುಳದಿಳೆಯೆಂಬ ಕೊಳದೊಳ್ತೊಡರ್ದ ನಳಿನನಾಳಂಗಳೆಂಬಂತೆ ನರರ ನರಮಾಲೆ ಮುಂಗಾಲೊಳ್ತೊ-ಡರೆ, ಮಾಲೆಸರಪಳಿಯಂತೆ ಬಳ್ಳಿಗರುಳ್ಗಿಂಗಾಲೊಳೆಳಲ್ದು ಬರೆ ಭರಂಗೊಂಡೋ-ಜೆಯಿಂ ಬರ್ಪ ರಾಜಶೇಖರಕರೀಂದ್ರದಿದಿರೊಳ್ ಸಿಂಹಳೇಂದ್ರಂ ನಿಜಗಜಮಂ ಪರಿಯಿಸಿ ನಿಂದು ಚಂಡಕೋದಂಡಮನಡಮನಡಸಿ ಪಿಡಿದು—

ಪಟುಭುಜನೊತ್ತಿ ಜೇವೊಡೆದು ಸಿಂಜಿನಿಯಂ ಸೆಳೆದ್ಧಾರ್ದು ಸಾರ್ದು ಸಂ
ಘಟಿಸಿ ತೊಡರ್ಚುತೆಚ್ಚೊಡರಿಸಿಂಹಳನೈದುವ ಲೋಕಭೀಕರೋ
ತ್ಕಟರಟನಾಸ್ತ್ರಮಂ ತಱಿದನೊಂದೆ ಶರಾಗ್ರದೆ ಮಧ್ಯದೊಳ್ಮಹಾ
ಭಟರಿರದಾರ್ದೆ, ನಿರ್ಜರರ್ದಿದಚ್ಚರಿಯೆಂದೆನೆ ರಾಜಶೇಖರಂ ॥೮೭॥

॥ ವ ॥ ಅಂತವಂ ತಱಿದುರುಳ್ಚೆ—

ಕಂಡರೊಳಿಂತುಟಪ್ಪ ಕಡುಸಾಹಸಿ ಕೇಳ್ವರೊಳಿಲ್ಲವೆಂದು ಮುಳಿ
ಕೊಂಡತುಳಪ್ರತಾಪನಿಧಿ ಸಿಂಹಳಭೂಪತಿ [೪]ಮ[೪]ಚ್ಚಿ ಚಂಡಕೋ
ದಂಡಮನಾರ್ಪಿನಿಂ ಸೆಳೆದು ಬೊಬ್ಬಿಱಿದೆಚ್ಚನತುಚ್ಛ ಬಾಣಮಂ,
ಖಂಡಿಸಿದಂ ಬಳಿಕ್ಕಘುದನಂತರದೊಳ್ ನಿಜಬಾಣದಿಂ ನೃಪಂ ॥೮೮॥

॥ ವ ॥ ಅಂತು ಖಂಡಿಸುತಖಂಡಪ್ರತಾಪಂ ಗಂಡುಗೊಂಡಿದಿ[೫]ರ್ಚಿ[೫] ನಿಂದ ಸಿಂಹಳೇಂದ್ರನ[೬]ದ[೬]ಟಂ ಕಂಡು—

---

೧ ಪಡಿಬಳಂ (ಮೂ) ೨ ಕರಿಕರ (ಮೈ) ೩ ಪಾಲೆ (ಮೂ) ೪ ಮೆ (ಮೂ),
೫ ರ್ಚಿದ (ಮೂ) ೬ ಧ (ಮೂ),

ಪಟುಕೋಪಾಟೋಪಬದ್ಧಭೃಕುಟಿವಿಚಳಿತಶ್ಮಶ್ರುಘರ್ಮಾಂಬುಬಿಂದು
ಸ್ಫುಟಫಾಲಂ ಪದ್ಮರಾಗಾರುಣವಿಕಟಕಟಾಕ್ಷಂ ಧನುರ್ಜ್ಯಾಲತಾಸಂ
ಘಟಿತಾಮೋಘಾಸ್ತ್ರದಿಂ ತತ್ಕರಟಿಬಿದುವನಾರ್ದೆ[1]ಚ್ಚ[1]ನೆಚ್ಚಂತೆ ಮುಂ ಧೂ
ರ್ಜಟಿಪುತ್ರಂ ಕ್ರೌಂಚಮಂ ಪಂಚಷ್ಮನೆ ರಿಪುಮಹಾಕಲ್ಪಕಾಲಾಗ್ನಿರುದ್ರಂ ॥೮೯॥

॥ವ॥ ಅಂತೆಚ್ಚ ಶರಂ [2]ಪಿ[2]ಂಚಕದೊಳ್ನಟ್ಟುರ್ಚಿ ಪಾಯೆ ಪಡ[3]ಲಿ[3]ಡುವ ನಿಜಗಜದ ನಿಳಿಗೆ ಧುಮ್ಮಿಕ್ಕಿ ಹಮ್ಮುಗೆಡದೆ ಧೀರಸಾರಥಿ ಸಾರ್ಚಿದ ರಥಮನೇ[4]ಱ[4]ದಾಗಳ್ ಧರ್ಮ ಯುದ್ಧಕ್ಕೆ ಮನಮಿತ್ತು ರಾಜಶೇಖರನಮರಗಿರಿ[5]ಯು[5]ನ್ನಿಳಿದಿಳಾರಥಮನಾರೋಹಿಪ ಭವನ ವಿಭವಮಂ ತಳೆದಿಭಮಸ್ತಕದಿನಿಳಿಗವತರಿಸಿ ಮಣಿರಥಮನಾರೋಹಿಸಿ ಸಾರ್ಕೆಗೆ ಪನ್ನತಿ ಕೆಮ್ಮಿಗೆ ಪರಿಯಿಪಾಗಳ್ ಸಿಂಹಳೇಂದ್ರಂ ಕೆರಳ್ದು ನೋಡಿ—

ಬಳಯುತರೇಳ್ಗೂರ್ಗಾವುದ
ದಳವಿಯೊಳೋಲೈಪರರ್ಸರಖಿಳರ್ ಕ[5]ರ್ಪ[5]ರ್ಣ೦[6]
ಗಳನೀವರ್ರೆಂಬ ನಿನ್ನ
ಗ್ಗಳಿಕೆಯದೇಂ ಸಿಂಹಳೇಂದ್ರನೊಳ್ ಕೊಂಡಪುದೇ ॥೯೦॥

ಗುಹೆಯೊಳಗಿರ್ದ ಕೇಸರಿಯನಾಸುರದಿಂ ವನದಂತಿ ಸೊರ್ಕಿಬಂ
ದಹಹ ಕೆರಳ್ಚಿ ಜೀವಿಕುಮೆ ನೀನದಱಂತಿರೆ ಪಾರ್ಥಿವಮಧ್ಯಮ
ದ್ಗೃಹದೊಳೆ ಸಂತಮೊಪ್ಪುವನನೆನ್ನನಿಳೇಶ್ವರ ನೀಂ ಕೆರಳ್ಚಿ ಮೇ
ಣ್ಗೃಹತಿಯನಾನದೆಯ್ದುವೆಯದೆಂತೆಲೆ ತೀರ್ಚದೆ ನಿನ್ನನಿರ್ಪೆನೇ ॥೯೧॥

॥ ವ ॥ ಎನೆ ಸಮರಷಣ್ಮುಖಂ ಸರೋಷಹಸನಮುಖನಾಗಿ ಮಗುಳ್ದಿಂತೆಂದಂ—

ಜಳನಿಧಿಯನುಳಿದು [6]ನೀಂ[6]ಕೊಳು
ಗುಳಕಯ್ದಿದ್ದೆ ಕಯ್ದುಗೊಂಡು ಮದ[7]ವಿಹ್ವಳ[7]ಸಿಂ
ಹಳ ಭಾಪು ತೋರ್ಪೆನೆಲೆ ಕೈ
ಚಳಕಮನೊಂದಿನಿತು ಸೈರಿಸೈ ರಣದೆಡೆಯೊಳ್ ॥೯೨॥

ಸಿಂಹಳಭೂಪತಿ ನಿಜದೆ ನೃ
ಸಿಂಹಂ ನೀನಲ್ತೆ ನಿನ್ನನಾಹವದೆಡೆಯೊಳ್
ಸಂಹರಿಸಿ ಶರಭವಿಕ್ರಮ
ಮಂ ಹರಸುತನಾದುದರ್ಕೆ [8]ತೋರ್ದಪೆ[8]ನೀಗಳ್ ॥೯೩॥

೧ ಚ್ಚು (ಮೂ) ೨ ಪೆಂ (ಮೂ) ೩ ಳಿ (ಮೂ) ೪ ಯಿ (ತಾ) ೫ ಪ್ಪಂ (ತಾ, ಮೈ, ಮೂ) ೬ ನೀ (ಮೂ) ೭ ವಿಂಹ್ವಳ (ರಿ, ತಾ, ಮೈ, ಮೂ, ಲ, ಧಾ) ೮ ತೋರ್ಪೆ (ತಾ)

॥ವ॥ ಎಂದು ಮುಟ್ಟಿ ಮೂದಲಿಸಿ—

ಪೃಥುಳಭುಜಬಳವಿಜಿತದಶ
ರಥಸುತನಪ್ರತಿಮಗುಣಗಣಾಂಕಂ ಗುಣಮಂ
ಪ್ರಥಿತಶರಾಸನಕೇಱಿಸಿ
ಪೃ¹ಥಿ¹ವೀಶ್ವರಪುತ್ರನೊತ್ತಿ ಜೇವೊಡೆಯಲೊಡಂ ॥೯೪॥

ಅದಱುದ್ಯದ್ಧ್ವನಿ ಪೊಯ್ಯೆ ಮೇಗಣ್ಬುಡುಜಾಳಂ ಕಳ್ಕನೊಕ್ಕಂತದೊ
ಕ್ಕುದು ಚಂಚತ್ಸುಮನಃಪ್ರಮುಕ್ತಸುಮನೋವರ್ಷಂ ಪ್ರತಿಧ್ವಾನಮು
ಣ್ಮಿದುದೆಂಬಂತಿರೆ ಪೊಣ್ಮಿದತ್ತಮರಭೇರೀದಾಂಧಳಧ್ವಾನಮ
ಭ್ರದೊಳಾ ಬಲ್ಧನುಗೊಲ್ದು ಪೂಡಿದನಮೋಘತ್ರಾಣಮಂ ಬಾಣಮಂ ॥೯೫॥

॥ವ॥ ಅಂತು ಪೂಡಿ ನೀಡಡಿಗೊಂಡು ತೆಗೆನೆಱೆದು ನಿಂದಾಗಳ್—

ಕರ್ಣಸಹಾಯಮಂ ಪಡೆಯ್ಯದಂದಿರದಯ್ದಿದ ಸರ್ಪಬಾಣಮಾ
ಪೂರ್ಣಮನೋರಥಂಬಡೆದುದಿಲ್ಲೆನುತಂ ಬಿದುರತ್ನಮಂಡನಾ
ಕೀರ್ಣರುಚಿಪ್ರಬದ್ಧಕವಚಾನ್ವಿತಕರ್ಣಸಹಾಯಮಂ ಗುಣೋ
ದೀರ್ಣತೆಯಿಂದೆ ಪೊಂದಿತೆನೆ ತನ್ನಿ ಕಟಸ್ಥಿತಮೇಂ ಮನೋಜ್ಞಮೋ ॥೯೬॥

॥ವ॥ ಅಂತಾ ಬಾಣಮಂ ರಿಪುಮುಖವಿದಾರಣವೀರಭದ್ರಂ ರೌದ್ರಂಮಿಗೆ ಮಾಣ
ದೆಚ್ಚಾಗಳ್—

ಕಡಿದುಧವನೆಚ್ಚ ಕಣೆಗಳ
ನೆಡೆಯೊಳ್ ಪಡಿತಳಿಸಿ ಪೊಕ್ಕು ತತ್ಸೂತನ ಪೇ
ರೊಡಲನೊಡೆದುರ್ಚಿ ಪಾಯ್ದುದು
ಬಿಡೆ ನೆತ್ತರ ಸೆಱೆ ತದಂಗದಿಂ ತತ್‌ಕ್ಷಣದೊಳ್ ॥೯೭॥

॥ವ॥ ಅದಂ ಕಂಡು ಕೌತುಕಂಬಟ್ಟು ಬೆರಲೆತ್ತಿ ಪೊಗಳ್ದಾಶುಗಾಶನನಿಭಾಶುಗ
ಮನಾಶುಗಾಸನದೊಳೋಸರಿಸದೆ ತೊಡರ್ಚಿ ಸಾರ್ಚಿ ತೆಗೆ ನೆಱೆದು ನಿಂದು—

ಮಣಿಗೆಳಸಿ ಕೆಮ್ಮನೆಮ್ಮೊಳ್
ಮಣಿಯದಿದಿರ್ಚಿದೆ ನರೇಂದ್ರಸುತ ನಿನಗೀ ಕೊ
ರ್ಗಣೆಯಿತ್ತಪುದು ನವವ್ರಣ
ಮಣಿಯಂ ಕೊಳ್ಳೆಂದು ಸಿಂಹಳಂ ಪದೆದೆಚ್ಚಂ ॥೯೮॥

---

೧ ಥು (ಮೂ).

ನಡುಗೆ ಸುರರ್ಗೊಡನೆ ಕಿಡಿಗಳ
ಗಡಣಮನುಗುತರ್ಪ ಭೀಕರಾಸ್ತ್ರಮನದನಿ
ರ್ಕಡಿಗೈವಮೋಘಶರಮಂ
ತುಡುತೆಚ್ಚಂ ರಾಜಶೇಖರಂ ಸಿಂಹಳನಂ ॥೯೯॥

ಎಚ್ಚೊಡಿಳೆ ನಡುಗೆ ಸೆಡೆಯೆ ವಿ
ಯಚ್ಚರರರಂಬದು ಪೊದಳ್ದು ಕೆನ್ನೀರ ಪೊನಲ್
ಬೆಚ್ಚನೆ ಪಾಯ್ತುರೆ ವಕ್ಷಮ
ನುಚ್ಚಳಿಸಿದೊಡಹಿತನೃಪತಿ ಮೂರ್ಛಿತನಾದಂ ॥೧೦೦॥

॥ವ॥ ಆಗಳದಂ ಕಂಡು ಕನಲ್ಕೆಗೊಂಡು ಮಂಡಳಿಸುತಿಂದ್ರಮನ್ಯುಭದ್ರ-ಕೇತು ಹಿರಣ್ಯಕವಚಂ ಚಂಡಬಾಹು ಪ್ರಚಂಡವರ್ಮಂ ಸಿಂಹಸೇನಂ ಕುಲಿಶದಂತಂ ಲೋಹಿತಾಕ್ಷಂ ಪಿಂಗೇಕ್ಷಣಂ ಕಾಲನೇಮಿ ಭೀಮನಾದನಾದಿತ್ಯವರ್ಮಂ ವಿಕ್ರಮ-ಬಾಹು ಮೊದಲಾದ ಪಾರ್ಥಿವರ್ ನಿಜವರೂಥಂಗಳನೇಱಿ ವಿಪುಳಪ್ರಚಂಡಧನು-ರ್ದಂಡಮಂ ತಿರುವೊಯ್ದು ಜೇವೊಡೆದು ಘುಡುಘುಡಿಸಿ ಸಿಡಿಲ ಪಡೆಯಂತೆ ಮೋಹರಿಸಿ ಶರವರ್ಷಮಂ ಕಱೆವುತ್ತೆ ನಿಜಬಲಂಬೆರಸು ಕಡಂಗಿ ಕವಿಯಲೊಡನೆ—

ಕಡುಪಿಂ ಕಾಯ್ಪೇಱಿ ಸಿಂಗಾಡಿಯನೆ ಸೆಳೆದು ಮೈಯುರ್ವಿ ಕೈಯಿಕ್ಕಿ ತೋಡು
ತ್ತೊಡನಂಬಂ ಬೆನ್ನ ಪೊಂಬತ್ತಳಿಕೆಯೊಳಧಟಿಂ ಪೂಡಿ ಪೂಣ್ದೆಚ್ಚು ಕಾಲಾ
ಳ್ಕಿಡೆವನ್ನಂ ಪಾಯ್ವ ಚಂಚದ್ರಥಚಯಮುಡಿವನ್ನಂ ಗಜಾಶ್ವಪ್ರತಾನಂ
ಮಡಿವನ್ನಂ ಮಾಣದೆಚ್ಚಂ ಮದವದರಿಮಹೀಭೃನ್ಮಹೀಭೃನ್ಮಹೇಂದ್ರಂ ॥೧೦೧॥

॥ವ॥ ಆಗಳ್ ಮಿತವಚನನುಜಿತಹಯಾರೂಢನಾಗಿ ಕರತಳದೊಳ್ಕಾಲ[೧]ಜಿಹ್ವೆಯಂ ಪೋಲ್ವ ಕರವಾಳಮಂ ಜಡಿದು ಝಳುಂಪಿಸಿ ಜಳದ ಪಟಲದೊಳ್ಪೊಕ್ಕ ಜಂಝಾಪವನನಂತೆ ಮಿಕ್ಕು ಪೊಕ್ಕು—

ಪಡಲಿಡೆ ತೇರ್ಗಳಂ ಪೊಡೆದು ಸಾರಥಿಯಂ ತಿವಿದಶ್ವಕಂಧರಂ
ಕಡಿಯೆರಡಪ್ಪಿನಂ ತಱಿದು ಖಂಡಿಸಿ ತದ್ಧ್ವಜಮಂ ಪೊರಳ್ಚಿ ಮುಂ
ಗಡೆಯ ಭಟರ್ಕಳಂ ರಥದ ಚಕ್ರಮನಿರ್ಕಡಿಗೈದು ಸಾಹಸಂ
ಬಡೆದಿದಿರಾಂತ ತದ್ರಥಿಕರಂ ತಲೆಗೊಂಡನಖಂಡವಿಕ್ರಮಂ ॥೧೦೨॥

॥ವ॥ ಮತ್ತಂ—

---

೧ ಜಿಂಹ್ವೆ (ಧಾ, ಮೂ, ಶಾ)

ಕರಿಶಿರಮಂ ವಿದಾರಿಸೆ ಕರಾಗ್ರದ ಖಡ್ಗದೆ ವಜ್ರಪಾತದಿಂ
ಗಿರಿ ಬಿರಿವಂತೆ ಮೇಣ್ಬಿರಿದುದಂತದಱಂತರದೊಳ್ಪೊದಳ್ದ ಕೇ
ಸುರಿಯಿರವೆಂಬಿನಂ ರುಧಿರವಾರಿವೊಸರ್ತುದು ತದ್ರಸಾರ್ದ್ರಬಂ
ಧುರತರಮೌಕ್ತಿಕಂ ಸಿಡಿವ ಕೆಂಗಿಡಿಯಂತಿರೆ ಪಾಱಿತಾಜಿಯೊಳ್ ॥೧೦೩॥

ಕರಿಗಳ ಘಟ್ಟು ಪಟ್ಟಪಱಿವಾಜಿಗಳೋಜೆಯ ಪೌಜು ಗಾಜುಗೋ
ಜಿರದಿದಿರಾಗಿ ಮೊಗ್ಗರಿಸಿದಗ್ಗದ ತೇರ್ಗಳ ನುರ್ಗುನುರ್ಗು ಬಿ
ತ್ತರದೊಳ್[1]ಪಿಂ[1]ಡುಗೊಂಡ ಭಟಮಂಡಳಿ ತಂಡದೆ ತುಂಡುತುಂಡದಾ
ಗಿರೆ ಕಡಿದೊಕ್ಕಲಿಕ್ಕಿದನುದಗ್ರಸಮಗ್ರಮಹೋಗ್ರವಿಗ್ರಹಂ ॥೧೦೪॥

॥ ವ ॥ ಅದಲ್ಲದೆಯುಂ ಅಲ್ಲಿ—

[2]ಇಱಿದರಿದಿರ್ಚಿದ[2]ಪೊರ್ಡೆದೆದರಿಟ್ಟರುರುಳ್ಚಿದರೊತ್ತಿ ತತ್ತಱಂ
ದಱಿದರಡರ್ತು ಸೀಳ್ದರಱಿಯಟ್ಟಿದರೊಟ್ಟಿದರಟ್ಟೆಯಂ ಕೊರ
ಲ್ಗೊಱಿದರದಿರ್ಚಿದರ್ಸದೆದರಣ್ಮಿದರಿಕ್ಕಿದರೆಚ್ಚ[3]ರಾ[3]ರ್ದು ಜೊ
ಬ್ಬಿಱಿದರಡಂಗೆ [4]ಪೊ[4]ಯ್ದರರಿಸೈನ್ಯಮನಾಹವದೊಳ್ಮಹಾಭಟರ್ ॥೧೦೫॥

॥ ವ ॥ ಆಗಳ್ ಪ್ರಳಯಮೇಘಜ್ಯೋತಿಯೊಳಿದಿರ್ಚಿದಂಜನಾದ್ರಿಗಳೆಂಬಂತೆ ಕುಂಭಿಗಳ್ ಕುಂಭಿನಿಯೊಳ್ಕುಂಭಿಟ್ಟು ಕೆಡೆಯೆಯುಂ— ಶರಭದೊಳಾಂತ ಸಿಂಗಂಗಳಂತೆ ತುರಂಗಂಗಳ್ಪಿಂಗಡೆಯೊಳ್ಮುಂಗಡೆಯೊಳುರುಳೆಯುಂ ಜಂಝಾಪವನನೊಳೊಡ್ಡಿನಿಂದ ನೀರತೇರ್ಗಳಂತೆ ತೇರ್ಗಳ್ ನುರ್ಗುನುಱಿಗೊಂಡು ಪಡಲಿಡೆಯುಂ ದವಶಿಖಿಯೊಳ್ವೊಣರ್ಕೆಗೊಂಡ ಪಾದಪಂಗಳಂತೆ ಪದಾತಿಗಳ್ ಪನ್ನತಿಕೆಗೆಟ್ಟು ಮಡಿಯೆಯುಂ ಮಿತವಚನಂ ತನಗಿದಿರಾಂತ ರಿಪುಬಲಮನಿಂತು ತವಿಸಿದಾಗಳ್—

ತುಂಗಮತಂಗಜಪ್ರಕರಮಸ್ತಕಮೌಕ್ತಿಕರಾಶಿ ರಾಜಲೋ
ಕಂಗಳ ಮೌಳಿಮಂಡಿತಮಣಿಪ್ರಕರಂ ನೃಪಚಾಪಮುಕ್ತ ಬಾ
ಣಂಗಳ ಪಾತದಿಂ ಸುರಿದ ಸೃ[5]ಜ್ಞ[5]ದಿಯೊ[6]ಳ್ಬೆ[6]ರೆದಯ್ದಿ ಕೂಡೆ ರ
ತ್ನಂಗಳವಂಗೆ ಮೇಣ್ಪೊರೆದು[7]ವ[7]ಲ್ಲದೊಡಬ್ಧಿಗವೆಂತು ಸಾರ್ದು[8]ವೋ[8]ಳ್ ॥೧೦೬॥

೧ ಬಂ (ರಿ); ಜಿಂಹೆ (ವ್ಯೆ) ೨ ಇಱಿದಿಱಿದಿರ್ಚಿದ (ತಾ) ೩ ತಾ (ಮೂ)
೪ ಪಾ (ರಿ) ೫ ಗ್ನ (ರಿ) ೬ ಳ್ಪ ೭ ದ (ತಾ, ಮೂ) ೮ ದೋ (ತಾ, ಮೂ).

ಪಡಲಿಟ್ಟ ಪಡೆಯ ನೆತ್ತರ
ಮಡುವಿನೊಳುಡಿದುಡಿದು ಕೆ[೧]ಡೆ[೧]ದ ಕರಿದಂತಂಗಳ್
ತಡಿವಿಡಿದ ಸುಭಟಶಿರಮುಂ
ಪಡೆದವು ತದ್ಬಿಸಬಿಸಪ್ರಸೂನದ ಸಿರಿಯಂ ॥೧೮೮॥

ಘುಳುಘುಳಿಸಿ ಪರಿವ ನೆತ್ತರ
ಪೊಳೆಯೊಳ್ಗಿಳಿದು ಮುಳುಗಿ ಪಂದೊವಲ ಧೋತ್ರಮನು
ಟ್ಟೆಳೆನರದ ಜನ್ನಿವಾರಮ
ನಳವಡಿಸುತ್ತಲ್ಲಿ ಬೊಮ್ಮರಕ್ಕಸರೆಸೆದರ್ ॥೧೮೯॥

ತಳಿರುಡಿಯೆನೆ ಪಂದೊವಲು
ಟ್ಟೆಳೆಲತೆಯೆನೆ ನ[೨]ರ[೨]ವನೊತ್ತಿ ಸುತ್ತುತೆ ಗುಂಜಾ
ಫಳಮೆನೆ ತಳೆದಿಭಮುಕ್ತಾ
ವಳಿಯಂ ಮರುಳಮುಮ ಶಬರಿಯೆನಿಸಿತ್ತದಜಿ[೩]ೊಳ್ ॥೧೯೦॥

॥ವ॥ ಆಗಳ್—

ತಿಳಿಯೆ ನಿಜಮೂರ್ಛೆ[೪]ಮು[೪]ರಿದ್ದಾ
ಗಳೆ ಪರಿತಪ್ತಾರ್ತ್ತಬಳಮನೀಕ್ಷಿಸಿ ಭಯವಿ
ಹ್ವಳಸಿಂಹಳನಾ ಕೊಳುಗುಳ
ದಿಳೆ[೪]ಯಂ[೪]ಬೆಂಗೊಟ್ಟು ಜಗುಳ್ದನತಿಜವದಿಂದಂ ॥೧೯೧॥

॥ವ॥ ಅಂತು ಜಗುಳ್ದು ಜಳಧಿಮಧ್ಯದೊಳ್‌ಸಬಳದುರ್ಬಳನಸ್ತಮಯಸೂರ್ಯ ನಂತೆ ತೇಜಂಗುಂದಿ, ಪೊಕ್ಕು ಪೋಪಾಗಳರಿವಿಜಯವಿಕ್ರಮಾರ್ಕನಮೋಘಬಾಣಮಂ ಕೇಣದಿಂ ಪ್ರಾಣಂಗೊಳಲೆಂದು ಮಾಣದೆ ಬಾಣಾಸನದೊಳ್ ತೊಡರ್ಚುವಾಗಳ್—

ಶಕ್ರಮುಖಾಮರರ್ಕಳೆಲೆ ನಿನ್ನದಟಿಂಗಗಿದೊಂದು ಗೋಂಟಿನೊಳ್
ಸಕ್ರಮಮಿರ್ಪರಿನ್ನುಮೆನೆ ಸಿಂಹಳನಾಂಪನೆ ಗಾಂಪುದೋಜಿ ಭೂ
ಚಕ್ರಕೆ ಪೊಕ್ಕನಳ್ಕಿ ಕಡಲಂ ತೊಡದಿರ್ ತವಿಪಂ[೫]ಬ[೫]ನಿಂದು ನಿ
ರ್ವಕ್ರಪರಾಕ್ರಮಾಕ್ರಮಿತವಿಕ್ರಮವಿಕ್ರಮರಾಜಶೇಖ[೬]ರಾ[೬] ॥೧೯೨॥

---

೧ ಡ (ತಾ, ಮೂ) ೨ ಮ (ಮೂ) ೩ ಪ (ರಿ) ೪ ಯಿಂ (ಮೂ, ಧಾ, ಮೈ, ಕ)
೫ ಬಿ (ಮೂ) ೬ ರಂ (ಮೈ, ಧಾ, ತಾ)

॥ವ॥ ಎಂಬ ಮಿತವಚನನ ಹಿತವಚನಮನಾಕರ್ಣಿಸಿ ಸುಪರ್ಣಪರಾಕ್ರಮನಾಕರ್ಣಾಂತಮುಗಿದ ಕೂರ್ಗಣೆಯನುಪಸಂಹರಿಸಿದಾಗಳಾ ಸಿಂಹಳಂ ಪಡಂಗೇಱಿ ಕಡಲೊಳ್ಬೆಂಗೊಟ್ಟು ಪೋಗಲೊಡನೆ—

ಅತುಳಿತ ತತ್ಪ್ರತಾಪಬಡಬಂಗಗಿದಂತಿರೆ ಸಿಂಹಳೇಂದ್ರನ-
ಪ್ರತಿಮಮದಾಬ್ಧಿ ಮೈದೆಗೆದ್ರವೋಲ್ಮುಳಿಸಿಂದಮೆ ರಾಜಶೇಖರ
ಕ್ಷಿತಿಪತಿ ಶೈವಮಂತ್ರನಿಧಿ ನೋಳ್ಪದುಮ್ಮಳ್ಕಿ ಪಯೋಧಿ ಬಟ್ಟೆಗೊ
ಟ್ಟತಿಶಯಮಾಗೆ ನೀರ್ದೆಗೆದುದಾ ರಿಪುಸೀಮೆಯೆ ಸೀ೧ಮೆ೧ಯಪ್ಪಿನಂ ॥೧೧೨॥

ಪರಿಗತಪದ್ಮಮಹಾಪ
ದ್ಮರುಚಿರವರಶಂಖಮಕರಕಚ್ಛಪನೀಲ
ಸ್ಫುರಿತಮುಕುಂದಂ ಕುಂದದ
ಶರನಿಧಿಯಕ್ಷೇಂದ್ರನಿಧಿಯಿದೆನೆ ಸೊಗಯಿಸುಗುಂ ॥೧೧೩॥

ಪೊಸಬಿಸಿಲದು ಪೆಱದೆಗೆದಿರೆ
ಕಿಸುಸಂಜೆಯುಮುಡುಸಮೂಹಮುಂ ಮಿಸುಪವೊಲೇ
ನೆಸೆದುದೊ ಪವಳಂ ಮುಕ್ತಾ
ವಿಸರಂ ಜಾಂಬವಜಳಂ ಪೆಡಂಮೆಟ್ಟಲೊಡಂ ॥೧೧೪॥

ಅಘಟಿತಮಿದಲ್ತೆ ಮುನ್ನಂ
ರಘುವಂಶಭವಂಗಮೇನಿದಿತ್ತುದೆ ಪಥಮಂ
ಪ್ರಥುನಪ್ರತಾಪಮಹಿಮಾ
ಲಘುತರನಿವನಬ್ಧಿಯಂ ಪೆಡಮ್ಮೆಟ್ಟಿಸಿದಂ ॥೧೧೫॥

॥ವ॥ ಎಂದಂಬರದೊಳಂಬರಚರರ್ಪೊಗಳುತ್ತಮಿರೆ, ನಿಜಬಳಂ ಮುದಂಬಡುತ್ತಮಿರೆ ಪಡಿಬಳಂ ಕಂಗೆಡುತ್ತಮಿರೆ, ಕಡುವೇಗದಿಂ ಕಮಳಾವತಿಯೆಂಬ ನಿಜದುರ್ಗಮನವಂ ಪೋಗಿ ಪೊಕ್ಕಾಗಳ್ ಕುಪಿತರಿಪುಪನ್ನಗಸುಪರ್ಣಂ, ಬೆನ್ನನೆ ಪೋಗಿ ಪನ್ನತಿಕೆಯಿಂ ತನ್ನ ಬಲಂ ಬೆರಸು ಸುತ್ತಿ೨ಪತ್ತಿದಾಗಳ್೨—

ಉರಿ೩ವ೩ರಿವೆಣ್ಣೆ ಪಂದಿ೪ದ೪ಲೆ ಪೆರ್ದೊಲೆ ಬಲ್ಮೊನೆಗಲ್ಕಶಾನುವೊಳ್
ಬೆರಸಿದ ಪುಲ್ಲದೊಂದೆ ಪೆಟಲುಪ್ಪಿನ ಪೆರ್ದಿಡಿಮರ್ದಿವೆಂಬಿವಂ
ಸುರಿದಿಳಿವಾಯ್ಕಿ ನೂಂಕಿ ಸೆಳೆದಿಟ್ಟೊಡನಲ್ಲಿಳಿವಿಟ್ಟು ಸೂಸೆ ಪೊ
ಯ್ದರಿಭಟರಿಂತು ಕಾದುತಿರೆ ಮುತ್ತಿದರಳ್ಕದೆ ತನ್ನಮಹಾಭಟರ್, ॥೧೧೬॥

---

೧ ಮಿ (ತಾ) ೨ ಪತ್ತಿ ಮುತ್ತಿರ್ಪಾಗಳ್ (ಮೂ) ೩ ವು (ಮೈ, ಮೂ) ೪ ದೆ (ಮೂ)

॥ವ॥ ಇಂತು ಮೊತ್ತಂಬೆತ್ತು ಮುತ್ತಿ ಲಗ್ಗೆಗಗ್ಗಳಿಸಿಪರ್ಾಗಳಾ ಸಿಂಹಳೇಂದ್ರಂ ಘೂರ್ಮಿಸಿ,ನಿಜಬಳಂಬೆರಸು ಕಾಳೆಗಕ್ಕೆ ಪೊಱಮಡಲುಜ್ಜುಗಿಸಿ , ಸಜ್ಜುಗೆಯ್ವುತ್ತಿರ್ಪಿನ ಮಾಗಳ್ ನೀತಿಭೂಷಣನೆಂಬ ಮಂತ್ರಿಪಂ ಕೃತಾಂಜಲಿಪುಟನಾಗಿ ವಿನಯ-ದಿಂದಿಂತೆಂದಂ—

ಅವಧರಿಸಾಣ್ಮ ಸಿಂಹಳನರೇಶ್ವರ,ಮದ್ವಚಮಂ,ಮನುಷ್ಯಭೂ
ಧವನಿವನೆಂದು ನೀಂ ಬಗೆಯದಿರ್,ಶಿವಮಂತ್ರಭವಂ ಮಹಾಪ್ರಭಾ
ವವಿದಿತಶೌರ್ಯನಾತನೊಳೆ ನಿಲ್ವುದು,ಗೆಲ್ವುದು,ಮಾರ್ಗಮಾಗದೀ
ಭುವನದೊಳಂತಱಿಂದೆಸಗು ಸಂಧಿಯ,ನೀಂ ಬಿಡು ತದ್ವಿರೋಧಮಂ ॥೧೧೭॥

॥ವ॥ ಅದಲ್ಲದೆಯುಂ—

ಪಿಡಿವರ್ಬಾಡಬವಹ್ನಿಯಂ,ಮಿಡಿವರಾದಿತ್ಯೇಂದುಬಿಂಬಂಗಳಂ,
ಕುಡಿವರ್ಸಪ್ತಸಮುದ್ರಮಂ,ಪೊಡೆವರಾಶಾದಂತಿಯಂ,ಕಿಳ್ತು ಮೇ
ಲಿಡುವರ್ಮೇರುವನೊತ್ತಿ ಸುತ್ತಿ ತೊಡುವರ್ ಶೇಷಾಹಿಯಂ,ಪಾಯ್ದು ಪೊ
ಯ್ದೊಡೆವರ್ ಪದ್ಮಭವಾಂಡಮಂ,ಮೃಡನ ಭಕ್ತರ್ಬಲ್ಲಿದರ್ಭೂವರಾ ॥೧೧೮॥

ಪಡೆ ಪಡಲಿಪೆ,ಪಡಗೇಱು
ತ್ತೊಡನೈತರೆ ನೀನುಮಾತನುಂ ಬೆಂಕೊಳಲಾ
ಕಡಲಳ್ಕಿ ಬಟ್ಟೆಗೊಟ್ಟುದು,
ಗಡ ನಡೆನೋಳ್ಪಾಗಳಾತನೇಂ ಜಾವಳನೇ ॥೧೧೯॥

॥ವ॥ ಅಂತುಮಲ್ಲದೆಯುಂ—

ಅತಿಸಾಹಸಿ,ಸತ್ಯವಚೋ
ನ್ವಿತನಧಿಕದಯಾಳು,ಧಾರ್ಮಿಕಂ ಪರಹಿತಪಂ-
ಡಿತನುಚಿತಜ್ಞಂ,ತಜ್ಞೋ
ನ್ನತಾವೃತಂ,ತನ್ನೃಪಾತ್ಮಜಂ ಸಂಧೇಯಂ ॥

ಮಾಯಾವಿ,ದೈವವಿಮುಖನ
ಪಾಯಾಸ್ಪದನಾಪ್ತರಹಿತನತಿಚಪಲನ್ನುಪಾ
ಧೇಯ ಜಡಮತಿಯತಿಹತೋ
ಪಾಯಂ,ಸಂಧೇಯನಲ್ತವಂ ರಣಜೇಯಂ ॥೧೨೧॥

---

೧ ಗಂಗವಿಸಿ (ಮೂ); ಗಗ್ಗಲಿಸಿ (ರಿ) ೨ ಬೆಸ (ಮೂ) ೩ ದೇ (ತಾ, ಕ, ಮೈ) ೪ ಧೇ (ಧಾ, ಮೂ)

ಕ್ಷಿತಿಯೊಳ್ಸಮನೆನಿಪ ಮಹೀ
ಪತಿಯೊಳ್ ಸಲೆ ಸಂಧಿಗೆಯ್ವುದಾಗದು,ತನ್ನಿಂ
ದತಿಬಳನಜೇಯನೆನಿಪು
ನ್ನತನೊಳ್ ನುತಮಲ್ತೆ ಸಂಧಿಕಾರ್ಯಂ ನೃಪತೀ ॥೧೨೨॥

ಎಲ್ಲಂದದಿಂದೆ ಕಾರ್ಯದ
ಗೆಲ್ಲಂಗಾಣಲ್ಕೆ ಬಲ್ಲೊಡಾತನೆ ಬಲ್ಲಂ,
ಬಲ್ಲಹ ಮೇಣಱಿಯದೊಧವ
ನಲ್ಲದೆ ಗಾವಿಲನಿಳಾಗ್ರದೊಳ್ ಪೆಱನೊಳ[೧]ನೇ[೧] ॥೧೨೩॥

ಅತಿಕೋಪಾತುರನಾಪ್ತವಾಕ್ಯಬಧಿರಂ,ಮಾಯಾವಿಸಂಘಾತಸಂ
ಗತಿರಕ್ತಂ,ರತಿಲಂಪಟಂ ಮದಯುತಂ ಮಾನಾತ್ಯಯಾಭೀತನು
ದ್ಧತವೃತ್ತಂ,ಗತಧೈರ್ಯನಾರ್ಯವಿಮುಖಂ,ನಿದ್ರಾಳು ತಾನಾದ ಭೂ
ಪತಿಗಾದೈಸಿರಿ ಗಾಳಿಗೊಡ್ಡಿದ ಸೊಡ[೨]ರ್ಪಾ[೨]ಳಾಗದೇಂ ಪೋಕುಮೇ ॥೧೨೪॥

ಅದಱಿಂದೆ ನೀತಿವಿದನ
ಪ್ಪುದು ನರಪತಿ,ವಿಬುಧರೊರೆದವೋಲ್ ನಡೆವುದು,ತ
ಪ್ಪದೆ ಸಿರಿ ಜಸವಂ ಬೆರೆವುದು,
ಪುದುವಾಳ್ವುದು ಬಾಳ್ವುದಾರ್ಯತತಿ ಮಚ್ಚುವಿನಂ ॥೧೨೫॥

ಕಲೆಯಱಿಯದ ವಿಟನಾತ್ಮನ
ನೆಲೆಯಱಿಯದ ಯೋಗಿ,ವೇದಮಱಿಯದ ಪಾರ್ವಂ,
ಬಲವಱಿಯದ ದಳಪತಿ,ನಯ
ದೊಲವಱಿಯದ ನೃಪತಿ,ಬಲ್ಲರಂ ಮೆಚ್ಚಿಕುಮೇ ॥೧೨೬॥

ಸರಸಗುಣಶಾಲಿ ದೋಷಾ
ಕರರಹಿತಂ ಸ್ವಪ್ರಸಿದ್ಧಮತಿ ಬಂಧುರಮಂ
ಬುರುಹಮದು ಮಿತ್ರರುಚಿವಿ
ಸ್ಫುರಿತಂ ಸಿರಿಗಾದುದಲ್ತೆ ಮನೆ ಮನುಜೇಂದ್ರಾ ॥೧೨೭॥

---

೧ ವೇ (ಮೂ) ೨ ರ್ಪೇ (ರಿ, ಮೂ).

ಸೋದರಿಯ ಮನೆಗೆ ಪಗೆ ಪಗೆ
ಗಾದಂ ನೆಲೆ ಸಲೆ ಕಲಂಕಿ ದೋಷಾಕರನಾ
ಹ್ಲಾದಿ ಗತಮಿತ್ರತೇಜದೊ
ಳಾದಾ ರಾಜಂಗಮೇಂ ಕ್ಷಯಂ ಸಮನಿಸದೇ ॥೧೨೮॥

ಎಡರಂ ಪಱಿ[೧]ಪೊ[೧]ಡೆ ಸಿರಿಯಂ
ಪಡೆವೊಡೆ ಪೞಿಪೊರ್ದದಮಳಗುಣಗಣಮಂ ತಾ
ಳ್ವಡೆ ಜಸಮನಾಂತು ಬಾಳ್ವಡೆ
ನುಡಿಯಂ ಕೇಳ್ವುದು ಜನಾಧಿಪಂ ಬುಧಜನರಾ ॥೧೨೯॥

ಕ್ಷಿತಿನಾಥ ನೀತಿವಿದ್ಯಾ
ಚತುರ್ಮುಖಂಗಮಮ ನಿನಗೆ ನೃಪನೀತಿಗುಣೋ
ನ್ನತಿಯಂ ಪೇಳ್ವುದು ಕಂತುಗೆ
ರತಿಕೃತಿಚತುರತೆಯನೊಸೆದು ಪೇಳ್ವವೊಲಕ್ಕುಂ ॥೧೩೦॥

ನಯಜಲಧಿ ನಿನ್ನೊಳೀಷ
ನ್ನಯಪಯಮಂ ಪಡೆದು ಮುನ್ನಮೀ ರಸನಾಬ್ಧಂ
ರಯದಿಂ ಸುರಿಯಲ್[೨]ಶ್ರು[೨]ತಿಶು
ಕ್ತಿಯೊಳೀಗಳ್ ಸಫಳಭಾವಮಂ ತಳೆಯದೆ ಪೇಳ್ ॥೧೩೧॥

ದೇವ ನೃಪನೀತಿಸಾರಮ
ನಾವಂ ನಿನ್ನಂತೆ ಬಲ್ಲನೀ ಭುವನದೊಳಿ
ನ್ನೀ ವಿಜ್ಞಾಪನಮಂ ಪರಿ
ಭಾವಿಸಿ ಸಂತಕ್ಕೆ ನಡೆ ಸಮುನ್ನತಸತ್ವಾ ॥೧೩೨॥

॥ವ॥ ಎಂದನೇಕವಿಧದಿನಾ ನೀತಿಭೂಷಣಮಂತ್ರಿಪಂ ಸಾಭಿಪ್ರಾಯಹಿತಮಿತಪ್ರಚುರವಚನನಿಚಯದಿನೊಡಂಬಡಿಸುತಲ್ಲಿಂ ತಳ್ವದೆ ಕೊಳುಗುಳದೆಡೆಗೆ ತಳರ್ದು ತನ್ಮಂತ್ರಿಪನಂ ಸಂಧಿಸಿ ಸಂಧಿಕಾರ್ಯೋಚಿತವಚನನಿಚಯದಿನೊಪ್ಪುಗೊಳಿಸಿ ತತ್ಸಮೇತಂ ಬಂದು ಮಣಿರಥದೊಳಿರ್ದ ರಾಜಶೇಖರರಾಜೇಂದ್ರಂಗೆ ಮಣಿಮಕುಟಮಂ ಮಣಿದು ಬದ್ಧಾಂಜಲಿಯಾಗಿ ನಿಂದಿರ್ಪುದುಂ ನಿಜಮಂತ್ರಿವದನವಿಜ್ಞಾಪನವಿದಿತಾಖಿಳವೃತ್ತಾಂತನುಪಶಾಂತಚಿತ್ತನಾಗಿ ನಡೆನೋಳ್ಪಾಗಳ್—

---

೧ ವೊ (ಮೂ, ಧಾ) ೨ ಕೃ (ಮೂ)

ಅಳಿಯೆ ತಮಮಿಂದು ಚೆಂಗದಿ
ರ್ಗಳನುಳಿದಮಳಾಂಶುಗಳಿವವೋಲ್ ರಿಪುಗರ್ವಂ
ಕಳಿಯೆ ಗತರಾಗನಯನಾಂ
ಚಳರುಚಿಯಂ ತನ್ಮುಖಾಬ್ಜಮೇಂ ಸೂ[1]ಸಿದುದೋ[1] ॥೧೩೩॥

॥ವ॥ ಆಗಳಾ ನೀತಿಭೂಷಣನಿಂತೆಂದಂ—

"ಯುವರಾಜರಾಜಶೇಖರ,
ಭವದಾಹವವಿಕ್ರಮಕ್ಕೆ ಕೌತುಕಮಾಳ್ದಿ
ಮ್ಮವನೀಶಂ ಮೆಚ್ಚಿ, ಮಹೋ
ತ್ಸವಮನನಾಗುತ್ತೆ ಮತ್ತೆ ಕಳುಪಿದನೆನ್ನಂ ॥೧೩೪॥

"ಎಮಗಂ ತಮಗಂ ಸಲ್ಲದು
ಸಮರಂ, ಕಂಡಪೆವು, ಕಪ್ಪಮಿತ್ತಪೆವೆಂಬೀ
ಕ್ರಮಮಂ ಬಿನ್ನವಿಸಲ್ಕೆಂ
ದು, ಮದೀಶ್ವರನೆನ್ನನಟ್ಟಿದಂ ಯುವರಾಜಾ" ॥೧೩೫॥

॥ವ॥ ಎಂಬುದುಮಾ ಧೀರೋದಾತ್ತಸಾರ್ವಭೌಮಂ ನಿಜಸಚಿವವದನಾರವಿಂದ-
ಮಂ ನೋಡಲೊಡನೆ—

"ಎರೆದರ್ಗಿಲ್ಲೆನ್ನಧೀವರ್ಗ್ಗಳಿಕೆ, ಮಱೆಗೆ ಬಂದಾತನಂ ಕಾವ ಪೆಂಪಾಂ
ತರಿಯಂ ಸೀಳ್ದಿಕ್ಕುವಾಪಾರ್ಶ್ರಿತರನನುದಿನಂ ಪಾಲಿಪೊಂದೊಳ್ಪು, ಗೌರೀ
ವರಭಕ್ತವ್ರಾತಮಂ ಮನ್ನಿಪ ಬಗೆ, ತೊದಳೊಂದಿಲ್ಲದೊಳ್ವಾತು, ಶಾಸ್ತ್ರೋ
ತ್ಕರಪಾಂಡಿತ್ಯಂ, ಭವದ್ವಂಶಜರೊಳಿದು ನಿಬದ್ಧಂ ನಿತಾಂ[2]ತಂ[2]ಪ್ರಸಿದ್ಧಂ ॥೧೩೬॥

॥ವ॥ ಎಂದ್ಮುಳ್ಳುದನುಪಚಾರಮಿಲ್ಲದೆ ನುಡಿದು, ಮತ್ತಮಿಂತೆಂದಂ—

"ಭುವನತ್ರಯದೊಳ್ ನಿನ್ನೊಳ್
ಬವರಂ[3]ಗೊ[3]ಳಲ್ಕಾರ್ಸಮರ್ಥರದಱಿಂದವನೀ
ಧವ ಸಿಂಹಳೇಂದ್ರನೊಳ್ಸಂ
ಧಿವಿಧಾನಮನೊಪ್ಪುಕೈ, ದಯಾಳುಗಳರಸಾ" ॥೧೩೭॥

---

೧ ಚಿಸಿತೋ (ಧಾ) ೨ ತ (ಮೈ, ತಾ) ೩ ಕೊ (ತಾ).

॥ವ॥ ಎಂಬ ವಿಜ್ಞಾಪನದಿಂ ತನ್ಮ[೧]ನಃ[೧]ಪ್ರಸನ್ನತೆವಡೆದು, ಬಂದ ಸಚಿವನನುಚಿತೋಕ್ತಿಗಳಿಂ ಮನ್ನಿಸಿ, ಗಳಿಲನೆ ಕಳುಪಲ್ಲವಂ ಬಂದೀ ವೃತ್ತಾಂತ[೨]ಮೆ[೨]ಲ್ಲಮನನ್ನ ತೋತ್ಸವಂ ಬಿನ್ನಪಂಗೆಯ್ಯಲೊಡನೊಡಂಬಟ್ಟವಂಗೆ ಬಹು ಭೂಷಣಾಂಬರಂಗಳಂ ಮಚ್ಚುಗೊಟ್ಟು, ಪಟ್ಟವಣೆಯಿಂದೇಳ್ದು ಪಟ್ಟಣಮಂ ಸಿಂಗರಿಸಿ ನಿಜಸಚಿವ ಸಾಮಂತ ದಂಡನಾಥಮಂಡಳಿಕರ್ವೆರಸು ವಿತತಕರಿತುರಗರಥಸುಭಟಪಟಲಪರಿವೃತಂ, ಪಟಹ ಡಿಂಡಿಮಶಂಖತಾಳಕಹಳಾಬಹುಳನಾದಬಧಿರೀಕೃತದಿಶೇಂದ್ರಂ ಸಿಂಹಳೇಂದ್ರಂ ಸಾಂದ್ರ ಹರ್ಷಮನಾಂತು ನಡೆಧಿದಿರ್ಗೊಂಡು ರಾಜಶೇಖರರಾಜೇಂದ್ರನಂ ರಾಜವೀಧಿಯೊಳೋಜೆಮಿಗೆ ತರ್ಪಾಗಳ್—

ಶ್ರೀಮತ್ಪ್ರಾಲೇಯಶೈಲೋದ್ಭವೆ ಶಿವೆ ಭುವನಾರಾಧ್ಯೆ ಕಲ್ಯಾಣಿ ಸಾಕ
ಲ್ಯಾಮರ್ತ್ಯಶ್ರೇಣಿ ರಕ್ಷಾಕರೆ ಭವಹರೆ ಶರ್ವಾಣಿ ಗೀರ್ವಾ[೩]ಣ[೩]ಮೌಳಿ
ಸ್ತೋಮಪ್ರೋದ್ದಾಮರತ್ನವ್ರಜಶಬಳರುಚಿಸ್ನಿಗ್ಧಪಾದಾಬ್ಜೆ ದೇವೀ
ಪ್ರೇಮಂಬೆತ್ತೆನ್ನನಾಗಳ್ ಪೊರೆ ಪುರಹರಚೇತಃಸರೋರಾಜಹಂಸೀ ॥೧೩೮॥

ಇದು ವಿನಮದಮರವರಮಕುಟತಟಘಟಿತಮಣಿಗಣಮಹಾಪ್ರಭಾಪಟಲಪರಿವೃತಪರ-
ಶಿವಶ್ರೀಪಾದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾಚಂಚಚ್ಚಕೋರಾಯ-
ಮಾನ ಸರಸಜನಮಾನಿತೋಭಯಕವಿತಾವಿಶಾರದ ಶ್ರೀಷಡಕ್ಷರ-
ದೇವರಚಿತ[೪]ಮಾದ[೪]ರಾಜಶೇಖರವಿಳಾಸವಿಪುಳಪ್ರಬಂಧ-
ದೊಳ್ರಾಜಶೇಖರವಿಜ[೫]ಯ[೫]ವರ್ಣನಂ
ಷಷ್ಠಾಶ್ವಾಸಂ ಮಂಗಳಮಸ್ತು

ಮಂಗಳಮಹಾ

ಶ್ರೀ ಶ್ರೀ ಶ್ರೀ

೧ ನ (ಮೂ) ೨ ವೆ (ತಾ, ಧಾ) ೩ ಣೆ (ಮೈ, ಧಾ) ೪ ಮಪ್ಪ (ಮೂ, ಮೈ, ಧಾ)
೫ ಯಾದಿ (ರಿ); ಯಾ (ಮೂ).

ಸಪ್ತಮಾಶ್ವಾಸಂ

ಶ್ರೀಧರಣೀಧರಜಾಕುಚ
ಭೂಧರಕೃತಧಾತುನಿಜಕರಾರುಣರುಚಿಗಂ
ಗಾಧರನೆಮ್ಮಂ ಪೊರೆಗೆ ಪ
ಯೋಧರಶಿತಿಕಂಧರಂ ಸದಾಶಿವಲಿಂಗಂ ||೧||

ಕರಿ ಕಾರ್ಮುಗಿಲಂತಿರೆ,ಬ
ಜ್ಜರದಂಕುಶಮುಮುರ್ದ ವಜ್ರದಂತಿರೆ,ಮೇಲಿಂ
ದಿರನ್ನಾರೋಹಿಸಿ ಬರ್ಪಂ
ತಿರೆ ಬಂದಂ ರಾಜಶೇಖ[೧]ರ[೧]ಕ್ಷಿತಿಪಾಲಂ ||೨||

ಇನರುಚಿಯಂ ಪಳಂಚಲೆಯೆ ಮೌಳಿಮಣಿಪ್ರಭೆ,ಗಂಡಭಿತ್ತಿಯಂ
ಘನಮಣಿಕುಂಡಲಾಂಶು ಮಿಗೆ ಚಿತ್ರಿಸೆ,ವಕ್ತ್ರಮರೀಚಿಪೂರ್ಣಚಂ
ದ್ರನ ಕದಿರಂ ಪಗಲ್ತರೆ,ತನುದ್ಯುತಿ ತಳ್ವದೆ ನೋಳ್ಪ ಕಾಮಿನೀ
ಜನಮನದೊಳ್ಮನೋಜಜನನಂಬಡೆವುತ್ತಿರೆ ಬಂದನಾ ನೃಪಂ ||೩||

||ವ|| ಅಂತು ಬರ್ಪಾಗಳ್—

ಪಾಡುವ [೨]ಗೀತ[೨]ಮಂ ನಿಲಿಸಿ,ವೀಣೆಯನಾಳಿಯ ಕಯ್ಯೊಳಿತ್ತು,ಮ
ತ್ತಾಡುವ ನೆತ್ತಮಂ ಬಿಸುಟಲಂಕೃತಿಯಂ ರಯದಿಂದೊಡರ್ಚಿ,ಮೇ
[೩]ಣಾ[೩]ಡುವ ನೃತ್ಯಮಂ ತೊಲಗಿ,ಕೇಳ್ವಿನಿಗಬ್ಬಮನೊತ್ತಿ,ಬಂಧವ
ನೋಡಿದರಾ ಕುಮಾರಕನನ್ನಾ ಪುರದಂಗನೆಯರ್ವಿಳಾಸದಿಂ ||೪||

||ವ|| ಮತ್ತಮವರೊಳೊರ್ವಿಚ್ಚೆಗಾರ್ತಿ—

ಕೆಂಬರಲ್ಗೋಲೆ,ಕೇತಕಿಯ ಸೋರ್ಮುಡಿ,ಕೆಂದಳಿರುದ್ಧಕರ್ಣಪೂ
ರಂ,ಬಗೆಗೊಂಬ ಮಲ್ಲಿಗೆಯ ಚೊಲ್ಲೆಯಮುಬ್ಬಗುಣಾಂಬರಂ,ಸುವ
ರ್ಣಾಂಬುಜಕರ್ಣಿಕಾರಚಿತಕಾಂಚಿ ತೆಱಂಬೊಳೆದೊಪ್ಪೆ,ಪೂತ ಮಾ
ವಂ ಬಿಡದೇಱಿ ನೋಳ್ಪ ರತಿಯಂತಿರೆ ಸೌಧಮನೇಱಿ ನೋಡಿದಳ್ ||೫||

---

೧ ರಂ (ಮೂ) ೨ ಗಾನ (ಧಾ) ೩ ಣ್ಣೋ (ಪ್ಯೈ, ಮೂ, ಕ)

॥ವ॥ ಮತ್ತಮೊಂದು ಧರ್ಮ್ಯಹರ್ಮ್ಯದಗ್ರಪ್ರದೇಶದಲ್ಲಿ—

ನಿಱಿವಿಡಿದುಟ್ಟು ಚೀನಲಲಿತಾಂಬರಮಂ ಪೊಸಮುತ್ತುದೊಟ್ಟು ಮೇ
ನ್ಮೆಱುಗುವ ವಜ್ರದೋಲೆಗಳ ಪಾಲೆಗಳೊಳ್ತಳೆದಣ್ಬುಗೆಯ್ದು ಬಾಂ
ದೊಱೆನೊರೆಯಂತೆ ತೋರ್ಪ ಸಿರಿಖಂಡಮನೊರ್ವ ಬೆಡಂಗಿ ವೀಣೆಯಂ
ನೆಱೆ ಪಿಡಿದೇಱೆ ವಾಣಿಯೆನೆ ಜಾಣೆ ಜಲಕ್ಕನೆ ನಿಂದು ನೋಡಿದಳ್ ॥೬॥

ಕನತ್ಕನಕಭೂಷಣಂದಳೆದು ಕುಂಕುಮಕ್ಷೋದಮಂ
ಘನಸ್ತನಕೆ ಲೇಪಿಸುತ್ತೊಡನೆ ತಾಳ್ದು ಪೊಂಬಟ್ಟೆಯಂ
ವನೇರುಹಮನೋಜೆಯಿಂ ಪಿಡಿದು ನಿಂದು ಹರ್ಮ್ಯಾಬ್ಜದೊಳ್
ಜನೇಶಸುತನಂ ರಮಾವಧುವೆನಲ್ಪೆಱಳ್ನೋಡಿದಳ್ ॥೭॥

॥ವ॥ ಮತ್ತಮೊರ್ವಳ್ಮಾಧುರ್ಯಮನೋಹರೆ—

ಮುಡಿಯಿಂ ಪೂಮಾಲೆ ಸೂಸುತ್ತಿರೆ ಪೊಡರೆ ನಿತಂಬದ್ವಯಂ ಮುಂಗುರುಳ್ಸಾ
ಲ್ವಿಡಿದೆತ್ತಂ ನರ್ತಿಸುತ್ತೊಪ್ಪಿರೆ ಚಳಧವಳಾಪಾಂಗಮಿಂಬಾಗೆ ಕಂಪಂ
ಬಡೆದುತ್ತುಂಗಸ್ತನಂಗಳ್ಮಿಸುಗೆ ನಿಱಿ ಕರಂ ಜಾಱೆ [1]ನೈ[1]ಸಥ್ಯಮಂ ತಾಂ
ತೊಡೆ[2]ದಿ[2]ರ್ದಿರ್ದಂತೆ ಬಂದಂದವನಿಪತಿಯನಬ್ಜಾಕ್ಷಿ ನೋಡುತ್ತಮಿರ್ದಳ್ ॥೮॥

॥ವ॥ ಮತ್ತಮೊರ್ವಳಖರ್ವಸಗರ್ವತಾರುಣ್ಯವತಿ—

ಅಳಿದಳಕಾಳಿ ಕಂಪಿಸುವ ನುಣ್ದೊಡೆ ಸೂಸುವ ಸುಯ್‌ಬೆಮರ್ತ ಕೋ
ಮಳತನು ಗುಜ್ಜುಗೊಂಡ ಮೊಲೆವು[3]ಬಿ[3]ಬೆಳರ್ತಧರಂ ಸಡಿಲ್ದ ಮಂ
ಜುಳವಸನಂ ಸರಾಗನಯನಾಂಚಳಮೊಪ್ಪಿರೆ ಕಂತುಕೇಳಿಯಾಂ
ತೆಳೆಯಳೊಱಲ್ದು ಬಂದು ಮಣಿ[4]ವಾ[4]ಗಿಲೊಳೀಕ್ಷಿಸಿದಳ್ ಮಹೀಶ[5]ನಂ[5] ॥೯॥

ಕುರುಳಂ ಕೂರುಗುರಿಂದೆ ನೇವರಿಸು[6]ತಂ[6]ಹಸ್ತಾಬ್ಜಲೀಲಾಬ್ಜಮಂ
ತಿರುಪು[7]ತ್ತಂ[7] ಕಚಗಂಧಕಾರ್ದೆಱಪ ಭೃಂಗವ್ರಾತಮಂ ಸೋವು[7]ತಂ[7]
ಪರಪುತ್ತಂ ನವಪುಷ್ಪವೃಷ್ಟಿಯನಪಾಂಗದ್ಯೋತಿಯಿಂದೊರ್ವ ಸೌಂ
ದರಿ ಬಂದೀಕ್ಷಿಸಿದಳ್ ಪ್ರಸೂನವಿಶಿಖಶ್ರೀರೂಪನಂ ಭೂಪನಂ ॥೧೦॥

॥ವ॥ ಮತ್ತಂ—

---

೧ ನೇ (ಮೂ, ಮೈ) ೨ ರ್ದಿ (ಮೂ) ೩ ಬ್ಬಿ (ಮೂ) ೪ ಬಾ (ರಿ) ೫ ನಾ (ತಾ) ೬ ತುಂ (ರಿ) ೭ ತ್ತುಂ (ರಿ)

ಮುಡಿ ಬಿಡುತಂದು ಸೂಸೆ ಮುಗುಳಂ ಮೊಲೆ ಮೇಲುದ[೧]ನೊ[೧]ತ್ತೆ ಬಳ್ಕಿತೆ
ಳ್ನಡು ಕಡೆಗಣ್ವಿಳಾಸಮನೆ ಸೂಸೆ ರವಂಗುಡೆ ಕಾಂಚಿ ಬಿಣ್ಪಿನಿಂ
ಜಡಿಯೆ ನಿತಂಬಬಿಂಬ ಮಿಳಿ[೨]ದೊರ್[೨]ಪ್ಪಿರೆ ಬಲ್ನಿಱಿ ನೀಱಿ ಸಾರೆವಂ
[೩]ದಡರ್ದೆ[೩]ಳೆಮುತ್ತಿನುಪ್ಪರಿಗೆ[೪]ಯುಂ ನಡೆ[೪]ನೋಡಿದಳಾ[೫]ನರೇಂದ್ರ[೫]ನಂ ॥೧೧॥

ಕಡೆಗಣ್ಕಂತುಶರಾಸನಕ್ಕೆ ಸುಮನೋಬಾಣಂಗಳಂ ನೀಡೆ ಸೋ
ರ್ಮುಡಿ ಸಾರ್ದಾಱಿಡಿಗಳ್ಗೆ ಸಾರ್ಚೆ ಕುಸುಮಾಮೋದಂಗಳಂ ಚೆಲ್ವ ಮೆ
ಲ್ನುಡಿ ಪಾಂಡಿತ್ಯಮನೀಯೆ ಕಯ್ಯ ಗಿಳಿಗೊಲ್ದೈತಂದ ಠಾಯಂಚೆಗೊ
ಳ್ನಡೆಯಂ ಮೆಲ್ಲಡಿ ಬೀಱಿ ಬಂದು ಪೆಱಿಳೊರ್ವಳ್ ಭೂಪನಂ ನೋಡಿದಳ್ ॥೧೨॥

ಕುಡಿಮಿಂಚಂ ಮುಱಿದಂತಿರಾಗೆ ಕಡೆಗಣ್ನೋಟಂ, ಮೃದುಸ್ಮೇರಘುಂ
ಗಡಲಂ ತುಳ್ಕಿದ ಮಾಳ್ಕೆಯಿಂದೊಗೆಯೆ, ಜೇನ್ಪೈಸೋನೆಯಂ ಸೂಸೆ ಮೆ
ಲ್ನುಡಿ, ಪಾದಾರುಣರೋಚಿ ಚೆಂದಳಿರ್ಗಳಂ ಸಾಲಿಟ್ಟವೊಲ್ತೋಱಿ, ಬಂ
ದುಡುರಾಜಾನನೆ ರಾಜಶೇಖರನನೊರ್ವಳ್ ಕೂರ್ಮೆಯಿಂ ನೋಡಿದಳ್ ॥೧೩॥

॥ವ॥ ಇಂತು ನೀಱೆಯರ್ [೬]ನೆರೆನೆರೆದು[೬] [೭]ನೆಲೆ[೭]ವಾಡಂಗಳ ನೆಲೆನೆಲೆಯೊಳ್ನೋಡುತ್ತುಮಿರೆಯಿರೆ—

ಸೆಳೆದುಧವರಾಸ್ಯರುಚಿ ನವ
ಸಳಿಳಚಳಚ್ಚಪಳನಯನಶಫರಂಗಳನಾ
ನಳಿನದಳಧವಳನಯನೋ
ಜ್ವಳರುಚಿಜಾಳಕಮಿಳಾತಳಾಧಿಪಸುತನಾ ॥೧೪॥

॥ವ॥ ಆಗಳಿತ್ತಲಾ ಸಿಂಹಳೇಂದ್ರನಂತಃಪುರಸರೋವರಬಾಲಹಂ[೮]ಸಿ[೮]ಸರ್ವಮಂಗಳಾವರದಿಂದುದಯಿಸಿದ ಸರ್ವಮಂಗಳೆಯೆಂಬ ತದ್ರಾಜಪುತ್ರಿ ರತಿವಿಳಾಸಮಂ ತಳೆದತಿವಿನೋದದಿಂ, ಕೇಳೀವನದ ಕೆಂದಳಿರ್ವಂದರದ್ದೊಳ್[೯]ವಳಯದ[೯] ಕುಸುಮಮಂಟಪದೊಳಲರ್ವಸೆಯೊಳ್ಪಸದನಂಗೊಂಡು ಕುಳ್ಳಿರ್ದು, ಸೌಂದರ್ಯಶಾರದೆಯೆಂಬ ಸಖಿಯ ಸಂಗೀತಮನಾಲಿಸುತ್ತಿರ್ಪಿನಮಾಳೀಜನಂ ಪರಿತಂದು ಸಂದಣಿಸಿ ನಿಂದು—

---

೧ ನೆ (ರಿ) ೨ ದೊ (ರಿ) ೩ ದೊಡನೆ (ರಿ) ೪ ಯೇಱುತೆ (ರಿ) ೫ ಕುಮಾರ (ತಾ) ೬ ನೆರೆದು (ತಾ) ೭ ನೆಲೆ ನೆಲೆ (ಮೂ) ೮ ಸಿ (ತಾ. ಕ, ಮೂ) ೯ ವಳವಳಾಲಯದ (ವೈ), ೧೦ ಎಳೆಯದ (ತಾ)

ಜಲಜಾತಾಯತಲೋಚನಂ, ಕು[೧]ಮು[೧]ದಿನೀಕಾಂತಾನನಂ, ಕಾಂತಿಮಂ
ಜುಲಕಾಯಂ, ನವಯೌವನಾಂಕನತಿಸೌಂದರ್ಯಾನ್ವಿತಂ, ರಾಜಸಂ
ಕುಳದೊಳ್ಮೀಱಿದ ನೀಱನೈತರುತಮಿರ್ಪಂ ನೋಡಲೇಳೆಂದು ಪೇ
ಳೆ, ಲಸತ್ಸಿಂಹಳರಾಜನಂದನೆ ಮನಂಥಂದೇಳ್ದಳಂದೀಕ್ಷಿಸಲ್ ॥೧೫॥

ಅ[೨]ರ[೨]ಗಿಳಿವಿಂಡು ತೊಂಡುಗೆಡೆವಂತಿರೆ ನುಣ್ಣುಡಿ, ಸೋಗೆ ಸಾಗಿ ಸೈ
ವರಿವವೊಲೊಪ್ಪೆ ಸೋರ್ಮುಡಿ, ತಳಿರ್ತೊಳಪಂತಿರೆ ಕೆಂದಳಂ, ಕಳ
ಸ್ವರಮದು ಕೋಕಿಳಸ್ವರದವೋಲಿರೆ, ಬಳ್ಳಿಮೊಲೆ ಪೂದೊಡಂಬೆಯಂ
ತಿರೆ, ಬನಮೆಯ್ದುವಂತೆಸೆಯೆ ಪೆಣ್ಬಡೆ, ಬಂದಳದೊಂದು ಬಿಂಕದಿಂ ॥೧೬॥

॥ವ॥ ಅಂತು ವನಲಕ್ಷ್ಮಿ ವಸಂತನಂ ನೋಡ[೩]ಲೆಳಸುವಂತೆ[೩] [೪]ಸುಜನ[೪]ವನ ವಸಂತನಂ ಭೂಕಾಂತನಂ ಕಾಂತೆ ನೋಡಲೆಳಸಿ ಗಳಿಲನೇಳ್ತಂದು—

ನೆಲೆಮೊಲೆಗಳ್ಕದಕ್ಕದಿಸೆ, ಸೂಸೆ ಬಳ್ಳಲ್ಮುಡಿ ಪುಷ್ಪಬೃಂದಮಂ,
ಕಲರುತಿಕಿಂಕಿಣೀಕಲಿತಕಾಂಚಿರವಂಗುಡೆ, ನೂಪುರಂ, ಪೊದ
ಳ್ದುಲಿಯೆ, ನಿತಂಬಮುಂ ಜಡಿಯೆ, ತೆಳ್ನಡು ಬಳ್ಕೆ, ಸಖೀಕದಂಬಕಂ
ನಲಿದೊಡನೇಱಿ, ನೀಱಿ ಬಿಡದೇಱಿದಳ್ಬೊಯ್ಯನೆ ರ[೫]ಮ್ಯ[೫]ಹರ್ಮ್ಯಮಂ ॥೧೭॥*

॥ವ॥ ಅಂ[೬]ತೇಱು[೬]ವಾಗಳ್ಸಡಗರಿಸುತೊಡನಾರೋಹಿಪ ಮಡದಿಯರ ಮುಡಿ ಮುಡಿಗಳೊಡನೊಡ[೭]ನೊರಸ[೭]ಲೊಡನೊಗೆದು ನೆಗೆವ ಪುಡಿಗತ್ತುರಿಯ ಪರಾಗಪಟಲಂ ಪರೆದು ಪರಕಲಿಸಿ ಹಸನರುಚಿಚಂದ್ರಿಕೆಗಗಿದು ನೆಗೆವ ತಮಃಪಟಲದಂತೆ ಪರಿರಂಜಿಸೆಯುಂ ತನುಸಹಜಸರಸಸುರಭಿಗೆಱಗಲವ್ವಳಿಪಳಿಪ್ರತಾನದನೂನ[೮]ಗಾನ[೮]ಧ್ವನಿಯನಾಕರ್ಣಿಸಿದ ಕರ್ಣಮದಕ್ಕೆ ಮಚ್ಚುಗೊಟ್ಟಪುದೆಂಬ ಮಾಳ್ಕೆಯಿಂ ಕಮಳಕಮನೀಯಕರ್ಣಪೂರಂ ಜಗುಳ್ದು ಬೀಳುತ್ತಿರೆಯುಂ ಬಿಂಬಾಧರದ ಕೆಂಬೊಳಪಂ ತಳೆದು ಕೆಂಬಲರಂತೆ ತೊಳತೊಳಪ ನಾಸಾಭರಣಮೌಕ್ತಿಕಂ ಸಂಜೆಗೆಂಪು ಪುದಿದ ಶುಕ್ರನಂತೆ ಮೆಱೆ[೯]ದಲುಂಗುರ್[೯]ತ್ತಮಿರೆಯುಂ [೧೦]ಥ[೧೦]ಳಥಳಿಸಿ ಬಳೆದು ಬಳ್ಳಿವರಿದು ಪರೆದು ಪಸರಿಪ ಕಟಾಕ್ಷರುಚಿರರುಚಿಯೆಂಬ ವದನವಿಧುವಿಮಳಪ್ರಭಾಪಟಲಂ ಕನತ್ಕನಕಮಯಮಣಿಭೂಷಣಾಂಶುವಿಸರದರುಣತರುಣಾತಪದೊಳ್ಮಲ್ಲಗಾಳೆಗಮನೊಡರ್ಚೆ ಕಂಡು ಕಡು ನಡುಗುವ ಜಕ್ಕವಕ್ಕಿಗಳಂತೆ ನೆಲೆಮೊಲೆಗಳ್ಕದಕ್ಕದಿಸೆಯುಂ ಮೃದು

೧ ಮಿ (ತಾ, ರಿ) ೨ ರೆ (ಮೈ) ೩ ಲೆಳಸಿಬಪ್ಪಂತೆ (ಮೂ) ೪ ಸುಜನವನ (ಮೂ)
೫ ರಯ್ಯ (ತಾ, ರಿ) ೬ ತೆಱಗು (ಮೂ) ೭ ನೊಸರಿನ (ಮೂ) ೮ ರಾಗ (ಮೂ, ಮೈ)
೯ ದಲುಗು (ಮೂ). ದಲಗು (ರಿ) ೧೦ ತ (ಮೈ)

*೧೭ ರಿಂದ ೩೬ ರ ವರೆಗಿನ ಪದ್ಯಗಳು ಮೂ. ಪ್ರತಿಯಲ್ಲಿಲ್ಲ.

[1]ಳ[1]ತರಬಾ[2]ಹಾ[2]ಮೃಣಾಳನಾಳದೊಳೊಗೆದರವಿಂದದ ಸಿರಿಯೆಳನೊಳಕೈದ ಲೀಲಾರವಿಂದದಮಂದಗಂಧಸಂದೋಹಕ್ಕೆ ಮೊಱೆದೆಱಗುವಿಂದಿಂದಿರಬೃಂದದೊಳ್ಪಿಣಸಲೆಳಸಿ ನೆಗೆವಂತೆ ಘೂರ್ಣಾಳಕಂ ಪಣೆವಿಡಿದು ಕುಣಿವುತ್ತಿರೆಯುಂ ಮದನಮರಾಳ[3]ನಾ[3]ಡುವ ಮಳಲೊಟ್ಟಿಲೆಂಬಂತಿಂಬುವಡೆದು ನಿತಂಬಬಿಂಬಂ ನಿಜಭಾರಮಂ [4]ಪೊರಲಾಱ[4]ದೆ ದಡದಡಿಪ ನುಣ್ಡೊಡೆಗೆ ವಿಪುಳತರಕುಚಭರಮಂ ತಳೆದ ಬಡನಡುವಂ ತೋಱಿಪುರುಡಿಸಿ ಜಡಿವಂತೆ ಮಣಿಮೇಖಲೆ ಝುಣಝುಣಿಸುತ್ತಿರೆಯುಂ ಸೋರ್ಮುಡಿಯೆಂಬ ಕಾರ್ಮುಗಿಲಿಂದಿಳಿವ ಮುಗುಳ್ವಳೆಗೆ ಚಿಗುರ್ತು ಸೊಂಪೇಱಿದ ಪಸಲೆಯಂತೆಸೆವ ಪಸುರ್ಮಣಿಯ ಸೋಪಾನಕ್ಕೆ ಪದತಳಮಲಕ್ತಕರಸದಿನಲ್ಲಿಗಲ್ಲಿಗಂದಂಗೊಳಿಸಿದ ಕೆಂಬ[5]ರಲ[5]ಸಿರಿಯಂ ನಿರವಿಸುತ್ತಿರೆಯುಮತಿವಿಳಾಸದಿಂ ಯುವರಾಜವದನರಾಜಮಂಡಲದರ್ಶನೋತ್ಸುಕೆಯಾಗಿ ಕುವಲಯಾಕ್ಷಿಯದಱ ಮೇಲ್ನೆಲೆಗೇಳ್ತಂದಾಗಳ್—

ಆ ಮಣಿಹರ್ಮ್ಯದ ಮುಂದಣ
ಸೋಮ್ಯಾಶ್ಮದ ವೇದಿಕಾಗ್ರದೊಳ್ನಿಂಥವಳು
ದ್ದಾಮನಯನಾಂಶು ಪಸರಿಸೆ,
ಕೋಮಲೆ ತದ್ರಾಜವೀಥಿ[6]ಯದನೀ[6]ಕ್ಷಿಸಿದಳ್ ॥೧೮॥

ಹಿಮಕರಕಾಂತಿಯಂ ಕವರ್ದುವಲ್ಲದೆ ತನ್ಮೃಗನೇತ್ರಶೋಭೆಯಂ
ಕಮಳದ ಚೆಲ್ವುಮಂ ಸೆಳೆದುವಲ್ಲದೆ ಮತ್ತದಱೊಂದು ಲಕ್ಷ್ಮಿಯಂ
ಭ್ರಮರದ ಕರ್ಪುಮಂ ತೆಗೆದುವಲ್ಲದೆ ಮೀಣದು ಪಾರ್ವಲೀಲೆಯಂ
ಪ್ರಮದೆಯ ಕಣ್ಗಳೀಳ್ದೆಳೆದುಕೊಂಡವೊಲಾದುದು ಕಣ್ಗೆ ನೋಳ್ಪರಾ ॥೧೯॥

॥ವ॥ ಆ ಪ್ರಸ್ತಾವದೊಳಾ ರಾಜವೀಥಿಯಲ್ಲಿ—

ತೊಳಪ ಕಿರೀಟರತ್ನಕರಮಂಬರಮಂ ಮಿಗೆ ಚಿತ್ರಿಸುತ್ತೆ ಕಂ
ಗೊಳಿಸೆ ಮುಖೇಂದುಮಂಡಳಮರೀಚಿವಧೂನಯನೋತ್ಪಳಂಗಳಂ
ಕೆಳೆಗೊಳಿಸುತ್ತಲರ್ಚೆ ನಿಜರೂಪು ಮನೋಜನನಂಗಹೀನನೆಂ
ದಿಳೆ ನುಡಿವಂತೆ ಮಾಡಿ ನಡೆತಂದನಿಭಾಗ್ರದೊಳಾ ನರಾಧಿಪಂ ॥೨೦॥

॥ವ॥ ಅಂತು ನಡೆತರ್ಪಾಗಳ್—

---

೧ ಲ (ಮೈ, ಮೂ) ೨ ಹೂ (ತಾ) ೩ ವಾ (ಮೈ, ಮೂ) ೪ ಪೋಱದೇ (ರಿ)
೫ ಲರ (ಮೈ) ೬ ಯುಂ ನೀ (ಮೈ); ಯುಂ ವೀ (ತಾ).

ನಗೆಗಣ್ಣೊಸೆ ಸುಧಾಮರೀಚಿರುಚಿಯಂ,ಘರ್ಮಾಂಭಸಂ ಪೊಣ್ಮೆ ನು
ಣ್ಮೊಗದೊಳ್ಚಿತ್ತದೊಳಾಗೆ ಕೌತುಕರಸಂ,ಪೀನೋರುಗಳ್ಕಂಪನಂ
ಬುಗೆ,ಲೀಲಾಕಮಲಂ ಕರಾಂಬುಜದಿನಾಗಳ್ಜಾರೆ,ಕಂಜಾಸ್ತ್ರನಂ
ನಗುವಂತೊಪ್ಪುವನಂ ಮೃಗಾಕ್ಷಿ ನಡೆ ನೋಡುತ್ತಿರ್ದಳಾ ಭೂಪನಂ ॥೨೧॥

॥ವ॥ ಇಂತನಿಮಿಷದೃಷ್ಟಿಯಿಂ ನಿಂದು ನಿರೀಕ್ಷಿಪ ಸಖೀಜನಮಧ್ಯದೊಳ್ತನ್ನನ
ನೂನಸ್ನೇಹರಸಭರಭರಿತ ಕಟಾಕ್ಷದಿನಭೀಕ್ಷಿಸುತ್ತಮಿರ್ಪ[೨]—

ಕಾಮಿನಿಯಂ,ತನುಜಿತಸೌ
ದಾಮಿನಿಯಂ,ಸೌಧದಗ್ರದೊಳ್ಕಂಡನಿಳಾ
ಭಾಮಿನಿಯರಸಂ,ಮುರರಿಪು
ಗೋಮಿನಿಯಂ ಕಾಣ್ಬವೋಲ್ ಸರೋರುಹದೆಡೆಯೊಳ್, ॥೨೨॥

॥ವ॥ ಅಂತು ಕಂಡತಿವಿತತಕೌತುಕರಸಪ್ರವಾಹದೊಳ್ಮುಳುಂಗಿ ಮೋಹಿಸಿ
ನಿಂದು—

ಅಮರಾಂಗನೆಯಿವಳಲ್ಲದೊ
ಡೆಮೆಯಿಕ್ಕದ ದೀರ್ಘನಯನಮೀ ಸೌಂದರ್ಯಂ
ಸಮನಿಪುದೆ? ನೋಳ್ಪೊಡೆಂದಾ
ರಮಣಿಯನಾ ನೃಪಕುಮಾರನೀಕ್ಷಿಸುತೆಂದಂ ॥೨೩॥

ಪಡೆಯದೆ ಬಗೆಗಚ್ಚರಿಯಂ
ಪಡೆಯದೆ ನಿಜಸೃಷ್ಟಿಗತುಳತರನವಯಶಮಂ
ಪಡೆಯದೆ ಹರ್ಷಮನತನುಗೆ
ಪಡೆದನೆ ಕನ್ನಿಕೆಯನೀಕೆಯಂ ಕಮಳಭವಂ ॥೨೪॥

॥ವ॥ ಎಂದು ಬಗೆಯೊಳ್ಬಗೆದು ಭಾವಿಸಿ ಪೊಗಳ್ತೆವಡೆದವಳವಯವಸೌಂದರ್ಯ
ಮನಾ ಕಳಾನಿಳಯಂ ಬೇಱೆಬೇಱೆ ಪರೀಕ್ಷಿಪಾಗಳ್—

ಆ ಸರ್ವಮಂಗಳೆಯ ಶೋ
ಭಾಸೌಭಾಗ್ಯಮನದಾವನಭಿವರ್ಣಿಪನಾ
ವಾಸುಕಿವಾಣೀವರವರ
ವಾಸವಸಚಿವರ್ಗಮಾದೊಡಂ ತೀರ್ದಪುದೇ ॥೨೫॥

---

೧ ನು (ತಾ; ಕ). ೨ ರ್ಪಂ (ಮೈ). ರ್ಪಾಗಳ್ (ಶಾ)

ತಾವರೆಯಲ್ಲಿ ತಾರೆ ಜನನಂಬಡೆದಂದು, ನಗೇಂದ್ರಮೂಲದೊ
ಳ್ಭಾವಿಸೆ ಬಾಳೆಗಂಬಮೊಗೆದಂದು, ಲತಾಗ್ರದೊಳದ್ರಿಪುಟ್ಟಿದಂ
ದಾ, ವಿಧುಬಿಂಬಮುಂಬವಳಮಂ ಪಡೆದಂದು, ತದಗ್ರದಲ್ಲಿ ಭೃಂ
ಗಾವಳಿ ಮೂಡಿದಂದು, ಸತಿಯಂಗಮನಾಂ ಪೊಗಳಲ್ಕೆ ಸಾಲ್ದಪೆಂ ॥೨೬॥

ಕುಸುಮಶರನಸುಗೆ ಸರಮಂ
ಮಸೆಯೆ ಸುಧಾ[1]ಕಿ[1]ರಣಬಿಂಬಶಾಣೋಪಲದೊ
ಳ್ಮಸಗಿ ಪನಿಪತ್ತಿ ತುದಿಯೊ
ಳ್ಮಿಸುಗುವುದೆನೆ ಮೆಱೆದುವವಳ ಪದತಳದುಗುರ್ಗಳ್ ॥೨೭॥

ಬಳೆದಡರ್ದ ತುಂಗಕುಚಗಿರಿ
ಗಳ ಮಱೆಯೊಳ್ಕಾಣದಾಸ್ಯಶಶಿಯಂ ವಿರಹಾ
ಕುಳಮೆಳೆದಳಿರೊಳ್ತಾರಾ
ವಳಿ ನಿಂದವೊಲೆಸೆದುದವಳ ಪದನಖನಿ[2]ಕರಂ[2] ॥೨೮॥

ಅಂದುಗೆಯ ಕಳನಿನಾದದೊ
ಳೊಂದಿದ ಸೌಂದರಿಯ ಮಂದಗತಿಯತಿಶಯಮಂ
ಕುಂದದೆ ಮಾಡೆಂದಜನಂ
ಬಂದೇಗಳ್ಪೊತ್ತು ಸೇವಿಪುದು ಕಳಹಂಸಂ ॥೨೯॥

ಲಲನೆಯ ನುಣ್ದೊಡೆ ತಮ್ಮಂ
ಗೆಲೆ ಸೋಲ್ತೊಡನೆಯ್ದಿ ಪೊಕ್ಕು ಭಯಭರದಿಂದಂ
ತಲೆವಾಗಿ ನೀರೊಳಿನ್ನುಂ
ನೆಲಸಿರ್ದ[3]ಪುವ[3]ಲ್ತೆ ಬಾಳೆಗಳ್ಬನದೆಡೆಯೊಳ್ ॥೩೦॥

ಕರಿಶಿರದ ಪಿರಿಯ ಸಿರಿಯಂ
ಪರಿಭವಿಸಿದೊಡವಳ ಸುಘನಜಘನಂ ಮಿಗೆ ತ
ತ್ಕರಚರಣಸೋದರಂಗಳ
ನರುಣಾಂಬುಜಪಲ್ಲವಂಗಳಂ ಪಱಿದಿಡುಗುಂ ॥೩೧॥

---

೧ ಕ (ವ್ಮೈ) ೨ ಚಯಂ (ತಾ) ೩ ಪ (ಠಿ)

ಬಡಬಾಸೆಯೆಂಬಸಿತಫಣಿ
ಯೆಡೆಗೊಂಡುದು ಸಿಂಹವಿಜ[1]ಯಿ[1]ಯೆನಿಸಿರ್ದೀಗ
ಳ್ಪಿಡಿಗೊಳಗಾದೆನೆನು[2]ತ್ತುಂ[2]
ಬಡವಾಯ್ತೆನೆ ಮಧ್ಯಮೆಸೆದುದಾ ಮಾನಿನಿಯಾ ॥೩೨॥

ಸ್ತನಕನಕಕ[3]ಲ[3]ಶನಿಧಿಯಂ
ಮನಸಿಜಸಾಧಕನೆಯುಗುಳ್ದು ನೆಗಪಿದ ಕುಳಿಯೆಂ
ದೆನೆ ಸುಳಿನಾಭಿ ವಿಳಾಸಾ
ವನಿ ವನಿತಾಮಣಿಯ ತೆಳ್ವಸಿಱೊಳೆಸೆದಿರ್ಕುಂ ॥೩೩॥

ಸುಲಲಿತಜಘನಸ್ಥಲಮೇ
ಖಲೆಯಗ್ರದೊಳೆಸೆವ ಮಂಜುಮಣಿದೀಪದ ಕ
ಜ್ಜಲರೇಖೆ ನೆಗೆದುದೆನೆ ಕ
ಣ್ಗೊಲವಿತ್ತುದು ರೋಮರಾಜಿ ರಾಜಾನನೆಯಾ ॥೩೪॥

॥ವ॥ ಮತ್ತಂ—

ಜಗಮಂ ಜಯಿಸುವೊಡೀಕೆಯ
ನಗೆಮೊಗಮೇ ಸಾಲ್ವುದೆಂದು ಮದನಂ ಧನುವಿಂ
ತೆಗೆದಿಳಿಪಿದಳಿವೆದೆಯೊಯೆನೆ
ಸೊಗಯಿಸಿದುದು ಬಾಸೆ ತರುಣಹರಿಣೇ[4]ಕ್ಷ[4]ಣೆಯಾ ॥೩೫॥

ಸ್ಮರಸಿದ್ಧಂ ಮೋಹನಯಂ
ತ್ರರಚನೆಯನೊಡರ್ಚಲೆಂದು ಮೂಗೆರೆದೆಗೆದಂ
ತರಳೆಯುದರಪತ್ರದೊಳೆನೆ
ಕರಮೆಸೆಗುಂ ತ್ರಿವಳಿ ಕಮಳದಳಲೋಚನೆಯಾ ॥೩೬॥

ತರಳೆಯ ತ್ರಿವಳಿಯ ಪೋಲ್ವೆಯ
ತರಂಗಮಂ ಪಡೆವೆನೆಂದು ಸುರನದಿ ಪಲವುಂ
ತೆರೆಗಳನೆ[5]ಪಡೆದು ಪಡೆಯದೆ
[6]ಸ[6]ರಿದೆರೆಯಂ [5]ಮೂಂಜಿ ಮಗುಳ್ದು ಪಡೆದಪುದಿನ್ನುಂ ॥೩೭॥

---

೧ ಯ (ತಾ) ೨ ತ್ತಂ (ತಾ) ೩ ಳ (ಮೈ) ೪ ಕ್ಷಿ (ತಾ) ೫ ವಡೆದದಕ್ಕೆಣೆ ವರದಿಂದೆ (ಮೈ) ೬ ಪ (ರಿ)

ಎಲೆ ನಡು ಬಡವಾಗದಿರೆಂ
ದಲರಂಬಂ ಬರೆದ ಸುಮರಜೋರಕ್ಷೆಯ ಮಂ
ಜುಲರೇಖೆಗಳೆನೆ ಮೆಱೆಗುಂ
ವಲಿಗಳ್ಕೋಮಲೆಗೆ ಹಾರರುಚಿರುಚಿರಂಗಳ್ ॥೩೮॥

ಮೊಗ[1]ಸ[1]ಸಿ ಪೊರ್ಕು[2]ಳ್ಗೊ[2]ಳದಿಂ
ತೆಗೆದೆತ್ತುತೆ ಕನಕಕಮಳಕಳಿಕೆಗಳಂ ತಾ
ರಗೆಯಂ ಕಾಪಿಟ್ಟಂದದೆ
ಸೊಗಯಿಸಿದವು ಹಾರಮಣಿಯಿನವಳ ಕುಚಂಗಳ್ ॥೩೯॥

ನವನವಮಣಿಮಯಮಾಲಿಕೆ
ಕವಿದಿರೆ ಕಾಶ್ಮೀರಗಂಧಗೈರಿಕಗತ ತ
ದ್ಯುವ[3]ತಿ[3]ಯ ಸ್ತನಮಂಡಲಮದು
ವಿವರಿಸೆ ರೋಹಣಗಿರೀಂದ್ರಮಪ್ಪುದು ಪುಸಿಯೇ ॥೪೦॥

ಎಳೆಯಳ ನಳಿತೋಳಂದಂ
ದಳೆವೆನೆನುತ್ತೆಳಸಿ ತಳೆಯದಳಲಿಂ ಜಳದೊ
ಳ್ಮುಳುಗಿತು ಮೃಣಾಳಮಿಪ್ಪುಮ
ನಿಳೆಯೊಳ್ತಿಳಿ ದೀರ್ಘಸೂತ್ರನೇಂ [4]ಪಡೆದಪನೇ[4] ॥೪೧॥

ಮೃದುಲತೆ[5]ಯಿಂ[5] ಬಿ[6]ಸ[6]ಕಾಂಡದ
ಮೃದುಲತೆಯಂ ಜಯಿಸುವ[7]ಮ[7]ಳ ಬಾಹಾಲತೆಯೊಳ್
ಪುದಿದೆಳೆದಳಿರಂ ಪೋಲ್ತಿ
ಪ್ಪುದಿದೆನೆ ಕರಮೆಸೆದುದವಳ ಕರಸರಸಿರುಹಂ ॥೪೨॥

ಎಳೆದಳಿರಂಬಿದು ಮಱುಮೊನೆ
ಗೊಳಲಾಱದು ಧೀರರೆರ್ದೆಯನೆಂದತನುವದ
ಕ್ಕಳವಡಿಸಿದನೆನೆ ಕೈತಕ
ದಳಮಂ ತುದಿಗೊಂಡು ಕರಜಮೊಪ್ಪಿದುದವಳಾ ॥೪೩॥

---

೧ ಶ (ಮೈ, ಮೂ) ೨ ಳ ಕೊ (ತಾ) ೩ ತೀ (ಮೂ, ಮೈ) ೪ ಪಡೆವಪನೇ (ಮೂ). ಪಡೆದಪನೋ (ಮೈ) ೫ ಯಂ (ಮೂ) ೬ ಪ (ರಿ, ತಾ) ೭ ಏ (ಮೈ).

ನೆಱೆವೆಱೆಮೊಗದ ಮೃಗಾಕ್ಷಿಯ
ಮಿಱುಗುವ ನಖರುಚಿಗೆ ಸೋಲ್ತು ಮರನೇಱು[1]ತ್ತುಂ
ಗಱಿವೂವಿನ ಕಿಱುಗಱಿಗ
ಳ್ತುಱುಗಿದ ಬಹುಕಂಟಕಂಗಳೊಳ್ನೆಲಸಿರ್ಕುಂ ॥೪೪॥

ಮುಗು[2]ದೆ[2]ಯ ಮೊಗದಾವರೆಯದು
ಮುಗಿವುದೊ ನಗುವುದೊ ಪರೀಕ್ಷಿಸೆಂದಟ್ಟಲೊಡಂ
ಮೃಗಧರನಬ್ಜಮನದನದು
ಮಿಗೆ ಸೆಱೆವಿಡಿದಂತೆ ಕಂಠಮೊಪ್ಪಿದುದವಳಾ ॥೪೫॥

ಹರಿಣನುಮಂ ಪುತ್ತ್ರಂ ವಟ
ತರುವಂ ತೊಱೆದಕ್ಷಿಫಣೆಫಲಂಗಳನಾಂತಂ
ತಿರೆ ನೇತ್ರಭ್ರೂಬಿಂಬಾ
ಧರಂಗಳಿಂ[4]ದ[4]ವಳ ವದನವಿಧು ಕರಮೆಸೆಗುಂ ॥೪೬॥

ಅರವಿಂದದ ಸಿರಿ ಮೇಣಿರು
ಳಿರುಳೆರೆಯನ ಸಿರಿಯೆ ಪಗಲೊಳಳಿಗುಮಿವೆರಡಂ
ಸರಿ ಮಾಳ್ಪುದೆಂತೊ ಸಿರಿ ಬಂ
ದೆರವಿಲ್ಲದೆ ನೆಲಸಿ ನಿಂದ ತರಳೆಯ ಮೊಗದೊಳ್ ॥೪೭॥

ಎನ್ನಂ ಪಡೆದಂಬುಜಮಂ
ಮುನ್ನಂ ಮುಗಿಯಿಪ ಮೃಂಗಾಂಕನಂ ಜ[4]ಯಿ[4]ಸೆಂದಾ
ಕನ್ನೆಯ ಮೊಗಕ್ಕೆ ಕಡುಚೆ
ಲ್ವನ್ನಳಿನಜನೀಯೆ ಕುಂದುಗುಂ ಕುಮುದಾಪ್ತಂ ॥೪೮॥

ಮುಗುದೆಯ ಮೊಗಸಸಿಯೊಳ್ಬಿದಿ
ಮಿಗಮಂ ನಿರ್ಮಿಸುವೆನೆಂದು ಬಗೆದದಱಿಂದಂ
ಬಗೆವುಗೆ ಮು[5]ರ[5]ಳ್ದ ಲೋಚನ
ಯುಗಮಂ ಸಮೆದಂತೆ ಮೆಱೆದುವವಳಲರ್ಗಂಗಳ್ ॥೪೯॥

೧ ತ್ತುಂ (ತಾ, ಮೂ, ಕ) ೨ ಧೆ (ಮೂ) ೩ ಧ (ಮೂ) ೪ ಯ (ತಾ, ಕ, ಮೂ, ಮೈ) ೫ ಗು (ರಿ) ರು (ಮೈ, ಕ).

ವನಿತೆಯ ವದನಶ್ರೀಚಂ
ದನರಸಮಂ ನಳಿನದಳದೆ ತೀವಿದಳೆನೆ ಲೋ
ಚನರುಚಿಯಿರೆ ತಾರಕಮದು
ನೆನೆಯಿಪುದದಱೆಡೆಯೊಳೆಱಗಿ ತೇಲ್ವಳಿಶಿಶುವಂ ||೫೦||

ಸೊಗಯಿಪ ಸಂಪಗೆ ಮುಗುಳದು
ಮುಗುದೆಯ ಮೂಗಿಂ ಪರಾಭವಂಬಡೆದಳಲಿಂ
ಮೃಗನಯನೆಯ ಕುರುಳೊಡನಾ
ಡಿಗಳೆನಿಪಳಿಗಳನೆ ತಗುಳ್ವುದಿನ್ನುಂ ಮುನ್ನುಂ ||೫೧||

ಉದಯಿಪ ಪೂರ್ಣೇಂದುವ ಕೆಂ
ಪೊದವಿದ ಕಳೆದೆಗೆದಮರ್ಚಿದಂತೆವೊಲೆಸೆಗುಂ
ಸುದತಿಯ ಬಾಯ್ದಱೆವೊಸರ್ದಮೃ
ತದ ಪನಿಗಳ ಪಂಙ್ತಿಯಂತೆ [1]ಪಲ್ಗಳ್ಮೆ[1]ಱೆಗುಂ ||೫೨||

ಚಂದಳಿರ್ದಂಪಂ ಬಿಂಬದೊ
ಳೊಂದಿದ ಕೆಂಪಂ ಪಯೋರಸದೊಳಮರ್ದಿಂಪಂ
ಕುಂದದ ರನ್ನದ[2]ಲಂ[2]ಪಂ
ತಂದೊಂದೆನಿಸಿದವೊಲಧರವೊಪ್ಪಿದುದವಳಾ ||೫೩||

ಅಲರದ ಕುಂದದ ಚೆಂದದ
ಸುಲಲಿತ ಕುಟ್ಮಳವನಾಯ್ದು ತೊಯ್ದಮರ್ದಿನೊಳಾ
ಲಲನೆಯ ಚೆಂದುಟಿದಳಿರೆಡೆ
ನಲಿನಜ[3]ನಿ[3]ಟ್ಟಂತೆ ದಂತ[4]ಮೇಂ ರಂಜಿ[4]ಸಿತೋ ||೫೪||

ಕಿವಿದೊಡವಿನ ಮುಕ್ತಾತತಿ
ನವೋಡುಗಣಮೆನಿಸೆ ಕಱೆಯೆ ಮಕರಿಕೆಯೆನೆ ತ
ದ್ಯುವತಿಯ ನಯನೋತ್ಪಳದಂ
ದವನೀಕ್ಷಿಸಲ್ಕೈದಿದಿಂದುವೆನೆ ಕದಪೆಸೆಗುಂ ||೫೫||

---

೧ ಕಂಬೆರಲ್ (ಮೂ)   ೨ ತುಂ (ಮೂ)   ೩ ವಿ (ಮೂ)   ೪ ಮೇನೊಪ್ಪಿ (ಮೂ)

ಕುರುಳೊಳ್ತೀವಿದ ಕ[1]ಸ್ತು[1]ರಿ
ಯ ರಜಂ ಪೊಗರಸದೊಳುದಿರ್ದು ನಱುಸುಯ್ಯೆಲರಿಂ
ಪರೆದು ತೆರೆಮಸಗಿ ನಿಂದಂ
ತಿರೆ ಕೊಂಕಿಂ ಭ್ರೂಯುಗಂ ವಿರಾಜಿಪುದವಳಾ ॥೫೬॥

ಸೆಱೆವಿಡಿದುದು ಮುಖಕಮಳಂ
ಪೆಱಪಿಂಗದು ಚಿಕುರತಿಮಿರಮೆನ್ನನಿದೆಂದೇಂ
ಮಱುಗಿ ಬಡವಾದ[2]ನೋ[2] ಪೇ
ಳ್ಳೆಱೆವೆಱೆಯೆನೆ ಪೆಱೆನೊಸಲ್ಮೃಗೇಕ್ಷಣೆಗೆಸೆಗುಂ ॥೫೭॥

ಅಗಲದೆ ಮೊಗದಾವರೆಯೊ
ಳ್ಸೊಗಯಿಪ ಮೃಗಮದಲಲಾಮಮಧುಪದಶಿಶುಗ
ಳ್ಬಗೆಗೊಳಿಸಿ ಬಳಿಯೊಳಾಡುವ
ಬಗೆಯೆನಿಸಿದುವವಳ ಪಣೆಯೊಳಲೆವಳಕಂಗಳ್ ॥೫೮॥

ವನಿತೆಯ [3]ತನುತನು[3]ಹರಿಚಂ
ದನ ಶಾಖೆಯನಡರ್ದು ಬಾಸೆಸಿಸುವೆಲ್ಲಿದುದೆಂ
ದೆನುತೆಱಗಿ ನೋಳ್ಪ ಭುಜಗಾಂ
ಗನೆಯೆನೆ ಘನವೇಣಿ ಜಾಣೆಗೇನೊಪ್ಪಿದುದೋ ॥೫೯॥

॥ವ॥ ಅಂತುಮಲ್ಲದೆಯುಂ—

ಹಿಮಕರಬಿಂಬವಕ್ತ್ರೆಗೆ ಮೃಗಾಯತಲೋಚನಮಬ್ಜಗಂಧಿಗು
ತ್ತಮಮದಭೃಂಗಕುಂತಳಮುದಾರಶುಕೀಮೃದುವಾಣಿಗಚ್ಚದಾ
ಡಿಮರದನಾಳಿ ಶೈಲಜಘನಸ್ಥಳಿಗೊಪ್ಪುವ ಸಿಂಹಮಧ್ಯಮೊ
ಪ್ಪಮನಿರದೀವುದಚ್ಚರಿಯೆ ಕೋಕಕುಚದ್ವಯೆಗಬ್ಜಪಾಣಿಗಳ್ ॥೬೦॥

ನುಡಿ ನುಡಿವೆಣ್ಗೆ ಜಾಣ್ನುಡಿಗಳಂ ಕಲಿಸಲ್ಸಲೆ ಸಾಲ್ವುದೊಪ್ಪುವೊ
ಳ್ನಡೆ ನಡೆವಕ್ಕಿಗಳ್ಗೆ ನಡೆಯಂ ನೆರಪಲ್ನೆಱೆದಿರ್ಪುದೆಯ್ದೆ ಕ
[4]ಣ್ಗ[4]ಡೆಕುಡಿಮಿಂಚನುರ್ಕುಡಿಯಲಾರ್ಪುದು ಬಾಳೆಯ[5]ಭಾ[5]ಳವರ್ಣಮಂ
ತೊಡೆ ತೊಡೆ[6]ದ[6]ಪ್ಪುದಾಂತೊಡೆ ಶುಭಾವಹಭಾವಭವಾಧಿದೇವಿಯಾ ॥೬೧॥

---

೧ ತ್ತು (ಮೈ, ಮೂ, ಕ) ೨ ರೋ (ಮೂ) ೩ ತನು (ರಿ) ೪ ಣ್ಗೆ (ರಿ); ಣ್ಕು (ಮೈ) ; ಣ್ಮು (ಮೂ, ಕ) ೫ ಬಾ (ತಾ, ಮೂ) ೬ ದೊ (ಮೂ)

‖ವ‖ ಮತ್ತಮಾ ತರುಣಿ ಗಿರಿಸುತೆಯಂತೆ ಶಶಿಕಳಾಧರೆಯುಂ ರಮೆಯಂತತನುಜನ್ಮಸ್ಥಳಿಯುಂ ಭಾರತಿಯಂತೆ ಪದ್ಮಜಾತ್ಯಾಮೋದಾವಹೆಯುಂ ವನಸ್ಥಳಿಯಂತೆ ಪೃಥುಲಕುಚಾಲಂಕೃತೆಯುಂ ನರ್ತಕಿಯಂತೆ ಮಂಜುಲಾಸ್ಯಮನೋಜ್ಞೆಯುಮೀಶಾನದಿಶೆಯಂತೆ ಸುಪ್ರತೀಕಸಮನ್ವಿತೆಯುಂ [೧]ಸುಗ್ರೀವಾಭಿರಾಮೆಯಾಗಿಯುಮಲಂಕಾರಾತಿಶೋ[೨]ಭಿ[೨]ತೆಯುಮುದಿತಾರುಣಕಲ್ಲೋ[೩]ಲಸಿತೆಯಾಗಿಯುಮಪೂರ್ವಸ್ವಭಾವೆಯುಂ ಧೃತಕುಂಭಜಘನ[೩]ಸ್ಥಿತೆಯಾ[೩]ಗಿಯುಮತಿಲಾವಣ್ಯನಿಧಾನೆಯುಂ ರಂಭೋರುವಿಭವಾನ್ವಿತೆಯಾಗಿಯುಂ ವಿತತ ಭೂಮಹಿತಗುಣೋದಯೆಯುಂ ನಳಿನನೇತ್ರ ವಿಲಸಿತೆಯಾಗಿಯುಮನಂತಮಣಿಕಿರಣಮನೋಜ್ಞೆಯುಮೆನಿಸಿರ್ದಳಂತುಮಲ್ಲ[೪]ದೆಯುಂ[೪]—

ಗತಿಯಿಂದಂ ರಾಜಹಂಸದ್ವಿಜವಿಜಯಿನಿಯಾಗಿರ್ದು ಮಾತಂಗಮಂ ನಿ
ರ್ಜಿತ[೫]ಸಜ್ಜೈ[೫] ವಾತ್ಯಕಪ್ರದ್ಯುತಿಯೆನಿಸಿ ನಿಜಾಪಾಂಗದಿಂದಂ ಕ್ಷಣ[೬]ತ್ರಿ[೬]
[೭]ಟ್ಟ[೭]ತಿಯಂ ಸೌಂದರ್ಯದೂರೀಕೃತಸಕಲವಧೂವೃಂದೆಯಾಗಿರ್ದು ಭೂಭೃ
ತ್ಸುತೆ ತಾಂ ತ್ರೈದಶ್ಯಯೋಷಿಜ್ಜನಮನ[೮]ನು[೮]ದಿನಂ ಗೆಲ್ವುದಾಶ್ಚರ್ಯಮೋ ದಲ್ ‖೬೨‖

‖ವ‖ ಮತ್ತಂ—

ಇದು ಕುಸುಮಾಸ್ತ್ರನಸ್ತ್ರಮಿದು ದರ್ಪಕನಾರ್ಪು ಮನೋಜನೋಜೆ ನೋ
ಡಿದು ನನೆವಿಲ್ಲಬಲ್ಲಹನ ಚೆಲ್ವಿದು ಕಾವನ ಜೀವರತ್ನಮಿಂ
ತಿದು ರತಿಕಾಂತನಾಂತ ಪೊಸ ಕೂರಸಿ ತಾನಿದು ಮಾರವೀರನ
ಗ್ಗದ ಸದಳಂಕೃತಿಧ್ವಜಮಿದೆಂದೆನಿಸಿರ್ದುದು ರೂಪು ನೀಱೆಯಾ ‖೬೩‖

ಕಱಿದಳೆಯದಿಂದುಕಳೆ ಕಳೆ
ದೊಱಿಯದ ಚಂದ್ರಿಕೆ ಪಗಲ್ಪಗಲ್ಮೃಗಿದು ಮುದಂ
ಮುಱಿಯದ ಕೋಮಳೆ ಕೋಮಳೆ
ಬಱಿಯದ ಸಿಂಗರದ ಪೊಳೆ ಪೊಳೆಯುತೆಸೆದಿರ್ದಳ್ ‖೬೪‖

‖ವ‖ ಇಂತು ನಿರತಿಶಯಸೌಂದರ್ಯಮಾಧುರ್ಯಮಂ ಬೀಱಿ ಕಾಂತೆ ಕಾಂತಿವೆತ್ತು ಕಂಗೊಳಿಸುತ್ತಮಿರೆಯಿರೆ—

---

೧ + ವಿರುದ್ಧಂ (ರಿ) ೨ ಭೆ (ಮೂ) ೩ ಯಾ (ರಿ) ೪ ದೆ (ಮೈ, ಮೂ) ೫ ಜ್ಜೈ (ಮೈ) ೬ ತೀ (ತಾ) ೭ ಟ್ಟ (ಮೂ) ೮ ನಂ (ಮೈ)

ಗುರುಜಘನಸ್ಥಳೀಪುಳಿನದೊಳ್ಪರಿದಾಡಿ ವಳಿತ್ರಯೋರ್ಮಿಯೊಳ್
ಪಿರಿದಡರ್ದಾಡಿ ನಾಭಿಸುಳಿಯೊಳ್ಸುಳಿದಾಡಿ ತಮಾಲನೀಲಭಾ
ಸುರತರರೋಮರಾಜಿ ನವಶೈವಲದೊಳ್ನಡೆದಾಡಿ ತನ್ಮುಖಾಂ
ಬುರುಹರಸಪ್ರವಾಹದೆ ಮುಳುಂಗಿದುವಕ್ಷಿಝುಷಂಗಳಾತನಾ ॥೬೫॥

॥ವ॥ ಮತ್ತಮಾಗಳ್—

ಲಲನಾನೇತ್ರತ್ರಿಭಾಗಪ್ರಭವಸಿತರುಚಿಶ್ವೇತರುಗ್ಗೋರ್ಚಿತ ಜ್ಯೋ
ತಿಲಸದ್ಧಾತ್ರೀಶಪುತ್ರಾಂಗದೊಳೆ ಪಸರಿಸುತ್ತೆಯ್ದೆ ಕಣ್ಗೊಪ್ಪಿದತ್ತು
ಜ್ವಲತನ್ನೇತ್ರಾಂಚಲಸ್ಥಸ್ಮರನಿಸೆ ಪರಿತಂದೊತ್ತಿಪಾಯ್ತುರ್ವ ನೀಲೋ
ತ್ಪಲಚಂಚನ್ಮಲ್ಲಿಕಾಶೋಕವಿಶಿಖತತಿಯೆಂದೆಂಬಪಾಂಗಿಂದಳುಂಬಂ ॥೬೬॥

॥ವ॥ ಆ ಪ್ರಸ್ತಾವಮಂ ಸಾರ್ದು ಸಂಭ್ರಮಿ[1]ಸಿ[1]ನಿಂದು—

ಕ[2]ರ್ಬಿ[2]ನ ಬಿಲ್ಗೆ ತುಂ[3]ಬಿ[3]ವೆದೆಯಂ ಪದೆದೇಱಿಸಿ ಗಂಡ ಗಾಡಿಯಿಂ
ದುರ್ಬಿ ಸರೋಜಕೋರಕದ ಕೂರ್ಗಣೆಯಂ ತವೆ ತೊಟ್ಟು ಲಕ್ಷ್ಯಮಂ
ದೋರ್ಬಲಶಾಲಿ ನೋಡಿ ಸೆಳೆದೆಚ್ಚನವಂದಿರನೊರ್ಮೆ ತೊಟ್ಟನಂ
ದಿರ್ಬಗಿಯಾಗೆ ತನ್ಮನಮನಂಗಧನುರ್ಧರನಾ ಕ್ಷಣಾರ್ಧದೊಳ್ ॥೬೭॥

ಗಡಿಗೆಟ್ಟುದು ಕಣ್ಬೇಟಂ,
ನಡೆಗೆಟ್ಟುದು ಚಿತ್ತವೃತ್ತಿ, ಧೃತಿವಲ್ಲಿ ವಲಂ
ಕು[4]ಡಿ[4]ಗೆಟ್ಟುದು, ನವವಿರಹಂ
ತಡೆಗೆಟ್ಟುದು, ತನ್ನೃಪಾತ್ಮಜಂಗಾ ಕ್ಷಣದೊಳ್ ॥೬೮॥

ಅರಸನ ಹೃದಯಪಟಾಭ್ಯಂ
ತರದೊಳ್ನವರಾಗರಸದಿನಾ ಕನ್ನೆಯನು
[5]ಣ್ಬ[5]ರಿಜಂ ಬರೆದಂಗಜನೇಂ
ಪರಿಕಿಸೆ ಮುಂ ಚಿತ್ರಿಕರ್ಕಳೊಡನಾಡಿದನೋ ॥೬೯॥

॥ವ॥ ಆಗಳರಸಂ ತನ್ನೊಳಿಂತೆಂದಂ—

೧ ಸೆ (ರಿ) ೨ ಬ್ಬಿ (ಮೂ) ೩ ಬೆ (ಮೂ) ೪ ದೀ (ಮೂ) ೫ ಣ್ಪ (ಮೈ)

ಬಗೆಯಂ ಬಲ್ಸೆಱಗೆಯ್ದುದೀಗಳಿವಳೀ ಮಾಧುರ್ಯಮೀ ಮೆಯ್ಯ ಸು
ಣ್ಬೊಗರೀ ಕಣ್ಗಳ ಕಾಂತಿಯೀ ಮುಖಶಶಿಪ್ರದ್ಯೋತಮೀ ಕಂಜದೊ
ಳ್ಮುಗುಳಂ ಪೋಲ್ವ ಕುಚಂಗಳೀ ಪೃಥುಳವೃತ್ತಶ್ರೋಣಿಯೀ ಬೇಟದು
ಜ್ಜುಗವೀ ವಿಭ್ರಮವೀ ವಿನೋದದೊದವೀ ಸೌಂದರ್ಯಮೀ ಸದ್ಗುಣಂ ॥೨೦॥

ಈ ಲಲನೆಯ ಸೌಂದರ್ಯಂ
ಸೋಲಿಸಿದುದು ಗಡ ಮದೀಯ ಮನವನ್ನದಾರ್ಗಂ
ಸೋಲದುದಂ ಶಿವಶಿವ ಶಶಿ
ಮೌಳಿಯ ಮಾಯೆಯನದಾರೊ ಮೀಱಲ್ಬಲ್ಲರ್ ॥೨೧॥

॥ವ॥ ಎಂದು ವಿಸ್ಮಯಂಬಡೆದು ಚೆಲ್ಲಿದ ಕರಣಂಗಳಂ ಮೆಲ್ಲನೆ ಸಂತೈಸಿಕೊಂಡು ಧೀರೋದಾತ್ತಸಾರ್ವಭೌಮಂ ಮುಂದಣ್ಗೆ ನಡೆತರುತ್ತಂ ನಿಜನಯನಪಥಮಂ[೧] ಮೀಱಲೊಡನೆ—

ಪಡಿದೆಱೆದಂತೆ ಪಾರಿತೆರ್ದೆ ಜುಮ್ಮನೆ ಮೈನವಿರುರ್ವಿ ಮೂಡಿದ
ತ್ತಿಡಿಕಿಱಿದಿರ್ದ ಬಲ್ಮೊಲೆಗಳಿಟ್ಟೆಡೆಯೊಳ್ಬೆಮರ್ಗುಣ್ಮಿದತ್ತು ಮೇ
[೨]ಣ್ದ[೨]ಡ[೩]ದ[೩]ಡಿಸಿತ್ತು ನುಣ್ದೊಡೆ, ರದಚ್ಛದಮಿರ್ಪುಡುಗಿತ್ತು ಸುಯ್ಗೆ, ಕಾ
ಯ್ಪಡರ್ದುದೊಡಲ್ಗೆ, ಮೆಲ್ಲನಡಿಯಿಟ್ಟುದು ಮೂರ್ಛೆ ಮೃಗಾಯತಾಕ್ಷಿಯಾ ॥೨೨॥

॥ವ॥ ಅಂಧವಳಂದವಳಿಧ್ಧಂದವಂ ಕಂಡು ಕಳಾರಮೆ ಮೊದಲಾದ ಕೆಳದಿಯರ್ ವಿಸ್ಮಯಂಬಟ್ಟು ವಿರಹಾತಪಮಂ ತವಿಪ ಬಗೆಯಂ ಬಗೆದಲ್ಲಿಂ ಮೆಲ್ಲನೆ ಕೆಂದಳಿರಾಂದೋಳನದೊಳಿರಿಸಿ ಕೇಳೀವನಕ್ಕೆ ಕೊಂಡು ಪೋಗಲೊಡನೆ—

ಇ[೪]ಳನಿ[೪]ಯನಗಲ್ಕೆಗಿರ್ಚು ಸುಡೆ ಸೈಱಿಸಲಾಱದೆ ಮುಗ್ಧೆ ಬಂದು ನಂ
ದನದೆಡೆ ನಿಂದು ಬೆಚ್ಚನುಸುರೊತ್ತಿದೊಡಾಗಳೆ ಕಂದಿಸಿತ್ತು ಮೇ
ಣ್ಜೆನುಗುವ ತುಂಬಿಯಂ ಬಳಸಿ ಬಗ್ಗಿಪ ಕೋ[೫]ಗಿ[೫]ಲೆಯುಂ ಮೃಗಾಂಕನಂ,
ಮನಸಿಜಮಾರುತರ್ತನುವನಾಂತೊಡೆ ಕಂದಿಸದೇನದಿರ್ಕುಮೇ ॥೨೩॥

॥ವ॥ ಆ ನಂದನದೊಳಾಳೀಜನಮವಳಂ [೬]ಶಿ[೬]ಶಿರೋಪಚಾರಂಗೆಯ್ಯಲೆಂದು ಪೊಸಕುಸುಮಮಂಟಪಕ್ಕೆ ತಂದು—

---

೧ ವಂ (ಮೂ) ೨ ಣ್ದ (ಮೂ) ೩ ಧ (ಮೂ) ೪ ನ (ಮೈ, ಮೂ, ತಾ, ಕ)
೫ ಕಿ (ತಾ) ೬ ಶ (ರಿ)

ಸರಸರಸಾಲಸಲ್ಲಲಿತಪಲ್ಲವತಲ್ಪದೊಳಿಟ್ಟು, ಪಚ್ಚೆಗ
೧ರ್ಪು೧ರವನಮುರ್ಚುತೆಚ್ಚಿ ನಿಡುಗಣ್ಗೆ, ಸರೋಜದಳಂಗಳಂ ಪಯೋ
ಧರದೆಡೆಯಲ್ಲಿ ತಂದಿಳಿಪಿ ಸೂಸಿ ಹಿಮಾಂ೨ಬುವನೆಯ್ದೆ೨ ಪುಷ್ಪಚಾ
ಮರಮನೆ ಬೀಸಿ, ಚಂದನಮನಂಗದೆ ಪೂಸಿ ವಿಳಾಸಿನೀಜನಂ ॥೭೪॥

ಪರಿಹರಿಸಲೆಂದು ವಿರಹ
ಜ್ವರಮಂ ಶಿಶಿರೋಪಚಾರಮೆಸಗಿದೊಡದು ತಾಂ
ಪಿರಿದಾದುದಕಟ ಮಧುರಾ
ಧರೆಗ್ಗದನಂತ್ಸಿಂತ್ಪುಟೆಂದು ಬಣ್ಣಿಪರೊಳರೇ ॥೭೫॥

ಬಿಸುಸುಯ್ಯಿಂದಿರ್ಪುಗುಂದಿರ್ದಧರಕಿಸಲಯಂ ರಕ್ತನೇತ್ರಾಂಚಲಂ ಬಾ
ಷ್ಪಸರಿದ್ವ್ಯಾಲಗ್ನಕೀರ್ಣಭ್ರಮರಕಮು೩ಮೃತಾ೩ಪಾಂಡುಗಂಡಸ್ಥಲಂ ಶೂ
ನ್ಯಸಮಾಲೋಕಂ ತನುತ್ವಂಬಡೆದ ತನು ವೃಥಾನಲ್ಪಸಂಕಲ್ಪಚಿತ್ತಂ
ಮುಸುಕಿರ್ದಾಲಸ್ಯಭಾವಂ ನೆಗಳ್ದಿರೆ ವಿರಹಾಕ್ರಾಂತೆ ತತ್ಕಾಂತೆಯಿರ್ದಳ್ ॥೭೬॥

ತೀವಿದ ತಾಪಕ್ಕಿಕ್ಕಿದ
ಬಾವನ್ನದ ಬಟ್ಟಬೊಟ್ಟು ವದನದ್ಯುತಿಯಂ
ತಾವರೆವಗೆಯಂ ಕಳಲೆಂ
ದಾ ವೇಳೆಯನಱಿದುಬಂದು ನಿಂದವೊಲೆಸೆಗುಂ ॥೭೭॥

ಅಸಿಯಳಸಿವೊಡಲೊಳೊರಸಿದ
ರಸಮೊಸರ್ವ ಸುಚಂದನಂ ಕರಂ ಕಣ್ಗೆಸೆಗುಂ
ಕುಸುಮಾಸ್ತ್ರನ ಕುಸುಮಶರ
ಪ್ರಸರದ ಹತಿಗಳ್ಕಿ ಕವಚಮಂ ತಾಳಿದವೋಲ್ ॥೭೮॥

ಮಾನಿನಿಯ ಪೀನತರಕುಚ
ಮೀನಧ್ವಜಕುಂಭಿಕುಂಭಮದು ವಿರಹಗ್ರೀ
ಷ್ಮಾನಲನಿಂ ಬಿಱಿದಂತೆವೊ
ಲೇನೊಪ್ಪಿತೊ ಬಿಱಿಯೆ ತಾಳ್ದ ಕುಂಕುಮಪಂಕಂ ॥೭೯॥

೧ ಪ್ಪ (ರಿ) ೨ ಬುಮನೆಯಿದೆ (ರಿ, ತಾ) ೩ ಮಲಾ (ಮೂ).

ಅರೆವಿಱಿದ ಸಂ[೧]ಪ[೧]ಗೆಯ ಸುರು
ಚಿರಮುಕುಲಂಬೊಕ್ಕು ಬಿಸುಪನಾಂತಿಳಿವೆಲರಂ
ತಿರೆ ಬಿಸುಸುಯ್ಯ್ಲದತಿಯ ಭಾ
ಸುರನಾಸಿಕೆಯಿಂದೆ ಸೂಸುತಂ ಸೊಗೆಯಿಸುಗುಂ ॥೮೦॥

ವಿರಹಶಿಖಿ ಸುಟ್ಟೊಡಗಿದೊಳ
ಗಿಱಲಾಱದೆ ಕಂದಿಕುಂದಿ ನೆಗೆದುದು ಬಗೆಯೆಂ
ಬರ ಬಗೆಗೇಂ ಬಂದುದೊ ಮಧು
ಕರನವಳುರದಲ್ಲಿ ಚಂದನಸ್ಥಿತಪಕ್ಷಂ ॥೮೧॥

ಅಂದರವಿಂದಸಖಂ ಕಾ
ಳಿಂದಿಯು[೨]ನೆ[೨]ಲೆ ಪ[೩]ಡೆ[೩]ದನೆಂದು ಪುರುಡಿಂ ಪಡೆದಂ
ಮಂದಾಕಿನಿಯುಂ ಬಿದುವೆಂ
ಬಂದದಿನವಳಾಸ್ಯಬಾಷ್ಪನದಿ ಕಳೆದಿಳಿಗುಂ ॥೮೨॥

॥ವ॥ ಮತ್ತಂ—

ಬಗೆವನೆಯೊಳಿರ್ಪ ರತಿಪನ
ನೊಗೆದುತ್ಕುಚಗಿರಿಯ ವಿರಹಶಿಖಿಧವಶಿಖಿ ಚು
ರ್ಚುಗುಮೆಂದು ಮುಖಮೃಗಾಂಕಂ
ಮಿಗೆ ಸುಧೆಗಱೆವಂತೆ ಕಱೆದುದವೆಳಶ್ರುಜಲಂ ॥೮೩॥

ನಾರೀಚಾರುಕುಚಂಗಳಂ ಮಿಗೆ ಮುಸುಂಕಿಟ್ಟಬ್ಜಪತ್ರಂಗಳೊ
ಳ್ನೀರಂ ಸಿಂಪಿಸೆ ನೀಱೆಯರ್ಕಣಗಣಂ ಚಾಂಚಲ್ಯಮಂ ಪೊತ್ತು ತ
ಳ್ತೋರಂತಲ್ಲಿ ವಿರಾಜಿಸಿತ್ತು ಸುಡುಗುಂ ಕಾಮಾಗ್ನಿ ತಾನೆಂದು ತ
ನ್ನೀರೇಜಚ್ಛದಜೀವನಂ ಭಯದಿನಾಗಳ್ಕಂಪನಂಗೆತ್ತವೋಲ್ ॥೮೪॥

ಅಂಗನೆಯಂಗದಂಗಜಮಹಾಶಿಖಿಗಾಜ್ಯಮದಾದುದಾಲಿನೀ
ರ್ತುಂಗಕುಚಾರ್ದ್ರಚಂದನರಸಂ ಘಟಪಾಕವಿಲೇಪನಂಬೊಲಾ
ಯ್ತಿಂಗಳಮಾಯ್ತು ಚಂದಳಿರೆಲರ್ತಿದಿಯೊಂದೆಲರಂದಮಾಯ್ತು ಬೆ
ಳ್ದಿಂಗಳೆ ತಳ್ತ ದಳ್ಳುರಿಯದಾಯ್ತೆನೆ ತಾಪಮದೇನಳುಂಬಮೋ ॥೮೫॥

---

೧ ಪಿ (ತಾ) ೨ ಸ (ಮೂ) ೩ ಡೆ (ತಾ)

ಅಸಿಯಳ ಸೋಷ್ಣನಿಶ್ವಸಿತಸೌರಭಲೋಭದೆ ನಾಸಿಕಾಗ್ರದೊ
ಳ್ಪಸಿದ ಮದಾಳಿ ಬಂದೆಜಿಗೆ ತಾಂ ಸುಡೆ ಕರ್ಜಿನೆ ಕಂದಿ ಕುಂದಿ ಸಾ
ರ್ದ[೧]ಸ[೧]ವಶದಿಂದೆ ಸಂದೆಜಿಗಲಣ್ಮದೆ ತತ್ಸಮಚಾರುಚಂಪಕ
ಪ್ರಸವದೊಳಿನ್ನು[೨]ಮಿ[೨]ಲ್ಲಿಯರವಿಂದಮರಂದದೊ[೩]ಳ[೩]ಳ್ದು ಜೀವಿಕುಂ ॥೮೬॥

ಕರಿಮುರಿ[೪]ವೋ[೪]ದವಾರ್ದೆಜಗುವಾಜಡಿಗಳ್ತಿವಾಲಿನೀರ್ಪಯೋ
ಧರದೆಡೆಕಾಯ್ದು ಘಟ್ಟಿಗೆಜಿದಂತಿರೆ ಚುಯ್ಯನೆ ಬತ್ತಿದತ್ತು ಮೇ
ಲಿರಿಸಿದ ಪಲ್ಲವಂ ಮೃದುಮೃಣಾಳಕುಳಂ ಸಿರಿಗಂಪು ಪುಷ್ಪಮಂ
ಜರಿವುರಿ[೫]ಪತ್ತೆಪೊತ್ತಿ[೫]ಪೊಗೆದತ್ತು ತ[೬]ಲೋ[೬]ದರಿಯಂಗತಾಪದಿಂ ॥೮೭॥

॥ವ॥ ಆಗಳವಳ್ಗೆ[೭]ಶಿ[೭]ಶಿರೋಪಚಾ[೮]ರಮಂ ಮಾಳ್ಪ[೮]ಮುಗ್ಧೆಯರ್ಗೆ ವಿಧಗ್ಧೆಯರ್ [೯]ಸಂಜ್ಞೆ[೯]ಗೆಯ್ದು—

ಘನಕಚೆ[೧೦]ಯಂ[೧೦]ಚೆಯಂ ತೊಲಗಿಸೀಯಲರಂ ಫಣಿವೇಣಿ ಪಾಜಿಸೀ
ಜಿನುಗುವ ತುಂ[೧೧]ಬಿ[೧೧]ವಿಂಡನೆಲೆ ಚಂಪಕನಾಸಿಕೆ ನೂಂಕು ಮತ್ತಕೀ
ರನನಿರದಟ್ಟು ಮಂಜುಳವಿಡೂರಜಭೂಷಣೆ ಚಂದ್ರಕಾಂತಿಯಂ
ಕನಕಪರಿಷ್ಕೃತಿದ್ಯುತಿ[೧೨]ಕೃತಾತಪೆ[೧೨] ನೀಂ ತಡೆಯೆಂದರಾಳಿಯರ್ ॥೮೮॥

॥ವ॥ ಮತ್ತಂ—

ಅಲರ್ಗಳ ಜೊಂಪಮಂ ಪಿಡಿದು ಬೀಸದಿರಿಂದುನಿಭಾಸ್ಯೆ ಜೊನ್ನಮಂ
ದಲಸುವಳಂಗಜಾತಶರಲೋಚನೆ ಪೂಗಳನಿಕ್ಕದಿರ್ಸುಮೋ
ಜ್ವಲಶರಮೆಂದು [೧೩]ಕಂ[೧೩]ದುವಳುದಂಚಿತಪಲ್ಲವಪಾಣಿ ಪಲ್ಲವಾ
ವಲಿಯನೆ ಪಾಸದಿರ್ಮದನವಹ್ನಿಶಿ[೧೪]ಖಾ[೧೪]ತತಿಯೆಂದು ಬೆರ್ಚುವಳ್ ॥೮೯॥

॥ವ॥ ಎಂದು[೧೫]ಸಿ[೧೫]ರ್ದು ಮತ್ತಮಿರದೆ—

---

೧ ಶ (ಮೂ) ೨ ಮ (ತಾ) ೩ ಳಾ (ತಾ, ಮೂ) ೪ ವಾ (ತಾ, ಮೂ, ಕ), ವೊಡ (ರಿ) ೫ ಪೊತ್ತೆಪೊತ್ತಿ (ಮೂ), ಪತ್ತೆಪತ್ತೆ (ರಿ, ತಾ) ೬ ನೂ (ತಾ, ಮೈ, ಕ) ೭ ಶ (ತಾ) ೮ ರಂಗಯ್ವ (ಮೂ) ೯ ಸೆಜ್ಜೆ (ಮೈ) ೧೦ ಅಂ (ಮೈ) ೧೧ ಬೆ (ಮೂ) ೧೨ ಕೃತತಾಪೆ (ಮೈ) ೧೩ ಕು (ತಾ, ಕ) ೧೪ ಖಿ (ಮೂ) ೧೫ ಸು (ತಾ, ಕ ಮೂ, ಮೈ)

ಅರವಿಂದಾನನೆಗಂಬ್ಜ[1]ಲೋಚನೆಗೆ ಪದ್ಮಾಮೋದನಿಶ್ವಾಸೆಗಂ
ಬುರುಹದ್ವಂದ್ವಸಮಾನಪಾಣಿಗೆ ಪಯೋರುಟ್ಪಾದೆಗಂಭೋಜಭಾ
ಸುರಕೋಶಸ್ತನೆಗೀ ಲತಾಂಗಿಗೆ ಸರೋಜಾತಾರಿ ತಾಂ ಕಾಯ್ವುದ
ಚ್ಚರಿಯಲ್ತೀ ಕಳಹಂಸನೀ ಮಧುಕರಂ ಪೇಳ್ಕಾಯ್ವುದೇಂ ತಕ್ಕುದೇ ॥೬೦॥

ತಳಿರುಂ ತಾಮರಸಂ [2]ಮದಾಳಿಕುಳಮುಂ[2] ಮಂದಾನಿಲಂ ಮಾಮರಂ
ಕಳಿಯಾಣ್ಮಂ ಕಳಹಂಸಮಂಡಳಿ ಸರೋಜಾತಾಕರಂ ಷಟ್ಪದಂ
ಕಳಕಂಠಂ ಕದಳೀದಳಂ ಮಳಯಜಂ ಮಾಧುರ್ಯಗೀತಂ ಮನೋ
ಜ್ಞ[3]ಳ[3]ತಾಗೇಹಮುಮೆಲ್ಲಮೀಕೆಗೆ ಕರಂ ಕಾಯ್ದಪ್ಪುವೇಗೆಯ್ವಳೋ ॥೬೧॥

ವಿರಹಶಿಖಿಪ್ರತಪ್ತತರುಣೀತತಲೋಚನರೋಚಿಯಿಂ ಸುಧಾ
ಕರರುಚಿ ಸೋಷ್ಣಮಾಗುತಿಳಿವೀ ಬಿಸುಸು[4]ಯ್ಸ[4]ಡೆ ಬೆಚ್ಚನಾಗಿ ತೆಂ
ಬೆರ[5]ಲಿರದಾಳಿ[5]ಯರ್ತಳಿವ ನೀರ್ತನುತಾ[6]ಪದೆ[6] ಕಾಯ್ದಿವೆಲ್ಲಮೀ
ತರಳೆಗೆ ತಾಪಮೀಗುಮಿವಱೊಳ್ಸಖಿಯ[7]ರ್ಬ[7]ಱಿದೂಱನೇಱಿಪರ್ ॥೬೨॥

॥ ವ ॥ ಇಂತನೇಕ ವಿವಿಧಾಲಾಪಂಗಳವಱೊಳ್ನೆಗಳುತ್ತಮಿರ್ಪಿನಮಾಗಳ್—ಗಳಗಳನೆ ಕಳಿದಿಳಿವ ಬಹುಳ ಬಾಷ್ಪಜಳಪೂರದಿಂ ತೊಳೆದು ಕಳೆದಂತೆ ನಿದ್ರೆ ನೆಲೆಗೆಟ್ಟು ತೊಲಗೆ, ಅಲರ ಬಿಜ್ಜಣಿಗೆಯಿಂ ಬೀಸೆ ಬೀಸರಂಬೋದಂತೆ ಹಸನಂ ಹಸಂಗೆಡೆ, ಕಂದರ್ಪಂ ಬೆಸಸೆ ಮಂದಾನಿಲಂ ಪುಗುತಂದೊಳಗೆ ಮೊಳೆವ ವಿರಹದಹನಜ್ವಾಲೆಯಂ ಮೇಲಿಮೇಲೆ ಪೆರ್ಚಿಸುತ್ತದಱ ಬಿಸುಪನಾಂತಿಳಿತರ್ಪಂತೆ ನಾಸಾವಿವರದಿಂ ಸೂಸುವ ಬಿಸುಸುಯ್ ಬೀದಿವರಿಯೆ, ಬಳಸಿ ಬಂದು ಬಗ್ಗಿಪ ಕೆಂಗಣ್ವಕ್ಕಿಗಳ್ಗೆ ಕಾಯ್ದಂತೆ ಕಡೆಗಣ್ಕಡುಗೆಂಪುವಡೆಯೆ, ಅಳವಿಗ[8]ಳಿ[8]ದು ಕೆಳದಿಯರ್ತಳಿವ ತುಹಿನಜಳದೊಡಗೂಡಿ ಮದನಾಗ್ನಿಯಿಂ ಪೊಗೆವ ಪಸಿಯ ಬಿಸವಿಸರದ ಪಸರಿಸಿದ ಪೊಗೆ ಸುರಿವಂತೆ ಕಾಳ್ಪುರಮಾಗಿ ಕಣ್ಣ ನೀರ್ಕವಿತರೆ ರಾಕಾಸುಧಾಕರಂ ಮುಖರುಚಿಯಂ ಕವರ್ದು ನಿಜರುಚಿಯನಿತ್ತಂತೆ ಸಿರಿಮೊಗಂ ಬೇಳ್ಪೇಱೆ, ಮನದೊಳಿರ್ಪ ಮನದನ್ನನಂ ಮನಸಿಜನ ನನೆಯಂಬು ನಾಂಟದಂತಡ್ಡಮಿಟ್ಟಪಳೆನೆ ಕುಚಮಧ್ಯಕ್ಕೆ ಸಾರ್ಚಿದ ಕರಂ ಕರಮೆಸೆಯೆ, ಚಿಂತಾಭಾರಮಂ ಪೊರಲಾಱದಳವಳಿವ ಶಿರ[9]ಕ್ಕಾಂ[9]ಕೆಗೊಟ್ಟಪಳೆನೆ ತೆ[10]ಳ್ಗ[10]ದಂಪಂ ಕೈದಳಿರ್ತಳೆಯೆ, ತನುನಾಮಮಂ ಸಾರ್ಥ[11]ಕಂ[11] ಮಾಳ್ಪಂತೆ ತನು ತನುತ್ವಂಬಡೆಯೆ, ಕಂತುಗ್ರಹದ

೧ ಜ್ಜ (ಮೂ) ೨ ಶುಕಾಳಿ ಕುಳಮುಂ (ಮೂ), ಮದಾಳಿ ಮಿಳಿತಂ (ರಿ) ೩ ಲ (ಮೂ) ೪ ಯ್ದ (ಮೂ) ೫ ಲರದಾಳಿ (ರಿ) ೬ ವೆಗೆ (ಮೂ) ೭ ರ್ಬಿ (ಮೈ) ೮ ಳಿ (ರಿ, ಮೂ) ೯ ತ್ಕಾಂ (ಮೂ) ೧೦ ಳ್ಕ (ರಿ) ೧೧ ಕಮುಂ (ಮೂ)

ಕಾಟಕ್ಕಳ್ಕಿ ಭಸಿತಮಂ ಧರಿಸಿದಂತಲರ ಮಲಯಜದ ರಜಂ ನಿಜಾಂಗದೊಳ್ಕರಂ-ಗೊಳಿಸೆ, ಘನತಾಪಕ್ಕೆ ಸೆಡೆದು ಘನಕವಚಂದೊಟ್ಟಂತೆ ಕಂದಿದ ಚಂದನದಣ್ಪು ತೋಱೆ, ಮೀಱಿದ ತನುತಾಪದಿಂ ನೊಂದು ಬೆಂದು ಸಸಿಜೊನ್ನಕ್ಕೆ ಬೆರ್ಚಿ ಬಸಂ-ತಂಗೆ ಬೆರಲ್ಗರ್ಚಿ ಕಳಕಂಠಂಗಳ್ಕಿ ಗಿಳಿವಿಂಡಿಂಗೆ ಬಳ್ಕಿ ತಳಿರ್ಗೆ ತಲ್ಲಣಂಗೊಂಡು ಮಳಯಜಕ್ಕೆ ಮಲ್ಲಳಿಗೊಂಡು ಮಂದಾನಿಲಂಗಳರ್ದು ಕಂದರ್ಪಂಗೆ ಪೆಳರ್ದು ಕುಸುಮವಿಸರಕ್ಕಗಿದು ಬಿಸಕಾಂಡಕ್ಕೆ ಸುಗಿದು ಪೊಂಬಾಳೆಯಿಂ ಮರವಟ್ಟು ತುಂಬಿಗಳಿಂ ಕಂಗೆಟ್ಟು ಕಮಳದಿಂ ಕಂದಿ ಕುಮುದದಿಂ ಕುಂದಿ ತಿಳಿಗೊಳಮಂ ಬಯ್ದು ಕಳಹಂಸಂಗೆ ಸುಯ್ದೆಳಲತೆಗೆ ತಲೆವಾಗಿ ಪುಳಿನಕ್ಕೆ ಮಾಱುವೋಗಿ ಮಾವಂ ನೋಡದೆ ಪೂವಂ ಸೂಡದೆ ಸಖಿಯರಂ ಪರೀಕ್ಷಿಸದೆ ಮುಕುರಮಂ ನಿರೀಕ್ಷಿಸದೆ ಕುರುಳಂ ನೇವರಿಸದೆ ಶರೀರಮಂ ಸಿಂಗರಿಸದೆ ಜಳಕಮಂ ಪಾಱದೆ ತಿಳಕಕ್ಕೆ [೧]ಸೇ[೧]ರದೂಟಕ್ಕೆಳಸದಾಟವಂ ಬಳಸದೆ ಕಾಯ್ಪೇಱಿದ ಕನಕಪುತ್ರಿಕೆಯಂತೆ ಬೇಱ[೩]ಕೊಂಡು ಸೌಂದರ್ಯಕ್ಕೆ ಪಕ್ಕಾಗಿ ನಿಜಕಾಂತನಾಟಮಂ ಕೂಟಮಂ[೨]ಮಿ[೨]ಂಟು ಜವ್ವನದ ಬೇಟ[೪]ಗಾ[೪]ರ್ತಿ ಕೂರ್ತುಬಗೆದು ಬಯಸಿ ಬಗೆಯೊಳ್ಭಾವಿಸುತಿರ್ದಳಾ ಪ್ರಸ್ತಾವದೊಳ್—

*ಗುರುಕುಚದಲ್ಲಿ ಸಾಂದ್ರತರಕುಂಕುಮಪಂಕಮನಿಟ್ಟು ಪಲ್ಲವಾ
ಧರೆಗಿರದಾಳಿಯರ್ಬಿಱಿದ ಮಲ್ಲಿಗೆಮೊಗ್ಗೆಯನಲ್ಲಿ ಸಾರ್ಚೆ ತಾ
ನರುಣತೆವೆತ್ತು ಕಾಣಿಸಿತು ಕಾಮನೃಪಂ ಕಡುಗಾಸುತೆಚ್ಚ ಬ
ಲ್ಸರಲೆನೆ ಮೂರ್ಛೆಯಿಂ ಮುಗಿ[೬]ದ[೬]ಕಣ್ಮಲರಿಂದೊಱಗಿರ್ದ ನೀಱೆಯಾ ॥೯೭॥

॥ವ॥ ಇಂತು ಸಮ್ಮದಂಗುಂದಿ ಹಮ್ಮದಂಬೋದ ಸರ್ವಮಂಗಳೆಗೆ ಕೆಳದಿಯರ್ಮದನದಹನಸಂತಾಪ[೫]ಪರಿಹರಣಚಣಸಮುಚಿತೋ[೫]ಪಚಾರಕ್ಕೆ ತಕ್ಕ ಪರಿಚಾರಂಗೆಯ್ಯುತ್ತಮಿರ್ದರ್ಧನ್ನೆವರಮಿತ್ತಲ್ ವಿಪುಳವಿಭವಂ ಮಿಗೆ ಮುಂಬಂದ ರಾಜಶೇಖರ ನರೇಂದ್ರಂಗೆ ವಿವಿಧೋಪಚಾರಂಗೆಯ್ದನಂತರಮಂತಃಪುರದೊಳವಳ್ದುದ ಕೇಳೀವನಾಂತಸ್ಥ[೭]ಳ[೭]ವಿಳಸಿತಮಣಿಮಯಪ್ರಾಸಾದಮಂ [೮]ಬಿ[೮]ಡುದಾಣಂ ಮಾಡಿಕೊಟ್ಟು, ಮಜ್ಜನ ಭೋಜನಾದಿ ಸಮುಚಿತೋಪಚಾರಕ್ಕೆ ತಕ್ಕ ಪರಿಚಾರಕಜನಮಂ ನಿಯಾಮಿಸಿ ನಿಜರಮಣಿಯೊಡನೆ ಕನಕಪೀಠಮನಳಂಕರಿಸಿ ಸಿಂಹಳೇಂದ್ರಂ ಕುಳ್ಳಿರ್ದೀ ಕುಮಾರಂಗೆ ನಿಜಕುಮಾರಿಯಂ ಪರಿಣಯಂಗೆಯ್ವಲ್ವೇಳ್ಕುಮೆಂದು ನುಡಿವ ಸಮನಂತರದೊಳ್ ಸೌಂದರ್ಯಶಾರದೆಯೆಂಬ ಸರ್ವಮಂಗಳೆಯ ಕೆಳದಿ ಪರಿತಂದಿರ್ವರಡಿದಾವರೆಯಂ ಕುರುಳ್ದುಂಬಿಗಳಿನೋಲಗಿಸಿ ಕರಾರವಿಂದಮಂ ಮುಗಿದು ನಿಂದು—

೧ ಸ್ಯಾ (ಮೂ) ೨ ಮೀ (ತಾ) ನೀ (ಮೂ) ೩ ಕಾ (ರಿ, ತಪ, ಮೂ) ೪ ವ (ತಾ) ೫ ಪರಿಹರಣಸಮುಚಿತ ೬ ಉ (ಮೂ) ೭ ಳದ (ರಿ) ೮ ಬೀ (ಮೂ) *೯೩ ರಿಂದ ೮ ನೆಯ ಆಶ್ವಾಸದ ೩೭ನೆಯ ವರೆಗಿನ ಭಾಗವು 'ಮೈ'ಪ್ರತಿಯಲ್ಲಿಲ್ಲ, (ಗರಿ ೫೨ ರಿಂದ)

ಎಂದು ನರೇಂದ್ರಪುತ್ರನನಭೀಕ್ಷಿಸಿದಳ್ಭವದೀಯ ಪುತ್ರಿಯಂ
ದಿಂದಘನಂಗಬಾಣಹತಿಯಿಂ ಬಗೆಗುಂದಿ ಬಳಲ್ದು ಪಾಡಧೇ
ನೊಂದುಮನಾಡದಂಚೆ ಗಿಳಿ ಕೋಗಿಲೆಯಿಂಚರಕಳ್ಕಿ ಬಳ್ಕಿ ಪೂ
೧ರ್ಣೇ೧ಂದುನಿಭಾಸ್ಯೆ ನೊಂದಪಳಿವಳ್ಗೆ ಸಪುಜ್ಜುಗಮೇಂ ಮಹೀಶ್ವರಾ ॥೯೪॥

ಅಲರೆಲರಳಿಗಿಳಿಮಧುವಿಧು
ನಲಿನಂ ಪುಲಿನಂ ಮರಂದಬೃಂದಂ ಕುಂದಂ
ಕಲಗಲ ಕಲಕಲ ಘನವನ
ಘಲೆಗುಂ ಭವದೀಯ ತನುಜೆಯಂ ಮನುಜೇಂದ್ರಾ ॥೯೫॥

ತರುಣಿಯ ವಕ್ತ್ರನೇತ್ರಪದಪಾಣಿದರಸ್ಮಿತಕಾಂತಿಗಳ್ಗೆ ಸೋ
ಲ್ತುರುತರಕಂಜಕೈರವನವಾಮ್ರವಿರಾಜದಶೋಕಮಲ್ಲಿಕಾ
ಶರನಿ೨ಕರಂ ಕರಂ ಸ್ಮರ೨ನಿಷಂಗಮನೆಯ್ದೆ ವಿರೋಧಭಾವಸಂ
ಸ್ಮರಣದೆ ತನ್ನಿತಂಬಿನಿಯಸುಂಗೊಳಲುಜ್ಜುಗಿಸಿರ್ಪುದುರ್ವಿಪಾ ॥೯೬॥

॥ವ॥ ಅದುಕಾರಣದಿಂ ದಶಮದೆಸೆಗೆ ಪಕ್ಕಾಗದ ಮುನ್ನಂ ತಕ್ಕುದಂ ನೆಗಳಲ್ವೇಳ್ಕು ಮೆಂದು ನುಡಿಯಲೊಡನರಸಂ ಮನೋರಥಕ್ಕನುಗುಣಮಾದ ಮಗಳ ಬಗೆಗೆ ಸಂತಸಂಬಟ್ಟು—

ಈ ಕುವರಿಗೆ ಬಗೆವಡೆ ಮ
ತ್ತಾ ಕುವರನೊಳಲ್ಲದೊಲ್ಮೆ ಸಮನಿಕುಮೆ ವಲಂ
ಶ್ರೀ ಕುಮುದಿನಿಗೊದವುಗುಮೆ ಕ
ಲಾಕಾಂತನೊಳಲ್ಲದಾತ್ಮಹರ್ಷೋತ್ಕರ್ಷಂ ॥೯೭॥

॥ ವ ॥ ಎಂದಿನಿಯುಳೊಡನೆ ಸಾದರಂ ಮಿಗೆ ಪೊಗಳ್ದು ಸಿಂಹಳೇಂದ್ರಂ ಸಾಂದ್ರ ಹರ್ಷದಿಂದಿರ್ದು ಮಱುದಿವಸದುದಯಸಮಯದೊಳೇಕಾಂತಭವನದೊಳ್ಮಣಿಪೀಠ ದೊಳ್ಕುಳ್ಳಿರ್ದು ನಿಜಾಮಾತ್ಯನೊಡನೆ ತತ್ಪರಿಣಯಪ್ರಸಂಗಂ ಗೆಯ್ವುತಮಿರ್ಪಾಗಳ್ ಪ್ರತಿಮೋಹಿಮಂತ್ರಿಪಂ ರಾಜಶೇಖರಪ್ರೇಷಿತನಲ್ಲಿಗೇಳ್ತಂದು ನಿಜವಿನಯಮಂ ಮೆಱೆದು ತನ್ನರೇಂದ್ರಸನ್ಮಾನಿತನುಚಿತವಚನದಿನಿಂತೆಂದಂ—

ವರರಾಜಶೇಖರಂಗಾ
ಗಿರಿವರನಿತ್ತಂತೆ ಸರ್ವಮಂಗಳೆಯಂ ಭೂ
ವರರಾಜಶೇಖರಂಗೆಲೆ
ನರೇಂದ್ರ ಕೊಡು ಸರ್ವಮಂಗಳೆಯನನುನಯದಿಂ ॥೯೮॥

೧ ರ್ಣೇ (ಮೂ) ೨ ನಿಕರಂ ಸ್ಮರ (ಮೂ)

॥ ವ ॥ ೧ಎಂದ ಮಾತಿಂಗೆ೧ ಮನೋರಥಂ ಕೈಸಾರ್ದಂತೆ ಸಂತಸಂಬಟ್ಟು ಕೊಟ್ಟೆಂ ಕೊಟ್ಟೆನೆಂದು ಸಿಂಹಳೇಂದ್ರಂ ನುಡಿದು೨ಮೌಹೂ೨ರ್ತಿಕರಂ ಬರಿಸಿ ಶುಭಲಗ್ನಮಂ ಬೆಸಗೊಂಡು ಮಗಳ ಪರಿಣಯಕ್ಕೆ ತಕ್ಕ ಕಲ್ಯಾಣಮಂಟಪಮಂ ಕೌತುಕಾವಹ-ಮಪ್ಪಂತೆ ಮಯಮಾಂಡವ್ಯರಂ ಪಳಿವ ಶಿಲ್ಪವಿದ್ಯಾವಿಶಾರದರಿಂ ರಚಿಸುತ್ತಿರ್ದನಾಗಳ್ ಪತಿವೋಹಿಮಂತ್ರಿಪನಲ್ಲಿಂದೇಳ್ತಂದು ಕುಮಾರಂಗಱುಪಿ ತದನುಜ್ಞೆಯಿಂ ಧರ್ಮ-ವತಿಗೆಯ್ತಂದು ಸತ್ಯೇಂದ್ರನರೇಂದ್ರಂಗೆ ಪೊಡ೩ಮ೩ಟ್ಟು ನೆಗಳ್ದ ಕಜ್ಜಮನೆಲ್ಲಮಂ ಬಿನ್ನಪಂಗೆಯ್ದು ಮತ್ತಮಿಂತೆಂದಂ—

ಮಣಿಯದ ಸಿಂಹಳನಗ್ಗದ
ಮಣಿಯಂ ಮಣಿದಿತ್ತುಮಾತ್ಮಭವೆಯೆನಿಸುವ ಪೆ
ಣ್ಮಣಿಯಂ ನೃಪಕುಳಚೂಡಾ
ಮಣಿಯುವರಾಜಂಗೆ ಮದುವೆಯಂ ಮಾಡಿದಪಂ ॥೯೯॥

ಸಿಂಗರದಿಕ್ಕೆ ಮಂಗಳದ ಮೈಸಿರಿ ಜಾಣ್ಮೆಯ ಗೊತ್ತು ಕಾಮಶಾ
ಸ್ತ್ರಂಗಳ ಕೋಶಮಿಂಪಿನ ತವರ್ಮನೆ ಸೈಪಿನ ಸೀಮೆ ಚಿತ್ತಜಾ
ತಂಗಧಿದೇವಿ ಸತ್ಕಳೆಗಳಾಗರಮೋಳ್ಗಿಯಡರ್ಪು ಸಚ್ಚರಿ
ತ್ರಂಗಳ ಬೀಡು ಶೈವಮತದರ್ಪಣಮಾತನ ಪುತ್ರಿ ಭೂವರಾ ॥೧೦೦॥

॥ ವ ॥ ಮತ್ತಂ—

ನಗೆ ನಡೆ ಮಾಂದ್ಯಮಾಳ್ದಿರೆ ಕುರುಳ್ಕುಡಿನೋಟ ಮರಾಳಭಾವದೊ
ಳ್ಪಗೆ ಪೊಸಜವ್ವನಂ ಜಘನಮಂ ತನಿವೆರ್ಚೆ ಕದಂಪು ಕಣ್ಪೊಗ
ರ್ಪೊಗರಿಡೆ ಲಜ್ಜೆಯುಂ ಲಲಿತಲೀಲೆ ಪೊದಳ್ದಿರೆ ಸೊಂಪುದಾಳ್ದು ಮೇ
ಣ್ಸೊಗಯಿಸೆ ಮೈಮೊಗಂ ಕುವರಿಗೊ೪ಪ್ಪಿದುದು೪ರ್ವಿದ
೫ಯೌ೫ವನೋದಯಂ ॥೧೦೧॥

೧ ಎಂದಮಾತ್ಯಂಗೆ (ತಾ) ೨ ಮುಹೂ (ಮೂ) ಮೂಹ (ಬ) ೩ ವ (ಮೂ)
೪ ಪ್ಪುಗುಂ (ಮೂ) ೫ ಯವ್ವ (ಮೂ)

ತೊಳಗುವ ನಗೆಮೊಗಮುಜ್ವಳ
ಕಳಶಸ್ತನಮಳಿಚಳಾಳಕಂ ತಳಿರ್ದುಟಿ ಕೋ
ಮಳತನುಲತೆ ಘನಜಘನಂ
ಸೆಳೆನಡು ಕಳಹಂಸಗಮನಮೆಳೆಯಳ್ಗೆಸೆಗುಂ ॥೧೦೨॥

ರತಿ ಬಗೆಗೆ ಬರ್ಪಳಾ ಭಾ
ರತಿ ನುಡಿಯಂ ಮೀಱಿ ನಡೆಯಳಿಂದಿರೆ ಚತುರ
ಸ್ಥಿತಿಯಂ ಮೈವಳಿಯೊಳ್ಸಂ
ದತಿಶಯಮೆನೆ ನಡೆವಳಾ ಮಹೀಭೃತ್ಸುತೆಯಾ ॥೧೦೩॥

॥ವ॥ ಎಂದವಳ ರೂಪಾತಿಶಯಮಂ ಸತ್ಯೇಂದ್ರನರೇಂದ್ರಂಗೆ ವಿಜ್ಞಾಪನಂಗೆಯ್ದು ತತ್ಪರಿಣಯಕರಣಲಬ್ಧಾಭ್ಯನುಜ್ಞನಾಗಿ ಮಗುಳ್ದು ಕಮಳಾವತಿಗೇಳ್ತಂದು ಸಚಿವೇಂದ್ರಂ ನರೇಂದ್ರಪುತ್ರಂಗೆಲ್ಲಮಂ ಬಿನ್ನಪಂಗೆಯ್ದಾಗಳ್—

ಮೊಗ[೧]ಸಸಿ[೧]ಗೆ ಸುಪ್ರಸನ್ನತೆ
ನೆಗಳ್ದುದು,ಹೃದಯಾಬ್ಜಮಲರ್ದು ಸಾಮೋದತೆಯಿಂ
ಮಿಗೆ ತಳೆದುದು,ಚಿತ್ರಂ ಗಡ
ಬಗೆವೊಡೆ ತನ್ನೃಪಕುಮಾರಕುಸುಮಾಯುಧನಾ ॥೧೦೪॥

॥ವ॥ ಮತ್ತಮಾಗಳ್—

ಶಿವಪಾದಾಂಭೋಜಮಂ ಭಕ್ತಿಯೊಳೆ ಭಜಿಸುತಂ,ಶೈವಕಾವ್ಯಂಗಳಂ ಶಾಂ
ಭವಲೀಲಾಸತ್ಕಥಾಸಂತತಿಯನೊಸಗೆಯಿಂ ಕೇಳುತಂ,ಭವವಿದ್ವ
ನ್ನಿವಹಕ್ಕಾನಂದದಿಂದಂ ವಸುವಸನಮಣಿಶ್ರೇಣಿಯಂ ಮಾಣದೀವು
ತ್ತವನಿರ್ದಂ ಭೂರಿಭೂಮೀಶ್ವರನತಚರಣಾಭಾರತೀಭಾಗಧೇಯಂ ॥೧೦೫॥

ಸುರೇಂದ್ರಪರಿಪೂಜಿತೆ ಸುಗುಣರಾಜಿವಿಭ್ರಾಜಿತೆ
ಕರೀಂದ್ರವದನಾಂಬಿಕೆ ಕಲಿತಪದ್ಮಪತ್ರಾಂಬಕೆ
ಹರೀಂದ್ರವರವಾಹನೆ ಹರಕೃತೋರುಸಂಮೋಹನೆ
ಗಿರೀಂದ್ರತನುಸಂಭವೆ ಗತಿ ಭವತ್ಪದಂ ಶಾಂಭವೀ ॥೧೦೬॥

---

೧ ಶಶಿ (ಶಾ, ಮೂ, ರಿ),

ಇದು ವಿನಮದಮರ ವರಮಕುಟತಟಘಟಿತಮಣಿಗಣಮಹಾಪ್ರಭಾಪಟಲಪರಿವೃತ
ಪರಶಿವಶ್ರೀಪಾದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾಚಂಚಚ್ಚಕೋರಾಯ-
ಮಾನಸರಸಜನಮಾನಿತೋಭಯ ಕವಿತಾವಿಶಾರದ ಶ್ರೀಷಡಕ್ಷರಿದೇವ
ವಿರಚಿತಮಪ್ಪ ರಾಜಶೇಖರವಿಳಾಸವಿಪುಳಪ್ರಬಂಧದೊಳ್
ಸರ್ವಮಂಗಳಾದರ್ಶನಾವರ್ಣನಂ ಸಪ್ತಮಾಶ್ವಾಸಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

ಅಷ್ಟಮಾಶ್ವಾಸಂ

ಶ್ರೀಮದುಮಾಮಧುರಾಧರ
ಸೋಮಕಳಾರಸರಸಂಜ್ಞ[1]ರಸನಂ ಪ್ರಮಥ
ಸ್ತೋಮಾವೃತಕನಕಾಚಳ
ಧಾಮಂ ಕೊಡುಗೆಮಗೆ ಸೌಖ್ಯಮಂ ಶಿವಲಿಂಗಂ ॥೧॥

॥ವ॥ ಆಗಳಿತ್ತಲ್—

ಮುತ್ತಿನ ತೋರಣಂ ಕನಕವೇದಿಕೆ ಪಚ್ಚೆಯ ಕುಟ್ಟಿಮಸ್ಥಳಂ
ಸುತ್ತಿ[2]ಡಿ[2]ದಿರ್ದ ಮಾಣಿಕದ ಲಂಬಣಮಾಲೆ ನವೀನಚೀನದಿಂ
ಬಿತ್ತರವೆತ್ತ ಮೇಲ್ಗುಡಿ ನಿಮಿರ್ಚಿದ ಬಜ್ಜರಗಂ[3]ಬ[3]ಮಿಂಬುಗೊಂ
ಡುತ್ತಮನೀಲಪುತ್ರಿಕೆ ವಿರಾಜಿತಮಾಯ್ತು ವಿವಾಹಗೇಹದೊಳ್ ॥೨॥

ಬಳಸಿರೆ ಕಟ್ಟಿ ಬಿಟ್ಟ ಪೊಸಮಲ್ಲಿಗೆಮಾಲೆ ಮರಂದಬಿಂದುಗ
ಳ್ತುಳುಕುವಿನಂ ಮಧುವ್ರತವಿತಾನಮೊಱಲ್ದೆ ಱಗಿರ್ದೊಡಲ್ಲಿ ಸಾ
ಲ್ಗೊಳಿಸಿದ ಮೌಕ್ತಿಕಪ್ರಸರಮಂ ಹರಿನೀಲಮಣಿಪ್ರತಾನದೊ
ಳ್ಕೆಳೆಗೊಳಿಸುತ್ತೆ ತೆತ್ತಿಸಿದವೋಲ್ಮೆಱೆದಿರ್ದುದು ಮಂಟಪಾಗ್ರದೊಳ್ ॥೩॥

॥ವ॥ ಮತ್ತಂ—

ಹರಿನೀಲದ ಭಿತ್ತಿಯೊಳಂ
ಬುರುಹಾನನೆ ಕೂಡೆ ಕುಂಕುಮದ ಕಾರಣೆಯಂ
ವಿರಚಿಸಿದಳರರೆ ಮುಂಗಾರ್
ಸಿರಿ ಸೆಳೆಮಿಂಚಂ ಪಯೋಧದೊಳ್ಪುಟ್ಟಿಪವೋಲ್ ॥೪॥

ರಜನಿ ನಭಃಪ್ರದೇಶದೊಳುಡುವ್ರಜಮಂ ರಚಿಪಂತೆ ಸಾರನೀ
[4]ರಜನಿ ಮರಂದಬಿಂದುತತಿಯಂ ದಳದೊಳ್ಪಳಿವಂತೆ ಕಾಂತಶು
ಕ್ತಿಜಮಣಿಬೃಂದಮಂ ಸುರಿದು ನೀಲದ ಪಚ್ಚೆಯ ಕುಟ್ಟಿಮಂಗಳೊ
ಳ್ನಿಜಕರದಿಂದೆ ರಂಗಮನೊಡರ್ಚಿದಳೊರ್ವಳುದಾತ್ತಲೀಲೆ[5]ಯಿಂ[5] ॥೫॥

---

೧ ಗ್ನ (ಮೂ) ೨ ಱ (ಮೂ, ಕ) ೩ ಭ (ಮೂ, ತಾ, ಧಾ) ೪ ರಾ (ಕ)
೫ ಯಂ (ತಾ)

॥ವ॥ ಮತ್ತಮದು ಘನಕನಕಮಯಸ್ತಂಭಸಹಸ್ರದಗ್ರದೊಳ್ನೆಲೆಗೊಳಿಸಿ ಕಟ್ಟಿದ ಪೊಂಬಟ್ಟೆಯ ವಿತಾನದ ಪರಿಸರದೊಳ್ನಿಱಿವಿಡಿದೆಳಲೆವಿಟ್ಟ ತಳಿರ್ವಟ್ಟೆಯ ಚಿತ್ರಾವಳಿಯ ಮೇಲ್ಕಟ್ಟಿನ ಮುತ್ತಿನ ಲಂಬ[೧]ಣಂ[೧]ಗಳ, ತೆತ್ತಿಸಿದ ಕೆಂಬರಲ್ಗಳ, ಸಾಲಱಿದು ತೊಡರ್ಚಿದ ಝಲ್ಲಿಗಳ, ಕೀಲಿಸಿದ ಪೊನ್ನ ಬಿಂಗಾರಿಗಳ, ಸಾಲ್ಗೊಳಿಸಿದ ಮಾಣಿ[೨]ಕ[೨] ದಿಂಡೆಗಳ, ಕೀಲ್ಗೊಳಿಸಿ ನಿರ್ಮಿರ್ಚಿದ ಪಚ್ಚೆಯ[೩]ಕು[೩]ಚ್ಚುಗಳ, ತೊಡರ್ಚಿದ ಕುಸುಮ ಮಾಲಿಕೆಗಳ [೪]ನೆಗಳ್ಚಿ[೪]ದ ಚಿತ್ರಪುತ್ರಿಕೆಗಳ, ಬಿಗಿದ ಮಣಿದರ್ಪಣಂಗಳ, ಗಗನಮಂ ತುಡುಂಕುವ ಪತಾಕೆಗಳ, ಮುಗುಳ್ವಳೆಯಂ ಸುರಿವ ಜಂತ್ರದ ಮುಗಿಲ್ಗಳ, ತೆಗೆದು ತರಂಗೊಳಿಸಿದ ಪಂಚವಣ್ಣಿಗೆಯ ಪಟ್ಟೆಯ, ಸಿಂಗರಿಸಿದ ಮಕರತೋರಣದ, ಸಂಗಳಿಸಿದ [೫]ನ[೫]ನೆಯ ಸೂಸಕಂಗಳ, [೬]ಸ[೬]ಸಿಗಲ್ಲ ನೆಲಗಟ್ಟಿನ ಪೊಸಬಜ್ಜರದ ವೇದಿಕೆಯ, ನವನೀಲದ ಭಿತ್ತಿಯ, ಪವಳದ ಬಾಗಿಲ್ವಾಡದ, ಗೋಮೇದಿ[೭]ಕ[೭]ಕವಾಟದ, ಹೇಮಮಯಾರ್ಗಳಸ್ತಂಭದ, ಸು[೮]ತ್ತಿ[೮]ಕಟ್ಟಿದ ಕನಕಘಂಟೆಯ, ಬಿತ್ತ-ರಂಬಡೆದ ಮಾಣಿಕ್ಯಕಲಶದ, ವೈಢೂರ್ಯದ ಲೋವೆಯ, [೯]ಗ[೯]ಡಿವಡೆದ ಮಂಟಪದ ಮಧ್ಯದಲ್ಲಿ ನೆರೆದ ವಿಬುಧರಿಂ ತ[೧೦]ರಂಬಿ[೧೦]ಡಿದ ರಾಜಪುತ್ರರಿಂ, ಮಂತಣಂಬಡೆದ ಮಂತ್ರಿಗಳಿಂ, ತಿಂತಿಣಿಗೊಳ್ವ ರಾಜಪುರುಷರಿಂ, ಬಣ್ಣಿಪ ಸತ್ಕವೀಂದ್ರರಿಂ, ಕಣ್ಣಿಟ್ಟು ಕೌತುಕಂಬ[೧೧]ಡು[೧೧]ವ ಕಳಾವಿದರಿಂದೆಡೆಯಾಡುವೆಳೆವೆಣ್ಗಳಿಂ, ಗುಡಿಗಟ್ಟುವ ಪೌರಜನದಿಂ ಗಳಿಗೆವಟ್ಟಲನಾರೈವ ಜೋಯಿಸರಿಂದೊಳಗೆ ಪಸದನಂಗೊಂಬ ವಿದಗ್ಧೆಯರಿಂ, ನೆರಪಿದ ಮಂಗಳಸಾಧನಂಗಳಿಂ, [೧೨]ಸರಸಗೀತ[೧೨]ಮಂ ಪಾಡುವ ಗಾಯಕರಿಂ, ಮೊಳಗುವ ಮಂಗಳವ[೧೩]ಱಿ[೧೩]ಗಳಿಂ, ತೊಳಗುವ ಮಣಿದೀಪಿಕೆಗಳಿಂ. ನೋಡಿ ನಲಿವ ಕುಮಾರಿಯರಿಂ, ಕೂ[೧೪]ಡೆ[೧೪] ಸಡಗರಿಪ ವಿಳಾಸಿನಿಯರಿಂ, ತೆಱಂಬೊಳೆವ ಕಾಂಡಪಟದಿಂ ತುಱುಗಿ ಸುರಿವ ಕರ್ಪೂರರಜದಿಂ, ಪರಿಮಳಕ್ಕೆಱಗುವ ಪಱಿಮೆವಱೀಗಳಿಂ, ಪುರುಳಿಗೂಡಿಗಳುಪುವ ಕೇಳೀ[೧೫]ಶು[೧೫]ಕಂಗಳಿಂ, ಕೆದರ್ದ ಕುಸುಮಂಗಳಿಂ, ಪದಂಗೊಳಿಸಿದ ಪನ್ನೀ[೧೬]ರ್ಗೊಡಂ[೧೬]ಗಳಿಂ, ಮುತ್ತಿನ ರಂಗವಲ್ಲಿಗಳಿಂ, ಬಿತ್ತರಿಸಿದ [೧೭]ಚಿತ್ರಂ[೧೭]ಗಳಿಂ, ಪೊಱಗೆ ನೇಮಿಸಿದ ನವಿಲು[೧೮]ಯ್ಯಾ[೧೮]ಲೆಯಿಂ, ಕಿಱುವೆಂಡಿರ ಕೇಳಿಗೆ ಸಮೆದ ಮಣಿರಾಟಳದಿಂದಿಂಬುವೆತ್ತು ವಸಂತರಾಜನ ವಿಳಾಸಮಂಟಪದಂತೆ, ಕುಸುಮಕಳಂಬನ ಕೇಳೀನಿಳಯದಂತೆ ಕಾಣ್ಬರ ಕಣ್ಗೆ ಕೌತುಕಮನೊದವಿ, ನುತಿಪರ ರಸನೆಗತರ್ಕ್ಯಮೆನಿಸಿ, ವಸುಧೆಗೆ ಬಿಸುವಂದಮನೀವ ಪಸದನಂಬಡೆದ ಪೊಸಪಸುರ್ವಂದರೊಸಗೆ ಮಿಗೆ ಮಿಸುಗುತ್ತಿರ್ದುದಂತುಮಲ್ಲದೆಯುಂ—

---

೧ ಣಗ (ತಾ) ೨ ಕದ (ಧಾ), ಕ್ಯ (ಮೂ) ೩ ಗು (ಧಾ) ೪ ನೆಗಳಿ (ಕ) ನೆಲೆಗೊಳಿಸ (ತಾ) ೫ ನೆ(ಧಾ, ಕ) ೬ ಶ (ತಾ, ಮೂ, ಧಾ) ೭ ಕದ (ರಿ) ೮ ತ್ತ (ಮೂ) ೯ ಗು (ಮೂ) ೧೦ ರಬಿ (ಧಾ) ೧೧ ಡೆ (ತಾ, ಕ) ೧೨ ಸಾರಸಂಗೀತ (ತಾ) ೧೩ ವರಿ (ಮೂ, ಧಾ) ೧೪ ಡಿ (ಮೂ) ೧೫ ಸು (ಮೂ, ತಾ) ೧೬ ಗೊಂಡ (ತಾ) ೧೭ ಜಂತ್ರ (ತಾ) ೧೮ ಯಾಲೆ (ಅ, ಕ).

ಅದು ಪರಿಶೋಭಿಸಿತ್ತು ಮಧುವಿಂ ವಿಧುವಿಂ ವಧುವಿಂ ಪರಾಗಮಂ
ಕೆದರ್ವ ಲಸತ್ಪ್ರಸೂನಸರದಿಂ ತರದಿಂ ನೆರೆದಿಂಬುಗೊಂಡ ಕೋ
ವಿದಕುಲದಿಂ ನರೇಂದ್ರಸುತರಿಂ ಹಿತರಿಂ ನುತರಿಂ ಕವೀಂದ್ರರಿಂ
ಸದಮಳಶೈವವಿಪ್ರತತಿಯಿಂ ಶ್ರುತಿಯಿಂ ಕ್ರತುವಿಂದೆ ಮಂಟಪಂ ॥೬॥

ಅರಲ ಸರಂಗಳಂ ಸವೆವ ಲಾಜೆಯನೋಜೆಯೊಳಾಯ್ವ ಪುಷ್ಪಮಂ-
ಜರಿಗೆ ಹಿಮೋದಕಂದಳಿ[1]ವ[1] ಕತ್ತುರಿಸಾರಣೆಗೆಯ್ವ ಚಿತ್ರಮಂ
ಬರೆವ ಕದಂಬಮಂ ನೆಗಳ್ವ ನೀವಿಯನೊತ್ತುವ ಪುಷ್ಪಪುತ್ರಿಕಾ
ವಿರಚನೆಗೆಯ್ವ ನೀರೆಯರದೇನೆಸೆದಿರ್ದರೊ ಮಂಟಪಾಗ್ರದೊಳ್ ॥೭॥

॥ವ॥ ಮತ್ತಮಲ್ಲಿ—

ಮುಡಿ ಮುಡಿ [2]ತಾಂಗಿ[2] ಸೂಸೆ ಮುಡಿ[3]ದು[3]ಳ್ಳಲರೆಲ್ಲೆಡೆಯೊಳ್ಪಳಂಚಿ ಪೊಂ
ಗೊಡಮೆರಡೊಂದನೊಂದೊರಸೆ ತದ್ರಜಮೊಕ್ಕುದೆನಿಪ್ಪ ಭಾವಮಂ
ಕುಡೆ ನಿಬಿಡಪ್ರಕಂಪಿತಕುಚಚ್ಯುತಕುಂಕುಮರೇಣು ತಮ್ಮ ಕೇ
ಸಡಿಗಳ ಕೆಂಪು ಕೆಂದಳಿರ ಸಾಲಿಡೆ ಸಂಚರಿಪರ್ಲತಾಂಗಿಯರ್ ॥೮॥

॥ವ॥ ಮತ್ತಮಾ ಮಂಟಪಂ ಮಧುಸಮಯದಂತೆವೋಲ್ ಪ್ರಮದಾಳಿಸುಮನೋಮನೋಜ್ಞಮುಂ, ದಿವದಂತನಂತಮಣಿಕಿರಣಾಲಂಕೃತಮುಂ ಸಮುದ್ರದಂತೆ ಸ[4]ದಾ[4]ವಿಭವಾನ್ವಿತಮುಂ, ಸಂಧ್ಯಾಸಮಯದಂತೆ ಸಭಾನುರಾಗರಂಜಿತಮುಂ, ಸತ್ಯಲೋಕದಂತೆ ಸುಧೀರಾಜಾನ್ವಿತಮುಂ, ಪುರಂಧರಪುರದಂತೆ ಸದಾ ರಂಭಾನ್ವಿತ ವಿಬುಧಮಿಳಿತಮುಮಯೋಧ್ಯಾನಗರದಂತೆ ಮಹಾಲಂಕಾರಾತಿಶೋಭಿತಮುಂ, ತಪೋವನದಂತೆ ಸದರ್ಥವೇದ್ಯುಪಶೋಭಿತಮುಂ ಪಾಂಚಾಲಿಕೋದಂಚಿತಮಾಗಿಯುಂ ಕಲಶಜಾತಸಮನ್ವಿತಮುಂ, ಸದಾಮೋದರಮಣೀವಿಲಸಿತಮಾಗಿಯುಮಜಡಾಶ್ರಯಮುಂ, ಚಿತ್ರಕಾಯಾ[5]ಶ್ರಿತ[5]ಮಾಗಿಯುಂ ಮೃಗಮದಸಮೃದ್ಧಿಭಾಜನಮುಂ, ಪ್ರವಾಲದಂಡಮಂಡಿತಮಾಗಿಯುಮನಂಜನಾತ್ಮಜಾತಮುಂ, ಸಮುಧುರವಿತತಾಬ್ಜೋಪಲಸಿತಮಾಗಿಯುಂ ಮುಕ್ತಾಳಿವಿತಾನಮುಂ ಶಿವಪ್ರಭಾವಾಶ್ರಿತಮಾಗಿಯುಮತನುವಿಳಾಸಾಸ್ಪದಮೆನಿಸಿರ್ದುದಲ್ಲಿ—

---

೧ ತ (ಮೂ) ೨ ತಾಗಿ (ತಾ) ೩ ದ (ತಾ) ೪ ದಾರ (ಕ, ಮೂ, ತಾ) ೫ ಶ್ರಯ (ತಾ, ಮೂ, ಕ,

ಭಗಣಂ ಬಳಸಿರೆ ಕಿಱುವೆ
ಳ್ಮುಗಿಲೊಪ್ಪುವ ತೆಱದೆ ಸುತ್ತಿ ಮುತ್ತಿನ ಮಣಿಸಾಲ್
ಸೊಗಯಿಸೆ ನಡುವೆಸೆದುದು ಝುಗ
ಝುಗಿಸುತೆ ಬಜ್ಜರದ ಪಟ್ಟವಣಿ ವೇದಿಕೆಯೊಳ್ ॥೯॥

॥ವ॥ ಅದಱ ಮುಂಗಡೆಯಲ್ಲಿ—

ಬಳಸಿರೆ ಮೃಣಾಳಗುಣಮು
ಗ್ಗಳಿಸಿರೆ ಮಣಿದರ್ಪಣಂ ಮಹೌಷಧಿಗಳ್ಕಂ
ಗೊಳಿಸಿರೆ ಪಲ್ಲವತತಿ ಸಂ
ಗಳಿಸಿರೆ ಮಣಿಪೂರ್ಣಕುಂಭಮೊಪ್ಪಿದುದದಱೊಳ್ ॥೧೦॥

ದಧಿ ಜ[1]ವೆ[2]ದೂರ್ವೆ ಲಾಜೆ ಪೊಸಸಂಕು ಸರೋರುಹತಂತುರೋಚನಂ
ಮಧುಮಣಿಮಾಲೆ ಮಾದಳದ ಪಣ್ಕದಳೀಫಳಮಿಕ್ಷುಬಾಸಿಗಂ
ಸುಧೆ ಸಿರಿಗಂಪು ಕುಂಕುಮರಸಂ ಕಳಮಾಕ್ಷತೆ ರತ್ನದರ್ಪಣಂ
ವಿಧುಮಣಿ ಪೂರ್ಣಕುಂಭಮೆಸೆದತ್ತು ವಿವಾಹಗೃಹಾಂತರಾಳದೊಳ್ ॥೧೧॥

॥ವ॥ ಇಂತನಂತಾನಂತಶರ್ಗಂ೨ ನುತಿಸಲಸದಳಮಾದ ಶೋಭಾವಹಶುಭ ಮಂಟಪಂ ವಧೂವರರ ಬರವಂ ಬಯಸುತಿರ್ದುದಾ ಸಮಯದೊಳ್ ಸಿಂಹಳೇಶ್ವರನ ಬೆಸದಿಂ ಕಳಾವಿದೆಯರಾದ ಕೆಳದಿಯರೇಳ್ತಂದೊಸಗೆ ಮರುಳ್ಗೊಂಡು ಬಂದು ಸಂದಣಿಸಿ ನಿಂದು—

ಒದವಿದ ಯೌವನರಾಜ್ಯಾ
ಭ್ಯುದಯಕ್ಕಭಿಷೇಕಿಪಂತೆ ಮದನನ ಬೆಸದಿಂ
ಸುದತಿಯರಾ ಯುವತಿಗೆ ಮಾ
ಡಿದರೊಲವಿಂ ಪರಿಮಳಾಂಬುವಿಂ ಮಜ್ಜನಮಂ ॥೧೨॥

॥ವ॥ ಅನಂತರಂ—

---

೧ ಲ (ಮೂ) ೨ ಗೇ (ತಾ)

ಉಗುರ್ಗದಿರಳಕಾಳಿಗೆ ಮ
ಲ್ಲಿಗೆಗುಡೆ ಬಿಡೆ ಬಿದಿರ್ದು ಬಿ[೧]ರ್ಚಿ[೧]ಬಿಡದಾರಿಸಿ ಮೇ
ಣ್ಮೃಗಮಗಿಪ ಮೃಗಮದದ ರೇ
ಣುಗಳಂ ತಳಿದಾಳಿ ಕಟ್ಟಿದಳ್ಸೋರ್ಮುಡಿಯಂ ॥೧೩॥

ದಿನಲಕ್ಷ್ಮಿಗಿಂದ್ರದಿಗ್ವಧು
ವಿನಯದೆ ಪೊಂಬಿಸಿಲನುಡಿಸಿದಂತಿರೆ ಪದ್ಮಾ
ನನೆಗೆ ಪೆಱಳ್ಪೊಂಬಟ್ಟೆಯ
ನನುಗೊಳಿಸಿದಳವಳ ವಿಪುಳಜ[೨]ಘ[೨]ನಾಚಳದೊಳ್ ॥೧೪॥

ಎಳನೇಸರ ಕೆಂಬೆಳಗಂ
ತಳೆದ[೩]ಬ್ಜಿ[೩]ನಿಯಂತೆ ಕಾಂತೆ ಕುಂಕುಮದಣ್ಪಂ
ತಳೆದೆಸೆದಳ್ತನುಲತೆಯೊ
ಳ್ತೊಳಗುವ ಪೊಸಪೊನ್ನ ಪುತ್ಥಳಿಯನೇಳಿಸುತಂ ॥೧೫॥

ವಿರಹಿಜನದೆರ್ದೆಯ ನೆತ್ತ
ಪೊರ್ರೆದಂಗಜ[೪]ನ[೪]ಸುಗೆ [೫]ಸ[೫]ರದ ಚೆಲ್ವಂ ತಳೆದ
ತ್ತೆರರೆ ನವಯಾವಕದ್ರವ
ಪರಿಲಿಪ್ತಂ ಚರಣತಳಮದಬ್ಜಾನನೆಯಾ ॥೧೬॥

ಅಡಿಯಿದು ನಳಿನದೆ ಜಯಮಂ
ಪಡೆದುದು ನಡೆಯಿಂದಮಾ ಮರಾಳದ ಮದಮಂ
ತೊಡೆದುದೆನುತಬಳೆ[೬]ವಿ[೬]ರಿದಿನ
ತೊಡರಂ ತೊಡಿಪಂತೆ ತೊಡಿಸಿದಳ್ನೂಪುರಮಂ ॥೧೭॥

ಸ್ಮರಕರಿಯ ಶಿರದ ಸಿರಿಯಂ
ಗುರುಜಘನಂ ಕಳ್ದುದೆಂದು ಕಾವನ ಬೆಸದಿಂ
ತರಳೆ ಮಿಗೆ ಕಟ್ಟಿದಪಳೆನೆ
ಸುರುಚಿರಕಟಿಸೂತ್ರಮಂ ತೊಡರ್ಚಿದಳೊರ್ವಳ್ ॥೧೮॥

---

೧ ಬ್ಬಿ (ಮೂ) ೨ ಗ (ಕ) ೩ ಬ್ಜ (ತಾ, ಮೂ) ೪ ನೆ (ಮೂ) ೫ ಶ (ರಿ) ೬ ಬಿ (ರ)

ಇ[೧]ನೆ[೧]ಯನ ಮನೋಮಯೂರಂ
ಬಿನದಿಸುಗೆ ನಿತಂಬಗಿರಿನಿತಂಬದೊಳೆನುತಂ
ವನಿತೆ ಸೆಳೆಮಿಂಚನಿಟ್ಟಪ
ಳೆನೆ ಕಾಂಚನಕಾಂಚಿಯಂ ಕರಂ ಕೈಗೈದಳ್ ॥೧೯॥

ವದನವಿಧುರುಚಿ ಮುಸುಂಕಿದೊ
ಡದಿರದಿರೆಂದಬಳೆ ತುಡಿಪವೋಲೆಳೆವಿಸಿಲಂ
ಸುದತಿಯ ಕುಚಚಕ್ರಕೆ ತೊಡಿ
ಸಿದಳೊಲವಿಂ ಮಿಸುಪಮಿಸುನಿರವಕೆಯನೊರ್ವಳ್ ॥೨೦॥

ಸ್ತನಕನಕಕಮಳಕಳಿಕೆಗ
ಳನೆ ತಳೆದ ಮೃಣಾಳಮೆನಿಸಿ ತೋರ್ಪವೊಲೊರ್ವ
ಳ್ವನಿತೆಯುರದಲ್ಲಿ ಪೊಸಮು
ತ್ತಿನ ಘನನಕ್ಷತ್ರಮಾಲೆಯಂ ತೆಗೆದಿಟ್ಟಳ್ ॥೨೧॥

॥ವ॥ ಆಗಳ್—

ಸ್ತನಗಿರಿಯೊಳುದಯಿಪಂ ಕಾಂ
ತನಖಕ್ಷತತರುಣಚಂದ್ರನೆಂದುಡುಗಣಮೊ
ಯ್ಯನೆ ಬಂದು ಮುನ್ನಮಿರ್ದಪು
ದೆನೆ ತಾರಾಹಾರಮಿಂಬುವೆತ್ತುದು ಸತಿಯಾ ॥೨೨॥

ಸಂಪಗೆಯ ದುಂಡುದಂಡೆಗ
ಳಿಂಪಿಂ ಮಲ್ಲಿಗೆಯ ದಂಡೆಯಂ ಕೆಳೆಗೊಳಿಪಂ
ತಿಂಪಡರೆ ತೋಳ್ಗೆ ಮೌಕ್ತಿಕ
ದಿಂ ಪುದಿದುರುಬಾಹುಪೂರಮಂ ಪದೆದಿತ್ತಳ್ ॥೨೩॥

---

೧ ನ (ಮೂ, ತಾ) ೨ ಳಿ (ಮೂ)

ಇನಕರಮುಡುಗಣಮಂ ಕ
ರ್ಚಿ ನೆಲಕ್ಕಿಳಿತಂದು ನಳಿನಕಿತ್ತಪುದೆನೆ ಕಾ
ಮಿನಿಯ ಕರಾಗ್ರದೊಳಿಡೆ ಕಾಂ
ಚನವಲಯಂ ಮೌಕ್ತಿಕಾನ್ವಿತಂ ಕಂ[1]ಗೊ[1]ಳಿಕುಂ ॥೨೪॥

ಚೆಂಗುಡಿ ಗುಡಿಯೆಡೆಯೆಡೆಯೊ
ಳ್ಪಿಂಗದೆ ನೆ[2]ಗೆ[2]ದೇಱ ನಿಂದ ಮಣಿಗಳಿವೆಂಬೊಂ
ದಂಗಮನೊಡರ್ಚಿ ಮಾಣಿಕ
ದುಂಗುರಮಂ ನುಣ್ಬೆರಲ್ಗಳೊಳ್ಕೈಗೆಯ್ದಳ್ ॥೨೫॥

ನುತಸುಕರಪದ್ಮರಾಗಂ
ಕ್ಷಿತಿಯೊಳ್ರವಿಯಿಂದೆ ಮೆಱೆವುದುಚಿತಮದೀಗ
ಳ್ನುತಸುಕರಪದ್ಮರಾಗ
ಸ್ಥಿತಿಯಿಂ ರವಿರಾಗವಾಂಪುದಿದು ಚಿತ್ರತರಂ ॥೨೬॥

ಸ್ತನಕನಕಕಂಜಕೋರಕ
ಮನಿಶಂ ವಿಕಸನಮನಾನದಿರ್ಕೆಂದು ಪಳ
ಚ್ಚನೆ ಮೂಡುವಿಂದುವಿಟ್ಟಪ
ಳೆನೆ ಕಟ್ಟಿದಳ್ಕೈ[3]ದೆ[3]ದಾಳಿಯಂ ಪೆಱಳೊರ್ವಳ್ ॥೨೭॥

ವನಿತೆಯ ಕಣ್ಣೈದಿಲಸಿರಿ
ಗನುಕೂಲಮಿದೆಂದು ಚಂದ್ರಬಿಂಬದ್ವಯಮಂ
ಮನಸಿಜಜಯರಮೆ ಸಾರ್ಚಿದ
ಳೆನೆ ತೊಡಿಸಿದಳೆಸೆವ ಮುತ್ತಿನೋಲೆಗಳೆರಡಂ ॥೨೮॥

ಹಸನರಸವೆಂಬ ಸುಧೆ ತೆರೆ
ಮಸಗೆ ಸಿಡಿಲ್ದದಱ ತೋಱಪನಿ ತಳ್ತವೊಲೊ
ರ್ವಸಿಯಳಿಡೆ ಮಿಸುಪ ಮುತ್ತಿನ
ಪೊಸಮೂಕುತಿ ಮೆಱೆದುದಾಸ್ಯದೊಳ್[4]ಸ್ಮಿತ[4]ಮುಖಿಯಾ ॥೨೯॥

---

೧ ಣ್ಣೊ (ಮೂ, ತಾ) ೨ ಲೆ (ಕ) ೩ ರ (ಮೂ) ೪ ಶಶಿ (ಮೂ, ತಾ, ಧಾ)

ಸುರಗಿರಿಯಲಾಗ[1]ದೆಲೆ[1]ಚಂ
ದಿರಕಲೆಗಳನೆಂದು ಬಂದು ಪೊಡೆಯೊಳ್ತಲೆಯಿ
ಟ್ಟಿರದೆಱೆವ ಶುಕ್ರನೆನೆ ಭಾ
ಸುರನಾಸಾಮಣಿ ವಿರಾಜಿಸಿತು ಮೊಗಸಸಿಯೊಳ್ ॥೩೦॥

ಇಂದೀವರದಸಿತರಜಂ
ಪೊಂದಿದುದೆಲರಲೆ[2]ಯೆ[2] ತುದಿ[3]ಯನೆ[3]ನಿಸುತ್ತೊರ್ವಳ್
ಚೆಂದಿರಮೊಗದೆಳೆಯಳ ನಯ
ನೇಂದೀವರಕಾಗಳೆಚ್ಚಿ ದಳ್ ಕಜ್ಜಳಮಂ ॥೩೧॥

ಮೊಗ[4]ವೆ[4]ಂಬ ಪೂರ್ಣಚಂದ್ರನೊ
ಳೊಗೆದಳಿಕಾರ್ಧೇಂದು ಪೆತ್ತುದೆನೆ ಸಸಿಗೆರೆಯಂ
ಮಿಗೆ ಮೆಱೆವ ಭಸಿತತಿಲಕಮ
ನುಗುಗೊರ್ನೆಯಿಂ ತಿರ್ದಿ ರಚಿಸಿದಳ್ಪೆಱಳೊರ್ವಳ್ ॥೩೨॥

ಅಲರ್ದೆಸೆವ ಕರ್ಣಪೂರೋ
ತ್ಪಲದಸಿತರಜಂ ಕಳಲ್ದು ಪಸರಿಸಿತೆನೆ ಕೊ
ಮಲೆಯ ಕದಪಿನೊಳೆ ಬರೆದ
ಳ್ನಲಿನೇಕ್ಷಣೆ ಮಿಸುಪಮಕ[5]ರಿ[5]ಕಾಪತ್ರಿಕೆಯಂ ॥೩೩॥

ವದನೋದಿತೇಂದುವಿನ ಚೆಂ
ಗದಿರಿದಿರೇರ್ವಂತೆ ಸಿಂದುರಂ ತಳ್ತಿರೆ ತ
ತ್ಸದತಿಯ ಚಿಕುರತಮಂ ಕೊ
ಟ್ಟುದೆನಲ್ಬಟ್ಟೆಯದರ್ಕೆ ಬೈತಲೆ ಮೆಱೆಗುಂ ॥೩೪॥

ರಜನೀಮುಖವಿಧುವೆನೆ ಧೃತ
ರಜನೀಮುಖವಿಧು ಪೊದಲ್ದ ಕಾರ್ತಸ್ವರನೀ
ರಜ ಮಧುರತೆದಾಳ್ದಿರೆ ನೀ
ರಜ ಮಧುರತೆಯಳಿನಿ ಪಾಯ್ದುದೆನೆ ಕುರುಳೆಸೆಗುಂ ॥೩೫॥

---

೧ ದಿರೆ (ಕ) ೨ ಯ (ಮೂ, ತ) ೩ ಯೊಳಿ (ಮೂ, ತಾ) ೪ ಮೆ (ತಾ) ೫ ಲಿ (ಕ)

ದರಹಾಸಜ್ಯೋತ್ಸ್ನೆಯಿಂ ತಳ್ತಿಸೆವ ವದನಪೂರ್ಣೇಂದುವಂ ಸಾರ್ದು ನೀಲಾಂ
ಬುರುಹಂಗಳ್ಕಂಗಳಾ[1]ಕಾರ[1]ಮನೆ ಪಡೆದು ಚೆಲ್ವಾದುವೆಂದಲ್ಲಿ ತಾಮುಂ
ಪುರುಡಿಂದಂತಪ್ಪ ಚೆಲ್ವಂ ತಳೆಯಲೆಳಸಿ ಕಾದಿರ್ಪುವೆಂಬಂತೆ ಶೋಭಾ
ಕರಕಾಂತಾಕ[2]ರ್ಣ[2]ದೊಳ್ಕಣ್ಗೊಳಿಸಿದುವು ಲಸತ್ಕರ್ಣಪೂರೋತ್ಪಲಂಗಳ್ ॥೩೬॥

ಮುಡಿನವಿಲ ಸಖ್ಯದಿಂದಂ
ಕುಡಿಮಿಂಚಮರ್ದಪ್ಪಿ ನಿಂದುದೆನೆ ಮೆಱೆವಿನಮಾ
ಮಡದಿಗೆ ಸೂಡಿದಳೊರ್ವಳ್
ಬೆಡಂಗುವಡೆದೆಸೆವ ಸಂಪಗೆಯ ಮಾಲಿಕೆಯಂ ॥೩೭॥

ಕಾರ್ಮುಗಿಲಗ್ರದೊಳ್ಪೊಳೆವ ಭಾಸ್ಕರಬಿಂಬಮನುನ್ಮಯೂಖಮಾ
ಲೋರ್ಮಿಯನೊರ್ಮೆ ಪೋಲ್ತಿರೆ ಮಣಿವ್ರಜಮಂಡಿತಮೊಂದಿ ತೊಂಡಿಲಾ
ಸೋರ್ಮುಡಿಯಲ್ಲಿ ನಲ್ಮಿಸುನಿದಂಡೆ ಮೃಗಾಕ್ಷಿಗೆ ತತ್ಸಖೀಜನಂ
ಕೂರ್ಮೆಯೊಳಿಟ್ಟು ಸಿಂಗರಿಸಿ [3]ವೀ[3]ಕ್ಷಿಸಿ ತಾಳ್ದುದು ರಾಗದೇಳ್ಗೆಯಂ ॥೩೮॥

॥ವ॥ ಆಗಳ್—

ಅನುದಿನಮಿಕ್ಷುಚಾಪನೆಳೆವೆಂಡಿರ ಪೆರ್ಮಲೆವೆಟ್ಟಿನಲ್ಲಿ ನೆ
ಟ್ಟನೆ ನೆಲೆಗೊಂಡು ತನ್ನ ತನುಧರ್ಮಮನೆಲ್ಲಮನೊತ್ತಿ ನಿಪ್ಪೆಯಿಂ
ನೆನೆಯೆ ನಿಜಪ್ರಸನ್ನೆಯೆನಿಸಿರ್ದಧಿದೇವತೆಯಂತೆ ಕಾಂತೆ ಕಾ
ಮಿನಿಯರ ಕಣ್ಗೆ ಕಾಣಿಸಿದಳುಜ್ವಲಭೂಷಣವಾಂತು ಚೆಲ್ವಿನಿಂ ॥೩೯॥

॥ವ॥ ಮತ್ತಂ—

ಮಸೆದಲರಂಬನಂಬಕಮರೀಚಿ ವಲಂ ಗೆಲೆ ಪಾರ್ವಣೇಂದುವಂ
ಮಿಸುಪ ಮೊಗಂ ಕರಂ ಪಳಿಯೆ ಪಂಕಜಕೋಶಮನುತ್ಕುಚಂ ವಿಡಂ
ಬಿಸೆ ಗಜಕುಂಭಮಂ ಜಘನಮೇಳಿಸೆ ನುಣ್ದೊಡೆ ಬಾಳೆಯಂ ಬಳುಂ
ಕಿಸೆ ತಳಿರಂದಮಂ ತೆಗಳೆ ಮೆಲ್ಲಡಿ ಕನ್ನಿಕೆ ಕಣ್ಗೆ ತೋಱಿದಳ್ ॥೪೦॥

ಕರಪಂಕೇಜಂಗಳೇಂ ಕಂಕಣದಿನೆಸೆವುದಾಶ್ಚರ್ಯಮೋ ಪಾಣಿಶಾಖೋ
ತ್ಕರ ಚಂಚದ್ವಿದ್ರುಮೌಘಂ ಮಿಸುಪುದು ಪಿರಿದೇ ರತ್ನಯುಕ್ತೋರ್ಮಿಕಾಂಬಂ
ಧುರಮೀ ವಕ್ತ್ರೇಂದುಬಿಂಬಂ ಮೆಱೆವುದರಿದೇ ನಕ್ಷತ್ರಮಾಲಾವೃತ್ತಂ ತ್ವ
ಚ್ಚರಣಾಬ್ಜಂ ಹಂಸಕಾರಾಜಿತಮೆನಿಪುದಿದೇಂ ಚಿತ್ರಮೋ ಪೇಳ್ಮೃಗಾಕ್ಷೀ ॥೪೧॥

---

೧ ಭಾಸ (ತಾ) ೨ ರ್ನ (ಮೂ, ಬ) ೩ ನಿರೀ (ತಾ, ಮೂ)

॥ವ॥ ಎಂದು ಕಳಾರಮೆ ಪೊಗಳುತ್ತಮಿರೆ ಮತ್ತೊರ್ವಳ್ಮುಕುರಮುಖಿ ಸಖೀಮುಖೇಂದುಗಿಂದುಬಿಂಬಮಂ ಸರಿಯಿಟ್ಟು ಪರೀಕ್ಷಿಪಳೆನೆ ಮಣಿಮುಕುರಮನೆತ್ತಿ ಪಿಡಿಯಲೊಡನೆ—

ಒಳಕೈದುದವಳ ಮುಖಮಂ
ಡಳವಿಧುಮಂಡಳಮನಮಳಮಣಿಮುಕುರಮಿಳಾ
ತಳದೊಳ್ ಪೆರರಿರ್ದಿರವಂ
ತಿಳುಪುವ ವಿಮಳರ್ಗಧೀನಮಾಗದರೊಳರೇ ॥೪೨॥

॥ವ॥ ಇಂತುಮಾ ಸರ್ವಮಂಗಳಾಮಹಾದೇವಿ ಪಸದನಂಬಡೆದು ಸಖೀಜನ ಮಧ್ಯದೊಳ್ ಸಂಭ್ರಮದಿನಿರ್ಪಿನಮಿತ್ತಲ್—

ಸನ್ನುತಿವೆತ್ತ ತನ್ನೃಪಸುತಂಗೆ ವಿಳಾಸಿನಿಯರ್ ವಿಳಾಸದಿಂ
ದನ್ನವಗಂಧತೈಲಮನೆ ಪೂಸಿ ಕಚೌಘಕೆ ಸಾರ್ಚಿ ನಲ್ಮೆಯಿಂ
ರನ್ನದ ಪೀಠಮಂ ಮೊಳಗೆ ವಾದ್ಯರವಂ ವಿವಿಧೋತ್ಸವಂಗಳಿಂ
ಪನ್ನಗವೇಣಿಯರ್ಸುರಿದು ಸೂಸಿದರೊಲ್ದು ಸುಗಂಧವಾರಿಯಂ ॥೪೩॥

ತರುಣಸುರತರುಗೆ ಸುರಿವಂ
ತಿರೆ ಸುರತರುಣಿಯರಮರ್ತ್ಯನದಿಯುದಕಮನಾ
ತರುಣಿಯರರಸಂಗೊಳ್ಗ
ಪ್ಪುರವೆರೆದಮಳಾಂಬುವಿಂದೆ ಜಳಕಂಗೆಯ್ದರ್ ॥೪೪॥

॥ವ॥ ಅನಂತರಂ—

ಸಿಂಗರಿಸಿದನಖಿಳಕಳಾ
ಸಂಗತನಲರ್ವಿಲ್ಲನಂಗಮಂ ಸಿಂಗರಿಪಂ
ತಿಂಗದಿರಂ ಸಾಂಗಮನೋ
ಜಂಗೆಣೆಯೆನೆ ಮಿಸುಪ ಕುವರನಂ ಸಖನೊರ್ವಂ ॥೪೫॥

॥ವ॥ ಮತ್ತಮಾಗಳ್—

ವರಿಸಲ್ ಶ್ರೀಕಾಂತೆ ತಾಂ ತಂದಿಳಿಪಿದ ವಿಳಸನ್ಮಲ್ಲಿಕಾಮಾಲ್ಯಮೆಂಬಂ
ತಿರೆ ಹಾರಂ ವಕ್ಷದೊಳ್ಪಂಕಜಕೆ ಬಳಸಿ ನಿಂದಂಚೆ[೧]ಯಂ[೧]ಡಂಗಳೆಂಬಂ
ತಿರೆ ಮುಕ್ತಾಕಂಕಣಂ ಕೈಮೊದಲೊಳುಡುಗಳಂ ಕಟ್ಟಿ ವಕ್ತ್ರಾಬ್ಜಮಿಟ್ಟಂ
ತಿರೆ ಕರ್ಣಾಲಂಬಿ ಸುಣ್ಮುತ್ತುಗಳ ತೊಡವು ಚೆಲ್ವಾದನಾ ರಾಜಪುತ್ರಂ ॥೪೬॥

---

೧ ವಿ (ಮೂ, ಬ, ತಾ)

ಕೊಂಕಿದ ಪುರ್ಬು ನೀಳ್ದ ನಗೆಗಣ್ಕಳಿವೆತ್ತ ಮುಖೇಂದು ಶಂಖಮಂ
ಝುಂಕಿಪ ನುಣ್ಗೊರಲ್ತೊಳಪುರಸ್ಥಳಮಾಯತಬಾಹುಕಾಂತಿಯಿಂ
ಪಂಕಜಮಂ ಕರಂ ತೆಗಳ್ವ ಕೆಂದಳಮೊಳ್ನಡು ಬಾಳೆಗಂಬಮಂ
ಮಾಂಕರಿಸುತ್ತೆ ತೋರ್ಪ ತೊಡೆ ಮೆಲ್ಲಡಿ ರಂಜಿಕುಮಾ ಕುಮಾರನಾ ॥೪೭॥

ಕಾವನಾ ಕುವರನಂಗದ ಚೆಲ್ವಿಕೆಗಂಡು ರಾ
ಜೀವಲೋಚನೆಯರೆನ್ನಿರವಂ ಪಳಿಕೆಯ್ವರೆಂ
ದೇ ವಿಚಾರಿಸುತೆ ನಾಣ್ಚುತೆ ಮೈಗರೆದಿರ್ಪನಾ
ಪೀವರಸ್ತನ ಮಹೀಧರಮಧ್ಯದೊಳೀಗಳುಂ ॥೪೮॥

ಪೊದೆದ ನವೀನಚೀನವಸನಂ ತಳೆದುಜ್ವಳರತ್ನಭೂಷಣಂ
ಪದೆದು ಕಿರೀಟಮಧ್ಯದೊಳಮರ್ಚಿದ ರತ್ನದ ಶೇಖರಂ ನಿಜಾಂ
ಗದೊಳಿರದಣ್ಪುಗೈದ ಸಿರಿಗಂಪು ಕರಾಬ್ಜದೊಳಾಂತ ಮಾತುಳಂ
ಗದ ಫಳಮೊಪ್ಪೆ ಬಂದನವನೀಶ್ವರಪುತ್ರನುದಾತ್ತವೈಭವಂ ॥೪೯॥

ಮಿಳಿರ್ವ ಪತಾಕಾವಳಿ ಮೇ
ಲಳುರ್ಕೆಗೊಳೆ ಮೌಕ್ತಿಕಾತಪತ್ರಪ್ರಕರಂ
ತೊಳಗೆ ಬಳಸಿರ್ದ ನೃಪಮಂ
ಡಳಿಯೊಳ್ ಕರಿಯೇಱಿ ನೃಪತಿ ಬರ್ಪವಸರದೊಳ್ ॥೫೦॥

॥ವ॥ ಮತ್ತಂ—

ದೆಸೆಯಂ ತುಂಬಿರೆ ತೂರ್ಯ
ಪ್ರಸರಧ್ವನಿ ತೀವೆ ಬಹುಳಕಹಳಾರವಮೀ
ರಸೆಯಿಂಬಿಲ್ಲೆಂಬಂತಿರೆ
ಮು೧ಸುಂ೧ಕೆ ಕರಿತುರಗರಥಪದಾತಿಗಳಾಗಳ್ ॥೫೧॥

ಕರಕಂಜಾತಕ್ಕೆ ಪುಟ್ಟಿರ್ದಬ್ಜುಜಮೆನಿ೨ಸೆ೨ ಲೀಲಾಂಬುಜಂ ತುಂಬಿ ಬಿಂಬಾ
ಧರರಾಗಂ ಸೂಸಿತೆಂಬಂದದೊಳೆ ಪೊಳೆಯೆ ಕೆಂಬಲ್ಗಳೊಳ್ಗಿಂಪು ೩ಪಾ೩ದಾಂ
ಬುರುಹಪ್ರಸ್ಯಂದವೊಕ್ಕಂತಿರೆ ನಖರುಚಿಸಂಮಿಶ್ರಿತಾಲಕ್ತಕಂ ಬಂ
ದರಮಂದಾನಂದದಿಂದಂದಿದಿರನವನಿಪಾಲಾಜ್ಞೆಯಿಂ ಕಾಂತೆಯರ್ಕಳ್ ॥೫೨॥

॥ವ॥ ಅಂತುಮಲ್ಲದೆಯುಂ—

---

೧ ಸು (ಕ) ೨ ಸಿ (ಮೂ) ೩ ಪ (ತಾ)

ಸ್ತನಯುಗ್ಮಂ ಪೂರ್ಣಕುಂಭದ್ವಯಮಳಿಚಳಪೂರ್ಣಾಳಕಂ ತೋರಣಂ ಕಾಂ
ಚನಕಾಂಚೀದಾಮಚಂಚದ್ಯುತಿಯುರಿವನಲಂ ದರ್ಪಣಂ ಗಂಡಮಬ್ಜಾ
ನನಮಬ್ಜಂ ಶಂಖಮುದ್ಯದ್ಗಳಮಧರದಳಂ ಬಿಂಬಮಿಂತಾಗೆ ಕಾಂತಾ
ಜನಮಂದೈತಂದುದಿಷ್ಟಾಪ್ತಿಯನಱಿಪುವ ಮಾಂಗ[1]ಲ್ಯ[1]ಮೆಂಬಂದದಿಂದಂ ॥೫೩॥

ವಿಸರಜ್ಜಾಂಬೂನದೀಪೂರದೊಳೆ ಬೆರೆದ ಗಂಗಾಪ್ರವಾಹಂಬೊಲಿಂಬಾ
ಗೆ ಸುಧಾಧಾಮಪ್ರಭಾಭಾಸುರಮದು ಬಿಸಿಲೊಳ್ತೀವಿ ನೇತ್ರಾಂಶು ಮಂಜೀ
ರಸಮುದ್ಯನ್ನಾದಮೀ ಭೂಮಿಯ ತ[2]ಳ[2]ದಹಿಪಂಗೆ[3]ಳ್ಚ[3]ರಂ ಪೇಳ್ವವೋಲ್ ರಂ
ಜಿಸೆ ತತ್ಪೀನಸ್ತನಪ್ರೋಜ್ಜ್ವಘನವಹನದೊಳ್ಪೆಂಡಿರೈತಂದರಾಗಳ್ ॥೫೪॥

॥ವ॥ ಮತ್ತಂ—

ತರಳಕಟಾಕ್ಷರೋಚಿ ಪೊಸಲಾಜೆಯ ಸೂಸೆ ಮೃದುಸ್ಮಿತಂ ಸಿತಾಂ
ಬುರುಹದೆ ತೋರಣಂಗೊಳಿಸೆ ವಾದ್ಯರವಂಗುಡೆ ಸಿಂಜಿತಂ ಚಲ
ಚ್ಚರಣನಖಾಂಶು ಪಾಸೆ ಮಡಿಯಂ ಗುಡಿಗಟ್ಟೆ ಚಳಾಳಕಂ ಪಯೋ
ಧರಕಳಶಕ್ಕೆ ಚೆಂದಳಿರನೊಂದಿಸೆ ಚೆಂದುಟಿಗೆಂಪು ಕಾಂತೆಯರ್ ॥೫೫॥

ಇದಿರ್ಗೊಂಡರಮರನಾರಿಯ
ರಿದಿರ್ಗೊಂಬಂತಮರರಾಜನಂ ಕಣ್ಗೆದಿರ್ಗ
ಳ್ಪದಿದಿರೆ ಸುರಕರಿಯಿರವಂ
ಮದಗಜಮದು ಪೋಲೆ ಮೇಲೆ ಮೆಱೆವವನಿಪನಂ ॥೫೬॥

॥ವ॥ ಆಗಳ್ ಸಸಂಭ್ರಮಂ ನೆರೆದು ನೆಲೆವನೆಯ ನೆಲೆನೆಲೆಗಳೊಳ್ನಿರೀಕ್ಷಿಪಬಳೆಯರ ನೀಳ್ದ ಕಡೆಗಣ್ಣ ಕದಿರ್ದುಱುಗಲೆಂಬರಲ ಸರಿಯ ಪಿರಿಯ ಸಿರಿಯಿಂ ಸಕಳ ರಾಜಕಿರೀಟಕೋಟಿಘಟಿತಮಣಿಗಣರುಚಿರರುಚಿನಿಚಯತರುಣದಿನಕರಕರನಿಕರ ದಳಿತಧವಳನಳಿನಂಗಳೆಂಬಂತೆ ನಿಲುಂಬಿನಿಂದ ಧವಳಾತಪತ್ರಪ್ರತಾನದಿಂ, ದಶದಿಶೆಯೊಳ್ ಪರಕಲಿಸಿ ಪರ್ಬಿದ ಪಟಹಡಿಂಡಿಮಶಂಖಕಹಳಾಮುರಜಾಮೃದಂಗಢಕ್ಕಾದಿ ವಾದ್ಯನಿನಾದದಿಂ, ಮುಂದೆ ಸಂದಣಿಸಿ ಕೈಯೆತ್ತಿ ಪೊಗಳ್ವ ವಂದಿವೃಂದದ ಕೋಲಾಹಲಧ್ವಾನದಿಂ, ಪಿಂದೆ ಗೊಂದ[4]ಣ[4]ಗೊಂಡು ತುರಂಗಮನೇಱಿಬರ್ಪ ದಂಡನಾಥಮಂಡಳಿಕರ ತಂಡದಿಂದೆಡಬಲದೊ[5]ಳ್ಬೀ[5]ಸುವ ಧವಳಚಾಮರದ, ನೆಗಪುವ ಸೀಗುರಿಯ, ಪಿಡಿದುಬರ್ಪ ನವರತ್ನದ ನಡೆತೋರಣದ, ನಭಮನಳ್ಳಿರಿದು ಮಿಳಿರ್ವ

೧ ಕ್ಯ (ಕ) ೨ ಳಿ (ಮಾ೨, ಬ) ೩ ಗೇಳ್ದ (ರಿ) ೪ ಣಂ (ಮೂ) ೫ ಳ್ಸೂ (ರಿ)

ಪಳಯಿಗೆಗಳ ವಿಳಾಸದಿಂ, ಮಿಕ್ಕುಪೊಕ್ಕು ಕಿಕ್ಕಿಱಿಗಿಱಿದು ಬರ್ಪ ಕರಿತುರಗರಥ ಪದಾತಿಗಳ ಪೆರ್ಮೆಯಿಂ, ವಿಸ್ತರಿಸಿದ ವಸ್ತುಕಾರ೧ಕ೧ದ ಕನಕಪಾತ್ರೆಗಳಂ, ಮಣಿಭರಣಂಗಳಂ ಪೂದಿದ ಪೆಟ್ಟಿಗೆಗಳಂ, ಪರಿಮಳಪ್ರಕರಪರಿಮಿಳಿತಭಾಜನಂಗಳನೋೞೆಯಿಂ ಪಿಡಿದೆಡೆವಿಡದೆ ಗಡಣಂಗೊಂಡು ಬರ್ಪ ಮಡದಿಯರಿಂದತಿಸಂಭ್ರಮಂ ನೆಗಳೆ ಸುರೇಂ೨ದ್ರನಂತೆ ವಿ೨ಭವಮಂ ನರೇಂದ್ರತನೂಭವಂ ತಾಳ್ದು ಮಿತವಚನಸಮೇತಂ ಬಂದು ರಾಜಗೃಹದ ಬಹಿರ್ದ್ವಾರದೇಶದೊಳ್ಗಜಸ್ಕಂಧದಿನಿಳಿಗವತರಿಸಿ ಸಚಿವಂ ಕೈಗುಡೆ ನಡೆತಂದು ಮಹೋತ್ಸವಂ ಮಿಗೆ ಮಾಂಗಲ್ಯಮಂಟಪಮಂ ಪೊಕ್ಕು ಮಧುಪರ್ಕಮಂ ಕೈಕೊಂಡು ಪುಣ್ಯಾಹಮೆಂಬ ಪುರೋಹಿತರೊಡನೆ ಭದ್ರವೇದಿಕೆಯನಲಂಕರಿಸಿ ಸದ್ರುತಿಯಿಂದಿರ್ಪಾಗಳ್ ಸುಮುಹೂರ್ತಂ ಸಾರ್ತಂದುದೆಂದು ಸಿಂಹಳೇಂದ್ರಂಗೆ ಪುರೋಹಿತಂ ನಿರವಿಸೆ ಕೇಳ್ದು ೩ಕುವರಿಯಂ೩ ಕರೆದುತರ್ಪುದೆಂದು ಸಚಿವಂಗೆ ಪೇಳಲೊಡನವಂ ಘಳಿಲನೆ ಪೋಗಿ ಮುನ್ನಮೆ ಪಸದನಂಗೊಂಡು ಪಸೆವೆಣ್ಣೆನಿಸಿರ್ದ ಕನ್ನೆಯಂ ಕರೆದುತರ್ಪಾಗಳ್—

ಸುತ್ತಿತಳ್ತ ಸುದತೀಜನೇಕ್ಷಣೋ
ದಾತ್ತಕಾಂತಿ ನವದುಗ್ಧವಾರ್ಧಿಯಂ
ತೆತ್ತಮುರ್ವೆ ಸಿರಿಯಲ್ಲಿ ಬರ್ಪವೋ
ಲ್ವೆತ್ತಪೀನಕುಚೆ ಬರ್ಪಳೊಪ್ಪಿದಳ್ ॥೫೭॥

ಮಣಿಭೂಷಾಭಾನು ಭಾನುಪ್ರಭೆಯನರುಣಿಮಂ ಮಾಡೆ ಚಂಡತ್ಕಟಾಕ್ಷೇ
ಕ್ಷಣರೋಚಿರ್ಮಾಲೆ ಮಿಂಚಂ ಕಱಿಯೆ ಮಿಸುಪವಕ್ತ್ರಾಂಶು ದಿಗ್ಭಾಗದೊಳ್ಪೂ
ರ್ವಣಚಂದ್ರ೪ದ್ಯೋತಮಂ೪ ಮೇಣ್ಪರಪೆ ಮೃದುಪದನ್ಯಾಸಕಿಂಚಿಚ್ಚಲತ್ಕಂ
ಕಣಕಾಂಚೀಕಿಂಕಿಣೀನಿಕ್ವಣಿತಯುತೆ ವರಾಭ್ಯರ್ಣಮಂ ಸಾರ್ದಳಾಗಳ್ ॥೫೮॥

ಮೊಳಗುವ ಭೇರಿಯ ಶಂಖದ
ಪಳಹದ ಮದ್ದಳೆಯ ಘನಮೃದಂಗದ ಪಟುಕಾ
ಹಳಿಯ ಬಹುವಿಧದ ವಾದ್ಯದ
ಕಳಕಳಮೆಣ್ದೆಸೆಯನಮರ್ದದೇಂ ಮುಸುಕಿದುದೋ ॥೫೯॥

---

೧ ಕಾರ (ಮೂ) ೨ ದ್ರವಿ (ತಾ, ಮೂ) ೩ ಕುವರಿಯ (ತಾ), ಕುಮಾರಿಯಂ (ಭಾ)
೪ ಜ್ಯೋತಿಯಂ (ಮು), ದ್ಯೋತಿಯಂ (ತಾ)

ಸಿರಿಯ ಹರಿಯೆಡೆಯೊಳಬ್ಧಿಯೊ
ಳಿರದೇಳ್ವ ಸುವರ್ಣಕಂಜರಜದೊಡವೆರೆದೊ
ಳ್ದಿರೆಗೆ ದೊರೆಯಾದುದು ವಧೂ
ವರರೆಡೆಯೊಳ್ಮಿಸುಪ ಮಿಸುನಿದೆರೆ ಮಣಿಗೃಹದೊಳ್ ॥೬೦॥

ಜವನಿಕೆ ನಡುವಿರೆ ನೋಡ
ಲ್ತವಕದಿನೋರೊರ್ವರಂ ಸಮುನ್ನತದೇಶ
ಕ್ಕವತರಿಸಿದರೆನೆ ಮುದದಿಂ
ದವರಾಗಳ್ಮೆಟ್ಟಿನಿಂದು ಮೆಟ್ಟಕ್ಕಿಗಳಂ ॥೬೧॥

ಪದೆದಿಟ್ಟರ್ ಜೀರಿಗೆಬೆ
ಲ್ಲದಿನೊರ್ವರನೊರ್ವರತುಳತರಸಂಭ್ರಮದಿಂ
ಮದವರ್ಕಳ್ನಿಜನಖರುಚಿ
ಕೆದಱುತ್ತಿರೆ ಕೂಡೆ ಮಲ್ಲಿಕಾಮಂಜರಿಯಂ ॥೬೨॥

ನಳಿನಮುಡುಗಳನೆ [೧]ಸೆಱೆವಿಡಿ
ದೆಳೆನೇಸರ್ಗಿವ ತೆಱೆದೆ ಕರಮದು ಮಕುಟೋ
ಜ್ವಳಮಣಿಶೇಖರದೆಡೆಯೊ
ಳ್ತಳಿದುದು ಪೊಸಮುತ್ತಿನಕ್ಷತೆಯನಾ ವಧುವಾ ॥೬೩॥

ಕಂದದ ಕುಂದದ [೨]ನನೆಯಂ
ಕಂದರ್ಪಂ ರತಿಯ ಮುಡಿಗೆ ಸೂಸುವವೋಲ್ಭೂ
ಕಂದರ್ಪಂ ಸೂಸಿದನೊಲ
ವಿಂದವಳ ಕಚೌಘದಲ್ಲಿ ಧವಳಾಕ್ಷತೆಯಂ ॥೬೪॥

ಎಲರಲೆ[೩]ದೆತ್ತಿನೂಂಕಿ ತೊಲಗುತ್ತಿರೆ ಪುಷ್ಪಪರಾಗಪೂಗಮಾ
ಮ್ರಲತೆಯ ಪಲ್ಲವಂ ಮಿಸುಪಶೋಕೆಯನುಣ್ಡಳಿರೊಂದುವಂತೆ ಚೆ
ಲ್ವಲರೆ ಸುವರ್ಣಕಾಂಡಪಟಮೋಸರಿಸುತ್ತಿರೆ ಸನ್ಮುಹೂರ್ತಮು
ಜ್ವಲಿಸೆ ವಧೂವರರ್ಕಳ ಕರಗ್ರಹಣಂ ಬಗೆಗೊಂಡುದಾಕ್ಷಣಂ ॥೬೫॥

೧ ಶೆ (ಮೂ) ೨ ನೆ (ಕ, ಧಾ) ೩ ದೊ (ಮೂ).

ತಿರೆ ಸರಿಯೆ ಸಂಜೆ ಸರಿವಂ
ತಿರೆ ವರವದನೇಂದುವಂ ನಿರೀಕ್ಷಿಸಿ ತಾರಾ
ತರುಣಿ ಮುದವಾರ್ಪ ಮಾಳ್ಕೆಯೊ
ಳರಸಿ ಮುದಂಬೆತ್ತು ಬೀಱಿದಳ್ನಿಜರುಚಿಯಂ ॥೬೬॥

॥ವ॥ ಆಗಳ್—

ನನೆಯಂ ಪೇಱಿರ್ದ ಮಲ್ಲೀಲತೆಗಮುಮರ್ದು ಸತ್ಕೋರಕಂಬೆತ್ತ ಚೂತಾ
ವನಿಜಕ್ಕಂ ಚೈತ್ರನಚ್ಛಾಂಬುವನೆ ಸುರಿವವೋಲ್ ಸ್ವೇದವಾರ್ಬಿಂದು ರೋಮಾಂ
ಚನಮಂ ಕೈಕೊಂಡು ನಿಂದಾತ್ಮಜೆಗಮೊಡನೆ ಜಾಮಾತೃಗಂ ಸಿಂಹಳೇಂದ್ರಂ
ಮನಮೊಲ್ದೀರಂತೆ ಕೈನೀರೆಱೆದನಭಿನವಸ್ವರ್ಣಕುಂಭಾಂಬುವಿಂದಂ ॥೬೭॥

ಪಾಡೆ ಶೋಭನಮನಂಗನೆಯರ್ಕಳ್ಮಂಗಳಪಾಟಕರುರ್ವಿ ಕೊಂ
ಡಾಡೆ ಭೋರ್ಗಱೆದು ವಾದ್ಯನಿನಾದಂ ತೀವಿರೆ ಭೂವರಬಾಂಧವ
ರ್ನೋಡೆ ಸಂತಸದಿನಾಗಮಘೋಷಂ ಪೊಣ್ಮಿರೆ ಜಾಣ್ಮೆಗೆ ಹೋಮಮಂ
ಮಾಡೆ ಭೂಸುರರಿಳಾಪತಿಪುತ್ರಂ ಕೈವಿಡಿದಂ ಕಮಳಾಕ್ಷಿಯಂ ॥೬೮॥

॥ವ॥ ಅಲ್ಲಿಂ ಬಳಿಯಿಂ—

ನಡೆಮಡಿಯೊಳೊಯ್ಯನೊಯ್ಯನೆ
ನಡೆವ ವಧೂವರರದೇಂ ವಿರಾಜಿಸಿದರೊ ಬೆ
ಳ್ಪಡರ್ದ ಪುಳಿನಸ್ಥಳದೊಳಡಿ
ಯಿಡುತೊಡನೆಯ್ದುವ ಮರಾಳದಂಪತಿಗಳವೋಲ್ ॥೬೯॥

ಶ್ರುತಿವಿಹಿತಕ್ರಿಯಾಕುಶಲಶೈವಮತಾಶ್ರಿತಶಾಸ್ತ್ರವಿತ್ಪುರೋ
ಹಿತಕೃತಹೋಮಕುಂಡದೆಡೆಗೇಳ್ತರುತಂ ಮದವರ್ಕಳಂಬಿಕಾ
ಪತಿಯುತಮಿಂತಿದೆಂದು ಬಲವಂದು ಜಯಸ್ವನಸರ್ವವಾದ್ಯಸಂ
ತತಿರುತಿತೀವೆ ಮಂಡಿಸಿದರಿಕ್ಕಿದ ಮೆಲ್ವಸೆಯೊಳ್ವಿಳಾಸದಿಂ ॥೭೦॥

ನನೆವಾಸೆನೆ ಮುತ್ತಿನ ಪಸೆ
ಮನಸಿಜನೆನೆ ಕುವರನಲ್ಲಿ ನೆಲಸಿರೆ ಲಜ್ಜಾ
ವನತಾಂಗಿ ಕೆಲದೊಳಿಳುಪಿದ
ನನೆವಿಲ್ಲೆನೆ ಸುಗುಣವತಿ ಕರಂ ಮೆಱೆದಿರ್ದಳ್ ॥೭೧॥

ಮೆಲ್ಲನೆ ನಲ್ಲನನೀಕ್ಷಿಪ
ನಲ್ಲಳ ಕಣ್ಗದಿರ್ಗಳೆಸೆದುವಾಕೆಯ ಕಡೆಗ
ಣ್ಣಲ್ಲಿ ನೆಲಸಿದ ಮನೋಜಂ
ಮಲ್ಲಿಗೆ ಬಿರಿಮುಗುಳ ಸೇಸೆಯಂ ಸೂಸುವವೋಲ್ ॥೭೨॥

॥ವ॥ ಮತ್ತಮಲ್ಲಿ—

ಮಾಣಿಕವಚ್ಚಮಂ ತಳೆದು ಕುಂಕುಮದಣ್ಪನಮರ್ಚಿ ಕಾಯದೊಳ್
ಶೋಣನವೀನವಾಸಮನಲಂಪಿನೊಳುಟ್ಟೆಳೆಮುತ್ತುದೊಟ್ಟು ಕ
ಲ್ಯಾಣಿಯರಾಗಳಾರತಿಯ ಪೊಂಬರಿಯಾಣಮನಾಂತು ನಿಂದು ಮೇ
ಣ್ಕಾಣಿಸಿದರ್ಸಭೇಂದುಮತಿ ಸಂಜೆ ಬಹುತ್ವಮನಾಂತು ನಿಂದವೋಲ್ ॥೭೩॥

ಮನದನುರಾಗದಿಂ ವನಿತೆ ನೋಳ್ಪುದುಮಲ್ಲಿ ವರಾನನಾಬ್ಜಮಂ
ತನುಪುಳಕಂಗಳಂ ತಳೆಯೆ ನೇತ್ರದೊಳುಣ್ಮೆ ಸುಖಾಶ್ರು ಮೆಲ್ಲಮೆ
ಲ್ಲನೆ ಬೆಮರುಣ್ಮೆ ಜಾಣ್ಮೆಯೊಳವಂ ಮಱಸುತ್ತಿರೆ ದೂರಿದತ್ತು ಕಂ
ಪನಕೃತಕಂಕಣಸ್ವನಮುಮಾಸ್ಯವಿಕಾಸಮುಮಾತ್ಮರಾಗಮಂ ॥೭೪॥

॥ವ॥ ಆಗಳ್—

ಪರಸುವ ಮುತ್ತೈದೆಯರಾ
ದರಿ[1]ಸು[1]ವ ಕುಲವೃದ್ಧರತುಳಮಂಗಳಮಂ ಬಿ
ತ್ತರಿಸುವ ವಿಬುಧರ್ನೆರೆದೊ
ತ್ತರಿಸುವ ನಲ್ವೆಂಡಿರೆಸೆದರಾ ಮಂಟಪದೊಳ್ ॥೭೫॥

ಘನಕಚಘನಕುಚಭಾರದೆ
ವನಿತೆಯರುಱೆ[2] ಬಾಗುವಂತೆ ಬಾಗುತೆ ಕರದಿಂ
ದನವದ್ಯೆಯರಾಗಳ್ ಮು
ತ್ತಿನ [2]ಸೇ[2]ಸೆಯನಿಕ್ಕಿ ಪರಸಿದರ್ಮನದೊಲವಿಂ ॥೭೬॥

॥ವ॥ ಆ ಸಮಯದೊಳಖಿಳಕಳಾವಿದೆಯರಾದ ಕೆಳದಿಯರುಂ ನೆರೆದ ನರೇಂದ್ರ ಪುರಂಧ್ರಿಯರುಮಭೀಕ್ಷಿಸಿ—

---

೧ ಪು (ರಿ) ೨ ಶ್ಯಾ (ಮೂ).

ಶಿವೆಯ ವರದಿಂದೆ ಪುಟ್ಟಿದ
ಕುವರಿಯಿವಳ್ ತತ್ಪ್ರಸಾದದಿಂದಲ್ತೆ ಮನೋ
ಭವನನಿಳಿಕೆಯ್ವ ಚೆಲ್ವಿನ
ಯುವರಾಜನೊಳೊಲ್ಮೆವೆತ್ತು ಪಸೆನಿಂದಿರ್ದಳ್ ॥೭೭॥

॥ವ॥ ಅಂತುಮಲ್ಲದೆಯುಂ—

ಇವರ ರೂಪಿವರ ವಿಭ್ರಮ
ಮಿವರತಿಲಾವಣ್ಯಮಿವರ ಸೊಬಗಿವರ ಕಳಾ
ನಿವಹಜ್ಞತೆಯಿವರ ಗುಣಂ
ವಿಪರಿಸೆ ಮತ್ತಿವರೊಳಲ್ಲದನ್ಯರೊಳೊಳವೇ ॥೭೮॥

॥ವ॥ ಎಂದು ಮಗುಳ್ದು ಮಗುಳ್ದೀಕ್ಷಿಸಿ ಪೊಗಳುತ್ತಮಿರೆ—

ಸರಿಯಿಟ್ಟು ನೋಳ್ಪವೋಲ್ಪಂ
ಕರುಹಮನವಳಡಿಗೆ ತನ್ನ ಕರಮಿಡುತರಸಂ
ಸರಸಂ ಮಿಗೆ ಮೆಟ್ಟಿಸಿದಂ
ದರಹಾಸಂ ಮೊಳೆಯೆ ಸಪ್ತಪದಿಗಳನಾಗಳ್ ॥೭೯॥

ಮಂಗಳದುತ್ಸವಂ ನೆಗಳೆ ಸಿಂಹಳಭೂಪತಿ ರೋಹಣಾದ್ರಿಯಂ
ತಾಂ ಗೆಲೆವಂದು ಕಾನಕನಗೇಂದ್ರದವೋಲ್ಸಲೆ ಸಂದು ನಿಂ[೧]ದ[೨]ರ
ತ್ನಂಗಳ ರಾಶಿಯಂ ಮಿಸುಪ ಪೊಂಗಳ ರಾಶಿಯನಲ್ಲಿ ದೇವಭೂ
ಜಂಗಳ ಪೆರ್ಮೆ ಕೀಳ್ಪಡೆ ಬುಧಪ್ರಕರಕ್ಕವನಿತ್ತನಳ್ತಿಯಿಂ ॥೮೦॥

॥ವ॥ ಆಗಳಾ ಸಿಂಹಳೇಂದ್ರನರ್ಧಾಂಗಿ ಕಳಾಧರೆ ಮಗಳುಮನಳಿಯುಮನ
ಭೀಕ್ಷಿಸಿ ಸಂತಸಂಬಟ್ಟು—

ಹಿಮ ಮೃಗಮದ ಕುಂಕುಮ ಕ
ರ್ದಮ ಸುಮನೋಮಾಲ್ಯವೀಟಿಕಾಭೂಷಣವ್ಯರಿ
ದಮನಮಳಾಂಬರಮಂ ನೃಪ
ರಮಣಿಯ ಸಮುದಯಕೆ ಪೊನ್ನ ಪಾತ್ರೆಯೊಳಿತ್ತಳ್ ॥೮೧॥

೧ ದು (ಮೂ, ರಿ) ೨ ಜ (ರಿ)

॥ವ॥ ಇಂತು ಯಥೋಚಿತವಿಧಾನಂ ಪರಿಣಯಂಬಡೆದನಂತರಮನೂನಸ್ನೇಹರಸಭರಿತಾಂತಃಕರಣಂ ಕುಮಾರಕುಸುಮಾಯುಧಂ ಸಸಂಭ್ರಮಂ ಸಜ್ಜುಗೆಯ್ದ [1]ಶಯ್ಯಾ[1]ಗೃಹದ ವಜ್ಜಳಿಪ ಪರಿಮಳಪರಿಮಿಳಿತಕುಸುಮಸರವಿಸರಪರಿವೃತಕನಕಪರ್ಯಂಕತಳದ [2]ಮೃದುಳ[2]ಧವಳತಲ್ಪಸ್ಥಳದೊಳ್ಗಾಡಿಯಿಂ ನಲ್ಲಳ ಬರವಂ ಬಯಸುತ್ತೆ ಕುಳ್ಳಿರ್ದ ಪ್ರಸ್ತಾವ[3]ದಲ್ಲಿ[3]—

ವದನೇಂದುದ್ಯುತಿ ಪೊಣ್ಮೆ ಸೋರ್ಮುಡಿಯ ಕಂಪಿಂಗೆಯ್ದೆ ಭೃಂಗಾಳಿ ಪಿಂ
ಗದೆ ಪೀನಸ್ತನಮುಂ ಕದಕ್ಕದಿಸೆ ಮಧ್ಯಂ ಬಳ್ಕೆ ಮಂಜೀರನಾ
ದದೊಳೊಂದಾಗಿ ಪಳಂಚೆ ಕಾಂಚಿನಿ[4]ನ[4]ದಂ ಸಾರ್ತಂದಳಿಂದೀವರಾ
ಕ್ಷಿ ದರಸ್ಮೇರಮರೀಚಿ ಸೂಸೆ ಸುಧೆಯಂ ತನ್ಮಂದಿರಪ್ರಾಂತಮಂ ॥೮೨॥

॥ವ॥ ಇಂತೇಳ್ತಂದ ಸರ್ವಮಂಗಳಾದೇವಿಯೊಡನೆ ಕಳಾ[5]ವಿದೆ[5]ಯರಾದ ಕೆಳದಿಯರೊಡನೇಳ್ತಂದತಿಶಯಪ್ರಮೋದದಿನಾ ಕುವರಿಯನಾ ಯುವರಾಜನ ಕೆಲದೊಳ್ ಕುಳ್ಳಿರಿಸಿ ಸರಸಾಲೋಕನದಿಂದವಲೋಕಿಸಿ ತಂಗಿ ನಲ್ಲಂಗೆ ತಾಂಬೂಲಂಗುಡುಪುದೆಂದು ಪೇಳ್ದೊಂದೊಂದು ನೆವದಿನೆಲ್ಲರ್ ಮೆಲ್ಲನೆ ತೊಲಗಲೊಡನೆ ಚಲ್ಲದಿಂ ನಲ್ಲಳ ಲಜ್ಜಾನತಮಾದ ನಗೆಮೊಗಮಂ ಸಂದಣಿಪ ಕಟಾಕ್ಷದಿನಡರಿನೋಡಿ ಕಾಮಕೇಳಿಗೆ ಮನಂದಂದೊಯ್ಯನೆ ಕೈಯ್ಯಂ ಪಿಡಿದು ರಯ್ಯಮೆನೆ ಮೆಯ್ಯಂ ಸೋಂಕಿ ಕುರುಳಂ ನೇವರಿಸಿ ಕರಾಂಗುಲಿಯ ಚಿ[6]ಟುಂ[6]ಕಿಸಿ ನೇಮದಾಣಮನಂಟಿ ಗಲ್ಲಮಂ ಪಿಡಿದಲುಂಗಿ ಬಿಂಬಾಧರಮಂ ಚುಂಬಿಸಿ ಲಜ್ಜೆಪಜ್ಜೆದೆಗೆವಂತೆ ಜಾಣ್ಮೆಯಂ ಮೆಱೆದು ಮದನೋದ್ರೇಕಂ ಮನದೊಳೊದವಿದ ಪದಮಂ ಮೊಳೆವ ಪುಳಕದಿಂ, ನೆಗೆವ ಬೆಮರಿಂ, ಮೋ[7]ಲ್ವ[7]ರಿವಪಾಂಗದಿಂ ತಿಳಿದು ಮೋಹವಱಿದು ಮುದ್ದಿಸಿ. ತವಕವಱಿದು ತ[8]ಳ್ಕ್ಕ[8]ಳಿಸಿ, ಲಲ್ಲೆಯಱಿದು ಬುಲ್ಲವಿಸಿ, ಸೋಲವಱಿದು ಸೊರ್ಕುಗೊಳಿಸಿ, ಕಾಲವಱಿದು ಕಳೆಯೇಱಿಸಿ ಕಳಾನಿಳಯಂ ಕಡಂಗಿ ಸುಸಿಲಜಕ್ಕವಕ್ಕಿಯಂತೆ ಸುಸಿಲೆಸಗಲುಜ್ಜುಗಿಸಿರ್ಪನ್ನೆಗಂ—

ಬಳಿವರೆ ಪೊರ್ದಿ ಸೋಂಕಲೊಡನಂಗಮನೊಂದಿನಿಸಿತ್ತು ತಳ್ಕಿಗಂ
ದೆಳಸಿರೆ ತೋಳ್ಗಳಂ ನೆಗಪಿ ಮೆಲ್ಲನೆ ಚುಂಬಿಸಲೊಂದೆ ವಕ್ತ್ರಮಂ
ಡಳಮನಮರ್ಚಿ ಸಾದರಮೆ ಕೂಡಲೊಡರ್ಚಿರೆ ಲಜ್ಜೆಯೊಕ್ಕು ಮೈ
ವಳಿಯೊಳೆ ಸಂದು ಮೈಗುಡುತವಳ್ಪಿಡಿದಳ್ಮನಮಂ ಮನೋಜ್ಞನಾ ॥೮೩॥

೧ ಸೆಜ್ಜ (ತಾ, ಧಾ, ರಿ, ಮೂ) ೨ ಮೃದುಳತರ (ಮೂ, ರಿ) ೩ ದೊಳ್ (ತಾ)
೪ ನಾ (ಕ) ೫ ನಿಧೆ (ರಿ) ೬ ಟಿಂ (ಕ) ೭ ಲ್ಪ (ಕ, ರಿ, ಧಾ) ೮ ಳ್ಕೈ (ತಾ)

ರತಿರಾಗಂಬೆತ್ತು ಕಾಂತಂ ತೆಗೆದು ಬಿಗಿದು ತಳ್ಕೈಸೆ ನೀವೀಭರಂ ಜಾ
ಱೆ ತದೀಯಾಂಗಕ್ಕಪಾಂಗದ್ಯುತಿವಸನಮನಂತಿತ್ತು ಲುಪ್ತಾಂಗರಾಗೋ
ನ್ನತವಕ್ಷೋಜಕ್ಕೆ ಹಸ್ತಾರುಣರುಚಿಘುಸೃಣಕ್ಷೋದಮಂ ಸಾರ್ಚೆ ಲೀಲಾ
ಚ್ಯುತಹಾರಗ್ರೀವೆಯೊಳ್ ಸ್ವೇದಲವಸರಮನಿತ್ತೊಲ್ದು ಕೂಡುತ್ತಮಿರ್ದಂ ॥೮೪॥

ಒಳಪೊಗುವಂತೆ ಬಟ್ಟಮೊಲೆಗಳ್ನಿಜವಕ್ಷದೊಳಾಳೆ ಸೊರ್ಕು ಸಂ
ಗಳಿಸಿರೆ ತೋಳ್ಗಳಿಂ ಬಿಗಿದು ತಳ್ಕಿಸಿ ನಾಣ್ಬಿಡೆ ಜಾಣ್ಮೆದೋಱಿ ಚಂ
ದಳಿದುರ್ಟಿಯಂ ಕರ್ದುಂಕಿ ಕಳೆವೆರ್ಚಿಸಿ ಮುದ್ದಿಸಿ ಲಲ್ಲೆಗೆಯ್ದು ತ
ನ್ನಳ ಮನಮಂ ಮರಳ್ಚಿದನದೇಂ ರ[೧]ತಿ[೧]ಕೋವಿದನೋ ಕುಮಾರಕಂ ॥೮೫॥

ಮನದನುರಾಗಮೇಳ್ತರದ ಕಾ[೨]ತ[೨]ರಮುಂ ಪಡೆದೀಯೆ ಸೋಂಕಿನಿಂ
ಜನಿಯಿಪ ಸೊರ್ಕು ಸೋಲಮನಮರ್ಚೆ ಸುಧಾಧರದಿಂಪು ಕಂತ ನಿ
ಸ್ವನಮನೊಡರ್ಚೆ ತಳ್ಕೆ ತನಿನೇಹಮನುರ್ವಿಸೆ ತಳ್ತ ಕೂಟಮೊಂ
ದಿನಿತರಿವಂ ಕಳಲ್ಚೆ ನೆಱೆದರ್ ಪರಮೋತ್ಸವದಿಂ ವಧೂವರರ್ ॥೮೬॥

॥ವ॥ ಅಂತುಮಲ್ಲದೆಯುಂ—

ಬೆರಸುತ್ತಂ ಬಿಗಿಯಪ್ಪಿ ಕೂಡುವೆಡೆಯೊಳ್ಕಂಠೋತ್ಥಿತಧ್ವಾನಮಂ
ಕರಸಂತಾಡನಮಂ ಕಚಗ್ರಹಣಮಂ ದಂತಕ್ಷತಂಗೆಯ್ವುದಂ
ಕರಜಾತಾಹತಿಯಂ ಪೊದಳ್ದ ರ[೩]ತದೊ[೩]ಳ್ ಸೊರ್ಕೇಱಿ ಕಣ್ಮುಚ್ಚೆ ನಿ
ರ್ಭರದಿಂ ಮೈಮರಪೊಂ[೪]ದ[೪]ದಂತೆಸೆಗುವಂತೋರೋರ್ವರೊಳ್ತೋಱಿದರ್ ॥೮೭॥

ಅ[೫]ಳಿ[೫]ಪಿ ನಿರೀಕ್ಷಿಪಾಸೆವಡುತಂ ಬಿಗಿದಪ್ಪುವ ನೇಹದಿಂ ಪದಂ
ಗಳಿಯಿಸೆ ಪಾಯ್ದು ಚುಂಬಿಪ ಕಡಂಗಿ ಕರಾಗ್ರದೆ ಪೊಯ್ವ ಬೇಟಮ
ಗ್ಗಳಿಸೆ ನಖಾಗ್ರದಿಂದಿಱಿವ ತೋಳ್ತೊಡೆ ತಳ್ತಿರೆ ಕೂಡುವಳ್ತಿವ
ಟ್ಟೆಳಸುವನೇಕ ಭಾವರಸಮೊಪ್ಪಿದುದಾಕೆಗೆ ಕಂತುಕೇಳಿಯೊಳ್ ॥೮೮॥

ಮಣಿತಂ ತನುವೊಳ್ಗಳದೊಳ್
ಮಣಿತಂ ನೆಗಳ್ದಿರೆ ವಿಳಾಸಮುಮದೊರ್ಪ್ಪಿರೆ ಪೆ
ಣ್ಮಣಿ ತನ್ನವರತಿಚಿಂತಾ
ಮಣಿ ತನ್ನರಪತಿಗೆ ತನ್ನ ಪರಿಜೆನೆ ನೆಱೆದಳ್ ॥೮೯॥

---

೧ ತು (ರಿ) ೨ ತು (ಮೂ, ತಾ, ಬ, ರಿ) ೩ ತಿಯೊ (ಮೂ) ೪ ದಿ (ತಾ) ೫ ಳು (ಮೂ)

ಗಳನಾದಂ ನೆರವಾಗೆ ದೈನ್ಯನಿನದಂ ಕೈಗಣ್ಮೆ ಮಂದಸ್ಮಿತೋ
ಜ್ವಳವಕ್ತ್ರಂ ಪೊಸತಾಗೆ ನೇತ್ರಯುಗಳಂ ಬೆಂಡೇಳೆ ರೋಮಾಂಚಕಂ
ಚುಳಿತಾಂಗಂ ಬೆಮರೇಱೆ ಸುಯ್ನಿಮಿರೆ ಲೀಲಾವೇಗಮಿಂಬಾಗೆ ಮಂ
ಜುಳಸೌಖ್ಯಂ ತನಿವೆರ್ಚೆ ಮರ್ಚೆ ನೆರೆದರ್ಕಾದಲ್ಮೆಯಿಂ ಕಾದಲರ್ ॥೯೦॥

॥ವ॥ ಮತ್ತಂ—

ಮುನಿಸೆಡೆಗೊಳ್ಳದಿರ್ಪ ಕಲಹಂ ಕಿನಿಸಿಲ್ಲದ ಪುರ್ಬುಗಂಟು ನೆ
ಟ್ಟನೆ ಬಹುಭಾರಮಂ ತಳೆಯದಾದ ಬಳಲ್ಕೆ ಪೊದಳ್ದ ನಿದ್ರೆವೊಂ
ದಿನಿಸಿರದುರ್ವಿಪಾಯ್ವ ನಿಡುಸುಯ್ತಣಿವಿಲ್ಲದ ತೃಪ್ತಿ ಭಂಗಮುಂ
ಟೆನಿಸದ ಸೋಲಮಂಜಿಕೆಯಿನಾಗದ ಕಂಪಮಳುಂಬಮೋಪರೊಳ್ ॥೯೧॥

ಚುಂಬನದಿಂಪು ಸೋರ್ಮುಡಿಯ ಕಂಪು ಮೃದೂಕ್ತಿಯಲಂಪು ತಳ್ಕಿಚೆ
ಲ್ವೆಂಬಿವು ಪೆರ್ಚೆ ಸೌಖ್ಯಮೆನೆ ಸಾರ್ಚೆ ನಿಜಾಕ್ಷಕಮರ್ಚೆ ತೋಱೆ ಬೇ
ಟಂ ಬಿಡದುರ್ವೆ ಬಿನ್ನಣಮೆ ಪರ್ವೆ ಸುಸಿಲ್ತನಿಗೊರ್ವೆ ಭೂಮನೋ
ಜಂ ಬಗೆದಂದು ಕಾಂತೆಯೊಡನಂದು ಮುದಂಬಡೆದೊಂದುತೊಪ್ಪಿದಂ ॥೯೨॥

॥ವ॥ ಇಂತು ಸಂತಸಂ ಮಿಗೆ ಸಮಂತು ಕಂತುಸುಖಸಾಮ್ರಾಜ್ಯಮನನುಭವಿಪ ದಂಪತಿಗಳ್ಗೆ ಮಾಸಂಗಳ್ದಿವಸಂಗಳಾಗಿ ದಿವಸಂಗಳ್ನಿಮಿಷಂಗಳಾಗಿ ಸಲುತ್ತಮಿರೆ-ಯಿರೆ—

ಅಪರಾಶಾಕುಂಭಿ ಶುಂಭತ್ಕರಟತಟಗಳದ್ದಾನಸಂಭ್ರಾಂತಭೃಂಗೌ
ಘಪಯೋದಾಲಂಬಿಜೃಂಭಜ್ಜಲಧಿಜಲಲವಾಶ್ಲಿಷ್ಟಮುನ್ನೀದ್ರಕೈತ
ಕ್ಯಪರಾಗಶ್ರೇಣಿ ಚಂಚಚ್ಚಪಲಮುಪಲಸತ್ತಾಳಸಂಘೃಷ್ಟಭಾಂಡೌ
ಘ ಪಟುಧ್ವಾನಾಬ್ದರಾವಂ ಸುಳಿದುದು ಪವನಂ ಕಾರಿದೆಂಬಂತಳುಂಬಂ ॥೯೩॥

॥ವ॥ ಆಗಳ್—

ಅಲರ್ದುದು ಕಾಡಮಲ್ಲಿಗೆ ಮುಗುಳ್ತುದು ಜಾದಿ ಕದಂಬಕುಟ್ಮಳಂ
ಬಲಿದುದು ಪೂದೊಡಂಬೆಯನೊಡರ್ಚಿತು ಕೇತಕಿ ಕೇಕಿ ನಣ್ಪಿನಿಂ
ನಲಿದುದು ಹಂಸೆ ಪಾಱಲನುಗೆಯ್ದುದು ಚಾದಗೆ ರಾಗಮಾಂತುದು
ಜ್ವಲತೆಯನಪ್ಪುಕೈದುದು ವಿಯೋಗಿಗಳಂಗದೊಳಂಗಜಾನಲಂ ॥೯೪॥

ಸುೞಿಗೊಳುತೆತ್ತೆ ಸುಟ್ಟುರೆ ಧರಾರಜಮಂ ಕೆಳಗೊಂದೆ ದಂಡದಂ
ತುೞಿದ ತತಾತಪಂ ಬಳಸಿ ಪಲ್ಲವದಂತಿರೆ ಬಾನಮಧ್ಯದೊ
ಳ್ತೊಳಗುವ ಭಾನು[1]ಭರ್ಮ[1]ಕಳಶಂಬೊಲದೊಪ್ಪಿರೆ ಬಟ್ಟಬಲ್ಮುಗಿ
ಲ್ತುೞಿದುದು ಕಾಲಭೂಪತಿಯ ಪೀಲಿಯ ಸತ್ತಿಗೆಯೊಂದು ಲೀಲೆಯಂ ॥೯೫॥

ಗಗನಶ್ರೀಯುಟ್ಟ ನೀಲಾಂಬರಮೊ ರವಿಸುಧಾಧಾಮಬಿಂಬಂಗಳಂ ಮು
ತ್ತಿಗೆಯಂ ಮಾಳ್ಪಂಧಕಾರವ್ರಜಮೊ ಸುರನದೀಸ್ನಾತದೇವಾಂಗನಾವೃ
ಷ್ಟಿಗಳದ್ವಾರ್ಬಿಂದುಚಂಚತ್ಕಚನಿಚಯಮೋ ಜಂಭಾರಿಕುಂಭೀಂದ್ರದಾನಾಂ
ಬುಗೆ ಪಾಯ್ವಿಂದಿಂದಿರಶ್ರೇಣಿಯೊಯೆನೆ ನೆಱೆದತ್ತಭ್ರನೀಲಾಭ್ರಜಾಲಂ ॥೯೬॥

ಧೃತಚಂಚಲಮತಿ ಚಪಲ
ಸ್ಥಿತಿ ಜಡಭರಿತಂ ಕಟುಸ್ವರಂ ಬರೆ ಮೇಘಂ
ನುತಹಂಸಂ ತಳರ್ದುದು ಮಲಿ
ನತರಂಬರೆ ಶುಚಿ ಸುವೃತ್ತನೇನಿರ್ದಪನೇ ॥೯೭॥

ಗಱಿ ನೆಱೆಯದ ಕಿಱುವಱಿಗಳ
ನಿಱುಂಕಿ ಪಕ್ಷದೊಳೆ ಪಾಱಲಾಱದೆ ಪಿಱಿದುಂ
ಮಱುಗುವ ಮರಾಳಂಗಳನು
ಣ್ಗಱಿವೊತ್ತೆಡೆವಿಡದೆ ತಳರ್ದವಂಚೆಗಳಾಗಳ್ ॥೯೮॥

ರವಿಚಂದ್ರಪ್ರಚುರಪ್ರಭಾಪ್ರಚಯಮಂ ಮೇಘಂ ಮುಸುಂಕುತ್ತೆ ಕಾ
ರ್ಷ್ಣ್ಯವಿಶಿಷ್ಟಂ ತಟಿದಂಕುರಾಲ್ಪರುಚಿಯಂ ಬೀಱಿತ್ತುದಗ್ರಸ್ಫುರ
ತ್ಕವಿಕಾವ್ಯಪ್ರಕಟಪ್ರಭಾವಮನದಂ ಕೀಳ್ಕಬ್ಬಿಗಂ ಗುಪ್ತಿಗೈ
ದವರಾತ್ಮೀಯ ಕೃತಿಪ್ರಭಾವತೆಯನಾದಂ ತೋರ್ಪವೋಲ್ ಧಾತ್ರಿಯೊಳ್ ॥೯೯॥

ಘನಕರಿಗಿಕ್ಕಿದಂಕುಶಮಿದಬ್ದಮುಕುಂದನ ನಂದಕಾಯುಧಂ
ಘನದ ತಮಾಲಕಾನನದ ಕಾನಕವಲ್ಲರಿ ವಾರಿಭೃದ್ಘನಾಂ
ಜನನಗದಾವಪಾವಕಶಿಖಾತತಿ ಮೇಘಮಹಾಂಧಕಾಖ್ಯದೈ
ತ್ಯನ ಖರದಂಷ್ಟ್ರಮುಳ್ಕಿದುದು ಮಿಂಚು ಮುಗಿಲ್ಮುಗುಳಂಬನೀಕ್ಷಣಂ ॥೧೦೦॥

೧ ಭರ್ಮ್ಯ (ಮೂ)

ಅಂಬುಜರಿಪುಬಿಂಬದ ಬೆಳ
ಗಂ ಬಂಧಿಸಿ ಮರ್ಬುವೀಱಿ ಮಿಂಚುತೆ ಪಥದೊ
ಳ್ತಾಂ ಬರಿಸಿ ನೆರಯಿಪಾ, ಕಾ
ದಂಬಿನಿ ಪಾಣ್ಬೆಯರ ಕೆಳದಿಯಾಗಲ್ವೇಳ್ಕುಂ ॥೧೧೧॥

ಅಡಿಗಡಿಗುರ್ವಿ ಮಿಂಚುವೆಳೆಮಿಂಚು ಮರುದ್ಭಟನೆತ್ತಿ ಜೀಗದಿಂ
ಪೊಡೆವ ಸುವರ್ಣಕೋಣಮೆನೆ ತಳ್ತಿರೆ ತಾನೊಗೆದತ್ತು ಕಾರ್ಮುಗಿಲ್
ಗಡಣಮೆನಿಪ್ಪ ದಂತಿತತಿಯಗ್ರದ ಡಿಂಡಿಮನಾದದಂತೆ ಪೆ
ರ್ಗುಡುಗು ನಿದಾಘನಂ ತಗುಳಲ್ಕೆದಿದ ನೀರದಕಾಲರಾಜನಾ ॥೧೧೨॥

॥ವ॥ ಅಂತುಮಲ್ಲದೆಯುಂ—

ಅಂಬುಧಿಸಂಗಸಂಜನಿತಶಂಬರನಿರ್ಭರಗರ್ಭೆ ಬಂದು ಕಾ
ದಂಬಿನಿ ತತ್ಪ್ರಸೂತಿಸಮಯಂ ಬರೆ ಪುಷ್ಕರಗೇಹದೊಳ್ಕರಾ
ಲಂಬಿತಹೇಮರಜ್ಜುವೆನೆ ಮಿಂಚಿರೆ ಮುಂಚೆ ನರಲ್ವ ರಾವದಂ
ತೇಂ ಬಗೆಗೊಂಡುದೋ ಗುಡುಗು ಸೂತಿಮರುತ್ಕೃತತೋದದೇಳ್ಗೆಯಿಂ ॥೧೧೩॥

ಸ್ಫುರದ್ಧನುಶ್ರೀಕರ ಚಂಚಲೇಕ್ಷಣಂ
ಶರಧ್ಯುಪಾತ್ತೋರು ಶರಂ ಘನಸ್ವನಂ
ಹರಿಪ್ರಭಂ ನೀರದರಾಜನಟ್ಟಿದಂ
ಧರಾತಿ ಸಂತಾಪದನಂ ನಿದಾಘನಂ ॥೧೧೪॥

ಗಱಿಮೂಡಿದಂತೆ ಕೆಲದೊಳ್
ಕಿಱುಮುಗಿಲಿರೆ ಜಲದ ನೀಲಗಿರಿ ನೆಗೆಯೆ ಕೞು
ತ್ತೆಱಗಿದ ವಜ್ರಿಯ ವಜ್ರದ
ಬಿಱುಪೊಯ್ಲರವಕ್ಕೆ ಬಱಿಸಿಡಿಲ್ಸರಿ ಬರ್ಕುಂ ॥೧೧೫॥

ವರುಣಾಶಾಬ್ಧಿಪಯಃಪ್ರವಾಹವಿತತಸ್ನಾನಂ ವಿನಿರ್ಧೂತೆ ಧಾ
ತ್ರಿರಜಃಪ್ರೋತ್ಪಿಹಿತಾಂಗನುದ್ಧೃತಘನಕ್ಷ್ಮಾಜವ್ರಜಂ ಭೂಧರೋ
ತ್ಕರಸಂಚಾರಿಕದಂಬಸನ್ಮಧುಮದಾಂಭೋವಾಹಮಂಭೋದಸಿಂ
ಧುರಮಂ ಪಾಯ್ದು ಪಳಂಚಿ ಪೊಯ್ದುದು ರಟಜ್ಝಂಝಾಮರುತ್ಕುಂಜರಂ ॥೧೧೬॥

ಗಜದಜಿನಂ ಮುಗಿಲ್ಗ ಜರಿಗರ್ಜಿಪರುಂಡಕದಂಬಘೋಷಮ
ಭ್ರಜಪಟುಘೋಷಮುತ್ಕಟತಟಿತ್ತತಿಯುತ್ಫಣಿತಾಹಿಶೀರ್ಷರ
ತ್ನಜಘೃಣಿಮಾಲೆ ಘಾಲಶಿಖಿ ಮೇಘಶಿಖಾವಹನಾಗೆ ನರ್ತಿಪಂ
ಗಜರಿಪುವೊಲ್ಘನಾಗಮಮದೇಂ ಬಗೆಗೊಂಡುದೊ ನೋಟಕರ್ಕಳಾ ॥೧೦೭॥

ಕಡಲ ವಿಷಮೀಂಟಿದೊಡೆ ತ
ನ್ನೊಡಲಂ ಬಿಡದಡಸೆ ಕರ್ಪುವೆತ್ತಂಗದಿನಾ
ಗಡೆ ಜೀವನಮಂ ಬಿಟ್ಟುದು
ಜಡದಂ ಮೃಡನುಳಿದನೆಂದೊಡುಳಿದರ್ಗ್ಗಳವೇ ॥೧೦೮॥

ನೆರೆದು ಘನಘನಮದೇಭೋ
ತ್ಕರಮೀಂಟಿ ಮರುತ್ತರಂಗಿಣೀಜಳಮಂ ಪೂ
ತ್ಕರಿಸೆ ಸಿಡಿದಿಳಿವ ಕಣಗಣ
ದಿರವೆನಿಸಿದುದರರೆ ಸುರಿವ ಪೆರ್ಮಳೆ ನಭದಿಂ ॥೧೦೯॥

ಸುರಚಾಪಚಂಪಕಸ್ರಜ
ಕುರವಣಿಸುತ್ತಸಿತಜಳದ ಮದ ಮಧುಪಸಮು
ತ್ಕರಮೆರಗಿದಂತೆ ಮೆಱೆದುದು
ಪರಿಕಿಸದಾತ್ಮೀಯ ಜೀವನವ್ಯಯಭಯಮಂ ॥೧೧೦॥

ನುಂಗೆ ರವಿರುಚಿಯನದು ತ
ನ್ನಂಗುಳ್ಸು[1]ಡೆ ಶೀತಜಲ[1]ವಿಧುಂತುದನುಗುಳ್ವಾ
ಪಾಂಗನನುಕರಿಸಿ ಮಿಂಚುತ
ಡಂಗುವ ಸೆಳೆಮಿಂಚದೇಂ ಮನಂಗೊಳಿಸಿದುದೋ ॥೧೧೧॥

ಮೆಲ್ಸರಿ ಸೂಳ್ಸರಿ ಮುಗಿಲೊ
ಳ್ಗಲ್ಸರಿ ತೆಳ್ಸರಿ ಕರಂ ಪೊನಲ್ವರಿಯಿಪ ಬಂ
ಬಲ್ಸರಿ ಬಲ್ಸರಿ ಕಾಲ್ಸರಿ
ಸಾಲ್ಸರಿ ಸಲೆ ಸುರಿದುಕಱೆದುವಿರುಳುಂ ಪಗಲುಂ ॥೧೧೨॥

---

೧ ಡಲಸಿತಘನ (ಕ, ಮೂ)

ಘುಡುಘುಡು ಚಿಳಿಛಿಟಿಲೆಂದು
ಗ್ಘ[೧]ಡದ[೧] ಸಿಡಿಲ್ದನಿಯೆ ಪೊಡೆಯೆ ಗಗನಸ್ಥಳದಿಂ
ದುಡುಗಳ್ಪಳಪಳನುದುರ್ವವೊ
ಲೆಡೆವಿಡದಿಳಿವಾಲಿವರಲ ಮಳೆ ಬಗೆಗೊಳಿಕುಂ ॥೧೧೩॥

ವಿಯತ್ತಳಶ್ರೀವಧುವಂ ಘನಾಗಮ
ಪ್ರಿಯಂ ಸರಾಗಂ ಬಿಗಿದಪ್ಪೆ ಕಿಳ್ತು ತ
ತ್ಪಯೋಧರಸ್ಥಂ ಮಣಿವೊಕ್ಕವೋಲ್ಪನೋ
ದಯೋಪಳಂ ಸೂಸಿದುದಿಂದ್ರಗೋಪಮಂ ॥೧೧೪॥

ಸುರಚಾಪದ್ವಿಪವೈರಿ ಮಿಕ್ಕು ನೆಗೆದಭ್ರಾರಣ್ಯದಘ್ರೋರುಸಿಂ
ಧುರಕುಂಭಸ್ಥಳಮಂ ಸಿಡಿಲ್ದನಿ ನಿಜಧ್ವಾನಂಜೊಲಿಂಬಾಗೆ ಬಂ
ಧುರವಿದ್ಯುತ್ಕರಜಾಗ್ರದಿಂದುಗಿದು ಸೀಳಲ್ಮೌಕ್ತಿಕಾಸೃಕ್ಕಣೊ
ತ್ಕರಮೆತ್ತಂ ಸುರಿವಂತೆ ಸೂಸಿತು ಘನಗ್ರಾವೇಂದ್ರಗೋಪವ್ರಜಂ ॥೧೧೫॥

[೨]ಎನ್ನ[೨] ಸಹಾಯದಿಂ ನೆರೆದು ತಾಳ್ದು ಘನತ್ವಮನಸ್ಮದೀಯ ಮಿ
ತ್ರೋನ್ನತತೇಜಮಂ ತವಿಪನೆಂದನಿಲಂ ಮುಗಿಲಂ ಕನಲ್ದು ಪೊ
ಯ್ದನ್ನೆಗಳಲ್ಘನಧ್ವನಿ ಕಳಲ್ದುದಿರ್ದತ್ತು ಘನೋಪಳಾಚ್ಛದಂ
ತನ್ನಿಜಮಲ್ಲದಿರ್ದೊಡಿಳೆಯಲ್ಲಿದು ನೀರದನಾಮಮಾಂಪುದೇ ॥೧೧೬॥

ಎಳಸಿ ನಿಜಚಂಚುಪುಟದೊ
ಳ್ತಳೆದಿನೆಯಳ್ಗೆಱೆದು ಮಱಿಗಳಂ ತಣಿಪಿ ಮನಂ
ಗೊಳುತಳುಪಿ ಸೆಳೆದು ಜಳಕಣ
ಕುಳಮಂ ಪೀರ್ದತ್ತು ಚಾತಕಂ ಚದುರಿಂದಂ ॥೧೧೭॥

ಮಂಗಳವಾದ್ಯಮಬ್ದರವಮುಣ್ಮುವ ಮಿಂಚದು ದೀಪಮಾಲೆಯು
ತ್ತುಂಗಪಯೋದಮಿಟ್ಟ ತೆರೆ ತೋರಣಮಿಂದಿರವಿಲ್ಲುವೃಷ್ಟಿಯೇ
ಸುಂಗತಧಾರೆಯಾಲಿವರಲೊಪ್ಪುವ ಮುತ್ತಿನ ಸೇಸೆಯಾಗೆ ಕಾ
ರುಂ ಗಗನಸ್ಥಳೀರಮೆಯುಮೊಂದಿದರೊಂದು ವಿವಾಹಲೀಲೆಯಂ ॥೧೧೮॥

---

೧ ಡಿಸಿ (ಮೂ) ೨ ಉನ್ನತ (ತಾ)

॥ವ॥ ಮತ್ತಮಾ ಘನಸಮಯಂ ಗದಾಧರಮೂರ್ತಿಯಂತೆ ಘನಶ್ರೀಮನೋಜ್ಞಮುಂ, ನಳಿನಭವಾಂಗದಂತೆ ಕಾದಂಬವಿತತಾಮೋದವಾಹಮುಂ, ಗಗನೋದಯಸಮಯದಂತೆ ಸುರಚಾಪಲತಾನ್ವಿತಮುಂ, ಪ್ರದೋಷಕಾಲದಂತೆ ನೀಲಕಂಠತಾಂಡವಾಡಂಬರಮುಂ, ವಿಧುಂತುದನಂತೆ ಸಂತರ್ಜಿತರಾಜಹಂಸಮಂಡಳಮುಂ[೧] ಘನನೀಲಾಂಬರಾಚ್ಛಾದಕನಾಗಿಯುಂ ಸಿತವಾರಿದೋಪಲಸಿತದ್ಯುತಿಯುಂ, ಪ್ರಬಲಕೀಲಾಲಕ್ಷಣರುಚಿಯುತಮಾಗಿಯುಂ ವನಸಮೃದ್ಧಿದಮುಂ, ಪರಕಬಂಧ ಸಂಸಕ್ತಸರಕ್ತಶಿಳೀಮುಖಮಿಳಿತಮಾಗಿಯುಮಪ್ರಕಟಿತಪ್ರಭಾವಮುಂ, ಕೃತವಜ್ರನಿರ್ಘೋಷಮಾಗಿಯುಂ ಗೋತ್ರಾತಿಹಿತಕರಮುಂ, ವಿಪಕ್ಷಗತಿವಿರೋಧಕಮಾಗಿಯುಂ ಪರಿಗತಭಂಗವಾಹಿನೀಕಮುಮೆನಿಸಿರ್ದುದಂತುಮಲ್ಲದೆಯುಂ—

ಜಳಮಯಮಿಳೆ ಜಳದಮಯಂ
ಜಳಧರಮಾರ್ಗಂ ತಟಿನ್ಮಯಂ ದಿಗ್ವಳಯಂ
ಕೆಳೆಗೊಳೆ ನವಸೃಷ್ಟಿಯನೇಂ
ತಳೆದುದೊ ಭುವನಂ ಘನಾಗಮಾಂಬುಜಭವನಿಂ ॥೧೯॥

ಫಣಿಯಂ ತುಂಡಿಸಿ ವಿಷಮಂ
ನೊಣೆದಾನುಂ ನೀಲಕಂಠನಾದೆನೆನುತ್ತಂ
ಕುಣಿವಂತೆ ವಿಷಧರದಮುಂ
ದಣಿಯರದಿಂ ಕೇಗಿ ಕುಣಿವ ನವಿಲೆಸೆದಿರ್ಕುಂ ॥೨೦॥

ಗಱಿ ಪೊಂಪುಳಿವೋದಂತಿರೆ
ನೆಱೆ ನೆಟ್ಟನೆ ನಿಲೆ ಮುದಶ್ರು ಗಱಿಗಣ್ಗಳೊಳೀ
ನೊಱೆತುದೊ ಪೇಳೆನೆ ಕಿಱುವನಿ
ತುಱುಗಿರೆ ಮತ್ತೊಂದು ನವಿಲದೇಂ ನರ್ತಿಸಿತೋ ॥೨೧॥

ಚಾದಗೆಯಂತೆ ಮುಂಬನಿಯನೇಂ ಬರೆ ಪೀರ್ದುದೆ ವಲ್ಲಿಯಂತಿದೇಂ
ತೋರ್ದುದೆ ವಾರಿಯಿಂ ಕಡವಿನಂತೆ ಮುಗುಳ್ತುದೆ ತತ್ಸಹಾಯದಿಂ
ಕೇದಗೆಯಂತೆ ಪೂತುದೆ ಮುಗಿಲ್ಗಳ ಪಂಗಿನಿತುಂಟೆ ಕೇಕಿಯಾ
ಹ್ಲಾದದೆ ಕಂಡು ನರ್ತಿಪುದಿದಲ್ತೆ ಸಮಾನವಯಃಪ್ರವರ್ತನಂ ॥೨೨॥

---

೧ + ವಿರುದ್ಧಭಾಷ್ಯ (ರಿ, ಧಾ)

ಸರಸಸುಗಂಧಬಂಧುರಧಳದ್ಧಳನೂತನಕೇತಕೀಸುಮಾ
ವರಣಫಣಿಪ್ರಮುಕ್ತಗರಳೋಪಮಮತ್ತಮಧುವ್ರತಾಳಿ ಪ
ಟ್ಚರಣಗಳತ್ತದೀಯರಜಮುಣ್ಮುವ ಮಿಂಚಿನೆ ಗಾವರಂ ಘನ
ಸ್ವರಮೆನಲಲ್ಲಿ ತಳ್ತುಕೆಳೆಗೊಂಡೆಳೆಗಾರ್ಮುಗಿಲಂತೆ ರಂಜಿಕುಂ ॥೧೨೩॥

॥ವ॥ ಮತ್ತಮಾಗಳ್—

ತಳರಲ್ಕೆಂದಡಿಯಿಟ್ಟು ಜಾಜಿ ಜವದಿಂ ಕೈಯೂಱಿಬಿಳ್ದೇಳ್ದು ಪಂ
ಕಿಳಮಾದಂಶುಕಮಂ ಪೊನಲ್ವರಿವ ನಿರ್ೋಳ್ಕರ್ಚಿ ಮೈಸಾರ್ಚಿ ಪ
ಲ್ಗಳ ನಾದಂ ಪುಳಕಾಂಕುರಂ ಮೊಳೆಯೆ ಮೆಣಾರೈದು ಕಾಲಿಟ್ಟು ಕೋ
ಲ್ಗಳನಾಂತ್ಮೈದುವ ಪಾಂಥರಂ ನಗುವರಾ ಹರ್ಮ್ಯಾಗ್ರದಬ್ಜಾಕ್ಷಿಯರ್ ॥೧೨೪॥

ಬೆಳೆಗಿದೆಳೆವುಲ್ಕರಮೆಸೆದ
ತ್ತಿಳೆ ಮಳೆಯಿಂ ನಾಂದು ಸೇಡುವಡೆದಿರೆ ಮೊಳೆತ
ರ್ಗಳಪುಳಕಾಂಕುರಮೆನೆ ಸಂ
ಚಳದಳವನದಿಂದೆ ಕಂಪಿಪಂತಿರೆ ತೋರ್ಕುಂ ॥೧೨೫॥

॥ವ॥ ಇಂತೊಗೆತಂದ ಸಕಳಜನಮನೋನಯನಹರ್ಷಪ್ರದಮಾದ ವರ್ಷಾ-ಕಾಲದೊಳಿನೆಯುಳೊಡನೆ ಸಡಗರಂ ಮಿಗೆ ಗಗನಮಂ ತುಡುಂಕುವ ಭರ್ಮಹರ್ಮ್ಯ-ಮನಾರೋಹಿಸಿ ಮೇಲ್ನೆಲೆಯ ಕನಕಪರ್ಯಂಕಪೀಠದೋಳ್ಗಾಡಿಯಿಂ ಕುಳ್ಳಿರ್ದು ಗವಾಕ್ಷವಿವರವಿನಿಹಿತಕಟಾಕ್ಷನಾಗಿ—

ಇದೆ ನಿನ್ನೀ ಕೇಶಪಾಶಕ್ಕಗಿದು ನೆಗೆದವೊಲ್ಕಾರ್ಮುಗಿಲ್ಮಿಂಚು ತಾನಿಂ
ತಿದೆ ನಿನ್ನುದ್ವೃತ್ತಕಟಾಕ್ಷದ್ಯುತಿಗೆ ಬೆದರ್ದುದೆಂಬಂತೆ ಚಾಂಚಲ್ಯಮಂ ತಾ
ಳ್ದಿದೆ ನಿನ್ನೀ ಭ್ರೂವಿಳಾಸಕ್ಕಳರ್ದು ಕರಗುವಂತಿಂದ್ರಚಾಪಂ ಕಳಾಸಂ
ಪದೆ ನೋಡೆಂದಂದು ತೋಱುತ್ತೆಸೆದನಭಿನವಶ್ರೀವಧೂಟೀಭುಜಂಗಂ ॥೧೨೬॥

೧೪(೮)

ದುರ್ವಹಜಗದ್ಧರೇ ಸುಪರ್ವನುತವೈಭವೆ ಸಗರ್ವದಿತಿಜಾಪಹೆಯಖರ್ವ-
ಗುಣಹಾರೇ
ಗೀರ್ವರ ಸಮರ್ಚಿತೇ ಯಜುರ್ವಿನುತಸತ್ವದೇ ಹವಿರ್ವಿಧಿವಿಧಾಯಿಕೆ
ಮಹೌರ್ವಶಿಖಿನೇತ್ರೇ।
ಸರ್ವಮುನಿಭಾವಿತೇ ಸದೋರ್ವಿಜನಸೇವಿತೇ ವಪುರ್ವಿಜಿತವಲ್ಲರಿಯಪೂರ್ವ
ಸುಚರಿತ್ರೇ ।
ನಿರ್ವೃತಿಪದಾಸ್ಪದೇ ಚತುರ್ವಿಧಫಲಪ್ರದೇ ಸಶರ್ವತನು ಪಾಲಿಪುದು ಪರ್ವತ-
ತನೂಜೇ ॥೧೨೭॥

ಇದು ವಿನಮದಮರವರಮಕುಟತಟಘಟಿತಮಣಿಗಣಮಹಾಪ್ರಭಾಪಟಲಪರಿವೃತ
ಪರಶಿವಶ್ರೀಪಾದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾಚಂಚಚ್ಚಕೋರಾ-
ಯಮಾನ ಸರಸಜನಮಾನಿತೋಭಯಕವಿತಾವಿಶಾರದ ಶ್ರೀಷಡಕ್ಷರಿ-
ದೇವವಿರಚಿತಮಪ್ಪ ರಾಜಶೇಖರವಿಳಾಸವಿಪುಳಪ್ರಬಂಧದೊಳ್
ಸರ್ವಮಂಗಳಾ ವಿವಾಹಾದಿ ವರ್ಣನಂ

ಅಷ್ಟಮಾಶ್ವಾಸಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

ನವಮಾಶ್ವಾಸಂ

ಶ್ರೀಮದಪರ್ಣಾನನ ನವ
ತಾಮರಸಾಮೋದಮದಮಧುವ್ರತನಭವಂ
ಸಾಮಜಮರ್ದನನಮರಲ
ಲಾಮಂ ಪೊರೆಗೆಮ್ಮನಾವಗಂ ಶಿವಲಿಂಗಂ ॥೧॥

ಶಿವಲೀಲಾಕಥನಾವಳೀಶ್ರವಣದಿಂ, ತತ್ಪಾದಪೂಜಾಸಮು
ತ್ಸವದಿಂ, ಶೈವಪುರಾತನವ್ರಜಪುರಾಣಾಕರ್ಣನೋತ್ಸಾಹದಿಂ,
ಶಿವಯೋಗೀಂದ್ರ ಸಮರ್ಚನೈಕಸುಖದಿಂ, ಕಾಂತಾಸಮೇತಂ ಮಹೀ
ಧವನೊಪ್ಪಿರ್ದನಶೇಷಸಜ್ಜನಮನಃಪದ್ಮಪ್ರಭಾವಲ್ಲಭಂ ॥೨॥

॥ವ॥ ಇಂತುಮಾ ನೃಪಂ ದಿವಸಂಗಳೆವುತ್ತಮಿರ್ಪನ್ನೆಗಂ—

ಸುರಕರಿಕರಮುಕ್ತಾಂಭಃಕಣಂ ಮಂಜಿದೆಂಬಂ
ತಿರೆ ತಳೆದು ತಿಖಾವದ್ಗರ್ವಮಂ ನುರ್ಗಿ ನೀಲಾಂ
ಬುರುಹಸುರಭಿಯೊಂದುತ್ತೈದಿದಂ ಮಾಗಿಗಿರ್ಬರ್ಪಂ
ತಿರೆ ಧೃತಘನಸಾರಾಮೋದಸಾರಂ ಸಮೀರಂ ॥೩॥

ನೆಗೆದುಡುಜಾಲದಂತೆ ಪೊಸಮೊಲ್ಲೆಯ ಬಲ್ಮುಗುಳೊಪ್ಪೆ ಪದ್ಮಮಂ
ಮಿಗೆ ತೊಱೆದಲ್ಲಿ ಲಕ್ಷ್ಮಿ ನಿಲೆ ನೈದಿಲೊಳುರ್ಬಿದ ಮರ್ಬು ಪಿಂಗದಂ
ತಗಲಿರೆ ಕಾರ್ಮುಗಿಲ್ಗಳೆ ಜೊನ್ನದವೋಲ್ಪೊಸಮಂಜುವಾರ್ಧಿ ಪೆ
ರ್ಚುಗೆಯನಮರ್ಚೆ ತಾಳ್ದನುದಿತೋದಯಮಂ ಹಿಮಕಾಲಚಂದ್ರಮಂ ॥೪॥

ಘನರಾಹುವಿಂದುವಂ ತಿಂ
ದು ನಭಸ್ಥಳದೊಳೆ ಮಗುಳ್ಚಿದಂತೆವೊಲೆಸೆಗುಂ
ವನಧರಮಧರಾಮೃತರಸ
ಸೊನೆ ಸುರಿತರ್ಪಂತೆ ಮಂಜದೇಂ ರಂಜಿಸಿತೋ ॥೫॥

---

೧ ದ (ಕ) ೨ ಶ್ವರ (ಮೂ) ೩ ಗೆ (ರ)

ಧರಣಿಪನ ಕೀರ್ತಿವಧು ವಿ
ಸ್ಫುರಿತನಭಃಕಬರಿಯಲ್ಲಿ ಗೊಜ್ಜಗೆಯ ಸರೋ
ತ್ಕರವಾಂತ[1]ವೊಗಿಲೆ ಸಿತಾಭ್ರಂ
ನೆರೆದಿರೆ ಮಂಜದಱ ಮಧುಕಣಂಬೋಲ್ಸುರಿಗುಂ ॥೬॥

॥ವ॥ ಮತ್ತಮಾಗಳ್—

ಇಳೆಯಂ ಮುಚ್ಚಿ ಮುಸುಂಕಿ ನಿಷ್ಕಲತೆಯಿತ್ತಾಶಾಧಿಪರ್ಗೊಂಟುಗೊಂ
ಜೊಳೆ ಸಾರ್ವಂತಿರೆ ಮಾಡಿ ವಹ್ನಿಸಖನಾನೆಂಬೊಂದಹಂಕಾರಮಂ
ತಳೆದಾ ಮಾರುತನಂ ಕರಂ ಪಿಡಿದು ತನ್ನೈಕಿಲ್ಗಳಿಂ ನಾಂದಿ ಸಂ
ಚಳನಂ ಮಾಡಿ ತದಾಪ್ತನುರ್ಕೆ ಮುಱಿದೇಂ ಪರ್ಬಿತ್ತೊ ಹೈಮಾಗಮಂ ॥೭॥

॥ವ॥ [2]ಅಂತುಮಲ್ಲದೆ[2]ಯುಂ—

ಪಿಕಜಿಹ್ವಾಸ್ತಂಭಮಂ ಪನ್ನಗನ ಪಟುಗತಿಸ್ತಂಭಮಂ ಮಾಡಿ ಮತ್ತ
ರ್ಕಕರಸ್ತಂಭಾಗ್ನಿ[3]ಸಂಸ್ತ[3]ಂಭಮನೆ ನೆಗಳ್ದು ಮೇಘಾಗಮೋಚ್ಚಾಟನಂಗೈ
ದು ಕರಂ ಕಾಂತೌಘಸಂಮೋಹಮನೊದವಿ ಸುಧಾರುಗ್ವಶೀಕಾರನಿರ್ನಾ
ಯಕನನ್ಯಾಂಗಪ್ರವೇಶಂ ಹಿಮಸಮಯಮಹಾಸಿದ್ಧನೊಪ್ಪಿರ್ದನಾಗಳ್ ॥೮॥

ಪಗೆಯ ಕೆಳೆಯುಡುಗಿದುದು ಗಡ
ಪಗೆಯಂ ಕೆಳೆಗೊಂಡ ನಳಿನಿ ಕೊಱಗಿದಳೆಂದೇ
ನಗುವುದೆನೆ ನೈದಿಲೆ ಪಗ
ಲ್ಮುಗಿಯದು ಬೆಳ್ದಿಂಗಳೆಂದು ಭಾವಿಸಿ ಹಿಮಮಂ ॥೯॥

ಮಂಜಿರೆ ನರೆಯೆನೆ ಕೊಱಗಿರೆ
ಕಂಜಂ ತೆರೆವಿಡಿದು ಸುರ್ಕಿದಾನನಮೆನೆ ಚ
ಕ್ರಂ ಜಗುಳ್ದಿರೆ ಮೊಲೆಯೆನೆ ಹಿಮ
ದಿಂ ಜರೆಗೊಂಡಂತೆ ದಿವಸರಮೆ ಕಳೆಗೆಟ್ಟಳ್ ॥೧೦॥

---

೧ ಮಾ (ಮೂ) ೨ ಅದಲ್ಲದೆ (ಮೂ) ೩ ಸ್ತಂಭ (ಕ)

ಮರದೊಳೆಸೆವೊಂದು ನೆವದಿಂ
ಮರನಡರ್ದಂ ಸಿಖಿ ದಿವಾಕರಂ ನೀರ್ವೊಕ್ಕಂ
ಪರಿಗತಬಿಂಬವ್ಯಾಜದಿ
ನರರೆ ಹಿಮಾಗಮಮಹೀಶನೇಂ ಕಡುಗಲಿಯೋ ॥೧೧॥

ಶಯದಿಂ ಮುಸುಂಕುತಿರ್ಪತಿ
ಶಯಹಿಮಮಂ ಕಳಿಯಲೇದಿನಂ ಶಿಖಿಯ ಸಮಾ
ಶ್ರಯಮೆಸಗಿ ಕಳಿಯನೆನಲಾ
ಶ್ರಯಾಶನಾಶ್ರಯದಿನಿಷ್ಟಮೇಂ ಸಮನಿಪುದೇ ॥೧೨॥

ಹಿಮಕರಮುಖಿಯರ ಸೇವನೆ
ಹಿಮಮಂ ಬಱಿಕೈದುದಹಿಮಕರಸೇವನೆಯಿಂ
ಹಿಮಮಳಿದುದಿಲ್ಲವೆನೆ ಕಾ
ಲಮಹಿಮೆಯಾವಂಗದೇನನೆಸಗದೊ ಜಗದೊಳ್ ॥೧೩॥

ಹರನುರಿಗಣ್ಣುಡೆ ಮಱಿವೊ
ಕ್ಕರಲಂಬನ ಬಿಸುಪುಗಳೆದು ಪೋಱಿದುದು ತರುಣೀ
ಗುರುಕುಚಮಿದು ಚಳಿಗಳೆದುದು
ವರಂಗೆ ಮರೆವುಗೆ ಸುವೃತ್ತರೇಗೆಯ್ಯರೊ ಪೇಳ್ ॥೧೪॥

ಸಸಿ ಬಾಂಬೊಳೆಯಂ ಬಾನೊಳ್
ಬಿಸುಟುಂ ಬಿಡದಾನೆದೊವಲನಿರ್ಮುಡಿಕೆಯೊಳೊಂ
ದಿಸಿ ಪೊದೆದ ಗಜೆಯನಾಲಿಂ
ಗಿಸಿ ಗಿರಿಶಂ ಮೆಱಿವನೆಂದೊಡದನೇನೆಂಬೆಂ ॥೧೫॥

ಹರಿವಿಧಿಗಳುಳಿದು ಸಳಿಳಾ
ಕರಸರಸೀರು೧ಹ೧ಗಳಂ ರಮಾವಾಗ್ದೇವೀ
ಪರಿರಂಭಣಯುತರಿರ್ದ
ರ್ಸುರುಚಿರವೈಕುಂಠಸತ್ಯಲೋಕಾಂತರದೊಳ್ ॥೧೬॥

---

೧ ಹಂ (ಕ, ಮೂ, ರಿ, ಧಾ)

ಚಳಿವೆಟ್ಟಾಣ್ಮನ ಪುತ್ರಿ ಸುರ್ಕಿ ಚಳಿಯಿಂ ಮೈಸಾರ್ದು ತಾನಪ್ಪಿ ಸಂ
ಚಳಿಸಲ್ ಶರ್ವನ ದೇಹದಿಂ ಸಿರಿ ಸರೋಜಾತಾಕ್ಷವಕ್ಷಸ್ಥೆ ನಿ
ಶ್ಚಳಿಯಾದಳ್ಕುಡಿವೆಣ್ಚತುರ್ಮುಖಮುಖಾಂತರ್ವಾಸೆಯಾಗಿರ್ಪಳಿ
ನ್ನಳಿದೀ ಲೋಕದ ಪೆಂಡಿರೇನುಳಿವರೇ ತಳ್ತಪ್ಪದಾತ್ಮೇಶ[೧]ರಂ[೧] ॥೧೭॥

ಪುದಿದ ಹಿಮಮೊಡಲೊಳಿಳಿತಂ
ದುದುರಾಗ್ನಿಯನೆಯ್ದೆ ನಂದೆವೊಯ್ದುದು ನಿಜಮ
ಲ್ಲದೊಡೆಂತು ತೋರ್ಪುದೋ ಪೇ
ಳ್ಮೊದಲಿಲ್ಲದ ಪೊಗೆ ಪೊದಳ್ದು ಜನದಾನನದೊಳ್ ॥೧೮॥

ಮೃಡನ ಕಿಡಿಗಣ್ಣ ಕಡುಬಿಸು
ಪಡಂಗಿಸಿ[೨]ತ್ರೈ[೨]ಕಿಲಿದು ಮನೋರಮೆ ನೋಡೆಂ
ದಡಿಗಡಿಗೆ ರತಿಯ ಕರಮಂ
ಪೊಡೆದಾರ್ದಿನ್ನಂಜೆನೆಂದು ನಲಿವಂ ಮದನಂ ॥೧೯॥

ಕುಮುದಮನಲರ್ಚಿ ಹಿಮರುಚಿ
ಗೆ ಮಹೋತ್ಸವಮಿತ್ತುದಬ್ಜಮಂ ಕೊಱಗಿಸಿ ತಿ
ಗ್ಮಮರೀಚಿಯನದು ಮಸುಳಿಸಿ
ತು ಮಹೀಜನಮಾತ್ಮಸಮಕೆ ಮಾಳ್ಪುದು ಹಿತಮಂ ॥೨೦॥

ಬೆರಲ್ಕೈಕಿಲಿಂ ಮುರುಂಟಿರೆ
ವಿರಹಿಯ ಹೃದಯಸ್ಥವಿರಹವಹ್ನಿಗೆ ಕೈಯಂ
ಸ್ಮರನೊಡ್ಡಿ ಕಾಸಿ ಬಿಲ್ಲಂ
ತಿರುವೊಯ್ದಿಸುತಿರ್ಪನಸಿತಶರರುಹಶರದಿಂ ॥೨೧॥

॥ವ॥ ಆ ಕಾಲದೊಳ್—

೧ ರಾನ್ (ರಿ), ಶ್ವರಂ (ಮೂ, ಧಾ) ೨ ತ್ರೈ (ರಿ, ಕ)

ನಡುಕಂ ಕೈಮೀಱೆ ದಂತಚ್ಛದ[೧]ಮೊ[೧]ಡೆದ್ಧುಹುಹುಧ್ವಾನಮುಂ ಪೊಣ್ಮೆಮೆಯ್ಯೊ
ಳ್ಪಿಡದೆತ್ತಂ ತೋಱೆ ರೋಮೋದ್ಗಮಮುಮದಿರ್ದಿರೆ, ಸೀತ್ಕಾರಮುಂಗೈವೆರಲ್ಕಾ
ಲ್ಕಡಿವೆತ್ತಂತಾಗೆ ತಳ್ಪೈಕಿಲಭರದೆ ಪಡ[೨]ಲ್ವ[೨]ಟ್ಟು ಗೇಣಾಗಿ ಪಾಂಥ
ರ್ತೊಡೆತೋಳ್ಗಳ್ಗೂಡೆ ಜಾನುಪ್ರಹಿತಶಿರರದೇನಿರ್ದರೋ [೩]ಶೀತ[೩]ಭೀತರ್ ॥೨೨॥

॥ವ॥ ಮತ್ತಮವರೊಳೊರ್ವ ಮುಗ್ಧಾಧ್ವಗಂ—

ಗೇರಪಣ್ಣನಿದು ಕೆಂಡಮೆನುತ್ತಂ
ಸಾರಿ ಮೇಲೆ ತೃಣಮಿಟ್ಟದನೂದಲ್
ಸೇರಿ ಬಾಯ ಪೊಗೆ ತಳ್ತಿರೆ ಕಂಡಾ
ದಾರಿಗಂ ಮುದದಿನೂದುತಮಿರ್ದಂ ॥೨೩॥

ಚಳಿಗಾಱದೆ ಪೇರಾಲದ
ಕೆಳಗಿರ್ಪನಿತಱೊಳೆ ಚಪಲಕಪಿ ನಿಡುಗೋಡಂ
ಸೆಳೆದಲುಗೆ ಸೂಸುವೆಲೆವನಿ
ಗಳಿನ್ನೋರ್ವಂ ನೆನೆದು ನಡುಗಿ ಸಿಡಿಮಿಡಿಗೊಂಡಂ ॥೨೪॥

ಇಡಿದಿಂಧನದೊಳೆ ಫಣಿವೊಳ
ಗಡಂಗೆ, ಮಣಿಗಂಡು ಕಂಡವೆಂದೊರ್ವಂ ಕೈ
ದುಡುಕೆ, ಮೊಱೆದೇಳೆ, ಭಯದಿಂ
ಕಡು[೪]ಚ[೪]ಳಿಯಿಂದೊರ್ಮೆ ಸೆಡೆದು ನಡುಗುತ್ತಿರ್ದಂ ॥೨೫॥

ಹಾದಿಯೊಳೂದಿದನೊರ್ವಂ
ಬೂದಿ ಕರಂ ಪಾಱೆ ಕೆಂಡಮಂ ಕಂಡಮಿದೆಂ
ದಾದರಿಸಿ ಕುಕ್ಕಿ ಕೊಕ್ಕಿಂ
ಮೇದುದದಂ ಕಾಗೆ, ಮಾ[೫]ಗಿ[೫]ಯೇನತಿಶಯಮೋ ॥೨೬॥

---

೧ ನೋ (ರಿ) ೨ ಲ್ಪ (ಧಾ), ಲ್ಬ (ರಿ, ಬ) ೩ ಸಿಪತ (ಕ) ೪ ಥ (ರಿ, ಧಾ) ೫ ಗೆ (ರಿ)

ಪುಲ್ಲಿಕ್ಕಿ ಪೋಗೆ ಪಥಿಕ
ರ್ಮೆಲ್ಲನೆ ಸುಡಲಾಱದಗ್ನಿ ಹಿಮಸಮಯಮಹೀ
ವಲ್ಲಭನತ್ತಣಿನೆನಗಿದೇಂ
ಪುಲ್ಲಂ ಕರ್ಚಿದುದೊ ಪೇಳೆನಲ್ತುಳ್ತಿಸೆಗುಂ ॥೨೭॥

ಗಱಿಗೆದಱಿ ಬಿದಿರ್ದು ಕೊಕ್ಕಿಂ
ದಿಱಿದಿಱಿದೆಳೆವಿಸಿಲನೆಳಸಿ ಸೇಡುಂಗೊಂಡೇಂ
ತುಱುಗಿರ್ದುವೊ ತುದಿಗೋಡೊ
ಳ್ಮೃಱಿ ಬೆಱೆತಿರೆ ನೋಡಿ ಬಾಡುತಂ ವಿಹಗಂಗಳ್ ॥೨೮॥

ಏಳುತ್ತಂ ಮೆಲ್ಲನಲ್ಲಿಂ ಮಱಿಯಮರ್ದಿರೆ ಕಿಳ್ಪೊಟ್ಟೆಯೊಳ್ಸುರ್ಕುವೆತ್ತಾ
ಬಾಳಂ ಮೇಣ್ಬಳ್ಕೆ ನೋಡುತ್ತಸವಸದೆ ಬಿಸಿಲ್ಗೆತ್ತು ಜೀರ್ಣಾಚ್ಛದಂಗಳ್
ಮೇಳಂಗೊಂಡೊಪ್ಪೆ ಶಾಖಾಗ್ರದೊಳಡರ್ದಲುಗಲ್ಪೊಸೆ ಮೇಲ್ಕೈಕಿಲೆತ್ತಂ
ನಾಳೀಜಂಘಂ ಕರಂ ಪಲ್ದೆಱೆದು ನಡುಗಿ ಹರ್ಱಿಂದು ಪುರ್ಬಿಕ್ಕಿತಾಗಳ್ ॥೨೯॥

ಮೂಡಣೆಲರೂದೆ ಜವದಿಂ
ದೋಡುಗುಮೀ ಹಿಮಸುಧಾಬ್ಧಿಯಗ್ರದೊಳೆನಿಪೊಂ
ದಾಡಂಬರಮಂ ಜನದೊಳ್
ಮಾಡಿ ಕರಂ ತರಣಿ ತಳರ್ದುದಂಬರತಳದೊಳ್ ॥೩೦॥

ಉರಿಗಣ್ಣಿಂದುರಿದಂಗಜ
ನುರು[೧]ಳ್ದಿ[೧]ರ್ಪಂ ಯುವತಿ ಸರಸಹೃದಯಪಯೋಜಾ
ಕರದೊಳಗಲ್ಲದೊಡವರುರು
ತರಕುಚದೊಳ್ಬಿಸುಪು ಪೊಣ್ಮುಗುಮೆ ಪೊಗೆವುಸುರೊಳ್ ॥೩೧॥

ಪುಳಕಂ ಕಾಯದೊಳುಣ್ಮೆ ಕಂಪನಮದುಂ ಕೈಗಣ್ಮೆ ದಂತಚ್ಛದ
ಸ್ಖಳಿತಂ ಚೀತ್ಕೃತಿ ಪೊಣ್ಮೆ ಬಂದು ನೆಱೆ ನಿಂದಾತ್ಮೇಶನಂ ಕಾಣುತ
ನ್ನಳ ಸಂಗಕ್ಕೊಳಗಾಗಿ ಬಂದನೆನುತುಂ ಕಾಯ್ಪೇಱೆ ತೋಳ್ಪಾಸದಿಂ
ದೆಳೆದಾ ಕೋಮಳೆಯೊರ್ವಳೊತ್ತಿ ಬಿಗಿದಳ್ ಶೀತಾತುರಂ ಪೋಪಿನಂ ॥೩೨॥

---

೧ ಳಿ (ರಿ, ಕ).

ವಿಚಿಕಿಲಗಂಧಿಯರ ಲಸ
ತ್ಕುಚಕುಲಗಿರಿದುರ್ಗದಲ್ಲಿ ನೆಲಸಿ ತದಂಗ
ಪ್ರಚುರಘುಸೃಣಾಂಗರಾಗಕ
ವಚಮಾಂತರನೈಕಿಲರಸನೇಗೈದಪನೋ ॥೩೩॥

ಗಿರಿಸಾನುಪ್ರಸರಝ್ಝರೋತ್ಕರತರಂಗಾಕೀರ್ಣವಾರ್ಬಿಂದು ಬಂ
ಧುರಮುಕ್ತಾಫಲಮಾಲಿಕಾಲಸಿತರುತ್ಪ್ರಾಲೇಯಶುಭ್ರಾಂಬರಾ
ವರಣಶ್ವೇತವಿಭೂತಿಚಂದನವಿಲಿಪ್ತಾಂಗರ್ಶಿವೈಕ್ಯರ್ಮುನೀ
ಶ್ವರರಿರ್ದಪರ್ಪರಮುಕ್ತಿಕಾಂತೆಯೊಲಿಸಲ್ತಾಳ್ದಂತೆ ನೈಪಥ್ಯಮಂ ॥೩೪॥

ಹಿಮವಚ್ಛೈಲತರಂಗಿಣೀತಟಪಟುಪ್ರಾಲೇಯವಾರ್ಬಿಂದುಸಂ
ಕ್ರಮಿತೋದ್ವೃತ್ತಪುಳಿನಸ್ಥಳಂಗಳೊಳೆ ನಿಂಧ್ಯಾನಂದದಿಂದೊಂದೆ, ಸಂ
ದು ಮನೋವೃತ್ತಿ ಮಹೇಶ್ವರಾಂಘ್ರಿಯೊಳ್, ರೋಮಾಂಚಂಗಳುಂ ಕಂಪಮುಂ
ಜಿಮರುಂ ತಳ್ತಿರೆ ನೈವಯೋಗಿವರರಿರ್ದರ್ವೀತಶೀತಾತುರರ್ ॥೩೫॥

॥ವ॥ ಇಂತತಿಶಯಪ್ರಭಾವವಿಭವಂಬಡೆದೇಳ್ತಂದ [೧]ಹೇ[೧]ಮಂತಸಮಯದಲ್ಲಿ—

ರಮಣಿಯ ಕುಂಕುಮಾಂಕಿತತನುಪ್ರಭೆ ಚೆಂಬಿಸಿಲಾಗೆ, ತದ್ರತ
ಶ್ರಮಜನಿತೋಷ್ಣ ತುಂಗಕುಚಯುಗ್ಮಮೆ ವಕ್ಷದೊಳೊಪ್ಪೆ, ತಳ್ತು ತ
ದ್ವಿಮಳಿನ ದೋರ್ಲತಾಕನಕಚಂಪಕದಾಮಮೆ [೨]ಕಂಠದೇಶ[೨]ದೊಳ್
ಸಮನಿ[೩]ಸೆ[೩] ಸೂಂಕಿದಂ ಹಿ[೪]ಮದ[೪] ಕಾಲಮನಾ ನರನಾಥಚಂದ್ರಮಂ ॥೩೬॥

॥ವ॥ ಇಂತು ಸಂತಸಂ ಮಿಗೆ ಶರಣಜನವನವಸಂತಂ, ಕಾಂತೆಯೊಡನುಮಾಕಾಂತನಡಿದಾವರೆಯಂ ಭಕ್ತಿಯಿಂ ಭಜಿಸುತ್ತಮಿರ್ದು ನಿಜದೇಶಕ್ಕೆ ಪೋಗಲೆಳಸಿ, ಲಲನೆಗಱುಪಿ, ಘಳಿಲನೆ ಸಿಂಹಳೇಂದ್ರಂಗೆ ಸಚಿವೇಂದ್ರನಿಂ ಪೇಳಿಸಲೊಡನವಂ ಕೇಳ್ದು ನಿಜರಮಣಿಗಿಂತೆಂದಂ—

---

೧ ಹಿ (ಮೂ, ಬ, ಕ, ಧಾರಿ) ೨ ಕಂಠ (ಮೂ) ೩ ಸಿ (ಕ) ೪ ಮ (ಮೂ).

ಇನ್ನೆವರಷ್ಟೆಮ್ಮ ಮಾತಂ
ಮುನ್ನಿಸಿ ಜಾಮಾತೃವಿರ್ದನಿದೆ ಸಾಲ್ಗುಷುವಂ
ಗಿನ್ನಿರ್ಗಾವೇಳ್ವುದು ಕಜ್ಜದ
ಬಿನ್ನಣಮಲ್ಲಬಳೆ ಕಳುಪುವುದು ನಿಜಸುತೆಯಂ ॥೩೭॥

॥ವ॥ ಎಂದು ಕಾಂತೆಯನೆಂತಕ್ಕೆ ತಿಳುಪುತ್ತಿರ್ವರೇಕಚಿತ್ತರಾಗಿ ನಿಜಕುಮಾರಿಯನೊಡವೋಪಂತು ಮಾಡಿ ಶುಭಮುಹೂರ್ತದೊಳ್ಮಗಳುಮನಳಿಯನುಮಂ ಬರಿಸಿ ಪಟ್ಟವಣೆಯೊಳ್ಕುಳ್ಳಿರಿಸಿ ಮಂಗಳಾಳಂಕಾರಂಗಳಿನಳಂಕರಿಸಿ, ತಣಿವಿಲ್ಲದೆ ಮುಗುಳ್ದು ಮಗುಳ್ದು ನೋಡಿ, ಪಲವರಕೆಯಂ ಪಲವುಸೂಳ್ಪರಸಿ, ಕಳುಪುವಾಗಳ್ಗಾಳಾಧರೆ ನಿಜತನೂಜೆಯ ಮೊಗದಾವರೆಯನಮಂದಸ್ನೇಹರಸತರಂಗಿತಕಟಾಕ್ಷದಿನಭೀಕ್ಷಿಸಿ—

ತಂಗಿ ನಿಜೇಶ್ವರಂಗೆ ಬಗೆದಂತಿರೆ ನೀಂ ಬೆಸಕೈವುದತ್ತೆಮಾ
ವಂಗಳ ಮಾತಮಂ ಮೀಱದು ಮೀಱದಿರಾರ್ಯಹಿತೋಕ್ತಿಗಳ್ಗೆ ಚಿ
ತ್ತಂಗುಡು, ಬಂಧುವರ್ಗದುಪಚಾರಮನಾಂತಿರುಮೇಶಭಕ್ತಿಯಂ
ಪಿಂಗದಿರೊಳ್ಜಸಂಬಡೆದು ಬಾಳ್ದಿಮುಗೀವುದತಿಪ್ರಮೋದಮಂ ॥೩೮॥

॥ವ॥ ಎಂದು ಬುದ್ಧಿವೇಳ್ದು ಶೇಷಾಕ್ಷತಮನಿಕ್ಕಿ ಪರಸಿ—

ಚವರದ ಕುಂಚಧಾರತಿಯ ಸೆಜ್ಜೆಯ ಮಜ್ಜನದಂಗರಾಗದು
ತ್ಸವದ ಸುಗಂಧವೀಟಿಕೆಯ, ಸಿಂಗರದೊಳ್ಪಿಱಗೈವ ಮಾಲೆಗ
ಟ್ಟುವ ತೊಡೆದಟ್ಟುವಿಂಚರದೆ ಪಾಡುವ ಕನ್ನಡಿದೋರ್ಪ ಬೋನಮಂ
ಸವಿವಡಿಯೂಡುವಾಳಿಯರುಮಂ ಪಡೆದಿತ್ತಳವಳ್ವಿಳಾಸದಿಂ ॥೩೯॥

॥ವ॥ ಮತ್ತಂ—

ರಸಚಿತ್ರಂ ರತ್ನಭೂಷಾವಳಿ, ಮೃದುವಸನಶ್ರೇಣಿ, ಮುಕ್ತಾತಪತ್ರ
ಪ್ರಸರಂ ಪೊಂಬಟ್ಟೆ, ಬಟ್ಟಲ್ಕನಕಕಳಶಮಾದರ್ಶಮಾಂದೋಳನಂ ದಂ
ತಿಸಮೂಹಂ, ವಾಜಿವೃಂದಂ, ಮೃಗಮದಘನಕಾಶ್ಮೀರ ಪತ್ರಾಳಿ, ಕೇಳೀ
ಲಸದುದ್ಯತ್ಕೀರಪಾರಾವತಶಿಖಿಹರಿಣೀಹಂಸಶಾರೀಪ್ರತಾನಂ ॥೪೦॥

೧ ವೆರ (ಬ), ವೇಳ್ದು (ಧಾ, ಕ) ೨ ಪಾ (ಮೂ, ಬ, ಕ, ಧಾ).

ಮಣಿಮಂಚಂ ದಿವ್ಯನವ್ಯಾಂಬರಮೃದುತರತಲ್ಪಂ ಮೃಗೇಂದ್ರಾಸನಂ ಸ
ದ್ಗುಣಭಾಸ್ವದ್ವೇಣುವೀಣಾನಿಪುಣತರವಧೂವೃಂದಮುದ್ಗಾಯಕೀಸ್ತ್ರೀ
ಗಣಮುದ್ಯನ್ನರ್ತಕೀಸಂಚಯಮಖಿಳಕಳಾವಿದ್ವಧೂಟೀಸಮೂಹಂ
ಪ್ರಣಯಪ್ರೌಢಪ್ರಹಾಸ್ಯೋಚಿತಹಿತಮಿತಸಲ್ಲಾಪಕಾಂತಾಕದಂಬಂ ॥೪೧॥

ಎಂಬಿವೆಲ್ಲಮುಮಂ ಮಗಳ್ಗೆ [೧]ಬಳಿವಳಿ[೧]ಗೊಟ್ಟೊಡವೋಪಂತು ನಿಯಾಮಿಸಿ ಸಿಂಹಳೇಂದ್ರಂ ಮಂಗಳತೂರ್ಯತ್ರ[೨]ಯ[೨]ರವಂ ವಿಜೃಂಭಿಸೆ ನಿಜಪುರಮಂ ಪೊರಮಟ್ಟು ಕಿಱಿದಂತರಮಂ ಕಳುಪಿ ಮಗುಳ್ದು ಕಮಳಾವತಿಯುಂ ಪೊಕ್ಕಿರ್ದ ನಿತ್ತಲ್ ರಾಜಶೇಖರನರೇಂದ್ರಂ ವಿಮಳತ[೩]ರ[೩]ತರಂಗಿಣೀತಟವಿಪುಳಗಿರಿಕಟಕ ವಿವಿಧಕಾಸಾರಪರಿಸರಸ್ಥಿತದಳಫಳಕುಸುಮವಿಸರವಿಳಸಿತದಿವ್ಯತರುಮನೋಜ್ಞನಂದನಂಗಳೊಳ್ಬೀಡುವಿಡುತ್ತಮಿ[೪]ನಿ[೪]ಯ[೫]ಳೊ[೫]ಡನೆ ಬಿಸದಿಸುತ್ತಂ ಮೆಲ್ಲಮೆಲ್ಲನೆಯ್ತಂದು ನಿಜರಾಜಧಾನಿಯಂ ಸಂಭ್ರಮಂ ಮಿಗೆ ಪುಗುತರ್ಪನ್ನೆಗಂ—

ಆ ವೇಳೆಯೊಳತಿಸಂಭ್ರಮಮೆಸೆದಿರೆ
ಪೂವಲಿ ಪುರವೀಥಿಗಳೊಳ್ನೆಱೆದಿರೆ
ಪವಳದ ರ[೬]ನ್ನ[೬]ದ ಗುದಿಗ[೭]ಳ[೭] ಗುಡಿಗ[೭]ಳ್[೭]
ನವಮೌಕ್ತಿಕರಂಗದ ದಾಂಗುಡಿಗಳ್
ಮೆಱೆದವು ಮಿ[೮]ಱು[೮]ಗುವ ಮಿಸುನಿಯ ತೋರಣ
ಘುೞಿಕೆಯ ಪುರಜನದುತ್ಸವದೋರಣ
ಘಾನೆಯ ಮೇಲಣ ಪಳಯಿಗೆ ಮಿಳಿರ್ದಿರೆ
ನಾನಾವಿಧವಾದ್ಯಧ್ವನಿಯುಳುರ್ದಿರೆ
ಕರೆದುವು ಬಿರಿದಿನ ಕಹಳೆಗಳಾಗಳ್
ಪರೆದುದು ಪಳಹದ ರವಮೆಣ್ದೆಸೆಯೊಳ್
ಗಿರಿಬಂಧುರಸಿಂಧುರತತಿ ನಡೆತರೆ
ಚರವೃಂದದ ಕುಂದದ ಕಳಕಳಮಿರೆ
ಪೊಸಮೇಳದ ತಾಳದ ಮೃದುನಿನದಂ
ಪಸರಿಸೆ ಗೀತರವಂ ಕಡುಬಿನದಂ
ಬಡೆದಿದಿರ್ವಂದುದು ರಾಜಪ್ರಚಯಂ
ಬಿಡದೊಡವಂದುದು ನಾರೀನಿಚಯಂ
ಕಳಶಂ ಕನ್ನಡಿ ವೀಜನತತಿಯಂ

೧ ಬಳುವಳಿ (ಬ), ಬಳಿವಲಿ (ಮೂ) ೨ ವ (ರಿ) ೩ ರಂ (ರಿ) ೪ ನೆ (ರಿ, ಕ) ೫ ರೊ (ಮೂ) ೬ ತ್ನ (ರಿ) ೭ ಳು (ಮೂ) ೮ ನು (ಮೂ), ಸು (ಬ).

ತಳಿರ್ಧಿಳಿಕ್ಕೈವುತೆ ಚೆಲ್ವಿಂ ರತಿಯಂ
ಸಲೆ ವಾರಾಂಗನೆಯರ್ ಬರುತಿರ್ದರ್
ಕೆಲರಾರತಿವಿಡಿದೈತರುತಿರ್ದರ್
ಮುತ್ತಿನ ಸತ್ತಿಗೆ ಮೊತ್ತಂಬೆತ್ತಿರೆ
ಸುತ್ತಿ ತುರಂಗಿಗಳೊತ್ತರಿಸುತ್ತಿರೆ
ಒಂದೆಸೆ ವಂದಿಜನಂ ಜಯಜಯಮೆನೆ
ಮುಂದೆಸೆ ಬಂದೆಸೆದವರತಿಶಯಮೆನೆ
ಕಡೆಗಂಗಳ ಕುಡಿವೆಳಗೆಡೆವುಗುತಿರೆ
ನಿಡುಮುಡಿ ಮುಗುಳಂ ಪುರುಡಿಸುತೊಗುತಿರೆ
ಪೆಣ್ಬಡೆ ಸೂಸಿತು ವಾಜಿವ್ರಜಮಂ
ತಣ್ಪಿಸಿಲೆನೆ ಪಟವಾಸದ ರಜಮಂ
ತನುರುಚಿನಿರ್ಜಿತ ಸೌಧಾಮಿನಿಯರ್
ಘನಸಂಭ್ರಮದರೆಬರ್ಕಾಮಿನಿಯರ್
ನೆಲೆವನೆ ನೆಲೆನೆಲೆಗಳನೇಱುತ್ತಂ
ಕಲಿತಕಟಾಕ್ಷದ ರುಚಿವೀರುತ್ತಂ
ನೋಡುತ್ತಿರೆ ಕರಿವರಮಸ್ತಕದೊಳ್
ತೋಡಿಲ್ಲದೆ ಬಗೆಗೊಗೆದುತ್ಸುಕದೊಳ್
ಯುವತಿಸಹಿತಮವನೀಶ್ವರತನಯಂ
ಸುವಿಳಾಸತಿರಸ್ಕೃತಹರಿತನಯಂ
ಪಿರಿದುತ್ಸವದಿಂದೇಳ್ತಂದಾಗಳ್
ಭರದಿಂದರಮನೆಯಂ ಪೊಗುವಾಗಳ್

ಜಡಿಯೆ ಘನಸ್ತನಂ ಪೊಡರೆ ಪೂ[೧]ರ್ಣ[೧]ನಿತಂಬಮಪಾಂಗಕಾಂತಿ ಮುಂ
ಬಿಡೆ ಕುಸುಮಾಸ್ತ್ರಮಂ ಕೆದರೆ ತಣ್ಗದಿರಂ ರದನಾಂಶು ಬಳ್ಕೆ ತೆ
ಳ್ಳಡು ಮುಡಿ ಸೂಸೆ ಬಲ್ಮುಗುಳನಂದಿದಿರ್ವಂದು ಮಹೋತ್ಸವಂ ಮನ
ಕ್ಕೆಡೆಗುಡೆ ರ[೨]ತ್ನ[೨]ದಾರತಿಯನೆತ್ತಿದುದೊಲ್ದು ವಿಳಾಸಿನೀಜನಂ ॥೪೨॥

॥ವ॥ ಇಂತು ಸಖೀಜನಮೆಸಗುವ ಮಂಗಳೋಪಚಾರಂಗಳಂ ಕೈಕೊಳುತ್ತುಂ ನಿಜಜನನೀಜನಕರಿರ್ಪೆಡೆಗೆ ರಮಣಿವೆರಸೇಳ್ತಂದು ಪೊಡಮಟ್ಟುನಿಂದಾಗಳಮೃತ-ಮತಿಮಹಾದೇವಿ ಸತ್ಯೇಂದ್ರಚೋಳೇಂದ್ರರಿರ್ವರುಂ ನಲವರಿಕೆಯಿತ್ತು ಪರಿತೋಷದಿಂ ಬರಿಸಿ ಕುಳ್ಳಿರಿಸಿ ಸರಸಪ್ರಸನ್ನಸ್ನಿಗ್ಧಮಧುರತರಕಟಾಕ್ಷಂಗಳಿನಭೀಕ್ಷಿಸಿ ಸಮು

೧ ರ್ಣ (ಬ) ೨ ನ್ನ (ಮೂ. ಬ)

ಯೌವನರೂಪಲಾವಣ್ಯಸೌಶೀಲ್ಯಸಂಪದಕ್ಕೆ ಸಂತಸಂಬಟ್ಟು ಸಮುಚಿತಮಂಗಳಂ ಗಳಂ ರಚಿಸಿ ಸುಮುಹೂರ್ತದೊಳ್ ಮನೆದುಂಬಿಸಲೊಡನೆ ನಿಜನಿತಂಬಿನಿಯೊ- ಳ್ಕೂಡಿ ಸಾರತರಸಂಸಾರಸುಖಮನನುಭವಿಸುತ್ತಮಾ ರಾಜಶೇಖರಂ ಹರಚರಣ ಪೂಜಾಸಾಮ್ರಾಜ್ಯದುರಂಧರಂ ಶರಣಜನಸಂತಾನಸಂತಾನಂ ಪರಮಹರುಷದಿನಿರುತ್ತ ಮಿರ್ಪಾಗಳ್—

ಕಳಕಂಠೀಕಳನಾದಕಾಹಳಿಮಿಳದ್ಭೃಂಗಾವಳೀರಾವಮಂ
ಜುಳಗೀತಂ ಶುಕವಂದಿವೃಂದನಿನದಂ ಮಂದಾನಿಲಾಂದೋಳಿತೋ
ಜ್ವಳವಲ್ಲೀಮೃದುಲಾಸ್ಯಮೊಪ್ಪಿರೆ [೧]ವನ[೧]ಶ್ರೀವಲ್ಲಭಂ ಸಂಮದಂ
ದಳೆದೇಳ್ತಂದನಮಂದವೈಭವಯುತಂ ಚೈತ್ರರ್ಕ್ಷಮಾಧೀಶ್ವರಂ ॥೪೩॥

॥ವ॥ ಅಂತುಮಲ್ಲದೆಯುಂ—

ವನಿತಾವಕ್ತ್ರಾಂಬುಜಂ ಮುಂತಲರ್ದೆ ಸರಸಿಜಂ ಪಿಂತೆ ಕಾಂತಾಕಪೋಲೇಂ
ದುನವಪ್ರದ್ಯೋತಮಂ ಮುಂ ತಳೆಯೆ ಹಿಮಕರಂ ಪಿಂತೆ ಭಾಮಾಮನಶ್ಚೂ
ತನಗಂ ಮುಂ ಪಲ್ಲವಂಬೆತ್ತಿರೆ ಸರಸರಸಾಲವ್ರಜಂ ಪಿಂತೆ ತನ್ವೀ
ತನುವ[೨]ಲ್ಲೀ[೨]ಶ್ರೇಣಿ ಮುಂ ರಂಜಿಸೆ ವನಲತೆ ತಾಂ ಪಿಂತೆ ಬಂದಂ[೩]ಬ[೩]ಸಂತಂ ॥೪೪॥

ಮಲಯೋರ್ವೀಧರತುಂಗಶೃಂಗವಿಚರದ್ವಿದ್ಯಾಧರೀಕೋಮಳಾಂ
ಗಲತಾಸೌರಭಶಾಲಿ ವಾಮನ[೪]ಕ[೪]ರಾಕೀರ್ಣೋದಕೋದ್ಯತ್ಕಣಾ
ವಲಿ ಮಾರ್ಗಸ್ಥಿತಚಂದನಾಗಗತನಾಗಾಪೀತಶೇಷಂ ಧರಾ
ತಲಕಾನಂದಮನೊಂದಿಸುತ್ತೆ ಸುಳಿದಂ ಮತ್ತಲ್ಲಿ ಮಂದಾನಿಲಂ ॥೪೫॥

ನಗಿಸುತ್ತಂ ಮಲ್ಲಿಕಾಕಾಮಿನಿಯನಳಿರವವ್ಯಾಜದಿಂ ಸೋಂಕಿ ಮೆಯ್ಯೊ
ಳ್ನೆಗಪುತ್ತಂ ಚೈತ್ರದೂತೀಯುವತಿಗೆ ಮುಕುಳವ್ಯಾಜದಿಂ ಘರ್ಮವಾರ್ಬಿಂ
ದುಗಳಂ ಮೇಣ್ಚೂತವಲ್ಲೀವನಿತೆಗೆ ಪಡೆವುತ್ತಂಕುರವ್ಯಾಜದಿಂ ನೆ
ಟ್ಟಗೆ ರೋಮಾಂಚಂಗಳಂ ಸದ್ವಿಟನೆನೆ ಸುಳಿದಂ ವೇಗದೂರಂ ಸಮೀರಂ ॥೪೬॥

॥ವ॥ ಮತ್ತಮಾಗಳ್—

೧ ನವ (ಮೂ) ೨ ಲ್ಲರೀ (ಮೂ) ೩ ವ (ರಿ) ೪ ಕಾ (ಕ)

॥ವ॥ ಮತ್ತಮಾಗಳ್—

ತಳಿರ್ವೆಳೆಮಾವು ಪಲ್ಲವಿಪಶೋಕೆ ಮುಗುಳ್ತುದಿರ್ಮುರ್ತ್ತೆ ಮೊಗ್ಗೆ[೧]ಯಂ[೧]
ತಳೆಯಲೊಡರ್ಚಿ ನಿಂದ ಪೊಸಮಲ್ಲಿಗೆ ಪುಷ್ಪಮನಾಂತ ಚಂಪಕಂ
ಪಳಿಯೆಲೆಯಿಕ್ಕಿ ಸಣ್ಣನನೆಯೇಱಿದ ಪಾಟಳಿ ಪೂವನಾಂತು ಕಂ
ಗೊಳಿಸುವ ಕರ್ಣಿಕಾರಮಲರ್ದೀವಿದ ಮುತ್ತಮದೆತ್ತ ನೋಳ್ಪೊಡಂ ॥೪೭॥

ಮೊಡವಿಗಳಂತೆ ಮೂಡೆ ಪೊಸಮೊಗ್ಗೆಗಳಾ ಮಧುದೂತಿಯಲ್ಲಿ ಸೊಂ
ಪಿಡಿದಿರೆ ವಲ್ಲರೀತನು ಸಮಸ್ತ ಬಕಸ್ತನಮಲ್ಲಿ ಪೊಣ್ಮೆ ಕ
ರ್ಪಡರ್ದ ತಮಾಲವಲ್ಲಿ ಬಡಬಾಸೆವೊಲೊಪ್ಪಿರೆ ಪದ್ಮಲೋಚನಂ
ಬಿಡದಲರ್ದೊಪ್ಪೆ ಜವ್ವನಮನಾಂತವೊಲಾ ವನಲಕ್ಷ್ಮಿ ತೋಱಿದಳ್ ॥೪೮॥

ಗಿಳಿಗಳೆಜಂಕೆಯ ಪಚ್ಚೆಯ
ನಳಿಮಾಲೆಯ ನೀಲಮಾಲೆಯಂ ಮಾವಿನ ಚೆಂ
ದಳಿರ್ಗೆಂಪಂ ಬನಸಿರಿ ತಾಂ
ತಳೆದಾ ಮಾಧವಮನೋಜ್ಞೆಯೆನಿಸುತ್ತೆಸೆದಳ್ ॥೪೯॥

॥ವ॥ ಅದಲ್ಲದೆಯುಮಲ್ಲಿ—

ಮದನಂ ಪೂಸರಲಿಂದೆ ಪೂಣ್ದು[೨]ಸೆ[೨] ತಪಃಸಂಯುಕ್ತಕಾರ್ಕಶ್ಯಚಿ
ತ್ತದೆ ತಾಂ ನಾಂಟದಿದೆಂದು ಬಂದು ಮಧುವೆಂದಂಭೋಜನಂದೊಟ್ಟಿ ಮು
ತ್ತದ ಪೂಗೆಂಡಮನಲ್ಲಿ ಬಲ್ಸರಲ ಮಾಡಲ್ಮೇಲಯಃಪಿಂಡಖಂ
ಡದ ಸಾಲಿಟ್ಟದನೂದಿದಂತೆ ಮೆಱೆಗುಂ ಭೃಂಗಾಳಿಯಿಂ ಗಾಳಿಯಿಂ ॥೫೦॥

ಮಧುಸೇವನೆಯಿಂ ಸೊರ್ಕುತೆ
ಮಧುಪಂ [೩]ಸು[೩]ಮನಃಪ್ರಚಯ[೪]ಮ[೪]ನಲೆದೊಡೆ ಶಿಖಿಯೊಳ್
ಮಧುರಿಪುಜನಬೆಸದಿನದಂ
ಮಧು ದಂಡಿಪ ತೆಱದೆ ಮುತ್ತದಲರೊಳದೆಸೆಗುಂ ॥೫೧॥

॥ವ॥ ಮತ್ತಮದಲ್ಲದೆಯುಂ—

---

೧ ಯ (ಕ) ೨ ಸಿ (ಬಾ) ೩ ಸ (ಕ) ೪ ವ (ಕ)

೪೯ ನೆಯ ಪದ್ಯದಿಂದ ಮುಂದೆ ಈ ಸಂಧಿ ಮುಗಿಯುವ ವರೆಗೆ ಬ, ಪ್ರತಿಯಲ್ಲಿ ಗರಿಗಳು ಖಿಲವಾಗಿ ಹೋಗಿವೆ.

ಅಂಗಜಭೂಭುಜಂ ವಿಜಯಯಾತ್ರೆಗೆ ಪೋಗಲೊಡರ್ಚೆ ಚೈತ್ರನು
ತ್ತುಂಗಪಿಕಧ್ವನೀಸ್ಫುಟಮಹಾಪಟಹಧ್ವನಿಗೆಯ್ಯೆ ಕೇಳ್ದು ಜೊ
ತಂಗಳೆನಿಪ್ಪ ವೀರಭಟರೇಳೆ ನವಾಂಕುರರೋಮರಾಜಿ ಸ
ರ್ವಾಂಗದೊಳಂದು ಪಲ್ಲವಲಸತ್ಕವಚಾವಳಿದೊಟ್ಟು ತೋ¹ಱಿದರ್¹ ॥೫೨॥

ಜೇವಣಶಾಲೆ ತುಂಬಿಗಳ ಪುಷ್ಪಕಳಂಬನ ಶಸ್ತ್ರಶಾಲೆ ಕೀ
ರಾವಳಿಕೋಕಿಲಾವಳಿಗಳಗ್ಗದ ಪಾಠದ ಪಟ್ಟಶಾಲೆ ಮ
ಲ್ಲೀವಧು ಲಾಸ್ಯಮಭ್ಯಸಿಪ ನರ್ತನಶಾಲೆ ನವೀನಚೈತ್ರಲ
ಕ್ಷ್ಮೀವರಚಿತ್ರಶಾಲೆ ಮಧುಭೂಭುಜನೋಲಗಶಾಲೆ ಮಾಮರಂ ॥೫೩॥

॥ವ॥ ಮತ್ತಂ—

ಗಿಳಿ ಗಿಳಿದಾಳಿ ಚೆಂದಳಿರೆ ಚಂದಿರಗಾವಿಯ ನೂತನಾಂಬರಂ
ಸುಳಿಯದೆ ನಿಂದ ತುಂ²ಬಿ²ಗಳ ಸಾಲ್ಪವಿಭೃನ್ಮಣಿಮಾಲೆ ಪುಷ್ಪಸಂ
ಕುಳದ ರಜಂ ಸುಗಂಧದ ರಜಂ ತನಗಾಗಿರೆ ತಾಳ್ದು ಮಲ್ಲಿಕಾ
ಲಳನೆಯೊಳೇಂ ಮನಂಬಿಡಿದನೋ ಬನದೊಳ್ಸಹಕಾರಪಲ್ಲವಂ ॥೫೪॥

ಅಳಿಕುಳಝೇಂಕೃತೀಪ್ರಚುರಕಿಂಕಣಿಕಾರಣಿತಂ ಶುಕಸ್ವನಾ
ಕುಳವಿಕಟಾಟ್ಟಹಾಸನಿನದಂ ಸುಮನಸ್ಫುಟಹಾ³ಸ³ರೋಚಿ ಸ
ತ್ಫಳಮಣಿಮಾಲ್ಯನುದ್ಗತರಜೋಭಸಿತಂ ಮಧುಮತ್ತನಲ್ಲಿ ಕೋ
ಕಿಳರವಶೃಂಗನಾದನೆಸೆದಂ ತಳಿರ್ಗೈಯ ರಸಾಲಭೈರವಂ ॥೫೫॥

ತಳಿರ್ಗಳೆ ದಟ್ಟಿಯಾಗೆ ಕೊನರೆಂಬ ಬೆರಲ್ಗದು ವಜ್ರಮುಷ್ಟಿಯಂ
ತಳವಡೆ ತೋಱೆ ಮಾಮಿಡಿ ಶಿಖಂಡಕದಂತಿರೆ ಮಧ್ಯದಲ್ಲಿ ಕಂ
ಗೊಳಿಪಳಿವಿಂಡು ತದ್ರಜಮೆ ಮೃದ್ರಜದಂತಿರೆ ಕೋಕಿಳಸ್ವರಂ
ಕಳಕಳಮಾಗೆ ಮಾಮರಮದೊಪ್ಪಿತು ಮಾರನ ಮಲ್ಲನಂತೆವೋಲ್ ॥೫೬॥

ಕಳರವಮಿತ್ತುದೆನ್ನ ಕಳಕಂಠನ ಕಂಠಕೆ ತನ್ನ ಕೋರಕಂ
ಗಳ ರಸದಿಂದೆ ಪಣ್ಗಳ ರಸಂಗಳಿನೆನ್ನ ಶುಕಾಳಿಗಳ್ಗೆ ಮಂ
ಜುಳಮಧುರೋಕ್ತಿಯಿತ್ತುದದುಮಲ್ಲದೆ ಪಲ್ಲವಬಾಣಮೀವುದೆ
ನ್ನಳಿಯನೆ ಪೂಗಳಿಂ ಪೊರೆವುದೆಂದದನಾ ಮದನಂ ನಿರೀಕ್ಷಿಪಂ ॥೫೭॥

---

೧ ಳ್ (ರಿ) ೨ ಬೆ (ಮೂ) ೩ ರ (ರಿ)

ಚೆಂದಳಿರಂದವೆತ್ತ ಪೊಸಕಾಸೆ ಮದಾಳಿಗಳಿಂಚರಂ ನಯಂ
ಗುಂದದ ಕಿಂಕಿಣೀಕ್ವಣಿತಮುದ್ಗತಕೋರಕಹಸ್ತ[೧]ಶಾಖೆ[೧]ಯೊ
ಳ್ಪಿಂಥಲಜೊರ್ಂಪಮೋ ಪಿಡಿದ ಚಾಮರಮಾಗಿರೆ ದೇಸಿವೆತ್ತು ತ
ನ್ನಂದನರಂಗದೊಳ್ಕುಣಿದಳಾಮ್ರಲತಾನಟಿ ಮಚ್ಚೆ ಮನ್ಮಥಂ ॥೫೮॥

ಪಲ್ಲವದೊಳಿರ್ದು ಕೋಗಿಲೆ
ಮೆಲ್ಲನೆ ದನಿಗೆಯ್ಯೆ ತತ್ಪ್ರಸೂನದೊಳಳಿಗಳ್
ಮೆಲ್ಲುಲಿಗುಡೆ ಮಾವುಂ ಪೊಸ
ಮಲ್ಲಿಗೆಯುಂ ಕೂಡಿ ಪಾಡುವಂತಿರೆ ತೋರ್ಕುಂ ॥೫೯॥

॥ವ॥ ಅದಲ್ಲದೆಯುಂ—

ಗಿಳಿಗಳ್ಮತ್ತೊಂದು ಪಣ್ಣಂ ತುಡುಕುಗುಮಳಿಗಳ್ಪೋಗಿ ಮತ್ತೊಂದು ಪೂವೊ
ಳ್ಕಳಿವಂಡಂ ಪೀರ್ಗುಮೀ ಕೋಕಿಳಶಿಶುಗೆಲೆ ನಿನಲ್ಲದಾರುಂಟು ನಿನ್ನೊ
ಳ್ತಳಿರೆಂದಿಂಗಪ್ಪುದೆಂದೇ ಬಯಸಿ ಮಧುಗೆ ಮೌನವ್ರತಂಗೊಂಡುದ್ಮೆ ಕೇ
ಳೆಳೆಮಾವೇ ಪತ್ತಱಿಕೊಳ್ಕಾಣದಿರಿದನೆನುತಂ ಕಾಯಜಂ ಕೈಯೊಳಿತ್ತಂ ॥೬೦॥

॥ವ॥ ಮತ್ತಂ—

ಅಳಿಕುಲಮೆಲ್ಲ ಪೀರ್ದೊಡಧರೆಯಾಗದ ಸನ್ಮಧು ಮಂದಮಾರುತಂ
ಸೆಳೆದೊಡೆ ಕುಂದದಿರ್ಪ ನಱುಗಂಪಲರೊಳ್ ಗಿಳಿವಿಂಡು ಪೀರ್ದೊಡಂ
ಕಳೆಯದೆ ತುಂಬಿ ತೋರ್ಪ ರಸವ್ವಾ ಪೊಸಪಣ್ಗೊಳನೇಕಕೋಕಿಳಾ
ವಳಿ ಮುಱಿದೊಟ್ಟೆ ಪಿಂಗದ ತಳಿರ್ಕಿಱುಮಾಮರದೊಳ್ಮನೋಹರಂ ॥೬೧॥

ಅಲಗೊರ್ಂಬಿನಲ್ಲಿ ತುಂಬಿಗ
ಳುಲಿ ಮಿಳಿರ್ವೆಳೆದಳಿರನಾಂತ ಕೊಂಬುಗಳೊಳ್ಕೋ
ಗಿಲೆಗಳ ಕಳರುತಿ ಪಣ್ಗಳ್
ನೆಲಸಿದ ನಿಡುಗೊಂಬಿನಲ್ಲಿ ಪುರುಳಿಗಳ ರವಂ ॥೬೨॥

ಅಳಿಗಳೊಡನೊಡನೆ ದನಿಗುಡೆ
ಗಿಳಿಗಳ್ನಲಿನಲಿದು ಮಾರವೀರನ ಬಿರಿದಾ
ವಳಿಯಂ ಪಾಡುತ್ತಾಡಿದು
ವೆಳೆಗಾಳಿಗೆ ತೊನೆವ ತಳಿರ್ಗಳುಯ್ಯಲನಾಗಳ್ ॥೬೩॥

---

೧ ಕೇಕೆ (ಕ)

॥ವ॥ ಇಂತೊಪ್ಪುವ ಮಧುಮದನಮನೋಹರಂಗಳಾದ ಮಾಮರಂಗಳಲ್ಲ-ದೆಯುಂ—

ಅಸುಗೆ ತಳಿರ್ತು ವಿಯೋಗಿಗ
ಳಸುಗೆ ಕರಂ ಮುಳಿಗುವೆಂದು ಮುಳಿದೊದೆಯೆ ವಧೂ
ವಿಸರಂ ತತ್ಪದಯಾವಕ
ರಸಮಮರ್ದವೊಲೆಸೆದುದದಱ ಚೆಂದಳಿರ್ದುಱುಗಲ್ ॥೬೪॥

ಸಿರಿವುಳ್ಳೊಡಳಿಗಳಿಂದೀ
ವರದೊಳ್ಬಿಡದಿರ್ದು ತೊಲಗೆ ತೊಲಗುತೆ ವಿಕಚಾಂ
ಬುರುಹದೊಳೆ ನೆಲಸೆ ನೆಲಸಿದ
ವರರೆ ಗತಶ್ರೀಕನಪ್ಪನಂ ಸೇವಿಪರಾರ್ ॥೬೫॥

ಬನಸಿರಿ ಸುರವರಲೋಕದ
ಬನಸಿರಿಗುಱೆ ತೋಱಲೆಂದು ನಿಜವಿಭವಮನಂ
ದನುನಯದಿಂ ಕಟ್ಟಿದ ಕಾಂ
ಚನತೋರಣಮೆನಿಸಿ ಕರ್ಣಿಕಾರಂ ಮೆಱೆಗುಂ ॥೬೬॥

ಇದು ಮಧುದತ್ತಮೌಕ್ತಿಕಮೊ ಮಂಜುಳಚೂತಭುಜಂಗಸಂಗದಿಂ
ದೊದವಿದ ಘರ್ಮವಾರಿಕಣಮೋ ರತಿದೇವಿ ವಿನೋದದಿಂದೆ ಸೂ
ಸಿದ ಜಳಯಂತ್ರಚಂದನಗತೋದಕಶೀಕರಮೋ ಮದಾಳಿವೃಂ
ದದ ಕೃತಪುಣ್ಯದೊಂದುರುಳಿಯೋ ಪೊಸಮಲ್ಲಿಗೆ ತಾಳ್ದ ಮೊಗ್ಗೆಯೋ ॥೬೭॥

॥ವ॥ ಎನಿಸಿ ರಂಜಿಸೆ—

ಕಳೆದುದು ಮಧುಮದಮಧುಪಂ
ಗಳ ವಿಪುಳಭ್ರಾಂತಿಯಂ ನಿಜಪ್ರಸವರಸಂ
ಗಳಿನಾ ವಿಚಕಿಲಲತೆ ನಿ
ರ್ಮಳರೆಡೆಗೈದಿದೊಡೆ ಮಾಡರೇ ಪರಹಿತಮಂ ॥೬೮॥

ತರುಣಾಮ್ರಕ್ಕೊಳಗಾದಪೋಲ್ತೊಲಗಳೆಂದುಂ ಬಂದ ತಂಗಾಳಿಯಂ
ಭರದಿಂದಪ್ಪುವಳಲ್ಲಿ ಜಾಜಿ ವಸನಂಬೋಲ್ಜೀರ್ಣಪರ್ಣಂ ಸುಮಾ
ಧರಮಂ ಚುಂಬಿಪ ತುಂಬಿಗೀವಳಿವಳಾಗಳ್ಪಾಟಳೀನಾರಿ ಪಾ
ದರಿಯೆಂದೊಳ್ವೆಸರಿಟ್ಟನೀಕೆಗಜನೆಂದಂಗೋದ್ಭವಂ ಮಚ್ಚುವಂ ॥೬೯॥

॥ವ॥ ಆ ನಂದನಾಂತರಾಳದಲ್ಲಿ—

ತಿಳಿಗೊಳದಲ್ಲಿ ಸುತ್ತಿ ಸುೞಿದೆತ್ತಿ ಸರೋಜಪರಾಗಪೂಗಮಂ
ಘುೞಿಲನೆ ಪೊಳ್ತು ಬರ್ಪೆಡೆಯೊಳುಯ್ಯಲನಾಡುವ ಗಾಡಿಕಾರ್ತಿಯ
ರ್ಕಳ ಪೊಱೆವಾರ್ಗಳಪ್ಪಳಿಸೆ ತೊಪ್ಪನೆ ಬೀೞ್ದಲರೆಯ್ದೆ ನೊಂದು ಸಂ
ಚಳಗತಿಯಿಂ ಮದಾಳಿನಿನದಚ್ಛಲದಿಂ ನರಳುತ್ತೆ ಬರ್ಪಿನಂ ॥೨೦॥

ಗಿಳಿವಾತಿಂದುಪಚಾರಮಾಡಿ ತಳಿರ್ಗೈಯಿಂದಿತ್ತ ಬಾರೆಂದು ಕೋ
ಕಿಳಚಂಚೂದಳಿತೋರುಕೋರಕರಸಸ್ನೇಹಂಗಳಿಂ ನೀವಿ ನಿ
ಶ್ಚಳಭೃಂಗೀರವದಿಂದೆ ಮಂತ್ರಿಸಿ ರಸಾಲಂ ರಕ್ಷೆಗೈದಾತನಂ
ಕೆಳೆಗೊಂಡಂ ತನಗಾತನಂದೆಸಗೆ ಲೇಸಂ ಮುಯ್ಯುನೀವಂತೆವೋಲ್ ॥೨೧॥

ಮಾವಿನೊಳೇಱಿ ಮಲ್ಲಿಗೆಗೆ ಪಾಱಿ ಮರಂದದೊ[೧]ಳ[೧]ಳ್ದು ಜಾಱಿ ಕೆಂ
ದಾವರೆಗೋಡಿ ಕೇಸರದೊಳಾಡಿ ಕರಂ ಮಧುವೀಂಟಿ ಪಾಡಿ ಮೆ
ಲ್ಲಾವರಮೆತ್ತಿ ಮಾಧವಿಯನೊತ್ತಿ ಮಹೋತ್ಸವದಿಂದೆ ಸುತ್ತಿ ಭೃಂ
ಗಾವಳಿ ಧೂಳಿಯುಕ್ತಕುಸುಮಾಳಿಯೊಳಾಂತುದು ಚಾರುಕೇಳಿಯಂ ॥೨೨॥

॥ವ॥ ಮತ್ತಮತನುತೇಜದೊಡನೆ ಚಂಪಕನಿಕಾಯಂ ಪೆಂಪುವಡೆಯೆ, ರತಿಯ ಮೊಗದೊಡನೆ ಸುರಯಿ ಸೊಂಪುವಡೆದಲರೆ, ಜತಿಗಳ ಧೃತಿಯೊಡನೆ ಜಾತಿ[೨]ಬೀತಿ[೨]ರೆ ಮುನಿದಿನಿಯಳ ಕಾಲ್ಗೆಱಗಿ ಪಲ್ಗಿಱಿವ ಕಾ[೩]ಮಿ[೩]ಜನವದನದೊಡನೆ ದಾಡಿಮಂ ಬಿಱಿಯೆ, ಪಥಿಕರ ಮುಖದೊಡನರನೇಱಿಲ್ ಪಣ್ತು ಕಳ್ತಲಿಸೆ, ಕೊಳದ ಜಳಂಗಳೊಡನೆ ತಿಳಿವೆಳ್ದಿಂಗಳುಜ್ವಳಿ[೪]ಸೆ[೪], ವಿರಹಿಸಂತಾಪದೊಡನೆ ತಪನದ್ಯುತಿ ಕಡುವಿಸುಪುದಳೆದು ವಿಜೃಂಭಿಸೆ ಬಂದ ಭುವನಜನಮನೋಜ್ಞಮಾದ ಮಧುಮಾಸದಲ್ಲಿ—

ಅಳಿಮುಳಿಸೆಂಬ ಪಣ್ಣೆಲೆ ಕಳಲ್ದುದು ಸದ್ರತಿಯುತ್ಸವಾಂಕುರಂ
ಮೊಳೆತುದು ರಾಗಮೆಂಬ ತಳಿರೊತ್ತಿದುದುನ್ಮದಕುಟ್ಮಳಾಳಿ ಸಂ
ಗಳಿಸಿದುದಲ್ಲಿ ಮೋಹಕುಸುಮಂ ಪೊಸತಾಗಲರ್ದತ್ತು ಸಂಗಸ
ತ್ಫಳಮುಮರ್ದತ್ತು ಕಾದಲಬನಂಗಳೊಳೆಯ್ದೆ ಮನೋಜಮಾರುತಂ ॥೨೩॥

॥ವ॥ ಅದಲ್ಲದೆಯುಮಲ್ಲಿ—

೧ ಳಾ (ಮೂ) ೨ ಬಿತ್ತಿ (ಕ) ೩ ಮಿನೀ (ರಿ, ಮೂ) ೪ ಸಿ (ಕ)

ಕೊನರನೆ ಕೊಕ್ಕಿನಿಂ ಸೆಳೆದು ಖಂಡಿಸಿ ಸೋರ್ವ ರಸಪ್ರವಾಹಮಂ
ಮನವೊಸೆದೀಂಟಿ ಗಂಟಲೊಳೆ ನುಣ್ದನಿ ಪೊಣ್ಮೆ ವಿಯೋಗಿವೀಥಿಜೀ
ವನಮದು ಕಂಪನಂಗೊಳೆ ಪುಗಿಲ್ ಪುಗಿಲೆಂಬ ಪಿಕಸ್ವನಂಗಳಂ
ಮನಸಿಜನೊಲ್ದು ಕೇಳ್ದು ಭುಜವೊಯ್ದು ಬೆರಲ್ಮಿಡಿದಾ ವಸಂತನಂ ॥೭೪॥

ಪೊಗಳ್ದಿಂದಂ ಚತುರಂಗಸೈನ್ಯಮನಿತಂ ನೀಂ ಕೂಡು,ನೀಡಿತ್ತ ಮೂ
ಜಗಮಂ ಮೋಹಿಪ ಪುಷ್ಪಚಾಪಸುಮನೋಬಾಣಂಗಳಂ ಕೈಗೆ,ಯೋ
ಗಿಗಣಂ ಮಾರ್ಮಲೆತಿರ್ಪುದೆತ್ತ ಬಿಡದತ್ತಲ್ಪೋಪಮೇಳ್ಕೆಂದು ಸಂ
ಪಗೆಜೋಡಂ ಮಿಗೆ ತೊಟ್ಟು ದಿಗ್ವಿಜಯಯಾತ್ರಾರಂಭಮಂ ¹ತಾಳ್ದಿದಂ¹ ॥೭೫॥

॥ವ॥ ಆಗಳ್—

ವಸಂತವನಪಾಲಕಂ ತಳಿರ ತೋರಣಶ್ರೇಣಿಯಿಂ
ರಸಂಬಿಡಿದ ಪಣ್ಗಳಿಂದಲರ್ದ ಪುಷ್ಪಗುಚ್ಛಂಗಳಿಂ
ಮುಸುಂಕಿ ವನಮೆಲ್ಲಮಂ ಕರೆದು ಕಾಮನಂ ಪ್ರೇಮದಿಂ
ಜಸಂಬಡೆದ ಬಾಣಮಂ ಪಿಡಿದು ಕಾಣ್ಕೆಯಂ ನೀಡಿದಂ ॥೭೬॥

॥ವ॥ ಇಂತು ವಿಶ್ವಜನಮನಮಂ ಬನಮನೊರ್ಮೆ ಸೂಂಪೇಱಿಸುತ್ತಂ ಬಂದ ಬಸಂತಮಾಸದೊಳೊಂದು ವಾಸರದುಷಃಕಾಲದೊಳುಮಾಕಾಂತನಂ ಪೂಜಿಸಿದ ನಂತರಂ—

ರಮಣೀಸಸ್ಮೇರವಕ್ತ್ರಾಂಬುರುಹವಿಸರದೊಳ್ಕಾಮಿನೀದೋರ್ಲತಾವಿ
ಭ್ರಮದೊಳ್ಕಾಂತಾಕಚಾಳಿಪ್ರಚಯದೊಳಬಳಾಂಘ್ರಿಪ್ರವಾಳೌಘದೊಳ್ಚಂ
ದ್ರಮುಖೀಸಂಗೀತಚಂಚತ್ಪಿಕಕಳರುತಿಯೊಳ್ಮಾನಿನೀಮಂದಹಾಸೋ
ದ್ಗಮದೊಳ್ಮಾನಿರ್ದನಾಸ್ಥಾನದೊಳತುಳವನಸ್ಪರ್ಧಿಯೊಳ್ಭಾವಸಂತಂ ॥೭೭॥

ಕುಂದಮಂದಹಾಸಮಂಜುಳಾಂಬುಜಪ್ರಭಾನನೇ
ಚಂದನೇಂದುಗೌರಶಂಕರಾಂಕಪೀಠಿಕಾಶ್ರಿತೇ
ನಂದಿ²ತೇ²ಂದಿರಾದಿಶಕ್ತಿವಂದಿತಾಂಘ್ರಿಪಂಕಜೇ
ಚಂದಮೊಂದೆ ರಕ್ಷಿಸೆನ್ನನಿಂದು ಸರ್ವಮಂಗಳೇ ॥೭೮॥

---

೧ ತಳೆದಂ (ಕ), ತಾಳಿದಂ (ಮೂ) ೨ ತಿ (ಧಾ)

ಇದು ವಿನಮದಮರವರಮಕುಟತಟಘಟಿತಮಣಿಗಣಮಹಾಪ್ರಭಾಪಟಲಪರಿವೃತ
ಪರಶಿವಶ್ರೀಪಾದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾಚಂಚಚ್ಚಕೋರಾ-
ಯಮಾನಸರಸಜನಮಾನಿತೋಭಯಕವಿತಾವಿಶಾರದ ಶ್ರೀ ಷಡಕ್ಷರಿದೇವ
ವಿರಚಿತಮಪ್ಪ ರಾಜಶೇಖರವಿಳಾಸವಿಪುಳಪ್ರಬಂಧದೊಳ್
ಹೇಮಂತವಸಂತಋತುವರ್ಣನಂ
ನವಮಾಶ್ವಾಸಂ ಸಂಪೂರ್ಣಂ

ಮಂಗಳಮಹಾ
ಶ್ರೀ ಶ್ರೀ ಶ್ರೀ

ದಶಮಾಶ್ವಾಸಂ

ಶ್ರೀಗಿರಿರಾಜಸುತಾಸುಖ
ಸಾಗರರಾಕಾಶಶಾಂಕನಕಳಂಕನಶೇ
ಷಾಗಮನುತನಭವಂ ಬಿಡ
ದೀಗೆಮಗೆ ನಿಜಾಂಘ್ರಿಭಕ್ತಿಯಂ ಶಿವಲಿಂಗಂ ॥೧॥

॥ ವ ॥ ಅಂತುಮಾ ಯುವರಾಜಂ ರಾಜಿಸುತ್ತಿರ್ಪಿನಮೊರ್ವಂ ದ್ವಾರಪಾಲನಿವಾರಿತಂ ವೇತ್ರಧರನಿವೇದಿತನಾ ಮಹಾಸ್ಥಾನಮಂ ಪೊಕ್ಕು ಮೈಯಿಕ್ಕಿ ಕೈಯಂ ಮುಗಿದು ನಿಂದು—

ವನಪಾಲಂ ಕಾಣ್ಕೆಗೈದಂ ವಿಚಕಿಲಧರಲಂ ಪಚ್ಚೆಯಂ ಬಾಳೆವಣ್ಣೊ
ಳ್ಗೊನೆಯಂ ದಾಳಿಂಬವಣ್ಣಂ ಸುರಯಿಯನುರುಚಾಂಪೇಯಮಂ ಚೈತ್ರದೂತೀ
ಘನಗುಚ್ಛವ್ರಾತಮಂ ಪಾಟಳಿಯನೆಸೆವಶೋಕಪ್ರಸೂನಾಳಿಯಂ ಮಾಂ
ಗೊನರಂ [1]ಮಾ[1]ಧೂಫಳಶ್ರೇಣಿಯನರೆವಿಜೃಂಭೋಜಮಂ ಕೂರ್ಮೆಯಿಂದಂ ॥೨॥

॥ ವ ॥ ಅಂತಿತ್ತು [2]ಸಂತಸಂ[2]ಮಿಗೆ—

ಮುಗುಳ ತೊಡಂಬೆ ಮಾ[3]ಧ[3]ವಿಗೆ ಮಾಮರದೊಳ್ ಕಳಿಕ್ಕಾಳಿ ಚೆಲ್ವಮ
ಲ್ಲಿಗೆಗೆ ಪೊದಳ್ದ ಪೂಗುಡಿ ಪಯೋಜಿನಿಗುಳ್ಳರಲಿಂಪುವೆತ್ತ ಸಂ
ಪಗೆಗಲರ್ಜೊಂಪಮುದ್ಗಮದಮಂಜರಿ ಪಾಟಳಿಗಾಗೆ [4]ಬಂದನಿಂ
ದ[4]ಗಣಿತಕೋಕಿಳಾಳಿಕುಳಸಂಮದಕಾರಿ ಮನೋಜ್ಞಮಾಧವಂ ॥೩॥

ಎಳೆದಳಿರಿಂದ್ರಗೋಪಮಳಿಮಾಳಿಕೆ ನೀಲದ ಮಾಲೆ, ಮಲ್ಲಿಕಾ
ಸುಳಳಿತಕುಟ್ಮಳಸ್ತಬಕಮೊಪ್ಪುವ ಮುತ್ತಿನ ಕುಚ್ಚು, ಕೀರಮಂ
ಡಳಿಯ ಮುಖಂ ಪ್ರವಾಳಮದಿರ್ಮೂರ್ತ್ತಿಯ ಪೂಗುಡಿ ಚಾಮರಂ,ಸಮು
ಜ್ವಳಿಸಿರೆ ಚೈತ್ರವಾರ್ಧಿಯ ವಹಿತ್ರಮಿದೆಂದೆನಿಸಿತ್ತು ನಂದನಂ ॥೪॥

---

೧ ಮಧು (ಕ) ೨ ಸಂತಮಿಗೆ (ಮೂ) ೩ ದ (ಕ) ೪ ಬಂದನಿಂದರ (ಕ) ಬಂದುನಿಂದ (ರಿ)

ಆ ನಂದನಮಂ ವಿಜಿತಮ
ಹಾನಂದನಮಂ ನಿಜಾಂತರಾಳಾಶ್ರಿತಲೋ
ಕಾನಂದನಮಂ ತೋಷಿತ
ಮಾನಂದನಮಂ ನಿರೀಕ್ಷಿಸಲ್ಕಡೆ ನೃಪತೀ ॥೫॥

॥ವ॥ ಎಂದು ಬಿನ್ನಪಂಗೆಯ್ದ ತೋಟವಾಳಂಗೆ ಪಸಾಯಮನಿತ್ತು ಪಟ್ಟವಣೆಯಿಂ ದೇಳ್ವೋಲಗಮಂ ಪಂರಿಯಿಸಿ ವನಕೇಳೀಲೋಲಮಾನಸಂ ಮಾನವೇಶ್ವರಂ ಮಹೋತ್ಸವಂಬೆರಸಂತಃಪುರಕೇಳ್ತಂದು ಸರ್ವಮಂಗಳಾಮಹಾದೇವಿಯಿರ್ಪ ಮಣಿ-ಮಯಮಂದಿರದೊಳಗನೆ ಪೊಕ್ಕು ನಿರೀಕ್ಷಿಪಾಗಳ್—

ತೊಳಗುವ ಭೂಷಣಪ್ರಭೆ,ಮುಖೇಂದುಲಸದ್ಯುತಿ,ಕಾಯಕಾಂತಿ ಕಂ
ಗೊಳಿಸೆ,ಕರಾಗ್ರಕಂಕಣಝಣತ್ಕೃತಿ ಪೊಣ್ಮೆ ಮೃಗಾಕ್ಷಿಯೊರ್ವಳು
ಜ್ವಳತರಮಾದ ಪೊಂದೆರೆಯನೋಸರಿಸುತ್ತಿರೆ ಕಂಡನಿಂದುಮಂ
ಡಳಮುಖಿಯಂ ಮನೋರಮೆಯನಾ ನೃಪರೂಪಿನ ಮೀನಕೇತನಂ ॥೬॥

॥ವ॥ ಆ ಪ್ರಸ್ತಾವದೊಳ್—

ಉಲಿಯೆ ಕಲಕಾಂಚಿ ಮುಡಿಯಿಂ
ದಲರುಗೆ ಬಡನಡು ಬಳುಂಕೆ ಪೊಡರೆ ನಿತಂಬಂ
ನೆಲೆಮೊಲೆಗಳಲುಗೆ ಬಿಡದೇ
ಳ್ವ ಲತಾಂಗಿಯ ಕೈಯನೊಯ್ಯನರಸಂ ಪಿಡಿದಂ ॥೭॥

॥ವ॥ ಅಂತು ಪಿಡಿದೇಳಲೀಯದೆ ಮಣಿಮಂಚದೊಳವಳ್ಗೊಡಿ ಗಾಡಿಯಿಂ ಕುಳ್ಳಿರ್ದು—

ಕುರುಳಂ ಕೂರುಗುರಿಂ ನೇ
ವರಿಸುತೆ ಮಣಿಹಾರಮಂ ಕರಾಬ್ಜದೆ ತಿರುಪು
ತ್ತರಸಿಯ ಮೊಗದಾವರೆಯಂ
ನರಪತಿ ನಡೆ ನೋಡಿ ನೇಹದಿಂದಿಂತೆಂದಂ ॥೮॥

---

೧ ರೆ (ಸ್ವೀ, ಪಾ)

ವಿನುತಮಧುಲಕ್ಷ್ಮಿ ನಿಜನಂ
ದನಾವಲೋಕನಮನೆಳಸಿ ಮಾಧವಯುತೆ ಭೋಂ
ಕನೆ ಬಂದು ನಿಂದು ಚಂದ್ರಾ
ನನೆ ನಿನ್ನಂ ಕರೆದಪಳ್ಪಿಕಸ್ವನಮಿಷದಿಂ ॥೯॥

॥ವ॥ ಅದು ಕಾರಣ[೧]ದಿಂ[೧]—

ಕಳರವಮಂ ಪಿಕಾಂಗನೆಗೆ, ಮಂಜುಮೃದೂಕ್ತಿಗಳಂ ಪೊದಳ್ದ ಪೆ
ಣ್ಗಿಳಿಗೆ, ನವೀನಯಾನಮನನೂನಮರಾಳಿಗೆ [೨]ಶಿಕ್ಷೆ[೨]ಗೆಯ್ಯಲೋ
ಪಳೆ ನಡೆ ನಂದನಕ್ಕೆ, ವನಲಕ್ಷ್ಮಿಗೆ ಕೌತುಕಮಪ್ಪಿನಂ, ನಿರಾ
ಕುಳಮೆನಗುತ್ಸವಂ ಬಳೆವಿನಂ, ಮೃಗಶಾಬವಿಲೋಲಲೋಚನೇ ॥೧೦॥

॥ವ॥ [೩]ಎ[೩]ನೆ ನಿಜವಲ್ಲಭೆಯತಿಪ್ರಸನ್ನಮಧುರತರಕಟಾಕ್ಷಪಾತದಿನುಚಿತವಚನನಿಚಯದಿನೊಡಂಬಟ್ಟುದಂ ಪ್ರಕಟಿಸಲೊಡನವಳ್ಗೂಡಿ ಗಾಡಿಯಿಂದೆಳ್ದ[೫]ನಂತರಂ ಕಾಂತಾಜನಂ[೫]ಬೆರಸು ಪೊಱಮಟ್ಟು ಚೈತ್ರೋದ್ಯಾನಕೇಳೀಪ್ರಸ್ತಾನಭೇರಿಯಂ ಪೊ[೪]ಯ್ಸ[೪]ಲೊಡಂ—

ಘನರಾಜಹಂಸಗಮನ
ಕ್ಕನುಕೂಲಮಿದೆಂದು ಗಗನದೊಡನುಸಿರ್ವವೊಲಾ
ಘನರಾಜಹಂಸಗಮನಮ
ನೆನಸುಂ ಪರ್ಬಿದುದು ಪಟಹಪಟುರವಪಟಲಂ ॥೧೧॥

॥ವ॥ ಆಗ[೬]ಳ್ ಪಣ್ಣಿ[೬]ಬಂದ ಸಿಂ[೭]ಧು[೭]ರೇಂದ್ರಮನಿಂದ್ರಾಣಿವೆರಸು ಕಾರ್ಮುಗಿಲನಾರೋಹಿಪ ಮಹೇಂದ್ರನಂತೆ ನರೇಂದ್ರಚಂದ್ರಂ ನಿಜಮನೋಹ[೮]ರೆ[೮]ಯೊಡನಾರೋಹಿಸಿ ರಾಜವೀಥಿಯೊಳ್ಪರ್ಪಾಗಳ್—

೧ ದಿಂದಂ (ರಿ) ೨ ಶೀಕ್ಸೆ (ಮೂ) ೩ ಯೆ (ರಿ, ಧಾ) ೪ ಡಯಿಸ (ರಿ), ಯಿಸ (ಮೂ) ೫ ನಂತಕಾಂತಾಜನಂ (ಕ, ಸ್ವೀ, ಪಾ) ೬ ಳಣ್ಣೆ (ಕ) ೭ ದು (ಧಾ) ೮ ರಿ (ರಿ)

ಇದು ಮಧುಮಿತ್ರಮತ್ತಗಜರಾಜಿಯೊ ನೋಡಿದು ಪುಷ್ಪಚಾಪಸೌ
ಖ್ಯದ ಸುರವಲ್ಲರೀತತಿಯೊ ಭಾವಿಪೊಡಿಂತಿದು ಕಾಮತತ್ವಸಾ
ರದ ನವಕೋಶರಾಶಿಯೊ ವಿಚಾರಿಪೊಡಿಂತಿದು ದರ್ಪಕಪ್ರತಾ
ಪದ ಪರಿಜೊಂದು ಸಂದಣೆಯೊ ಪೇಳೆನೆ ಬಂದುದು ಭಾಮಿನೀಜನಂ ॥೧೨॥

ಪಿಡಿಗಳನೇಱಿ ಕೆಲಂಬ
ರ್ಮಡದಿಯರರೆಬರ್ಸುಖಾಸನಂಗಳೊಳೆ ಕೆಲ
ರ್ಪಿಡಿಗುದುರೆಗಳೊಳ್ ಪೆಱವ
ರ್ಪೊಡವಿಯೊಳಡಿಯಿಟ್ಟು ತಳರ್ದರತಿಸಂಭ್ರಮದಿಂ ॥೧೩॥

ಪರಿಕಿಪುದೀಗಳೀ ಗಜದ ಕುಂಭದ ಚೆಲ್ವಮನೆನ್ನದೊಂದು ಭಾ
ಸುರತೆಯನೆಂದು ತದ್ಗುರುಪಯೋಧರಮೆಳ್ಚರಿಪಂತೆ ಬೆನ್ನನೊ
ತ್ತೆ ರುಚಿರತನ್ಮುಖೇಂದುವನಭೀಕ್ಷಿಸಲೈದಿದ ಚಂದ್ರಬಿಂಬದಂ
ತಿರೆ ಧವಳಾತಪತ್ರಮಿಭದಗ್ರದೆ ಬಂದನವಂ ವಧೂಯುತಂ ॥೧೪॥

॥ವ॥ [೧]ಅಂತನಂತ[೧]ಸಂಭ್ರಮಮಿಂಬುವಡೆಯೆ ಕುಂಭಿನೀಕಾಂತನಾ ವನೋ-ಪಕಂಠಮಂ ಮುಟ್ಟಿವರೆ ಕೊಟ್ಟನೆ ಕಟ್ಟಿದಿರೊಳ್—

ಅಳಿಕುಳಪಕ್ಷತಿಕ್ಷಪಿತಪದ್ಮಪರಾಗಪರಾಗಮುದ್ಧಕೋ
ಕಿಳಕಳನಾದಬೃಂಹಿತಮಮಂದಮರಂದಮದಾಂಬು ತತ್ಸರ
ಸ್ಥಳಜಳಕೇಳಿಗೆಯ್ದು ಪೊಱಮಟ್ಟುದಿದೆಂಬುದನಿಂಬುಕೈದು ಕೋ
ಮಳಮಳಯಾನಿಳಾಂಗಜಗಜಂ ಪರಿದತ್ತಿದಿರೊಳ್ಮಹೀಶನಾ ॥೧೫॥

ಅದಱಿಂ ಮನದೆ[೨]ಗೊಂಡು ಮದಗಜಸ್ಕಂಧದಿನಿಳಿತಂದು ಫಳಕುಸುಮಪರಿರ-ಚಿತಚಾರುತರವಾರಣಾನ್ವಿತ ತದುದ್ಯಾನಪ್ರತೋಳಿಕಾದ್ವಾರಮಂ ಪೊಕ್ಕು ಸವ್ಯಪಾರ್ಶ್ವಗಸರ್ವಮಂಗಳಾಪಾಂಗಸಂಗತನುಂ, ವನವಿಹರಣಸಮುಚಿತಪರಿಮಿತಪರಿಜನಾವೃತನುಂ ವನಪಾಲಪುರಃಪ್ರದರ್ಶಿತಾನಂತತರುಲತಾಸಂದೋಹಸಂದರ್ಶನಾನಂದ-ಕಂದಳಿತಹೃದಯಾರವಿಂದನುಂ ನಿಜವದನತನುಸಹಜಸೌರಭ್ಯಸಮಾಕೃಷ್ಟಮದಳಿ[೩]ವ-ದಳಿ[೩]ಪರಿಸರಣಕರಣ[೪]ಚರಣ[೪] [೫]ಚರ ಕರ[೫] ಪರಿವೀಜ್ಯಮಾನಧವಳಚಾಮರಜನಿ-

---

೧ ಅನಂತ (ಧಾ) ೨ ಮನದಿ (ಮೂ), ಂತುನದೆ (ರಿ) ೩ ವಳಿದ (ಮೂ), ವನಳಿತ (ರಿ) ೪ ಚಣ (ರಿ, ಕ) ೫ ಕಠಚರೆ (ಮೂ)

ತಪವನ[೧]ಪರಿಪತಿ[೧]ತಾನೇಕ[೨]ಸ[೨]ರಜಃಕುಸುಮರಸವಿಸರ ಕರ್ದಮಿತಧರಣೀಭಾಗನುಂ ಸರ್ವಸಚಿವಪ್ರಸಾರಿತಕರಪಲ್ಲವನ್ಯಸ್ತಹಸ್ತಕಮಳನುಂ ಲೀಲಾವಲೋಕನಸಾಂದ್ರ-ಚಂದ್ರಿಕಾನಿರಸ್ತನಿಬಿಡತರತರುಪಲ್ಲವಪ್ರಕರ[೩]ಯವ[೩]ನಿಕಾಂತರ್ಗತತತತಮಸ್ತೋಮನುಮಾಗಿ ನಡೆತರ್ಪಾಗಳ್—

ನಗೆಮೊಗಮಲರ್ದಂಬುಜಮಂ
ನಗೆ ನಗೆಗಣ್ಣಗೆ ನವೀನದಳಿತೋತ್ಪಳಮಂ
ನಗೆ ಬೆಳ್ದಿಂಗಳ ಸಿರಿಯಂ
ನಗೆ ನಡೆತಂದಳ್ನರೇಂದ್ರವಧು ನಂದನದೊಳ್ ॥೧೬॥

॥ವ॥ ಮ[೪]ತ್ತಂ[೪]—

ಮಣಿಯನೆ [೫]ಕಾ[೫]ತಕಲ್ಪಲತೆ ಸಿಂಜಿನಿಯಂ ತೆಗೆದಿಟ್ಟ ಪುಷ್ಪಮಾ
ರ್ಗಣನ ಧನುಃಶಲಾಕೆ ಮುಗುಳೇಱಿದ ಮಲ್ಲಿಗೆ ಸುತ್ತುತಂ ನಭೋ
ಮಣಿರುಚಿಯಂ ತೆಱಂಬೊಳೆವ ಪದ್ಮಿನಿ ತಾನೆನಿಸುತ್ತೆ ತಾಳ್ದ ಸ
ನ್ಮಣಿಪಿಣಿಲಚ್ಚಮುತ್ತು ಕನಕಾಂಬರದಿಂ ಕಮಳಾಕ್ಷಿ ತೋಱಿದಳ್ ॥೧೭॥

॥ವ॥ ಇಂತುವೊಪ್ಪಿ ಬರ್ಪ ನಿಜವಲ್ಲಭೆವೆರಸು ಬರೆವರೆ—

ತಳಿರ್ಗಳನಾಂತು ನಿಂದಸುಗೆ ಕುಟ್ಮಳಪಂಜ್ತಿ ಪೊದಳ್ದ ಚಂಪಕಂ
ವಿಳಸಿತಮಾದ ಪೂಗುಡಿಗಳಿಂದೆಡೆಗೊಂಡದಿರ್ಗಂತಿ ಕಾಯ್ಗಳಿಂ
ತಳೆದು ನಿಲುಂಬಿ ನಿಂದ ಪೊಸತೆಂಗುಫಳಂಗಳ ಬಿಣ್ಪನಾಳ್ದು ಸಂ
ಗಳಿಸಿದ ಮಾವು[೬]ತೀವಿದ ಬನಂ ಬಗೆ[೬]ಗೊಂಡಿರೆ ಕಂಡನಾ ನೃಪಂ ॥೧೮॥

ಸರಯಿಯ ಸೊರ್ಕುಗಂಪು ಪೊಸಸಂಪಗೆಯೊಳ್ಪಿಸುಗಂಪು ತೋರ್ಪ ಪಾ
ದರಿಗಳ ತಣ್ಪುಗಂಪು ಸರಸೀರುಹದೊಳ್ತನಿಗಂಪು ಮಲ್ಲಿಕೋ
ತ್ಕರದ ಬೆಡಂಗುಗಂಪು ಮಧುದೂತಿಯ ತಳ್ತನಿಗಂಪು ಚೂತವ
ಲ್ಲರಿಯಲರಚ್ಚಗಂಪು ಬಗೆಗೊಂಡುದು ತದ್ವನದೊಳ್ ನರೇಂದ್ರನಾ ॥೧೯॥

---

೧ ಪತಿ (ಧಾ) ೨ ಸು (ಧಾ) ೩ ಯಮು (ಧಾ), ವ (ಮೂ) ೪ ತ್ತಂತುಮಲ್ಲದೆ (ಮೂ) ೫ ಕಾಂ (ಮೂ) ೬ ತೀವಿ ಬನಬಂಗೆ (ಕ)

ಎಲರ[೧]ಲೆ[೧]ಯೆ ನೆಗೆದು[೨]ಬಾ[೨]ಗೊಲೆ
[೩]ದ[೩]ಲಗೊರ್ಗಂಚಲ್ ಧವಳಚಾಮರಕ್ಕೆಣೆವರೆ ಸ
ಲ್ಲಲಿತಮಧುದೂತಿ ತಾನಿದು
ಗೆಲೆವಂದುದು ಚೈತ್ರಚಾಮರಗ್ರಾಹಿಣಿಯಂ ॥೨೦॥

॥ವ॥ ಎಂದರಸಿಯ ಕೆಳದಿಯಪ್ಪ ಕಳಾರಮೆ ನುಡಿಯೆ ನೋಡುತಂ ನಡೆಯೆ ಸೌಂದರ್ಯಶಾರದೆ[೪]ಯೆಂಬಳಿಂತೆಂದಳ್[೪]—

ಮಲ್ಲಿಗೆಯ ಮು[೫]ಕು[೫]ಳಕುಳಮಿಡಿ
ದೆಲ್ಲೆಡೆಯೊಳ್ ತೋಱೆ ಮಿಳಿರ್ದು ಬಳಸಿರೆ ವಿಳಸ
ತ್ಪಲ್ಲವತತಿ ಮೆಱೆದುದು ರತಿ
ವಲ್ಲಭಮುಕ್ತಾತಪತ್ರಮೆನೆ ತರುಣಾಮ್ರಂ ॥೨೧॥

॥ವ॥ ಮ[೬]ತ್ತಂ[೬]—

ಕಾಮನ ಸಾಮಜಮಿದು ಮಧು
ಭೂಮೀಶನ ಕೋಶಮತುಳವಿಚಕಿಲಲತಿಕಾ
ಕಾಮಿನಿಯರಸಂ ಮಾಮರ
ಮೀ ಮರಮನ್ಯಕ್ಷಿತಿಜಮೇಂ ಮಾಮರ[೭]ನೇ[೭] ॥೨೨॥

॥ವ॥ ಅವಳ ಜಾ[೮]ಣ್ಮಾತು[೮]ಗೇಳ್ದು ಚೆನ್ನಾದುದೆಂದು ಮೆಚ್ಚುತಂ ಬರ್ಪಲ್ಲಿ—

ಪ್ರಿಯದಿಂದಪ್ಪಿರ್ದಮಲ್ಲೀವಧುವ ತನುಸುಖಕ್ಕೊಲ್ದು ಮೈಯಿತ್ತು ಚೂತ
ಪ್ರಿಯನಾಗಳ್ಕೋರಕಂ ಪೊಂಪುಳಿಯೆನಿಸೆ ಕರಂ ಕಂಪನಂ ಪೊಣ್ಮೆ ಘರ್ಮೋ
ದಯತೋಯಂಬೊಲ್ಮರಂದಂ ಸುರಿಯೆ ತವೆ ತದೀಯಾಳಿಮಾಲಾಲಕಶ್ರೇ
ಣಿಯನಾದಂತಿರ್ದುವಂತೊಪ್ಪಿ[೯]ದು[೯] ದಲೆವ ತಳಿರ್ತಳ್ತಿರಲ್ಪಾಣಿಯಿಂದಂ ॥೨೩॥

---

೧ ಲ (ಮೂ) ೨ ಬಾಂ (ಧಾ) ೩ ವೆ (ಮೂ) ೪ ಯಿಂತೆಂದಳ್ (ರಿ) ೫ ಗು (ರಿ) ೬ ತ್ತಂತುಮಲ್ಲದೆಯುಂ (ಮೂ) ೭ ಮೇ (ಮೂ) ೮ ಣ್ಮೆ (ರಿ, ಕ) ೯ ರ್ದು (ಮೂ).

॥ವ॥ ಆದಂ ನಿಂದು ನೋಳ್ಪರಸಂಗೆ ನ[೧]ರ್ಮ[೧]ಸಚಿವನಿಂತೆಂದಂ—

ಅಳಿ ನೀಲಂ ಮಿಡಿ ಪಚ್ಚೆ ಕೀರಮುಖಮುದ್ಯತ್ಪದ್ಮರಾಗಂ ಕೊನ
ರ್ವಿಳಸದ್ವಿದ್ರುಮಮಲ್ಲಿ ತಳ್ತೆಸೆವ ಮಲ್ಲೀಕುಟ್ಮಳಂ ಮುತ್ತು ಚೆಂ
ದಳಿರಂದಂಬಡೆದಿರ್ದ ಪಟ್ಟೆಯೆನೆ ಚೈತ್ರಂ ಪಂಚರತ್ನಂಗಳಿಂ
ಕೆಳೆಯಂ ಪಂಚಶರಂಗೆ ನಿರ್ಮಿಸಿದ ಗೂಡಾರಂಬೊಲೀ ಮಾಮರಂ ॥೨೪॥

॥ವ॥ ಮೆಱೆದಪುದೆಂಬ ನುಡಿಯನವಧರಿಸಿ ನಡೆವಾಗಳ್ [೨]ಮತ್ತೊಂದು[೨] ಸುಮಮಿಳಿತರಸಾಲರಸಾರುಹದ ಕೆಳಗೆ—

ಅರಲಪರಾಗಮೆಂಬ ಪೊಸಬೇಳ್ವೆಯ ಬೂದಿಯನಿಟ್ಟು ಮಲ್ಲಿಕಾ
ತರುಣಿಯ ಭೃಂಗನೀಲಮಣಿಮಾಲೆಯನೊಯ್ವೆಲರೆಂಬ ಚೋರನಂ
ಪರಭೃತನಂದು ಕಂಡು ಮಿಗೆ ಕೂಗೆ ಭಯಂಬಡೆದೇಳ್ವ ಕಣ್ಣ ನೀ
ರ್ಸುರಿವವೊಲಾಕೆ ತದ್ವಿಕಚಪುಷ್ಪಗಳನ್ಮಧುಬಿಂದು ತೋಱುಗುಂ ॥೨೫॥

॥ವ॥ ಅದಲ್ಲದೆಯುಮವಱ ಕೆಲದಲ್ಲಿ—

ತಳಿಗೋರ್ಣಂಬಿಂ ಮೇಗಣ್ಪೊಗೆ
ವಳಿಮಾಲೆ ಮನೋಜ್ಞಮಾದುದಾಮ್ರಂ ಮಲ್ಲೀ
ಲಳನೆಯೊಡವೆರೆದೆಲರನುಱೆ
ಮುಳಿದಿಱಿಯಲ್ ಜಡಿದ ಕೈದುವೆನೆ ಕರತಳದಿಂ ॥೨೬॥

॥ವ॥ ಆದಂ ನಿರೀಕ್ಷಿಪರ[೩]ಸಂಗೆ[೩] ದೇವಿ ನುಡಿದಪಳೆಂದು ಕಳಾರಮೆಯಿಂ-ತೆಂದಳ್—

ಎಲರಲುಗಿದೊಡಲಲ[೪]ರ್ವು[೪]ಡಿ ತ
ನ್ನಲರ್ಗಣ್ಣೊಳ್ಸೂಸೆ ಮಲ್ಲಿಕಾ[೫]ವ[೫]ಧು ಬಂ[೬]ದುಂ[೬]
ಬ[೭]ಲಿ[೭]ವೂದುವಂತೆಸೆಯೆ ಬಾ
ಷ್ಪಲವಂ ಸುರಿವಂತೆ ಮಧುಕಣಂಬಿಡೆ ಮೆಱೆದಳ್ ॥೨೭॥

೧ ವ್ಯ (ಧಾ) ೨ ಳ್ ಮುಂದೊಂದು (ಮೂ) ಳತ್ತೊಂದು (ಕ) ೩ ನೃಪಂಗೆ (ಕೆ, ಧಾ) ೪ ರ್ಮು (ಧಾ) ೫ ಮ (ರಿ) ೬ ಡುಂ (ಧಾ, ರಿ) ೭ ಳಿ (ಮೂ)

॥ವ॥ ಎಂಬುದುಮದಂ[1] ಮೆಚ್ಚುತಿರ್ಪಿನಂ ಪೆಱತೊಂದು ಮಲ್ಲಿಕಾವಲ್ಲಿಯಂ ತೋಱಿ ತಾನುಮಿಂತೆಂದಳ್—

ಅಳಿ[2]ವಿಂಡಿಂಗಲರ್ವಂಡ[2]ನಲ್ಲಿ ಗಿಳಿಗಳ್ಗಿಂಬಾದ ಪಣ್ಣಂ ಪಿಕಾ
ವಳಿಗಾ ಕೋರಕಮಂ ಪ್ರಸೂನವಿಳಸತ್ಸೌರಭ್ಯಮಂ ಮಾರುತಂ
ಗೆಳೆಮಾವಿತ್ತುದಿದಕ್ಕೆ ಮಿಕ್ಕ ಮರನೊಂದುಂ ಸಾಟಿಯಲ್ತೆಂದು ಮಂ
ಜುಳಮಲ್ಲೀವಧು ಬಣ್ಣಿಪಳ್ ಪ್ರಗತಭೃಂಗೀನಿಸ್ವನವ್ಯಾಜದಿಂ ॥೨೮॥

॥ವ॥ ಎನೆ ಚೆನ್ನಾದುದೆಂದು ಮುಂದಣ್ಗೆ ನಡೆತಂದೊಂದು ರಸಾಲಸರಳಶಾಖಾಗ್ರದೊಳ್ ತನಿವಣ್ಣಂ ಮನದನ್ನಳೊಡನೆ ಸವಿವರಗಿಳಿಯಂ ನಿಜಾಪಾಂಗಪಲ್ಲವದಿಂ ನಲ್ಲಳ್ಗೆ ತೋಱಿ—

ಎಳೆದಳಿರಂ ಕರ್ದುಂಕಿ ಕೆನರೊಂದಿದ ತದ್ರಸಮೀಂಟಿದತ್ತು ಕೋ
ಕಿಳನಳಿಧೂಳಿಯೊಳ್ಬೆರೆದ ಪುಷ್ಪರಸಂಗಳನುಂಡುದಿಲ್ಲಿ ಕೇ
ಳ್ಗಿಳಿಯವೊಲೇನಿವೆಲ್ಲವಿನಿವಣ್ಣನಿದಂ ಸವಿ[3]ದ[3]ಪ್ಪವೇಱಿನು
ತ್ತೆಳಸಿ ಮನೋಜನಿಟ್ಟನಿದು ಪಂಡಿತವಕ್ಕಿಯೆನುತ್ತೆ ನಾಮಮಂ ॥೨೯॥

॥ವ॥ ಎಂದದಱ ಪರಿಸರದೊಳ್ಸೊಂಪುವಡೆದಲರ್ದ ಚಂಪಕಮಂ ತೋಱಿ—

ಪಾಱುವ ಪಾಯ್ವ ಸಂದಣಿಪ ಸುತ್ತುವ ಪತ್ತುವ ಭೋಂಕನೆಯ್ದುವಿಂ
ಪೇಱಿದ ಪೂದೊಡಂಬೆಯನೆ ನೋಡುವ ಪಾಡುವ ಜೋಲ್ವ ಬೀಳ್ವ ಬಾ
ಯಾಱುವ ಮತ್ತೆ ಮತ್ತೆ ಮಧುವೀಂಟುವ ಸೊಕ್ಕುವಳಿಪ್ರತಾನಮಂ
ಜಾಱಿಸಿದತ್ತು ಸಂಪಗೆ ಮಧುಪ್ರಿಯರುಜ್ವಲಸೇವ್ಯರಕ್ಕುಮೋ ॥೩೦॥

॥ವ॥ ಎಂದು ಚತುರಜನಚಕ್ರೇಶ್ವರಂ ನುಡಿದು ನಡೆವಾಗಳದಱ ಮುಗುಳಂ ಬಗೆದು ಭಾವಿಸಿ, ನಿಜಸಖಿಗೆ ದೇವಿಯಿಂತೆಂದಳ್—

ಅಳಿನೀಸಿಂಜಿನಿಗಿದು ತಾ
ನಳವಡದೆಂದುಳಿದು ಕಳೆದು ಚಂಪಕದಲರಂ
ಕೆಳದಿ ಮನೋಜಂ ತಳ್ವದೆ
ತಳೆದಂ ಮಿಕ್ಕಲರತಳಿರಶರಸಮುದಯಮಂ ॥೩೧॥

---

೧ ಕೆ (ರಿ) ೨ ವಿಂಡಿಗಿಳಿಗಲರ್ವಂಡ (ಮೂ) ವಿಂಡಿಗಿಳಿಗಲರ್ವಂಡ (ಧಾ) ೩ ದಿ (ಧಾ)

॥ವ॥ ಎಂಬ ನುಡಿಯಂ ಕೇಳ್ದು ಮೆಚ್ಚುತಲ್ಲಿಂ ತಳರ್ದು ಮಧುಲಕ್ಷ್ಮೀಮಧುರತರವಿಳಾಸಮಂ ಬಗೆಗೊಂಡು ಪೊಗಳುತಂ ಬರೆವರೆ ವನಮಧ್ಯದ ತೆಱಂಬೊಳೆವ ತೆಱಪಿನೊಳಳವಟ್ಟ ಕೊಳವೇರ್ಗಳ ಕೇರ್ಗಳೊಳಗೆ ತಮಾಲದೆಳೆದಳಿರಂ ಕೊಱೆದು ಚಿತ್ರಪತ್ರಮಪ್ಪಂತೆ ಪತ್ತಿಸಿ ನಟ್ಟ ಪೊಂಬಾಳೆಯ ಬಾಳ್ಗಂಬಂಗಳಿಂ, ಸೋಗೆವೆರಸಿದ ಪುಂಡ್ರೇಕ್ಷುದಂಡಗಳನಮರ್ಚಿ ಬಾಳವೇರ್ಗಳಿಂ ಬಿಗಿದೆಡೆದೆಡೆಯೊಳ್ ಸಂಪಗೆಯ ಬಿಱಿಮುಗುಳ್ಗಳಂ ತೆತ್ತಿಸೆ ನಿಬಿಡಮೆನಿಸಿ ನಿರ್ಮಿರ್ಚಿದ ಪೊಂಗೇದಗೆನುಣ್ಗಱಿಯ ಬಲ್ಜಂತೆಗಳಿಂ, ಚಂದನರಸಂಗಳಿಂ ತೊಯ್ದೆಳೆಯ ದವನದ ಮೇಲ್ವೊದಕೆಯಿಂದೊಳಗೆ ಬಾಳೆಲೆಯ ಪಲಗೆಗಳ ಪರಿಸರದೊಳೊಂದಿ ಸಂದುವಿಡದಂತೆ ತರಂಗೊಳಿಸಿ ರಚಿಸಿದ ಕ[೧]ರ್ಣಿ[೧]ಕಾರದ ಪಲಗೆಗಟ್ಟಿನೆಡೆಯೆಡೆಯೊಳಳವಟ್ಟ ಎಸಳ್ಗಳಂ ನೆಗಪಿ ಕೀಲಿಸಿದ ಪೊಂದಾವರೆಯ ಮೊಗ್ಗೆಗಳ ನುಣ್ಬೊಗರಿಗಳಿಂ, ಮಲ್ಲಿಗೆಮುಗುಳ ಸೂಸಕಂಗಳಂ ತೊಡರ್ಚಿ ನಿರ್ಮಿರ್ಚಿದ ಚೂತಪಲ್ಲವದ [೨]ಚುಂ[೨]ಬುಲೋವೆಯಿಂ, ಸರಸ ಪರಿಮಳಕೆ ಸಾಲ್ಗೊಂಡೆಱಗಲವ್ವಳಿಪಳಿಪ್ರತಾನಮನೊಳಗಣ್ಗೆ ಪುಗಲೀಯದೆ ಸೋದು ಕಳೆವೆಳಕೌಂಗಿನ ಬಾಗಿಲ್ವಾಡದ ಕಾಪಿನ ಚಾಂಪೇಯನಿರ್ಮಿತಮಾದ ಜಂತ್ರದ ಪುತ್ತಳಿಗಳಿಂ, ಕುಂಕುಮರಸದೊಳಳ್ದಿದ ಕುಮುದಮುಕುಳದ ಮೊಳೆಗಳಂ ತೊಡರ್ಚಿ ಮಾಡಿದ ಮೃಣಾಳನಾಳದ[೩]ಮು[೩]ಳ್ಗದಂಗಳಿಂ, ರಂಜಿಸಿ ಕಂಪಿನ ಕರಂಡಕಮುಂ ತಣ್ಪಿನ ತವರ್ಮನೆಯುಂ ಸಿಂಗರದ ಲೀಲಾಭುವನಮುಮೆನಿಸಿರ್ದ ವಸಂತ ಮಂಟಪದ ಮಧ್ಯದ ಮಕರಂದರಸದ ತುಂತುರಂ ತೂಱುವ ಪಜ್ಜಳಿಪ ಗೊಜ್ಜಗೆಯರಲ ಜಂತ್ರದ ಬೆಳ್ಪುಗಿಲ ಕೆಳಗಳವಡಿಸಿದ ಸುರಯಿಯರಲ ಪರಾಗದ ಪೊಂಜಗಲಿಯ ಮೇಲಣಸುಗೆದಳಿ[೪]ಥಲವಾರ್[೪]ಸಿನೊಳರಸಿವೆರಸಿ ಕುಳ್ಳಿ[೫]ರ್ದ[೫]ನರೇಂದ್ರಂ ಚಂದ್ರಧರಪೂಜೆಗೆ ಮನಂದಂದು ಸುಂದರೀಜನಮಂ ಬನದೊಳ್ ಪೂಗೊಯ್ಯಲ್ಬೆಸಸಿ ಗಾನವಿದ್ಯಾಧರಿಯೆಂಬ ವೀಣಾಪಾಣಿಯ ಮೊಗಮಂ ನಡೆ ನೋಡಿದಾಗಳ್—

ಗಮಕಂ ತಳ್ತಿರೆ[೬]ತಾ[೬]ಯೆ ಮಿಂಚಿರೆ, ಚಮತ್ಕಾರಂ ಕರಂ ಪೊಣ್ಮೆ, ದೇ
ಸಿ ಮನಂಬೊಕ್ಕಿರೆ, ಮೂರ್ಛನಾಪ್ರಸರಮುಂ ಚೆಲ್ವಾಗೆ, ಪಂಚಪ್ರಪಂ
ಚಮುಧಿಂಬಾಗಿರೆ ತೇನತೇನಘೊದವಲ್ತಾನಂ ಲಯಂ ಮುಂಚೆ, ಸಂ
ಭ್ರಮದಿಂ ಬಾಜಿಸಿದಳ್ ಬಜಾವಣೆಯಿನಂದಂಬೆತ್ತವಳ್ವೀಣೆಯಂ ॥೩೨॥

॥ವ॥ ಅದಂ ಕೇಳ್ದು ಮೆಚ್ಚುತಿರ್ದನಿತ್ತಲ್ವಿಳಾಸಿನೀಜನಂ ಪರಿತಂದು ಪೂಗೊಯ್ಯಲೆಂದು ಮನಂದಂದು ಸಂದಣಿಸಿ ನಿಂದು—

---

೧ ರ್ಣಿ (ಧಾ, ಮೂ) ೨ ಜಂ (ಕ) ೩ ವ (ಮೂ) ೪ ರರ್ವಾ (ರಿ) ೫ ರ್ವ (ಮೂ)
೬ ದಾ (ಮೂ)

ನಡು ನಸುಬಳ್ಕೆ ನೇತ್ರರುಚಿ ನೀಳ್ಕೆ ಮುಖೇಂದುಮರೀಚಿ ತುಳ್ಕೆ ಪೊಂ
ಗೊಡಮೊಲೆ ಪೊಣ್ಮೆ ಘರ್ಮಜಳಮುಣ್ಮೆ ಮನೋಭವನಣ್ಮೆ ಬಿಟ್ಟಬ
ಲ್ಮುಡಿ ಕಡುಜಾಱೆ ಮಂದಗತಿ ಪೀಱೆ ಮದಾಳಿಗಳೊಂದಿ ಪಾಱೆ ಮೇ
ಣ್ಜಡಿಯೆ ನಿತಂಬಮೈದಿದುದಳುಂಬಮುದಾತ್ತವಧೂಕದಂಬಕಂ ॥೩೩॥

॥ವ॥ ಅಂತು ಎಯ್ದೆ ವಂದು ಕುಸುಮಾಕರವನಮಧ್ಯದೊಳ್ನಿಂದು—

ಚೆಂದಳಿರ ಕರಂಡಕಘುರ
ವಿಂದದಳಸ್ಫಟಿಕೆ ಕದಳಿಯೆಲೆವಡ್ಡಲಿಗೆ ಚೆ
ಲ್ವೊಂದಿರೆ ಕರದೊಳ್ತಳೆದೊಲ
ವಿಂದಂ ನೆರೆನೇ೧ರ್ದು ಪರೆದು ಪೂಗೊಯ್ವೆಡೆಯೊಳ್ ॥೩೪॥

ಕರತಳಧರುಣದ್ಯುತಿ ತ
ಳ್ತಿರೆ ಬಂದುಗೆಗೆತ್ತು ನೋಡೆ ಕಣ್ಗದಿರ್ಗಳುರ್ದೋ
ಪ್ಪಿರೆ ಶಂಕೆ ತೊಲಗೆ ಮಲ್ಲಿಗೆ
ಯರಲಂ ಘನಮೊಲ್ದು ಕೊಯ್ದಳೆಳವೆಣ್ಣೊರ್ವಳ್ ॥೩೫॥

॥ವ॥ ಮತ್ತಂ—

ವನವನಧಿಯಲ್ಲಿ ಜನಿಸಿದ
ಘನಮೌಕ್ತಿಕದಂತೆ ಮೆಱೆವ ಮಲ್ಲಿಗೆಮುಗುಳಂ
ವನಜಾಲಯೆಯಂತೊಪ್ಪುವ
ವನಜಾನನೆಯೊರ್ವಳಾಯ್ದಳತಿ ಸಂಭ್ರಮದಿಂ ॥೩೬॥

ಅಳಿಗೆ ಪಗೆಯಾದೊಡೇನೆ
ನ್ನಳಕಾಳಿಗೆ ಕೆಳೆಯಿದೆಂದು ಸಂಪಗೆಯ ಸಮು
ಜ್ವಳಮುಕುಳಕುಳಮನಾಯ್ದಳ್
ಕಳಶಸ್ತನೆ ಕರಜರುಚಿರರುಚಿ ತುಳ್ಕುವಿನಂ ॥೩೭॥

ಮಿಸುನಿಯೊಳೆಸಗಿದ ಪೂವೆನೆ
ಮಿಸುಗುವ ನವಕರ್ಣಿಕಾರಮಂ ಕೊಯ್ವಳ ಚೆ
ಳ್ಪಿಸೆವ ಕರಜಾಂಶು ತಳ್ತಿರೆ
ರಸಲಿಪ್ತಂ ಕನಕಚಷಕಮೆನೆ ಕಣ್ಗೊಳಿಪುಂ ॥೩೮॥

---

೧ ರ (ಕ)

33

ಮೊದಲೊಳ್ಸಂಪಗೆಯರಲಂ
ಸುದತಿ ಕರಂ ಕೊಯ್ದು ಮುಡಿದು ಬಳಿಕುಳಿದಲರಂ
ಚದುರೆಸೆವಿನಮೊರ್ವಳ್ಮೃಗ
ಮದಗಂಧಿ ಗಜೇಂದ್ರಯಾನೆ ತಿಱಿದಳದೊರ್ವಳ್ ॥೩೯॥

॥ವ॥ ಪೆಱತೊಂದು ಚಂದನಮಹೀಜದಲ್ಲಿ—

ಜೆಡೆ ಮರವಾವೆಂದು ನವಿ
ಲ್ವಿಡಿಯಲೊಡರ್ಚಿರೆ ವರಾಂಗಿ ಬೆದರ್ದೀಕ್ಷಿಸೆ ಕ
ಣ್ಗಡೆವೆಳಗುಗಂಡು ಮಿಂಚೆಂ
ದೊಡನದು ಗಱಿಗೆದರ್ದು ನಲಿದು ನರ್ತಿಸಿತಾಗಳ್ ॥೪೦॥

॥ವ॥ ಮತ್ತಮೊಂದೆಡೆಯೊಳ್—

ಮರದೆಲೆವೊದಱೊಳ್ಮೃಗಜೆ
ದಿರುತರಲಂ ಕೊಯ್ಯಲೊರ್ವಳಿಡೆ ಕೈಯನದಂ
ತರುಣಿ ಪೆಱಳ್ತಳಿರ್ಗೆತ್ತೇಂ
ಕರಮಿಟ್ಟಳೊ ಕೆಲದ ಕೆಳೆದಿಯರ್ನಗೆ ಬನದೊಳ್ ॥೪೧॥

॥ವ॥ ಮತ್ತಮೊರ್ವಳ್—

ತಳಿರ್ಗೊಯ್ಯಲೆಂದು ಕನಕೋ
ಜ್ವಳರುಚಿ ತನುವಡರ್ದು ನವತಮಾಲದ ತರುವಂ
ಸೆಳೆಮಿಂಚು ಜಳದಮಂಡಳ
ದೊಳೆ ಥಳಥಳಿಪಂತೆ ಕಣ್ಗೆ ದೇಂ ತೊಳಗಿದಳೋ ॥೪೨॥

॥ವ॥ ಆ ಶೋಭಾವತಿಯಲ್ಲದೆಯುಂ—

ತರುಣತಮಾಲದ ತರುವಂ
ತರುಣಿ ಕರಂ ಪತ್ತಿ ಪೊಕ್ಕವಳ್ನೆನಯಿಸಿದಳ್
ಸ್ಮರನಸಿಲತೆಯಂ ಕಾರೊಱೆ
ಗಿರದೊಳಪುಗಿಪೊಂದು ಭಾವಮೇಂ ಬನದೆಡೆಯೊಳ್ ॥೪೩॥

ಚೆಂದಳಿರೊಳೊಂದೆ ಮೈ ಮೊಗ
ಮಂದೊಗೆದುದು ಕುಂಕುಮಾಂಕಿತಂ ಸಂಜೆಯ ಕೆಂ
ಪೊಂದಿರೆ ಮೂಡುವ ಪರಿ ಪೂ
ರ್ಣೇಂದುಗೆ ಪಡಿಯೆನಿಸುತಸುಗೆಯಡರ್ದಂಗನೆಯಾ ॥೪೪॥

॥ವ॥ ಪೆಱತೊಂದೆಡೆಯೊಳೊರ್ವ ಪೃಥುನಿತಂಬೆ—

ಜಡಿವ ನಿತಂಬಂ ಮುಡಿವೊಲೆ
ಯಡರಲ್ಬಿಡದಿರೆ ವರಾಂಗಿಯಸುಗೆಯ ಮರದೊಳ್
ಪಡೆದಳ್ಬಡದೊಳ್ಪದೆದೊದೆ
ದೊಡನಿಡಿದೆಳೆದಳಿರನದಱೊಳವಳತಿ ಭರದಿಂ ॥೪೫॥

॥ವ॥ ಆ ತಳಿರಂ ತನ್ನ ಸೋರ್ಮುಡಿಯೊಳ್ಮುಡಿದು ನಳಿನಾಕರಕ್ಕೆ ಬಂದು—

ಕೊಳದೊಳಲರ್ದಬ್ಜದಲರಂ
ನಳಿನೇಕ್ಷಣೆ ಮುಱಿವೆನೆಂದು ಪುಗೆ ತೆಱೆವೊಯ್ಲಿಂ
ಮುಳುಗುತ್ತೇಳು[೧]ತೆ[೧] ಭ[೨]ಯ[೨]ದಿಂ
ತಳ[೩]ಹೊಳಗೊಳ್ವಂತೆ[೩]ಕಣ್ಗದೇಂ ರಂಜಿಸಿತೋ ॥೪೬॥

॥ವ॥ ಪೆಱತೊಂದು ತಾಣದೊಳ್ಕಾಮರಸಂ ಪರ್ಬಿದ ಮಲ್ಲಿಗೆಯಲ್ಲಿಗೈತಂದು—

ಬಿಡುಮುಡಿ ಸೂಸೆ ಮುಂ ತಳೆದ ಪೂಗಳನೀಗಳೆ ನವ್ಯಪುಷ್ಪಮಂ
ಮುಡಿಸೆನಗೆಂಬವೋಲ್ಕಲಿತಕಂಕಣನಿಕ್ವಣಮುಣ್ಮೆ ತತ್ಕರಂ
ಜಡಿವವೊಲಲ್ಲಿ,ಪಲ್ಲವಮ[೪]ನ್ನಾ[೪]ಲತೆಯೊಳ್ಪುರುಡಿಂದೆ ಕೋರಕಂ
ಬಡಿವವೊಲೇಳೆ,ಮೈಬೆಮರದೊರ್ವಳ್ಕರಲ್ದಿಱಿದಳ್ಬಿಳಾಸದಿಂ ॥೪೭॥

॥ವ॥ ಪೆಱತೊಂದೆಡೆಯೊಳ್—

ಮಲ್ಲಿಗೆ ಮೇಲೆ ಪರ್ಬಿಮುಗುಳೊತ್ತಿರೆ ಕೊಯ್ಯಲೊಡರ್ಚಿನಿಂದ ಸಂ
ಫುಲ್ಲ ಸರೋರುಹಾಕ್ಷಿಯ ಘನಸ್ತನಮುಂಟಿರೆ ಕೊಂಬುವೊಳ್ಳಸ
ತ್ಪಲ್ಲವಪಾಣಿಯಂ ತರುಣಚೂತಯುವಾಂಗಮೆ ಕಂಪಿಪಂತದೇಂ
ನಿಲ್ಲದೆ ಪಾಯೆ ಕಂಪಿಸುತೆ ಕಣ್ಗೆಸೆದಿರ್ದುದೊ ನೋಟಕರ್ಕಳಾ ॥೪೮॥

---

೧ ತ್ತೆ (ಧಾ) ೨ ರ (ಮೂ) ೩ ಮಳಗಾದಂತೆ (ಮ.೧), ಹಳಿಗೊಳ್ವಂತೆ (ಧಾ)
೪ ಹಾ (ಮೂ, ೨)

ಅಳಿವೆರಸಿದಲರಗೊಂಚಲ
ನೆಳೆವೆಣ್ಣುಡಿದಿರೆ ಕರಾಗ್ರದೊಳ್ಮುಱಿದುದು ಮಂ
ಜುಳಶಶಿಮಂಡಳ¹ಮಂ ನವ¹
ನಳಿನಂ ಸೆಱೆವಿಡಿಯೆ ತೋರ್ಪವೊಲ್ ಬನದೆಡೆಯೊಳ್ ॥೪೯॥

ಪೂಗುಡಿಯನುಡಿವೆಡೆಯೊಳೆ ಪ
ರಾಗಂ ಪರಕಲಿಸೆ ಮೈಯೊಳಾ ಮರಗೊಂಬಂ
ಬಾಗೊತ್ತಿ ತಳಿರನುಡಿವ
ಳ್ಪೂಗಣೆಯನ ಕ²ರಿ²ಣಿಯಂತಿರೇನೊಪ್ಪಿದಳೋ ॥೫೦॥

ನಲ್ಲಳೊರ್ವಳೆಳಮಾವಿನಲ್ಲಿ ಸ
ತ್ಪಲ್ಲವಪ್ರಕರಮಂ ಕರಾಗ್ರದಿಂ
ಮೆಲ್ಲನೊತ್ತಿ ಮುಱಿದಾನೆ ಕಂದಿತಾ
ಪಲ್ಲವಕ್ಕೆ ಮೊದಲಾ ಕರಾಂಬುಜಂ ॥೫೧॥

ಮಗಮಗಿಪ ಬೆಮರನಾಂತೇಂ
ಸೊಗಯಿಸಿದಳೊ ಕಣ್ಗೆ ಕಮಳೆ ಕಮಳಮರಂದಂ
ಮಿಗೆ ಪತ್ತಿರೆ ತೋರ್ಪವೊಲಾ
ಮೃಗಾಕ್ಷಿ ಮೈಗೆಱಗೆ ಪರಮೆಗಳ್ ಬನದೆಡೆಯೊಳ್ ॥೫೨॥

ಕರದಿಂದೊರ್ಕೊಂಬನಿಂಬಾಗಿರೆ ಪಿಡಿದೆಳೆಯೆಳ್ನೀಳ್ಕೆ ಮತ್ತೊಂದು ಕೈದಾ
ವರೆಯಂ ಮೇಲೆತ್ತಿ ಪೂಗೊಯ್ವೆಡೆಯೊಳವಳ ವಕ್ತ್ರಾಬ್ಜಮಂ ಮುತ್ತೆ ಭೃಂಗೋ
ತ್ಕರಮಾಗಳ್ಬೆರ್ಚಿ ಕೊಂಬಂ ಬಿಡೆ ತರು ಕರುಣಂಬೆತ್ತವೊಲ್ಪಲ್ಲವಶ್ರೀ
ಕರದಿಂದಂ ಸೋದದಂ ಪಾಯ್ದೊಲೆವ ನೆವದೆ ಪುಷ್ಪೌಘಮಂ ಸೂಸಿತಾಗಳ್ ॥೫೩॥

॥ವ॥ ಮತ್ತೊಂದಾಮ್ರಮಹೀಜದಲ್ಲಿ—

ತಳಿರ್ಗೊಯ್ವೆಳೆಯಳ ಚೆಂದುಟಿ
ದಳಿರಂ ತಳಿರ್ಗೆತ್ತು ಕರ್ದುಂಕಿದುದು ಪಿಕನೀ³ಮಂ
ಜುಳಪಲ್ಲವಮೆಲ್ಲಮನೀ
ಗಳೆ ಪರಿದಪಳೆಂದು ಮುಳಿಸಿನಿಂ ಕರ್ದುಂಕುವವೋಲ್ ॥೫೪॥

---

೧. ನಭಿನವ (ಮೂ), ಮಭಿನವ (ಕ) ೨ ರು (ಕ)

॥ವ॥ ಮತ್ತಮೊರ್ವಳ್ಮತ್ತಕಾಶಿನಿ ಪೆಱತೊಂದು ಸರಳಚೂತಶಾಖಾಂತರದೊಳ್—

ಪೂಗೊಯ್ಯಲೆತ್ತೆ ತೋಳಂ
ಮೇಗಣ್ಗಿನಿಸೊಗೆದ ದಕ್ಷಿಣಸ್ತನಮುಕುಳಂ
ಪೂಗಣೆಯನೀಕ್ಷಿಪರನಿ[೧]ಸ[೧]
ಲಾಗಳ್ತಿಗೆದಬ್ಜಬಾಣಮೆನೆ ಕಣ್ಗೊಳಿಕುಂ ॥೫೫॥

॥ವ॥ ವಿಳಾಸವತಿ ಮತ್ತಮೊರ್ವಳ್—

ಸೆಳೆನಡು ಬಳ್ಕೆ ತೋರಮೊಲೆ ಮೇಲುದನೊಯ್ಯನೆ ನೂಂಕೆ ಕಣ್ಣನು
ಣ್ಬೆಳಗಡರ್ದೊಪ್ಪೆ ಪೀನಜಘನಂ ಜಡಿವುತ್ತಿರೆ ಬಾಹುಮೂಲಮುಂ
ಪೊಳೆಯೆ ಬಳಲ್ದು ಜಾಱೆ ಮುಡಿ ಮುಗ್ಧೆ ಪದಾಗ್ರದೆ ನಿಂದು ನೀಳ್ಕಿ ಕೆಂ
ದಳಮನಮರ್ಚಿ ಕೊಯ್ದಳೆಳೆಮಾವಿನ ಕೆಂದಳಿರಂ ವಿಳಾಸದಿಂ ॥೫೬॥

ಎಳೆಯಳೆಳೆದಳಿರನುಜ್ವಳ
ಕಳಶಮನರ್ಚಿಪವೊಲಿಳಿಪಿದಳ್ಕುಚದೊಳ್ಮಂ
ಜುಳಹೃದಯಸ್ಥಿತ ಮದನಂ
ಗೆಳಸಿತ್ತಪಳೆನೆ ರಸಾಲಪಲ್ಲವಶರಮಂ ॥೫೭॥

॥ವ॥ ಆ ವಿಳಾಸಾನ್ವಿತೆಯರುಮಲ್ಲದೆ ಮತ್ತೆ ಕೆಲಂಬರ್ವಿದಗ್ಧೆಯರ್ನೆರೆದು—

ಅಲ್ಲಿ ಮಾಮರದಲ್ಲಿ ಮಲ್ಲಿಕಾಲತೆಯಲ್ಲಿ
ಎಳೆಯಸುಗೆಮರದಲ್ಲಿ ಜಳರುಹಾಕರದಲ್ಲಿ
ಸಂಪಗೆಯ ತರುಗಳೊಳ್ ಸೊಂಪಿಡಿದ ಸುರಯಿಯೊಳ್
ಪಾದರಿಯ ಮರದಲ್ಲಿ ಮಾಧವಿಯ ಲತೆಯಲ್ಲಿ
ತಿಳಕಬಕುಳಾದಿತರುನಿವಹದಾರವೆಗಳೊಳ್
ದಳಫಳಕುಸುಮವಿಸರವಿಡಿದ ವಿಟಪಂಗಳೊಳ್
ಪೂಗೊಯ್ಯಲೆಂದಬಲೆಯರ್ನೆರೆದು ಬಗೆದಂದು
ಬೇಗದಿಂ ಪರಿತಂದು ಪರಿತೋಷದಿಂ ನಿಂದು

೧ ಶು (ಕ)

ಕಡೆಗಣ್ಣ ಕುಡಿವೆಳಗು ಬಿಡದಡರೆ ನಡೆನೋಡಿ
ನಿಡುಗೊಂಬನೆಡಗೈಯೊಳಡಸಿ ಪಿಡಿದೊಲ್ದಾಡಿ
ವೆರಸಿ ನೆಲೆಮೊಲೆಯೊಗೆಯೆ ಬಲಗೈಯ ನಿಮಿರ್ದೆತ್ತಿ
ಕರಕರಜ ರುಚಿರರುಚಿ ತಳಿರಲರ್ಗಳಂ ಮುತ್ತಿ
ಮುಸುಕುತಿರೆ ಮುಡಿಸಡಿಲೆ ಪೊಸಮುಗುಳ್ಗಳಂ ತಿಱಿದು
ಮಿಸುಪ ಕಿಸಲಯಚಯಮನೊಸಗೆ ಮಿಗೆ ನೆಱೆ ಪಱಿದು
ನನೆಗೊನೆಯನಲರ್ದಲರ ಕೊನರ್ಗಳಂ ಕೊಯ್ಕೊಯ್ದು
ವನಜದಳದೊಳ್ಕದಳಿಯೆಳೆಯೆಲೆಗಳೊಳ್ಪೊಯ್ದು
ಕುಳಿರ್ವ ಹಿಮಜಳದೆ ಚಳೆಯಂಗೊಟ್ಟು ಬೇಱಾಯ್ದು
ನಳಿದೆಳೆಯೆಳೆಗಳಿಂ ಗಳಿಲನೆ ಸರಂಗೆಯ್ದು
ಸುಯ್ಗಂಪು ಮೈಗಂಪು ಬಾಯ್ಗಂಪು ಬೆರಸುತಿರೆ
ಕಯ್ಗಂಪು ಕೆಂದಾವರೆಯ ಸಿರಿ[1]ಯನೊರಸುತಿರೆ
ಮಲ್ಲಿಗೆಯ ಹಾರಮಂ ಪಲ್ಲವದ ಪದಕಮಂ
ಸಲ್ಲಲಿತಮಂಜರಿಯ ಕರ್ಣಾವತಂಸಮಂ
ಸುರಯಿಯುರೆವಿಱಿದರಲ ಮುಡಿಯ ಮುತ್ತಿನ ಬಲೆಯ
ನುರುತರದ ಸರಸಿಜದ ಕರ್ಣಿಕೆಯ ಮುದ್ರಿಕೆಯ
ನೆಸೆವ ಪೊಸಬಂದುಗೆಯ ಮಿಸುಪ ಮುಗುಳಂದುಗೆಯ
ನಸುಗೆಯಱಲುಂಗುರಮನುತ್ಪಳದ ಮುಂಟಿಗೆಯ
ನುಜ್ವಳಿಪ ಗೊಜ್ಜಗೆಯ ಸಜ್ಜುಕದ ಚಳಿಕಿಗೆಯ
ನಜ್ಜಗೆಯ ಪಜ್ಜಳಿಪ ಬಜ್ಜರದ ಬಾಪುರಿಯ
ನಾಂಪರೊಳ್ಪಲಂಪೆಸೆವ ಸಂಪಗೆಯ ಮೇಖಲೆಯ
ನಿಂಪಡರ್ದ ಸುರಹೊನ್ನೆಮುಗುಳಮೃದುಕಂಠಿಕೆಯ
ನೆಸಗಿ ಮಿಕ್ಕಲರ್ಗಳಿಂ ಬಾಸಿಗಗಳಂ ರಚಿಸಿ
ಪೊಸಜವ್ವನೆಯರಲ್ಲಿ ಪೋಳ್ತೆತ್ತಿ ಸಡಗರಿಸಿ,
ಶಿವಪೂಜೆಗಳವಟ್ಟ ಕುಸುಮಮಂ ಬೇಱಾಯ್ದು
ತವೆ ಬಹುವಿಚಿತ್ರತರ ಮಾಲಿಕೆಗಳಂ ಸವೆದು
ಮುಡಿಯಳಿಯೆ ನಡುಸೆಳೆಯೆ ಸುಯ್ನಿಮಿಱೆ ಮೆಯ್ಬಮಱೆ

---

೧. ರೆ (ಕ)

ತೊಡೆ ಸೆಡೆಯೆ, ಅಡಿ ಪಡೆಯೆ ಪುಗುಳ್ಗಳಂ, ಮುಗುಳ್ಗಳಂ
ಸೂಸುತಂ, ಬೀಸುತಂ ನಳಿತೋಳ, ನಳಿಜಾಳ
ಮೆಳಸಿ ಬರೆ, ಬಳಸ್ಪಿ ನೆರೆ ಧಾವರಿಸಿ, ಗಾವರಿಸಿ
ಕರದಿಂದಮರವಿಂದ ದರಲಿಂದೆ ಭರದಿಂದೆ
ಪೊಡೆವುತಂ, ನಡೆವುತಂ ಬಳ್ಕುತಂ ತುಳ್ಕುತಂ
ಕಣ್ಬೆಳಗ ತಣ್ಬೆಳಗ ನೈತಂದು ಸೈತಂದು,
ಭೂಪತಿಗೆ ಕೈಮುಗಿದು ಪೂಪುಟಿಗೆಯಂ ತೆಗೆದು
ಹರುಷದಿಂ ನೋಡುತಿರೆ ಕರತಳಕೆ ನೀಡುತಿರೆ

॥ವ॥ ಆಗಳಾ ರಾಜಶೇಖರನರೇಂದ್ರಂ ಪ್ರಭಾತಪದ್ಮದಂತಿಥಾಮೋದಾಂತರಂಗನಾಗಿ, ಕಲ್ಪತರುಸಸ್ಯದಂತೆ ಸುರಭಿಪಯದೊಳ್ಮುಳುಂಗಿ, ಶಾರದಶಶಾಂಕನಂತೆ ವಿಮಳಾಂಬರದಿನಳಂಕರಿಸಿ, ಯಾಮಿನೀವ್ಯೋಮದಂತೆ ಸಿತರುಚಿದಾಳ್ದು, ಧನಂಜಯನಂತೆ ರುದ್ರಾಕ್ಷದಿಂ ರಂಜಿಸಿ, ಪರಮೇಷ್ಠಿಯಂತೆ ಪದ್ಮಾಸನವನವಷ್ಟಂಭಿಸಿ, ಬೃಹಸ್ಪತಿಯಂತೆ ಸುಮನೋಜಯಮೂಲಮಂತ್ರಮಂ ಬಗೆಯೊಳನುಗೊಳಿಸಿ, ನಗರಾಜನಂತಚಲಾಂಗನಾಗಿ, ಧನ್ವಿಯಂತೆ ಲಕ್ಷ್ಯೈಕಾಗ್ರಚಿತ್ತನೆನಿಸಿ, ಕಲ್ಯಾಣಗೃಹದಂತೆ ಶಿವಪ್ರಭಾವಮಂ ಪಡೆದ್ಧಿನಿಸಾನುಂ ಬೇಗಮಿರ್ದು—

ಶಿವಲಿಂಗಾಂಘ್ರಿಯನೊಲ್ದು ಪೂಜಿಸಿದನುದ್ಯತ್ಸೌರಭಾಂಭಸ್ಸರೋ
ಭವಮುಖ್ಯಪ್ರಸವಾತಿಶೋಭಿತಸುಗಂಧಾಚ್ಛಾಕ್ಷತಸ್ನಿಗ್ಧಧೂ
ಪವಿರಾಜದ್ರುಚಿದೀಪಸತ್ಫಳಮಹಾನ್ನೈವೇದ್ಯಮುದ್ವೀಟಿಕಾ
ಳಿವಿಳಾಸಾಸ್ಪದಗೀತವಾದ್ಯರವದಿಂ ಭೂಭಾಮಿನೀಭೂಷಣಂ ॥೫೮॥

॥ವ॥ ಅಂತು ಪೂಜಿಸಿ ಪರಮಭಕ್ತಿಯಿಂ ಪ್ರದಕ್ಷಿಣನಮಸ್ಕಾರಂಗಳಂ ರ೧ಚಿಸಿ—

ಧನಪತಿಮಿತ್ರ, ಗಾತ್ರರುಚಿನಿರ್ಜಿತಮಿತ್ರ, ಕರಾಲಕಾಲಮ
ರ್ದನ, ಗರಕಾಲಕಂಧರ, ಧರಾಧರಧನ್ವ, ಶಶಾಂಕಖಂಡಮಂ
ಡನ, ಸದಖಂಡಚಿನ್ಮಯ, ನತವ್ರಜಪಾಲ, ಕಪಾಲಶೂಲರಂ
ಜನಕರ, ದೇವದೇವ ಜಗತೀಧರಮಂದಿರ ಮಂಗಳಾಕರಾ ॥೫೯॥

---

೧ ಚಿಯಿ (ಮೂ)

||ವ|| ಎಂದು ಪೊಗಳ್ದು ಪೊಡವಟ್ಟು ಮುದಂದಳೆ೧ದು—

ಆ ನರನಾಥನಾ ಕುಸುಮಭೂಷಣಮಂ ಪದೆದಿತ್ತು ಪಾರ್ವತೀ
ಜಾನಿಗೆ ತಾನುಮಾತ್ಮರಮೆಯುಂ ಬಳಿಯಂ ತಳೆದಿರ್ಪಿನಂ ಪರಿ
ಮ್ಲಾನಸಖೀಮುಖಾಬ್ಜಮನಭೀಕ್ಷಿಪ ನಲ್ಲಳಪಾಂಗದಿಂಗಿತಂ
ಮಾನಸದೊಳ್ತೊಡರ್ಚಿದುದು ತಣ್ಗೊಳದೊಳ್ ಜಳಕೇಳಿಯಾಂಪುದಂ ||೬೦||

||ವ|| ಆಗಳಾ ಯುವರಾಜಂ ನಿಜರಮಣೀ೨ಯಾನನಾ೨ಬ್ಜಮಂ ನಿರೀಕ್ಷಿಸಿ—

ಸರಸಿಜವಕ್ತ್ರೆ ಚಕ್ರಮಿಥುನಸ್ತನೆ ಬಾಳಮೃಣಾಳಬಾಹುವ
ಲ್ಲರಿ ಕುಮುದಾಕ್ಷಿ ಭೃಂಗಕಚೆ ಶೈವಲಮಂಜುಳರೋಮರಾಜಿ ಬಂ
ಧುರಪುಳಿನೋಲ್ಲಸಜ್ಜಘನೆ ನಿನ್ನಿರವಂ ತಳೆದೊಪ್ಪುತಿರ್ಪ ತ
ತ್ಸರಸಿಗೆ ಮಾಡಲಿಂದು ನವಸಂಗತಿಯಂ ನಡೆ ಮನ್ಮನೋರಮೇ ||೬೦||

||ವ|| ಎಂಬುದುಮತೀವ ಹರ್ಷೋದಯಮನೊಳಕೊಂಡು ತೊಳಪ ಕಟಾಕ್ಷ ರುಚಿ ಮಂದಸ್ಮಿತದ್ಯುತಿಗೂಡಿ ತದ್ವಾಣಿಗೆ ಪಸಾಯಮನಿತ್ತಂತೆ ಮೇಲ್ವಾಯ್ದು ಪಸರಿಸಿಯುಂ; ನಿನ್ನ ಮೆಲ್ನಡೆಗೆ ಮಚ್ಚರಿಪಂಚೆಯೊಳ್ಪಳಂಚುವೆನೆಂದು ಭಾಷೆಗುಡುವಂತೆ ಪಾಯವಟ್ಟಂ ದನಿಗುಡುತ್ತಮಿರೆಯುಂ, ಪೂದುಱುಂಬಿಂಗೆಱಗಿ ಪಾಡುವ ಪರಮೆವಱಿಗಳಿಂಚರಕ್ಕೆ ಮೆಚ್ಚಿ ತಲೆವೊಲೆದಪುದೆಂಬಂತೆ ಕರ್ಣಪೂರಂ ಕಂಪಿಸೆಯುಂ ಜಳಕೇಳಿಯ ಪೊರ್ಕುಳಿಯೊಳ್ಗುರುಪಯೋಧರಭಾರಮನಾಂಪುದೆನಗಸದಳಮೆಂದು ಬಳುಂಕುವಂತೆ ಬಡನಡು ಬಳುಂಕೆಯುಂ ಸರಸಿಯಂ ಪೊಕ್ಕಪೆನೆಂಬ ಸಂಮುದದಿಂ ಕುಣಿವಂತೆ ಕುಚಚಕ್ರಯುಗಂ ಕದಕ್ಕದಿಸೆಯುಮಮರಸಾಮಜದೊಡನನೇಕ ಕರಿಣಿಗಳ್ಬೆರಸು ನೀರಾಟ೩ಕ್ಕೆ೩ ತಳರ್ವಭ್ರಮುಮೆಂಬಂತೆ ಮನಃಪ್ರಿಯನೊಡನನೇಕ ಸಖಿಯರ್ವೆರಸು ಸಂಭ್ರಮಂ ಮಿಗೆ ಸಲಿಲಕೇಳಿಗೆಳಸಿ ಸರ್ವಮಂಗಳಾದೇವಿ ತನ್ನಂದನದೊಳ್ ನಡೆತಂದು ಕಾಸಾರತೀರದ ನುಣ್ಬಸಲೆಯನಲಂಕರಿಸಿ ನಿಂದು ನೀಡುಂ ನಿರೀಕ್ಷಿಪಾಗಳ್—

ಮರುದುದ್ಧೂತಪಯಃಪ್ರಕೀರ್ಣಕಣಲಾಜಂ ಮೇಲೆ ಸಾಲಿಟ್ಟು ಷ
ಟ್ಚರಣಶ್ರೇಣಿಯುಮೊಂದೆ ರತ್ನರಚಿತೋದ್ಯತ್ತೋರಣಶ್ರೀಯನೂ
ರ್ಮಿರವಂ ವಾದ್ಯಮುದಾಗಲಾರತಿಯ ಚೆಲ್ವಂ ಪೋಲೆ ಪದ್ಮಂ ಮಹೀ
ಶ್ವರನಂ ತಾನಿದಿರ್ಗೊಂಬುದೆಂಬ ಬಗೆಯಂ ತಾಳ್ದತ್ತು ಪದ್ಮಾಕರಂ ||೬೨||

---

೧ ದಂ (ಮೂ) ೨ ಯುವದನಾ (ರಿ) ೩ ಕೆ (ಕ)

॥ವ॥ ಮತ್ತಮಾ ತಿಳಿಗೊಳಂ—

ಲುಲಿತಜಲಲವಲುಲಿತನವ
ಜಲರುಹದಳವಿಸರಲ[೧]ಸಿ[೧]ತವಿಮಳಮರಾಲಾ
ವಲಿಕಲಿತನಳಿನಮಧುಮದ
ಚಲದಲಿಕುಲಮಿಲಿತಮಂದಮಾರುತಮಹಿತಂ ॥೬೩॥

॥ವ॥ ಮತ್ತಂ—

ಬಾಲಮಧುವ್ರತಪ್ರತತಿ ಪಾಡೆ ರತೋದ್ಧತ ಚಕ್ರಚಕ್ರಪ
ಕ್ಷಾಳಿಯೆ ತಾಳಮಾಗಿರೆ ಸರೋಜಿನಿ ನರ್ತಿಸೆ ನೀರ ಪಕ್ಷಿಗಳ್
ಲೀಲೆಯೊಳೊಂದುತುಗ್ಘಡಿಸೆ ಸೀಗುರಿಯಾಗಿರೆ ವೀಚಿಮಾಲೆ ತಾ
ನೋಲಗಸಾಲೆಯಾದುದು ಕೊಳಂ ಕಮಳಾಸನರಾಜಹಂಸನಾ ॥೬೪॥

ದರದಳದರವಿಂದಬೃಂದಗಂಧಾ
ದರಸರದುನ್ಮದಭೃಂಗನಾದಗೀತಂ
ತರಳತರತರಂಗರಂಗದಂಗಂ
ಸರಸಿ ಸು[೨]ವಾ[೨]ಸಿನಿಯಂತೆ ಕಣ್ಗೆ ತೋರ್ಕುಂ ॥೬೫॥

ತಡಿಯೊಳ್ನಿಂದ ತಟಿತ್ಕಟಾಕ್ಷೆಯ ಕಟಾಕ್ಷಜ್ಯೋತ್ಸ್ನೆಯಿಂ ತೀವಿ ಪಾ
ಲ್ಗಡಲಂ ಪೋಲ್ತಿರೆ ತತ್ಸರಂ ನೊರೆಯ ಸಾಲ್ ಶೇಷಾಹಿಯಂ ಪೋಲೆ ಮೇ
ಲೆಡೆಗೊಂಡೊಪ್ಪುವ ನೀಲನೀರಜವನಂ ಸ್ವರ್ಣಾಂಬುಜೋದ್ಯದ್ರಜಂ
ಕುಡೆ ಪೀತಾಂಬರಲಕ್ಷ್ಮಿಯಂ ಮಲಗಿದಂಭೋಜಾಕ್ಷನಂತೊಪ್ಪಗುಂ ॥೬೬॥

॥ವ॥ ಮತ್ತಮಲ್ಲಿ—

ಬಿರಯಿಗಳನೆಚ್ಚು ರಕ್ತಂ
ಬೊರೆದರಲಂಬಂ ಸರೋಂಬುವೋಳ್ತೊಳೆಯಲ್ಕೆಂ
ದರಲಂಬನಿ[೩]ಳಿ[೩]ಪಿದಂತಿರೆ
ತರುಣಿಯರ ಸರಕ್ತ[೪]ಕೇ[೪]ಕರಂ ಮಾರ್ಪೊಳೆಗುಂ ॥೬೭॥

॥ವ॥ ಅಂತದಂ ನೋಡಿ ಕಾಂತಾಜನಂ ಸರಿತಸಂ ಮಿಗೆ ಪುಗಲೆಳಸಿ ಮೆಲ್ಲನಿಳಿ ತರುತ್ತಮಿರ್ಪಲ್ಲಿ—

---

೧ ಲಿ (ಮೂ) ೨ ಲಾ (ಮೂ, ರಿ, ಕ) ೩ ಳು (ಮೂ) ೪ ತೆ (ರಿ)

ಎಳೆವಳುಕಿನ ಸೋಪಾನದೊ
ಳಿಳಿವಳ ಪದಯಾವಕದ್ರವಂ ಪತ್ತಿರೆ ಕಂ
ಡೆಳೆಯಳದೊರ್ವಳ್ ತಳಿರೆಂ
ದೆಳಸಿ ಕರಂ ತುಡುಕಿ ನಗಿಸಿದಳ್ಕೆಳದಿಯರಂ ॥೬೮॥

ಗುರುಕುಚಭರದಿಂ ಬಳ್ಕುವ
ಧರಾಧಿಪತಿಪತ್ನಿಗೀವವೋಲ್ಕೈಲಾಗಂ
ಸರಸಿ ತೆರೆದೋಳ ತುದಿಯೊಳ್
ಕರಮೊಗೆವರವಿಂದದಿಂದದೇಂ ರಂಜಿಸಿತೋ ॥೬೯॥

ಕರದೊಳ್ಪೊನ್ನಂಡೆಯುಂ ಜೀರ್ಕೊಳವಿಯೆಸೆಯೆ ಕಾಂಚೀರವಂ ಚಾರುಮಂ
ಜೀರರವಂ ಕೈಗಣ್ಮೆ ಕಾಸಾರದ ಪರಿಸರದೊಳ್ ನಿಂದು ನಿಂದೀಕ್ಷಿಸುತ್ತಾ
ಧರಿಸುತ್ತಂದಂ ಮಿಗಲ್ ಮೇಲ್ನಗೆ ಮಿನುಗೆ ಮೊಗಂ ನೋಡಿ ನೀರಾಟಕೆಂದೊ
ರ್ವರನೊರ್ವರ್ ಚಲ್ಲದಿಂದಂ ಕರೆದು ನೆರೆದು ಕಾಂತಾಳಿ ನೀರ್ವೊಕ್ಕುದಾಗಳ್ ॥೭೦॥

ತರುಣೀನಿತಂಬಕುಚಗಿರಿ
ವರಂಗಳಿಟ್ಟಣಿಸೆ ತತ್ಸರಶ್ಯರಧಿ ಕರಂ
ಪರಿವರ್ಧಿಸಿದಂತುರ್ವಿದು
ದರರೆ ತದಾನನಸುಧಾಂಶುಬಿಂಬದ್ಯುತಿ[೧]ಯಿಂ[೧] ॥೭೧॥

ಕರದಿಂ ನೂಂಕಿ ತುಳುಂಕಿ ಕೂಂಕಿ ಜಳಮಂ ತೇಂಕಾಡಿ ಮೇಲೊರ್ವರೊ
ರ್ವರೊಳಿಟ್ಟಾಡಿ ಮುಳುಂಗಿ ಮೂಡಿ ಪೊಳೆದಾ ಪೊನ್ನಂಡೆಯಿಂ ಪೊಯ್ದು ಪಾ
ಯ್ದಿರದೀ[೨]ಸಾ[೨]ಡಿ ಕಡಂಗಿ ಜೀರ್ಕೊಳವಿಯಿಂ ಮೇಲೊತ್ತಿ ಬೆಂಬತ್ತಿ ಮುಂ
ಬರಿದಬ್ಜಾಕರದಂಬುಕೇಳಿವಡೆದರ್ ಪಂಕೇಜಪತ್ರಾಕ್ಷಿಯರ್ ॥೭೨॥

ಅರಸನೆಸಪನಿತಜಿ[೩]ೊಳೆ ಕ
ರ್ಪೂರದಂಬುವನೊತ್ತಲೆಂದು ಕಮಳಾಕ್ಷಿಕಟಾ
ಕ್ಷರುಚಿಹಿಮವಿಮಳಜಳಮಂ
ಪರಪಿದಳೊರ್ವಳೊಲೊಳಾಸ್ಯಶಶಿರುಚಿಸಹಿತಂ

॥ವ॥ ಮತ್ತಮದಲ್ಲದೆಯುಂ— ॥೭೩॥

---

೧ ಮಂ (ರಿ) ೨ ರಃ ಶ (ಮೂ, ಧಾ), ಶ್ಚ (ರಿ) ೩ ಯಂ ಳಶಾ (ಮೂ) (ರಿ)

ಚಂದನಚಂದ್ರಿಕೆಯಂ ರಮ
ಣೇಂದುಕರಂ ಸೂಸೆ ಮುಗಿದುದದು ಕಾಂತೆಯನೇ
ತ್ರೇಂದೀವರಮಾಸ್ಯಾಂಬುಜ
ಮಂದಲರ್ದುದು ಕೊಳದೊಳಿಳೆಗಿದೇನಚ್ಚರಿಯೋ ॥೭೪॥

॥ವ॥ ಮತ್ತಮೊರ್ವಳ್—

ನೃಪಕರವಾರಿಯಂತ್ರಮುಖಮುಕ್ತಮೃಗೋದ್ಭವಮಿಶ್ರಧಾರೆಗಳ್
ದ್ವಿಪಪತಿಕುಂಭಸನ್ನಿಭಕುಚಾಚಲಮಂ ಮುಗಿಲಂತೆ ಮುತ್ತೆ ತ
ಚ್ಚಪಲಕಟಾಕ್ಷಮಲ್ಲಿ ಸೆಳೆಮಿಂಚೆನೆ ಮಿಂಚಿರೆ ಚಂದನೋದಕ
ಸ್ನಪಿತೆ ತದೀಯ ಬಿಂದು ಮಳೆಯಂತಿರೆ ಕಾರ್ಸಿರಿಯಂತಿರೊಪ್ಪಿದಳ್ ॥೭೫॥

ಮುಡಿ ಮುಗಿಲಲ್ಲಿ ಬಲ್ಮಳೆ ಮುಖೇಂದುಗೆ ಚಂದ್ರಿಕೆ ತೋರ್ಕೆವೆತ್ತ ಪೊಂ
ಗೊಡಮೊಲೆವೆಟ್ಟುಗಳ್ಗೆ ನವನಿರ್ಝರಮೊಪ್ಪುವ ಬಾಹುವಲ್ಲಿಗಿಂ
ಪಿಡಿದಡರ್ದಚ್ಚಗುಚ್ಚಮೆನಿಸಿತ್ತು ನರೇ[1]ಶ್ವ[1]ರನಾತ್ಮಹಸ್ತದಿಂ
ಪಿಡಿ[2]ದ[2]ಲದೊರ್[3]ಟ್ಟೆ[3]ಯಿಂ ಸುರಿಯೆ ಸೂಸುವ [4]ಚಂದನವಾರಿ ನಾರಿಯಂ ॥೭೬॥

ವರನೊತ್ತೆ ಕುಂಕುಮಾಂಬುವ
ನರವಿಂದಾನನೆಯ ಮೊಗದೊಳಿಳಿವುತ್ತೆಸೆದ
ತ್ತರವಿಂದದರಲ ಮಕರಂ
ದರಸಂ ಸುರಿವಂತೆ ಕಣ್ಗೆ ಕಮಳಾಕರದೊಳ್ ॥೭೭॥

ಲೋಲಾಕ್ಷಿಯ ನಗೆಮೊಗದೊಳ್
ಲೀಲೆಯಿನಿನನೊತ್ತೆ ಕ[4]ತ್ತು[4]ರಿಯ ಧಾರೆ ಕರಂ
ಕಾಲಾಹಿ ಚಂದ್ರಬಿಂಬಮ
ನಾಲಂಬಿಸಿ ತುಡುಕಿದಂತದೇನೊಪ್ಪಿದುದೋ ॥೭೮॥

ಮೊಗಸಸಿಯ ಹಸನಚಂದ್ರಿಕೆ
ಗಗಿವವೊಲದಿರ್ವಿನೆಯೊಳುರುತರಸ್ತನಚಕ್ರ
ಕ್ಕೊಗುಮಿಗೆಯಿಂದೆಳೆವಿಸಿಲಂ
ನೆಗಳ್ವಂತಿನನೊತ್ತಿದಂ ಸಕುಂಕುಮಜಳಮಂ ॥೭೯॥

೧ ಶ (ಕ) ೨ ರ್ದ (ಮೂ) ೩ ಟ್ಟೆ (ಮೂ, ಕ, ದಾ) ೪ ಕಸ್ತೂ (ರಿ)

ರಮಣಿಯ ಕಬರಿಯೊಳರಸಂ
ಹಿಮಜಳಮಂ ಸುರಿಯೆ ಮುಗುಳ್ಗಳೊಡವೆರೆದಿಳಿದ೧
ತ್ತಮ೧ರ್ದಾಲಿವರಲೊಡನೆ ಕಾ
ರಮುಗಿಲೊಳಿಳಿತರ್ಪ ವಿಮಳಜಳವೃಷ್ಟಿಯವೋಲ್ ॥೮೦॥

ಹಿಮಮಿಶ್ರಾಂಬುವನೊಯ್ಯನೋಪನಿದಿರೊಳ್ನಿಂದಂಗನಾಚಂದನಾಂ
ಕಮನೋಜ್ಞಾಂಗದೊಳೊತ್ತೆ ನಾಂದು ಪನಿಯಂ ಸೂಸುತ್ತದಿಂಬಾದುದಾ
ಹಿಮರೋಚಿಷ್ಕರಪಾತದಿಂ ಹಿಮರುಚಿಗ್ರಾವಸ್ಫುರತ್ಪುತ್ರಿಕಾಂ
ಗಮೆ ತಾನೊಲ್ದೊಸರ್ದಿಕ್ಕುವಂತೆ ವಿಳಸನ್ಮುಕ್ತಾಚ್ಛವಾರ್ಬಿಂದುವಂ ॥೮೧॥

ಬಡಬಾಸೆಯೆಂಬ ಜಗುನೆಯೊ
ಳೊಡವರೆಯಲ್ಕುಚಹಿಮಾದ್ರಿಯಿಂದೈದುವ ಬಾಂ
ಗಡಲೆನೆ ಹಿಮಾಂಬು ಪೊಸಪೊಂ
ಗೊಡದಿಂ ಮಧುಸೂಸೆ ಸುರಿವುತಂ ಸೊಗಯಿಸುಗುಂ ॥೮೨॥

ಕೆಳದಿಯ ಮೇಲೆ ಹಿಮಾಂಬುವ
ತುಳುಂಕಲೆಂದೊರ್ವಳಟ್ಟಿ ಮುಳುಗಿರೆ ಕೊಳದೊಳ್
ಜಳರುಹಮನವಳ ಮೊಗಮೆಂ
ದೆಳಸಿ ಕರಂ ಪೊಯಿದಳಂಬುವಂ ಸಂಭ್ರಮದಿಂ ॥೮೩॥

ನಳಿನಿಯನಾಲಿಂಗಿಸಿ ಪೂ
ಗೊಳಲೆಂದುಱಿ ಬಾಗಿ ನಿಂದಳಂಗದೊಳೊರ್ವಳ್
ತಳಿಯೆ ಘುಸೃಣಾಂಬುವಂ ತಂ
ಗೊಳ ಮುಗಿಲಮರೇಂದ್ರಚಾಪಲತೆಯೆನೆ ಮೆಱೆದಳ್ ॥೮೪॥

ಅರಸನಿರದೊತ್ತೆ ಕಂತ್ತು೨ರಿ
ಯ ರಸಂ ಕಿಱುಬಾಸೆವಿಡಿದು ಮೇಲಿಳಿದಿಳಿಪಿ
ತ್ತರರೆ ಕರಿವಾವುಕರ್ಪಿಡಿ
ದುರುಗನನುಱಿ ನುಂಗುವಂದಮಂ ತಿಳಿಗೊಳದೊಳ್ ॥೮೫॥

೧ ದಮು (ಮೂ) ೨ ಸ್ತು (ರಿ)

ವೆರೆನೊತ್ತಿದ ಘುಸೃಣರಸಂ
ಗುರುಕುಚನಗಧಾತುನಿರ್ಝರಪ್ಲವಮಿಳಿವಂ
ತಿರೆ ನುಸುಳ್ದೈತರೆ ತಳ್ತೇಂ
ಕರಮೆಸೆದುದೊ ಬಾಸೆವಳ್ಳಿ ತಳಿರೇಱಿದವೋಲ್ ॥೮೬॥

ಯಾಮಿನಿಯೆಂಗದೊಳುದಯಿಪ
ಸೋಮಂ ಕೆಂಗದಿರನಿದಿರೊಳುಱೆ ಕಱೆವವೊಲಾ
ಶಾಮಾಂಗಿಯೆಂಗಲತೆಯೊಳ್
ಭೂಮೀಶ್ವರಚಂದ್ರನೊತ್ತಿದಂ ಕುಂಕುಮಮಂ ॥೮೭॥

ಹೃದಯಸ್ಥಿತಮದನಂ ಸಂ
ಮದದಿಂ ಜಳಕೇಳಿಗೆಳಸಿ ತಾನುಂ ಪಿಡಿದೆ
ತ್ತಿದ ಪೊನ್ನ ಕಳಶಮೆನಿಸಿದು
ದದಱೊಳಿದಿರ್ಚಿದ ವಧೂಜನದ ಕುಚಕಳಶಂ ॥೮೮॥

ಓಪಳ ಕುಚದೊಳ್ಕುಂಕುಮ
ಲೇಪಂ ಜಳದಿಂದ ತೊಲಗೆ ನಖಪದಮಪರಾ
ಶಾಪರ್ವತದಗ್ರದೊಳೆ ಕ
ಲಾಪತಿ ಕಲೆ ಸಂಜೆ ಸರಿಯೆ ತೋರ್ಪವೊಲೆಸೆಗುಂ ॥೮೯॥

॥ವ॥ ಆಗಳರಸಿ ಸರಸಿಯೊಳ್ನಿಂದು ಸರಿಸದೊಳರಸನಂ ಸರಸದಿಂ ನಿರೀಕ್ಷಿಸಿ–

ಸೂಸಿದುದೊಂದು ಚಂದನಮೆ ಕಾಮಿನಿ ತನ್ನ ಮುಖಪ್ರಕಾಶಮಂ
ಸೂಸದೆ ನೀಳ್ದ ಕಣ್ಮ[೧]ರಲ[೧]ಕೋರೆಯ ನುಣ್ಗದಿರೆಂಬ ಜೊನ್ನಮಂ
ಸೂಸದೆ ಕೂಡೆ ಕುಂದಣದ ಕುಂಭಮನೇಳಿಪುರೋಜದಂಶುವಂ
ಸೂಸದೆ ಮಂದಹಾಸರಸಮಂ ಸಲೆ ಸೂಸದೆ ನಲ್ಲನಂಗದೊಳ್ ॥೯೦॥

॥ವ॥ ಮತ್ತಂ—

ತಳಿಯೆ ವಧೂಜನಂ ಮೃಗಮದೋದಕಮಂ ನೃಪನಲ್ಲಿ ನಾಂದು ಕಂ
ಗೊಳಿಸಿದನರ್ಕಜಾಂಬು ಮುಸುಕಿರ್ದಮರೇಂದ್ರಗಜೇಂದ್ರದಂತೆ ಮೇ
ಣ್ತುಳುಕೆಹಿಮಾಂಬುವಂ ನೆನೆದು ಚಂದ್ರಿಕೆದೀವಿದ ಚಂದ್ರನಂತೆ ಮಂ
ಜುಳಘುಸೃಣೋದ[೨]ಮಂ[೨]ಸುರಿಯೆ ತಳ್ತು ತಳಿರ್ತ ನವಾಮ್ರದಂತೆವೊಲ್ ॥೯೧॥

---

೧ ಲರ (ಮೂ) ೨ ಕಂ (ವಾ)

ಲಲನಾಕುಚದೊಳ್ ಮೃಗಮದ
ಜಳಬಿಂದುಗಳೆಸೆದುವರಸ^೧^ನೊತ್ತಲೊಡಂ ತ
ಳ್ತಲರ್ವುದನೆ ಪಾರ್ದು ಸಾರ್ದ
ಬ್ಜಲಸತ್ಕೋಶಮನೆ ಮುತ್ತಿದೆಳೆಯಳಿಗಳವೊಲ್ ॥೯೨॥

॥ವ॥ ಆಗಳ್—

ವನಜಿನಿ ಕರದಿಂ ಮೃಗಮದ
ವನಧಾರೆಯನೆತ್ತಿ ಸೂಸಿದಳ್ತಾನುಮೊಱ
ಲ್ದನೆ ವನಜದಿಂದೆ ರಮಣೀ
ಜನಾಸ್ಯಕಂಜಕ್ಕೆ ಕವಿದುವಳಿಗಳ್ಕೊಳದೊಳ್ ॥೯೩॥

ಎಳೆಯಳ್ನಳಿನೋಜ್ವಳಕು
ಟ್ಮಳಮಂ ಕೊಯ್ಯಲ್ಕೆ ಸಾರ್ದು ನಳಿನಾಕರದೊ
ಳ್ಮುಳುಗುವಳ ಮೊಲೆಯನಬ್ಜದ
ಕಳಿಕೆಯಂದೆಂದೆಳಸಿ ಪಾಱುದು ನಗಿಸಿದಳೊರ್ವಳ್ ॥೯೪॥

ಮೊಲೆಯಲರ್ದಬ್ಜದೊಳಿರೆ ತನು
ವೆಲೆವರೆಯೊಳಡಂಗಿ ಬಾಗಿ ಪೂಗೊಯ್ವಳ ತೋ
ರ್ಪಲಘುತರಜಘನಭರಮೇಂ
ಗೆಲೆವಂದುದೊ ಕೊಳದೊಳೇಳ್ವ ಕರಿಶಿರದಿರವಂ ॥೯೫॥

ಸ್ಮರನ ಬಾಣಸರೋಜಕೆ ಕೂರ್ಪಸಾ
ತರುಣಿ ಕಣ್ಗಡೆಯಿಂದುಪದೇಶಿಪಂ
ತರರೆ ಪೂಗೊಳದೊಳ್ಮುಱಿದಾಂತು ಪಂ
ಕರುಹಮಂ ನಡೆನೋಳ್ಪವಳೊಪ್ಪಿದಳ್ ॥೯೬॥

॥ವ॥ ಇಂತನಂತಸಂಭ್ರಮಂ ಮಿಗೆ ಸಳಿಳಕೇಳಿಯಂ ತಳೆದನಂತರಂ—

ಅರೆವಿಱಿದಂಬುಜದಲರಂ
ಕರತಳದೊಳ್ತಳೆದು ಕನಕವನಜರಜಂಗ
ಳ್ಪೊರೆದಿರೆ ನಿಜತನುಲತೆಯೊ
ಳ್ಸಿರಿಯೆನೆ ನಿಂದರಸಿ ಸರಸಿಯಂ ಪೊಱಮಟ್ಟಳ್ ॥೯೭॥

---

೧ ನೆ (ಮೂ)

॥ವ॥ ಮತ್ತಮಾಗಳ್—

ಎಳೆವಾ[1]ಸೆ[1] ತೊಡರ್ದುದೆನೆ ಮಿಸು
ಪೆಳೆವಾಸೆಯದೆಸೆಯೆ ನಿಂದಳಂ ಕೈವಿಡಿದೊ
ಲ್ದೆಳೆವಾಸೆಯಾಂತನಂಬುಜ
ದೆಳೆವಾಸೆಡೆಗೊಂಡ ಪುಳಿನದೆಡೆಗವನೀಶಂ ॥೯೮॥

ನನೆಗಳ್ತೋರ್ಪವೊಲುರ್ವಿ ಸೂಸೆ ಮುಡಿಯಿಂ ಪಾರ್ವಿಂದುಗಳ್ಗಂಡದೊ
ಳ್ವನದ ಶ್ಯಾಮಳಕುಂತಳಂ ಶಶಿಯೊಳಂಕಂ ತೋರ್ಪವೋಲ್ತೊೞ್ ಕ
ಣ್ಗೊನೆ ೞೋಡಾಡೆ ವಿಲೋಹಿತಂ ವಿರಹಿರಕ್ತಾಕ್ತಾಂಗಜಾಸ್ತ್ರಂಗಳಂ
ವನಿತಾನೀಕಮದಿಂಬುವೆತ್ತು ಪೊೞಮಟ್ಟೆಯ್ದಿತ್ತು ಕಾಸಾರಮಂ ॥೯೯॥

ಅಂಗನೆಯುರಂಗಕಾಂತಿಯ
ಪಾಂಗದ್ಯುತಿ ಮುಸುಕಿದಂತಿರೆಸೆದುದು ಕೊಳದೊಳ್
ಪಿಂಗದವರೆತ್ತಿ ಸೂಸೆ ತ
ರಂಗಿಪ ಕುಂಕುಮಮುಮಮಳಚಂದನರಸಮುಂ ॥೧೦೦॥

ತಳಿರ್ವಣ್ಣವಾಂತ ಕಡೆಗ
ಣ್ಬೆಳರ್ವಣ್ಣಂಬಡೆದೆ ತುಟಿದಳಿ[2]ರ್ಪ[2]ರೆದೆಳಕಂ
ಮಿಳಿರ್ವ ನಿೞಿವಿಣಿಲುಮೆಸೆದುದು
ತಳರ್ವೆಳೆವೆಣ್ಗಳ್ಗೆ ಕುಳಿರ್ವ ಕೊಳದಿಂದಾಗಳ್ ॥೧೦೧॥

ಪೋಗಲೆಂದು ತಡಿಯೊಳ್ಧರಣೀಶ
ಸ್ತ್ರೀಗಣಂ ನೆಲಸಿ ನೋಳ್ಪುದುವಾಗಳ್
ರಾಗದಿಂ ಸರಸಿಗೊಳ್ಪುಡೆಯೀವಂ
ತಾಗಿ ಪರ್ವಿ ತಲರ್ಗಣ್ಬೆಳಗೆತ್ತಂ ॥೧೦೨॥

ಅಂಬರಮುದಮರೆ ನಾಂದು ನಿ
ರಂಬರೆಯಂತಿರ್ದ ಯುವತಿಗಿತ್ತಪಳೆನೆ ಪೀ
ತಾಂಬರಮಂ ಸರಸಿ ಸುವ
ರ್ಣಾಂಬುಜರಜಮೆಲರ ಪೊಯ್ಗಳಿಂ ನೆಗೆದೆಸೆಗುಂ ॥೧೦೩॥

---

೧ ಸು (ಮೂ) ೨ ಪಿೞಿಳೆ (ಧಾ)

ತರಳೆಯರರೆಮುಗುಳ್ದಂಬುಜ
ದರಲಂ ಕೊಯ್ದೊಯ್ದರೆಂದು ಮಱಿದುಂಬಿಗಳಾ
ಸರಸಿಯೊಡನಳ್ತು ದೂಱುವ
ಸರಮೆನೆ ಕರಮೆಸೆದುದವಱ ಗಾವರಮದಱೊಳ್ ॥೧೦೪॥

ತೆರೆ ಮಸಗೆ ನೆಗೆದು ನಿಂದಂ
ಬುರುಹದೊಳೆಮೀಂಗಳಿರೆ ವಿರಾಜಿಸಿದುದು ತ
ತ್ಸರಸಿ ಪೊಱಮಟ್ಟು ಪೋಪಾ
ತರುಣಿಯರಂ ನೀಳ್ಕಿ ನೀಕ್ಷಿಪಂತಿರೆ ಕೊಳದೊಳ್ ॥೧೦೫॥

ಕರದಿಂದಂ ಪಿಕ್ಕೆ ಬಲ್ಪಿಂದಲರ್ದ ಕುಮುದಮಂ ಸೂಡೆ ಕಂಜಾಕ್ಷಿಕಾಶ್ಮೀ
ರರಸಂ ಕಸ್ತೂರಿಯಂ ಕೂಡಿರೆ ಬಿಡದದಱೊಳ್ಕೇಳಿಯಿಂ ಪೀಲಿಗಣ್ಣಂ
ತಿರೆ ತಾಂ ತತ್ಕೇಶಬಂಧಂ ನವಿಲೆನೆ ಕರಮೊಪ್ಪಿತ್ತು ಕಚ್ಚಿರ್ದ ಕಾಕೋ
ದರನೆಂಬಂತಾಗೆ ನೇಲುತ್ತೆಸೆವ ನವಸರಃಪ್ರಾಪ್ತಶೈವಾಲಪಾಶಂ ॥೧೦೬॥

ಕುರುಳೆಂಬ ಮಾಲೆದುಂಬಿಗ
ಳರವಿಂದಾಕರಸರೋಜದೊಳ್ ಮಧುಕಣಮಂ
ಬರೆ ಪೀರ್ದಳ್ಕಿಸಲಾಱದೆ
ಭರದಿಂ ಕಾಱುವವೊಲಿಳಿವ ಜಳಕಣಮೆಸೆಗುಂ ॥೧೦೭॥

॥ವ॥ ಇಂತುಮಾ ಸಾರ್ವಭೌಮಲಲಾಮಂ ನಿರ್ವರ್ತಿತಜಲವಿಹಾರನಾಗಿ ಕಾಸಾರತಟದೊಳ್ಕಾಸಾರಘನಕಚಭರೆಯರೊಡಗೂಡಿ ನಿಂದಿರ್ಪಾಗಳ್ಕೋಶರಕ್ಷಕರ್ನೀಡಿದ ವಿಮಳವಸನಸುಗಂಧಮಾಲ್ಯಮಣಿಭೂಷಣಂಗಳಂ ತಾನುಮರಸಿಯುಮಾ ಪೃಥುನಿತಂಬೆಯರುಂ ಪರಿಗ್ರಹಿಸಿ ಬೇಱಬೇಱೆ ಪಸದನಂಗೊಂಡು ಪರಮಹರುಷದಿಂದಿನಿಸಾನುಂ ಬೇಗಮಿರ್ದು ವನಮಹತ್ತರನಂ ಕರೆದು—

ಇದು ಮಾಮರಕಿದು ಮಲ್ಲಿಗೆ
ಗಿದು ಸಂಪಗೆಗಿದು ಸರೋವರಕ್ಕಿದಶೋಕ
ಕ್ಕಿದು ಲತೆವನೆಗೆಂದಿತ್ತಂ
ಪದಪಿಂ ಬಹು ಭೂಷಣಾಂಬರಂಗಳನರಸಂ ॥೧೦೮॥

॥ವ॥ ಅಂತಿತ್ತು ಮತ್ತಮಿರದೆ—

ಆ ವನನಂದನಮಧ್ಯದ
ದೇವಾವನಿಜಾತಮೀತನೆಂಬವೊಲಿತ್ತಂ
ಶ್ರೀವಿಬುಧತತಿಗೆ ಷಸುರ
ತ್ನಾವಳಿಯಂ ರಾಜಶೇಖರಕ್ಷಿತಿಪಾಲಂ ॥೧೦೯॥

॥ವ॥ ಅಂತು ವಿತರಣವಿಳಾಸಮಂ ನಿರ್ವರ್ತಿಸಿ ಕೆಳದಿಯರಂ ಕರಿಣಿಗಳನೇಱಲ್ನಿಯಾಮಿಸಿ ನಿರತಿಶಯವಿಭವಂ ಮಿಗೆ ನಿಜನಿತಂಬಿನಿವೆರಸು ವನಮಂ ಪೊಱಮಟ್ಟು ಕರೀಂದ್ರಕಂಧರಾರೂಢನಾಗಿ ಪಟುಭಟಪಟಲಪರಿವೃತಜಯರವಮುಖರಮುಖ ವಂದಿಸಂದೋಹವಂದ್ಯಮಾನನಮಂದದುಂದುಭಿಮೃದಂಗಡಕ್ಕೆಕಹಳಾದಿ ವಾದ್ಯಾನವದ್ಯರವಪೂರಿತದಶದಿಶಾವಳಯನಾ ನರೇಂದ್ರವೃಂದಾರಕಂ ನಡೆತಂದು ನಿಜರಾಜಧಾನಿಯಂ ಪುಗುವಾಗಳ್—

ವಿಳಸತ್ಸೌಧಂಗಳೊಳ್ ಸೆಜ್ಜೆಗಳ ನೆಲೆಗಳೊಳ್ದೇವಕೂಟಂಗಳೊಳ್ನಿಂ
ದೆಳೆವೆಣ್ಗಳ್ಕಂತುವಿಂತೊಪ್ಪುಗುಮೆ ಹರಿಗಮೀ ಚೆಲ್ವು ಕೈಸಾರ್ಗುಮೇ ಕೇ
ಳ್ಕೆಳದೀ ನೋಡೆಂದು ನೋಡುತ್ತೆಸೆಯೆ ಬಿಡದೆ ತನ್ನಂದಮಂ ಬಂದು ಪೊಕ್ಕಂ
ಲಳನಾಯುಕ್ತಂ ನಿಜಾಂತಃಪುರಮನುರುಶಿವಾದ್ವೈತವಿದ್ಯಾಸಮುದ್ರಂ ॥೧೧೦॥

ಅಳಿಪ್ರಭಲಲಾಟಗಚಳಾಳಕೆ ಖಳಾಪಹೆ ಬಳಾನ್ವಿತೆ ಮಿಳದ್ಘನಗುಣೇ
ಬಳಾನುಜಬಲಿಪ್ರಿಯೆ ಕಳಾಂಚಿತಜಳೋದ್ಭವೆ ಬಳಾಹಿತಮುಖಾಮರನತೇ
ಗಳಾನ್ವಿತ ಹಲಾಹಲಬಿಲೇಶಯ ಕಳೇವರವಿಳಾಸದೆ ಕಳಂಕರಹಿತೇ
ಕಳಾಧರಕಳಾಧರೆ ಸುಲೋಚನೆ ಕಳೋಜ್ವಳೆ ಶೀಲೋಚ್ಚಯಸುತೇ ಜಯಜಯಾ ॥೧೧೧॥

ಇದು ವಿನಮದಮರವರಮಕುಟತಟಘಟಿತಮಣಿಗಣಮಹಾಪ್ರಭಾಪಟಲ
ಪರಿವೃತಪರಶಿವಶ್ರೀಪಾದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾ
ಚಂಚಚ್ಚಕೋರಾಯಮಾನಸರಸಜನಮಾನಿತೋಭಯಕವಿತಾ
ವಿಶಾರದಶ್ರೀಷಡಕ್ಷರಿದೇವವಿರಚಿತಮಪ್ಪರಾಜಶೇಖರ
ವಿಳಾಸವಿಪುಳಪ್ರಬಂಧದೊಳ್ ರಾಜಶೇಖರ
ವನವಿಹಾರಾದಿವರ್ಣನಂ
ದಶಮಾಶ್ವಾಸಂ ಸಂಪೂರ್ಣಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

ಏಕಾದಶಾಶ್ವಾಸಂ

ಶ್ರೀಚಂಡಿಕಾಮುಖೇಂದುವಿ
ಳೋಚನರುಚಿಚಂದ್ರಿಕಾಚಕೋರಂ ನತರ
ಕ್ಷಾಚತುರಂ ಭವಪಾಶವಿ
ಮೋಚಕನೆಮಗೀಗೆ ಸೌಖ್ಯಮಂ ಶಿವಲಿಂಗಂ ॥೧॥

ಅನಂತರಮರಸನಮಾತ್ಯಸುತಂಬೆರಸು ರಾಜಗೃಹದ್ವಾರದ ಪಜ್ಜಳಿಪ ಬಜ್ಜರದ ಸೆಜ್ಜೆಯೊಳೊಡ್ಡೋಲಗಂಗೊಟ್ಟಿರುತ್ತುಮಿರೆಯಿರೆ—

ಗಗನಗಜನಿಟಿಲತಟದಿಂ
ಜಗು[೧]ಳ್ದಂ[೧]ತೆ ಪುರಾಣರ[೨]ಶ್ಮಿ[೨]ಮಣಿಮಯಮುಕುರಂ
ಮಿಗೆ ಮೆಱ[೩]ದುದರರೆ ಪಶ್ಚಿಮ
ನಗದಗ್ರದೊಳಿಳಿದು ತೋರ್ಪ ದಿನಕರಬಿಂಬಂ ॥೨॥

॥ವ॥ ಅಂತು[೪]ಮ[೪]ಲ್ಲದೆಯುಂ—

ಪಡುವೆಟ್ಟಿನೆಡೆಯೊಳೊಪ್ಪುವ
ಕಡಲೊಡೆಯನ ಮಡದಿ ತೇದ ಸಿಂದೂರದ ಕೆಂ
ಪಿಡಿದೆಸೆವ ಸಾಣೆಗೆಯಿದೆನೆ
ಬೆಡಂಗುವಡೆದಿರ್ದುದಸ್ತಭಾಸ್ಕರಬಿಂಬಂ ॥೩॥

॥ವ॥ ಮತ್ತಂ—

ಇದು ಸಂಧ್ಯಾನಟರುದ್ರನ
ವಿದಿತಜಟಾಕ್ಷುಬ್ಧಫಣಿ ಮಹಾಬಿಲಮಂ ತ
ಳ್ವದೆ ಪುಗಲೊಗೆದಿರೆ ಪೊಳೆವ
ಗ್ಗದ ಫಣಿಮಣಿಯೆನಿಸಿ ತರುಣರುಚಿರವಿಬಿಂಬಂ ॥೪॥

---

೧ ಳ (ಕ) ೨ ಶಿಮು (ಕ) ೩ ಮದ (ಕ)

ಶರಧಿಗತಪ್ರತಿಬಿಂಬಂ
ಸ್ಫುರಿಸದೊಳಿರೆ ಬದ್ಧರಶ್ಮಿಯುತರವಿಬಿಂಬಂ
ಹರನಾಟ್ಯಕೆ ಕಾಲನಟಂ
ಕರಮೆತ್ತಿದ ಪೊನ್ನ ತಾಳಮೆನೆ ಕಣ್ಗೊಳಿಕುಂ ॥೫॥

ಒದೆಯೆ ನಭೋಲಕ್ಷ್ಮೀವಧು
ಪದಪಿಂ ವರುಣಾಶೆಯೆಂಬಶೋಕೆಯ ಅತೆ ಕೆಂ
ಪೊದವಿದ ತಳಿರಂ ತಳೆದಂ
ದದೆ ತಳ್ತೆಸೆದಿರ್ದುದರರೆ ಸಂಧ್ಯಾರಾಗಂ ॥೬॥

ಅರುಣಂ ಬಳಲ್ದ ತುರಗೋ
ತ್ಕರಮಂ ಮೈದೊಳೆಯಲಬ್ಧಿಯೊಳ್ತೆಗೆದು ಕೆಲ
ಕ್ಕಿರಿಸಿದ ರನ್ನದ ಪಲ್ಲಣ
ದಿರವೆನೆ ನೆಱೆ ನೆಗೆಂದ ಸಂಜೆಗೆಂಪೆಸೆದಿರ್ಕುಂ ॥೭॥

॥ವ॥ ಅಂತುಮಲ್ಲದೆಯುಂ—

ಗಗನಾಂಭೋರಾಶಿಯೊಳ್ಪಳ್ಳಿಸೆವ ಪವಳಿಳಿವೋ ಪಶ್ಚಿಮಾಶಾಂಗನಾಂಗ
ಪ್ರಗತೋದ್ಯತ್ಕುಂಕುಮಕ್ಷೋದಮೊ ವರುಣಗೃಹದ್ವಾರಸೌವರ್ಣಹರ್ಮ್ಯ
ಸ್ಥಗಿತ ಶ್ರೀಪದ್ಮರಾಗಪ್ರಭೆಯೊ ಮದನಯಾತ್ರಾದಿಯೊಳ್ಪೊಯ್ದ ಕೆಂಬ
ಟ್ಟೆಗಳೊಳ್ಗೂಡಾರಮೋ ಪೇಳೆನೆ ಪಸರಿಸಿ ಸಂಧ್ಯಾರುಣದ್ಯೋತಿ ತೋರ್ಕುಂ ॥೮॥

ಎನ್ನ ತನೂಜೆ ನಿನ್ನರಸಿಯೊಳ್ಕೆಳೆಗೊಂಡೊಡನಿರ್ಪಳಾಗಳುಂ
ನಿನ್ನ ತನೂಜೆಯೆನ್ನರಸಿ ಕೇಳದಱಿಂದೆಮಗಿಲ್ಲ ಭೇದಮಿ
ನ್ನೆನ್ನ ಮಗಂಗೆ ಕಾಯದಿರೆನುತ್ತೆ ಸರೋನಿಧಿ ಬಂದ ಭಾನುವಂ
ಮನ್ನಿಸುತಿತ್ತ ಪೀತವಸನಂ ನಿಜಮೆಂದೆನೆ ಸಂಜೆ ರಂಜಿಕುಂ ॥೯॥

॥ವ॥ ಮತ್ತಮಾಗಳ್—

ಇನವಿರಹಿಣಿಪದ್ಮಿನಿ ಕಾಂ
ತನಗಲ್ಕೆಯನಾಂತರಸುಗೆ ಮುಳಿವ ನಿಶಾಕಾಂ
ತನ ಕರಕೆ ಬೆರ್ಚಿ ಮುಚ್ಚಿದ
ಳೆನೆ ಮೊಗವಂ ಮುಗಿವ ಪಂಕಜಂ ಕರಮೆಸೆಗುಂ ॥೧೦॥

---

೧ ನೆ (ರ) ೨ ಳೋ (ಕ).

ಅಲರಂಬಂಗಂ ಬಾಗದಿ
ದಲರ್ದಂಬುಜಮೆಂದು ಬಂದು ತಜ್ಜಯಯಾತ್ರಾ
ವಿಲಸತ್ಸಮಯದೆ ಮುಗಿಯಿಪು
ದೆಲರೆನೆ ಮುಗಿವಂಬುಜೋತ್ಕರಂ ಕರಮೆಸೆಗುಂ ॥೧೧॥

ಹರನೇತ್ರಸಖಂ ಗಡ ಮುರ
ಹರನೇತ್ರಂ ಗಡ ವಿಧಾತೃಜನಕಂ ಗಡ ತಾ
ವರೆಯದ ಕರೆಯಾದುದು ಗಡ
ಸಿರಿಯೆನೆ ತಿಳಿ ಕಾಲವಶಮನಾರ್ಕಳಿದಪರೋ ॥೧೨॥

ಎಲೆ ನೆಯ್ದಿಲೆ ಸಿರಿಯಿದಱೊ
ಳ್ನೆಲಸಿದೆಯೆನೆ ಮೊರೆವ ನೆವದಿನಳಿಯದು ನೋಳ್ಪಂ
ತಲರ್ದುದದನಱಿದು ಭಯದಿಂ
ಜಲ[1]ಜಿ[2]ನಿ ಮುಚ್ಚುವವೊಲಲ್ಲಿ ಮುಗಿದುದು ಕಮಳಂ ॥೧೩॥

ಎಳಲುತ್ತಿರೆ ಪಕ್ಷಂ ತನು
ಬಳಲುತ್ತಿರೆ ಚಿತ್ತಮಿನೆಯಳಂ ನೆನೆನೆನೆವು
ತ್ತಳಲುತ್ತಿರೆ ಜೀವನಮುದು
ತೊಳಲುತ್ತಿರೆ ಸುಳಿದು ಸುಯಿದುದೊಂದು ರಥಾಂಗಂ ॥೧೪॥

ನಲ್ಲ[3]ಳ[3]ಗಲ್ದಳಲುರ್ವಿರೆ
ಮೆ[4]ಲ್ಲದೆ[4]ಬಾಯಲ್ಲಿ ಪಾಸೆದಳ[4]ಳೆ[4]ದು ರಥಾಂಗಂ
ಫುಲ್ಲಶರನೆಸುಗೆಗಾಱದೆ
ಪುಲ್ಲಂ ಕ[5]ರ್ಚಿ[5]ದವೊಲಾಗಳೇನೊಪ್ಪಿದುದೋ ॥೧೫॥

ನಳಿನದಳಂಗಳಲ್ಲಿ ಪುಳಿನಸ್ಥಳದಲ್ಲಿ ಲತಾವಿತಾನದೊ
ಳ್ತಿಳಿಗೊಳದಲ್ಲಿ ತನ್ನ ಮನದನ್ನಳನೊಲ್ದಱಸುತ್ತೆ ಸುತ್ತಿ ಕ
ಣ್ಗೊಳಲಿ ಕರಂಗಿ ಕಂಪಿಸಿ ಪಲುಂಬಿ ಬಳಲ್ದು ತೊಳಲ್ದಳಲ್ದು ಮೇ
ಣ್ಕಳವಳಿಸಿತ್ತು ಕಾಂತೆಯನಗಲ್ದೆ[6]ಸೆವಕ್ಕಿ ನಿಶಾಪ್ರ[6]ವೇ[6]ಶದೊಳ್ ॥೧೬॥

---

೧ ಜ (ರಿ) ೨ ಳನ (ರಿ, ಧಾ) ೩ ಲ್ಲೆರ್ದೆ (ಕ) ೪ ಳಿ (ರಿ) ೫ ಚ್ಚಿ (ಮೂ)
೬ ದೇ (ರಿ)

ಇಲ್ಲಿ ನಡೆತಂದೆವಪ್ಪಿದೆ
ಏಲ್ಲಿ ಬಿಸಂಗೊಂಡೆವಿಲ್ಲಿ ಬಾಯೂಡಿದೆವಿ
ಲ್ಲಿಲ್ಲಿ ನೆರೆದಿರ್ದೆವೆಂದ
ಲ್ಲಲ್ಲಿ ಕರಂ ನಿಂದು ನೆನೆದು ಸುಯ್ದುದು ಕೋಕಂ ॥೧೭॥

ಪೊಸಕತ್ತಲೆಯೆದು ತನುವಂ
ಮುಸುಂಕೆ ಕರ್ಬಕ್ಕಿಗೆತ್ತಗಲ್ವುದು ಚಕ್ರ
ಪ್ರಸರಮಗಲ್ದುದದಲ್ಲದೊ
ಡೆಸೆವಿರುಳೊಳಗಲ್ಕೆಯುದಕದೇಂ ಸಮನಿಕುಮೋ ॥೧೮॥

ಘನಸಂಧ್ಯಾರಾಗತೀವ್ರಾನಲನೊಳೊಲವಿನಿಂ ಕಾಸಿ ತಿಗ್ಮಾಂಶುವೆಂದೆಂ
ಬ ನವೀನಸ್ವರ್ಣಸತ್ಪಿಂಡಮನಮಳನಭಶ್ರೀಗಲಂಕಾರಮಂ ಮಾ
ಳ್ಪೆನೆನುತ್ತಿಚ್ಛೈಸಿ ಪೂರ್ವೇತರಶರನಿಧಿಯೊಳ್ಕಾಲನೆಂಬೋಜನಳ್ದ
ಲ್ಜನಿಸುತ್ತು[೧]ರ್ಬೆ[೧]ಳ್ದುದೋ ಕಾರ್ಬೊಗೆಯೆನೆ ದೆಸೆದೀವಿತ್ತು ಘೋರಾಂಧಕಾರಂ
॥೧೯॥

ನಿಜಕರದಿಂದೆ ರಾಜವಸುವೆಲ್ಲಮನೊಯ್ವನೆ ಕಳ್ದು ನೀಲನೀ
ರಜನಿಯ ಬಾಯ ಮುದ್ರಿಸಿ ಪಿಸುಣ್ಗೆಡೆದಪ್ಪಳೆನುತ್ತೆ ಮತ್ತೆ ನೀ
ರಜನಿಯೊಳೊಲ್ದು ಪುಷ್ಪವತಿಯೊಳ್ದಿವದೊಳ್ಬೆರೆದಿಂತು ಸತ್ಪಥ
ತ್ಯಜನಮನಾಳ್ದು ಬಿಳ್ದಳಿದ ಸೂರ್ಯನ ದುರ್ಯಶಮಪ್ಪುದೀ ತಮಂ ॥೨೦॥

ಮತ್ತಂ—

ಪುರಹರನರ್ತನೋತ್ಸವದೊಳೋಸರಿಸಿರ್ದ ಕರೀಂದ್ರಚರ್ಮಮೋ,
ನರನಯನಾಳಿ ಮತ್ಸ್ಯತತಿಯಾಳಿಪ ಕಮ್ಮಡುವೋ, ನಭಸ್ತಮಾ
ಲ ರುಚಿರಪಲ್ಲವಾವಲಿಯೊ, ತೀವಿದ ತಾರಗೆದುತ್ತುಗಳ್ಗೆ ಮೇ
ಲುರವಣೆಸುತ್ತೆ ಬರ್ಪ ಬಲಿಭೋಜನಜಾಲಮೊ ಮರ್ಬಿನೇಳ್ಗೆಯೋ ॥೨೧॥

ಉಡುವೊಡೆ ನೀಲಚೇಲಮಲರ್ಗಣ್ಗೆರದೆಚ್ಚುವೊಡಂಜನಂ ಬಳ
ಲ್ಮುಡಿಯೊಳೆ ತಾ[೨]ಳ್ಪೊ[೨]ಡುತ್ಪಳ[೩]ದಳಸ್ರ[೩]ಜಮಂಗದೊಳಣ್ಪುಗೆಯ್ದು ಬೊ
ಟ್ಟಿಡುವೊಡೆ ಭಾಳದಲ್ಲಿ ಮೃಗನಾಭಿಜಮಿಂದ್ರಮಣೀವಿಭೂಷಣಂ
ತೊಡುವೊಡೆ ಜೋಡೆಯರ್ಗೆ ಪಿರಿದಾದುದು ಪರ್ಬಿದ ಮರ್ಬು ಲೋಕ[೪]ದೊಳ್[೪]
॥೨೨॥

---

೧ ಜ್ಜೇ (ಮೂ, ಕ, ಬ) ೨ ಳೊ (ಮೂ), ಳ್ಪೊ (ಧಾ) ೩ ಸ್ರಜ (ಮೂ) ೪ ಮಂ (ಕ)

ಬಿಗಿದ ಬೆಳ್ಳಿಯ ನುಣ್ಮಣಿಯಂತೆವೊ
ಳ್ಭಗಣಮೊಪ್ಪಿರೆ ಕಾಲವನೇಚರಂ
ಜಗದ ಲೋಚನಮೀನಕೆ ಬೀಸಿದ
ನೆಗಳ್ದ ಕರ್ಬಲೆವೋಲ್ತಮಮೊಪ್ಪುಗುಂ ॥೨೩॥

॥ವ॥ ಅಂತಿಟ್ಟಣಿಸಿ ಪರ್ಬಿದಂಧಕಾರದಲ್ಲಿ—

ಬಳಿಗಳ್ಗಲ್ಕಿನದಂತೆ ಕಣ್ಬೆಳಗದೆತ್ತಂ ಸೂಸದಂತಿಟ್ಟ ಮಂ
ಜುಳಭೂಷಾಳಿಯ ಸಿಂಜಿತಂ ನೆಗಳದಂತಾಸ್ಯಾಬ್ಜಗಂಧಕ್ಕೆ ಮಂ
ಡಳಿಗೊಂಡಾಜಿಡಿವಿಂಡು ಗಾವರಿಸದಂತೋರಂತೆ ಜಾಣ್ಮೆಕ್ಕು ಪುಂ
ಶ್ಚಳಿಯರ್ ಬಂದುಪಕಾಂತಸೂಚಿತನಿಶಾಂ[೧]ತಾ[೧]ಂತಂಗಳಂ ಪೊರ್ದಿದರ್ ॥೨೪॥

॥ವ॥ ಅವರೊಳೊರ್ವಳ್—

ಕ್ಷಣರುಚಿರುಚಿರೇಕ್ಷಣೆ ಪಾ
ರ್ವಣವಿಧುಮುಖಿಪಾಣ್ಬೆ ಪೋಗಲಳವಲ್ಲದೆ ತ
ಲ್ಲಣಿಸಿ ಪೆಡಂಮೆಟ್ಟುತ್ತಂ
ಗಣ[೨]ಕ್ಕೈದು[೨]ತೆ ಸುಯ್ದು ಬೈದಳಾ ಕಮಳಜನಂ ॥೨೫॥

ಮಾರನೃಪಂ ಕಾರೊಳ[೩]ಯೊ
ಳ್ಕೂರಸಿಯಂ ಪುಗಿಸುವಂತೆ ವೀಥಿಯ ತಮದೊ
ಳ್ಜಾರೆ ಘನಧೀರೆ ತನುರುಚಿ
ಸಾರಾಂಗೆ ಪೊದಳ್ದು ಪೊಕ್ಕು ಬರ್ಪವಳೆಸೆದಳ್ ॥೨೬॥

ರಸೆಯಂ ಪರ್ಬಿದ ಮರ್ಬಿನೊ
ಳ್ಕು[೪]ಸು[೪]ಮಶರಂ ನಿಜಶರಂಗಳಿಂ ಗುಜಿ[೩]ಸೊ[೩]ಡು
ತ್ತೆ ಸತಿಯ[೪]ರ[೪]ನಿಸುವನವರ್ಗಳ
ಬಿಸುರುಹದಳಧವಳವಿಪುಳಕೇಕರರುಚಿ[೫]ಂಬಿಂ[೫] ॥೨೭॥

---

೧ ತೆ (ರಿ) ೨ ಕೊಯ್ದು (ಮೂ) ೩ ಳಸೆ (ರಿ, ಕ) ೪ ರೆ (ರಿ) ೫ ಯೆಂ (ಕ)

ಉಟ್ಟು[೧]ತ್ತ[೧]ಮಾಲಪಟ್ಟೆಯನೆ ಕ[೨]ಸ್ತು[೨]ರಿಯಂ ನಿಜದೇಹದಲ್ಲಿ [೩]ಗ[೩]
ಣ್ಪೆಟ್ಟು ಸುರೇಂದ್ರನೀಲಮಣಿಭೂಷಣಮಂ ತಳೆದುತ್ಪಳಸ್ರಜಂ
ಬಟ್ಟದುಱುಂಬಿನೊಳ್ಮೆಱೆಯೆ ನೀಲದ ಚೇಲದ ಮೇಲುದಾಂತು ಕ
ಣ್ಗೆಟ್ಟಳಮಾದಳೊರ್ವಳೆಳೆಯಳ್ತಮಮಂ ಪದೆದಪ್ಪಿದಂತೆವೋಲ್ ॥೨೮॥

॥ವ॥ ಆಗಳೊರ್ವಳ ದೂತಿ[೪]ಧೂರ್ತ[೪]ನಿ[೫]ರ್ಪ[೫] ಸಂಕೇತಸದನಕ್ಕೆ ನಿಜಸಖಿಯನೊಡಗೊಂ[೬]ಡೈತ[೬]ಂದು ಕಳುಪುವಲ್ಲಿ—

ಮುಳಿಯದಿರಾಳಿ ನಿನ್ನ ಮನದಾಸರಮಾತುಮನಾಡಿ ಪೊಳ್ತ ನೀಂ
ಕಳಿಯದಿರಾತನೊಳ್ನಖರದಕ್ಷತಸಂತತಿಯಂ ರತಾಂತದೊ
ಳ್ತಳೆಯದಿರುಟ್ಟುದಂ ಕಳೆಯದಿರ್ನೆಱೆದೀಗಳೆ ಬೇಗ ಬರ್ಪುದು
ತ್ಪಳಸಖಮಂಡಳೋದಯಕೆ ಮುನ್ನಮೆನು[೭]ತ್ತುಱೆ[೭]ಬುದ್ಧಿ[೮]ವೇಳಿದಳ್[೮] ॥೨೯॥

॥ವ॥ ಅವಳೆಂದುದನಪ್ಪುಕೈದುಪಕಾಂತನೆಡೆಗೆ ಬಂದು—

ಉಡುಗಣದಂತೆ ಮೆಯ್ಯೊಳಿಡಿದೊಪ್ಪೆ ಬೆಮರ್ನಿಜನೇತ್ರಕೈರವಂ
ಬಿಡದನುರಾಗಮುಂ ತಳೆಯೆ ಪೆರ್ಮೊಲೆಯೆಂಬೆಣೆವಕ್ಕಿ ಗಾಸಿಯಂ
ಪಡೆದಿರೆ ತತ್ಕರಾಹತಿಯಿನಂದಿನನಿಲ್ಲದ ವೇಳೆಯಲ್ಲಿರು
ಳ್ಮಡದಿವೊಲಂಬರಂಬೆರಸು ಪಾಣ್ಬೆ ಕಳಾನಿಧಿಯೊಂದುಗೂಡಿದಳ್ ॥೩೦॥

॥ವ॥ ಮ[೯]ತ್ತಮೊ[೯]ಂದೆಡೆಯೊಳೊರ್ವಳ್ ಪಾಣ್ಬೆ—

ಉಗುರ್ಗೊನೆ ನಾಂಟದಂತೆ ಪಿಡಿ ಬಲ್ಮೊಲೆಯಂ ನಿಱಿಯಂ ಸಡಿಲ್ಚಿ ನೀ
ನುಗಿಯದಿರುಟ್ಟುದಂ ಜಡಿದು ಪೊಯ್ಯದಿರೊಯ್ಯನೆ ಮೆಯ್ಯ ಬಾಸುಳಂ
ನೆಗಪದಿರೆನ್ನ ಚೆಂದುಟಿಗೆ ಪಲ್ಮೊನೆ ನಾಂಟದ ಮಾಳ್ಕೆಯಿಂದೆ ಮೆ
ಲ್ಲಗೆ ಮಿಗೆ ಚುಂಬಿಸೆಂದು ಸತಿ ಶಿಕ್ಷಿಸಿದಳ್ಪೊಸಪಾಣ್ಬನೊರ್ವನಂ ॥೩೧॥

॥ವ॥ ಅದಲ್ಲದೆ ಪೆಱತೊಂದು ತಾಣದೊಳೊರ್ವ ಜಾತಿ[೧೦]ಜಾರೆ[೧೦] ಜವ್ವನದ ಜಾರನಂ ಕಂಡು—

---

(೧) ತ್ತ (ಮೂ) ೨ ತ್ತು (ಮೂ, ಧಾ, ಕ) ೩ ಜಗ (ಕ) ೪ ಧೂತ ೫ ಪ್ಪ (ಮೂ) (ಮೂ) ೬ ಡೆಳ್ತ (ಧಾ) ೭ ತ್ತಿರೆ (ಮೂ) ೮ ವೇಳ್ದಪಳ್ (ಧಾ) ೯ ತ್ತೊಂ (ಧಾ) ೧೦ ಜವ್ವನದ ಜಾರೆ (ಮೂ)

ಇನನಿಲ್ಲ[೧]ವಿ[೧]ಂದು ಬಾರಂ
ಘನತಿಮಿರಮಿದಪ್ಪುದಕಟ [೨]ನೇಹ[೨]ಮದಿಲ್ಲಂ
ಮನೆಯೊಳ್ನೊಡರಿದೆ ಪೋದು[೩]ದು[೩]
ಜನರಹಿ[೪]ತಂ[೪] ನೆರೆಯಿದೆಂದು ಪದಿರಿಂ ನುಡಿದಳ್ ॥೩೨॥

॥ವ॥ ಅದಂ ಕೇಳ್ದದಿರದ್ಯೈತಂದವಂ ಮದನಕೇಳಿವಡೆದೆಸೆದಿರ್ದನಲ್ಲಿ ಮ[೫]ತ್ತ-ಮೊಂ[೫]ದೆಡೆಯೊಳ್—

ತೊಡೆ ಕಡುಕಂಪಿಸುತ್ತಮಿದೆ ಮೈ ಬೆವರುತ್ತಿದೆ ಕೆತ್ತುಗುಂದದಿ
ಟ್ಟೆಡೆಮೊಲೆ ಮೋಹಿಸುತ್ತಿದೆ ವಿಲೋಚನಮುಂಚಿತಚಂಚಲತ್ವಮಂ
ಬಿಡದಿದೆ ಗದ್ಗದಂಬಡೆದ ಮಾತಿದೆ ಭೀತಿಯೊ ಕೂರ್ತ ರೀತಿಯೋ
ಮಡದಿಗೆನುತ್ತೆ ಸಂಕಿಪನ ಸಂದೆಗಮಂ ಬಿಡಿಸಿತ್ತು ಮು[೬]ಂಬ[೬]ದಂ ॥೩೩॥

॥ವ॥ ಮತ್ತಂ—

ವದನೇಂದು[೭]ಜ್ಯೋ[೭] [೭]ತ್ಸ್ನೆ[೭]ಯೆತ್ತಂ ಕವಿದಪ್ಪುದೆನುತಂ ಪಾಣ್ಬನಾಸ್ಯಾಬ್ಜದೊಳ್ಮು
ಚ್ಚಿದಳಕ್ಕುಂ ಕಣ್ಗದಿರ್ಮಿಂಚುಗುಮೆನುತದನಾಮೀಲನಂಗೈದಳಕ್ಕುಂ
ಮದ[೮]ಭೃ[೮]ಂಗಂ ಬರ್ಕುಮೆಂದಳ್ಕುತೆ ಪಿರಿದು ನಿಜಶ್ವಾಸಮಂ ಸೂಸಳಕ್ಕುಂ
ವಿ[೯]ದಿ[೯]ತಂ ತಾನೆಂಬಿನಂ ಜಾಣ್ಮೆಗುತುಪ[೧೦]ರ[೧೦]ತಿಯೊಳ್ಕೂಡಿಪಳ್
ಜೋಡೆಯೊರ್ವಳ್ ॥೩೪॥

॥ವ॥ ಮತ್ತಮೊಂದು ಪಾಳ್ದೇಗುಲದಲ್ಲಿ—

ಗಳನಿನದಕ್ಕೆ ಕಾತರಿಪ ಕಂಠಮನೊಯ್ಯನೆ ಸಂತವಿಟ್ಟು ಮೈ
ಗಳಮು[೧೧]ಸು[೧೧]ಪಿಂಗೆ ಮೈಮಱಿವ ಚಿತ್ತಮನೆಚ್ಚರಿಸುತ್ತೆ ದೈನ್ಯಮಂ
ಗಳಪಲೊಡರ್ಚಿ ಗದ್ಗದಿಪ ಮಾತುಗಳಂ ಮಱಪಿಕ್ಕಿ ಪೊಯ್ಮಲಂ
ವೆಳಸುವ ಕೈಯನೋಸರಿಸಿ ಕೂಡುವ ಪಾಣ್ಬೆಯ ಜಾಣ್ಮೆ ಸಾಲದೇ ॥೩೫॥

ಆಗಳೆ ಮುಳಿಸಾಗಳೆ ತಿಳಿ
[೧೨]ವಾ[೧೨]ಗಳೆ ಪೊಸಬ್ಬೆಗುಳಾಗಳೇ ಪೊಯ್ಗಳ್ ಮ
ತ್ತಾಗಳೆ ಸವಿಸುಸಿಲೆಸಗುವ
ಳಾಗಳೆ ಪಾಣ್ಬಂಗೆ ಸುರತಸುರಲತೆ ನಿಜದಿಂ ॥೩೬॥

---

೧ ದಿ (ಮೂ), ದವಿ (ಕ), ಮಿಂ (ಬ) ೨ ಈಯ (ರಿ) ೩ ದೆ (ರಿ) ೪ ತರ್ (ಮೂ) ೫ ತ್ತೊಂ (ಮೂ) ೬ ಬಂ (ಕ) ೭ ಜೋ (ಮೂ), ತ್ಸೆ (ರಿ) ೮ ಶ್ಯಂ (ರಿ) ೯ ಧಿ (ರಿ, ಧಾ) ೧೦ ಹ (ಬ) ೧೧ ಸು (ರಿ), ನಸ (ಕ) ೧೨ ಪಾ (ರಿ)

ಮೆಲ್ಲನೆ ಬರ್ಪ ಮೆಲ್ಲನಮರ್ದಪ್ಪುವ ಮೆಲ್ಲನೆ ಚುಂಬಿಪಳ್ಕಱಿಂ
ಮೆಲ್ಲನೆ ನೋಳ್ಪ ಮೆಲ್ಲನುಸಿರಿಕ್ಕುವ ಮೆಲ್ಲನೆ ಲಲ್ಲೆಗೈವ ಮೇ
ಣ್ಮೆಲ್ಲನೆ ಪಾಯ್ವ ಮೆಲ್ಲನೊಡಗೂಡುವ ಮೆಲ್ಲನೆ ಸೌಖ್ಯವಾಂಪ ತ
ಮ್ಮೆಲ್ಲ ನೆಗಳ್ತೆದೋಱಿ ಪೊಸಜಾಣ್ಮೆಯ ಪಾಣ್ಬೆಯರಿರ್ದರೋಪರೊಳ್ ॥೩೭॥

ಇಡಿದ ತಮವೆಂಬ ಜಗುನೆಯ
ಮಡುವಿನ ಮಧ್ಯದೊಳೆ ಸುಳಿವ ಮೀಂಗಳಿವೆಂಬಂ
ತಿಡಿಕಿಱಿದು ತುಱುಗಿ ಮಿಱುಗುತೆ
ಕಡು ಸೊಗಸಂ ಪಡೆದುವರರೆ ತಾರೆಗಳಾಗಳ್ ॥೩೮॥

॥ವ॥ ಮತ್ತಂ—

ದಿನಮಣಿಯೆನ್ನೊಳಗಿರೆ ಮ
ತ್ತಿನಮಣಿಯೇವಾಳ್ತೆಯೆಂದು ವನವಿಧಿ ಪೊಸಮು
ತ್ತಿನ ಮಣಿಗಳನಿದೆ ಚಲ್ಲಿದ
ನೆನೆ ಮಣಿನಿಭತಾರೆಗಳ್ಮನಂಗೊಳಿಸಿರ್ಕುಂ ॥೩೯॥

ಬಿಸಜಾಪ್ತನ ಬಿಸುವಿಸಿಲಿಂ
ಬಸವಳಿದಾಕಾಶ ಕೇಶವಾಂಗದೆ ನಿಶೆ ಸಿಂ
ಪಿಸಿದ ಮಲಯರುಹರಸಕಣ
ವಿಸರಂ ತಳ್ತಂತೆ ತಾರೆಗಳ್ಸೊಗಯಿಸುಗುಂ ॥೪೦॥

ಇನನಪರಾಂಬುರಾಶಿಯೊಳೆ ಬೀಳ್ದಳಿವುತ್ತಿರೆ ಕಂಡಗಲ್ಕೆಗಿ
ರ್ಚಿನ ಸೆ೧ಕೆ೧ಪತ್ತೆ ತಾಳಲಳವಲ್ಲದೆ ವಾಸರಲಕ್ಷ್ಮಿ ಕಣ್ಣನೀ
ರ್ವನಿಗಳನೆಯ್ದೆ ಸೆಳ್ಳುಗುರ್ಗಳಿಂ ಮಿಡಿಯ೨ಲ್ಸಿ೨ಡಿದಲ್ಲಿ ತಳ್ತುವೆಂ
ದೆನೆ ರಮಣೀಯವಾದುವಮರಾಧ್ವದೊಳೆಲ್ಲೆಡೆಯಲ್ಲಿ ತಾರೆಗಳ್ ॥೪೧॥

೧ ಪೆ (ರಿ, ಕ, ಬ, ಧಾ) ೨ ಲ್ಪಿ (ಮೂ)

ಸುರಪಶಿಖಿಶಮನನೈಋತಿ
ವರುಣಾನಿಲಧನಪತೀಶರೊಲವಿಂ ಕೆದರ್ದಂ
ತಿ[೨] ಪುಷ್ಪಾಂ[೧]ಜ[೧]ಲಿಯಂ ಶಂ
ಕ[೨]ಂಗೆ ಸಂಧ್ಯಾನಟಂಗೆ ನೆಗೆದುದು ಭಗಣಂ ॥೪೨॥

॥ವ॥ ಅನಂತರಂ—

ನಳಿನಂ ಕುಂದೆ ವಿಕಾ[೨]ಸ[೨]ಪೊಂದೆ ಕುಮುದಂ ಸೊಂ[?]ದೆ ಚಂದ್ರೋಪಳಂ
ಜಳಮಂ ಬೀೞ್ಕೆ ಪಯೋಧಿ ಮೀೞ್ಕೆ ವಿರಹಿವ್ರಾತಕ್ಕೆ ಕಾಯ್ಪೇೞ್ಕೆ ಕೋ
ಮಳೆಯರ್ಪಾಡೆ ಚಕೋರಿ ನೋಡೆ ಮದನಂ ಪಂಚಾಸ್ತ್ರಮಂ ಪೂಡೆ ಚಾ
ಪಳೆಯರ್ಜೋಡೆಯರೋಡೆ ಮೂಡಿದುದು ತೇಜೋಮಂದಿರಂ ಚಂದಿರಂ ॥೪೩॥

ಅಂಬರಪುಷ್ಪವಾಟಿಯೊಳರ[೩]ಲ್ದ[೩]ಡುಪುಷ್ಪಕದಂಬಮಂ ಚಕೋ
ರಾಂಬಕಿ ಪೂರ್ವದಿಗ್ವಧು ಕರಂ ತಿೞಿಯಲ್ ಕರಮೆತ್ತಿ ನೀಳ್ಕೆ ರಾ
ಗಾಂಬರದಂತೆ ಸಂಜೆ ನಸುಜಾಱೆ ಜಲಕ್ಕನೆ ಪೊಣ್ಮಿದೊಂದುರೋ
ಜಂ ಬಗೆವೊಂದು ರಂಜಿಪವೊಲುಜ್ವಳಮಾದುದು ಚಂದ್ರಮಂಡಳಂ ॥೪೪॥

॥ವ॥ ಅಂತುಮಲ್ಲದೆಯುಂ—

ಇದು ತಮಮೆಂಬ ಶಂಬರಧಿಯಂ ಸಲೆಪೀರ್ವ ಮಹೌರ್ವವಹ್ನಿಯೋ
ಇದು ತಮಮೆಂಬ ಕರ್ಪಿಡಿದ ಕಾನನಮಂ ಸುಡುವ[೪]ಗ್ನಿ[೪]ಪಿಂಡಮೋ
ಇದು ತಮಮೆಂಬ ಕೃಷ್ಣಭುಜಗವ್ರಜಮಂ ತವೆಕೊಲ್ವ ತಾರ್ಕ್ಷ್ಯಮೋ
ಇದು ತಮಮೆಂಬ ರಕ್ಕಸನನಿಕ್ಕುವ ಚಕ್ರಮೊ ಚಂದ್ರಬಿಂಬಮೋ ॥೪೫॥

॥ವ॥ ಮತ್ತಂ—

ತಿಮಿರಭ್ರಮರವ್ರಜಮಾ
ಕ್ರಮಿಸಿರೆ ಭಗಣಪ್ರಸೂನಕುಲಕಿಂದ್ರದಿಶಾ
ರಮಣಿ ತೆಮಱಲ್ಕೆ ಚಂಪಕ
ಸುಮಕಂತುಕಮಿಟ್ಟಳೆನಿಕುಮಾ ವಿಧುಬಿಂಬಂ ॥೪೬॥

೧ ಜು (ರಿ, ಮೂ, ಧಾ) ೨ ಶ (ಮೂ, ಧಾ, ಬ) ೩ ಲುಂ (ಬ)
೪ ಹ್ನಿ (ಮೂ).

ಸಿಡಿದ ಕಿಡಿ ಬಳಸಿದುಡುಗಣ
ಮಡರ್ದುರಿ ಸಂಧ್ಯಾಂಶುವೆನೆ ತಮೋಯಮನೊಪಲಂ
ಸುಡಲೆಸಪ ಕಾಲಶೂಲಿಯ
ಕಿಡಿಗಣ್ಗೆಣೆವಂದುದರುಣರುಚಿವಿಧುಬಿಂಬಂ ॥೪೭॥

ಬಳಸಿದ ಕೆಂಬೆಳಗಿನಿಸಿನಿ
[೧]ಸ[೧]ಳಿದುದು ಬೆಳ್ವೆಳಗು ಬೆಳೆದುದೀಕ್ಷಿಸುವೆಳೆವೆ
ಣ್ಗಳ ಕಣ್ಗಳ ನುಣ್ಬೆಳಗುಗ
ಳಳುರ್ದಂತಿರೆ ಮೂಡಿ ಮೋಹಿಸುವ ಮೃಗಧರನಾ ॥೪೮॥

ಒರಸೆ ಮದಮೆಯ್ದೆ ಪೊರೆದಂ
ತಿರೆ ಕಱೆಯುಡುರಾಜಿ ಫೂತ್ಕರಿಸಿದಂಬುಕಣೋ
ತ್ಕರದಂತಿರೆ ಚಂದಿರನಿಂ
ದಿರನಾನೆಯ ಪುಷ್ಕರಂಬೊಲೇನೊಪ್ಪಿ[೨]ದನೋ[೨] ॥೪೯॥

ನೀಲನಭಃಸ್ಥಳಾಚ್ಯುತ ಲಲಾಟತಟಚ್ಯುತ ರಕ್ತಧಾರೆಗಳ್
ಸಾಲಿಡುತೊಕ್ಕು ಮಿಕ್ಕು ಪರೆದಂತಿರೆ ಪರ್ಬಿದ ಸಂಜೆಗೆಂಪು ತ
ತ್ಕಾಲಕಪಾಲಪಾಣಿ ಧೃತಚಂದ್ರಕಪಾಲಮೆ ಪೀರ್ದುದೆಂಬಿನಂ
ಬಾಲರಸಾಲಪಲ್ಲವ[೩]ಸ[೩]ಮದ್ದ್ಯುತಿ ತದ್ಯುತಿ ಪಿಂಗಿತಾಕ್ಷಣಂ ॥೫೦॥

ಅಮಿತಾಖಂಡಾಂತರಿಕ್ಷೋನ್ನತನುತಶಿವಲಿಂ[೪]ಗಾಂ[೪]ಘ್ರಿಯಂ ನೋಡಲುದ್ಯ
ತ್ತಮಮೆಂಬಾ ಸೂಕರಾಕಾರದ ಹರಿಧರೆಯೊಳ್ಪೊಕ್ಕಪೋಲ್ಪೋಗೆ ತಲ್ಲಿಂ
ಗಮುಹಾಶೀರ್ಷಾಗ್ರಮಂ ನೋಡುವ ಜವದೆ ಮರಾಳಾಂಗಮಂ ತಾಳ್ದಜಂ ಸಂ
ಭ್ರಮದಿಂ ಪಾರ್ವಂತೆ ಕಣ್ಗೊಪ್ಪಿದುದಮೃತಕಳಾಪೂರಿತಾಂಗಂ ಸುಧಾಂಗಂ ॥೫೧॥

॥ವ॥ ಮತ್ತಂ—

ಚೆನ್ನಾದುದಮೃತಕರಬಿಂ
ಬಂ ನೋಳ್ಪರ ಕಣ್ಗೆ ಜೊನ್ನಮೆಂಬ ಮಹೇಶಂ
ತನ್ನ ವಿಯ[೫]ಚ್ಚಿ[೫]ಕುರದೊ[೬]ಳ್[೬] ಸ
ಮುನ್ನತ ಸಿತ ನೀರಜಾತಮಂ ಸೂಡಿದವೋಲ್ ॥೫೨॥

---

೧ ಸು (ರಿ) ೨ ದುದೋ (ಮೂ) ದಪೊ (ಬ) ೩ ತ (ಮೂ) ೪ ವಾ (ಮೂ) ೫ ಚ್ಚ (ರಿ) ೬ ಸಂ (ಬ)

ಭಗಣಮೌಕ್ತಿಕಧರಾಭೃಕೃಷ್ಣನಂ
ಬಗಿಯಲಿಂದ್ರಹರಿದದ್ರಿಭಾಂಡದಿಂ
ತೆಗೆದು ತಾಳ್ದ ನವನೀತಪಿಂಡಮಂ
ಬಗೆಯೆ ಪೋಲ್ತುದಮೃತಾಂಶುಮಂಡ[1]ಲಂ[1] ॥೫೩॥

ವ್ಯೋಮಶ್ರೀಪತಿಪಾಂಚಜನ್ಯಮುಡುಮಾರ್ಗಾಗಾರಮುಕ್ತಾಮಯೋ
ದ್ದಾಮಶ್ರೀಕಳಶಂ ನಭೋಂಬುಧಿಸಿತಾಂಭೋಜಂ ವಿಯದ್ದಂತಿವ
ಕ್ತ್ರಾಮೋದಾವಹಚಂದ್ರಕಾಂತಮುಕುರಂ ಚೆಲ್ವಾದುದಾಕಾಶಮಾ
ರಾಮಾಜಾತಸಿತಾತಪತ್ರಮವಧಾತಂ ಬಿಂಬಮಬ್ಜಾರಿಯಾ ॥೫೪॥

ಚಂಚಚ್ಚಕೋರಪಾಂಥ
ರ್ಮುಱಿಂಚುವ ಸಂಭ್ರಮದಿನೀಂಟೆ ರಜನೀಸತಿ ಶೋ
ಭಾಂಚಿತಹಿಮಕರಕಲಶದಿ
ನೇಂ ಚಂದ್ರಿಕೆಯೆಂಬ ಜಲಮನೆಱೆದಳೊ ನಭದೊಳ್ ॥೫೫॥

ತಮಮೆಂದು ವಿಧುಂತುದನಾ
ಮಮನಿಟ್ಟದಱಿಂಗರುಚಿಯನಾಂತುದಿದೆಂದಾ
ಹಿಮರುಚಿಕ[2]ರ[2]ದಿಂ ಸದೆದಂ
ತಿಮಿರಮನಿನಿಸುಳಿಯದಂತೆ ಬಿಡದೆಲ್ಲೆಡೆಯೊಳ್ ॥೫೬॥

ಎಳೆವಳುಕಿನ ಕರಗದೊಳು
[3]ಜ್ವಳಜಳಮಂ[3] ತೀವಿ ರಜನಿ ಪರಿಮಳಕೆಂದು
ತ್ಪಳಮಿ[4]ಳಿ[4]ಪಿದೊಡದು ತೋರ್ಪವೊ
ಲಳಿಮಳಿನಂ ಶಶಿಕಳಂಕಮೇಂ ರಂಜಿಸಿತೋ ॥೫೭॥

ಭುವನಮನೆಲ್ಲಮಂ ಪುದಿದು ತೀವಿದ ಚಂದ್ರಿಕೆಯೆಂಬ ಪಾಲ್ಗಡ
ಲ್ತವಕದಿನೆನ್ನ ಪುತ್ರನನಿಳಾಜನಮೀಕ್ಷಿಸೆ ದೃಷ್ಟಿಪಾತದಿಂ
ನವೆದಗಪಂದು ತೂಪಿಱಿದ ಸೀಕರದಂತಿರೆ ತಾರಕಾಳಿಯೊ
ಪ್ಪುವ ಪಣೆಗಿಟ್ಟ ಕಜ್ಜಳದ ಬೊಟ್ಟೆನಲೊಪ್ಪಿದುದಿಂದುಲಾಂಛನಂ ॥೫೮॥

---

೧ ಳಂ (ಕ) ೨ ದಿ (ಕ) ೩ ಜ್ವಳಮಂ (ಕ) ೪ ಳು (ಮೂ ಬ)

ತಿಮಿರೋದ್ಯದ್ಯಮುನಾತರಂಗಿಣಿಪಿತಂ ತಾನೆತ್ತ ಪೋದಂ ಗಡೆಂ
ದು ಮಹಾದುಃಖದಿನೆಂಟುದಿಕ್ಕಿನೊಳೆ ನೋಡುತ್ತಿಪ್ಪುದುಂ ಕೂಡೆ ಚಂ
ದ್ರಮನಾರಕ್ತತೆವೆತ್ತು ಮತ್ತುದಿಸೆ ತಾತಭ್ರಾಂತಿಯಿಂದಪ್ಪಿದ
ಳ್ಕ್ರಮದಿಂದೆಂಬವೊಲಿಂಬುವೆತ್ತುದು ಕಳಂಕಂ ತತ್ಸುಧಾಧಾಮನಾ ॥೫೯॥

ಗಿರಿಶಲಲಾಟಲೋಚನಧನಂಜಯನಿಂ ಪರಿದಗ್ಧನಾದ ಭಾ
ಸುರಕುಸುಮೇಷು ಪಂಕರುಹನಾಭನ ನಾಭಿಸಿತಾಂಬುಜಾತದೊಳ್
ಮರಳಿ ಜಗಲ್ಲಗ್ಕನುದ್ಭವಿಪನೆಂಬವೊಲೊಪ್ಪಿದುದಭ್ರಮಧ್ಯದೊಳ್
ಕರಮೆಸೆದಿರ್ಪ ಚಂದ್ರಮನ ಸುಣ್ಣಗರೆ ನೋಳ್ಪೊಡದೊಂದು ಚೆಲ್ವಿನಿಂ ॥೬೦॥

ಇದು ಪೂರ್ವದಿಶಾವಧುವೆ
ತ್ತಿದ ಶಶಿಮಣಿಮುಕುರಮಮೃತಕರಮಂಡಳಮ
ಲ್ತಿದು ಚಿಹ್ನಮಲ್ತು ಮಧ್ಯದೊ
ಳೊದವಿದ ಮಾರ್ಪೊಳಪು ವಿಷ್ಣುಪದವಿಷ್ಣುವಿನಾ ॥೬೧॥

ಚಂದ್ರಿಕಾಜಳಧಿ ತೀವಿ ಲೋಕಮಂ
ಸಾಂದ್ರಮಾಗಿ ನೆಗೆದುರ್ವೆ ಭೀತಿಯಿಂ
ಚಂದ್ರಮಧ್ಯವಟಪತ್ರದಲ್ಲಿ [1]ಲ
ಕ್ಷ್ರೀಂ[2]ದ್ರುನಿರ್ಪನೆನೆ ಲ[3]ಕ್ಷ್ಮೀ[3]ಮೊಪ್ಪು[4]ಗುಂ[4] ॥೬೨॥

ದೆಸೆವೆಣ್ಗಳಂಗಮಂ ಮಿಗೆ
ಮುಸುಕಿದ ತಿಮಿರಗ್ರಹಂಗಳಂ ಕೂರ್ಪಿಂದೋ
ಡಿಸಿದಂ ಮೃಗಾಂಕಮಾಂತ್ರಿಕ
ನಸಮಜ್ಯೋತ್ಸ್ನಾವಿಭೂತಿಯಂ ತಳಿದಾಗಳ್ ॥೬೩॥

ಎರಳೆವಱಿ ತನ್ನ ಕೋಡಿ
ಟ್ಟೊರಸಿದೊಡೆ ಸುಧಾಂಗಸಂಗಮಂ ಸೀಳ್ದೆಡೆಯಿಂ
ಸುರಿದು ಪಸರಿಸಿತೊ ಪೊಸಪಾ
ಲ್ಸರಿಯೆನೆ ಬೆಳ್ದೊಜ್ನಮಿಳಿದದೇಂ ಮುಸುಕಿದುದೋ ॥೬೪॥

---

೧ ಳ (ರಿ) ೨ ಪಕ್ಷೀಂ (ಮೂ) ೩ ಕ್ಷ್ಮ (ರಿ) ೪ ಹಂ (ಕ)

ಮಿಸುಪ ನಿಶಾನಿತಂಬಿನಿಗೆ ಬೆ[1]ಳ್ಳ[1]ಡೆಯಾದುದು ಭಾಸುರೋಚಿಯಿಂ
ಬಸವಳಿದೀ ಧರಾಂಗನೆಗೆ ಚಂದನಲೇಪನಮಾದುದಂಬುಜ
ಪ್ರಸರದಗಲ್ಕೆಯಿಂ ನೆಗೆ[2]ದ[2] ತುಂಬಿಗೆ ಮಲ್ಲಿಗೆಮಾಲೆಯಾದುದಾ
ಪಸಿದ ಚಕೋರಿಗಳ್ಗೆ ಸುಧೆಯಾದುದು ಕಾಂತಿ ಸುಧಾಮಯೂಖನಾ ॥೬೫॥

ಮೊಗೆಮೊಗೆದೀಂಟಿಯೀಂಟಿ ತನುಮಧ್ಯಕೆ ತಳ್ವದೆ ಸುತ್ತಿಸುತ್ತಿ ವೇ
[3]ಣಿ[3]ಗೆ ಮಿಗೆ ಸೂಡಿ ಸೂಡಿ ಲಲಿತಾಂಗದೊಳೊಯ್ಯನೆ ಪೂಸಿ ಪೂಸಿ ಮೆ
ಲ್ಲಗೆ ಬಿಡದೆರ್ಬಿಯೆರ್ಬಿ ಬಗೆದಂದು ಮುಳುಂಗಿ ಮುಳುಂಗಿ ಕೌತುಕಂ
ಬಗೆಗೊಳೆ ನೋಡಿ ನೋಡಿ ನಲಿ[4]ದ[4]ತ್ತಬಳಾಜನಮಚ್ಚಜೊನ್ನಮಂ ॥೬೬॥

ಧರೆಯೆಲ್ಲಂ ಚಾರುಚಂದ್ರೋಪಳವಿರಚಿತಮಾದಂತೆ ತೋರ್ದತ್ತು ಮೇಲಂ
ಬರಮೆಲ್ಲಂ ಕೂಡೆ ಧೌತಾಂಬರದ ನವವಿತಾನಂಬೊಲಿಂಬಾದುದಾಶೋ
ತ್ಕರಮೆಲ್ಲಂ ಚಂದನಾಲೇಪನದೆ ಬಳಿದವೋಲೊಪ್ಪುತಿರ್ದತ್ತು ಧಾತ್ರೀ
ನರರೆಲ್ಲಂ ಚಂದ್ರಸಾರೂಪ್ಯಮನೆ ಪಡೆದರೆಂಬಂತೆ ಕಣ್ಗೊಪ್ಪುತಿರ್ದರ್ ॥೬೭॥

ಗಗನಮೆನಿಪ್ಪ ಪಾಳ್ವೊಲದೊಳರ್ಕಸಮುದ್ಧೃತಿಗೆಯ್ದು ಸಂಜೆಯಿಂ
ಬಗಿನಿಯನಿಟ್ಟು ಮರ್ಬೆನಿಪ ಗೊಬ್ಬರವಂ ತಳಿದಲ್ಲಿ ಚೆಲ್ಲಿ ತಾ
ರಗೆಗಳೆನಿಪ್ಪ ಬಿಳ್ತುಗಳನಂತವಕೈಂದವಬಿಂಬರೌಪ್ಯಕುಂ
ಭಗತಸುಧಾಮರೀಚಿಜಳಮಂ ಸುರಿದಂ ಸಲೆ ಕಾಲಪಾಮರಂ ॥೬೮॥

ಇದು ಚಂದ್ರಾತಪಮಲ್ತು ತೀವಿದ ಸುಧಾವಾರಾಕರಂ ಮೇಲೆ ತೋ
ರ್ಪುದಿದಂಭೋಜವಿರೋಧಿಮಂಡಳಮುಮಲ್ತಲ್ತೀಸುತಿರ್ಪಂಚೆ ಮ
ತ್ತಿದು ತಾಂ ಲಾಂಛನಮಲ್ತು ತದ್ವದನದೊಳ್ಕರ್ಚಿರ್ದ ನೀಲಾಬ್ಜಮಿಂ
ತಿದು ತಾರಾತತಿಯಲ್ತು ಪಕ್ಷಯುಗಳವ್ಯಾಕೀರ್ಣಬಿಂ[5]ದು[5] ವಜ್ರಂ ॥೬೯॥

॥ವ॥ ಎಂ[6]ಬ[6] ಸಂಭ್ರಮಮನಪ್ಪುಕೈದೊಪ್ಪುವ ಸಾಂದ್ರಚಂದ್ರಿಕಾಸಂಪದಮನ
ಭೀಕ್ಷಿಸಿ—

ಅವಧರಿಸೆನ್ನ ಬಿನ್ನಪಮನುರ್ವಿಪ ಪರ್ವಿದ ಪಾರ್ವಣೇಂದು ಸಂ
ಭವನವರುಂದ್ರಚಂದ್ರಿಕೆಯೊಳಾಂಪುದು ರಾತ್ರಿವಿಹಾರಕೇಳಿಯು
ತ್ಸವಮನೆನುತ್ತೆ ಕೈಮುಗಿದ ನಾಗರಿಕಂಗುಡಲಿತ್ತು ತಳ್ವದೇ
ಳ್ದವನಿಪರೂಪಪಂಚಶರನೋಲಗದಿಂ ನಡೆತಂದನಳ್ತಿಯಿಂ ॥೭೦॥

---

೧ ಳ್ಮು (ಮೂ) ೨ ದು (ಮೂ) ೩ ಣ್ಮೆ (ಮೂ) ೪ ವು (ಮೂ) ೫ ದ (ಕ)
೬ ದು (ಮೂ).

ಅಂತೈತಂದಂತಃಪುರಮಂ ಪೊಕ್ಕು ಸುಗಂಧೋದಕಕೃತಸ್ನಾನನುಂ, ವಿಭೂತಿ ರುದ್ರಾಕ್ಷವಿಳಸಿತಕಳೇವರನುಂ, ಪರಿರಚಿತಶಿವಲಿಂಗಸಮರ್ಚನ ತತ್ಪ್ರಸಾದಪಾದೋದಕಾಸ್ವಾದನಸಂತುಷ್ಟಹೃದಯನುಂ, ಸಾರಕರ್ಪೂರಸುರಭಿಪರಿಮಿಳಿತ ತಾಂಬೂಲ ನಿಜಮುಖಾಂತರ್ವಳಯನುಂ, ಸರಸಪರಿಮಳಮಧುರಮಾಲತೀ ಮಾಲಿಕಾಲಂಕೃತ ಮನೋಜ್ಞಕಬರೀಭರನುಂ, ಮೃಗಮದಲಲಾಮಲಸಿತಲಲಾಟತಟನುಮಮಳಮೌಕ್ತಿಕ ಕರ್ಣಾಭರಣಕಮನೀಯಮುಖಮಂಡಳನುಂ, ಭಗಣಭಾಸುರರುಚಿನಿಚಯನಿಚಿತರುಚಿರ ತರತಾರಾಹಾರರಮಣೀಯವಿತತೋ[೧]ರ[೧]ಸ್ಥಳನುಮತಿವಿಶದವಜ್ರಮಣಿಖಚಿತಕಂಕಣಾಭಿರಾಮಕರಾಗ್ರನುಮನೇಕಮಣಿಗಣಾಗಣಿತ ಭೂಷಣಭೂಷಿತಾವಯವನುಮಭಿನವ ಕಸ್ತೂರಿಕಾಕಾಶ್ಮೀರ ಕದಂಬಕರ್ದಮಾನುಲಿಪ್ತವಕ್ಷಃಸ್ಥಳನುಮತಿನವೀನದಿವ್ಯಾಂಬರಾ–ವೃತಸೌಂದರ್ಯವಿಗ್ರಹನುಮಾಗಿ ನಾಗರಿಕಾದಿ ಭೋಗಸಖರಿಂದನುಕೂಲದಕ್ಷಿಣದೃಷ್ಟ ಶಠರೆಂಬ ಶೃಂಗಾರರಸಪ್ರ[೨]ದಾ[೨]ನನಾಯಕರಿಂ ಧೀರೋದಾತ್ತಮುಖಸರ್ವರಸಪ್ರಧಾನ ನಾಯಕರಿಂದಾವೃತನಾಗಿ ರಾಗದಿಂ ಸಚಿವಸುತಸಮೇತಂ ಚಂದ್ರಿಕಾವಿಹರಣಂಗೆಯ್ಯಲ್ಕನಂದಂದು ನೃಪೇಂದ್ರಚಂದ್ರಂ ನಿಜಕಟಾಕ್ಷ ವೀಕ್ಷಣಸಾಂದ್ರಚಂದ್ರಿಕಾದ್ವಿಗುಣಿತ ಚಂದ್ರಿಕಾವಿಳಸಿತನುಮಾಗಿ ಮದನ ಮದಮಧುಕರ ಮಧುರಮಾಲತೀಮಾಲಾನುಕಾರಿಯಂ ಸೂಳೆಗೇರಿಯಂ ಪುಗುತಂದಿಂದ್ರದಿಗ್ಭಾಗದೊಳಂದಂಬಡೆದಿಂದುಬಿಂಬಮನವಲೋಕಿಪಾಗಳ್ ನಾಗರಿಕಂ ಕೈಮುಗಿದಿಂತೆಂದಂ—

ಜೊನ್ನಂ ಪಾಲ್ಗಡಲಂತಿದೆ
ಜೊನ್ನೊಡಲಂ ನಳಿನನಾವೆಯಂತಿದೆ ಚಿಹ್ನಂ
ತನ್ನಂ ಪೆತ್ತಳ ತವರೆನು
ತುಂ ನೋಡಲ್ತಳರ್ವ ಮದನನಂತಿದೆ ನೃಪತೀ ॥೭೧॥

॥ವ॥ [೩]ಮತ್ತಂ[೩]ತುಮಲ್ಲದೆ—

ಸಂಜೆಗೆ ರಾಗವಾಗೆ ನಗೆ ನೆಯ್ದಿಲಮಂದತಮೋಸಿತಾಂಬರಂ
ತಾಂ ಜರಿದೊಪ್ಪೆ ರಾತ್ರಿಗುಡುಘರ್ಮಪಯಃಕಣಮೇಳೆ ಮೈಯೊಳಿ
ತ್ತಂ ಜವದಿಂ ನಭಃಸ್ಥಳಿಗೆ ಸೋಂಕಿ ಕರಾಗ್ರದೆ ಕಣ್ಗೆ ರಂಜಿ[೪]ಪಾ[೪]
ಮಂಜುಳಚಂದ್ರಮಂಗೆ ಮಹಿಯಲ್ಲಿ ಕಳಾನಿಧಿನಾಮಮೊಪ್ಪದೇ ॥೭೨॥

---

೧ ರು (ಮೂ) ೨ ಧಾ (ಮೂ) ೩ ಅಂ (ಧಾ) ೪ ಪೀ (ಮೂ).

॥ವ॥ ಎನೆ ಮಗುಳ್ದು ಮತ್ತಮೊರ್ವನಿಂತೆಂದಂ—

ದ್ವಿಜಚಕ್ರಕ್ಕನಿಮಿ೧ತ್ತ೧ಮಾತ್ಮಕರದಿಂ ಸಂತಾಪಮಂ ಮಾಡಿಯುಂ
ದ್ವಿಜರಾಜಂ ಕಮಲಾರಿಯಾಗಿ ವಿಧು ಹಂಸದ್ವೇಷಿ ಮೇಣಾಗಿಯುಂ
ನಿಜದಿಂದಬ್ಜನಭಂಗಲಕ್ಷಣಯುತಂ ತಾನಾಗಿ ದೋಷಾಕರಂ
ರಜನೀಸಂಚರನಾಗಿಯುಂ ಕುವಲಯಾಪ್ತಂ ನೋಡಿದೇಂ ಚಿತ್ರಮೋ ॥೭೩॥

॥ವ॥ ಎನೆ ಕೇಳ್ದು ಮಿತವಚನನಿಂತೆಂದಂ—

ದ್ವಿಜರಾಜಾಭಿದೆಯೊಪ್ಪದೇ ಸಸಿತಪಕ್ಷಂಗೇನನಂತಾಶ್ರಯಂ
ಗೆ ಜಗದ್ವಿಶ್ರುತಮಾಗದೇ ವಿಧುಸಮಾಖ್ಯಾನಂ ಘನಶ್ರೀಯುತಂ
ಗೆ ಜನಂ ೨ಮು೨ಚ್ಚದೆಯಬ್ಜನಾಮಮನೆ ದಲ್ ದೋಷಾಕರಾಹ್ವಾನಮೀ
ರಜನೀಚಾರಿಗೆ ಸಲ್ಲದೇ ಕುವಲಯಾಪ್ತಂ ರಾಜನೇನಲ್ಲವೇ ॥೭೪॥

॥ವ॥ ಎಂದು ಮತ್ತಮಿಂತೆಂದಂ—

ಕುವಲಯಕಧಿಪತಿಯಪ್ಪನೆ
ತವೆ ಲಕ್ಷಣಯುಕ್ತನಲ್ಲದಿರ್ದೊಡೆ ರಾಜಂ
ಕುವಲಯಕಧಿಪತಿಯಪ್ಪನೆ
ತವೆ ಲಕ್ಷಣಯುಕ್ತನಲ್ಲದಿರ್ದೊಡೆ ರಾಜಂ ॥೭೫॥

ಸುರಪವರಚಕ್ರರುಚಿವಿ
ಸ್ಫುರಿತ ಸಿತದ್ಯುತಿ ಮಹೋತ್ಪಳಪ್ರಿಯಮಿತ್ರಂ
ವರ ಮಂಡಳಾಂಕನೀ ಹಿಮ
ಕರನೆಸೆದಪನಾ ದಿನೇಶನನೆ ನೋಡರಸಾ ॥೭೬॥

॥ವ॥ ಎಂಬ ಚತುರವಚನನಿಚಯಮಂ ಕೇಳ್ದು ೩ಮ೩ಚ್ಚುತ್ತಂ ಮನುಜ ಮನೋಜನಲ್ಲಿಂ ಮುಂದಣ್ಗೆ ನಡೆತರುತ್ತಮಿರೆ ತೊಟ್ಟನೆ ಕಟ್ಟಿದಿರೊಳ್—

ನುತವಾರಸ್ತ್ರೀಕುಚಾಗ್ರಚ್ಯುತಮೃಗಮದಕಾಶ್ಮೀರಕರ್ಪೂರಧೂಳೀ
ಕೃತಧೂಳೀಕೇಳಿ ಚಂಚದ್ಭ್ರಮರಚಲಶಿಖಂಡಂ ತದೀಯಾಲಯಾಲಂ
ಬಿತಘಂಟಾನಾದಕೋಲಾಹಲರುತಿವಿದಳತ್ಕೈರವಾನೀತಮಧ್ವಂ
ಚಿತಲಾಲಂ ಲೀಲೆಯಿಂ ಬಾಲಕನೆನೆ ಸುಳಿದಂ ಸ್ವೈರಚಾರಂಸಮೀರಂ ॥೭೭॥

೧. ತ್ಯ (ಭಾ) ೨ ಮೆ (ರಿ) ೩. ಮೆ (ರಿ).

॥ವ॥ ಅಂತು ಸುಳಿವ ಮಂದಾನಿಲಸಂ ಮನದಳ್ಕಱಿಂದಾಲಿಂಗಿಸುತ್ತುಂ ಬರೆವರೆ ಮದನಮಹಾರಾಜನ ಮನ್ನಣೆಯ ವಿಳಾಸಿನಿಯರೊಂದುಗೂಡಿ—

ತರಳಾಪಾಂಗಪ್ರಕಾಶಂ ಕೆದಱಿ ಮದನಬಾಣಂಗಳಂ ಮಂಜುಮಂಜೀ
ರರವಂ ಕಂದರ್ಪಬಾಣಾಸನಗುಣರುಚಿಯಂ ಸೂಸೆ ಮಂದಸ್ಮಿತಂ ಶಂ
ಬರಸಂಹೃತ್ಕೀರ್ತಿಯಂ ಮುಂದಿಡೆ ರತಿಪಲಸತ್ತೇಜಮಂ ಬೀಱಿ ಬಿಂಬಾ
ಧರರಾಗಂ ರಾಗಮಂ ನೋಳ್ಪರೊಳೆ ಪಡೆವುತುಂ ಪೋಯ್ತು ಪ[೧]ಣ್ಯ[೧]ಪ್ರತಾಸಂ ॥೭೮॥

॥ವ॥ ಅದನಾ ನಾಗರಿಕನರಸಂಗೆ ತೋಱುತ್ತೈತರುತ್ತಿರೆಯಿರೆ—

ಮನೆಮನೆದಪ್ಪದೊಪ್ಪಿದುದು ಮಾರನ ಪೆಂಪು ಮಹೋತ್ಪಲಾಸ್ತ್ರಕೀ
ರ್ತನೆ ಮಕರಾಂಕಸಂಭ್ರಮಮನಂಗನ ಕೂರ್ಪು ಮನೋಜ್ಞಪುಷ್ಪಧ
ನ್ವನ ಬಿಱಿದಾಂಕಮಾಲೆ ಮಧುಮಿತ್ರನ ಪೂಜೆ ಮನೋನಿವಾಸನಿಂ
ಪಿನ ಕಥೆ ಮನ್ಮಥಕ್ಷಿತಿಪನಾರ್ಪು ಮನೋಜನ ಮಂಗಳೋತ್ಸವಂ ॥೭೯॥

॥ವ॥ ಮತ್ತಮಲ್ಲಿ—

ನಗೆವೆಳ್ಪಿಂಬೆಳೆಜೊನ್ನಮಂ ಪರಪಿ ಕಾಂತಾಸ್ಯಾಂಬುಜಾತಂಗಳಂ
ನಗಿಪಭೂಷಣರೋಚಿರಾತಪಮನಾಗಳ್ಬೀಱಿ ಕೂರ್ತೋಪರ
ಕ್ಷಿಗಳೆಂಬುತ್ಪಳಮಂ ಮರಲ್ಚುವರಜಸ್ರಂ ತಮ್ಮ ಮೂಗೆಂಬ ಸಂ
ಪಗೆಯಿಂ [೨]ಮು[೨]ಚ್ಚಿಪರಾಣ್ಮದುಂಬಿಗಳನೇನಂ ಮಾಡರಬ್ಜಾಕ್ಷಿಯರ್ ॥೮೦॥

ನಗೆಗಣ್ಣೋ ನವನೀಲನೀರರುಹಮೋ ರಾಕಾನಿಶಾಕಾಂತನೋ
ಮೊಗಮೋ ಚೆಂದುಟಿಯೋ ರಸಾಲದಳಮೋ ಧಮ್ಮಿಲ್ಲಮೋ ಕಾರಕಾ
ರ್ಮುಗಿಲೋ ಪೊಂಗಳಸಂಗಳೋ ಮೊಲೆಗಳೋ ಕುಂಭೀಂದ್ರಕುಂಭಂಗಳೋ
ಬಗೆಗೊಳ್ವೀ ಜಘನಂಗಳೋಯೆನೆ ವಿಟರ್ ವಿಭ್ರಾಜಿಕುಂ ವೇಶ್ಯೆಯರ್ ॥೮೧॥

ಕೊರಲೊಳ್ಕೊಂಕಿನ ಮಾತು ಮುದ್ದುಮೊಗದೊಳ್ ಮಂದಸ್ಮಿತಂ ನೋಡದಂ
ತಿರೆ ನೋಳ್ಪೊಂದು ವಿಡಾಯಮಕ್ಷಿಯೊಳೆ ಪುರ್ಬೊಳ್ಜಬ್ರ್ ಸೌಗಂಧಬಂ
ಧುರಮಂದ[೩]ಶ್ವ[೩]ಸಿತಂ ಸುನಾಸಿಕೆಯೊಳೆಂದುಂ ಯೌವನ ಶ್ರೀವಿಳಾ
ಸರುಚಿ ಸ್ಫೂರ್ತಿ ನಿಜಾಂಗದೊಳ್ಮೆಱೆಯೆ ಕಣ್ಗೆಂಬಾದರಬ್ಜಾಸ್ಯೆಯರ್ ॥೮೨॥
*

---

೧ ಣ್ಯಾ (ರಿ) ೨ ಮೆ (ರಿ) ೩ ಸ್ವ (ರಿ)

* ಮತ್ತಮೊರ್ವಳಗಣ್ಯಲಾವಣ್ಯತಾರುಣ್ಯವತಿ (ಮೂ)

ನಗೆ ನೋಟಂ ಪೊಸಮಾತು ರೀತಿ ಗಮಕಂ ಗಾಂಭಿರ್ಯಮೌದಾರ್ಯಮ
ಚ್ಚಿಗಮುತ್ಸಾಹಮಲಂಪು ಸೊಂಪು ಸೊಗಸೊಯ್ಯಾರಂ ಬೆಡಂಗಳ್ಕಱ
ಪ್ಪುಗೆ ಚಲ್ಲಂ ಚದುರೋಜೆ ಚಾಟುತನಮಂದಂ ಬಂಧಮೊಳ್ಪೇಟವಿ
ಚ್ಚಿಗೆ ಸಂದೊಂದುವ ಕೂಟಮೆಲ್ಲಮವರ್ಗೇಂ ಮೈಸಂದು ಮಚ್ಚಿರ್ದುದೋ ॥೮೩॥

॥ವ॥ ಮತ್ತಮಿಂತೊಪ್ಪುವ ಸಿಂಗರದ ಸೀಮೆಯೆನಿಪ ಭಾಮಿನಿಯರೊಳೊರ್ವ ಕಾಮಿನಿವೊತ್ತೆಗೊಳಲೆಂದು ನಿಜಗೃಹದ್ವಾರದ ಮಣಿಮಯಸ್ತಂಭಮಂ ನೆಮ್ಮಿ—

ನಗೆಮೊಗಮಿಟ್ಟ ಕುಂಕುಮದ ಬೊಟ್ಟು ತುಱುಂಬಿದ ಜಾ[೧]ದಿ[೧] ದೋಱೆವ
ಲ್ಮೃಗಮದದಣ್ಪು ತೊಟ್ಟ ನವಕಂಚುಕಮುಟ್ಟ ಸಿತಾಂಬರಂ ಕರಂ
ಝುಗರ್ಝುಗಿಪಚ್ಚರನ್ನದೊಡವೊಪ್ಪುವ ಮಾಣಿಕಗೊಪ್ಪ ಚೊಲ್ಲೆಯಂ
ಬಗೆಗೊಳಿಸಿರ್ಪ ಸೋರ್ಮುಡಿ ಘನಸ್ತನಮೊಪ್ಪಿರೆ ನೀಱೆ ತೋಱಿದಳ್ ॥೮೪॥

॥ವ॥ ಮತ್ತಮೊರ್ವಳಗಣ್ಯಲಾವಣ್ಯತಾರುಣ್ಯವತಿ—

ಬಡನಡು ಬಟ್ಟಬಲ್ಮೊಲೆ ಬಳಲ್ಮುಡಿ[೨]ನ[೨]ಲ್ನುಡಿ ನೀಳ್ದ ಕಣ್ಮರ
ಲ್ನಿಡುವೆರಲಿಂಪು ಸೊಂಪಿಡಿದ ಚೆಂದುಟಿ ನುಣ್ದೊಡೆ ಚೆಲ್ವುದಾಳ್ದಮೆ
ಲ್ಲಡಿ ಕಡುಬಿಣ್ಪುವೆತ್ತ ಪೊಱವಾರ್ತುಱುಗಿರ್ದವೆ ಸಣ್ಣಪುರ್ಬು ತೆ
ಳ್ಪೊಡೆ ಸುಲಿಪಲ್ಗಳಂದದ ಕದಂಪಿರದೊಪ್ಪಿರೆ ಕಣ್ಗೆ ತೋಱಿದಳ್ ॥೮೫॥

॥ವ॥ ಮತ್ತಮೊರ್ವಳಪೂರ್ವಸೌಂದರ್ಯಸೌಭಾಗ್ಯವತಿ—

ತೊಡೆದ ಜವಾದಿಯಿಂ ಮುಡಿದ ಕಮ್ಮರಲಿಂ ಪಿಡಿದಂಬುಜಾತದಿಂ
ಜಡಿವ ನಿತಂಬದಿಂ ನುಡಿವ ಕೈಗಿಳಿಯಿಂ ಕೊಡದಂ[೩]ದ[೩]ಮಾಗಿ ಪೆಂ
ಪಡರ್ದಕುಚಂಗಳಿಂ ಕು[೪]ಡಿ[೪]ತೆಗಂಗಳಿನಿಂಪಿಡಿದಾಸ್ಯಬಿಂಬದಿಂ
ಬಡನಡುವಿಂದೆ ಚೆಲ್ವಿಡಿದ ಪೆಣ್ಮಣಿಯಂ ನಡೆನೋಡಿದಂ ನೃಪಂ ॥೮೬॥

॥ವ॥ ಮತ್ತಮೊರ್ವಳ್ವೃತ್ತಸ್ತನೆ ಚಿತ್ತಜನ ಮತ್ತಕಾಶಿನಿಯಂತೆ ಮುತ್ತಿನ ಮತ್ತವಾರಣಮಂ ತ್ರಿಭಂಗಿಯಿಂ ನೆಮ್ಮಿ ನಿಂದು—

೧ ಜಿ (ಮೂ) ೨ ನೆ (ಮೂ) ೩ ನ್ನ (ಕ) ೪ ಡು (ಮೂ).

ಮೇಳಂಗೈದುರ್ವಿಸುತೆ ಶ್ರುತಿಯಂ ವೀಣೆಯಂ ವಕ್ಷದೊಳ್ಮೇಣ್
ತಾಳುತ್ತಂ ಪೆರ್ಮೊಲೆಗೆ ಮೊಲೆ ತಾಂ ಪುಟ್ಟಿತೆಂಬಂತೆ ತೋಱಲ್
ಕೇಳಲ್ಕೆಂದೈತರೆ ವಿಟಮೃಗಂ ಬಾಜಿಸುತ್ತಿರ್ದಳೊರ್ವಳ್
ವೇಳಾವಳ್ಯಾದ್ಯಖಿಳ ವಿಳಸದ್ರಾಗಮಂ ರಕ್ತಿಯಿಂದಂ ॥೮೭॥

॥ವ॥ ಅಲ್ಲಿ ಪೆಱಳೊರ್ವಳ್ ಜಾಣೆ ವೀಣೆಯಂ ಶ್ರುತಿಗೆಯ್ದು, ಸೋರೆಯಂ ಸ್ತನಾಗ್ರದೊಳೌಂಕಿ ಸರಳತರಕರಾಂಗುಲಿಯನಿಟ್ಟು—

ಸುಲಲಿತೆ ವರಾಳಿ ಕುಂತಳೆ
ವಿಲಸತ್ಕಲ್ಯಾಣಿ ಶಂಕರಾಭರಣ ಸಮು
ಜ್ವಲವೇಣಿರಾಗರಂಜಿತೆ
ಚಲಿಸದೆ ಪೊಸದೇಸಿ ಸೋಮಮುಖಿ ಬಾಜಿಸಿದಳ್ ॥೮೮॥

॥ವ॥ ಅದಂ ಕೇಳ್ದು ಮೆಚ್ಚುತಂ ಸಂಗೀತಸರ್ವಜ್ಞಂ ಮುಂದಣ್ಗೆ ನಡೆತರುತ್ತು-ಮಿರೆಯಿರೆ ನಿಜಗೃಹದ ಮುಂದಣ ಮಣಿಮಯಾಂಗಣದೊಳ್ವಿದಗ್ಧೆಯರ್ನೆಱೆದೆಳ-ವೆಣ್ಗಳೊಡಗೂಡಿ ಗಾಡಿಯಿಂ ನಿಂದು ಶಶಿಕಾಂತದೊರಲೊಳ್ಕೆಂಬರಲ್ಕೇಸಕ್ಕಿಯಂ ಪೊಯ್ದಿಂದ್ರನೀಲದೊನಕೆಯಂ ನಿಡುದೋಳ್ಗಳಿಂ ನೆಗಪಿ—

ಮದನಂಗೆ ಜಯಮಕ್ಕೆ। ಮಧುಗೆ ಸಂಪದಮಕ್ಕೆ
ಬಿದುಗದಿರಿಂತು ನೆಲಸಿರ್ಕೆ ರತಿಗೆ ಸಂ
ಮದಮೆಂದು ತೊಲಗದಿರುತಿರ್ಕೆ ॥೮೯॥

ಮನದಿಚ್ಛೆಯಿಂ ಮುಂಚಿ। ತನುವಿತ್ತು ನಲ್ಲರೊಂ
ದನುವಱಿದೊಂದಿ ಸ[೧]ವಿ[೧]ದೋರ್ವ ಸೂಳೆಯರಾ
ಮನೆಯ ಮುಂದಿರದೆ ಸುರಧೇನು ॥೯೦॥

ಸುರತ[೨]ಕಿ[೨]ಚ್ಛೈಸಿ ಮೇಲ್ವರಿವ [೩]ಕಾಂತ[೩]ನ ಕಂಡು
ಕರಗಿ ಕಾತರಿಸಿ ನೆಱೆವ ನೀಱೆಯ ಮನೆ
ಸಿರಿಗಂಬುಜಾತಮೆನಿಸದೆ ॥೯೧॥

ಪೊಱಮಿಂಚುಗೈವನಂ ಬಱಿವಾತುಗಾಱನಂ
ಕಱುಬನಂ ಕಪಟಹೃದಯನಂ ಧೂರ್ತನಂ
ತೊಱೆಯದುದೆಗ್ಗತನ[೪]ವ[೪]ಲ್ತೆ ॥೯೨॥

---

೧ ಸದೆ (ಧಾ, ಮ) ೨ ಕ್ಕಿ (ರಿ, ಮೂ) ೩ ನಲ್ಲನ (ಮೂ) ೪ ಮ (ಧಾ)

ಒರ್ವನೊಳ್ವಂಚಿಸಿ ಕೊರ್ವಿದ ಬೇಟಮ
ನೊರ್ವನೊಳಿಲ್ಲದಿರ್ದೊಡಂ ತನಿವೇಟ
ಮುರ್ವಿಸಿ ಪಣವಂ ಪಡೆವುದು ॥೯೩॥

ತಾನೇ ಮೇಲಿಕ್ಕದೆ ಮಾನವಂ ಬಲಿದು ಕಾ
ಮಾನುರಾಗತೆಯಂ ಮನಕಿತ್ತು ಮೇಲಿಕ್ಕ
ಲಾ ನೇಮವಱಿದು ನೆಱೆವುದು ॥೯೪॥

ನಗೆ ನೋಟ ನುಡಿಗಳಿಂ ತೆಗೆದು ಭುಜಂಗರ
ಬಗೆಯ ಬಂದದ[೧]ಱೊಳೊ[೧]ಡಗೂಡಿ ಮೋಹಿಪ
ಳ್ಮೃಗ್ಗುಳಂಬನರಸಿಗೆಣೆಯಲ್ತೆ ॥೯೫॥

ಸ್ತನದ ಬಿಣ್ಪನೆ ನೋಡಿ ಮನವಿಕ್ಕುವರ್ವಿಟ
ರ್ಕನಕಪಂಕಜದ ಬಿ[೨]ಱಿ[೨]ಮುಗಳನೆ ನೋಡಿ
ಮನವಿಕ್ಕುವಂ[೩]ತೆ[೩] ಮಱಿದುಂಬಿ ॥೯೬॥

ಚದುರಂಗ ನೆತ್ತಮಿಂಪೊದವಿದ ಪಾಡು ಸ
ಕ್ಕದದೋದು ಹಾಸ್ಯ[೪]ಮಿನಿಗಬ್ಬ[೪]ಮೊಳ್ಪದಿ
ಲ್ಲದ ಸೂಳೆವನೆಯೆ ಬಱುವನೆ ॥೯೭॥

॥ವ॥ ಎಂದು ಸುವ್ವಿವಾಡನೆವದಿಂ ವೇಶ್ಯಾನೀತಿಯನೆಳೆವೆಣ್ಗಳ್ಗುಪದೇಶಿಪ ವಿದಗ್ಧ-ಯರ ವಿಳಾಸಮನಿಳಾಪತಿತಿಳಕಂ ನಿರೀಕ್ಷಿಸುತಂ ಬರುತ್ತಿರೆ ಮುಂದೊಂದೆಡೆಯಲ್ಲಿ–

ಮೊಳೆವೆಳೆಲಜ್ಜೆ ಮೋಹಿಪ ಮುಗುಳ್ಮೊಲೆ ಮುದ್ದಿನಿವಾತು ಮಿಂಚನು
ಚ್ಚಳಿಸುವ ಚೆಲ್ಲೆನೋಟಮಳಿಕುಂತಳಮುಜ್ವಳಕಾಯಕಾಂತಿ ಮಂ
ಜುಳಮಧುರಾಧರಂ ಮಿಸುಪನುಣ್ಗದಪುಣ್ಮುವ ಬಾಸೆ ಬೇಟಮಂ
ಬಳಯಿಸಿ ನೋಳ್ಪರೊಳ್ಮೆಱೆವ ಮುಗ್ಧೆಯನೀಕ್ಷಿಸಿದಂ ನರೇಶ್ವರಂ ॥೯೮॥

೧ ಱೊಡ (ಮೂ) ೨ ಟು (ರಿ) ೩ ತೀ (ಕ) ೪ ಗಬ್ಬ (ಮೂ)

॥ವ॥ ಆಗಳ್ವಿಟನಿಂತೆಂದಂ—

ನೋಡಿದೊಡಾಗಳಂತೆ ತಲೆವಾಗುವ ನೋಡದೊಡೊಲ್ದುನೋಳ್ಪ ಮಾ
ತಾಡಿಸೆ ಸುಮ್ಮನಿರ್ಪ ನುಡಿಗುಂದಿರೆ ಮೆಲ್ಲನೆ ಸೊಲ್ಲಿಪಿಚ್ಛೆಯಿಂ
ಕೂಡಲೊಡರ್ಚೆ ಮೈದೆಗೆವಗಲ್ದಿರಲೊಯ್ಯನೆ ಸಾರ್ವ ಮುಗ್ಧೆಯೇಂ
ಮಾಡಳೆ ಮಚ್ಚಿದೋವನ ಮನಕ್ಕೆ ಮನೋಜಮಹೋತ್ಸವಂಗಳಂ ॥೯೯॥

॥ವ॥ ಎಂಬ ನುಡಿಗೇಳ್ದಿವಂ ತನ್ನನುಭವಮಂ ಪ್ರಕಟಿಸಿದಪನೆಂದು ನಸು-ನಗುತ್ತಲ್ಲಿಂ ತಳರುತ್ತಿರೆ ಮತ್ತೊಂದೆಡೆಯೊಳೊರ್ವ ಮುಗ್ಧೆ ಒಳಗೊಳಗೆ ಬಳೆದಳ-ವಿಗಳಿಂದ ವಿರಹಾನಳನಿಂದಳವಳಿದು ಕಳವಳಿಸಿ ಕಳೆಗುಂದಿದಂದಮಂ ನೆವ-ಮಿಟ್ಟು ಮಱಸಿ ಧೈರ್ಯಗುಂದದಿರೆ ಕೆಳದಿ ತಿಳಿದಿಂತೆಂದಳ್—

ಬೆಳರ್ಗೆಂಪಂ ತಳೆದಿರ್ದ ಚೆಂದುಟಿದಳಿರ್ನಿಸ್ಸಾರಮಾದತ್ತು ಮೈ
ಗಳಿಕಂಪಂ ಪಡೆಯಲ್ಕೆ ಬಂದು ಪೆಱಪಿಂಗುತ್ತಿರ್ಪುದೀ ನಿನ್ನ ಸು
ಯ್ಗಳೆ[1] ತಾಗುತ್ತಿರೆ ಕೈಯೊಳಾಂತ ಕಮಳಂ ಕಂದಿತ್ತಿದೇಂ ಕಾಂತೆ ನಿ
ನ್ನಳವಂ ಪೇಳೆನೆ ನೀಳ್ದ ಕಣ್ಮಲರ್ಗಳಿಂ ಬಾಷ್ಪಾಂಬುವಂ ತುಂಬಿದಳ್ ॥೧೦೦॥

॥ವ॥ ಅಂತು ಕಣ್ಣೀರ್ಗಳಂ ತುಂಬಿ ತನ್ನೊಳಗನಱಿದಾ ಪ್ರಿಯವಯಸ್ಯೆ-ಯೊಳ್ ಮಱಸಲಾಗದೆಂದಿಂತೆಂದಳ್—

ಎನಗಿನ್ನಾರ್ಹಿತೆಯರ್ಸರೋಜಮುಖಿ ಕೇಳ್ನಿನ್ನಿಂದೆ ನೀಂ ಪೋಗಿ ಕಾಂ
ತನೊಳೋರಂತಿನಿವಾತನಾಡಿ ಮುನಿಸಂ ಬೇಱ್ಕೈಱದು[2] ನೇಹಂ ಮನ
ಕ್ಕನುವಪ್ಪಂತಿರೆ ಮಾಡಿ ತಳ್ವದೊಡಗೊಂಡೈತರ್ಪುದೆಂದೆಂದು ಕಾ
ಮಿನಿ ಚೆನ್ನೈದಿಲಮಾಲೆಗೂಡಿ ಮಣಿಹಾರಂಗೊಟ್ಟು ತಳ್ತಪ್ಪಿದಳ್ ॥೧೦೧॥

॥ವ॥ ಅಲ್ಲಿಂ ಬಳಿಯಿನವಳ್ನಿಜಸಖೀಸಖನಿರ್ದೆಡೆಗೆ ಬಂದು—

---

೧ ಳಿ (ಮೂ) ೨ ಕ್ಕೈ (ರಿ)

ಮುಗ್ಧೆ ಭವದ್ವಿರಹದೊಳೆ ವಿ
ದಗ್ಧೆಯೆ ತಾನಾದಳಿಂದು ನೀಂ ನೆಱೆದೊಡೆ ಕೇಳ್
[1]ಸ್ನಿ[1]ಗ್ಧತೆಯಿಂದೆ ವಿದಗ್ಧೆಯೆ
ಮುಗ್ಧೆಯೆನಿಪ್ಪಳ್ ಬಳಿ[2]ಕ್ಕಿ[2]ದೇನಚ್ಚರಿಯೋ ॥೧೦೨॥

ಇದು ಚಿತ್ರಂ ನಿನ್ನ ಶೈತ್ಯಾಸ್ಪದಹೃದಯದೊಳೊರ್ಮೆ ತಾನಿರ್ದು ಬೆಂದಂ
ದದೆ ಕಂದಿರ್ದಳ್ಭವದ್ವಲ್ಲಭೆಯವಳ ವಿಯೋಗಾಗ್ನಿ ಸಂತಪ್ತಚಿತ್ತಾ
ಗ್ರದೊಳಿರ್ದುಂ ನೀನಜಸ್ರಂ ಕೊಱಗಿದುದಿನಿತಿಲ್ಲಂಗಜಂ ಪಕ್ಷಪಾತಾ
ಭ್ಯುದಯಕ್ಕಿಂಬಾದನೆಂದೆಂಬಳ ಪೊಸನುಡಿಗೇಳ್ದ್ಮೈದಿದಂ ಕಾಂತನಾಗಳ್ ॥೧೦೩॥

॥ವ॥ ಅನಂತರಂ—

ಬರೆ ತೆಗೆದಪ್ಪಿ ಬಾಯ್ದೆಱೆಯನೊಯ್ಯನೆ ಚುಂಬಿಸಿ ಮುದ್ದುಗೈದು ಮೋ
ಹರಸಮನಂತರಂಗದೊಳಮರ್ಚಿ ನಿಮಿರ್ಚಿ ನಖಕ್ಷತಂಗಳಂ
ಗುರುಕುಚದಲ್ಲಿ ಸತ್ಕಳೆಗಳುಣ್ಮುವತಾಣಮನಂಟಿ ಸಾರ್ದುಸಾ
ದರಮುಚಿತೋಕ್ತಿಯಂ ನುಡಿದು ಪೊಂಪುಳಿಯಿಂ ಪೊದಿಸುತ್ತೆ ನಲ್ಲಳಾ ॥೧೦೪॥

ನುಡಿನುಡಿಗೊರ್ಮೆ ಮುದ್ದಿಸಿ ಮುಖಾಂಬುಜಮಂ ನಡೆನೋಡಿ ಚುಂಬಿಸು
ತ್ತೊಡನೊಡನಪ್ಪಿ ನುಣ್ಗುರುಳನೊಯ್ಯನೆ ತಿರ್ದಿ ಪೊದಳ್ದ ಲಜ್ಜೆ ಬೇ
ರ್ಪಡೆ ಪಡೆದಲ್ಲಿ ಕಾ[3]ತ[3]ರಮನಂದವಳೊಳ್ಕಳೆವೆತ್ತ ಕಾಣ್ಕೆಯಿಂ
ದಡಿಗಡಿಗುರ್ವೆ ಮನ್ಮಥರಸಂ ನೆರೆದಂ ಮನದನ್ನನೊಲ್ಮೆಯಿಂ ॥೧೦೫॥

॥ವ॥ ಇಂತು ನೆರೆದನಂತರ ರತಾಂತ[4]ಕ್ರಾಂ[4]ತಿಯಂ ತೀರ್ಚಲೆಂದು ನೆಲೆವಾಡದೊಳ್ ನಿಂದೆಳಗಾಳಿಗೆರ್ದೆಗೊಟ್ಟು ನಿಂದ ಮುಗ್ಧೆಯರಂ ನಾಗರಿಕನರಸಂಗೆ ತೋಱುತ್ತುಮಿರೆ ಮುಂದೊಂದೆಡೆಯೊಳೊರ್ವಳೆಳೆವರಯದ ನಳಿನಾಕ್ಷಿ—

೧ ಸಿದ (ಮೂ) ೨ ಕ್ಕೊ (ಕೆ) ೩ ತು (ಮೂ, ಬ, ಧಾ) ೪ ಭ್ರಾಂ (ಧ)

ಕನಕಸರೋಜಕೋರಕಸಮಸ್ತನಮಂಡಳಮಧ್ಯದಲ್ಲಿ ಮಾ
ನಿನಿ ಮನದನ್ನನಿತ್ತ ನಖರೇಖೆಯನೊಯ್ಯನೆ ನೋಡುವಾಗಳಾ
ತನೆ ಬರು[೧]ತ[೧]ಲ್ಲಿ ಬಿಂಬಿ[೨]ಸೆ[೨] ನಿರೀಕ್ಷಿಸಿ ಬಿಂಬಮನಪ್ಪಿಕೊಂಡು ಝು
ಮ್ಮನೆ ಪುಳುಕಂಗಳೇಳೆ ರತಿಗೈಯಲೊಡರ್ಚುವಳೇಂ ಪ್ರಮುಗ್ಧೆಯೋ ॥೧೦೬॥

॥ವ॥ ಅವಳನರಸಂಗೆ ಕರಸಂಜ್ಞೆಯಿಂ ನಾಗರಿಕಂ ತೋಱುತ್ತಮಿರೆಯಿರೆ ಪೆಱ
ತೊಂದೆಡೆಯೊಳೊರ್ವಿಚ್ಚೆಗಾರ್ತಿ ಮಗಳ ಮೊಗಮಂ ಕಿಸುಗಣ್ಣಿನೋಡಿ ದಾಕ್ಷಿಣ್ಯಮ
ನುಳಿದಿಂತೆಂದಳ್—

ಮೊಗಮಂ ನೋೞ್ಪುದುಮಾಗಳಂತೆ ತಲೆವಾಗುತ್ತಿರ್ಪೆ ಸಂಪ್ರೀತಿಯಿಂ
ಮಿಗೆ ಮಾತಾಡಿಸೆ ಸುಮ್ಮನಿರ್ಪೆ ನಗಿಸಲ್ಕೆಂದಲ್ಲಿ ಸಾರ್ತಂದು ಮೆ
ಲ್ಲನೆಗೆವಾತಂ ಬಿಡದಾಡೆ ನೋಡೆ ಕುಚಭಾರಸ್ರಸ್ತ ಚೇಲಾಂಚಲಂ
ದೆಗೆಯಲ್ಕೋಪಿಪೆ ಕೂರ್ಪರೇ ವರವಿಟರ್ನಿನ್ನಾಟವಂ ಕಂಡವರ್ ॥೧೦೭॥

॥ವ॥ ಮತ್ತಮದಲ್ಲದಿತ್ತೊಂದು ಮಣಿಮಂದಿರದೊಳ್ ನಾಣಳಿಯದೆ ನಲ್ಲನೊ
ಳ್ನೆರೆದುಮಾಗಳ್ಪೊಱಮಟ್ಟು ಬರ್ಪುದುಮಱಿದಿರ್ದು ಬರ್ದೆ ಬಳಿ[೩]ಕಿಂ[೩]ತೆಂದಳ್—

ಸೂಳೆತನಕ್ಕಿದೇಂ ಸೊಗಸೆ ಲಜ್ಜೆ ನಿಜಾಲಯಕೈದಿದೋಪರೊ
ಳ್ಮೇಳಕೆ [೪]ಮೆ[೪]ಯ್ಯನೀಯದೆ ಕರಾಗ್ರದೆ ಪೊಯ್ಯದೆ ತಳ್ಕಿಗೆಯ್ಯದು
ರ್ಬೇಳದೆ ತಳ್ತು ಸೀಳದೆ ನಖಾಗ್ರದೆ ತಾಳದೆ ಚುಂಬನಂಗಳಂ
ಪೇಳದೆ ಮಾರಮಂತ್ರಮನಿದೇಂ ರತಿವಿದ್ಯೆಗೆ ಮುಯ್ಯನಾಂಪುದೇ ॥೧೦೮॥

॥ವ॥ ಮತ್ತಮೊರ್ವಳ್ವಿದಗ್ಧೆ ಮಗಳ್ಗೆ ಬುದ್ಧಿವೇಳ್ದಳದೆಂತೆಂದೊಡೆ—

ಗರ್ವಂಗುಂದದಿರಿಂದುವಕ್ತ್ರೆ ಘನಗರ್ವಂದಳಾದಿಪ್ರೀತಿವ
ಟ್ಟೊರ್ವಂಗಂ ಮನಮಿಕ್ಕದಿರ್ಸೋವಡನೆಂದುಂ ಮಾಡದಿರ್ಕೂಟದೊಳ್
ಪರ್ವಿರ್ದಗ್ಗಳದಾಸೆಯಂ ಬಳಸದಿರ್ಕೊಟ್ಟಲ್ಲದೊಲ್ದಪ್ಪದಿರ್
ಸರ್ವತ್ರಾತಿಶಯಂ ತ್ಯಜೇದೆನಿಪುದಂ ನೀಂ ಮೀಱದಿರ್ಮಾನಿನೀ ॥೧೦೯॥

---

೧ ವ (ಮೂ) ತ್ತ (ಕ) ೨ ಸಿ (ಕ) ೩ ಕ್ಕಿ (ಶಿ) ೪ ಮೈ (ರಿ, ಬ) ಮುಯ್ಯ (ಮೂ).

ನೋಡಿದೊಡಿನ್ನುಮೊರ್ಮೆ ನಡೆನೋಡಳೆಯೆಂದೆನೆ ನೋಡು ಸಾರ್ದು ಮಾ
ತಾಡಿದೊಡಿನ್ನುಮೊರ್ಮೆ ನುಡಿಯಳ್ಗಡ ಯೆಂದೆನೆ ಮಾತನಾಡು ಜಾ
ಣ್ಗೂಡಿ ವಿಳಾಸದಿಂ ಸುಳಿದೊಡಿನ್ನುಮಿವಳ್ಸುಳಿದೈದಳೇಯೆನು
ತ್ತಾಡೆ ಭುಜಂಗರಲ್ಲಿ ಸುಳಿದಗ್ಗಳಬೇಟಮನುಂಟುಮಾಡು ನೀಂ ॥೧೧೦॥

॥ವ॥ ಮತ್ತಮೊರ್ವಳ್ತನ್ನ ತನೂಭವೆಯ ಸೌಕುಮಾರ್ಯಮಾಧುರ್ಯಂಗಳಂ ಪೊಗಳ್ದು ತನ್ನ ಕೆಳದಿಗಿಂತೆಂದಳ್—

ಮುಡಿ ಕಡು ಬಿಣ್ಪಿದೆಂದು ಸೆಡೆವಳ್ಮುಡಿದಪ್ಪಳೆ ಪುಷ್ಪಮಾಲೆಯಂ
ಜಡಿವಘನಸ್ತನಕ್ಕೆ ಮಣಿವಳ್ಮಣಿಹಾರಮನಾಂಪಳೇ ಕರಂ
ಪೊಡರ್ವ ನಿತಂಬಭಾರಕಲಸುತ್ತಡಿಯಿಕ್ಕುವ ಕಾಂತೆ ಕಾಂಚಿಯಂ
ತು[೧]ಡು[೧]ವಳೆ ಸಿಂಗರಂಬಡೆಯದೆನ್ನ ಮಗಳ್ವಿಟರಂ ಮರುಳ್ಚುವಳ್ ॥೧೧೧॥

ಕೂರದ ಕಡೆ[೨]ಗ[ಣ್ಣೋ][೨]ಟದೆ
ಕೂರದನಂ ಕೂರಿಸುವಳುರೋಜಂಗಳ ಬ
ಲ್ಭಾರದ ಬಗೆಯಂ ಕಾಣಿಸಿ
ಬಾರದನಂ ಬರಿ[೩]ಪಳೆ[೩]ನ್ನ ಸುತೆ ಮನೆಗಾಗಳ್ ॥೧೧೨॥

॥ವ॥ ಅದಲ್ಲದೆ ಪೆಱತೊಂದೆಡೆಯೊಳೊರ್ವಳ್—

ಎಳೆಯಳೆ ಕಟಾಕ್ಷಪಾಶದಿ
ನೆಳೆಯೆಳೆಯುವ ಮೃಗಮನಂದದೊಳ್ ಶಶಿಕಳೆವೋಲ್
ಪೊಳೆಯಳೆ ಶೃಂ[೪]ಗಾ[೪]ರರಸದ
ಪೊಳೆಯೆಳೆಯದರಾರೊ ಪೊನ್ನನಿವಳ್ಗತಿಧನಿಕರ್ ॥೧೧೩॥

ಪಿಡಿನಡೆ ಪಿಡಿನಡು ಪೊಸಕೈ
ಪಿಡಿ ಮೊಗಮುಡುಪತಿಯ ಕದಿರನಾಳ್ದಲರ್ಗಣ್ಕೆಂ
ಪಿಡಿದಧರದಳಂ ಕಡು[೫]ವಿ[೫]
ಣ್ಪಿಡಿಕಿಱಿದ ನಿತಂಬಮೆನ್ನ ತನುಭವೆಗೆಸೆಗುಂ ॥೧೧೪॥

---

೧ ಡ (ಬ) ೨ ಣ್ಣೋ (ಮೈ, ಧಾ), ಕಂಣ್ಣೋ (ಮೂ) ೩ ಪೆನೆ (ಪ್ಕೆ) ೪ ಗ (೧) ೫ ಬಿ (ಮೂ, ಬ)

ನೋಡದೆ ಪೋದಡೊಂದಱಿಯೆನೆನ್ನ ತನೂಜೆಯನೊರ್ಮೆ ಕೂರ್ಮೆಯಿಂ
ನೋಡಿದೊಡಾಗಳಂಗಜಮಹಾಶಿಖಿ ಮೂಡದೆ ಬಲ್ಪು ಬಾಡದ
ಳ್ಬಾಡದೆ ಚಿತ್ತಮೋಡದೆ ಮದಂ ಪಿಕಿಕೋಡದೆ ಕೂಗಿ ಮೂರ್ಛೆಯಂ
ಮಾಡದೆ ಕಾಯ್ಪುಗೂಡದೆ ಸುಧಾರುಚಿ ಕಾಡದೆ ಕಂತು ಮಾಣ್ಗುಮೇ ॥೧೧೫॥

॥ವ॥ ಎಂಬನೇಕವಿಧವಿದಗ್ಧಾಲಾಪಂಗಳಂ ಕೇಳುತ್ತಂ ಬರುತ್ತಿರೆ ಮುಂ-
ದೊಂದು ಮಣಿಮಯದ್ವಾರದೊಳಂದಂಬಡೆದು ನಿಂದ ಸುಂದರಿಯ ಮುಂಗೈ-
ಯೊಳ್ ಸಿಂಗರಮೆನೆ ಕುಳ್ಳಿರ್ದು—

ಜಡೆಯ ಬೆಡಂಗಿ ನುಣ್ಣೊಸಲನಾಯಕಿ ಚೆಂದುಟಿ[1]ಯು[1]ಂದಗಾತ್ರಿ ಮೆ
ಲ್ನುಡಿಯ ಮೃಗಾಕ್ಷಿ ತೆಳ್ಗದಪಿನಂಗನೆ ಬಲ್ಮೊಲೆಯಬ್ಜಗಂಧಿ ನು
ಣ್ಣೊಡೆಯ ಲತಾಂಗಿ ಮೆಲ್ಲಡಿಯ ಮುಗ್ಧೆ ನಿತಂಬದ ನೀಱೆ ನಿನ್ನೊಳೋ
ತೊಡವೆರೆದಿರ್ಪನಾವನವನಂಗಜಪಟ್ಟಮನಾಳ್ದನಾಗನೇ ॥೧೧೬॥

॥ವ॥ ಎಂದು ಸರಸವಚನದಿಂ ಬಣ್ಣಿಪರಗಿಳಿಗೆ ನಱುದಂಬುಲ[2]ಗು[2]ಟುಂಕು
ಗೊಡುವವಳ ಬಾಯ್ದೆಱೆಗಂಡೆನಗಂ ಬಾಯೊರೆತಪುದೆಂಬ ವಿದೂಷಕನ ನುಡಿಗೆ
ಮುಗುಳ್ನಗೆ ನಗುತ್ತರಸನಿರ್ಪನಿತಱೊಳೊರ್ವ ತುಂಬುಜವ್ವನದ ಬಿಂಬಾಧರೆ ನಿಜ
ವಿರಹವೀತಿಹೋತ್ರವಿಧುರಿತೆ ವೀಥಿಯೊಳ್ ಬರ್ಪುದಂ ಕಂಡನ್ಯಭಂಗಿಯಂ ತಳೆದ
ವಳ ಮನದನ್ನಂ ದನಿವಳಿದಪ್ಪಿ ನುಡಿಯಿಸುವಲ್ಲಿ—

ಏನೆಲೆ ಬಾಲೆ [3]ಯೇ[3]ಕೆಲೆ ಭುಜಂಗಯಿದೆಲ್ಲಿಗೆ ಪೋಪೆ ಪರ್ಬಿದು
ದ್ಯಾನಕದೇಕೆ ನೀಮುರ್[4]ಳು[4]ಗಲೀ ಪೊಸಜೊನ್ನದೊಳುಂಟೆ ವುಂಟು ಕಾ
ಮಾನಲದಗ್ಧೆ[5]ಯೇ[5] ನುಡಿಯಲೇನೊಡವರ್ಪೆನೆ ಬೇಡಮೊರ್ವಳೇ
ನೀನೆಲೆಯಾದೊಡೇನಗಿವೆ ಯಿಲ್ಲೆನೆ ಕೈಪಿಡಿದಪ್ಪಿದಂ ವಿಟಂ ॥೧೧೭॥

ಕಂಡಿ[6]ನಿ[6]ಯನೆಂದು ತಿಳಿದಾ
ಖಂಡಲ ಸಂಪದಮೆ ಸಾರ್ದವೋಲ್ಸಂಭ್ರಮದಿಂ
ಪಿಂಡೇಳ್ವ ಪುಳಕದೊಡನೊಡ
ಗೊಂಡೊಯ್ವು[7]ತ್ತಾ[7]ತ್ಮಗೃಹದೊಳವನೊಡವೆರೆದಳ್ ॥೧೧೮॥

---

೧ ಚೆ (ಮೂ) ೨ ಕು (ಮೈ) ೩ ಯಾ (ಮೂ, ಬ, ಧಾ) ೪ ಳುಂ (ಮೈ, ಮೂ, ಬ)
೫ ಯಂ (ರಿ) ೬ ನೆ (ಮೈ, ಬ) ೭ ತಾ (ಧಾ)

॥ವ॥ ಮತ್ತೊಂದು ಚಂದನರಸಧವಳಿತಕೇಳೀನಿಳಯಮಧ್ಯಮಂಡಿತಮಣಿಮಯಮಂಚಾಗ್ರದ ಮಱಿಯಂಚೆದುಪ್ಪುಳಮೆ[೨]ಲ್ಪೊಂ[೨]ದಿದ ತಲ್ಪದೊಳೊರ್ವ ಬೇಟ[೩]ಗಾರ್ತಿ[೩] ತೋಟ[೪]ಕಾ[೪]ರ್ತಿಯಂತೆ—

ಮುಗುಳ್ನಂಬಂಗೆಣೆಯಾದನಂ ಬರಿಸಿ ತದ್ಬಾಹಾಲಸತ್ಕಲ್ಪವ
ಲ್ಲಿಗಡರ್ಪಂ ಕುಡುವಂತೆ ಕೊಟ್ಟು ತನುವಂ ನೀರ್ವೊಯ್ವವೋಲ್[೧]ಘರ್ಮ[೧]ವಾ
ರಿಗಳಿಂ ತೊಯ್ದುದಜಲ್ಲಿ ಚಂದಳಿಗಳಿಂ ತಾನಾಗಿಪಂತೊತ್ತಿಕೂ
ರುಗುರಿಂ ಪೂಗುಡಿ ಮೂಡಿಪಂತೆ ಮೊಲೆ[೫]ಯಂ[೫]ಕೈದೀವಿ ಕಣ್ಗೊಪ್ಪಿದಳ್ ॥೧೧೯॥

ತನುರುಹಮುಗೆವೊಯ್ದುವೊಲಿರೆ
ತನು ತಳ್ತಿರೆ ಲಜ್ಜೆಯೊಂದೆ ತನು[೬]ತೆ[೬]ಯನೊಲ್ದಾಂ
ತನುನಯಮನತನುಸುಖದ ಸು
ತನುವಿಂತನುಭವಿಸುತಿರ್ದಳಿನಿಯನೊಳೊರ್ವಳ್ ॥೧೨೦॥

ನೊಸಲ ಲಲಾಮಮುಂ ಸ್ತನದ ಚಂದನಮುಂ ತೊಡೆದಂತೆ ಪೋಗೆ ರಂ
ಜಿಸುವ ಲತಾಂಗಮುಂ ಜಘನಮುಂ ಪದವೆತ್ತಿರೆ ಕರ್ಣಪೂರಮುಂ
ಪೊಸಮುಡಿವೂಗಳುಂ ಜಗುಳೆ ನುಣ್ಗೊಡೆಯುಂ ನಡುವುಂ ಕಡಂಗಿ ಕಂ
ಪಿಸೆ ಗಳನಾದಮುಂ ಶ್ವಸಿತಮುಂ ನೆಗಳುತ್ತಿರೆ ತಳ್ತು ಕೂಡಿದಳ್ ॥೧೨೧॥

॥ವ॥ ಅದಲ್ಲದೆ ಬೇಱೊಂದೆಡೆಯೊಳೊರ್ವಳ್ನೆರೆದು ಸೇ[೭]ದೆ[೭]ವಟ್ಟು ಬಿಮರಾರಿಸಲ್ಕೆಂದು ಮಂದಿರದ ಮುಂದಣ ಮತ್ತವಾರಣಮಂ ನೆ[೮]ರ್ಮಿ[೮] ನಿಂದಿರ್ಪುದುಮವಳ ಮೊಗದ ಕಳೆಯುಂ ಕಂಡೊರ್ವ ಸೊಬಗಬೊಜಗನೊತ್ತೆಗುಡಲೊಡನೆ ಪಿಡಿದುದಂ ಕಂಡು ಪೊರ್ದಿ ತಿಳಿದಿಂತೆಂದಂ—

ಎಲೆ ಕಿಱುಸೂಳೆ ನೀ ನೆರೆದ ಸೇದೆಯನಾಱಿಸದೊತ್ತೆಯಾಂತೆಯೀ
ಕಳೆಗಳೆ ಸೂಚಿಕುಂ ಸುಖಮದೇಂ ದೊರೆಕೊಳ್ವುದೆ ನಿನ್ನೊಳೀಗಳೆಂ
ದುಲಿವ ವಿಟಂಗೆ ಮಾರ್ನುಡಿದಳೊಂದಳಿ ಪೀರ್ದೊಡೆ ಪೋಪುದೇ ನವಾ
ಬ್ಜಲಲಿತಸೌರಭಂ ಬಳಿಕಮೊಂದಳಿ ಸಾರ್ದೊಡೆ ಸೌಖ್ಯಮೀಯದೇ ॥೧೨೨॥

---

೧ ಥು (ಮೈ) ೨ ಲ್ವೊಂ (ಮೂ) ೩ ಕಾ (ರಿ) ೪ ಗಾ (ಮೈ) ೫ ಯುಂ (ಮೂ) ೬ ಲತೆ (ಮೂ) ೭ ರೆ (ರಿ) ೮ ಮ್ಮಿ (ಮೈ, ಮೂ, ಕ, ಧಾ, ಬ)

॥ವ॥ ಎಂಬ ಗಣಿಕೆಯ ಚಾಟುಭಣಿತೆಯಂ ಕೇಳ್ದು ರಸನೊಳ್ ಪೀಠಮರ್ದಕ ನಿಂತೆಂದಂ—

ಸ್ಮರನೆರವಿಲ್ಲದೆ ತೋಳ
ಲ್ಲಿರುತಿರ್ದೊಡಮಧಿಕವಿತ್ತಮಿತ್ತಪೆನೆಂದೆಂ
ಬರೊಳೊಡವೆರೆವುದು ವೇಶ್ಯಾ
ಚರಿತಮದಿಲ್ಲದೊಡದೆಂತು ಸಿರಿವಡೆದಪರೋ ॥೧೨೩॥

॥ವ॥ ಎಂಬ ಮಾತಂ ಕೇಳ್ದು ನಿಜಮೆಂದಲ್ಲಿಂ ಮುಂದಣ್ಗೆ ಬ೧ರ್ಪಾಗ೨ಳೊರ್ವ-ಳ್ಕುಸುಮಕೋಮಳೆ ತನ್ನ ಕೆಳದಿಗಿಂತೆಂದಳ್—

ಕೊಡುವೊಡವೆಗಾಗಿ ಪೋಗೆಂ
ದೊಡನೊಡನೆಮ್ಮಬ್ಬೆ ನೂಂಕುವಳ್ತನ್ನವೊಲೆಂ
ದಡರ್ದುರ್ಬಿ ಬಳೆದ ಪೊಡೆ ಪೇ
ರೊಡಲೀ ಜಟ್ಟಿಗನೊಳೆಂತು ನೆರೆವೆಂ ಕೆಳದೀ ॥೧೨೪॥

॥ವ॥ ಅದಂ ಕೇಳ್ದು ವಿದೂಷಕಂ ಪರಿದು ಪೋಗಿ ನಿಂದು ನಿರೀಕ್ಷಿಸಿ ಕೈಯಂ ನೀಡಿ ನಿಮ್ಮಬ್ಬೆಯನೆ ನೆವಮಿಟ್ಟು ಕಳುಪಲ್ವೇಳ್ಕುಮೆಂದು ನರೇಂದ್ರನ ಮೊಗಕ್ಕೆ ಮುಗು-ಳ್ನಗೆಯ ಸೂಸುತ್ತಿರೆ ಮತ್ತೊಂದು ನೆಲೆವಾಡದೊಳ್ಮನದನ್ನನಗಲೆ ಮಱುಗುವ ಚಪಲಚಿತ್ತೆಗೆ ಸಖಿಯಿಂತೆಂದಳ್—

ಬಂದೊಡೆ ನೋಡೆ ಬಾರದೊಡೆ ದೂದವಿಯಟ್ಟುವೆ ಬೇಡ ಕೋಪವಿ
ನ್ನೆಂದದಿಗಾತನೊಲ್ದೆಱಗೆ ಗರ್ವಿಪೆ ಸೈತಿರೆ ಸುರ್ಕಿಸುಯ್ವೆ ಮೈ
ಸಂದಮರ್ದಪ್ಪಲಾತುರಿಸೆ ಮೈಗುಡೆ ಮಾಣ್ದೊಡೆ ಕಾಮವಹ್ನಿಯಿಂ
ಬೆಂದಪೆ ಪೋಪವೋಲ್ ಜಡಿವೆ ಪೊದೊಡೆ ಸೈರಿಸೆ ನೀನಿದೇಂ ಸಖೀ ॥೧೨೫॥

॥ವ॥ ಇವ೩ಳ್ ಕ೩ಲಹಾಂತರಿತೆಯಪ್ಪಳೆಂದು ನಾಗರಿಕಂ ನುಡಿವುತ್ತಮಿರೆ ಮತ್ತೊಂದು ಪಜ್ಜಳಿಪ ಬಜ್ಜರದ ಸೆಜ್ಜೆವನೆಯ ಸಿರಿಮಂಚದ ಸಿರಿಸ ಮೃದುಳತ-ಳ್ಪಸ್ಥಳದಲ್ಲಿ—

೧ ಮ (ಮೂ, ಮೈ) ೨ ಪಗ್ಲಿ (ಮೂ) ೩ ಲ್ಕ (ಮೈ)

ಬಿರಿಮುಗುಳಾದ [೧]ಜಾ[೧]ದಿಯರಲಂ ಮುಡಿಯೊಳ್ಮಡಿದಿಟ್ಟು ಮುತ್ತಿನಾ
ಭರಣಮನುಟ್ಟು ಚೀನಲಲಿತಾಂಬರಮಂ ತೊಡೆದಂಗವಲ್ಲಿ ಕ
ತ್ತುರಿಯನುಲೇಪಮಂ ಗೃಹಮನಾ ಮಣಿಮಂಚಮನೊಯ್ಯನೊಲ್ದು ಸಿಂ
ಗರಿಸಿ ನಿಜೇಶನಾಗಮನಮಂ ಮನದೊಳ್ ಬಯಸುತ್ತೆ ಬಾಡಿದಳ್ ॥೧೨೬॥

॥ವ॥ ಅವಳಂ ನಿರೀಕ್ಷಿಸುತ್ತೆ ಇವಳ್ವಾಸಕಸಜ್ಜಿಕೆಯೆಂದು ನುಡಿವ ಮಾತನಾಕರ್ಣಿಸುತ್ತಂ ನರೇಶ್ವರನಿರ್ಪವಸರದೊಳೊರ್ವಂ ಭುಜಂಗಂ ನಿಜಸಖಂಗಿಂತೆಂದಂ—

ಮೌನಮಿದೇಕೆ ಮಾನಿನಿ ಮನೋಭವನಾಣೆ ಬಿಡೆಂದೊಡಾಂ ಕರಂ
ಜಾನಿಸಿ ಬಾಷ್ಪವಾರಿಗಱಿವಳ್ಮೊಗನೋಡಿದೊಡಂತೆ ನಾಣ್ಚುವಳ್
ಪೀನ ಕುಚಾಂಚಲಂದೆಗೆಯೆ ಕೋಪಿಪಳಪ್ಪಿದೊಡೊಲ್ದು ನಕ್ಕಪಳಾ
ತಾನದಱಿಂದೆ ಸಂದ ಕಿಲಕಿಂಚಿತಮಂಚಿತಮೆನ್ನನಲ್ಲಳಾ ॥೧೨೭॥

॥ವ॥ ಎನೆ ಕೇಳ್ದವಂ ಮುಂಪೇಳ್ದನೊಡನೆ ತನ್ನಿನಿಯಳ ವೃತ್ತಾಂತಮಂ ಮಗುಳ್ದು ಪೇಳ್ದನದೆಂತೆಂದೊಡೆ—

ಮುಳಿದೆನ್ನೊಳ್ಮನದನ್ನಳೊಯ್ಯನೊಱಗಿರ್ದಳ್ನಿದ್ರೆಗೆಯ್ದಂದದಿಂ
ತಿಳಿದಾನೆರ್ಬಿಸಲ[೨]ಳ್ಕಿ[೨] ತೋಱಿಮುಡಿಯೊಳ್ಪೂಮಾಲೆಯಂ ಸೂಡಿ ಮಂ
ಜುಳಕಾಶ್ಮೀರವಿಲೇಪಮಂ ಮೊಲೆಗೆ ಲೇಪಂಗೈವುದುಂ ಪೊರ್ದಿಪೊಂ
ಪುಳಿವೋದಳ್ ಪುಟಮೆಳ್ದು ಪೊಯ್ದಳೊದೆದಳ್ಪಾಯ್ದಪ್ಪಿದಳ್ ನಕ್ಕಪಳ್ ॥೧೨೮॥

॥ವ॥ ಎಂಬ ಮಾತುಗೇಳ್ದು ಇವಳುಂ ಕಿಲಕಿಂಚಿತೆಯಕ್ಕುಮೆಂದು ವಿಟಂ ನುಡಿವುತ್ತಿರೆ ಕೇಳ್ದಲ್ಲಿಂ ಮೆಲ್ಲನಿಳಾಧಿಪನಡಿಯಿಡುತ್ತಿರೆ ಮುಂದೊಂದು ಮಂದಿರದಲ್ಲಿ ಸಾಪರಾಧನಾಯಕಂ ತಿ[೩]ಳು[೩]ಪುತ್ತಿರೆ ಖಂಡಿತೆಯಖಂಡಿತೇರ್ಷೆಯಿಂ ನೋಡಿ—

ಜೇಡವಿದೇಕೆ ನಿರ್ನೆರನೆ ನಾಡೆ ನಯೋಕ್ತಿಯನಾಡುತಿಪ್ಪೆ ನೀಂ
ನೋಡದೊಡಿಂತುಟಪ್ಪರೊಳರೇಯೆನಿಪಂತಿರೆ ನಿನ್ನ ಮೈಯೊಳೀ
ಬಾಡದ ಬಾಸುಳೀಯಧರದೊಳ್ಗಲೆಯಿಂ[೪]ಕ[೪]ರಜಕ್ಷತಂಗಳೀ
ಪಾಡಳಿದಂಗವೀಯಿರವಿವೆಲ್ಲವನೀಕ್ಷಿಸಿ ನಂಬಲಕ್ಕುಮೇ ॥೧೨೯॥

---

೧ ಚಾ (ಪೂ) ೨ ಲ್ಲಿ (ರಿ, ಧಾ), ರಿ (ಬ) ೩ ಳಿ (ಧಾ, ಕ) ೪ ತ (ಮೂ).

॥ವ॥ ಎಂಬಳ ನುಡಿಗೇಳುತ್ತಿರ್ಪಿನಂ ಪೆಱತೊಂದು ಮಣಿಮಯನಿಳಯಾಂತ ಶಾಳದಲ್ಲಿ—

ಚುಂಬಿಸುತಿತ್ತ ತಂಬುಲ[೧]ವ[೧] [೨]ನ[೨]ಲ್ಲದೆ ಮೆಲ್ಲದ ನಲ್ಲಳಂಗಗಂ
ಧಂ ಬಗೆಗೊಂಡ ದೂವಟಮನಲ್ಲದೆ ತಾಳದ ತತ್ಕಚವ್ರಜಾ
ಲಂಬಿತಪುಷ್ಪಮಾಲೆಗಳನಲ್ಲದೆ ಸೂಡದ ತತ್ಕುಚಂಗಳೊ
ಳ್ತುಂಬಿದ ಯಕ್ಷಕರ್ದಮವನಲ್ಲದೆ ಪೂಸದ ಕಾಂತನೊಪ್ಪಿದಂ ॥೧೩೦॥

॥ವ॥ ಮತ್ತಮವನ ಮನೆದನ್ನಳ್ಮನೆಗೆ ಬಂದ ನಿಜಸಖಿಗಾತನಂ ತೋಱಿ—

ನುಡಿಯೆಮಗೊಂದೆ ನೋಟಮೆಮಗೊಂದೆ ವಿಳಾಸಮದೊಂದೆ ಚೆಲ್ವನಿ
ರ್ಮಡಿಸುವ ಸಾರ[೩]ಯೌವ[೩]ನಮುಮೊಂದೆ ಗುಣೋನ್ನತಿಯೊಂದೆ ಕೂರ್ಪು ಬೇ
ರ್ಪಡಿಸದ ಬೇಟಮೊಂದೆ ರತಿಯೊಂದೆ ಮನಸ್ಥಿತಿಯೊಂದೆ ಸೌಖ್ಯಮಂ
ಪಡೆದಪೆವಾವಗಂ ಕೆಳದಿ ಕೇಳದಱಿಂದೆಮಗಾರ್ ಸಮಾನ[೪]ರೇ[೪] ॥೧೩೧॥

॥ವ॥ ಎಂದು ತಮ್ಮಿರ್ವರ ಸಮಾನುರಾಗ ಸೌಭಾಗ್ಯ ವಿಭ್ರಮಮುಂ ಸಂಭ್ರಮಂ ಮಿಗೆ ಸಮದಸರಸೋಕ್ತಿಗಳಿಂ ಬಣ್ಣಿಸುತ್ತಿರ್ಪಿನಮಿವಳ್ ಸ್ವಾಧೀನಪತ್ನಿಕೆಯಕ್ಕುಮೆಂದು ನುಡಿವ ನಾಗರಿಕನ ನುಡಿಯಂ ಬಗೆಗೊಂಡರಸನಲ್ಲಿಂ ಬರುತ್ತಿರ್ಪಲ್ಲಿ ಮುಂದೊಂದು ಮಣಿವಾಗಿಲೊಳೊರ್ವಂ ಸರಸಹೃದಯಂ ತರುಣಿಯನಗಲ್ದು ಮುಂದುಗೆಟ್ಟವಳಿರವಂ ನೆನೆನೆನೆದು ಸುಯ್ದು ಕೆಳೆಯನೊಡನಿಂತೆಂದಂ—

ಪರಕಾಂತಾಕರಜಾತದಂತಹತಿಯಂ ತಾಳ್ದಿದಲಾನೆನ್ನ ಸೌಂ
ದರಿಯಾ ನೋಡುವ ನೋಟವಾ ಭ್ರುಕುಟಿಯಾ ನಿಂದಂದವಾ ಕಂಪಿಪೊಂ
ದಿರವಾ ಬೆಚ್ಚನೆ ಪಾಯ್ವ ಸುಯ್ಗಳೊದವಾ [೫]ಕ[೫]ಣ್ಣೀರ್ಗಳಾ ಕೋಪನಿ
ರ್ಭರವಾ ಕೆತ್ತುವ ಪಲ್ಲವಾಧರಮದೇಂ ಮಚ್ಚಿತ್ತದೊಳ್ನಿಂದುದೋ ॥೧೩೨॥

॥ವ॥ ಅದಲ್ಲದೆಯುಂ—

೧ ಮ (ಮೈ); ನೊ (ಮೂ, ಕ) ೨ ನಿ (ಮೂ) ೩ ಯುವ್ವ (ಮೈ, ಭ) ೪ ರೋ (ರಿ) ೫ ರ್ಕ (ಕ).

ಪಳಿವುದು ಕೆಂದಾವರೆಯಂ
ಮುಳಿದೊಡೆ ತಿಳಿದೊಡೆ ಪೊದಳ್ದ ಪೊಂದಾವರೆಯಂ
ಕಳಿವೆತ್ತು ನ[1]ಕ್ಕೊ[1]ಡೆನ್ನಿನಿ
ಯಳ ತೊಳಗುವ ವದನಮಲರ್ದ ಬೆಳ್ದಾವರೆಯಂ ॥೧೩೩॥

॥ವ॥ ಎಂದು ಪಳಯಿಸುತ್ತಿರ್ದನಿತ್ತಲ್ಮತ್ತೊಂದು ಮಣಿಭವನದಲ್ಲಿ—

ಮನದನ್ನಳ್ಮನದನ್ನನಂದಗಲೆ ಚಿಂತಾಕ್ರಾಂತೆಯಾಗಿರ್ದು ಕಾಂ
ಚನಮಂಚಾಗ್ರದೆ ಮಗ್ಗುಲಿಕ್ಕಿ ಮಗುಳ್ದಾತಂ ಬಂದು ಕೂಡಿರ್ದ ನ
ಲ್ಗನಸಂ ಕಂಡಖಿಳಾಂಗಮುಂ ಪುಳಕಮಂ ತಾಳ್ದೊಪ್ಪಲೆಳ್ಚತ್ತು ಕಾಂ
ತನ ರೂಪಂ ಬ[2]ರೆ[2]ದಿರ್ದ ಚಿತ್ರ[3]ಪಟಮಂ[3] ತಳ್ಕೈಪಳೇಂ ಮೋಹಮೋ ॥೧೩೪॥

॥ವ॥ ಮತ್ತಮೊರ್ವಳ್ ಮ[4]ಚ್ಚು[4]ಗಾರ್ತಿ ಕಡುಕೂರ್ತುದಂ ಕಂಡು ಕಾಡುವ ಕಪ[5]ಟ[5]ವಿಟನಿರ್ದೆಡೆಗೆ ತಾನೆ ಬಂದು—

ನಿನಗಾಂ ಕೂರ್ತುದೆ ಕುಂದೆ ನೋಡದೆ ಕರಂ ಮಾತಾಡದಾಳೀಜನಂ
ಮನೆಗೇಳ್ತಂದೊಡೆ ಮಾತುಗೇಳದವರೊಳ್ ನೀಂ ಪೇಳದೇನೊಂದನಿಂ
ದನಿಮಿತ್ತಂ ಮುನಿದಿರ್ಪುದೇನುಚಿತಮೇ [6]ಪೇ[6]ಳೆಂದು ಕ[7]ಣ್ಣೀ[7]ರ ಪೆ
ರ್ಪೊನಲಿಂ ನಂದಿಸಿದಳ್ ಪ್ರಕೋಪಶಿಖಿಯಂ ಪಾಯ್ದಪ್ಪಿದಳ್ ನಲ್ಲನಂ ॥೧೩೫॥

॥ವ॥ [8]ಅಂ[8]ತಪ್ಪಿ ನಿಜನಿಕೇತನಕ್ಕೊಡಗೊಂಡು ಪೋಗಿ ಪೊಸಸುಸಿಲ್ಗೆ ಮನ ಮಿತ್ತು ಮಣಿಮಂಚದೊಳಿರ್ವರುಂ ಕುಳ್ಳಿರ್ದು ಬ[9]ಳ್ಳಿ[9]ವಜೀವ ನಿಡುನೇಹದಿಂದಡರಿ ನೋಡಿ—

---

೧ ಕ್ಕ (ಮೈ, ಮೂ) ೨ ರ (ಮೂ) ೩ ಮಂ (ಕ) ೪ ಜಂ (ಕ) ೫ ಟಿ (ರಿ)
೬ ಕೇ (ರಿ) ೭ ಣ್ಣೇ (ಮೈ, ಧಾ) ೮ ಇ (ರಿ) ೯ ಳಿ (ಮೂ)

ತೋಳ್ತೊಡೆ ವಕ್ಷಮುಂ ಜಘನಮುಂ ಸ್ತನಮುಂ ಮೊಗಮುಂ ಪರಸ್ಪರಂ
ತಳ್ತಿರೆ ಕಂಪನಂಬಡೆದ ಕೈದಳದಿಂ ಪೊಡೆದೀಳ್ದು ಸೀಳ್ದು ಮೇ
ಲೇಳ್ತರೆ ನುಣ್ಗೊರಲ್ದನಿ ಸುಧಾಧರಮಂ ಸವಿದುರ್ಕಿ ಸೊರ್ಕಿ ಸೂ
ಳ್ಗಳ್ತಡವಾಗದಂತೆ ನೆರೆದರ್ ಸುರತಾಬ್ಧಿಯೊಳಾಳುತೇಳ್ವವೋಲ್ ॥೧೩೬॥

॥ವ॥ ಇಂತಪ್ಪ ಮು[೧]ಧ್ಯಮು[೧]ನಾಯಕಿಯರ ವಿವಿಧವಿಳಾಸಮಂ ನಾಗರಿಕನಱಿ
ಪುತ್ತುಂ ಬರೆವರೆ ಭೂಲೋಕಮಕರಪತಾಕಂ ಮುಂದಣ್ಗೆ ನಡೆನಡೆಯೆ ಮತ್ತೊಂದೆ
ಡೆಯೊಳೊರ್ವ ವಿದಗ್ಧವಿರಹತಾಪಮಂ ಸೈರಿಸಲಾಱದಾಳಿಯ ಮೊಗಮಂ ನೋಡಿ—

ಮದನಂ ತಾಂ ಮಧುಮತ್ತನೀ ಶಶಿಕರಂ ದೋಷಾಕರಂ ಚಂದನಂ
ಮದಸರ್ಪಪ್ರಕರೋಪಸೇವಿ ಶಿಖಿಮಿತ್ರಂ ಮಾರುತಂ ತಾಪಮೀ
ವುದು ಯುಕ್ತಂ ಸುಧಿಗೊಂಬ ಹಂಸೆಗುಣಿಪದ್ಮಂ ಕ್ಷೀರಪೂರ್ಣಂ ಸರಂ
ಸುದತೀ ಕೇಳ್[೨]ಸು[೨]ಮನಃಪ್ರಿಯಂ ಮಧುಕರಂ ಪೇಳ್ಕಾಯ್ವುದೇಂ ತ[೩]ಕ್ಕದೇ[೩]
॥ ೧೩೭ ॥

॥ವ॥ ಅದಲ್ಲದೆಯುಂ—

ಕ[೪]ಳೆ[೪]ವೆನದೆಂತೊ ಕಾಮಿನಿ ದಿನಂಗಳ ತಿಂಗಳ ಪೆಂಗಳಂಗಮಂ
ತಿಳಿಯದೆ ನಲ್ಲನೆಯ್ದೆ ಬಗೆ ನಿಲ್ಲದು ಸಲ್ಲದಿದೊಲ್ಲದೇನುವಂ
ಮುಳಿದೆಸುವಂಗಜಾತನ ವಿಘಾತನ ಶಾತನವಾಸ್ತ್ರಪಾತದಿಂ
ದಳಿದಪೆನಾತನಂ ಕರೆಯಲಾಗದೆ ಬೇಗದೆ ರಾಗದಿಂ ಸಖೀ ॥೧೩೮॥

॥ವ॥ ಎಂದು ನುಡಿ[೫]ದ[೫] ನಿಜಸಖಿಯ ನಿರ್ವೇದೋಕ್ತಿಯಂ ಕೇಳಲಾಱದವಳಿನಿ-
ಯನಿರ್ದೆಡೆಗೆ ಪರಿತಂದು ವಿನಯದಿಂದಿಂತೆಂದಳ್—

---

೧ ಧ್ಯ (ಮೂ, ಬ) ೨ ಮ (ರಿ) ೩ ರ್ಕ್ಕ (ಬ) ೪ ಳಿ (ಧಾ, ರಿ, ಕ) ೫ ವ (ರಿ, ಧಾ)

೧ಸಸಿ೧ಗೆ ಸಮಾನಮಾದುದವಳಾಸ್ಯಮದುಂ ಕ೨ಡುವೆಳ್ಪು೨ ೨ ೩ತಳ್ತು೩ ೪ರಂ೪
ಜಿ೫ಸೆ೫ ಬಿಸಕಾಂಡಕಂಗಲತೆ ತಾಂ ಸ೬ಮದಾ೬ಕೃತಿವೆತ್ತುದಂತದುಂ
ಲಸದರುಣಾಬ್ಜಪತ್ರದೆ ತದಕ್ಷಿಸುಹೃತ್ವಮನಾಂತುದಂತದುಂ
ಕುಸುಮಕಳಂಬನಂಬು ಬಗೆಗುಂದಿಸಿದತ್ತದುಮಬ್ಜಗಂಧಿಯಾ ॥೧೩೯॥

ಅಸುಗೊಳಲೆಂದು ತಾಂ ಬೆಸಸಿಯುಂ ಸಸಿಯಂ ಸಸಿಯಂ ಸಮಂತು ರಂ
ಜಿಸುವ ವಸಂತನಂ ಸಮದನಂ ಮದನಂ ಮದನಂತಶೌರ್ಯಮಂ
ಪಸರಿಪೆನೆಂದು ಗರ್ಜಿಸರಲಂ ಸರಲಂ ಸರಲಾಂಗುಲಿದ್ವಯಂ
ಮಿಸುಗಿಽಲೆಚ್ಚು ಕೂಡೆ ತವಿಪಂ ತವಿಪಂತವೆ ಪಂಕಜಾಕ್ಷಿಯೊಳ್ ॥೧೪೦॥

॥ವ॥ ಎಂದು ಚ೭ತು೭ರೋಕ್ತಿಜಳಮನೆಜ೮ದು ಮುಳಿಸಂ ಕಳಿದೆಗೆವಂತೆ ತೆಗೆದು ಬಗೆನೆಲದೊಳ್ ಬೇಟವೆಂಬ ಸಸಿಯಂ ಬೇರ್ವರಿಯಿಸಿ ವಿನಯದಿಂದೊಡಗೊಂಡು ಬಂದು ನಿಧುವನನಿಕೇತನಮಂ ಪುಗಿಸಲೊಡನೆ ವಸಂತರಾಜನಂ ಕಂಡ ವನಲಕ್ಷ್ಮಿಯಂತೆ ಸೊಂಪೇಜ೮ ಕಮಳಕಾಮುಕನಂ ಕಂಡ ಕಮಳಿನಿಯಂತೆ ಮೊಗಮಲರ್ದಲರಂ ಕಂಡಳಿಯಂತೆ ಬಳಿಸಾರ್ದು ಮುಗಿಲಂ ಕಂಡ ಮಯೂರಿಯಂತೆ ಮೈಯುರ್ವಿ ಮಾವಂ ಸಾರ್ದ ಮಲ್ಲಿಗೆಯಂತಮರ್ದಪ್ಪಿ ಸಸಿಗಳರಸನ ಸರಸಕರಂ ಸೋಂಕಿದ ಸಸಿಗಲ್ಲಪುತ್ತಳಿಯಂತೆ ಕರಗಿ ಬಿಂಬಫಳಮಂ ಕಂಡ ರಾಜಶುಕಿಯಂತೆ ಬಿಂಬಾಧರಮಂ ಕರ್ದುಂಕಿ ಕಾತರಂ ಕೈಮಿಗೆ ಕಡುಸೊಬಗಿಂ ಕಾಂತನೊಡನೆ ಕಾಂಚನಮಂಚದ ಕಮಳದಳಧವಳಮೃದುಳತರವಿಪುಳಮರಾಳತೂಳತಲ್ಪದೊಳ್ಮೆಲ್ಪಿಂ ಕುಳ್ಳಿರ್ದು ಕಳಾವಿಳಾಸಂಬಡೆದು ಕಾಮಕೇಳಿಗುಜ್ಜುಗಿಸಿ ಸಜ್ಜುಗೆಯ್ವಾಗಳ್—

ಬೆಮರ್ದಂಗಂ ಪತ್ತಿದತ್ತೀ ಉವಕೆಯನುಗಿ ನೀನೆಂದು ಪದ್ಮಾಸ್ಯ ತಾಂ ಪೇ
ಳೆ ಮಹೋತ್ಸಾಹಾನ್ವಿತಂ ವಲ್ಲಭನಿಡೆ ಕುಚಮಧ್ಯಕ್ಕೆ ಹಸ್ತಾಬ್ಜಮಂ ಮ
ತ್ತೆ ಮನೋಜ್ಞಾಂಗಂ ಪೊದಳ್ದುರ್ಬಿದೊಡದು ಜಾಱಿತ್ತು ಬಾಹಾಹಿತದ್ದೇ
ಹ ಮಹಾಶ್ರೀಖಂಡಶಾಖಾಗ್ರದೆ ಹೆರೆಗಳೆವುತ್ತಿರ್ಪುದೆಂಬಂದದಿಂದಂ ॥೧೪೧॥

*

೧ ಶಶಿ (ಮೂ, ಮೈ) ೨ ಡಲೇಳ್ಪು (ಮೂ) ೩ ತಾಳ್ದು (ರಿ) ೪ ರಾ (ಧಾ, ಪ: ದು ಬೆಳ್ಪು (ಬ) ೫ ಸಿ (ಕ) ೬ ಮಾ (ಮೈ, ಮೂ) ೭ ದು (ಮೈ) ೮ ಳ್ಪಿ (ರಿ)
*ಇಲ್ಲಿಂದ ೧೫೨ ನೇ ಪದ್ಯ ಮುಗಿಯುವ ವರೆಗಿನಭಾಗ 'ಮೂ' ದಲ್ಲಿ ಇಲ್ಲ.

ಕೊರಲೊಳ್ತಳ್ತಿರೆ ಬಾಹುವಲ್ಲರಿಯುರೋಜದ್ವಂದ್ವದಿಂದೊತ್ತಿ ಪೇ
ರುರಮಂ ಸಾರ್ದುಮರ್ದಪ್ಪಿ ನೋಡಿ ಕಡೆಗಣ್ಣಿಂದಳ್ಕಱಿಂ ಪಲ್ಲವಾ
ಧರಮಂ ಚುಂಬಿಸಿ ನೀವಿ ಜಾಱೆ ಜಘನಾಭೋಗಂ ಪೊದಳ್ದುರ್ವೆ ಸೌಂ
ದರಿ ನಾನಾಕಳಿವೆತ್ತು ಸೋಂಕಿ ನೆರೆದಳ್ಕಾದಲ್ಮೆಯಿಂ ಕಾಂತನೊಳ್ ॥೧೪೨॥

ನೆಱೆವೆಱೆಯನುಳಿದು ಚೆಂದುಟಿ
ವೆಱೆ[1]ವಿ[1]ಡಿದಮರ್ದೀಂಟಿ ಪಟುಭುಜಂಗಂ ಶಂಖಂ
ಮೊಱೆಯಿಟ್ಟಪುದೆನೆ ಮದನಂ
ಗುಱೆ ಮೆಱೆದುದು ಗಳನಿನಾದಮದು ಕಳರವೆಯಾ ॥೧೪೩॥

॥ವ॥ ಇಂತು ಕಂತುಕೇಳೀಸುಖಾಸ್ವಾದನೋನ್ಮತ್ತಚಿತ್ತರೊಪ್ಪುತ್ತಿರೆ ಮತ್ತೊಂದು ಮುತ್ತಿನ ನೆಲೆ[2]ವಾ[2]ಡದೊಳವೊಳಗಣ ಥಳಥಳಿಪಮನೋಜ್ಞಮಣಿಮಯಮಂಚಾಗ್ರದಲ್ಲಿ—

ಇಂದೆನಗೆನ್ನ ನಲ್ಲನೊಡಗೂಟಮದಪ್ಪುದೆಯೆಂದಗಲ್ದು ಪೂ
ರ್ಣೇಂದುನಿಭಾಸ್ಯೆ ಚಿಂತಿಸುವ ವೇಳೆಯೊಳೊಪ್ಪುವ ವಾಮಬಾಹು[3]ವಿ[3]
ಸ್ಪಂದಮನಾನೆ ಬಂದೊಡವನಾಗಳೆ [4]ಭಾ[4]ಪೆನುತೇಳ್ದು ರೋಮ ಹ
ರ್ಷಂದಳೆದಪ್ಪಿದಳ್ ಪತಿಯನಾ ಭುಜದಿಂದಮೆ ಪೂರ್ಣ ರಾಗದಿಂ ॥೧೪೪॥

ಪುಳಕದ ಮೈಯೊಳೊಪ್ಪುತೆ ಬೆಮರ್ತ ಘನಸ್ತನಮಂಡಳಂಗಳಂ
ಕೆಳೆಗೊಳಿಸುತ್ತೆ ವಕ್ಷದೊಳೆ ಕಂಪಿಪ ಕೈದಳದಿಂದೆ ಪೊಯ್ದು ಪಾ
ಯ್ದಳಿವ ಸುಖಾಶ್ರುವಿಂ ನನೆದ ಕಣ್ಮಲರಿಂ ನಡೆನೋಡಿ ಮುಂಬಡಂ
ಗಳಿಯಿಸೆ ಕೂಡಿ ಗದ್ಗದದ ಕಂಠದಿ ಕೂಜಿತಮಂ ನೆಗಳ್ಚಿದಳ್ ॥೧೪೫॥

॥ವ॥ ಇಂತು ಸಮಾನುರಾಗದಿಂ ನೆರೆದಗಲದಿರ್ದಾತನಂ ನೋಡಿ ನಾಗರಿಕನಿಂತೆಂದಂ—

---

೧ ಪಿ (ರಿ, ಧಾ) ೨ ಮಾ (ರಿ) ೩ ಯಿ (ರಿ) ೪ ಬಾ (ಮೈ, ಧಾ, ಕೆ)

ಅಸಿಯಳುಸಿರೆಲರನಾಸ್ವಾ
ದಿಸುತಧರಾಮೃತಮನೀಂಟಿ ಭೋಗಿತ್ವಮನಾಂ
ತಸಮಕುಚಕಳಶನಿಧಿಗಾ
ದೆಸೆವಂಗೆ ಭುಜಂಗನಾಮಮೇಂ ಬಗೆವುಗದೇ ॥೧೪೬॥

॥ವ॥ ಎಂಬ ಮಾತಂ ಮನಮೊಸೆದಾಕರ್ಣಿಸುತ್ತಿರೆ ಮತ್ತಮೊರ್ವಳ್[೧]ಮು[೧]ಚ್ಚುಗಾರ್ತಿ ಮನದನ್ನನ ಮಾತಾಗಿ ಕೆಳದಿಗಿಂತೆಂದಳ್—

ಮೊಗದೊಳ್ನೋಳ್ಪಿನೆ ಮುಗ್ಧಭಾವಮವನೈತರ್ಪಂದದೊಳ್ನೋಳ್ದನೇ
ಮಿಗೆ ಸೌಜನ್ಯಕಳಾಪ್ರಕಾಶತೆಯಿವಂ ನೋಳ್ಪಂದದೊಳೋಳ್ಪನೇ
ನೆಗಳ್ದಳ್ಕರ್ಸವಿವಾತನಾಡಿ ನೆರೆವಾಗಳ್ನೋಳ್ಪನೇ ಕಾಂತೆ ಕೇಳ್
ಮುಗುಳಂಬಂಗೆಣೆಯೀತನಿರ್ಕೆನಗೆ ತೋಳೊಳ್ಜನ್ಮಜನ್ಮಂಗಳೊಳ್ ॥೧೪೭॥

॥ವ॥ ಅಲ್ಲಿಂ ಮತ್ತಮೊರ್ವಳ್—

ಕಡೆಗಣ್ಣಲ್ಲಮನಿತ್ತೊಡಲ್ಲದೆಳಸಂ ಮೈಸಾರ್ದುನಿಂದಲ್ಲದೊ-
ಳ್ನುಡಿಯಾಡಂ ನಿಜ ವಕ್ಷದೊಳ್ಗುರುಕುಚಂ ತಳ್ತಲ್ಲದಾಲಿಂಗಿಸಂ
ತೊಡೆ ಕಂಪಂಬಡೆದಲ್ಲದೊಂದಿ ಬೆರಸಂ ಕಾಮಾಂಬು ಕೈಮೀಱಿ ಮೆ
ಲ್ಲುಡೆ ತಾನೇ ಸರಿದಲ್ಲದೊಲ್ದು ನೆರೆಯಂ ಮತ್ಪ್ರಾಣಕಾಂತಂ ಸಖೀ ॥೧೪೮॥

॥ವ॥ ಮ[೨]ತ್ತಮೊ[೨]ರ್ವಳ್ ಲಲ್ಲೆಗಾರ್ತಿ ದೂದವಿಯೊಡನೆ ನಗೆ ಮಿನುಗೆ ಮೊಗಮಂ ನೋಡಿ—

ಸುರಿಯೆ ಸುಖಾಶ್ರುವಳ್ವಳಿವಳೆಂದತಿ ದೈನ್ಯಮನಾಡಿ ಕಂಪನಂ
ನೆರೆಯ ಭಯಾರ್ತೆಗೆತ್ತಗಿದು ನೋಡಿ ಕರಾಗ್ರದೆ ಪೊಯ್ಯೆ ಕೋಪನಿ
ರ್ಭರಯುತೆಯೆಂದು ಬಾಡಿ ಸುರತಾಂತದೊಳಕ್ಷಿಗಳಂ ಮುಗುಳ್ಚಿ ಪ
ಟ್ಟಿರೆ ಪರಮಾಯು ಶೀವಿತಿವಳೆಂದಿರದೋಡಿದನೊರ್ವನೂರಿಚಂ ॥೧೪೯॥

---

೧ ಮ (ರಿ) ೨ ತ್ತೋ (ಮೈ)

॥ವ॥ ಎಂದುಸುರ್ದು ನಿಜಸಖಿಯ ಬಗೆಗೆ ನಗೆಯಂ ಪಡೆದಿರ್ದಳಿತ್ತ[೧]ಲ್ಮ[೧]ತ್ತೊ- ರ್ವಳ್ ವಿದಗ್ಧಾಂಗನೆ ಪರ್ಬಿದ ಬೆಳ್ದಿಂಗಳೊಳ್ನಿಜಗೃಹದ್ವಾರದ ಪೊಱವಳಯದ ಪೊಂಜಗಲಿಯೊಳ್ ಬಳಸಿದ ಬೆಲೆವೆಣ್ಗಳ ನಡುವೆ ಗಾಡಿಯಿಂ ಕುಳ್ಳಿರ್ದಿಂತೆಂದಳ್—

ನಯಸಂಪನ್ನನತೀವಯವ್ವನಯುತಂ ರೂಪಾನ್ವಿತಂ ನರ್ಮಗೋ
ಷ್ಠಿಯನಾಳ್ವಂ ಕಡುನೀಱನೂರ್ಜಿತಯಶಂ ಪಂಚಾಸ್ತ್ರಶಾಸ್ತ್ರಾರ್ಥನಿ
ಶ್ಚಯಚಿತ್ತಂ ಸುಭಗಂ ಪ್ರಸನ್ನನುಚಿತಜ್ಞಂ ಚಾಗಿ ಸಂಭೋಗಸಂ
ಪ್ರಿಯನುತ್ಸಾಹಿಯೆನಿಪ್ಪನೊಳ್ನೆರೆವ ಪೆಣ್ಗಾ ರಂಭೆ[೨]ಯೇಂ[೨] ಸಾಟಿಯೇ ॥೧೫೦॥

ಖಲನೊಳ್ಕಾತರನೊಳ್ಕಳಾರಹಿತನೊಳ್ಕಾಪಟ್ಯಮಂ ಮಾಳ್ಪ ದು
ರ್ಬಲನೊಳ್ ದುರ್ಮುಖನೊಳ್ ದುರುಕ್ತಿಪರನೊಳ್ ದುರ್ಮಾರ್ಗದೊಳ್ಕೂರ್ಪನಾ
ಣಿಲಿಯೊಳ್ ನಿಷ್ಠುರನೊಳ್ ನಿತಾಂತಶಠನೊಳ್ ನಿಸ್ನೇಹಮಂ ತೋರ್ಪ ಸಂ
ಚಳನೊಳ್ ಸದ್ಗುಣಹೀನನೊಳ್ ನೆರೆವ ಕೂಟಂ ನಂಜಿ ನೂಟಂ ಸಖೀ ॥೧೫೧॥

॥ವ॥ ಅದಂ ಕೇಳುತ್ತಿರ್ಪನಿತಱ[೩]ೊಳಲ್ಲಿ ಪೆಱತೊಂದು ತಾಣದೊಳ್ಕುಳ್ಳಿರ್ದೂ- ರಿಚನಿರವಂ ನೋಡಿ ನೀನೀತನೊಳ್ಕೂ[೩]ರ್ಪು[೪]ದುಂಟೇ ಸಖಿಯೆಂದು ಬೆಸಗೊಂಡಾಳಿ- ಯೊಡನೊರ್ವಳ್ ಸುಭಗೆ—

ಬರ್ಪುದುಮಾಗಳೇಳ್ದು ಪಿಡಿದುಟ್ಟುದನುರ್ಚುವನೊತ್ತಿಪಾಯ್ವನು
ಳ್ಳಾರ್ಪು ಮಿಗಲ್ ಕಡಂಗಿ ಕಡುಕಾ[೪]ತ[೪]ರಮುಣ್ಮಿರೆ ಕಾಯಜೀವಮಂ
ಬೇರ್ಪಡಿಪಂತೆ ಕೂಡುವನಿದೇಂ ಸಖಿ ಕೂಟಮೊ ಬೇಟದಾಟಮೋ
ಕೂರ್ಪುದನೀತನಂ ಕೊಡುವ ಪೊಂಗಳನಾನಿರದೊಟ್ಟಿ ಸುಟ್ಟಪೆಂ ॥೧೫೨॥

॥ವ॥ ಎಂಬ ನುಡಿಗೇಳ್ದವನಿಪಂಗೆ ವಿಟನಿಂತೆಂದಂ—

ನಗೆಯಱಿದೈದಿ ನಾಣಱಿದು ಮುದ್ದಿಸಿ ಪೊಂಪುಳಿವೆತ್ತ ಮೈಯ ಪೊ
ರ್ದುಗೆಯಱಿದಂಟಿ ಸೋಲವಱಿದೀಕ್ಷಿಸಿ ಕಾತರಮುಣ್ಮೆ ಮುಂಚುವಾ
ಬಗೆಯಱಿದಪ್ಪಿ ಭಾವ[೫]ವ[೫]ಱ[೬]ದೋತೊಡಗೂಡಿ[೬] ರತಾಂತಸೌಖ್ಯಮಂ
ನೆಗಳದ ಗಾಂಪನೇನೊಲಿಸಲಾರ್ಪನೆ ಸೂಳೆಯರಂ ಧರಿತ್ರಿಯೊಳ್ ॥೧೫೩॥

---

೧ ಳ್ಕೈ (ಮೈ, ಬ) ೨ ಯಂ (ಮೈ) ೩ ರ್ಪ (ಮೈ, ರಿ) ೪ ತು (ಬ, ಮೊ)
೫ ನ (ಧಾ) ೬ ದೊಡಗೂಡಿ (ಮೈ, ಮೂ, ಧಾ)

॥ವ॥ ಎಂದರಸನ ಚಿತ್ತಕ್ಕೆ ಸಂವೋದನದಲ್ಲದೆ ಮತ್ತೊಂದು ಮರಕತರತ್ನದ ಮೊಗಸಾಲೆಯೊಳ್ಕುಳ್ಳಿರ್ದು ಸೂಳೆವಾತಾಗಿ ವಿಟಂ ವಿಟನೊಡನೆ ನುಡಿದ[೧]ನೆ[೧]ಂತೆನೆ—

ಎಳಸುತ್ತಪ್ಪಿದೊಡಕ್ಷಿಯೊಳ್ಸುಖಜಳಂ ಮೈದೋಱಿದಾಸ್ಯಾಬ್ಜದೊಳ್
ಕಳೆ ಕೈಮೀಱಿದೆ ನೀವಿ ಜಾಱಿದೆ ಸುಸಿಲ್ಗೈವಲ್ಲಿ ನಾಣ್ಗೋಡದು
ತ್ಪುಳಕಂ ಮೂಡದೆ ದೈನ್ಯಮಾಡದೆ ನಿತಂಬಂ ಮುಂಬದಂಗೂಡದಿ
ರ್ಪಳ ಕೂಟಂ ಬಿಡದೇಳಱಿಟಮದನಾವಂ ನಚ್ಚುವಂ ಮೆಚ್ಚುವಂ ॥೧೫೪॥

॥ವ॥ ಮತ್ತಮೊರ್ವನಿದಿರೊಳ್ಕೈತರ್ಪ ತಕ್ಕುಗಾರ್ತಿಯಂ ಕರಸಂಜ್ಞೆಯಿಂ ಕೆಳೆಯಂಗೆ ತೋಱಿ [೨]ಮೆಲ್ಲನಿಂ[೨]ತೆಂದಂ—

ಮಿಸುಗುವ ಬಟ್ಟಬಲ್ಮೊಲೆಯನೀ ವಧು ಮೇಲುದನಿಕ್ಕುವಂತೆ ಕಾ
ಣಿಸಿ ಕಚಗಂಧಕಾರ್ದಱಿಗುವಾಱಡಿಯಂ ನಡೆನೋಡುವಂತೆ ಕಾ
ಣಿಸಿ ಸವಿನೋಟಮಂ ಜಗುಳ್ದಕಾಂಚಿಯು[೩]ನೊ[೩]ತ್ತುವ ಪಾಂಗಿನಿಂದೆ ಕಾ
ಣಿಸಿ ಸುಳಿನಾಭಿಯಂ ಬೊಜಗರಂಗದೆ ಕಾಣಿಪಳಂಗಜಾಗ್ನಿಯಂ ॥೧೫೫॥

॥ವ॥ [೪]ಅಂತುಮ[೪]ಲ್ಲದೆಯುಂ—

ಮೊದಲೊಳ್ನೋಟದೆ ಜೇಟಮಂ ಪಡೆದು ಕೂರ್ತೈತಂದ ಕಾಂತರ್ಗೆ ಸಂ
ಪದವಂ ಕಾಣಿಸಿ ಕೊಟ್ಟೊಡೊಲ್ಲದೆ ಕುಲಸ್ತ್ರೀಯಂತೆ ಕೂರ್ತಪ್ಪಿ ಸಂ
ಮದಮಂ ಪುಟ್ಟಿಸಿ ಮತ್ತೆ ಮತ್ತೆ ಬಗೆಯೆಂತಿರ್ದಂತೆ ಕೂಡುತ್ತೆ ಸೋ
ಲ್ತುದನೊಲ್ದೀಕ್ಷಿಸಿ ಚಿ[೫]ತ್ತ[೫]ದೊಂದು ಮುಳಿಸಿಂ ಸರ್ವಸ್ವಮಂ ಕೊಂಡಪಳ್ ॥೧೫೬॥

॥ವ॥ ಎನೆ ನಾನುಮಿವಳ ಬಗೆಯಂ ಮುಂ ಬಲ್ಲೆನೆಂದು ಕೇಳ್ದವಂ ಮಗುಳ್ದು-ತ್ತರಂಗುಡುತ್ತಿರ್ದನಲ್ಲಿ ಮತ್ತೊಂದು ತಾಣದೊಳೊರ್ವನೊರ್ವಳೊಳ್ ಸರ್ವವಲ್ಲಭೆ-ಯಾದ ನಿನ್ನೊಲ್ಮೆಯನೆಂತು ನಂಬಲಕ್ಕುಮೆಂದು ನುಡಿಯಲೊಡನವಳಿ[೬]ಂತೆಂ[೬]ದಳ್—

---

೧ ನದೆಂ (ರಿ) ೨ ಇಂ (ಬ) ೩ ಸೊ (ರಿ) ೪ ಅದಲ್ಲದೆ (ಮೂ, ಕ) ೫ ಕ್ಕ (ರಿ, ಧಾ, ಬ)
೬ ನಿಗಿಂ (ಮೂ), ಗಿ (ಬ).

ಸೂಳೆಯ[೧]ಗರ್ಗ[೧]ವನಾದೊಡೊಸೆದೊತ್ತೆಯನಿತ್ತನ ತೋಳೊಳಿರ್ದು[೨]ಮೈ
ಮೋ[೨]ಳಕೆ [೩]ಮೈಯ[೩]ನೀವುದುಚಿತಂ ಮನಮಿತ್ತೊಡೆ ಸಾಲದೇ ಮನಂ
ಮೋಳಿಸಿ ನಿಂದುದಕ್ಕೆ ಕುಱುಪ[೪]ಲ್ತೆ[೪] [೫]ಸುಧಾಧರ[೫]ಮುಂ ನಿರಾಶೆಯುಂ
ಕೇಳಿಗೆ ಮುಂಚುವಿಂದ್ರಿಯಮುಮಂಗದೊಳುರ್ಬುವ ಸಾತ್ವಿಕಂಗಳುಂ ॥೧೫೭॥

॥ವ॥ ಇದು ಮನಂಬಂದೊಡೆ ಕುರುಳಂ ಬೆರಲಂ ಬೇಡಿತ್ತಪೆಂ ತೊದಳಿಲ್ಲೆಂದು ನುಡಿದ ನಲ್ಮೆಗಾರ್ತಿಯ ನುಣ್ಮಾತಂ ಕೇಳ್ದು [೬]ಹರ್ಷ[೬]ದಾಳ್ದು—

ಬೆರಲಂ ಕೊಟ್ಟೊಡೆ ಬೇಟಮೇಂ ಕುರುಳುಮಂ ಕೊಯ್ದಿತ್ತೊಡೇಂ ಕೂರ್ಮೆ ಕೇ
ಳರವಿಂದಾನನೆ ಮನ್ಮನಃಪ್ರಿಯಮಿದಲ್ತೀ ದೇಹಮಂ ನಲ್ಮೆ ಮುಂ
ಬರಿವುತ್ತಿತ್ತೊಡಿವೆಲ್ಲಮೇಂ ಪೊಱತೆ ಪೇರಂ ತೆತ್ತವರ್ ಸುಂಕಮೀ
ವರೆ ಶೀರ್ಷಂಗುಡೆ ಕಣ್ಗಳೇಂ ಪೊಱಗೆ ಕೂರ್ಪೊಂದಿರ್ದೊಡೊಂದಕ್ಷಯಂ ॥೧೫೮॥

॥ವ॥ ಎಂದವರ್ ಸಮಪ್ರೇಮದಿಂ ನೆರೆದಿರ್ದರಿತ್ತಲೊರ್ವ ಬರ್ದೆ ಬಹುಧನಸಂಪನ್ನರಾದ ಚೆಲ್ವಬೊಜಂಗರೆಳೆವೆಣ್ಗಳಾಲಯಕ್ಕೆ ಪೋಪುದಂ ಕಂಡು ಸೈರಿಸಲಾಱದಸೂಯೆಯಿಂದವರ್ಕೇಳ್ವಂತೆ—

ಹರೆಯಮುದಿರ್ದೊಡೇನೊ ನೆರಪುಜ್ಜುಗಮುಂಟೆ ವಿಲಾಸಮುಂಟೆ ಕಂ
ಠರವಮದುಂಟೆ ಸತ್ಕರಣಮುಂಟೆ ಕಳಾಜ್ಞತೆಯುಂಟೆ ಕಾಲಮಂ
ಪರಿಕಿಪುದುಂಟೆ ನಲ್ನುಡಿಗಳುಂಟೆ ರತೇಚ್ಛೆಯನಂತೆ ಪೆರ್ಚಿಪಾ
ಪರಿಕರಮುಂಟೆ ಲಜ್ಜೆವೆರೆದೀಕೆಯರೊಳ್ ರತಿ ಲಜ್ಜೆಯಲ್ಲವೇ ॥೧೫೯॥

॥ವ॥ ಎಂಬನಿತಱೊಳ್ವಿಟಂ ಕೇಳ್ದವಳಿದಿ[೭]ರ್ಗೆವ[೭]ಂದು—

ಎವೆ ಮಱೆಯಾದೊಡೊಂದಿನಿತು ಸೈರಿಸಲಾಱದ ಕೂರ್ಮೆಪೆರ್ಮೆವೆ
ತ್ತವಿಭವಮುಂ ವಿಚಾರಿಸದ ಪೊರ್ದುಗೆ ವಂಚನೆಗೆಯ್ಯದಂಗಮೊ
ಪ್ಪುವ ವಿವಿಧೋಪಚಾರವಚನಕ್ಕೆರ್ದೆಯಿಕ್ಕದ ಮಚ್ಚುವಿತ್ತಮೀ
ವವನಿವನಲ್ಲವೆಂಬ ಬಗೆ ಪೊರ್ದದ ನಲ್ಮೆ ವಿದಗ್ಧೆಗುಂಟೆ ಪೇಳ್ ॥೧೬೦॥

---

೧ ದಾ (ರಿ) ೨ ಮೆಯ್ಮೆ (ಮೈ) ೩ ಮೆಯ್ಯ (ಮೈ) ೪ ತ್ತೆ (ಮೂ) ೫ ಸದಾವರ (ಮೈ) ಸದಾದರ (ರಿ) ೬ ಸಂಟಿಸಂ (ಮೈ), ಹರುಷಂ (ಮೂ) ೭ ರ್ವ (ಮೂ)

॥ವ॥ ಎಂದವಳಂ ನಾಣ್ಚಿಸಿದನದಲ್ಲದೆ ಮತ್ತಮೊಂದೆಡೆಯೊಳೊರ್ವಳ್ ಮೂದಲೆವಾತಾಗಿ ನುಡಿಯೆ ಮುಳಿದ ಮಗಳ ಮೊಗಮಂ ನೋಡಿ—

ಪೋದೊಡೆ ಬಾರದೀ ಸೊಗಸು ಜವ್ವನಮೀಗಳೆ ವಿತ್ತಮು[೧]ಳ್ಳ[೧]ರಾ
ರಾದೊಡಮೇನೊ ಮೇಣ್ಬರಿಸಿ ಮೆಲ್ಲೆರ್ದೆಯಂ ಮೊದಲೊತ್ತೆಗೊಂಡು ಮ
ತ್ತಾದರಿಸುತ್ತೆ ಮನ್ಮಥಸುಖಾಬ್ಧಿಯೊಳಾಳಿಸಿ ತಂಗಿ ದೇಹಮಂ
ತೇದು ರತಂಗಳೊಳ್ ಪಣಮನಾಂ ಪಡೆಯೆಂದೊಡಿದೊಂದು ದೋಷಮೇ ॥೧೬೧॥

॥ವ॥ ಎಂದು ನಿಜಾ[೨]ಭಿ[೨]ಪ್ರಾಯಮಂ ಮಱಸಿ ನುಡಿಯೆ ಕೇಳ್ದ ಮಗಳ್ಮಗು[೩]ಳ್ದಿಂ[೩]ತೆಂದಳ್—

ಮೊಲೆ ಮುಗುಳೊತ್ತುವಂದು ಪೊದಲಿಂದುವರಂ ಬಗೆದಂತಿರಿಚ್ಛೆಯಂ
ಸಲಿಸಿ ಸಮೀಪದೊಳ್ನೆಲಸಿ ಮಗ್ಗುಲೊಳೊಗ್ಗಿಸಿ ಬೇಟಕೂಟಮಂ
ಕಲಿಸಿ ಕಲಾಳಿಯಿಂದೊಲಿಸಿ ಕೂರ್ತ ಮನಃಪ್ರಿಯನಂ ಬಿಡೆಂದು ನೀ
ನೆಲೆ ಮು[೪]ದು[೪]ಪಾಱಿದೊಳ್ತೆ ನುಡಿಯಲ್ಬಗೆದಂದುದನೆಂತು ಸೈರಿಪೆಂ ॥೧೬೨॥

॥ವ॥ ಪೆಱ[೫]ತೊ[೫]ರ್ವಳ್ಪೆಱತೊಂದೆಡೆಯೊಳ್ ಕುಂ[೬]ಟ[೬]ಣಿವಾತಾಗಿ ಕನಲ್ದು ತನ್ನ ಕೆಳದಿಗಿಂತೆಂದಳ್—

ಮಸಗಿದ ಮಾರಿಯಂತೆ ಮುಳಿವಳ್ ಪುಲಿಯಂತಿರೆ ಪೂಣ್ದು[೭]ಗ[೭]ರ್ಜಿಪಳ್
ಪಸಿದಹಿಯಂತೆ ಪಲ್ಮೊಱಿವಳಗ್ಗದ ರಕ್ಕಸಿಯಂತೆ ರಂಜಿಪಳ್
ಮುಸುವೆನೆ ತನ್ನ ಮುತ್ತುಮುಸುಡಿಂದಿರದೇಡಿಪಳೆನ್ನ ನಲ್ಲನೊಳ್
ಬೆಸುಗೆಯ ಬಿರ್ಚಲಾಟಿಪಳಿವಳ್ ಮುದಿ[೮]ಕುಂಟಣಿ[೮] ಸಾಯಳೇವೆನಾಂ ॥೧೬೩॥

॥ವ॥ ಮತ್ತಮೊರ್ವಳ್ತನ್ನ ಕೆಳದಿ ವಿಟರೊಳ್ಮಾಳ್ಪ ಕೇಣಮಂ ಕಂಡಿಂತೆಂದಳ್—

ವಿವಿಧವಿಳಾಸಮಂ ಮೆಱೆದು ವಕ್ತ್ರಸುಧಾರುಚಿಯಿಂದೆ ಪೊಣ್ಮುವೀ
ಸವಿನಗೆಯೆಂಬ ಸಾರಸುಧೆ[೯]ಯಂ[೯]ಸಲೆ ತೋಱಿ ಭುಜಂಗವರ್ಗಮಂ
ಸವಿನಯಮೊಲ್ದು [೧೦]ಮುಚ್ಚಿಪುದಿ[೧೦]ಂದಲ್ಲದೆ ಸೋರ್ಮುಡಿಯೆಂಬ ಕೇಕಿಯಂ
ತವೆ ಮುಳಿದಾಳಿ ಪಿಂದಿರುಗಿ ಕಾಣಿಸಿ ಪೋಗಿಪುದೇಂ ಸುಬುದ್ಧಿಯೇ ॥೧೬೪॥

---

೧ ಳ್ತ (ಮೂ) ೨ ಭಿಃ (ಮೈ) ೩ ಳಿ (ರಿ) ೪ ದಿ (ಮೂ) ೫ ಳೊ (ಮೈ, ಮೂ, ಬ) ೬ ಠ (ಮೈ, ರಿ) ೭ ಸುಘ (ರಿ) ೮ ಗುಂಟಣಿ (ಧಾ) ೯ ಯೂ (ರಿ) ೧೦ ಮೆಚ್ಚಿಪುದಿ (ರಿ); ಮರ್ಚಿಸಿದ (ಮೂ).

॥ವ॥ ಮತ್ತಮೊರ್ವಳ್ ಕೈತವಂ ಕೈಮಿಕ್ಕ ಕಾ[1]ಳ್ಬೊ[1]ಜಂಗನ ಮಾತಾಗಿ ಕಡು ಕನಲ್ದು ಕೆಳದಿಯೊಡನಿಂತೆಂದಳ್—

ದಿನದಿನದಲ್ಲಿ ತಾಳ್ದಿಱವಿನೊಳ್ಪೊಡವಂ ಪೊಱಮಿಂಚುಗೈದು ಬಂ
ದೆನಗನಿವಾತನಾಡಿ ಧನಮಂ ಪಿರಿದಿತ್ತಪೆನೆಂಬ ಮಾಳ್ಕೆಯಂ
ಮನದೊಳಮರ್ಚಿ ಮೆಚ್ಚಿ ನೆರೆದಿರ್ದಿನಿತುಂ ದಿನ[2]ಮೇ[2]ಳ್ದು ಪೋದನಾ
ತನ ಬಲಿಗಟ್ಟಿ ಮನ್ಮಥಬಳಾರಿಗೆ ಪೆರ್ಗುಱಿಮಾಡಿ ಪೊಯ್ದಪೆಂ ॥೧೬೫॥

॥ದ॥ ಮತ್ತಮೊರ್ವಳ್—

ಬಳಿವಳಿಯಲ್ಲಿ ಬರ್ಪನುಪಚಾರಮನಾಡುವನೊಯ್ಯನಿರ್ದೊಡಾ
ಗಳೆ ಬಳಿಕೇಳ್ದು ಕಾಲ್ವಿಡಿದು ನಂಬಿಪನಿತ್ತಪೆನೀಗಳೆಂದು ತ
ನ್ನೊಳೆ ಸಲೆ ತಾನೆ ಸೂರುಳಿಸಿ ತಪ್ಪುವನೇಕೆನೆ ಬಾಯ್ಗೆ ಬಂದವೋಲ್
ಗಳಪುವನಾವಗಂ ಧನಮನೀಯದೆ ಚಾಳಿಪನೆಂತು ಮಾಳ್ಪೆನಾಂ ॥೧೬೬॥

॥ವ॥ ಮತ್ತಮೊಂದೆಡೆಯೊಳ್—

ಇಲ್ಲದ ದೋಷಮಂ ಬಱಿದೆ ಕಲ್ಪಿಪನಲ್ಪಮೆನಿಪ್ಪ ತಪ್ಪನೊ
ಲ್ದೆಲ್ಲರೊಡಳಾಡುವಂ ಪುರುಡಿಪಂ ಪುರುಳುಳ್ಳೊಡೆ ಮೆಚ್ಚನಿತ್ತುದಂ
ಸೊಲ್ಲಿಪನುಬ್ಬಸಂಬಡಿಪನೇಕೆನೆ ಲೆಕ್ಕಿಸನೆಯ್ದೆ ಸೂರುಳಿ
ಟ್ಟಲ್ಲದೆ ನಂಬದೀ ದುರುಳನಂ ನೆಱೆ ನೀಗುವೆನೆಂತು ಪೇಳ್ ಸಖೀ ॥೧೬೭॥

॥ವ॥ ಇಂತನೇಕ ರಸಭರಿತಮಾದ ಚತುರೋಕ್ತಿಗಳನಾಕರ್ಣಿಸುತ್ತಂ ರಸಿಕ ಸಖನಿಕರವನವಸಂತಂ ಸಂತಸಂ ಮಿಗೆ ಮುಂದಣ್ಗೆ ಪೋಗೆವೋಗೆ ಮತ್ತೋರ್ವಳ್ ತನ್ನ ಮಗಳ್ ದರಿದ್ರವಿಟನಂ ಮೆಚ್ಚಿರ್ಪುದಂ ಕಂಡು—

---

೧ ಳ್ಬೊ (ಮೂ) ೨ ಮೊ (ಮೂ).

ನಾಗಿಣಿವೊಲೀ ಭುಜಂಗನ
ಭೋಗಕೆ ತನುವಿತ್ತೆ ಸಂಪದಂಬಡೆದಪೆಯೆಂ
ತಾಗಳ್ ತನಗಿಲ್ಲದುದೀ
ಪಾಗರಿಮೆಯದೆಂತೊ ವಕ್ರಗತಿ ನಿನಗಕ್ಕುಂ ॥೧೬೮॥

॥ವ॥ ಎನುತ್ತಿರೆ ಮತ್ತೊಂದು[1]ಕೇಳೀನಿಳಯ ದೊಳ್ಮಱಿದಿರ್ದ ನಲ್ಲಳಂ ತಿಳುಪಲೆಂದು ವಿಟಂ ನುಡಿಯಿಸುವಲ್ಲಿ—

ಎಲೆ ಕಾಯ್ಪೇಱಿದೆ ಚೈತ್ರವಲ್ಲರಿಯೆ ಗಂಧಂಗುಂದದಿರ್ದಪ್ಪೆ ಕ
ಮ್ಮಲರೇ ಮೇರೆಯನೊತ್ತಿ ವರ್ತಿಸುವೆ ಸಂವರ್ತಾಬ್ಧಿಯೇ ಬಂದುದೇ
ಕಲಿ ಮತ್ತೇಂ ಕೃತಮೇ ಕೃಪಾನ್ವಿತಮೆ ಚಿತ್ತಂ ಕೌರವಕ್ಷೋಣಿಭೃದ್[2]
ಬಲಮೇ ಕ[3]ರ್ಣ[3]ಕಠೋರಮೀ ನುಡಿಯಿದೇಂ ಪಾರ್ಥಾಸ್ತ್ರಮೇ ಮಟ್ಟಮಿರ್
॥೧೬೯॥

॥ವ॥ ಎಂಬ ಮಹಾಪ್ರೌಢೆಯ ಜಾಣ್ಮಾತಂ ಕೇಳ್ದು ಮೆಚ್ಚುತಿರ್ಪನ್ನೆಗಮೊಂದು ಮುತ್ತಿನ ಮೊಗಸಾಲೆಯ ಮುಂದಣ ಕನಕಮಯ ಕಮನೀಯ ವೇದಿಕಾಗ್ರದ ಕುಸುಮತಳ್ಪದೊಳ್ಕುಳ್ಳಿರ್ದ ವಲ್ಲಭೆ ನಲ್ಲನಂ ನೆಮ್ಮಿ ಚೆಲ್ಲದಿಂ ಮೆಲ್ಲನಿಂತೆಂದಳ್—

ವಾದಿಸಮನಾಂತ ನಾಮಮು
ನಾದಂ ತಳೆದಾತನಳೆದುದೇಂ ಭೋಗಿಜನಾ
ಹ್ಲಾದಕನಾವಂ ತಾರಕ
ಭೇದಕನಾವಂ ಕುಮಾರನಲ್ತೆ ಮೃಗಾಕ್ಷೀ ॥೧೭೦॥

॥ವ॥ ಎನೆ ಮಗುಳ್ದವಳೊಡನವನಿಂತೆಂದಂ—

ವನದ ಸಮುದ್ಧ್ರದ ಪರ್ಯಾ
ಯನಾಮದೊಳ್ಗಮಿಪುದೇಂ ತದಾಶ್ರಯಮೇಂ ಜೀ
ವನಕೆ ಮುನಿವವನದಾವಂ
ವನನಿಧಿಯೆಂತಪ್ಪುದೆನಗೆ ಪೇಳ್ಕಮಳಾಕ್ಷೀ ॥೧೭೧॥

೧ ನಿಳಯ (ಮೈ) ೨ ಭೃ (ರಿ) ೩ ರ್ಣ (ಬ, ಧಾ).

॥ವ॥ ಮತ್ತಮೊಂದು ಸೆಜ್ಜೆವನೆಯೊಳೊರ್ವಕ್ಕಱಿಗಬೊಜಂಗಂ ಸೊ[೧]ರ್ಕು[೧]-ಜವ್ವನೆಗೆ ಸಕ್ಕದದ ಬಹಿಲ್ಲಾಪಿಯಂ ಪೇಳ್ದನದೆಂತೆನೆ—

*

ಬ್ರಹ್ಮಾಣೀ ಕಾ ಜನೇಷ್ಟಂ ದಧತಿ ಝುಡಿತಿ ಕೇ ತಾಪಸಾಂಗಂಚ ಕೀದೃಕ್
ಪ್ರೀತಾ ಕಾ ಕುತ್ರ ವಿಶ್ವಂ ನಿವಸತಿ ವಿಬುಧಾಬೋಧನಂ ಕಿಂ ನೃಪಾಲಃ
ಕಸ್ಸೈ ಸನ್ನ[೨]ದ್ಧ[೨]ಈಶಃ ಪತಿರಿತಿವಿ[೩]ದಿ[೩]ತಃ ಕಸ್ಯ ವಂದ್ಯೌಚ ಕೌ ಕಿಂ
ವಕ್ತೀಶಃ ಕೌ ಜಗತ್ಸಂಹರಣಭರಣ ಕೌ ಮಂಗಳೋಕ್ತಿಃ ಕವೇಃ ಕಾ ॥೧೭೨॥

॥ವ॥ ಎನೆ ಕೇಳ್ದವಳ್ಕಾಳಿದಾಸಕವಿವಿರಚಿತಕಾವ್ಯಾದಿಮಂತಲ್ಲಾಪಿಯಿನುತ್ತರಂಬೇಳ್ದವನ ಚಿತ್ತಂಬಡೆದಿರ್ದಳಿತ್ತ ಮತ್ತೊಂದೆಡೆಯೊಳೊರ್ವ ಮತ್ತಕಾಶಿನಿ ಕಾಂತನೊಳ್ಪ್ರ-ಹೇಳಿಕೆಯಂ ಸೊಲ್ಲಿಸಿದ[೪]ಳ[೪]ದೆಂತೆನೆ—

ರಣೇನ ಸಾಧ್ಯತೇ ಸರ್ವಂ
ಮಹೇ[೫]ನ[೫]ಧ್ರೀಯತೇ ಮಹೀ
ಆಸಾ[೬]ರೇ[೬] ಕ್ರೀಡತೇ ಹಂ[೭]ಸಃ[೭]
ಕವಿ[೮]ಶೇ[೮]ಷೆ ಕಿ[೯]ಮದ್ಭು[೯]ತಂ ॥೧೭೩॥

॥ವ॥ ಇಂತಪ್ಪನೇಕವಿಧಚತುರಗ್ರಂಥಂಗಳಂ ಕೇಳ್ದು ಮಚ್ಚುತ್ತಂ ಚತುರ-ಜನಮನಶ್ಚಕೋರಚಂದ್ರಂ ನಾಗರಿಕನೊಳ್ಪೊಗಳುತ್ತಿರೆ ಮತ್ತೊಂದು ಮಣಿಭವನ-ದಂಗಣದೊಳ್ ಮಾತೆಯೊಡನೆ ಮುಳಿದು ಮಗಳ್ನಿಂದಿರ್ಪುದುಮವಳ್ಪಿಡಿದಿಂ-ತೆಂದಳ್—

ಮಗಳೆ ಮನೋಜ್ಞಮಾತೆ ಮಿಗಿಲಿತ್ತೊಡೆ ಮೀಱದಿರಾತನಾಜ್ಞೆಯಂ
ಮುಗುದೆ ಕಳಲ್ಚು ಮೂಢತೆಯ ಮೇಣದ ಪುತ್ತಳಿಯಂತೆ ಮೈಯನಿ
ತ್ತಗಲದೆ ಕೂಡಿ ಮೋಹಿಸಿ [೧೦]ಧ[೧೦]ನಂಬಡೆ ಮೌನಮಿದೇಕೆ ಮಂದಿರಂ
ಬುಗು ನಡೆ ಮಸ್ತಕಂಮೊನೆಯದಿರ್ ಕಡುಮೂರ್ಖತೆ ಬೇಡ ಕಾಮಿನೀ ॥೧೭೪॥

* ವಿದ್ರುಮಮಹಿತಂ (ರಿ, ಮೈ, ಧಾ, ಬ, ಕ)

೧ ಕ್ಕು (ರಿ, ಬ) ೨ ರ್ದ (ಕ) ೩ ಧಿ (ರಿ, ಮೈ, ಧಾ) ೪ ಳಂ (ಕ) ೫ ನಾ (ಮೈ, ಕ) ೬ ರಃ (ಮೂ) ೭ ಸಂ (ಮೂ) ೮ ಶ್ಲೇ (ಮೈ) ೯ ಮದುಭು (ಬ), ಮದ್ಭೂ (ಕ) ೧೦ ದ (ಕ).

॥ವ॥ ಮತ್ತೊಂದು ಗೃಹಾಂತರಾಳದೊಳ್‌ಕುಳ್ಳಿರ್ದ ಜಘನ್ಯಭುಜಂಗನಂ ತೋಱಿ ಕೆಳದಿಯೊಡನೆ ಪದಿರಿಂದಿಂತೆಂದಳ್—

ಪರಮಶ್ಲಾಘ್ಯಗುಣಂ ಸದಾಮುದಹಿತಂ ಶೌರ್ಯೋತ್ತರಂ ಗಂಧಬಂ
[೧]ಧು[೧]ರನೆಂದುಂ ನರಸಾರಮೇಯನಬಳಾಪ್ರೇಮಾಸ್ಪದೋದ್ಯದ್ವನೇ
ಚರನೇತ್ರಾಸ್ಯನನಂಗರೂಪನತನುಕ್ರೀಡಾವಿನೋದಂ ಮನೋ
ಹರನೀತಂ ನಸು ಪಿಂಗೆ ಬರ್ಕುಮೆನಗೀಗಳ್ ಪಾರವಶ್ಯಂ ಸಖೀ ॥೧೭೫॥

॥ವ॥ ಎನೆ ತನ್ನಂ ಪೊಗಳ್ದಪ್ಪಳೆಂದು ಮುದಂಬಡೆದಿರ್ದನಲ್ಲಿ ಮತ್ತೊಂದೆಡೆಯೊಳ್ ಶಶಿಕಾಂತಕೇಳೀನಿಕೇತನದೊಳ್ ಚಂಚತ್ಕಾಂಚನ[೨]ಮಂಚದ[೨] ಮೃದುಳ ಧವಳಶ[೩]ಯ್ಯಾ[೩]ತಳದೊಳೊಯ್ಯನೆ ರಯ್ಯಮೆನೆ ಕೈಯಂ ಪಿಡಿದು [೪]ಮೈಯಂ[೪] ಸೋಂಕಿ ಮನದನ್ನಳೊಡನೆ ಮದನಕೇಳಿಗೆಳಸಿ ಮಹೋ[೫]ತ್ಸವ[೫]ದಿಂ ಮನೋರಮಣಂ ಕುಳ್ಳಿರ್ದು ನೇಹಂ ಮಿಗೆ ನಿರೀಕ್ಷಿಸಿ—

ಅಂದುಗೆಯಂ ಕಳಲ್ಚಿ ಪೊಸಮೂಕುತಿಯಂ ಬಿಡದೇಱಿನೂಂಕಿ ತ
ಳ್ತಂದದ ಹಾರಮಂ ಕೊರಲ ಹತ್ತಸರಕ್ಕೆ ತೊಡರ್ಚಿ ಸಾರ್ಚಿ ಚೆ
ಲ್ವೊಂದಿದ ಕೇಶಮಂ ಬಿಗಿದುಬಂಧಿಸಿ ನೋಳ್ಪ ನಿಜೇಶನಿಚ್ಛೆಯಂ
ಸುಂದರಿ ನೋಡಿ ಕೈಗಡಗಮಂ ತೆಗೆದಾತನ ಕೈಗಮರ್ಚಿದಳ್ ॥೧೭೬॥

ಹಸನರಸಂ ಮುಖಾಂಬುಜರಸಂ ಬೆರಸುತ್ತಿರೆ ಕುಂಡಲಂಗಳುಂ
ಮಿಸುಪ ಕುಚಂಗಳುಂ ಕುಣಿಯೆ ನುಣ್ಬೊಡೆಯುಂ ನಡುವುಂ ಕಡಂಗಿ ಕಂ
ಪಿಸೆ ನರುಸುಯ್ಗಳುಂ ಭ್ರಮರಕಂ ಪರೆದೊಪ್ಪಿರೆ ಘರ್ಮವಾರಿಗ
ಳ್ಸಸಿಲರಸಂಗಳುಂ ಸುರಿಯೆ ಜಾಣೆ ಜವಂಗೆಡದೊತ್ತಿಕೂಡಿದಳ್ ॥೧೭೭॥

ಪ್ರಿಯಕರಜಕ್ಷತೇಂದು ಕಳೆಯೊಂದೆ ಭಯಂಬಡೆದಂತುರೋಜಚ
ಕ್ರಯುಗಳಮುಂ ಕದಕ್ಕದಿಸೆ ಸಂಪಗೆಗಂಪನಮರ್ಚುತೇಳ್ವಸುಯ್
ರಯದೊಳೆ ತಾಗೆ ತಲ್ಲಣಿಪವೋಲ್ ಚಲಿಸುತ್ತಿರೆ ಕುಂತಳಾಳಿ ಕಾಂ
ತೆಯ ಜೆಡೆವಾವು ಪಾಯ್ದೊಡಗಿಪಂತೆ ಬೆಮರ್ತುದು ವಕ್ತ್ರಚಂದ್ರಮಂ ॥೧೭೮॥

---

೧ ದು (ಕ), ದ (ರಿ) ೨ × (ಬ) ೩ ಯ್ಯ (ರಿ, ಧಾ) ೪ ಮೆಯ್ಯಂ (ರಿ, ಕ) ೫ ತ್ಸಾಹ (ರಿ).

॥ವ॥ ಇಂತು ಸವಿಸುಸಿಲಸೊಗಮನನುಭವಿಸಿದನಂತರಂ—

ಮುಗಿದಲರ್ಗ್ಗಂಗಳಿಂ ಪರೆದ ಕುಂತಳದಿಂ ಬಿಡದೇಳ್ವ ಸುಯ್ಗಳಿಂ
ತೆಗೆಬಗೆಗೊಂಡು ಮೈಮಱೆವ ಚಿತ್ತದಿನುಣ್ಮುವ ಘರ್ಮವಾರಿಯಿಂ
ಮಿಗೆ ರಸವಾಱಿದಿಂದುಟಿಯಿನಾ ರತಿಮೂರ್ಛಿತೆ ಜೋಲ್ವದೇಹದಿಂ
ಸೊಗಯಿಸಿದಳ್ ಭುಜಂಗಪರಿದಷ್ಟತೆಯಂ ತವೆ ಸೂಚಿಪಂದದಿಂ ॥೧೭೯॥

॥ವ॥ ಅವಳಂ ನಾಗರಿಕಂ ನೋಡಿ ಪೊಗಳ್ವನಿತಱೊಳೊರ್ವವೃದ್ಧನೊತ್ತೆಗುಡ-
ಲೆಂದು ಬಂದಿರೆ ಮತ್ತೊರ್ವಳ್ಚಪಲೆ ಮೆಲ್ಲನೆ ಪೊರ್ದಿ ನಗುತಿಂತೆಂದಳ್—

ತರಳನಿದಾವನೊತ್ತೆಗುಡಬಂದಪನಕ್ಕಟ ಕಾಣನೇಕೆ ಕ
ಣ್ಗುರುಡ[1]ನೋ[1]ದಂಡಮಂ ಪಿಡಿದನಲ್ಲಮೆನುತ್ತಿರೆ ಶೀರ್ಷಕಂಪನಂ
ತೆರೆಯಿದು ನೋಳ್ಪೊಡಾಸ್ಯರಸದಿಂ ನೆಗೆದಿರ್ದುದೊ ಗಡ್ಡಮೀಸೆಯೊಳ್
ಪರೆದಿದೆ ಬೆಳ್ಪು ನಿರ್ಗತರದದ್ಯುತಿಗೊಂಡುದೊ ತಾನಿದದ್ಭುತಂ ॥೧೮೦॥

॥ವ॥ ಮತ್ತಮದಲ್ಲದೊರ್ವ ವೃದ್ಧಾಂಗನೆ ತಲೆವಾಗಿಲೊಳ್ನಿಂದು ಬೆಲೆವೆಣ್ಗಳಂಗ-
ಸಂಗದಿಂಗಿತಮಂ ಬಲ್ಲ ಬರ್ದಿನ ಬೊಜಗರಂ ಮರುಳ್ಮಾಳ್ಪ ಬಲ್ಮೆಗೊಲ್ಮೆಗಾನೆ
ನೋಂತೆನೆಂದುಸಿರ್ವನಿತಱೊಳಾಕರ್ಣಿಸಿ ವಿದೂಷಕನವಳಿರ್ದೆಡೆಗೆ ಸರಸರನೆ
ಪೋಗಿ—

ಉದರದ ವಳಿಗಳ್ನಿನ್ನಯ
ವದನಮನೆಯ್ದಿದವು ಕುಚದ[2]ಬಿಣ್ಪುದರ[2]ಮನೈ
ದಿದುದಳಕಮೈದಿದುದು ಕ
ಣ್ಗದಿರಿದು ಮುಡಿಪಾಱಿ ಪೇಳಿದೇನಚ್ಚರಿಯೋ ॥೧೮೧॥

॥ವ॥ ಪೆಱತೊಂದೆಡೆಯೊಳೊರ್ವಂ ಪರಿಹಾಸ[3]ರಸಪ್ರಕಾಶಕಂ[3]—

೧ ನೆ (ಮೈ) ೨ ಬೆಳ್ವಧರ (ಮೂ) ೩ ಪ್ರಕಾಶಂ (ಮೈ); ಕೆಪ್ರಕಾಶಂ (ಮೂ, ಬ)

ನೆಗೆದ ಪಯೋಧರದ್ವಯಮಿದೇಕೆಳೆಬೀಳ್ದುದು ಬರ್ದೆ ಪೇಳ್ವುದೆಂ
ದಗಿಯದೆ ಕೇಳೆ ಪೇಳ್ದಳವನೊಳ್ವಿಟ ನೀಂ ರತಿಕಾಲದಲ್ಲಿ¹ಕೆಂ¹
ಮಗೆ ಕರಮಿಟ್ಟು ಮರ್ದಿಸುತೆ ಹೂಂಕೃತಿಗೆಯ್ದೊಡನರ್ಘಚಂದ್ರನಂ
ಮಿಗೆ ಕುಡೆ ಕಾಮಗೇಹಕದನಾ ಮದನಂಗಿದು ಪೇಳಲ್ಕೈದುಗುಂ ॥೧೮೨॥

॥ವ॥ ಮತ್ತಂ—

ಎಳೆಯಳೆ ನೀನಲ್ಲಳೆ ಪೇ
ಳೆಳೆಯಳೆ ನಿನ್ನಳಕಕಾಂತಿಯೆಲ್ಲಿದೆ ಪೇಳೆ
ನ್ನೊಳೆ ನೀನಬಳೆಯೆ ಪೆಱತೇಂ
ತಿಳಿವೊಡೆ ನೀನಬಳೆಯೆಂಬುದಱಿಯದೆ ಲೋಕಂ ॥೧೮೩॥

॥ವ॥ ಎಂಬ ಮಾತಂ ಕೇಳ್ದು ವಿನೋದಮಕರಂದಮಧುವ್ರತಂ ನಸುನಗುತ್ತುಂ ಬರೆವರೆ ಮುಂದೊಂದು ಚಂದ್ರಮಣಿರಮಣೀಯಕುಟ್ಟಿಮಸ್ಥಳದೊಳುನ್ಮತ್ತಯೌವನಾಂಗಿಯೊರ್ವಳ್ ಸರ್ವವಲ್ಲಭಾಜನಮಧ್ಯದಲ್ಲಿ—

ಬಿಡುಮುಡಿ ಬೆನ್ನೊಳಾಡೆ ಕುರುಳುಂ ಫಣೆಯೊಳ್ಕುಣಿದಾಡೆ ಪೊಣ್ಮೆಪೊಂ
ಗೊಡವೊಲೆಯಲ್ಲಿ ಹಾರಮೊಲೆದಾಡೆ ನಿಜಶ್ವಸಿತೋರುಸೌರಭ
ಕ್ಕೊಡನೆಡೆಯಾಡೆ ತುಂಬಿ ಮಿಳಿರ್ದಾಡೆ ಕಟಾಕ್ಷಮರೀಚಿಕುಂಡಲಂ
ಬಿಡದಮರ್ದಾಡೆ ಗಂಡ²ನೊ²ಡನಾಡಿದಳಂಗನೆ ಚಂಡನಳ್ತಿಯಿಂ ॥೧೮೪॥

ಜಡಿವುತ್ತಿರೆ ನುಣ್ಮೊಲೆಯುಂ ಮುಡಿಯುಂ
ಪೊಡರುತ್ತಿರೆ ಪೂರ್ಣ ಘನಂ ಜಘನಂ
ಸೆಡೆವುತ್ತಿರೆ ತೆಳ್ನಡುವುಂ ತೊಡೆಯುಂ
ಪೊಡೆದಳ್ ಪಿಡಿದಳ್ ಪುಟಿಚೆಂಡನವಳ್ ॥೧೮೫॥

ಸಿರಿಗಾನಾವಾಸಮಾದೆಂ ಹರಿಗೆ ನಯನಮಾ ಬೊಮ್ಮನೆನ್ನಾತ್ಮಜಂ ಭಾ
ಸ್ಕರನೆನ್ನಾಪ್ತಂ ನೋಡದೆನ್ನೊಂದಳವನತಿ ಕಲಂಕಾಶ್ರಯಂ ರಾಹುದಷ್ಟಂ
ಚಿರದೋಷಾವಿಷ್ಟನಾದಂ ಕ್ಷಯಿ ಪಗೆತನಗೊಂಡಂ ಗಡಾ ಎನ್ನೊಳೀ ಚಂ
ದಿರನೆಂದಂಭೋರುಹಂ ಪೊಯಿದಪುದಿದನೆನೆ ತತ್ಪಾಣಿ ಪೊಯ್ದತ್ತು ಚಂಡಂ ॥೧೮೬॥

---

೧ ಕಂ (ಮೂ) ೨ ದೊ (ರಿ, ಧಾ)

॥ವ॥ ಅಂತವಳಂದವಂ ಕಂಡು ಇದು ನೋಟಕಬೊಜಗರೆರ್ದೆಯೊಳ್ ಕಂತುಕಾಲಾಗ್ನಿಯಂ ಪೊಯ್ವಂದಮಲ್ಲದೆ ಕಂತುಕಮಂ ಪೊಯ್ವಂದಮಲ್ತೆಂದು ನಾಗರಿಕಂ ಸೊಲ್ಲಿಸುತ್ತುಂ ಬರೆವರೆ ಮತ್ತಮೊಂದು ಬಿತ್ತರಂಬೆತ್ತ ಬಜ್ಜರದ ಸೌಧಾಂಕಣದೊಳ್ ಕೈಗೈದ ಪದ್ಮರಾಗರುಚಿನಿಚಯಕವಚಿತಸಮುತ್ತುಂಗಶಾತಕುಂಭ ಸ್ತಂಭಂಗಳಿಂ ಸಮುಚಿತಸ್ಥಾನದೊಳಿರಿಸಿ ನಿರ್ಮಿಸಿದ ಮರಕತಾದಿ ಮಣಿಮಯ ಮಯೂರಮಂಡಿತಮಧ್ಯಸ್ಥಳತುಳಾದಂಡದಿನೆಡೆಯೊಳ್ ತೊಡರ್ಚಿದಮಳ ರಮಣೀಯಮಣಿಮುಕುರಘನಕಲಶಘಂಟಿಕಾಝುಣಝುಣಿತಕಿಂಕಿಣೀಜಾಲಮಾಲಿಕಾ – ಪಂಜ್ತಯಿಂ ತುದಿವಳಸಿನೊಳೆಳಲೆವಿಟ್ಟಳವಡಿಸಿದ ರುಚಿರಚಾಮರಹೇಮ ಚಂಪಕೋದ್ದಾಮದಾಮವಿಚಿತ್ರಚಿತ್ರಾಂಬರವಿತಾನದಿನಮರ್ಚಿರಚಿಸಿದ ಕಮನೀಯ ತಪನೀಯ, ಶೃಂಖಲಾಚತುಷ್ಕಸಂಘಟಿತಸಮುಜ್ವಳವಜ್ರಮಣಿಪರ್ಯಂಕಿತಪಟ್ಟದಿನಳಂಕೃತಿವೆತ್ತೆಸೆವ ನವಿಲುಯ್ಯಲೆಡೆಗನಂಗಲಕ್ಷ್ಮಿಯಂತೆ ಸಖೀಜನಂ ಬೆರಸು ಬಂದಾಂದೋಳಕೇಳೀಸಮಯಸಮುಚಿತೋಪಚಾರಮಂ ಮೆಱೆದು—

ಏಱೆ ಮದಂ ಮನೋಜಜಯಲಕ್ಷ್ಮಿಗೆ ಪೂರ್ಣವಿಳಾಸವಾರ್ಧಿ ನೀ
ರೇಱೆ ಸಖೀಜನಕ್ಕೆ ಪದೆದೀಕ್ಷಿಪರಂಗದೊಳಂಗಜಾಗ್ನಿ ಕಾ
ಯ್ವೇಱೆ ನಿಜಾಂಘ್ರಿಪಂಕಜನಿಪಾತಭಯಂ ಶಶಿಗೇಱೆ ನೀಱೆ ತಾ
ನೇಱಿದಳುಯ್ಯಲಂ ಬಗೆಗೆ ಸಂತಸವೇಱೆ ವಸಂತರಾಜನಾ ॥೧೮೭॥

॥ವ॥ ಅಂತೇಱೆ ಮಣಿಯಂ ಮೆಟ್ಟಿ ಮಣಿದು ನಿಂದು—

ಮೆಯ್ಯ ಕುಂಕುಮಮಿನದ್ಯುತಿಯೆತ್ತಂ ಪರ್ಬಿರೆ ಬಿರ್ಚದ ಚಕ್ರಮುಂ
ರಯ್ಯಮಾಗುತಲರ್ದಬ್ಜಮುಮಾ ಸಿತಾಂಶುಗೆ ದಾಳಿಯ ಪೋಪವೋಲ್
ಸುಯ್ಯಗಾಳಿಗಲೆವಂಚಲದಿಂದಂ ತೋರ್ಪಕುಚಂ ಮೊಗಮೊಪ್ಪಲಂ
ದುಯ್ಯಲಾಡಿಸುತೆ ನೋಳ್ಪರ ಕಣ್ಣಂ ಕಾಮಿನಿಯಾಡಿದಳುಯ್ಯ^೧^ಲಂ^೧^ ॥೧೮೮॥

॥ವ॥ ಮತ್ತಮೊರ್ವಳಪೂರ್ವ ಸೌಂದರ್ಯವತಿ ತನ್ನ ಪೊನ್ನ^೨^ಕನ್ನೆಲಮಾಡ^೨^ದ ಕೆಲದ ರಾಜಾಂ^೩^ಗಣದ ಪಚ್ಚೆಯ ಕುಟ್ಟಿಮಸ್ಥಳದೊಳಳವಟ್ಟರನ್ನದುಯ್ಯಲ^೪^ನೇ^೪^ಱೆ ಚಂದ್ರಿಕಾಸಾಂದ್ರಪೀಯೂಷವಾರ್ಧಿಯೊಳೋಲಾಡುತ್ತೊಗೆತರ್ಪ ಕಮಳೆಯಂತೆ ಕಮನೀಯತೆಯನಪ್ಪುಕೆಯ್ದು—

---

೧ ಲುಂ (ಬ) ೨ ಕರುನೆಲೆವಾಡ (ಮೂ), ಕರುಮಾರ (ಬ) ೩ ಕ (ರಿ, ಮೈ, ಧಾ, ಕ)
೪ ನ್ನೇ (ರಿ)

ಗಗನಸರೋಜಮಿಲ್ಲೆನಿಪ ವಾಕ್ಯಮನಿಲ್ಲೆನಿಪಂತೆ ನುಣ್ಮೊಗಂ
ಬಗೆಗೊಳೆ ಬಾನೊಳಾಗಳದಱೊಳ್ ಮಱಿದುಂಬಿಗಳಾಡುವಂತೆ ಮೆ
ಲ್ಲಗೆ ನೆಗೆದಾಡೆ ಮುಂಗುರುಳ ಸಾಲ್ಗಿರಿಗಳ್ ಹರಿಯೊಳ್ ಪಳಂಚಲೆಂ
[೧]ದ[೧]ಗಿಯದೆ ಪಾಱುವಂತೆಸೆಯೆ ಪೆರ್ಮೊಲೆಗಳ್ಪದೆದುಯ್ಯಲಾಡಿದಳ್ ॥೧೮೯॥

॥ವ॥ ಮತ್ತಮೊರ್ವಳಲಘುತರನಿತಂಬಬಿಂಬೆ ಸಂಭ್ರಮಂಬೆರಸು ಸಖೀಜನ ಮಧ್ಯದೊಳಂದಂಬಡೆದಾಂದೋಳಮನಾಡುವಾಗಳ್—

ಅಳಿಪಿಂ ನೋಳ್ಪರ ದೃಷ್ಟಿಗ
ಳಳಂಕೆಯಿಂ ನೂಂಕೆ ಭೋಂಕನೊಗೆವವೊಲೆ ನಭ
ಸ್ಥಳಕಮರ್ದು ತನ್ಮನಂ ಬರ
ಸೆಳೆಯೆ ಮಗುಳ್ದಿಳಿವ ಭಾವಮಂ ಬಗೆಗಿತ್ತಳ್ ॥೧೯೦॥

॥ ವ ॥ ಇಂತೊಪ್ಪುವನಂತಕಾಂತಕಾಂತಾಸಂತಾನಕಂತುಪ್ರಧಾನನಾನಾವಿಳಸಿತ-ವಿಳಾಸಮನಿಳಾಪತಿಸುತನಲ್ಲಿಗಲ್ಲಿಗೆ ನಿಂದುನಿಂದೀಕ್ಷಿಸುತ್ತಂ ಮಿತವಚನಮುಖ-ಸಖಿನಿಕರದೊಳ್ ನುಡಿವುತ್ತಂ ನಡೆತರುತ್ತಮಿರ್ಪಾಗಳ್—

ಕೂಜತ್ಕಾರಂಡ[೨]ಕಾ[೨]ದಂಬಕಮುಖವಿಕಿರತ್ಪಕ್ಷತಿಕ್ಷುಬ್ಧ[೩]ಬ[೩]ದ್ಧಾಂ
ಭೋಜಭ್ರಾಜಿಷ್ಣುಬದ್ಧಾ[೪]ಧ[೪]ರಸರದಳಿಸುಸ್ನಿಗ್ಧಗಂಧಾನುಬಂಧಂ
ರಾಜಾಸ್ಯಾವೇಕ್ಷಣೋನ್ನಿದ್ರಕುಮುದಮುಕುಲಾರಂಭಿರಂಭೋರುಕುಂಭೋ
ರೋಜಶ್ರೀಖಂಡಮಿಶ್ರಶ್ರ[೫]ಮ[೫]ಜಳಕಣಿಕಾಹಾರಚೋರಂ ಸಮೀರಂ ॥೧೯೧॥

ಸುಳಿದುದು ಬೆಳಗಪ್ಪುದನೊ
ಲ್ದಿಳೆಯರಸಂಗೈದಿಪೇಳ್ವವೇಳಾಚರನಂ
ತಳಿಕುಳಮರಾಳಕಳಮಂ
ಜುಳರವ ವಿಜ್ಞಾಪನೈಕರವನಾ ಪವನಂ ॥೧೯೨॥

॥ವ॥ ಅನಂತರಂ—

---

೧ ದು (ಮೂ) ೨ ಕ (ಮೂ, ಕ) ೩ ಬು (ಮೂ. ಮೈ, ಕ) ೪ ದ (ಮೈ, ಧಾ, ಕ) ೫ ಯ (ಶಿ).

ಪದಪಿಂದಿಂತಪ್ಪ ನಾನಾವಿಧರತಿರಸಸಂಮಿಶ್ರ ವೇಶ್ಯಾವಿಳಾಸಾ
ಸ್ಪದಚಂಚಚ್ಚಂದ್ರಿಕಾಸಂಪದಮೆ ಸಫಳಮಪ್ಪಂತೆವೋಲ್ಮಾಡಿ ಬಂದ
ಗ್ಗದಮಿತ್ರಶ್ರೇಣಿಯಂ ಮನ್ನಿಸಿ ಕಳುಪಿ ನಿಜಾಂತಃಪುರಕ್ಕೈದಿದಂ ಸಂ
ಮದಕೃದ್ಗೌರೀಶಪೂಜಾಹಿತಮತಿಶಿವಸಿದ್ಧಾಂತದುಗ್ಧಾಬ್ಧಿಚಂದ್ರಂ ॥೧೯೩॥

ಭೃಂಗವೇಣಿ ಶುಕವಾಣಿ ನಿರ್ಮಿತಾ
ನಂಗನೇತ್ರೆ ಸುಚರಿತ್ರೆ ನಿರ್ಜರೋ
ತ್ತುಂಗಸೇವ್ಯೆ ಮುನಿಭಾವ್ಯೆ ಶಂಕರಾ
ರ್ಧಾಂಗಸಂಗೆ ಜಯ ಸರ್ವಮಂಗಳೇ ॥೧೯೪॥

ಇದು ವಿನಮದಮರವರಮಕುಟತಟಘಟಿತಮಣಿಗಣಮಹಾಪ್ರಭಾಪಟಲಪರಿವೃತ
ಪರಶಿವಶ್ರೀಪಾದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾಚಂಚಚ್ಚಕೋರಾ-
ಯಮಾನಸರಸಜನಮಾನಿತೋಭಯಕವಿತಾವಿಶಾರದ ಶ್ರೀಷಡಕ್ಷರಿದೇವ
ವಿರಚಿತಮಪ್ಪ ರಾಜಶೇಖರವಿಳಾಸವಿಪುಳಪ್ರಬಂಧದೊಳ್
ರಾಜಶೇಖರನರೇಂದ್ರಚಂದ್ರಿಕಾವಿಹರಣ
ವರ್ಣನಮೇಕಾದಶಾಶ್ವಾಸಂ
ಸಂಪೂರ್ಣಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

ದ್ವಾದಶಾಶ್ವಾಸಂ

ಶ್ರೀಕಾಳೀನವಯೌವನ
[೧]ಮಾಕಂದ[೧] [೨]ಶುಕಂ[೨]ಶುಕಾದಿ ಮುನಿಜನಹೃದಯಾ
ಬ್ಜಾಕರಮರಾಳನಮಳಗು
ಣಾಕರನೆಮಗೀಗೆ ಸೌಖ್ಯಮಂ ಶಿವಲಿಂಗಂ ॥೧॥

॥ವ॥ ಮತ್ತಮಾಗಳ್ ಬ್ರಾ[೩]ಹ್ಮೀ[೩]ಮುಹೂರ್ತಮೆಂಬ ಪೂಜಾಮುಹೂರ್ತದಲ್ಲಿ-

ಹಿಮಸಂಮಿಶ್ರಾಂಬುವಿಂ ಮಜ್ಜನಮನೊಲವಿನಿಂ ಮಾಡಿ ದೇವಾಂಗಮಂ ತಾ
ಳ್ದಮಳಾಂಗಂ ಭೂತಿ ರುದ್ರಾಕ್ಷಮನಮರೆ ನಿಜಾಂಗಂಗಳೊಳ್ಧಾರಣಂಗೈ
ದು ಮಹಾಮಂತ್ರಾಂತರಂಗಂ ಸಮುಚಿತವಿಧಿಯಿಂ ಪೂಜಿಸುತ್ತಿರ್ದನಾನಂ
ದಮನಾದಂ ಪೊರ್ದಿ ಗೌರೀರಮಣನಡಿಗಳಂ ಶೈವವಿದ್ಯಾಸಮುದ್ರಂ ॥೨॥

॥ವ॥ ಅಂತುಮಾ ಮಹೀಕಾಂತನೇಕಾಂತದೊಳುಮಾಕಾಂತನನರ್ಚಿಸುತ್ತುಮಿರೆ
ಯಿರೆ—

ಒದೆದುದ್ಯದ್ಗೇಹಪಾರಾವತದ ನಿನದಮಂ [೪]ತಾ[೪]ಮ್ರಚೂಡವ್ರಜೋನ್ನಾ
ದದ ಪೆರ್ಚಂ ಪೊಯ್ದುಳಿಧ್ವಾನಮನೆ ತುಳಿದು ಗಾಣಿಕ್ಯಹರ್ಮ್ಯಾಗ್ರಗಾಯ
ತ್ಸುದತೀಸಂಗೀತ[೫]ತಾ[೫]ರಸ್ವರಮನಲೆದು ದಿಕ್ಪಾರಮಂ ಪರ್ಬಿರೋದೋಂ
ತದೊಳೆತ್ತಂ ಸುತ್ತುತಿರ್ದತ್ತಭವಭವನಸಂಪೂರಿತಂ ಶಂಖನಾದಂ ॥೩॥

ನೆರೆದಿರು[೬]ಳಿರುಚಿ[೭]ಯ[೬]ನೊಳುಚಿ[೭]
ಸುರತಾಂತ್ಯದ ಮೂರ್ಛೆದ[೭]ಳೆಯೆ[೭] ಕೆದರ್ದವಳಳಕೋ
ತ್ಕರಮೆನೆ ಮಗುಳ್ದುಂ ಮರ್ಬಾ
ವರಿಸುದುದೆಲ್ಲೆಡೆಯೊಳಸತಿಯರ್ ನಲಿಯಲೊಡಂ ॥೪॥

೧ ಮಾಕಂದ (ರಿ) ೨ ಶುಕಾಂ (ಕ), ಸುಕಾಂ (ಮೈ) ೩ ಹ್ಮ (ಮೈ) ೪ ತ್ರಾ (ಭಾ, ಕ) ೫ ಸಾ (ಮೂ) ೬ ಳಿಚಿಯ (ಮೈ) ೭ ಯೆಳೆ (ಕ).

ಪೊದೆವುತ್ತುಂ ಮೇಲುವಂ ಮೆಲ್ಲಡಿಯಿಡುತಿಳಿಯೊಳ್ಮೆಲ್ಲನಲ್ಲಲ್ಲಿ ನಿಂದಿ
ರ್ದಿದಿರಂ ಕಣ್ಮುಂಚದಂತೀಕ್ಷಿಸುತೆಡಬಲದೊಳ್ ಸೊಪ್ಪುಳಾರ್ೈವು[1]ತಂ[1] [2]ಬಿ
ರ್ಚಿ[2]ದ ನೀವೀಬಂಧಮಂ ಬಂಧಿಸು[3]ತ[3]ಳಿದಳಕಶ್ರೇಣಿಯಂ ತಿರ್ದು[4]ತಂ[4] ನು
ಣ್ಗದಪಂ ಪತ್ತಿರ್ದ ತಾಂಬೂಲರಸಮನೊರಸುತ್ತೈದಿದಳ್ ಪಾಣ್ಬೆಯೊರ್ವಳ್ ॥೫॥

॥ವ॥ ಪೆಱತೊಂದು ತಾಣದಲ್ಲಿ—

ಅಸವಸದಿಂ ಸುಸಿಲೆಸಗು
ತ್ತುಸತಿ ಮೊದಲ್ಗಾಱಿದಸಿತವಸನಮಿದೆಂದಾ
ಪೊಸಮುರ್ಬನುಡಲ್ ತೆಗೆದತಿ
ಹಸನರಸಂಬಡೆದಳೊಸೆದ ಪಾಣ್ಬನ ಮೊಗದೊಳ್ ॥೬॥

॥ವ॥ ಮತ್ತಮೊರ್ವಳ್—

ವಿಲುಲಿತಘರ್ಮವಾರಿಕಣದಿಂ ಕೆಸರೇಳ್ದಿಳಿತರ್ಪಗಂಡಮಂ
ಡಲಕೃತಪತ್ರಭಂಗಮೃಗನಾಭಿಜಮಂ ಬಳಿ[5]ದಿ[5]ಟ್ಟುರೋಜಮಂ
ಡಲದ ನಖಕ್ಷತಕ್ಕಧರದೊಳ್ತಲೆದೋರ್ಪರದಕ್ಷತಕ್ಕುರ
ಸ್ಥಲದ ರಸಾರ್ದ್ರಕುಂಕುಮಮನಂಕಿಸಿ ಜಾಣ್ಮೆಗೆ ಪಾಣ್ಬೆಯೆಯ್ದಿದಳ್ ॥೭॥

॥ವ॥ ಆ ಸಿತಗೆಯಲ್ಲದೆಯುಮನ್ಯಪ್ರದೇಶದಲ್ಲಿ—

ನೋಡಿದನಿಂತು ನೋಡಿ ರಸದಂಬುಲಮಂ ಸವಿದಿತ್ತು ಚುಂಬನಂ
ಮಾಡಿದನಿಂತುರೋಜಯುಗಳಂ ನಿಜವಕ್ಷದೊಳೊಪ್ಪಲಪ್ಪಿ ಮುಂ
ಡಾಡಿದನಿಂತು ತಳ್ತು ತನು ಜೊಂಪಿಸಿ ಜುಮ್ಮೆಡೆ ಸೋಂಕಿ ಸೊರ್ಕಿ ಮೈ
ಗೂಡಿದನಿಂತುಟೆಂದಸತಿ ತನ್ನವನಂ ನೆನೆವುತ್ತಮೈದಿದಳ್ ॥೮॥

೧ ತ್ತ (ಕ) ೨ ಬೆಚ್ಚಿ (ಕ) ೩ ತ್ತ (ಬ) ೪ ತ್ತಂ (ಕ) ೫ ದೆ (ಕ).

ಜಾಱಿ ನಿಱಿ ಜಾಱಿ ಸೋರ್ಮುಡಿ
ಜಾಱಿ ಬೆಮರ್ಜಾಱಿ ಮೇಲು[1]ದಂ[1] ಮುಡಿದಲರ್ಗಳ್
ಜಾಱಿ ಮುದಂ ಜಾಱಿ ಮದಂ
ಜಾಱಿ ಪದಂ ಜಾಱಿ ಜಾಱಿ ಜಾಱಿದ[2]ಳೊರ್ವಳ್[2] ॥೯॥

॥ವ॥ ಪೆಱತೊಂದು ತಾಣದೊಳ್—

ಮನೆಯಾಣ್ಮಂಗೂಡಿ ಮಂಚಾಗ್ರದೊಳೊಜಗಿ[3]ರೆ[3]ನುತ್ತಾಳಿಯಂ ಸಂತಮಿಟ್ಟಾ
ಮನದಾಣ್ಮಂಗೂಡಿ ರತ್ಯಂತದ [4]ಸೊಕ[4]ವಡೆದೈತರ್ಪುದುಂ ಪಾಣ್ಬೆ ತತ್ಕಾಂ
ತನೊಳತ್ತಲ್ಕೂಡಿ ಸೌಖ್ಯಂಬಡೆದಿದಿರ್ವರೆ ತದ್ಭೂತಿಯೋರೋರ್ವರೊಳ್ತ
ಮ್ಮನಿತುಂ ವೃತ್ತಾಂತಮಂ ಕೇಳ್ದ ಹಹಯೆನುತೆ ಕೈವೊಯ್ದು ನಕ್ಕಾಡುತಿರ್ದರ್ ॥೧೦॥

॥ವ॥ ಮತ್ತೊಂದು ಸಂಕೇತನಿಲಯದಲ್ಲಿ—

ಬಿಡು ಬಿಡು ಕೋಳಿ ಕೂಗಿದಪುದೆಮ್ಮವರೇಳ್ವರೆನುತ್ತೆ ಬಲ್ಪಿನಿಂ
ಬಿಡಿಸಿಕೊಳುತ್ತೆ ಸಂವರಿಸಿ ನೀವಿಯನುಳ್ಳುಡೆಯುಟ್ಟು ಬೀದಿಯೊಳ್
ನಡೆವೆಳೆಜೋಡೆ ಮೂಡಗಡೆಗೆಂಪನಭೀಕ್ಷಿಸಿ ಭೀತಿವಟ್ಟು ಕ
ಣ್ಗೆಡುತೆ ದವಾಗ್ನಿಗಂಡೆರಲೆಯಂತೆರ್ದೆ ಪೌವನೆ ಪಾಱಿ ಪಾಱಿದಳ್ ॥೧೧॥

ಜವದಿನುಷಃಕಾಲವೃಷಂ
ತವೆ ಕ[5]ದ[5]ಡಿದುದೆನಿಸಿ ಮರ್ಬುವೆಳಗಂ ತಳೆದೊ
ಪ್ಪುವ ಬಾಂಗೆಱೆಯೊಳ್ ಮೀಂಗಳ್
ತವಕದೊಳೆ ಮುಳುಂಗುವಂತಡಂಗಿ[6]ದ[6]ವಾಗಳ್ ॥೧೨॥

ಬೆಳ್ವೆಳಗಿನ ಬಾಳ್ವೆಳೆಯಂ
ತಳ್ವದೆ ಬಾಂಬೊಲದೊಳರುಣ ಕರಶಿಖಿ[7]ಶಿ[7]ಖೆ ಪಾ
ಳೇಳ್ವಿನಮಳುರ್ದುರೆ ಚಿಂತೆಯ
ನಾಳ್ವಂತೆವೊಲೋಷಧೀಶ್ವರಂ ಕಳೆಗೆಟ್ಟಂ ॥೧೩॥

---

೧ ದುದು (ಕ, ಧಾ, ಮೈ, ಮೂ) ೨ ಳಾಗಳ್ (ಧಾ) ೩ ರೆದೇ (ಕ) ೪ ಸುಖ (ಮೂ)
೫ ದ (ಕ) ೬ ದು (ಬ, ಕ) ೭ ಶೇ (ಮೂ, ಮೈ, ಬ, ಕ, ದಾ, ೧).

ರಾ[1]ಜ[1]ಬಲಂ ಕುಂದಿದುದೆನ
ಗೀ ಜಲಜಿನಿ ರಾಜಹಂಸಯುತೆ ಮಧುಪರವ
ವ್ಯಾಜದೆ ನಕ್ಕಪಳ್ಕೆಂದಾ
ರಾಜಿತಕುಮುದಿನಿ ವಿಷಾದದಿಂ ಕೊರಗಿರ್ದಳ್ ॥೧೪॥

॥ವ॥ ಅಂತುಮಲ್ಲದೆಯುಂ—

ಮೊದಲೆನ್ನ ಸಿರಿಯನಿದು ನೋ
ಡದೆ ಕಣ್ಮುಚ್ಚಿದುದು ಗಡ ಸರೋಜಿನೀ ಸಿರಿವೆ
ತ್ತಿದನಿಂದು ನೋಡೆ ನಾನೆನು
ತದು ಕಣ್ಮುಚ್ಚಿದವೊಲಲ್ಲಿ ಮುಗಿದುದು ಕುಮುದಂ ॥೧೫॥

ವಿಧುವಿರಹಿಣಿ ನವಕುಮುದಿನಿ
ಮಧುಮಿತ್ರನಿರೂಪಣಾತಿಭೀಕರವಿಚರ
ನ್ಮಧುಕರಮರಾಳದರ್ಶನ
ವಿಧುರಿತೆ ಸುಗಿದಂತೆ ಮುಗಿದುದಸಿತಾಂಭೋಜಂ ॥೧೬॥

ಪರಿಪರಿದೊಂದನೊಂದಱಸಿ ಕಂಡತಿ ಕಾತರಮುಣ್ಮೆಪೊಣ್ಮೆ ಬಂ
ದೆರವಿನಿತಿಲ್ಲದಪ್ಪಿ ಗಱಿ ನೆಟ್ಟನೆ ತಳ್ತಿರೆ ಕಣ್ ಸುಖಾಶ್ರುವಂ
ಸುರಿಯೆ ಕಡಂಗಿ ಕಂಜ[2]ದ[2]ಳತಳ್ಪದೊಳೊಂದುವ ಚಕ್ರಚಕ್ರದು
ಬ್ಬರದ ರತಕ್ಕೆ ನಾಣ್ಚುತಲರ್ಗಣ್ಮುಗಿದಂದದೆ ನೈದಿಲೊಪ್ಪುಗುಂ ॥೧೭॥

ಇರುಳತನುಧನುರ್ಲತೆಗೊ
ಳ್ದಿರುವಾಗಿ ಬಳಲ್ದು ಪಸಿದಳಿವ್ರಜಕನಿಲಂ
ಪರಿಮಳದುಣಿಸಾಗಿಸಲಾ
ದರಿಸಿ ಕರಂ ಬಿರ್ಚಿದಂತಿರಲರ್ದುದು ನಳಿನಂ ॥೧೮॥

॥ವ॥ ಅಂತುಮಲ್ಲದೆಯುಂ—

---

೧ ಶಿ (ಕ) ೨ ತ (ಮೈ)

ಎನಗಾಗದ ವನರುಹಮಂ
ಮನೆಮಾಡಿದಳೆಂದು ಕಂಡು ಮುಳಿವಂ ಶಶಿಯೆಂ
ದೆನುತಿರುಳೆ ಮುಚ್ಚಿ ಸಿರಿಯಾ
ತನ ಭಾವದೆ ಬಿರ್ಕಿದಂತಿರಲರ್ದುದು ಕಮ[೧]ಳಂ[೧] ॥೧೯॥

ಇರುಳಹಿತೇಂದೀವರದ
ಲ್ಲಿರುತದು ಮುಗಿದೊಡೆ ಮಧುವ್ರತಂ ಬರೆ ಮೊದಲಂ
[೨]ತಿ[೨]ರೆ ಕಂಡುದು[೩]ಗಡ[೩]ಕಮಳಂ
ಪರೀಕ್ಷಿಸರ್ಗುಣಿಗಳಾಶ್ರಿತರೊಳವಗುಣಮಂ ॥೨೦॥

ಕನಕಕರಂಡಕದಿಂದಂ
ದಿನಲಕ್ಷ್ಮಿ ಸರಾಗಮಿಂದ್ರನೀಲದ ಸರಮಂ
ದಿನಪಂಗೀಯಲ್ತೆಗೆದಪ
ಳೆನೆ ಮಧುಕರಮಾಲೆ ನಳಿನದಿಂ ನೆಗೆದೆಸೆಗುಂ ॥೨೧॥

ಜಳಕಣಕಲಿತದಳಂ ನೀ
ರ್ದಳಿದಿಟ್ಟೆಲೆಯಾಗೆ ನಳಿಸಿ ಕೆಲದಟ್ಟಿಗಳಿ
ಟ್ಟಳೆನಿಸೆ ವಿಕಚಾಬ್ಜಂಗ
ಳ್ಕೊಳನೆಸೆದುದು ರಾಜಹಂಸನೌತಣದೆಡೆವೋಲ್ ॥೨೨॥

ಪಾಡುವ ಪರಮೆಗಳಿಂದೊ
ಲ್ದಾಡು[೪]ವ[೪] ಮು[೫]ದ್ದ[೫]ಂಚೆವಱಿಗಳಿಂ ನಱುಗಂಪಿಂ
ತೀಡುವೆಳೆಗಾಳಿಯಿಂ ಸಿರಿ
ಗೂಡಿದ ಗೃಹದಂತಿರಿರ್ದುದಲರ್ದಂಭೋಜಂ ॥೨೩॥

ತೀರದೊಳಿರೆ ವಿದ್ರುಮತತಿ
ವಾರಿಯೊಳಿರೆ ಪದ್ಮರಾಗಮಬ್ಜಾಕರಮಾ
ನೀರಾಕರಮೆನೆ ಕಣ್ಗೆಂ
ರಾರಾಜಿಸಿದುದೊ ಸಿತಾಬ್ಜಮುಕ್ತಾಳಿಗಳಿಂ ॥೨೪॥

---

೧ ಲಂ (ಮೂ, ಬ) ೨ ತೆ (ಕ, ಬ, ರಿ) ೩ ಗುಡ (ರಿ, ಕ) ೪ ತ (ಕ)
೫ ದ್ದಾ (ರಿ)

ಸುರವರ ಕರಿಮುಱಿದೊಟ್ಟಿದ
ಸು[೧]ರು[೧]ಚಿರನಂದನರಸಾಲಪಲ್ಲವತತಿಯಂ
ತಿರೆ ಕರಮೆಸೆದುದು ಮೂಡಣ
ಗಿರಿಯೆಡೆಯೊಳ್ಮೂಡಿ ತೋರ್ಪ ಸಂಧ್ಯಾರಾಗಂ ॥೭೫॥

॥ವ॥ ಮತ್ತಂ—

ಸುರ[೨]ವ[೨]ರನಂದನವನಮಂ
ಸುರವರನಂದನನ ಬಾಣದುರಿಪರ್ವಿದುದೀ
ಪರಿಯೆಂದಱುಪುವ ತೆಱದಿಂ
ಪರಿರಂಜಿಸುತಿರ್ದುದುದಯಸಂಧ್ಯಾರಾಗಂ ॥೭೬॥

ಹರಿ[೩]ದಿಕ್ಪ[೩]ಣ[೪]ವ[೪]ಧು ಬರೆ ಹಿಮ
ಕರಖರಕರರೊಂದೆ ತೆಱದೊಳನುರಕ್ತತೆಯಿಂ
ನೆರೆವಳ್ಗಡ ವಸುವಿತ್ತೊಡೆ
ಸರಿಮೃದುಕಠಿನರ್ಕಳಿರ್ವರುಂ ಗಣಿಕೆಯರೊಳ್ ॥೭೭॥

ಹರಿಗೆ ಮಣಿವಮರನಿಕರದ
ಕಿರೀಟಮೊಱಸಿದೊಡೆ ಸುರಿವ ಕನಕದ ರಜಮಂ
ಸುರಕರಿಕರದಿಂ ಕೆದರ್ದಂ
ತಿರೆ ಪಸರಿಸುತಿರ್ದುದುದಿತಖರಕರಕಿರಣಂ ॥೭೮॥

ಬಿರಿಯೆ ಮೃದುಸರೋಜಂ ಬಿಂಕಮಂ ಬಿಟ್ಟು ರಾಜಂ
ಜರಿಯೆ ತಿಮಿರಪೂಗಂ ಜಾಱಿ ಜಾಱೂನುರಾಗಂ
ಸರಿಯೆ ಕುಮುದಬೃಂದಂ ಸಂಮುದಂಗುಂದೆ ಬಂದಂ
ನೆರೆಯೆ ಪಟುರತಾಂಗಂ ನಿರ್ಮಳಾಂಗಂ ಪತಂಗಂ ॥೭೯॥

॥ವ॥ ಮತ್ತಮಾಗಳ್—

---

೧ ರ (ರಿ, ಧಾ, ಬ) ೨ ತ (ಕ) ೩ ದೀಕ್ಷ (ಮೈ, ಕ, ಧಾ) ೪ ತ (ಕ)

ಪರಿಕಲಿತಾರುಣಕರಭಾ
ಸ್ಕರಬಿಂಬಂ ಕಣ್ಗೆವಂದುದ್ಯೈಂದ್ರೀವಧು ನು
ಣ್ಗೊರಲೊಳ್ಕಟ್ಟಿದ ಮಾಣಿಕ
ವರಲೊಂದಿರ್ದ್ದೆರೆದಾಳಿಯೆನೆ ರಸ್ಮಿಯುತಂ ॥೩೦॥

॥ವ॥ ಮತ್ತಂ—

ಪರಿರಕ್ತದಿವಾಕರಭಾ
ಸುರಬಿಂಬಮದಿಂಬುವಡೆದುದಖಿಳದಿ[1]ಶಾ[1]ವಿ
ಸ್ಫುರಿತಸುಧಾಕರಕರಸಾ
ಗರಮಂ ಕುಡಿದಡರ್ವ ಬಡಬಶಿಖಿಪಿಂಡದವೋಲ್ ॥೩೧॥

ಕೆಂಬೆಳಗೆಸೆದುದು ಕೌಸುಂ
ಭಾಂಬರಕೃತತಳ್ಪದಂತೆ ಖರರುಚಿಬಿಂಬಂ
ಪೊಂಬಟ್ಟೆಯ ಪೊಸ ಕೌಳುಡೆ
ಯೆಂಬಂತಿರೆ ತ[2]ಳ್ತು[2] ಮೆಱ[3]ದುದ್ಯೈಂದ್ರೀವಧುವಾ ॥೩೨॥

॥ವ॥ ಅನಂತರಂ—

ಕೆಂಬಟ್ಟೆಯ ಗವಸಣಿಗೆಯ
ನಂಬರರಮೆ ನೋಡಲುಗಿದ ಮಣಿಗನ್ನಡಿಯೆಂ
ದೆಂಬಂತೆ ಸಂಜೆ ತೊಲಗಿ
ರ್ದಂಬರಮಣಿಬಿಂಬಮೇಂ ಮನಂಗೊಳಿಸಿದುದೋ ॥೩೩॥

ಇದುಚಂಚದ್ವ್ಯೋಮಲಕ್ಷ್ಮೀಕರಕಲಿತಸುವರ್ಣಾಬ್ಜವೋ ನೋಡುನೋಡಿಂ
ತಿದು ಪೂರ್ವಾಶಾಂಗನಾಮಂಗಳಮಧುರಿಮಸೀಮಂತಮಾಣಿಕ್ಯಮೋ ಪೇ
ಳಿದು ಶಕ್ರಾಶಾದ್ರಿಹರ್ಮ್ಯೋಜ್ಜ್ವ[4]ಳ[4]ಕಳಶಮೋ ತಾನೆಂಬಿನಂ ಕಣ್ಗೆ ಚೆ[4]ಲ್ವಾ[4]
ದುದು ಚಂಚದ್ರಕ್ಕದಂಬಂ ತಿಮಿ[5]ರ[5]ಕುಧರಶಂಬಂ ದಿನಾಧೀಶಬಿಂಬಂ ॥೩೪॥

---

೧ ಶೋ (ರಿ) ೨ ಳು (ಕ) ೩ ಲ (ಬ) ೪ ಲಾ (ಕ) ೫ ರಧು (ಬ)

॥ವ॥ ಆಗಳ್

ವನನಿಧಿವಾರಿಯೊಳ್ಬೆರಸಿ ತೀವಿದ ಚಂದ್ರಿಕೆಯೆಂಬ ಪಾಲನೀ
ಕನಕಸರೋಜರಾಜಿತರಜಃಪರಿಪಿಂಜರವರ್ಣಹಂಸನೊ
ಯ್ಯನೆ ಬರೆಪೀರ್ದುದಾ ಜಲಮನೊಲ್ಲದೆ ಬೇರ್ಪಡಿಸಿತ್ತು ನೋಡಿಮೆಂ
ಬಿನಮಿಳೆ ಮುನ್ನ ಜೊನ್ನಮದು ಪಿಂಗಿರೆ ತರ್ಗಿತು ವಾರಿವಾರ್ಧಿ[1]ಯಂ[1] ॥೩೫॥

ಮನದನುರಾಗದಿಂ ನೆರೆದ ನಲ್ಲನೊಳುಣ್ಮುವ ಘರ್ಮವಾರಿಯೆಂ
ದೆನೆ ಪನಿ ತೋಱಿ ತೊಟ್ಟನಲರ್ದಂಬುಜದೊಳ್ನೆಲೆಗೊಂಡು ಮೂಡಿಬ
ರ್ಪಿನನ ಕರಂಗಳಂಗದೊಳೆ ಕುಂಕುಮದಂತಿರೆ ತೋರ್ಪ ಚಕ್ರಮೇಂ
ನೆನೆಯಿಸಿದತ್ತೊ ಕಾಮಿನಿಯ ಬಲ್ಮೊಲೆ ಕಾಂತನ ಕೈಯೊಳಿರ್ಪುದಂ ॥೩೬॥

[2]ಎ[2]ರಲಿರದೆತ್ತಿ ಸೂಸೆ ಕನಕಾಬ್ಜರಜಂ ನಯದಿಂದೆ ಬರ್ಪ ನೀ
ಳ್ದಿರೆಗೆರೆಗೊಂಡು ನಿಂದು ಸರಮೆಂಬ ಕ[3]ಷೋ[3]ಪಲದಲ್ಲಿ ವಾಸರೇ
ಶ್ವರಕರಮೆಂ[4]ಬ[4] ಪೊನ್ನೊಱಿವೊಲೊಪ್ಪಿರೆ [5]ತನ್ನವಗಂಧಕಲ್ಲಿ ಸಾ
ರ್ದಿರದಳಿ[5]ಕಾಲಕಾರುಕನಮರ್ಚಿದ ಮೇಣದವೋಲ್ ವಿರಾಜಿಕುಂ ॥೩೭॥

ಮೃಗಧರಬಿಂಬಮೆಂಬ ಪೊಸವೆಳ್ಮುಗಿಲುರ್ವರೆಯಲ್ಲಿ ಸೂಸೆ ಸೊ
ಜಿಗಮೆನೆ ಚಂದ್ರಿಕಾಮೃತದ ಬಲ್ಸರಿಯಂ ಕಮಳಾಕರಾಬ್ಜಶು
ಕ್ತಿಗಳದರಚ್ಛಬಿಂದುಗಳನಾಂತೊಳಗಾಗಳೆ ಮುಚ್ಚಿಕೊಂಡೊಡ
ಲ್ಲೊಗೆದುದು ಮೌಕ್ತಿಕಂಗಳೆನೆ ಕಂಗೊಳಿಸಿರ್ದಪುವಂಚೆದತ್ತಿಗಳ್ ॥೩೮॥

ಖರಕರಸಿದ್ಧನೇಳ್ದು ದಿವಿಜೇಂದ್ರದಿಶಾದ್ರಿಗುಹಾನಿವಾಸದಿಂ
ದುರುತಿಮಿರಾಭಿಭೂತಭುವನೋನ್ನತಲೋಹಕೆ ತನ್ನ ವಿದ್ಯೆಯಂ
ಧರೆಗೆ[6]ಱಿ[6]ಪಲ್ಕೆ ಮುಟ್ಟಿಸೆ ಕರೋತ್ಕರಸಿದ್ಧರಸಪ್ರವಾಹಮಂ
ಪಿರಿದದು ಚಿನ್ನಮಾದುದೆನೆ ಪೊಂಬಿಸಿಲೊಂದಿರೆ ಕಣ್ಗೆ ರಂಜಿಕುಂ ॥೩೯॥

---

೧ ಯಾ (ಮೈ, ಮೂ) ೨ ಯೆ (ಕೆ) ೩ ಘೋರ್ಣ (ರಿ, ಬ, ಧಾ) ೪ ಬೀ (ಕೆ)
೫ ಸೌರಭಕಲ್ಲಿಸಾರ್ದ ಷಟ್ಚರಣಮೆ (ಧಾ. ಕೆ) ೬ ಜು(ಮೂ)

॥ವ॥ ಮ[೧]ತ್ತಂ[೧]ಮದಲ್ಲದೆಯುಮತಿವಿಶದ ಶಶಿಮಣಿಮಯಶಿವಗೃಹೋಪರಿಮ ಶಿಖಾಗ್ರದೊಳ್ಕೆತ್ತಿಸಿದ ಮುತ್ತುಗಳೆಂಬಂತೆ ನಿಲುಂಬಿನಿಂದ ಹಿಮಕರಕರಪಾತಜನಿತ ಹಿಮಕಣೋತ್ಕರಮಂ ಪೊಸಬೆಸನದಿಂ ನಸೆಮಸಗೆ ಸುಸಿಲೆಸಗಿ ಬಳಲ್ದು ಬಾಯೞಿ ಬಳಸಿನಿಂದು ಕರ್ದುಂಕುವ ತರುಣಪಾರಾವತಂಗಳಱಿತೆಯಂ ಬಱಿಕೈವಂತೆ ತೊಡೆದು ಕಳೆದು ಗವಾಕ್ಷವಿವರದೊಳೊಳಪೊಕ್ಕು ಪೊಚ್ಚಪೊಸಪೊಂದಗಡನಮರ್ಚಿದಂತೊಳ ವಳಯದ ಭಿತ್ತಿಯಂ ನೆರ್ಮಿ ಬೆಳಗಿಯುಂ, ಕಳೆಗುಂದಿದ ಕಳಾಧರನಂ ಕಂಡು ನಸುನಗುವಂತಲರ್ದ ಕೆಸರ್ಮಲ್ಲಿಗೆಯ ಕಿತ್ತೆಸಳಕೇಸರದಕುಸುಂಕರೊಳ್ಮುಸುಂಕಿ ಮುಸುಂಬನಿಟ್ಟು ಪಸಿವಡಂಗೆ ಪೊಸಬಂಡನುಂಡು ಪಿಂಡುಗೊಂಡು ಮಂಡಳಿಸಿನಿಂದ ಪೆಣ್ದುಂಬಿಗಳಂ ಪೊಂದುಂಬಿಗೆಳೆಂಬಂದಮನೊಂದಿ ನಿಮಿರ್ಚಿಯುಂ, ಕಂದರ್ಪಕಲ ಹಕ್ಕೆ ಕಟ್ಟಾಳ್ತನಂಬೆತ್ತು ಫಳಿಲನಿದಿರ್ಚಿನಿಂದು ನಳಿನದಳಮೆಂಬ ಕಳದೊಳ್ ರತಿಕಲ ಹಕ್ಕೆಳಸಿ ಕೈಮಿೞಿಪಳಂಚಿ ಕಡಂಗಿಕಾದಿ ಕಡುಗಲಿತನಂ ಮಿಕ್ಕಜಕ್ಕವಕ್ಕಿಗಳ್ಗೆ ಮೆಚ್ಚಿ ಪಚ್ಚೆವಿಲ್ಲಂ ಪೊದಿಸಿದ ಪೊಂಬಟ್ಟೆಯೆಂಬ ಪಾಂಗನೊಡನಳುರ್ಕೆಗೊಂಡೊಡರ್ಚಿಯುಂ, ಕಡುಬೆಳೆದು ತಳಿರ್ತತರುಣತಮಾಲದೆಳೆದಳಿರನಳುರ್ದುಪಿಕನಿಕರಕ್ಕೆಮಾಂದಳಿರೆಂಬ ಸಂದೆಗವಂಮಾಡಿ ಕರ್ದುಂಕಿಸಿಯುಂ, ತೋಡಿಲ್ಲದ ಫಲಿತರಸಾಲಮೂಲದಾಲವಾಲ ದೊಳ್ಲೀಲೆಯಿಂ ರತಿಯುವತಿ ಸುರಿದ ಕುಂದಣದ ಕುಂಭದ ಕುಂಕುಮಾಂಬುವೆಂಬ ಶಂಕೆಯಂ ಭೋಂಕನೊಡರ್ಚುತೆಲೆದುಱುಗಲ ಪೊದರ ಪೊರೆಯೊಳ್ ವೈಗರೆ[೨]ದ[೨] ಕಡುಗಳ್ತಲೆಯನೆಡೆನುಸುಳ್ದು ಪಿಡಿದೊರಸುತಲ್ಲಿ ಪ[೩]ರಿ[೩]ದು ಪಸರಿಸೆಯುಂ, ಮಿಸುಪ ಕರವೀರದ ಕಡುಗೊರ್ಬಿದ ಬಿಱಿಮುಗುಳ್ಗಳಂ ಮುಸುಂಕಿಮುತ್ತಿಮುಸುರಲೆಂದು ಮುಂ[೪]ಕೊಂ[೪]ಡು ಝೋಂಕರಿಸು[೫]ತ್ತ[೫]ದುಱುದುಂಬಿತನದಿಂ ಬಂದ ಮಱಿದುಂಬಿಗೆ ಚಂಪಕಕೋರಕಭ್ರಾಂತಿಗೊಟ್ಟು ತೊಟ್ಟನೆ ಮುಗುಳ್ಚಿಯುಂ, ನಿಧುವನನಿಕೇತನದ ವಾತಾಯನಂಗಳೊಳ್ನುಸುಳ್ದು ಸುಸಿಲ್ಗಡೆಯೊಳೊರಗಿರ್ದ ಸೊರ್ಕುಂಜವ್ವನೆಯರ ಕರ್ಕಶಸ್ತನಮೆಂಬ ಮದನಮದಗಜಕುಂಭಯುಗಳದ ಪಾರ್ಶ್ವದ್ವಯದೆ ತಳ್ತಿಳಿವ ಮದಕರ್ದಮದಂತೆ ಕಣ್ಗೆವಂದ ಕಕ್ಷಭವಘರ್ಮಜಲಲವಲುಳಿತ ಮೃಗಮದಕರ್ದಮಮ ನಾವರಿಸಿ ಕಾಶ್ಮೀರಕರ್ದಮಮೆನಿಸಿ ರಂಜಿಸಿಯುಂ, ರಾಜಮಂದಿರದ ಮುಂದೆ ನಿಂದ ಗಂಧಸಿಂಧುರಂಗಳಂಗಕ್ಕೆ ಸಂದ ಸಿಂಧೂರಶ್ರೀಯನೋಲಗಿಸಿಯುಂ, ಬಚ್ಚಬಱಿಯ ಬಯಲೊಳ್ಮೊಕ್ಕಳಮೆನೆ ತೆಕ್ಕನೆ ತೀವಿ ಕಡಲುಡಿಗೆಗೊಂಡ ಪೊಡಪಿವೆಣ್ಗಂಬರಾಂಬು ಜನೇತ್ರನಿತ್ತ ಪೀತಾಂಬರದರ್ಝುಳಂಬಮೆಂಬ ಬೆಡಗನಮರ್ಚಿಯುಂ, ಪರಿವಪೆರ್ದೊಱಿ

೧ ತ್ರಂತು (ಮೂ) ೨ ವ (ಬ) ೩ ಶಿ (ಶಿ) ೪ ಕೊಂ (ಧಾ, ಬ) ೫ ತೀ (ಕ)

ಗಳೊಳ್ ಪರೆದು ಪಸರಿಸಿ ನಿಲುಂಬಿ ನೀರಾಟಮನಾಡಿಪೋದ [೧]ವಾ[೧]ರನಾರಿಯರ ಪೊಂಜೆಳೆಮೈಯೊಳ್ ರಂಜಿಸಿರ್ದ ರಜನೀರಜಂಗಳಿಂ ಕದಡೇಳ್ದು ಪರಿವಪ್ಪುದೆಂಬ ಪಿರಿಯ ಸಿರಿಂಖನೊಳಗುಗೊಳಿಸಿ ಜಂಬೂನದೀಭ್ರಾಂತಿಯುಂ ರತ್ನಾಕರಂಗೊದವಿಸಿಯುಂ, ನಿದ್ರೆ ನೆಲೆಗೆಟ್ಟು ತೊಲಗೆ ನಿಜಾಲಯದಿಂ ಪೊಱಮಟ್ಟು ಮತ್ತವಾರಣದೊಳ್ನಿಂದು ನಿರೀಕ್ಷಿಪ ಕಮಳ[೨]ದಳಧವಳ[೨]ಲೋಚನೆಯರ ಕಟಾಕ್ಷಚ್ಛವಿಗಳೊಳ್ವೊತ್ತಿಡರ್ದು ತದ್ವ[೩]ದ[೩]ನವಿಧುಮಂಡಳಪ್ರಸಾದಿತಚಂದ್ರಿಕೆಯೊಳ್ ಮಲ್ಲಗಾಳಗಮನೊಡರ್ಚುವಂತೆ ಕಮನೀಯತೆಯನಾಲಿಂಗಿಸಿಯುಂ, ಅತಿಸಾಂದ್ರತೆಯನಪ್ಪು[೪]ಗೈ[೪]ದೆಳಿರ್ನೆ ಸರಳವಿಗಳಿದ ಕನಕರುಚಿರುಚಿರತರಕರನಿಕರಂ ಪರಿರಂಜಿಸಿ ಪರ್ಬಿ ಕಣ್ಗೊಪ್ಪುತ್ತಮಿರ್ದು[೫]ದಾ[೫]ಪ್ರಸ್ತಾವದೊಳ್—

ವಿಮಳಿನಚಂದ್ರಕಾಂತಿ ತನುತಂತುಗಳಂ ಮಿಗೆ ನುಂಗಿ ಪಿಂಗದಾ
ಕ್ರಮಿಪ ಪತಂಗದಿಂದಗಿದು ಪೊಕ್ಕ ಸೆಲಂದಿವೊಲೊಪ್ಪೆ ಲಾಂಛನಂ
ಕಮಳಜಶಿಲ್ಪಿಕಲ್ಪಿತ ಜಗದ್ಗೃಹದಗ್ರದೊಳೊಪ್ಪಿದತ್ತು ಚಂ
ದ್ರಮನದಱೊಂದುಗೂಡೆನೆ ನಿರೀಕ್ಷಣೆಗೀಕ್ಷಿಪ ಭೂಜನೌಘದಾ ॥೯೦॥

॥ವ॥ ಆಗಳ್—

ನವವಿಧನವ್ಯಭಕ್ತಿ ಮಿಗೆ ಶಂಭುಸಮರ್ಚನೆಗೈದು ದಿವ್ಯಶಾಂ
ಭವಪರಮಂತ್ರಮಂ ಜಪಿಸಿ ತಾಳ್ದು ತದಂಘ್ರಿಪಯಃಪ್ರಸಾದಮಂ
ಸವಿನಯಮಾಂತಳಂಕರಣಸಂಕುಳಮಂ ವರವಂದಿಮಾಗಧ
ಸ್ತವರವಮುಣ್ಮೆ ಬಂದನೆಸೆವೋಲಗಶಾಲೆಗಿಳಾಧಿನಾಯಕಂ ॥೯೧॥

॥ವ॥ ಅಂತೇಳ್ತಂದು ಮಣಿಗಣಾಗಣಿತರುಚಿನಿಚಯನಿಚಿತಸಮುತ್ತುಂಗಮಂಗಳಮೃಗೇಂದ್ರವಿಷ್ಟರೋಪವಿಷ್ಟನಾಗಿ ಸಲ್ಲೀಲೆಯಿಂ ಮೆಲ್ಲನೆ ಕುಳ್ಳಿರ್ದು—

ಉದಯಾಚಲಾಗ್ರದೊಳ್ಮೂ
ಡಿದ ಪೂರ್ಣಸುಧಾಕರಂಗೆ ದೊರೆಯಾದಂ ತಾ
ಳ್ದಿದ ಮಣಿದೊಡವಿನ ಕೆಂಬೆಳ
ಗೊದವಿರೆ ರಾಜಂ ಸಭಾನಭಸ್ಥಳದೆಡೆಯೊಳ್ ॥೯೨॥

೧ ಮ (ಧಾ) ೨ ಧವಳ (ಬ); ದದಭಳ (ಧಾ) ೩ ನ (ಮೈ) ೪ ಕೈ (ಧಾ) ೫ ದಃ (ಮೈ)

ನೆರೆದೇಳ್ತಂದಿರ್ದುದಾಸ್ಥಾನದೊಳಮಮ ಮಹಾಮಾತ್ಯಸಂದೋಹಮುರ್ವೀ
ಶ್ವರವೃಂದಂ,ಸತ್ಕವೀಂದ್ರಪ್ರತತಿ,ವಿಬುಧಸಂತಾನಮುದ್ಗಾಯಕಪ್ರೋ
ತ್ಕರಮುದ್ಯದ್ವಾವಧೂಕಾವಳಿ,ಭರತಕಳಾವಿತ್ಕುಳಂ,ವೇದವಿದ್ರಾ
ಜಿ,ರಸಜ್ಞಶ್ರೇಣಿ,ವಂದಿವ್ರಜಮತನುಕಳಾಕಾಂತಕಾಂತಾಕದಂಬಂ ॥೪೩॥

ಸುಲಲಿತದೋರ್ಲತಾಕುಸುಮಮಂಜರಿಯಂತಿರೆ ಚಾಮರಂ,ಸಮು
ಜ್ವಲಮುಖಚಂದ್ರಚಂದ್ರಿಕೆಯಿದೆಂಬಿನಮುಣ್ಮಿರೆ ಲೋಚನಾಂಶು,ಮಂ
ಜುಲತರಮಂದಗಂಧವಹನಂತಿರೆ ಸುಯ್ಯೆಲರುರ್ವೆ,ನಿಂದು ಕೋ
ಮಲೆಯರೊಡರ್ಚಿದರ್ಸಿರಿಯ ಮೈಸಿರಿಯಂ ನವಚೈತ್ರರಾಜನಾ ॥೪೪॥

ಮುಜಿದೆಳಮೀಸೆ,ನೀಳ್ದ ನಗೆಗಣ್ಪೊಗರಾಂತ ಮೊಗಂ,ಪೊದಳ್ದ ಪೇ
ರುರಮುರುಬಾಹು,ಭಾಸುರಕಿರೀಟಮುದಗ್ರಸುವರ್ಣಭೂಷಣಂ,
ಕರದ ಸಿತಾಸಿ,ಕತ್ತುರಿಯ ಬೊಟ್ಟಿಡಗಾಲತೊಡ[೧]ರ್ವಿ[೧]ರಾಜಿಸು
ತ್ತಿರೆ ಪೊಸದೇಸಿವೆತ್ತೆಸೆದುದಲ್ಲಿ ನರೇಂದ್ರಕುಮಾರಸಂಕುಳಂ ॥೪೫॥

ಅಹಮಹಮಿಕಾಭಿನತನುತ
ಮಹೀಶ್ವರಸ್ವರ್ಣಮಕುಟಘರ್ಷಣನಿಪತ
ದ್ಬಹುಕನಕರಜೋಗಣಮು
ದ್ವಹಿಸಿದುದು ತದಂಘ್ರಿಪದ್ಮರೇಣುಸ್ಥಿತಿಯಂ ॥೪೬॥

ನಸುನೋಟಂ ಪೊಸಬೇಟಮಂ ಯುವನೃಪಾಲಸ್ವಾಂತದೊಳ್ಪೊಕ್ಕು ಪು
ಟ್ಟಿಸೆ ಮಂದಸ್ಮಿತಚಂದ್ರಸಾಂದ್ರರುಚಿ ತನ್ನೇತ್ರೋತ್ಪಳಕ್ಕಿಂಪನು
ರ್ಬಿಸೆ ಜಾಣ್ವಾತುಧನುರ್ಗುಣಕ್ವಣಿತಮಂ ಪುಷ್ಪಾಸ್ತ್ರನಿಂದಾಗಳಾ
ಗಿಸೆ ಪಣ್ಯಾಜನಮಿರ್ದುದೋಲಗದೊಳುರ್ವೀಕಾಮಿನೀಕಾಂತನಾ ॥೪೭॥

---

೧ ರ್ಚಿ (ಮೂ)

ತೋಳ ಪೊಗರ್ ಮನೋಭವನ ಬಾಳ ಪೊಗರ್ನಯನಾಂಚಳಪ್ರಭಾ
ಜಾಳಮನಂಗಜಾಳಮಮಳಸ್ಮಿತಸಾರಮರೀಚಿಮಾರರು
ಜ್ಮಾಳಿಮರೀಚಿಮಂಜುಮಣಿಭೂಷಣತೇಜಮೆ ದರ್ಪಕಕ್ಷಿತೀ
ಪಾಳಕತೇಜಮೆಂಬಿನಮದೇನೆಸೆದಿರ್ದುದೊ ತದ್ವಧೂಜನಂ ॥೪೮॥

॥ವ॥ ಮತ್ತಂ—

ತೊಳಗುವ ತೊಂಡೆವಾಯ್ದೆರೆಯ ನೀಳ್ದಲರ್ಗಂಗಳ ತೆಳ್ಗದಂಪಿನಿ
ಟ್ಟಳಮೆಡೆಗೊಂಡ ಪೆರ್ಮೊಲೆಯ ಪೊಂಜೆಳೆಮೈಯ ಪೊಗರ್ಪೊದಳ್ದ ತೋ
ಳ್ಗಳ ಕಡುಬಿಣ್ಪನಾಳ್ದ ಪೊಜವಾರ್ಗಳ ತೆಳ್ವಸುರಚ್ಚಜವ್ವನಂ
ದಳೆದ ಬೆಡಂಗುವೆಣ್ಗಳೊಸೆದೊಪ್ಪಿದರೋಲಗದೊಳ್ ೧ನರೇಂದ್ರನಾ೧ ॥೪೯॥

ಓರೆದುಱುಂಬು ತುಂಬುವೆಱೆಯಂದದ ಮುದ್ದುಮೊಗಂ ಪೊದಳ್ದ ಕ
ಲ್ಹಾರದ ಚೊಲ್ಲೆಯಂ ತೊಳಪ ಮೂಕುತಿ ಕತ್ತುರಿಬೊಟ್ಟು ಮುತ್ತಿನೊ
ಳ್ಪಾರಮುರೋಜಮಂಡಳದ ಮಾಣಿಕದೈಸರಮುಣ್ಬುಗೆಯ್ದೆ ಕಾ
ಶ್ಮೀರವಲಂಪನೀಯೆ ಮೆಱೆದಿರ್ದುದು ಮುಗ್ಧವಧೂಕದಂಬಕಂ ॥೫೦॥

ಮಲ್ಲಿಗೆ ಮಾಮರಂ ಮಧು ಮಧುವ್ರತಮೌರ್ವಿಮನೋಜ್ಞಮಾದರಲ್
ವಿಲ್ಲಲರಂಬು ತೆಂಬೆಲರರಲ್ದನವಾಂಬುಜಮಂಚೆಕೊಂಚೆ ಕಂ
ಕೆಲ್ಲಿ ಶುಕಂ ಪಿಕಂ ಶಶಿಯೆನಿಪ್ಪವರಂಗದ ಪಂಗದೇಕೆನು
ತ್ತಲ್ಲಿ ಜಗಜ್ಜಯಾ೨ರ್ಥ೨ಮವರಂಗಮ೩ನಂ೩ಗಜನೊಲ್ದು ಸೇವಿಪಂ ॥೫೧॥

ಹಾರಮಯೂಖನಿರ್ಜರಪಯೋಧರಕೇಳಿನಗೇಂದ್ರಯವ್ವನೋ
ದಾರವನಸ್ತನಾಭಿಸರದೊಳ್ ರತಿಗಂಗಜನೊತ್ತಲೆಂದು ಕೈ
ಯಾರೆ ಕಡಂಗಿ ಸಾರ್ಚಿದುರುನೀಲಮಯೋದಕಯಂತ್ರದಂಡದಂ
ತಾ ರಮಣೀಜನವ್ರಜದ ಬಾಸೆಯದೇಂ ಕಡುಚೆಲ್ವನಾಳ್ದುದೋ ॥೫೨॥

---

೧ ನರೇಶನಾ (ರಿ) ೨ ರ್ಥ (ಧಾ) ೩ ವಂ (ಮೈ)

ಪಾಡವ ರಾಗವೋದದಿನಿಗಬ್ಬಮೊಡರ್ಜದ ಸಿಂಗರಂ ಬೆಳ
ರ್ಮಾಡವದಗಲ್ದರಾನನಮಳುಂಬಮನಾನದ ನಲ್ಮೆ ಜಾಣ್ಮೆಯಿಂ
ದಾಡದ ಮಾತು ಮಚ್ಚದ ಲಸತ್ಕಳೆ ಮನ್ನಿಸದೊಳ್ಪು ಸೋಳ್ಪರೊಳ್
ಕೂಡದ ಬೇಟಮಾಕೆಯಜಿಗೊಳಿಲ್ಲೆನೆ ಕೂರ್ಪರದೇಂ ಕೃತಾರ್ಥರೋ ॥೫೩॥

ಅತನುತ್ವಂ ಜಘನದೊಳು
ನ್ನತಕುಚದೊಳನಲ್ಪದರ್ಪಕತ್ವಂ ಮಧುಮಿ
ತ್ರತೆ ವಚನದೊಳಿರೆ ಕಾಂತಾ
ತತಿ ಪಡೆಯದೆ ಕಾಮಿನೀಸಮಾಖ್ಯೆಯನಿಳೆಯೊಳ್ ॥೫೪॥

॥ವ॥ ಎನಿಸಿ ರಂಜಿಸಿ—

ಏಮೆದುಱುಗಲ್ಕವಲ್ತು ಕುಡಿಗೊಂಡವೊಲಾಗಿರೆ ಸೋಗೆ ಸೋಗೆಯಂ
ತೆಮರ್ವವೊಲೊಪ್ಪೆ ಸೋರ್ಮುಡಿ ಸಮಸ್ತಸಮಸ್ತ ನಗೇಂದ್ರದಂತೆ ಚೆ
ಲ್ವಮರೆ ನಖಾಂಕಚಂದ್ರಕಳೆಯಿಂ ಕಳೆಯಂ ತಳೆದಾನನಾಬ್ಜಮ
ಬ್ಜಮನಿಳಿಕೆಯ್ಯೆ ಕಂಗೆಸೆದುದಗ್ಗದಪೂರ್ವವಿಳಾಸಿನೀಜನಂ ॥೫೫॥

ಅಳಿಕುಳಮಂ ಪ್ರಸೂನ ವಿಳಸತ್ಕಬರೀಭರಮುನ್ಮರಾಳಮಂ
[1]ಡಳಿಯನುದಾತ್ತಮಂದಗತಿ ,ಗಂಧಸಮೀರಣನಂ ಸಗಂಧಮಂ
[1]ದಿ[1]ಳಿವೆಳೆ ಸುಯ್ಸಮಂತು ಸೆಱೆಗೆಯ್ಯದೆ ತಾಂ ಸೆಱೆಗೈದುದೇ ನಿಜೋ
ಜ್ವಳರುಚಿರೂಪಮೊಂದೆ ಯುವನೇತ್ರಮನಾ ಯುವತೀಪ್ರತಾನದಾ ॥೫೬॥

॥ವ॥ ಮತ್ತಮಿಂತು ನಿರತಿಶಯಸೌಂದರ್ಯಮಾಧುರ್ಯಲಾವಣ್ಯನೈಪುಣ್ಯ ಸಾರ ಸರ್ವಸ್ವಮಂಗಂಬಡೆದೇಳ್ತಂದಂತಿ[2]ರ್ಕೈ[2]ತಂದು ನಿಂದ ನಿತಂಬಿನೀಜನದ ಮಿಱುಪ ಪೆಱೆನೊಸಲೊಳ್ ಸುಸಿಲ್ಗಡೆಯೊಳ್ ಪಸರಿಸಿ ಪರೆದ ಸುಳಿಗುರುಳ್ಗಳಂ ತಳೆದಿನಿ-ನೆಯನನುಗೊಳಿಸಿ ನೇರ್ಪಡಿಸಿ ಕೂರುಗುರಿಂ ತಿರ್ದಿ ಕೂರ್ಮೆಯಿಂದಿಟ್ಟ ಕತ್ತುರಿಯ ಬಟ್ಟಬೊಟ್ಟು ರಮಣಕರಗ್ರಹಣಪೀಡನದಿಂ ಜೆಡೆವಾವುಗುಳ್ದ ಗರಳರಸಕಳಿಕೆ-ಯೆನೆ ಕಂಗೊಳಿಸಿಯುಂ ಸರಸತರಸುರತಸಮಯದೊಳಮರ್ದಪ್ಪಿ ಮನೋರಮಣಂ

೧ ಡ (ಕ) ೨ ರೆ (ಕ),

ಮೊನೆವಲ್ಲ ಕೊನೆಯಿಂ ಕರ್ದುಂಕಲೊಡನೊಸರ್ದಧರದಳದಮೃತರಸಂ ಪಸರಿಸಿ-ರ್ದುದೆನಿಸಿ ದಶನವಸನಕಿಸಲಯದೊಳ್ ಹಸನರಸಂ ಮಿಸುಗೆಯುಂ, ಸಮದಮದನವಿಜಯಾಸ್ಪದಮಾದ ವದನಕಮಳದೊಳ್ ಸಿರಿ ನೆಲೆಗೊಂಡಳೆಂಬ ನಣ್ಪಿಂ ಬಂದು ಕೇಳಿಯಿಂ ಕೆಳೆಗೊಳಲೆಳಸಿ ಕೆಲಂಬಿಡಿದು ನಿಂದಚಂದ್ರಬಿಂಬಮೆಂಬ ಬಗೆಗಡರ್ಪಾಗಿ ಥಳಥಳಿಸಿ ಪೊಳೆವ ಮೌಕ್ತಿಕಮಣಿಖಚಿತಕರ್ಣಪತ್ರಂ ನೇತ್ರಶೋಭಾವಹಮಾಗೆಯುಂ, ದರ್ಪಣದೊಳಾಗಸದ ನೆಳಲ್ಪೊಳೆವಂತೆಕಪೋಲದರ್ಪಣದೊಳ್ ನೋಳ್ಪಮೈಯಿಲ್ಲದ ಮದನನ ಪಡಿನೆಳಲ್ ತೋರ್ಪುದೆನೆ ಮೃಗಮದರಸರಚಿತಮಕರಿಕಾಪತ್ರಮತಿವಿಚಿತ್ರ ಮನೊದವಿಸೆಯುಂ, ದಾಂಗುಡಿವಿಡುವಪಾಂಗರುಚಿಲತೆ ಮುಗುಳಂ ಪಡೆದಂತೆ ಕೊನೆಗೊಡಂಕೆಯೊಳ್ಪೊಳೆವ ಬಾವುಲಿಯ ಬಟ್ಟಮುತ್ತು ಬಗೆಗೊಳಿಸೆಯುಂ, ನಿಡುಜಡೆಯೆಂಬ ಕಾಳಾಹಿಗಳ್ಕಿ ನೆಲೆಮೊಲೆವೆಟ್ಟಿನೆಡೆವೊ[೧]ಕ್ಕ[೧]ಡಂಗಿದ ನಖಕ್ಷತೇಂದುಕಳೆಯನಾರ್ಯೆಯಲ್ಬಂದು ಪೆಳರ್ದು ತಳರದೆ ಕಾದು ಬಳಸಿ ನಿಂದ ನಕ್ಷತ್ರಮಾಲೆಯೆಂಬಂತೆ ನಕ್ಷತ್ರಮಾಲೆ ಮನೋಜ್ಞತೆಯನಾಲಿಂಗಿಸೆಯುಂ, ಮದನ ಮದಗಜದ ಮದರಸಂ ಪತ್ತಿದ ಶುಂ[೨]ಡ[೨]ದಂಡಾಗ್ರಮನಡಱ ಕಂಪಿಂಗೆಳಸಿಬಳಸಿದಳಿಮಾಲೆಯ ಲೀಲೆಯಂ ತಳೆದು ನಳಿತೋಳ ತುದಿಗೊಂಡಮರ್ದುನಿಂದ ಹರಿನೀಲಮಣಿವಲಯಂ [೩]ತೊಳತೊಳಗೆಯುಂ[೩], ವೃತ್ತಂಬೆತ್ತು ಕೊರ್ವಿ ಬಳೆದ ನಿತಂಬಬಿಂಬಮೆಂಬ ಶಂಬರಾರಿಕುಂಭಿಕುಂಭಕ್ಕೆ ಬಸಂತನೊಸಗೆ ಮಿಗೆ ಸುತ್ತಿದ ಕನಕಚಂಪಕದಾಮದಂತೆ ಕನಕಕಾಂಚೀದಾಮಮಭಿರಾಮತೆಯನೊಳಕೈದು ತೆಱಂಬೊಳೆಯೆಯುಂ, ಮಿಸುಪ ಮಿಸುನಿವೆಸದ ಪೊಸತೊಡವುಗಳ ಪೊಂಬೆಳಗೆಂಬ ಬಿ[೪]ಸಿ[೪]ವಿಸಿಲ್ಮುಸುಂಕೆ ನುಣ್ದೊಡೆಗಳೆಂಬ ಪೊಂಬಾಳೆಗಂಬಂಗಳ್ ಕಂದಿದಪುವೆಂದು ಕಂದರ್ಪಂ ಬೆಳ್ದಿಂಗಳಿಂ ಬಾಸಣಿಸಿದಂತೆ ನಿಱಿವಿಡಿದುಟ್ಟ ಧವಳಾಂಬರಮಿಂಬುವಡೆಯೆಯುಂ ತರುಣರವಿಕಿರಣದಿಂ ಪೊಂಬಣ್ಣ-ಮೇಱಿ ಸುಸಿಲಬಿಸರುಹದ ನಾಳಮಂ ಬಳಸಿನಿಂದು ಜಿನುಂಗುವೆಳೆದುಂಬಿಗಳಮಾಲೆಯಂ ಪೋಲ್ತು ಪದಾಗ್ರದೊಳಂದಂಬಡೆದು ಸಲ್ಲೀಲೆಯಿಂ ಮೆಲ್ಲುಲಿಗೊಡುವ ಮಿಸುನಿಯಂದುಗೆ ರಂಜಿಸೆಯುಮಿಂತತಿಶಯ ತದೀಯ ಕಮನೀಯಶೃಂಗಾರಸಾರಸಹಜಸೌಂದರ್ಯಸೌಕುಮಾರ್ಯಮಾಧುರ್ಯನಿಧಿವಿದಿತಕೋಶಾಗಾರದಂತೆ ರಾಜೇಂದ್ರನೊಡ್ಡೋಲಗಮಾಲೋಕದಾಲೋಕನಕ್ಕೆ ಕೌತುಕಾವಹಮೆನಿಸಿ ಪರಿರಂಜಿಸಿರ್ದುದಂತು-ಮಲ್ಲದೆಯುಂ—

೧ ಕ್ತ (ಕ) ೨ ಡಾ (ಕ, ಧಾ) ೩ ತೊಳಗೆಯುಂ (ಧಾ, ಕ) ೪ ಸು (ಧಾ)

ಮಣಿಗಣದಂತೆ ಮೌಳಿಮಣಿಸಂಕುಳಮೊಪ್ಪಿರೆ ಪೊಕ್ಕಗವ್ರಜ
ಕ್ಕೆಣೆವರೆ ಭೂಭುಜವ್ರಜಮೆ, ನೀರಮದಾಗಿರೆ ಹಾರರೋಚಿ, ಸಂ
ದಣಿಸಿರೆ ಚಾರುಚಾಮರಮರಾಳಕುಳಂ ಘನವಾದ್ಯಮಬ್ಧಿಘೋ
ಷಣಮೆನೆ, ರಾಜರಾಜಪರಿವರ್ಧಿತಮಾ ಸಭೆ ವಾರ್ಧಿಯಂತೆವೋಲ್ ॥೫೭॥

ವಿತತಸದಾನವಾರಿವಿಭವಂ ಪ್ರಮದಾಳಿ ಮನೋಜ್ಞವರ್ಣಸಂ
ಗತ ಪರಿದಾಮಮುಜ್ವಳಕರಾಂಚಿತಪುಷ್ಕರಕಾಂತಮುದ್ರಸಾ
ಶ್ರಿತಘನವಿಗ್ರಹಾಂಚಿತಮುದಾತ್ತಬಲಸ್ಥಿತಿ ಪೋಲ್ತುದಿಂದಿರಾ
ಪತಿಪುರಮಂ ಮಹೇಂದ್ರಪುರಮಂ ಗಜಮಂ ಸಭೆ ತನ್ಮಹೀಶನಾ ॥೫೮॥

॥ವ॥ ಅಂತೊಪ್ಪುವ ವಿತತಮಹಾಸ್ಥಾನದಲ್ಲಿ—

ಮದನಧರಾಧೀಶನ ಪ
ಕ್ಕದೊಳೊಪ್ಪುವ ಚೈತ್ರನಂತೆ ಶೃಂಗಾರರಸಾ
ಸ್ಪದಯುವರಾಜನ ಕೆಲದೊಳ್
ಪದೆದೊಪ್ಪಿದನತುಳಗುಣಯುತಂ ಮಿತವಚನಂ ॥೫೯॥

॥ವ॥ ಆ ಪ್ರಸ್ತಾವದೊಳ್—

ತುಂಗಮೃದಂಗದುಪಾಂದಗ
ಚಂಗಿನ ದಂಡಿಗೆಯ ತಾಳದಾವುಜದ ಲಸತ್
ಸಂಗೀತದ ವಾಸದ ನಿನ
ದಂಗಳ್ಪರೆದಳುರ್ದು ಸವಿಯನೇಂ ಸೂಸಿದುವೋ ॥೬೦॥

ಅಲರ್ವಕ್ಕಿಗಳುಲಿಯಂ ರತಿ
ಕಲಹದ ಕಾದಲೆಯ ದೈನ್ಯರಸರವಮಂ ಮಂ
ಜುಳಕಳಮರಾಳರಾವಮ
ನಲೆದುದು ಸಂಗೀತನಿನದಮದು ಮಧುರತೆಯಿಂ ॥೬೧॥

॥ವ॥ ಆಗಳೊರ್ವಳಭಿನವರಂಭೆಯೆಂಬ ಚತುರನರ್ತಕಿ—

ತೊಳಪೆಳೆಮುತ್ತು ತೆತ್ತಿಸಿದ ಬಲ್ಮೊಲೆಗಟ್ಟು ನಿತಂಬಬಿಂಬಮಂ
ಜುಳಮಣಿಕಾಂಚಿ ಪೊನ್ನ ಪೊಸಕಾಸೆ ಸುವರ್ಣದ ಗು[1]ಜ್ಜುಗೆಜ್ಜೆ ಪ
ಜ್ಜಳಿಸುವ ರನ್ನವಚ್ಚಮಳಿಕಾಗ್ರದ ಕತ್ತುರಿಬೊಟ್ಟು ಕಾಂತಿ ಮಂ
ಡಳಿಸುವ ವಜ್ರದೋಲೆ ತನಗೊಪ್ಪಿರೆ ಬಂದಳದೊಂದು[2]ಲೀಲೆಯಿಂ[2] ॥೬೨॥

॥ವ॥ ಅಂತೈತಂದು ತತ್ಸಭಾಜಳನಿಧಿಮಧ್ಯದೊಳೊಗೆದ ಕನಕಪಂಕಜ ಪರಾಗಪರಿಮಳಿತಮಾದ ನುಣ್ಬೊಱೆಯೆನೆ ಮಿಸುಪ ಪೊಂದೆರೆಯ ಮಱೆಯೊಳ್-[3]ಸಿ[3]ರಿಯ ಸಿರಿಯನೊಳಕೈದಂದಂಬಡೆದು ನಿಂದಿರ್ಪುದುಮನಂತರಮರಸನಿದಿ-ರ್ಗೆವಂದು ಸೂತ್ರಧಾರಕಂ ಮೈಯಿಕ್ಕಿ ಕೈಯಂ ಮುಗಿದು—

ಭರತಾದಿ ವಿವಿಧವಿದ್ಯಾ
ಪರಿಣತಜನವನವಸಂತ ವಿತರಣಜಿತನಿ
ರ್ಜರಭೂಜ ರಾಜಶೇಖರ
ಧರಣೀಶ ನಿರೀಕ್ಷಿಸೆಂಬ ಸಮನಂತರದೊಳ್ ॥೬೩॥

ತೆರೆ ತೊಲಗೆ ಮೈವೆಳಗುಮಾ
ರ್ಧರೆಯಂ ಸರಿದಂತೆ ಪೊಳೆಯೆ ಕೆದರ್ದಳ್ಪೊಳೆದೊ
ಪ್ಪಿರೆ ಮಿಂಚಿ ಮಿಂಚು ಕರಕೋ
ತ್ಕರಮಂ ಕೆದರ್ವಂತೆ ಕಾಂತೆ ಕುಸುಮಾಂಜಲಿಯಂ ॥೬೪॥

ತೊಳಗುವ ತೋಳ[4]ಢಾ[4]ಳಮಿರೆ ಮೈಸಿರಿಗೈಸಿರಿಯಾಗಿ ಸೊಂಪು ನು
ಣ್ಪಳವಡೆ ದೇಸಿ ವಾಸಿಮಿಗೆ ಕೊಂಕದ ಬಿಂಕದ ಜಾಣ್ಮೆ ಪೊಣ್ಮೆ ಸಂ
ಗಳಿಸಿರೆ ತಾಳಮೇಳದ ರವಂ ಜವದಿಂ ಜತಿದಪ್ಪದೊಪ್ಪಮಂ
ಘಳಿಲನೆ ತೋಱಿ ಮೀಱಿ ಮೆಱೆದಳ್ ನವನರ್ತಕಿ ನೃತ್ಯಲೀಲೆಯಂ ॥೬೫॥

೧ ಜ್ಜಿ (ಮೈ) ೨ ಬಿಂಕದಿಂ (ಮೂ) ೩ ಪಿ (ಮೈ) ೪ ಡಾ (ಧಾ); ದಾ (ಮೂ)

ನೊಸಲೆಂಬ ಪೆಱೆಯನಾಲಿಂ
ಗಿಸಿ೧ರಂ೧ಜಿಪ ತಾರೆ ಪುರ್ಬುವಳ್ಳಿಯ ಮುಗುಳೆಂ
ಬೆಸಕಮನಮರ್ಚಿ ಮೆಱೆದುದು
ಪೊಸಮುತ್ತಿನ ಬೊಟ್ಟು ನಾಟ್ಯವಿದ್ಯಾಧರಿಯಾ ॥೬೬॥

ಜಳಕಣಮಳುರ್ದಂಬುಜಕು
ಟ್ಮಳಮುಱುತತಿ ಬಳಸಿದಮರಗಿರಿಯೆಂಬಿರವಂ
ತಳೆದೆಳೆಮುತ್ತಿನ ಮೊಲೆಕ
ಟ್ಟಳವಟ್ಟಿರೆ ಬಟ್ಟಮೊಲೆಯದೆಸೆದುದು ನಟಿಯಾ ॥೬೭॥

ಅವಳ ಜಘನಾದ್ರಿತಟದೊಳ್
ಯುವದೃಙ್ಮೃಗಜಾಲಕತನುಚಾಲಕನೊಸೆದೊ
ಪ್ಪುವ ಘಂಟಾಜಾಲಮನಿ
ಟ್ಟವೊಲೆಸೆದುದು ಕಾಂಚಿ ಘಂಟಿಕಾರವಮಿಳಿತಂ ॥೬೮॥

ತಳಿರ್ವಟ್ಟೆಯ ಪೊಸಚಲ್ಲಣ
ಮಳವಟ್ಟನಿತಂಬಬಿಂಬಮರುಣೋಪಳಮಂ
ಜುಳಗಿರಿಗೆ ಸರಿಗೆವರುತಂ
ತಳೆದುದು ಸಿಂದೂರಲಿಪ್ತಕರಿಶಿರದಿರವಂ ॥೬೯॥

ಪೊಸಮಿಸುನಿವೆಸದ ತೊಡೆಗು
ಪ್ಪಸಮೆಸೆದುದು ಪೊಣರಲೆಂದು ಪೊಂಬಾಳೆಯೊಳಂ
ದಸಿಯಳ ನುಣ್ದೊಡೆ ತಾಳ್ದವೊ
ಲಸದೃಶರುಚಿಕನಕವಚಮಂ ಕಡುಪಿಂದಂ ॥೭೦॥

೧, ರಾ (ಥಾ).

ರತಿದೇವೀಕುಚಕುಂಭಕುಂಕುಮಕರಂ ಕಾಮಂ ಕರಂ ನೀವೆ ತ
ದ್ಗತರಾಗಂಬೊರೆದಲ್ಲಿ ತುಂಬಿ[1]ವೆ[1] [2]ದೆ[2]ಪೊಂಬಣ್ಣಕ್ಕೆ ಪಕ್ಕಾಗುತ್ತೈ
ದಿ ತದೀಯಾಂಘ್ರಿಸರೋಜಮಂ ಬಳಸಿ ನಿಂದತ್ತೆಂಬವೊಲ್ಕಣ್ಗೆ ರಂ
ಜಿತಮಾಗಿರ್ದುದು ಕಾನಕಂ ಕಳನಿನಾದಂ ಕಿಂಕಿಣೀಸಂಕುಳಂ ॥೭೧॥

ಕ್ಷಣರುಕ್ಕಾಂಚಿರವಂ ಝುಣತ್ಝುಣರಣತ್ಸ್ವರ್ಣಸ್ಫುರತ್ಕಿಂಕಿಣೀ
ರಣಿತಂಗೂಡಿ ಬೆಡಂಗುವೀಱೆ ಮೃದುಪಾದನ್ಯಾಸಮಿಂಬಾಗೆ ಕಂ
ಕಣರಾವಂ ಸೊಗಸಾಗೆ ಪಾಣಿಚಳನಂ ಚೆಲ್ವಾಗೆ ನೇತ್ರಾಂತವೀ
ಕ್ಷಣದಂದಂ ಪೊಸತಾಗೆ ನೀಱೆ ಮೆಱೆದಳ್ ಲೀಲಾಲಸಲ್ಲಾಸ್ಯಮಂ ॥೭೨॥

ವಿತತಾಂಗಿಕಮಾಹಾರ್ಯಕ
ಮತಿಶಯಸಾತ್ತ್ವಿಕಮುಮುಮರ್ದವಾಚಿಕಮೆನಿಪೀ
ಚತುರಭಿನಯಮಂ ಚತುರ
ಸ್ಥಿತಿಯಿಂ ನೆಱೆತೋಱಿ ಬೀಱಿದಳ್ ನರ್ತನಮಂ ॥೭೩॥

ದಳಿತ ತರುಣಾಂಬುರುಹಮು
ಚ್ಚಳಿತತರಂಗಪ್ರಪಾತದಿಂ ಚಲಿಯಿಪ ಪಾಂ
ಗಳವಡೆ ಲಾವಣ್ಯರಸಾ
ವಿಳಮಾಂದೋಳಿತದಿನೆಸೆದುದಾಸ್ಯಂ ನಟಿಯಾ ॥೭೪॥

ಮುಗುಳ್ವೆಲರ್ವ ನಗುವ ಚಲ್ಲಮು
ನುಗುವ ಮರಲ್ದೊಗೆವ ಬಳಸುವಲಸುವಲಂಪಂ
ತೆಗೆವ ಪೊಳೆವ[3]ಗಿ[3]ವ ಮಿಗಿಲೆಂ
ದೊಗೆವಲಸದ್ದೃಷ್ಟಿ ಮೆಱೆದುದಾ ನರ್ತಕಿಯಾ ॥೭೫॥

ತಿಳಿವೆಳ್ದಿಂಗಳ ಬೆಳಗಂ
ತಳೆಧೆಳೆಮಿಂಚೆಳಸಿ ನಳಿನದಳದೊಳ್ಪೊಳೆದು
ಚ್ಚಳಿಸಿದಪುದೆಂಬ ಬಿಂಕಮ
ನೊಳಕೊಂಡಲರ್ಗಣ್ಣ ಬೆಳಗದೇಂ ಪಸರಿಸಿತೋ ॥೭೬॥

---

೧ ತೆ (ಕ) ೨ ದೇ (ಮೂ) ೩ ಗೆ (ಕ, ಫಾ)

ಸಮ[೧]ನೆ[೧]ನಿಸಿ ನಿಮಿರ್ವಕುಂಚಿತ
ಮುಮರ್ವ ಪಳಂಚುವ ಸಮಂಚಿತಭ್ರೂಲತೆ ತ
ಳ್ತಿಮೆದುಜುಗಲನೆಳಲ್ತೊಳ್ಮುಖ
ಕಮಳಮಯೂಖಾಂಬುವೀಚಿ ಚಲಿಪವೊಲೆಸೆಗುಂ ॥೭೭॥

ಚಳದಮಳವಜ್ರಮಣಿಕುಂ
ಡಳಮಂಡಳಕಾಂತಿಕಾರಿತಗಂಡಸ್ಥಳಮಂ
ಜುಳಮಣಿಮುಕುರದ್ಯುತಿಯೊಳ್
ಪಳಂಚಿ ಥಳಥಳಿಸಿ ಪೊಳೆದು ನರ್ತಿಸಿತಾಗಳ್ ॥೭೮॥

ಇದು ಚಿತ್ರಂ ಚಂಪಕಮುಕು
ಲದೊಳೊಗೆದೊಲೆದಪುದು ಕುಜಮ್ಮಿದೆನೆ ತನ್ನಾಸಾ
ಗ್ರದ ಮುತ್ತಿನ ಮಣಿರದನ
ಚ್ಛದದೀಧಿತಿ ಪುದಿಯೆ ಕೆಂಪನಾಳ್ದೊಲೆದೆಸೆಗುಂ ॥೭೯॥

ಅಮರ್ದಿನೊಳಳ್ದಿದ ಬಿಂಬಮ
ನಮೃತಾಬ್ಧಿಯೊಳೊಗೆದ ಪವಳಮಂ ಪಳಿದೆಸೆದ
ತ್ತಮಳತರರದನರುಚಿಸಂ
ಕ್ರಮಧವಳಿಮಮಧರವಿದ್ರುಮಂ ನರ್ತಕಿಯಾ ॥೮೦॥

ಸ್ಮರನರುಣತರುಣಪಲ್ಲವ
ಶರಮನಸಂಖ್ಯಾತಮಕ್ಕೆನುತ್ತಿಸೆ ಪಾಯ್ದು
ಪ್ಪರಿಸಿ ಬಹುಮುಖದೆ ಪರಿದೊ
ತ್ತರಿಸುವ ಪರಿಯೆನಿಸಿತವಳ ಕರತಳಚಳನಂ ॥೮೧॥

ಎನಗೆ ಪಗೆಯಾದ ಚಂದ್ರನ
ನನಿಶಂ ಕೆಳೆಗೊಂಡುದೆಂದು ಕ[೨]ರ್ಣೋ[೨]ತ್ಪಲಮಂ
ಮುನಿದಲೆವ ವನರುಹಮನಂ
ದನುಕರಿಸಿದುದರರೆ ಕರಿಕರಂ ನರ್ತಕಿಯಾ ॥೮೨॥

---

೧ ಮೆ (ಧಾ) ೨ ನೋ (ಲಿ, ಧಾ, ಕ, ಮೂ)

ತರುಣಾಸಿತಾಹಿಸಂಗೀ
ತರವಂಗೇಳ್ದೆಳಸಿ ನಾಭಿವಲ್ಮೀಕದಿನೆ
ಳ್ದಿರದೊಲಿದೊಲ್ದಾಡುವುದೆನೆ
ಕರಮೆಸೆದುದು ಬಾಸೆ ವಿಚಳಿತಂ ನಚ್ಚಣಿಯಾ ॥೮೩॥

ಅವಳವಯವ ನವಲಾವ
ಣ್ಯವನೇಜಾಕರದೊಳಾಳ್ದ ಮದನದ್ವಿಪದೊ
ಪ್ಪುವ ಚಳಕುಂಭಸ್ಥಳಮೆಂ
ಬವೊಲೆಸೆದುದು ಲಾಸ್ಯಕಂಪಿತಂ ಘನಜಘನಂ ॥೮೪॥

ತೊಡೆ ರಂಭಾಮದಮಂ ಮಿಗೆ
ತೊಡೆದುದು ನುಣ್ಪಿಂದಮೆಂಬ ಪುರುಡಿಂದಡಿ ತಾ
ನಡಿಮಾಡಿದುದುರು ರಂಭಾ
ವಿಡಂಬಮಂ ವಿತತನೃತ್ಯದೊಳ್ ನರ್ತಕಿಯಾ ॥೮೫॥

ಮಂದರಗಿರಿ ತಿರ್ರನೆ ತಿರು
ಪಂಥೊಡನೊಗೆದಂಬುಧಿಯೊಳೆ ತಿರುಗುವ ಸಿರಿಯೊಂ
ದಂದವನಭಿ[೧]ನಯಿ[೧]ಸುವಳಿವ
ಳೆಂದೆನೆ ಕಾಣಿಸಿದಳದ್ಭುತಭ್ರಮರಿಗಳಿಂ ॥೮೬॥

ಒಸೆದಷ್ಟರಸಮನಿದು ನವ
ರಸಮೆನಿಸಿ ಪೊದಳ್ದ ಪತ್ತುಮಂಡಳಮಂ ರಂ
ಜಿಸಿ ಪಂಚಮೆನಿಸಿ ಲಾಸ್ಯಮ
ನೆಸಗಿದಳಾ ನಟಿ ವಿಚಿತ್ರಮೆನೆ ತತ್ಸಭೆಯೊಳ್ ॥೮೭॥

ಮಂಡಳಮಂ ನೆರೆದಳ್ಮುಖ
ಮಂಡಳಮಮೃತಾಂಶುಮಂಡಳಕ್ಕೆಣೆವರೆ ಭೂ
ಮಂಡಳದಿಂ ನೆಗೆದು ನಭೋ
ಮಂಡಳದೊಳ್ನಿಂದು ನೀಱಿ ಮೆಱೆದ್ದಶವಿಧಮಂ ॥೮೮॥

---

೧ ನೈ (ರಿ, ಮೆ, ಮೂ.)

ಚಾರಿಗಳಂ ಕೊಳುತಂ ಸಂ
ಚಾರಿಗಳಂ ತಳೆದು ರಸಿಕಜನದಕ್ಷಿಗಳಂ
ಚಾರಿವರಿದಾಡಿಸಿದಳೆ
ಚ್ಚಾರಿತದಂಗಮನನಂಗನಿರೆ ಪಿಂಗ[೧]ಡೆ[೧]ಯೊಳ್ ॥೮೯॥

ಕರ[೨]ತಳದೊಳ[೩]ಭಿನಯಮನಮ
ರ್ದಿರೆ ಚರಣದೊಳತುಳತಾಳಮಂ ನೇತ್ರದೆ ಭಾ
ಸುರರಸಮನಸಮಗಾನಮ
ನರರೆ ಶರೀರದೊಳೆ ಪಿಡಿದವಳ್ ನರ್ತಿಸಿದಳ್ ॥೯೦॥

ಘನಜಘನಂಗಳುನ್ನ[೪]ತಿ[೪]ಕುಚಂಗಳ[೪]ಳ ತುಂ[೪]ಗತೆ ಚೆಲ್ವನಾಳ್ದ ಕ
ಣ್ಗೊ[೫]ನೆಯು[೫]ವಿಳಾಸಮಾಸ್ಯದ ವಿಕಾ[೬]ಸ[೬]ತೆ ಪಾದದ ಸಂಭ್ರಮಂ ಪಳ
ಚ್ಚನೆ ಪೊಳೆವಂಗದಂದಮರುಣಾಧರದಿಂಪು ಕಪೋಲಕಾಂತಿಯಿಂ
ಬಿನಿತನಲರ್ಚಿ ಬಿಚ್ಚಳಿಸಿ ನಚ್ಚಣಿ ಪೆರ್ಚಿಸಿದಳ್ ಮನೋಜನಂ ॥೯೧॥

ತೀವಿದ ಲಾವಣ್ಯಾಮೃತ
ಸೇವನೆಗೀವಂತೆ ಸಮಯಮಂ ಯುವಜನನೇ
ತ್ರಾವಳಿಗಮರ್ದ್ಗಂಗದಿನಂ
ದಾ ವಧು ಸಮಪಾದಚಾರಿಯಂ ತಳೆದೆಸೆದಳ್ ॥೯೨॥

ಅರುಣಚರಣಾಂಶು ಬಂದುಗೆ
ಯರಲಂ ಬಲಿಗೆದರೆ ಕಾಲ್ಗಳೊಳ್ ತೊಡರ್ದ ನರೇ
ಶ್ವರರ ಬಗೆವಲೆದೊಡಂಕಂ
ಪರಿಹರಿಪವೊಲಾಂತಳಬಲೆ ಹರಿಣಪ್ಲುತಮಂ ॥೯೩॥

ಶೃಂಗಾರಸಾರರಸಮನ
ಪಾಂಗದ್ಯುತಿ ಬೀಱೆ ಮೀಱೆ ಲಾವಣ್ಯರಸಂ
ತುಂಗಕುಚೆ ಚಾಪಗತಿಯಂ
ಸಂಗಳಿಸುತನಂಗಚಾಪಲತೆಯೆನೆ ಮೆಱೆದಳ್ ॥೯೪॥

---

೧ ರೆ (ಕ) ೨ ದೊಳ (ಕ) ೩ ತ (ಧಾ. ಮೈ, ಮೂ) ೪ ಳುತ್ತುಂ (ಮೈ) ೫ ನೆ (ಮೂ) ೬ ಶ (ಧಾ, ಮೈ)

॥ವ॥ ಮತ್ತಂ—

ಕಂತುಕರಾಗ್ರಕಂತುಕದವೋಲ್ನೆಗೆವುದೆತ್ತೆ[1], ಮನೋಜಚಕ್ರಿ ಚ
ಕ್ರಂ ತಿರುಪಂತೆ ತಿಱಿನೆ ಕರಂ ತಿರುಗುತ್ತೆ, ರತೀಶಶಸ್ತ್ರಿಶ
ಸ್ತ್ರಂ ತಳದಿಂ ಕುರುಳ್ಚಿ ಚಲಿಪಂತಲುಗುತ್ತೆ [2]ಸು[3]ಮೇಷುಸೂತ್ರಧಾ
ರಂ ತಳೆದಾಡಿಪೊಂದು ಪೊಸಸೂತ್ರದ ಪುತ್ರಿಕೆಯಂತಿರಾಡಿದಳ್ ॥೯೫॥

ಜತಿ[4]ವೆ[4]ತ್ತೊಪ್ಪುವ ಮೃದುಪದ
ಗತಿಯುಂ ರಸಮೊಸರ್ವ ಭಾವಮುಂ ವೃತ್ತಿವಿಳಾ
ಸತೆಯುಂ ತಳ್ತಿರೆ ವಿಳಸ
ತ್ಕೃತಿಯಂ ಪೋಲ್ತಬಳೆ ರಸಿಕರಂ [4]ಮ[4]ಚ್ಚಿಸಿದಳ್ ॥೯೬॥

ಅಚ್ಚರಿಯರೊಳರಗಿಣಿಯರೊ
ಳಚ್ಚಿ ಮುಗುಳ್ಚುವ ವಿಳಾಸಮುಂ ವಿಭ್ರಮಮುಂ
ನಚ್ಚಿರದೆನೆ ನರನಾರಿಯ
ನಚ್ಚಣಿಕೆಣಿವರ್ಪ ನಚ್ಚಣಂ ಪೆಱತುಂಟೇ ॥೯೭॥

ಆ ರಮಣಿ ನೋಳ್ಪ ವಿಬುಧರ
ಸಾರತರಾಪಾಂಗಧವಳರುಚಿ ಕವಿಯೆ ಲಸ
ದ್ಭಾರತಿ ಲೀಲಾಲಾಸ್ಯಮ
ನೋರಂತಿರೆ ತಾನೆ ತೋರ್ಪಳೆನೆ ಕರಮೆಸೆದಳ್ ॥೯೮॥

ಅವಳ ನವನರ್ತನಮನಂ
ದವನೀಧವನೆಯ್ದೆ [5]ಮ[5]ಚ್ಚಿ ಪೊಗಳ್ದುತ್ಸವದಿಂ
ದಿವಿಜಕುಜದೇಳ್ಗೆ ಕೀಳ್ಪಡೆ
ಸುವಸ್ತ್ರಮಣಿಭೂಷಣಂಗಳಂ ಪದೆದಿತ್ತಂ ॥೯೯॥

---

೧ ತೆ (ಕ) ೨ ಕುಸು (ಮೂ, ಮೈ) ೩ ತೆಂ (ಕ) ೪ ಮೆ (ರಿ) ೫ ಮೆ (ರಿ)

॥ವ॥ ಆ ಪ್ರಸ್ತಾವದೊಳ್—

ಸಿಡುದ್ಯೋಳ್ಕೀಳ್ದ ತರಂಗಮಾನನಮುರಲ್ದಂಭೋರುಹಂ,ತಳ್ತ ಚೆಂ
ಗುಡಿ ದೀರ್ಘಾರುಣಪಾಣಿಶಾಖೆ,ದಶನಂ ಸುಣ್ಮುತ್ತು,ಮೀಂಗಳ್ಬೆಡಂ
ಗಿಡಿಥೆತ್ತಂ ಪೊಳೆವಕ್ಷಿಗಳ್,ಸಲಿಲಮಂಗ[೧]ದ್ಯೋತಿ ತಾನಾಗೆ[೧] ಪಾ
ಲ್ಗಡಲೆಂಬಂತಿರೆ ಸಿಂಧುರಾಜನೊಸೆದೇಳ್ತಂದಂ ಗಭೀರಾನ್ವಿತಂ ॥೧೦೦॥

॥ವ॥ ಅಂತೇಳ್ತಂದಾ ರಾಜಶೇಖರಂಗೆ ನಖರುಚಿಕುಸುಮಂಬೆರಸು ರತ್ನಾಂ-[೨]ಜ[೨]ಲಿಯಂ ಕೆದರ್ದು ಪೊಡಮಟ್ಟು ಮದನಂಗೆ ಮಲ್ಲಿಗೆಮುಗುಳಮಾಲೆಯನೀವ ವಸಂತನಂತೆ ತಾಂ ತಂದಾಣಿಮುತ್ತಿನ ಕಂಠಮಾಲೆಯಂ ಕಾಣ್ಕೆಗೈದು ಮತ್ತ-ಮಿರದೆ—

ಸಮದಂತಂ,ಚಾರುವಕ್ತ್ರಂ,ಕಿಱುಗಿವಿ,ಘನಘಂಟಾಖುರಂ ನೀಲರತ್ನೋ
ಪಮನೇತ್ರಂ ಶ್ವೇತವರ್ಣಂ,ವಿತತಲಸದುರಂ ದೀರ್ಘವಾಲಂ ಪ್ರಥುಸ್ಕಂ
ಧಮುದಗ್ರಗ್ರೀವಮುದ್ಯಜ್ಜಘನಮುರುಲಲಾಟಂ,ವಿಮಾಂಸಾಂಘ್ರಿಗಂಭೀ
ರಮಹಾನಾದಂ,ಸುನಾಸಾಪುಟಮುಮರ್ದ ತುರಂಗಂಗಳಂ ಕಾಣ್ಕೆಗೈದಂ ॥೧೦೧॥

ಅದು ಧಾರಾಧರಮು[೩]ಬ್ದ[೩]ದಂತೆ,ಪೊಳೆಯಂತಾವರ್ತಯುಕ್ತಂ,ಕುರಂ
ಗದವೋಲ್ ತೂರ್ಣಗತಿಪ್ರಯುಕ್ತಮುಳಿ(ಯುಂತಾಮೋದಚಿತ್ತಂ,ಕಳಂ
ಬದವೋಲ್ ಚಾಪಲಸದ್ಗುಣಾಂಕಿತಮುದಂ[೪]ಚ[೪]ಚ್ಚಂದ್ರ ಬಿಂಬಂಬೊಲ
ಭ್ಯುದಯಶ್ರೀಕರಲಕ್ಷಣಾಂಕಮೆನಿಸಿತ್ತಾ ರಾಜವಾಜಿದ್ವಯಂ ॥೧೦೨॥

॥ವ॥ ಅಂತುಮಲ್ಲದೆಯುಂ—

ಗತಿವೇಗಂ ಪುಲ್ಲೆಯ್ಗಾ,ಪುಲ್ಲೆಯಿನತಿಚಪಲಂ ಮಾರುತಂ,ಪುಲ್ಲೆಯಿಂ ಮಾ
ರುತನಿಂದಂ ಬಾಣಮೆಂತುಂ ತ್ವರಿತಗಮನಸಂಯುಕ್ತಮಾ ಪುಲ್ಲೆಯಿಂ ಮಾ
ರುತನಿಂದಂ ಬಾಣದಿಂ ದೃಷ್ಟಿಯೆ ರಯಗತಿ ಸೋಳ್ಪಾಗಳಾ ಪುಲ್ಲೆಯಿಂ ಮಾ
ರುತನಿಂದಂ ಬಾಣದಿಂ ದೃಷ್ಟಿಯಿನತಿಜವಗಂ ರಾಜಿಪಾ ವಾಜಿಯುಗ್ಮಂ ॥೧೦೩॥

---

೧ ದ್ಯೋತಮಿಂತಾಗೆ (ಧಾ, ಕ) ದ್ಯೋತಿ ತಾನಾನ್ನೆ (ಕ) ೨ ಜು (ಧಾ, ರಿ, ಮೈ) ೩ ಬ್ಬ (ರಿ) ೪ ಚಿ (ರಿ)

॥ವ॥ ಅಂತೆಸೆವಪೂರ್ವಗಂಧರ್ವಯುಗಮಂ ಕಾಣ್ಕೆನೀಡಿದನಂತರಮರಸನ ಪ್ರಾಂಗಪ್ರಸನ್ನತೆಯಂ ಪಡೆದು ಮೈಯುರ್ವಿ ಪೊಡಮಟ್ಟು ಸಿಂಧುರಾಜಂ ಸಿಂಧುರಾರೂಢನಾಗಿ ಸಿಂಧುರಾಜ್ಯಕ್ಕೆ ತಳರ್ದನಾಗಳಾ ಜಾತ್ಯಶ್ವಂಗಳನಶ್ವಪರೀಕ್ಷಕರಿಂ ಪರೀಕ್ಷಿಸಿ ತದಕ್ಷೀಣಲಕ್ಷಣಾಕೃತಿಗಳಂ ಲಕ್ಷಿಸಿ ಮಂತ್ರುಲಕ್ಷ್ಯನಭೀಕ್ಷಿಸಿ—

ಆ ವಾಜಿಗಳಂಗಾಕೃತಿ
ಭಾವಮನಸ್ಥಿತಿ ಸುಲಕ್ಷಣಸ್ವರಗತಿ ಜಾ
ತ್ಯಾವಳಿಯೆಂಬಿವನರಸಂ
ಭಾವಿಸಿ ಪೊಸತೆಂದು ಪೊಗಳ್ದು ಮಗುಳ್ದಿಂತೆಂದಂ ॥೧೧೪॥

ದೇವಮಣಿಗೂಡಿ ಜಳಧಿಯೊ
ಳಾ ವಿಬುಧವರಾಶ್ವಮೊಗೆದಗಲ್ದಿರ್ಪು[1]ದ[1]ಮಾ
ದೇವಮಣಿಗೂಡಿ ರಾಜಿಸು
ವೀ ವಿಪುಳತರಾಶ್ವಯುಗಕದೇಂ ಪಾಸಟಿಯೇ ॥೧೧೫॥

॥ವ॥ ಎಂದ ನರೇಂದ್ರನ ಜಾಣ್ನಾತಿಂಗೆ ಪೊಗಳ್ದು ಮಿತವಚನನಿಂತೆಂದಂ—

ಹರಿಗಿಂತಪ್ಪಶ್ವಮುಂಟಾಗಿರೆ ಭರದಿನವಂ ಪರ್ದನ್ನೇಜ಼ರ್ಪನೇ, ಶಂ
ಬರದರ್ಪಧ್ವಂಸಿ ತಾನುಂ ಗಿಳಿಯನಡರ್ವನೇ, ಮೇಘಮಂ ಸಾರ್ವನೇ ಭೂ
ಧರಪಕ್ಷಚ್ಛೇದಿ, ಬೆಳ್ಳಂಚೆಯೊಳೆ ತಳರ್ವನೇ ಬೊಮ್ಮನೀಶಾತ್ಮಜಂ ಕೇ
ಕಿರಥಂ ತಾನಪ್ಪನೇ, ಕಾಳ್ಕಿಗದೆ ಗಮಿಪನೇ ಸಂತತಂ ಗಂಧವಾಹಂ ॥೧೧೬॥

॥ವ॥ ಎಂದ ಮಾತಿಂಗೆ ಸೂಕ್ತಿಸುಧಾರಸರಾಜಹಂಸಂ ಮೆಚ್ಚುತ್ತಿರ್ಪನ್ನೆಗಂ ಯಾಮದ್ವಯಭೇರೀಪ್ರಣಾದಂ ನೆಗಳಲೊಡನರಸನಭವಪದಪೂಜೋತ್ಸುಕತೆಯಂ ಮನದೆಗೊಂಡೋಲಗಮಂ ಪರೆಯಲ್ವೇಳ್ವುದುಮಾಗಳ್ ಘಳಿಲನೇಳ್ದು ತಲೆವಾಗಿ ತತ್ಕಟಾಕ್ಷರುಚಿಸುಧಾರಸಮಂ ಪಾರ್ದು ಸಾರ್ದು ನಿಂದ ರಾಜಹಂಸವೃಂದದಿಂ ಜಯರವಮುಖರಮುಖವಂದಿಸಂದೋಹದಳವಿಗಳಿದ ಕಳಕಳಮನೊಳಕೊಂಡು ಮೊಳಗುವ ಪಟುಪಟಹಶಂಖತಾಳಕಹಳಾಬಹಳನಾದದೇಳ್ಗೆಯಿಂ, ಬಿರಿದನುಗ್ಘಡಿಸಿ ಕರವೆತ್ತಿ ಪೊಗಳ್ವ ಮಾಗಧಪ್ರತಾನದಿಂ ನಿಜರಾಜಸಮಭಿಪ್ರೇಷಿತವಿಪುಳತರಕಾರ್ಯ ವಿಜ್ಞಾಪನಂಗೆಯ್ಯಲ್‌ಸಮಯಂಬಡೆಯದೆ ಸಿಡಿಮಿಡಿಗೊಂಡೊಳಗೊಳಗೆ ಗುಜುಗುಜುಂ

---

೧ ದದ(ರಿ)

ಗೊಂಡು ನಿಲುಬಿ ನಿಂದ ನಿಯೋಗಿನಿವಹದಿಂ, ನೆಗಪಿದ ಪೊನ್ನೊರೆಯ ಸುರಗಿವೆರಸು ಕರಾಬ್ಜಮಂ ಮುಗಿದು ಕರುಣಂಬಡೆದು ನಿಜದೇಶಕ್ಕೆ ಬೀಳ್ಕೊಳಲೆಳಸಿನಿಂದಂಗ ವಂಗಕಳಿಂಗತ್ರಿಲಿಂಗಾದಿ ದೇಶಾಧೀಶ್ವರರಿಂದೊ[೧]ಟ್ಟೋ[೧]ಜೆಯಿಂ ಮುಂಬಱಿದಿಟ್ಟಣಿಸಿ ಪೋಪಾಗಳೆಡೆಯೊಳ್ಪೊಡೆವ ಚಂಡದೌವಾರಿಕರ ದಂಡಪಾತದಿಂ ದಿಂಡುಗೆ[೨]ಡೆ[೨]ದೊ-ಯ್ಯನೆ ತಳರ್ವ ಸಾಮಂತಭೂಮೀಶ್ವರರಿಂದೊತ್ತರಿಸಿ ನಡೆವಾಗಳ್ ಭುಜಭುಜಂಗಳ್ ಪಳಂಚಿ ಕಿಸುಗಣ್ಚಿನೋಳ್ಪ ಮಾಮಸಕದ ವೀರಭಟವರ್ಗದಿಂದರಸನಿತ್ತ ಧನಕನಕವ ಸನಮಣಿಭೂಷಣಂಗಳ ಬಲ್ವೊಱೆಯಂ ಕೊರಲ್ಕುಸಿವಿನಂ ತಲೆಯೊಳ್ಪೊತ್ತುಪೊರಲಾ ಱದೆ ದಡದಡಿಸುತ್ತಮೆಡವೆಗಲ್ಗಂಬಲವೆಗಲ್ಗಂಪಚ್ಚಿ ಪಲ್ಲಟಿಸಿ ತಳೆದು ಮೆಲ್ಲಮೆಲ್ಲನಡಿ ಯಿಡುವ[೩]ರ್ಧಿ[೩]ಜನದಿಮಭಿನವನರ್ತನರಸಾನುಭವಸಮಾಸ್ವಾದ[೪]ಸಂಜನಿತ[೪] ಸುಖಮಂ ನೆನೆನೆನೆದು ಹಾರೈಸಿ ಮಗುಳ್ದುಮಗುಳ್ದೊರ್ವರೊರ್ವರೊಳ್ಪೊಗಳ್ದು ತಳರ್ವ ರಸಿಕ ಜನವಿಸರದಿಂ, ಮತ್ತಂ ಪೆಱನೊಸಲೊಳಿಳಿತರ್ಪ ಬೆಮರಂ ಬೆರಲಿಂ ಬಳಿದೀಡಾಡಿ ಕೆದರ್ದಳಿಕದಳಕಮನುಗುರ್ಗೊನೆಯಿಂ ತಿರ್ದಿ ಸಡಿಲ್ದ ಕಾಂ[೫]ಚಿ[೫] [೬]ಯ[೬] ಸೈತುಮಾಡಿ ಕ[೭]ರ್ಣ[೭]ಪಾಲಿಕೆಯಿಂ ಕರಗಿ ಕೆನೆಗೊಂಡಿಳಿತರ್ಪ ಜವಾದಿಯ ಕೋಳ್ಗೆಸಱಂ ಮಿಸು ನಿಗಾಸೆಯ ಮುಂಜೆರಗಿನೊಳೊರಸಿ ತೊಡೆದೆಡಗೈಯಂ ತನ್ನ ನಚ್ಚಿನ ಮದ್ದಳಿಗನ ಪೆಗಲೊಳಿಳಿಪಿ ಬಿನದಿಸುತಂ ಬಿಂಬಾಧರದ ಕೆಂಬೊಳಪು ಕೆಂಬಟ್ಟೆಯ ಪಸಾಯಮ ನೀಯೆ ತಾಳಮೇಳದ ಕೆಳೆಯರ ಮೇಳಾಪದೊಳ್ ಸೂಳುತ್ತರಂಗುಡುತ್ತಂ ಪದಾಗ್ರ ದೊಳ್ಪಜ್ಜಳಿಪಕಿಱುಗೆಜ್ಜೆಗಳ ಝಣಝಣತ್ಕಾರಂ ಯುವಜನದ ಕಿವಿಯಂ ಜಕ್ಕುಲಿಸಿ ಪಳಂಚೆ ಪಜ್ಜೆಯಿಡುವ ಬಿಜ್ಜೋದರಿಯರಂ ಪಳಿವಚ್ಚರಿಯ ನಚ್ಚಣಿಯರಿಂ, ತುರುಗಿ ನಡೆವಾಗಳ್ ಸೋಲೆವಡೆದಪ್ಪುದೆಂಬ ಭೀತಿಯಿಂ ಪೆಗಲಿಂ ತೆಗೆದು ಬೀಣೆಯಂ ದೃಢ ಮುಳ್[೮]ಷ್ಟಿ[೮]ಯಿಂ ನೆಗಪಿ ಪಿಡಿದಡಿಗೊಳ್ವ ಬಯಕಾಱರ ತೆರಳ್ಕೆಯಿಂ ಹರಿಮಣಿಕುಟ್ಟಿಮ ಸ್ಥಳದ ತಿಳಿಗದಿರಂಜಳಂಗೆತ್ತು ವಾಮಕರದಿಂ ಚೀನಾಂಬರದ ನಿಱಿಯ ಮುಂಜೆಱಗಂ ನಸುನೆಗಪಿ ಕಣ್ದೊಳಲಿಕಾಲಿಕ್ಕುವ ಮುಗ್ಧೆಯರ ಮುಗ್ಧತೆಗೆ ನಸುನಗುತೆ ನಡೆವ ನಾಗ ರಿಕರೊತ್ತೊತ್ತೆಯಿಂ, ಬಳಲ್ಮುಡಿಯೊಳ್[೯]ರ್ಜು[೯]ಂಬಿದರಲ ನಱುಗಂಪಿಂಗೆಱಗಿದೆಳೆ ದುಂಬಿಗಳ ಬಂಬಲಗಱಿಯ ಗಾಳಿಯ ಕೋಳಿಂದೇಳ್ದು ಧೂಳಿಮಸಗುವ ಪುಡಿಗತ್ತು ರಿಯ ಬಿತ್ತರದ ರಜಮೆಂಬ ಮರ್ಬಿನೊಳುರ್ಬಿ ಕಾಳೆಗಂಗೆಯ್ಯಲೆಳಸಿ ನೆಗವ ತಂಗದಿ ರಂತೆ ತುಂಗತರನಿರಂಧ್ರ ಕುಚಯುಗಳಘರ್ಷಣಪರಿತಪ್ತಟೀರಪರಾಗಪಟಲಂ ನೆಗೆ

---

೧ ಟ್ಟ (ರಿ) ೨ ಡ (ಮೈ) ೩ ರ್ತಿ (ರಿ) ರ್ದಿ (ಕ) ೪ ಸಂಗೀತ (ಮೈ, ಮೂ)
೫ ತಿ (ರಿ) ೬ ಯಾ (ಧಾ) ೭ ರ್ನ (ಮೂ, ೮ ಟ್ಟಿ (ರಿ, ಮೂ, ಕ) ೯ ರು (ರಿ).

ತರೆಯುಂ, ಕರಾರವಿಂದದೊಳ್ ತಿರುಂಪುವರವಿಂದದರಲ ಸರಸಪರಿಮಳಮಸಿರ್ಮು ಡಿಪ ಸುಯ್ಯೆಲರ ಸುರಭಿಗೆಳಸಿ ಮೈಯುರ್ವಿ ನೆಗೆವಳಿಕುಳದಂತೆ ಚೂರ್ಣಾಳಕಂ ಕೆದ ರೆಯುಂ, ಜೆಡೆವಾವಿಂಗಗಿದು ಬೆಮರ್ತ ನೊಸಲ್ವೆಱೆಯಮೃತರಸಬಿಂದು ಜಗುಳ್ದಿಳಿದು ನೇಲ್ದ ಪುದೆಂಬಂತಿಂಬುವಡೆದಲುಗುವ ನಾಸಾಗ್ರಮೌಕ್ತಿಕದ ಪೊಳಪನೊಪ್ಪವಿಡುವ ಮಂದಸ್ಮಿತಕಾಂತಿಪೀಯೂಷರಸವಿಸರಂ ತೆರೆ ಮಸಗೆ ಸಿಡಿಲ್ದು ನಿಂದ ತೋಱಪನಿ ಮಾಲೆಯೆನೆ ಮನಂಗೊಂಡ ಕಟ್ಟೆಸಕದ ಬಟ್ಟಮುತ್ತಿನ ಕಂಠಮಾಲೆಯಲೆಯೆ ನೆಲೆ ಮೊಲೆಗಳ್ ಕದಕ್ಕದಿಸೆಯುಂ, ದುಸ್ಪರ್ಶಮಪ್ಪ ಮಾತಂಗಕುಂಭಮಂ ಪಡಿಗೈವ ಕವಿ ಜನದ ದುರುಕ್ತಿಯಂ ಸುಕ್ತಿಜಜಘನಸೂತ್ರಿಕಾಕಲಿತಕ ಕಿಂಕಿಣೀರಣಿತಮಿಷದಿಂ ನಗುವಂತೆಸೆವ ಘನತರನಿತಂಬಬಿಂಬಂ ನಿಜವಿಲೋಕನಕುತೂಹಲಯುವಜನ ಮನೋರಾಜ್ಯಕ್ಷೋಭಮಂ ಸೂಚಿಪ ಕುಲಶೈಲದಂತಡಿಗಡಿಗದಿರುತ್ತಿರೆಯುಂ, ನಿಬಿಡ ಕುಚಮಂಡಳಮಂಡಳೇಶ್ವರರ ಪರಸ್ಪರಸ್ಪರ್ಧೆಯಿನಳರ್ದು ಮಧ್ಯದೇಶಂ ಕಂಪಿಪಂತೆ ಬಡನಡು ಬಳುಂ[೧]ಕೆ[೧]ಯುಂ, ಮಿಡಿವರೆಗಮೆಳಲ್ವನಿಡುಜೆಡೆಯ ಸುಧೆಯಂ ಸೂಸುವ ಮುಗುಳ್ನಗೆಯ, ಸವಿಯಂ ಸೈಗಱೆವ ಮೆಲ್ನುಡಿಯ, ಮಡುಗಟ್ಟಿದ ಮುಖರಸದ ಕಡೆಗೋಡಿವರಿವ ಕಟಾಕ್ಷರುಚಿಯ, ಪೊಗರುಗುವ ಸುಣ್ಗದಂಪಿನ, ಬಿಂಕಂಬೆತ್ತು ಕೊಂಕಿದ ಕು[೨]ಡುವು[೨]ರ್ವಿನ, ತಳತಳಿಸಿ ಪೊಳೆವ ಸುಲಿಪಲ್ಗಳ, ಕೆಂಬೆಳಗನುಗುಳ್ವ ಬಿಂಬಾಧರದ, ಕಕ್ಷಪುಟಮನೊತ್ತರಿಸಿ ಬಳೆದಿಟ್ಟೆಡೆಗೊಂಬ ಬಟ್ಟಬಲ್ಮೊಲೆಯ. ಕಾವನ ಕೊರಲ ಕನಕಚಂಪಕಕುಸುಮದ ತೋಳ್ಮಾಲೆಯಂ ಪಳಿವ ನಳಿತೋಳ್ಗಳ, ತಳಿರನಿಳಿಕೈವಕೈದಳಿರ, ಹರಿಮಧ್ಯಮಂ ಪಳಿವ ಸೆಳೆನಡುವಿನ, ಮದನನ[೩]ಮಾ[೩]ಡು ಪೆಟ್ಟಮಂ ಮನ್ನಣೆಗೆಡೆಸಿ ಕೊರ್ವಿದ ವೃತ್ತೋತ್ತುಂಗಜಘನಸ್ಥಳದ, ಪೊಂಬಾಳೆ ಗಂ[೪]ಬ[೪]ಮಂ ಱೋಡಾಡುವ ನುಣ್ದೊಡೆಯ, ಪೂಗಣೆಯನ ಡೊಣೆಯನಣಕಿಪ ಕಣೆ ಕಾಲ್ಗಳ, ಕೆಂದಾವರೆಯನಂದಂಗೆಡಿಪ ಪದತಳದ ಚೆ[೫]ಲ್ವು[೫]ನಡೆನೋಳ್ಪ ರಾಜ ಸುತರಂ ನಡೆಗೆಡಿಸಿಯುಂ, ಸೋ[೬]ಕ್ಕು[೬]ಜವ್ವನದ ಸೊಬಗಿನ ಸೌಂದರ್ಯ ಮಾಧುರ್ಯಸೌಕುಮಾರ್ಯಂಗಳೊಬ್ಬಳಿಸಿದಂತೆಸೆದೋರಣಂಬೆತ್ತು ಸಾಲ್ವಿಡಿದ ಪರಿಸರದೊಳ್ ಸರಿಸವಾಗಿ ನಡೆವಗಣ್ಯಪಣ್ಯಾಂಗನಾಪ್ರತಾನದಿಂ ರಾಜವೀಥಿ ರಂಜಿಸೆ-ಯುಮಿಂತು ವಿಜೃಂಭಿಸಿ ತನ್ಮಹಾಸ್ಥಾನಮಾಗಳ್ ಪರೆಯಲೊಡನೆ—

---

೧ ಕಿ (ಕ, ಧಾ) ೨ ಡಿವು (ಮೈ, ಧಾ, ಕ) ೩ ಮಂ (ಮೂ) ೪ ಭ (ರಿ, ಮೈ)
೫ ಲ್ವ (ರಿ, ಧಾ) ೬ ಕ್ಕಂ (ಮೈ, ಕ).

ಪದಪಿಂದೇಳ್ತಂದು ಶುದ್ಧಾಂತದೊಳೆ ನೆಲಸಿ ಶುದ್ಧಾಂತರಂಗಂ ವಿಳಾಸಾ
ಸ್ಪದ ಪೂಜಾಗಾರದೊಳ್ ಪೂಜಿಸಿದನಮಮ ಸದ್ಭಕ್ತಿಯಿಂ ಭರ್ಗನಂ ಭಾ
ವದೊಳೆತ್ತಂ ತೀವೆ ತನ್ಮೂರ್ತಿಯ ಕಳೆ ಕಳೆವೆತ್ತಾತ್ಮನೈವೇದ್ಯಮಂ ಮಾ
ಡಿದನಾ ಲಿಂಗಕ್ಕೆ ತಾನೇಂ ಸುಕೃತಿಯೊ ಶಿವಸಿದ್ಧಾಂತದುಗ್ಧಾಬ್ಧಿಚಂದ್ರಂ ॥೧೦೭॥

ತರುಣಾರುಣಭಾಸುರಕಾಂತಿಯುತೇ
ಚರಣಾರುಣಪದ್ಮನತಾರ್ಯಶತೇ
ಶರಣಾವರಣಾನ್ವಿತೆ ದೇವನುತೇ
ಕರುಣಾಭರಣೇ ಜಯ ಶೈಲಸುತೇ ॥೧೦೮॥

ಇದು ವಿನಮದಮರವರಮಕುಟತಟಘಟಿತಮಣಿಗಣಮಹಾಪ್ರಭಾಪಟಲ
ಪರಿವೃತಪರಶಿವಶ್ರೀಪಾದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾ
ಚಂಚಚ್ಚಕೋರಾಯಮಾನಸರಸಜನಮಾನಿತೋಭಯಕವಿತಾ
ವಿಶಾರದ ಶ್ರೀಷಡಕ್ಷರಿದೇವವಿರಚಿತಮಪ್ಪ ರಾಜಶೇಖರ
ವಿಳಾಸವಿಪುಳಪ್ರಬಂಧದೊಳ್ರಾಜಶೇಖರ
ಸಭಾವರ್ಣನಂ ದ್ವಾದಶಾಶ್ವಾಸಂ
ಸಂಪೂರ್ಣಂ

ಮಂಗಳಮಹಾ
ಶ್ರೀ ಶ್ರೀ ಶ್ರೀ

ತ್ರಯೋದಶಾಶ್ವಾಸಂ

ಶ್ರೀಕಲ್ಯಾಣೀವದನಸು
ಧಾಕರವರ್ಧಿತಸುಖಾಮೃತಾಂಬುಧಿಯಭವಂ
ಲೋಕತ್ರಯಾಧಿಪತಿ ಕರು
ಣಾಕರನೆಮಗೀಗೆ ಸೌಖ್ಯಮಂ ಶಿವಲಿಂಗಂ ॥೧॥

॥ವ॥ ಅನಂತರ೧ಮಾ೧ಮಹಾನುಭಾವಂ ಮಿತವಚನಸಮೇತಂ ಶಿವಪ್ರಸಾದಸುಧಾಸ್ವಾದನಂಗೆಯ್ದು ಸಕರ್ಪೂರತಾಂಬೂಲಮುಖಾಂತರ್ವಳಯವಿಳಸಿತನಲ್ಲಿಂದೇಳ್ತಂದು ಮುತ್ತಿನ ಕರುಮಾಡದ ಮುಂದಣ ಮೊಗಸಾಲೆಯ ಪಜ್ಜಳಿಪ ಬಜ್ಜರದ ವೇದಿಕಾಗ್ರದ ಮಣಿಮಯಮೃಗೇಂದ್ರಪೀಠದೊಳ್ ಸಲ್ಲೀಲೆ೨ಯಿಂ೨ ಕುಳ್ಳಿ೩ರ್ದು೩ ಕಟ್ಟಿದಿರೊಳ್ ಕಟ್ಟಿರ್ದ ವಾಜಿಗಳಂ ನೋಡಿ—

ಈ ನವ್ಯವಾಜಿಗಳನಿಂ
ದಾನುಂ ನೀನುಂ ವಿಳಾಸದಿಂದೇಱಿ ಮಹಾ
ಸೇನೆಯೊಡಗೂಡಿ ವಿಹರಿಪ
ಮೀ ನಗರದ ರಾಜವೀಥಿಯೊಳ್ ಸಂಭ್ರಮದಿಂ ॥೨॥

॥ವ॥ ಎಂದತಿಪ್ರೀತಿಯಿಂ ನುಡಿಯೆ ಚತುರಮತಿ ಮಿತವಚನನುಚಿತವಚನಮ್ಜ್ಞನನುಚಿತಮಿದೆಂದು ತನ್ನೊಳ್ಭಾವಿಸಿ ಕಾರ್ಯಮಂ ಬಗೆದಿಂತೆಂದಂ—

ಸರಸಗುಣಹಾರ ವಿನಯಾ
ಭರಣ ವಿವೇಕೈಕನಿಧಿ ಕಳಾನಿಳಯ ದಯಾ
ಕರ ಸತ್ಯಶಾಲಿ ಸುಯಶೋ
ಭರಿತಾಶಾವಳಯ ೪ಶೈ೪ವಶರಧಿಶಶಾಂಕಾ ॥೩॥

---

೧ ಮಹಾ (ಮೂ, ಮೈ); ಮಹಾನುಭಾವ (ಧಾ) ೨ ಯಿಂ (ತಿ) ೩ ರ್ದೋ (ಮೈ)
೪ದು (ಕ) ೪ ಶಿ (ಮೈ)

ಬೆಸಸಿದ ಕಜ್ಜಮಂ ನೆಗಳದುತ್ತರಮಿತ್ತಪನೆಂದು ನಿನ್ನ ಮಾ
ನಸದೊಳಧೀಶ ನೀಂ ಬಗೆಯದಿರ್, ಶಿವಭಕ್ತಜನವ್ರ[೧]ಜಂ[೧] ವಿಜೃಂ
ಭಿಸಿ ನೆಲಸಿರ್ದ ಪಟ್ಟಣಮಿದಿಂತಿದರೊಳ್ ಬಲಗೂಡಿ ಗಾಡಿ ರಂ
ಜಿಸೆ ಪೊಸವಾಜಿಯೇಱಿ ವಿಹರಿಪ್ಪುದು ಬಲ್ಲತನಕ್ಕೆ ತಕ್ಕುದೇ ॥೪॥

॥ವ॥ ಅಂತುಮಲ್ಲದೆಯುಂ—

ಮೊದಲೊಳಭಿನವತುರಂಗಮ
ನೊದವಿದ ಸಹಣಿಗಳಿನ್ನೈದೆ ತಿರ್ದಿಸಿ ಬಸಮಾ
ಡುದನಱಿದೇಱುವುದರಸ
ಗಿದು ವಿಹಿತಂ ವಿಶ್ವವಿಬುಧಜನಮಂದಾ[೨]ರಾ[೨] ॥೫॥

ಏನಾನುಮೆಮ್ಮ ದೆಸೆಯಿಂ
ದೀ ನಗರದ ಭಕ್ತಜನಕೆಡರ್ಬಂದೊಡೆ ಮ
ದ್ಭೂನಾಥಂ ಚೋಳನೃಪಂ
ತಾನೇಂ ಸೈರಿಪನೆ ಶಾರದಾಮಣಿಮುಕುರಾ ॥೬॥

ಸಾಂದ್ರಬಳಾನ್ವಿತಂ ರಥಮನೇಱಿ ವಿಳಾಸದೆ ಬರ್ಪ ಪೊೞ್ತು ಧ
ರ್ಮೇಂದ್ರತನೂಭವಂ ಮಡಿಯೆ ತದ್ರಥಚಕ್ರಕೆ ಸಿಲ್ಕಿ ವತ್ಸಮೊಂ
ದಿಂದ್ರಸಮಾನನಾ ನೃಪತಿ ತತ್ಸುತನಂ ಪಿಡಿದಂತೆ ಕೊಂದನಾ
ಚಂದ್ರಧರಾರ್ಚಕರ್ ಸುತಸಹೋದರರೆಂಬರೆ ಸಾಪರಾಧರಂ ॥೭॥

ಎನಗತ್ಯಂತಪ್ರತಾಪಂಗತುಳಗಜಹಯಾರೋಹಣಾರೂಢಸುಪ್ರಾ
ಢಿನಿಯುಕ್ತಂಗೀ ಹಯಾರೋಹಣದೊಳಿವನಿದೇಂ ಭೀತಿಯಂ ಪೇೞ್ವನೆಂಬೀ
ಮನಮಂ ನೀಂ ಮಾಡದಿರ್ವ್ಯಗ್ರತೆಯನುೞಿದು ಸಂದಿಗ್ಧಕಾರ್ಯಂಗಳಂ ಮೆ
ಲ್ಲನೆ ಮಾೞ್ಪೊಂದಂಗಮೆನ್ನೀ ಬಗೆಗಭಿಮತಮಾಗಿರ್ಪುದೈ ರಾಜಪುತ್ರಾ ॥೮॥

ಕೇಳವತಿಹಿತರ ವಚನಮ
ನಾಳೋಚಿಸದಗ್ರಕಾರ್ಯಮಂ ವ್ಯಗ್ರತೆ[೩]ಯಿಂ
ತಾಳಿ ಕಡು[೩]ಗಜ್ಜಮೆಸೆಪುದ
ನೇಳಿಪುದುರ್ವೀಜನಂ ಜಗನ್ನುತಚರಿತಾ ॥೯॥

---

೧ ಜ (ರಿ) ೨ ರಂ (ಧಾ) ೩ ಯಕಂಡು (ಕ)

ಸಿರಿಯೊಳ್ವರಹಿತಮನನ್ಯ
ತ್ಸರಮತಿಯಂ ವಿದ್ಯೆಯೊಳ್ವಿಭುತ್ವದೊಳೆ ನಯಾ
ಚರಣಮನತಿಶೌರ್ಯದೊಳೊ
ಪ್ಪಿರೆ ವಿನಯಮನಾಳ್ದ ಬಾಳ್ದವಂಗೆಣೆಯುಂಟೇ ॥೧೦॥

ಭಾವಿಯೆನಿಸಿರ್ದುದದು ಪರಿ
ಭಾವಿ[1]ಸೆ ಕಳೆ[1]ಯಲ್ಕೆ ಸಾಧ್ಯಮಾಗದು ಜಗದೊಳ್
ದೇವಂಗಾದೊಡಮೆಂದೆಲೆ
ದೇವ ಬುಧಂ ನೆಗಳಲಕ್ಕುಮೇ ಪೊಲ್ಲದುದಂ ॥೧೧॥

ತುದಿ[2]ಗೆಯ್ದ[2]ದುದಂ ಫಲಮಿ
ಲ್ಲದುದಂ ಪಳಿಗೇಡುಮಾಳ್ಪುದಂ ಪರಸಂತಾ
ಪದಮಂ ಪರಗತಿವಿಲಯಾ
ಸ್ಪದಮಂ ಕಾರ್ಯಮನುದಾರಮತಿ ನೆಗಳ್ದಪನೇ ॥೧೨॥

ಕರಣೀಯಮಿಷ್ಟಕರಣಮ
ಕರಣೀಯಮನಿಷ್ಟ ಕರಣಮೆಂಬೀ ನಯಮಾ
ಚರಣೀಯಮಲ್ಲದುದು ಪರಿ
ಹರಣೀಯಂ ಭೂಮಿಪಂಗಿಳಾಧಿಪತಿಳಕಾ ॥೧೩॥

ಬಿಡದೆಸಪ ಕಜ್ಜಮಾವುದ
ನಡಿಗಡಿಗಾಪ್ತರ್ಕಳೊಳ್ವಿಚಾರಿಸಿ ಮಾಳ್ಪಂ
ಗೆಡರುಂಟೆ ಕಾರ್ಯಸಿದ್ಧಿಗೆ
ತೊಡಂಕು ತೋರ್ಪುದೆ ವಿದಗ್ಧ ಜನವನಚೈತ್ರಾ ॥೧೪॥

ನೆರಪಲ್ ಸಿರಿಯಂ ದುರಿತಮ
ನುರುಪಲ್ ದಶದಿಶೆಯೊಳಿಂದುಕರರುಚಿಯಶಮಂ
ಪರೆಪಲ್ ಪರನೃಪರುಮನೊ
ತ್ತರಿಪಲ್ ಸಾಲ್ವುದು ನಯಜ್ಞಹಿತಮಿತವಚನಂ ॥೧೫॥

---

೧ ಸಿಕಳಿ (ಧಾ, ರಿ, ಕ, ಅ, ಮೂ) ೨ ಗೈದ (ಮೈ)

ಭ್ರಮರಹಿತಾಮೋದಪ್ರದ
ಸುಮನೋಗಣಹೃದ್ಯಮವಿಕಲಸ್ವಸ್ಥಮುದ
ಗ್ರಮನೋಜ್ಞಫಲದಮಖಿಲಾ
ಗಮವಿನುತಂ ನೀತಿಸುರಮಹೀರುಹಮರಸಾ ॥೧೬॥

ತನುಭೃ[೧]ದ್ಗ[೧]ಣದೊಳ್ತೋರ್ಪಿ
ತನುಧನಲೋಭಂಗಳೆಂತುಮೇಂ ತೋರ್ಕುಮೆ ಪೇ
ಳ್ದಿನಗೆ ಭುವನಾಕ್ಷಿಗಡಸುವ
ಘನತಿಮಿರಂ ಭುವನದಕ್ಷಿಯಂ ಮುಸುಕುಗುಮೇ ॥೧೭॥

[೨]ಅ[೨]ದುಕಾ[೩]ರ[೩]ಣದಿಂ ನಿಜಧೈ
ರ್ಯದೆ ಗಣಿಸದೆ ಮುಂದೆ ಬರ್ಪುದಂ, ಬುಧರಲ್ತೆಂ
ಬುದನೆಸಗದೆ ಬೆಳ್ಗಸವಾ
ಳ್ವುದು ಕಜ್ಜಂ, ಸಜ್ಜನಾಬ್ಜವನದಿನ[೪]ನಾಥಾ[೪] ॥೧೮॥

॥ವ॥ ಎಂದವಂ ನುಡಿಯೆ ಮೊಗದೊಳ್ ಮಂದಸ್ಮಿತಂ ಮೋಳೆಯೆ ನರೇಂದ್ರತನಯನಿಂತೆಂದಂ—

ತೀರದ ನೀರದಂ ನೆಗೆದು ಗರ್ಜಿಪುದೆಂದು ಪಯೋಧಿಕೇಳಿಯಂ
ಸಾರ ಮರಾಳನೇನುಳಿದುದೇ, ನವ ಚಂಪಕಗಂಧಭೀತಿಯಿಂ
ಷಾರದೆ ಮಾಣ್ದುದೇ ವನವಿಹಾರಮನಾಱಿಡಿ, ಮು[೫]ಗಿಳ್ಗಳ[೫]ಂಘ್ರಿ[೬]ಯಂ[೬]
ಚಾರಿಪುದೆಂದು ಬಿಟ್ಟುದೆ ಮದದ್ವಿರದಂ ಗಹನಪ್ರಚಾರಮಂ ॥೧೯॥

॥ವ॥ ಅದು ಕಾರಣದಿಂ—

---

೧ ದ್ಗ (ಮೈ, ಮೂ) ೨ ಅ (ಕ) ೩ ರು (ಮೂ) ೪ ಚೈತ್ರನಾಥಾ (ಮೈ) ೫ ಅಲ (ಕ) ೬ ಯ (ಕ)

ಮುಂದೇಂ ಬರ್ಪುದೊ ಹಾನಿಯ
ದೆಂದಳ್ಕಿ ವಿನೋದಕೇಳಿಯಂ ತೊಱೆವಾತಂ
ಪಂದೆ[1]ಯು[1]ವನೆಂಬ ನಿಂದೆಯ
ನ್ನೊಂದುವನಿದು ರಾಜಧರ್ಮ[2]ಮೇ[2]ಬಗೆವಾಗಳ್ ॥೨೦॥

॥ವ॥ ಎಂದು ತಾನೆಂದುದನಪ್ಪುಗೈಯದೆ ನುಡಿದ ನರೇಂದ್ರ[3]ನಂ[3]ದನಂಗೆ ಪತಿ-
ಮೋಹಿನಂದನನಿಂತೆಂದಂ—

ಧರ್ಮಜನಂಬರಧ್ವನಿಯನಾಲಿಸಿ ತಾನುಳಿದಂಬುಪಾನಮಂ
ನಿರ್ಮಳಬುದ್ಧಿ ತನ್ನನುಜರಾಯುಮನಾಗಳೆ ಸತ್ತ್ವಸಂಗದಿಂ
ಕೂರ್ಮೆಯೊಳಲ್ಲಿ ಮೇಣ್ಪಡೆದನಾಪ್ತನಯೋಕ್ತಿಯನೊರ್ಮೆ ಕೇಳ್ದೊಡೇಂ
ಪೆರ್ಮೆಗೆ ಹಾನಿ ಬರ್ಪುದೆ ವಿಚಾರಿಪುದಾತ್ಮಹಿತಾಹಿತಂಗಳಂ ॥೨೧॥

ವಿತತಾಭಿಮಾನ ನೀತಿ
ಕ್ಷತಿಗಂ ಶಿವಭಕ್ತಿಧರ್ಮ ನಿರ್ಮಳ ಕೀರ್ತಿ
ಚ್ಯುತಿಗಧ[4]ಳಟನ[4]ಪ್ಪೊಡಂ ಭೂ
ಪತಿಯಳ್ಕಲ್ವೇಳ್ಕುಮಮಳಗುಣಗಣನಿಳಯಾ ॥೨೨॥

ವಿದಿತನಿಜರೂಪಮಂ ಮುಕು
ರದೊಳೀಕ್ಷಿಪವೋಲ್ ತ್ವದೀಯ ನಯಕೌಶಲಸಂ
ಪದಮನಿದನೆನ್ನೊಳೀಕ್ಷಿಪು
ದಿದು ಯುಕ್ತಂ ನಿನಗೆ ನೀತಿವಿದ್ಯಾಭರ[5]ಣಾ[5] ॥೨೩॥

॥ವ॥ ಎಂದತಿಹಿತಕರಪ್ರಸನ್ನತರಸದರ್ಥಸಮರ್ಥನಪ್ರಸಂಗಮನವಂ ನುಡಿಯ
ಲೊಡನೆ—

ಪುರಹರನಿಟ್ಟ ಪುಲ್ಲಮುಱಿಯಂ ಮುರವೈರಿವಿರಿಂಚಿಮುಖ್ಯನಿ
ರ್ಜರರರದನೆತ್ತಲಾಱದೆ ವಲಂ ಧೃತಿಗುಂದಿದರೆಂದೊಡಾವನಾ
ಪರಮಮಹೇಶಶಾಸನಮನುರ್ವರೆಯೊಳ್ಮಿಗೆ ಮೀರ್ವನಣ್ಣ ಸೈ
ಶಿರೆ ಪೆಱಪಿಂ[6]ಗೆ[6] ಪೋದಪುದೆ ಬರ್ಪ ಶುಭಾಶುಭಮಾರ್ಗಮಾದೊಡಂ ॥೨೪॥

---

೧ ಯಿ (ಮೂ) ೨ ಗೆಮೆ (ಕ); ಮೇಂ (ಮೂ) ೩ ನಾನ((ಧಾ) ೪ ನನ (ಎ, ಕ)
೫ ಣಂ (ದಾ) ೬ ದಿ (ಕ)

॥ವ॥ ಅದಲ್ಲದೆಯುಂ—

ಪೊಸತುದ್ವೇಗಾಶ್ವಮೆಂದೇಱದೊಡೆ ಸಮನಿಕುಂ ವಾಹಕತ್ವಕ್ಕೆ ಭಂಗಂ
ನಿಸದಂ,ವೈಹಾಳಿಯೊಳ್ಕಿಂಕರಶರಣಜನಂ ನೋಯೆ ಕಾಯ್ದಪ್ಪನೆಮ್ಮೀ
ವಸುಧೇಶಂ,ಮಾಣದೆಂದಳ್ಕುವುದನುಚಿತಮೀಶಾಜ್ಞೆಯಂ ಬಲ್ಲನಾರ್ಪ್ಪುಂ
ದೆ ಸಮಂತಂತಾಗೆ ತೋರ್ಪೆಂ ವಿಪುಲಮಹಿಮೆಯಂ ಮುಕ್ತಿಯಂ ಸೂಱೆಗೊಂಬೆಂ ॥೨೫॥

ಬಗೆಗೊಗೆದೆಳ್ತಿಯಂ ಸಲಿಸವೇಳ್ವುದು,ಬೇಡೆನವೇಡ ತಂದೆ, ನೆ
ಟ್ಟಗೆ ಮುಳಿದಪ್ಪನೆಂದೆಣಿಸದಿರ್, ನಿನಗಾದಪರಾಧಮೆನ್ನಧೆಂ
ದಗಣಿತಸಂಭ್ರಮಂ ಮಿಗೆ ತುರಂಗಮಯುಗ್ಮಮನೇಱೆ ನೋಳ್ಪರೊ
ಳ್ಪಿಗಳೆ ಮಹೋತ್ಸವಂ ವಿಹರಿಪಂ ಪುರದೊಳ್ ಪರಮಾನುರಾಗದಿಂ ॥೨೬॥

॥ವ॥ ಎಂದ ರಾಜೇಂದ್ರನುಕ್ತಿಯನೆಂತಾನುಂ ಮನದೆಗೊಂಡು ನಿಜಮಹತ್ವದ-
ರ್ಶನಾರ್ಥಮಿದು ಶಿವಕೃತಮಕ್ಕುಮೆಂದು ನಿರ್ಧರಂಗೈದು[1]—

[2]ಞನಿ[2]ತೊಂದಾಗ್ರಹಮಂ ಮದೀಯ ನಯವಾಕ್ಯೋಲ್ಲಂಘನಂಗೈದು ಮಾ
ಳ್ಪನಿವಂ ನೀತಿವಿದಂ,ನವಾಶ್ವಗತಿಯಿಂದೇನಾನುಮೊಂದಕ್ಕುಮು
ಲ್ತೆ,ನವೀನಂ ಕಡುಗಜ್ಜಮೆಂದೆಣಿಸಿಯುಂ ತಾನಪ್ಪುಕೆಯ್ದಿರ್ದನಾ
ತನ ಮಾತಂ,ಪುದುವಾಳ್ತನಂ ಗಡ ಸಖರ್ಗೆಂತಾದೊಡಂ ಮಿತ್ರರೊಳ್ ॥೨೭॥

॥ವ॥ ಅಂತಿರ್ಪನ್ನೆಗಂ—

ತನುವೆರಡೊಂದುಗೂಡಿ ನಿಜಪಕ್ಷದೊಳಪ್ಪಿ ಮನೋನುರಾಗದಿಂ
ಮನಸಿಜಸೌಖ್ಯಮಂ ಸವಿದು ಸಾರಸತಳ್ಪದೊಳಿರ್ಪ ವೇಳೆಯೊಳ್
ವನರುಹಮಿತ್ರನಸ್ತಗಿರಿಮಸ್ತಕದಲ್ಲಿರೆ ನೋಡಿ ಬಾಡಿ ಬೆ
ಚ್ಚನೆ ಬಿಸುಸುಯ್ದು ಬೇವಸದೆ ಬಿರ್ಚಿದುವಕ್ಕಟ ಜಕ್ಕವಕ್ಕಿಗಳ್ ॥೨೮॥

---

೧ ನಿಂದು (ಮೂ. ೧) ೨ ಞಂ (ಕ).

ಇಟ್ಟಣಿಸುತ್ತ[೧]ಲರ್ದ[೧] [೨]ನೆಯಿದಿಲ[೨]
ನಿಟ್ಟೆಸಳ್ಗಳ್ತಾಗೆ ತಾಳ್ದು ಸಂಕೋಚತೆಯಂ
ನೆಟ್ಟನೆ ನಿಂದವೊಲೆಸೆಗುಂ
ದಿಟ್ಟಿಗೆ ಕೊಳದೊಳಗೆ ಮುಗಿವ ಕಮಳಕದಂಬಂ ॥೨೯॥

ತಲೆವಾಗಿದ ಸರಸಿಜದಿಂ
ದಲರ್ವಂಡೊಕ್ಕುದು,ನಿಜೇಶನಗಲುತ್ತಿರೆ ತ
ನ್ನಳಿನಿ ಮನಸ್ತಾಪದೆ ತಂ
ಬುಲಮಂ ಕೆಲಕುಗುಳ್ವಳೆಂಬುದಂ ಪ್ರಕಟಿಪವೋಲ್ ॥೩೦॥

ಅಪರಗಿರಿಕರಿಯ ಕುಂಭದ
ಲಪ್ಪನದ ಸಿಂಧುರದೊಳರುಣಮಣಿಮುಕುರದೊಳೀ
ನುಪಮೆಗೆ ಬಂದುದೊ ಸಂಧ್ಯಾ
ವಿಪುಳಾರುಣರುಚಿ[೩]ಯು[೩]ಮಹಿಮಕರಮಂಡಲಮುಂ ॥೩೧॥

ಕೊಳದೊಳ್ನಿಂದು ತರತ್ತರಂಗಜಳಮಂ ಮಿಂಡಲ್ಲಿ ನಗ್ನಾಂಗಿ ಪ್ರೊ
ಕ್ಕಳಿನಾದಚ್ಛಲದಿಂ ಕುಮಂತ್ರಜಪಮಂ ತದ್ವೇಷದಿಂ ಮಾಡೆ ಕೋ
ಮಳೆ ಶೂನ್ಯಾಧ್ವಮಳ್ನೈದೆಳ್ದಾಂಟಿ ನಿಜಪಾದಂ ಪೋಗೆ ಮೈಗಂದಿ ಬೀ
ಳ್ದಳಿದಂ ದ್ರಾವಿತಚಂದ್ರಸಾಂದ್ರತರರುಗ್ಬಾಸ್ವತ್ಕರಂ ಭಾಸ್ಕರಂ ॥೩೨॥

ಮೃಡನ ಕಿಱುಜಡೆಯ ಕೆಂಗದಿ
ರಡರ್ದೆಳೆವೆಱ[೪] ಬಳೆದು ನಿಜಕಳಾವಿಭವಮನೀ
ಪೊಡವಿಗ[೫]ಱಿ[೫]ಪಲ್ಕೆ ಬಂದವೊ
ಲು[೬]ಡು[೬]ಪತಿಬಿಂಬಂ ಸರಾಗಮು[೭]ದಯಿ[೭]ಸಿತಾಗಳ್ ॥೩೩॥

ಏನಗಾತ್ಮೇಶ್ವರನೀ[೮]ದಿನೇಶ್ವ[೮]ರನಗಲ್ದೋವೋವೊ ತಾಂ ಪೋಗಿ ಕೆಂ
ಮನೆ ರಾಗಾನ್ವಿತನಪ್ಪುದಂ ವರುಣದಿಗ್ಯೋಷಾಂಗಮಂ,ನೋಡಲಾ
ಱಿನಿದಂ ಕಣ್ಗಳಿನೆಂದು ಪಿಂದಿರು[೯]ಗೆ[೯]ನಿಂದಿಂದ್ರಾಶೆಯೆಂದೆಂಬ ಕಾ
ಮಿನಿಯುದ್ವೇಣಿಯ ಸೂರ್ಯಕಾಂತಿಯೆನಿಸಿತ್ತಿಂದ್ರಾದ್ರಿಯೊಳ್ ಚಂದ್ರಮಂ ॥೩೪॥

---

೧ ಲರ್ವ (ರಿ, ಮೂ) ೨ ನೆಯ್ದಿಲ (ಕ) ೩ ಯ (ರಿ, ಮೂ) ೪ ನೆಯ್ದ (ಕ)
೫ ಱು (ಬ, ಮೂ) ೬ ದು (ಮೂ) ೭ ಡ್ಯೆ (ಕ) ೮ ಶಮೀಶ್ವ (ಮೈ) ೯ ಗೆ (ಮೂ)

ಅಂಬುಜಮುಂ ವಿಯೋಗಿವದನಾಂಬುಜಮುಂ ಕಳಿಗುಂದೆ,ಕೂಡೆ ದು
ಗ್ಧಾಂಬುಧಿಯುಂ ಜನೋತ್ಸವಸುಧಾಂಬುಧಿಯುಂ ನಲವೇರ್ಚೆ, ಕಾಂತ ಕಾಂ
ತಾಂಬಕಕೈರವಂ ಧವಳಕೈರವಮುಂ ನಗೆಯೊಂದೆ ಬಂದುಧಾ
ಲಂಬಿತರಾತ್ರಿರಮ್ಯರಮಣೀಮಣಿಕುಂಡಳಮಿಂದುಮಂಡ[೧]ಲಂ[೧] ॥೩೫॥

ಸಕಳಂಕಕಳಂಕಲಸ
ನ್ಮಕರಾಂಕನನೊಳಗೆ ತಾಳ್ದನೆಂ[೨]ದ[೨]ಂಧಕಮ
ರ್ದಕನ ನೊಸ[೩]ಲ[೩]ಗ್ನಿ ಹಿಮಕರ
ನ ಕರಂ ಮುತ್ತಿದವೊಲೆಸೆದುದುದಯದ ರಾಗಂ ॥೩೬॥

ಮದನನ ಘನಪ್ರತಾಪಮ
ನುದಿತಯಶಃಶ್ರೀಯನಱಿಪುವಂತೆಸೆದುದು ಮುಂ
ನೊದವಿದ ಕೆಂಪು[೪]ಂ ಕ[೪]ಡೆಯೊಳ್
ಪುದಿದೆಳೆವೆಳಗುಂ ವಿಳಾಸದಿಂ ಶ[೫]ಶ[೫]ಧರನಾ ॥೩೭॥

ನಿಜಪಾದದಿಂದೆ ತುಳಿದಂ
ತ್ರಿಜಗದ್ಬಾಧಕನನಂಧಕಾರಾಂಧಕನಂ
ರಜನೀಶ್ವರೇಶ್ವರಂ ಶು
ಕ್ತಿಜಗೌರಂ ಕುವಲಯಾಧಿಪಂ ಹರಿಣಧರಂ ॥೩೮॥

ಶಂಬರಹರನಂಬುಜರಿಪು
ಬಿಂಬಮೆನಿಪ್ಪೊಂದು ಶಾಣೆಯೊಳ್ ಮಸೆಯಲ್ ತ
ನ್ನಂಬಂ ಪತ್ತಿತ್ತದಱ ಕಿ
ಲುಂಬೆನೆ ತನ್ಮಧ್ಯದಂಕಮೇಂ ಸೊಗಯಿಸಿತೋ ॥೩೯॥

ದ್ವಿಜರಾಜಂ ನಿಜಕರದಿಂ
ರಜನಿಯ ತಲೆಯಲ್ಲಿ [೬]ತಳೆ[೬]ದ ತತದೀಧಿತಿಶು
ಕ್ತಿಜದಕ್ಷತೆಯೆನೆ ಚೆಲ್ವಂ
ಭಜಿಸಿದುದಾ ಸುಭಗಭಗಣಮಾ ನಭದೆಡೆಯೊಳ್ ॥೪೦॥

---

೧ ಳಂ (ಧಾ) ೨ ದು (ಕ) ೩ ಲಾ (ಧಾ, ರಿ, ಮೂ) ೪ ಪದೆ (ಕ) ೫ ಶಿ (ಮೈ)
೬ ದಳೆ (ಮೂ), ದಳಿ (ಕ)

ಪರವಧುವೆಂದು ನೋಡದಿನನಿಲ್ಲದಿರುಳ್ಪರಿತಂದು ಪದ್ಮಿನೀ
ತರುಣಿಯ ಕೋರಕಸ್ತನಮನಂಟೆ ಕರಾಗ್ರದೊಳಿಂದುವಲ್ಲಿ ಕಂ
ಡರಜನಿಗಳ್ಕಿ ರಾಗಮಳಿದಾಸ್ಯಕೆ ಬೆಳ್ಪಿರದೇಱೆ ಲಂಚವಿ
ತ್ತುರುತರಮೌಕ್ತಿಕಂಗಳೆನೆ ಕಂಗೊಳಿಸಿರ್ದುವಲ್ತೆ ತಾರೆಗಳ್ ॥೪೧॥

॥ವ॥ ಅನಂತರಂ—

ಅಮರೇಭೇಂದ್ರಪ್ರಕಾಶಂ,ಶಿಖಿಪುರವರಸೌಧಾಗ್ರಮುಕ್ತೌಘತೇಜಂ
ಯುಮ[೧]ಹಾ[೧]ಸದ್ಯೋತಿ ರಾ[೨]ತ್ರಿಂ[೨]ಚರಪತಿ ಸಿತದಂಷ್ಟ್ರಾಂಕುರಂ ಪಾಶಿಹಾರೋ
ರುಮಯೂಖಂ ವಾಯು ಸತ್ಕೇತು ರುಚಿಹರಸುಹೃನ್ಮೌಲಿಹೀರಾಂಶುವೀಶಾ
ನಮಹಾದೇಹದ್ಯುತಿಶ್ರೀ ಬಳೆದು ಬಳಸಿದಂತಾಯ್ತು ಬೆಳ್ದಿಂಗಳ[೩]ತ್ತಂ[೩] ॥೪೨॥

॥ವ॥ ಅಂತುಮಲ್ಲದೆಯುಂ—

ಶರನಿಧಿಯಲ್ಲಿ ವೃಕ್ಷತತಿಯಲ್ಲಿ ಮರುತ್ಪ[೪]ಥ[೪]ದಲ್ಲಿ ಪಂಕಜಾ
ಕರದೆಡೆಯಲ್ಲಿ ತಳ್ತ ತಿಳಿಜೊನ್ನಮನಂಚೆಗಳುನ್ಮದಾಳಿಗಳ್
ಸುರಮುನಿಗಳ್ಗ ಜಂಗಳೊಸೆದೀಂಟಲುಮ್ಮಾರ್ದ್ರರಗಲ್ಮುಳುಂಗಲಾ
ತುರಿಸಿ ಕರಾಗ್ರದಿಂದುಡಿಯ್ಯಲಾಟಿಪುವೆಂದೊಡದೆಂತು ಬಣ್ಣಿಪೆಂ ॥೪೩॥

ಇದು ದಲ್ ಚಂದ್ರಮನಲ್ತು:ನರ್ತಿಪ ಮುನೀಂದ್ರಂ ನಾರದಂ;ನೋಳ್ಪೊಡಿಂ
ತಿದು ತಾಂ ಲಾಂ[೫]ಛ[೫]ನವಲ್ತು:ತತ್ಕರವಿರಾಜದ್ವೀಣೆ;ತಾರಾಳಿಯ
ಲ್ತಿದು:ತತ್ ಸುಸ್ಫಟಿಕಾಕ್ಷಮಾಲೆ;ನಿಬಿಡೋದ್ಯಚ್ಚಂದ್ರಿಕಾಶೋಭೆಯ
ಲ್ತಿದು:ತತ್ಕಂಠವಿಲಂಬಿದೇವಕುಜಪುಷ್ಪಸ್ರಗ್ರಜೋವಿಭ್ರಮಂ ॥೪೪॥

॥ವ॥ ಇಂತೊಗೆತಂದ ಚಂದ್ರಚಂದ್ರಿಕೆಯಿಂ ಸಮನ್ವಿತಮಾದ ಯಾಮಿನೀಪ್ರಥ-
ಮಯಾಮದೊಳ್ಭೂಮಿಪಲಲಾಮಂ ಸೋಮಧರನಂ ಪ್ರೇಮದಿಂದರ್ಚಿಸಿ ತತ್ಪ್ರ-
ಸಾದಸುಧಾ[೬]ಸೇವನಾ[೬]ನಂ[೭]ತರಂ[೭] [೮]ಸಲ[೮]ಕರ್ಪೂರತಾಂಬೂಲಪ್ರದಾನಪುರಸ್ಸರಂ

೧ ಹಾರ (ಕ) ೨ ತ್ರೀ (ಮೈ) ೩ ತ್ತಲ್ (ಮೊ) ೪ ದೆ (ಮೈ) ೫ ಚೆ (ಮೈ)
೬ ಸ್ವಾದನಾ (ಕ, ಬ, ಧಾ, ಮೂ, ಟಿ, ಇ) ೭ ಥರಿಂ (ಕ) ೮ ಸರಸ (ತಿ).

ಪ್ರಧಾನತನೂಜನಂ ತದ್ಗೃಹಕ್ಕೆ ಬೀಳ್ಕೊಟ್ಟು ಸರ್ವಮಂಗಳಾಸಮನ್ವಿತನಮಳ ಕನಕಪರ್ಯಂಕಮೃದುಳತಳ್ಪಸ್ಥಳದೊಳ್ ತದ್ರತಾಂತಸಂಜಾತಪರವಶಪ್ರಭೂತ ಪರಮ ಸುಖನಿದ್ರಾನುಭವದೊಳಿರ್ಪನ್ನೆಗಂ—

ಇದೆ ಪದ್ಮಾಮೋದಮಂ ತಾಳ್ದೊಲೆದು ಸುಳಿವ ಮಂದಾನಿಲಂ, ಕಾಂತಿಗುಂದು
ತ್ತಿದೆ ನಕ್ಷತ್ರಾಳಿ, ಶಂಖಧ್ವನಿಯಿದೆ, ಶಿವಗೇಹಂಗಳೊಳ್ಕೆಂಪು ಮೂಡು
ತ್ತಿದೆ, ಪೂರ್ವಾದ್ರೀಂದ್ರದೊಳ್ಚಂದ್ರಿಕೆ ಕಳೆಗಳೆದೀಗಳ್ಪಡಂ ಮೆಟ್ಟಿ ಪೋಗು
ತ್ತಿದೆ, ತಳ್ವೇಕೀಗಳೊಲ್ದುಪ್ಪವಡಿಸು ಜಗತೀಮಾನಿನೀಜೀವಿತೇಶಾ ||೪೫||

||ವ|| ಎಂದುಪ್ಪವಡಿಸುವಂ ಪಾಡುವ ರಾಗಾಧರೆಯರ ರಾಗರಸಪೂರಂ ಮೊಱೆದಪ್ಪಿ ಮೇಲ್ವರಿಯೆ ಮೆಲ್ಲನೆೞ್ವಂತೆ ಹರಸ್ಮರಣಪೂರ್ವಕಂ ಕನತ್ಕನಕಪರ್ಯಂಕಮೃದುಳ ಶಯ್ಯಾತಳದಿನರಸಿಪೆರಸೆೞ್ದು ತತ್ಪ್ರದರ್ಶಿತಾದರ್ಶದೊಳ್ ನಿಜಮುಖಾವಲೋಕ-ನಂಗೈದನಂತರಂ, ಮರಂದದೊಳ್ಮುಳುಂಗುವ ಮಧುಕರನಂತೆ ಪರಿಮಳೋದಕದಿಂ ಜಳಕಂಬೊಕ್ಕು, ಶಾರದಾಭ್ರಂ ತಳ್ತ ಶಶಾಂಕನೆನಿಸಿ ಬೆಳ್ವಟ್ಟೆಯಂ ಪದೆದುಟ್ಟು, ಶಶಿಕಳೆಯಂ ತುಳಿವ ಕೆಂದಾವರೆಯೆನಿಸಿ ಪದತಳದಿಂ ಪಳಿಕುವಾವುಗೆಗಳಂ ಮೆಟ್ಟಿ, ಪಾಲ್ಗಡಲ ಪೆರ್ದೆಱೆಯೊಳ್ಪುಗುವ ಮರಾಳನಂತೆ ಶಶಿಕಾಂತರಚಿತಮಾದ ಪೂಜಾ-ಗಾರಮಂ ಪೊಕ್ಕು, ನಿಂದು ನಿರೀಕ್ಷಿಪಾಗಳ್ಕಣ್ಗೆ ಕೌತುಕಮನಮರ್ಚೆ ಥಳಥಳಿಸಿ ಪೊಳೆದು ಬಳಸಿಬಳೆದು ಬಳ್ಳಿವೆಳಗಂ ಕಱೆವೆಳೆಮುತ್ತಿನ ಮೇಲ್ಕಟ್ಟಿನ ಕೆಳಗಳ ವಡಿಸಿದ ಮಿಸುನಿವೆಸದೆಸಕದ ಪೊಂದಾವರೆಯ ಸಾಲ್ಗಳ ಪರಿಸರದೊಳೆಲೆವಿಟ್ಟ ಮಣಿಮಂಜರಿಯಜ್ಜಕುಳಜ್ಜಗಳ, ಬಳಸಿ ತೊನೆವ ಪಸುರ್ವರಲ ಲಂಬಣಮಾಲೆಯ, ಕೆಲಗೆಲದೊಳ್ಕಟ್ಟಿಬಿಟ್ಟ ಕುಸುಮಮಾಲಿಕೆಯ ಪಜ್ಜಳಿಪಬಜ್ಜರದ ಕುಟ್ಟಿ-ಮಸ್ಥಳದ ಕರ್ಪೂರರಜದ ವೇದಿಕೆಯರಲಪರಾಗದ ಜಳೆಯದ ಮೃಗಮದದಸಾರ ಣೆಯೊಳ್ಕೈಗೈದ ಮುತ್ತಿನ ರಂಗವಲ್ಲಿಯ ಚೌಕದೊಳ್ಬಾಸಣಿಸಿ ಮಡಗಿದ ಸರಸ ಸುರಭಿಸಲಿಲಸಂಭೃತಸ್ವರ್ಣಕುಂಭಂಗಳ, ಪೊಂಬಜಿಯಾಣದೊಳಿಪಿದ ಮಿಸುನಿ-

೧ ಶಂ (ಕ) ೨ ಳಿದೆ (ಕ) ೩ ದೆ (ಮೈ) ೪ ಂದು (ಕ); ಚ್ಚು (ಮೈ) ೫ ಲ (ಮೈ, ಮೂ) ೬ ರ್ದ ಬ (ಮೂ) ೭ ಳಿ (ಮೈ, ಬ) ೮ ಜ್ಜು (ಬ) ೯ ಳ್ಕೆಯ್ಗೆಯ್ದು.

ವಟ್ಟಲ್ಗಳ, ತರಂಬಿಡಿದೊಪ್ಪುವ ಪೊನ್ನಗಿ[1]ಣ್ಣಿ[1]ಲ್ಗಳ [2]ಘುಸೃ[2]ಣರಸಂ ಮಿಸುಪಶುಕ್ತಿಗಳ, ಚಂದನರಸಂದೀವಿದ ಶಂಖಪಾತ್ರಂಗಳ, ಥಳಥಳಿಪ ಮಣಿದೀಪಂಗಳ, ಪೊಱಗೆ ಚೆಲ್ಲಿದ ಕಸ್ತೂರಿಯ ರಜಕ್ಕೆ ಪರಿಮರಿಗೊಂಬ ಮದಾಳಿಮಾಳಿಕೆ ಒಳಗೆ ಪುಗದಂತೆ, ನೇಮಿಸಿದ ಚಂಪಕಮುಕು[3]ಲ[3]ದಾಮದ ಬಾಗಿಲ್ವಾಡದ ಬಗೆಗೊಳಿಪಧೂಪಾಮೋದದೊಳ್ಪೊಱ[3]ದ ದವನದ ಸೀಗುಱಿ[3]ಯಂ ಪೊಂಬಾಳೆಯ ಚಾಮರಮಂ ಪುಂಡರೀಕಾತಪತ್ರಮಂ ತಳಿರ ತಾಲವೃಂತಮನರಲ ಕರಂಡಕಂಗಳಂ [4]ಕೆಲಕೆಲ[4]ದೊಳ್ಪಿಡಿದು ನಿಂದ ಯಂತ್ರಪುತ್ರಿಕೆಗಳ, ಸಡಗರಿಪ ವಿನಿಯೋಗದ ಮಡದಿಯರ ಪಿರಿಯ ಸಿರಿ ಕಮನೀಯಮಾಗೆ ಮನದೊಳುತ್ಸವಿಸಿ ನಡೆತಂದರ್ಚನೋಚಿತಾಸನದೊಳುತ್ತರಾಭಿಮುಖಂ ಪ್ರಸನ್ನಮುಖಂ ಪದ್ಮಾಸನಮನವ[5]ಷ್ಟಂ[5]ಭಿಸಿ ರುಜುಭಾವದಿಂ ಕುಳ್ಳಿರ್ದು—

ಘನಸದ್ಯೋಜಾತಮುಖ್ಯಪ್ರಭವಮಹಿಮುಖೋತ್ಪನ್ನಸಂಪನ್ನಿವೃತ್ಯಾ
ದಿ ನಿಯುಕ್ತೋತ್ಪತ್ತಿಭಾಸ್ವದ್ಗುಣಯುತಕಪಿಲಾದ್ಯಪ್ರಭೂತಾವನೀಪಾ
ವನರೂಪಶ್ರೀವಿಭೂತಿಪ್ರಭೃತಿಯನುರೆ ಪತ್ಪೂರ್ವಕಂ ಲೇಪನಂಗೈ
ದು ನಿತಾಂತಂ ತತ್ತ್ರಿಪುಂಡ್ರಂ ತೊಳಗೆ ತಳೆದು ವಿಧ್ಯುಕ್ತಮಂತ್ರಂಗಳಿಂದಂ ॥೪೬॥

ಶಿವನೇತ್ರಾಂಭೋಜಮಂ ಪೂಜಿಸಿ ಸದಮಳರುದ್ರಾಕ್ಷಮಂ ಭಕ್ತಿಯಿಂದು
ಕ್ತವಿಧಾನಂದಪ್ಪದಾ ತಾಣದೊಳೆ ಗಣನೆಯಂ ಮೀಱದೋರಂತೆ ತಾಳ್ದೊ
ಪ್ಪುವ ಹೃತ್ಪಂಕೇಜದೊಳ್ಧ್ಯಾನಿಸಿದನಿನಘನದ್ಯೋತಿ[6]ಯಂ[6]ಸಾಂಬನಂ ಶಂ
ಭುವನಿಂದ್ವರ್ಧಾಂಕಕೋಟೀರನನನಘನಸ್ನಾನಂದದಿಂ ತನ್ನೃಪಾ[7]ಲಂ[7] ॥೪೭॥

॥ವ॥ ಅಂತು ಜಾನಿಸಿ ಜಲಕ್ಕನೆ ತೊಳಪ ಮೂರ್ತಿಯನೊಳಗೆ ಕಂಡು ಕರಣಂಗಳ್ಕಳೆಯೇಱೆ ಮಾನವೇಶ್ವರಂ ಮಾನಸಪೂಜೆಯಂ ರಚಿಸಿ ಬಾಹ್ಯಪೂಜೆಗೆ ಮನಂದಂದು ನಿಜೇಷ್ಟಲಿಂಗಮಂ ಕರಾಬ್ಜಪೀಠದೊಳ್ನೆಲೆಗೊಳಿಸಿ ನಿರ್ನಿಮೇಷಾಕ್ಷಿಯಿಂ ನಿರೀಕ್ಷಿಸಿ—

೧ ಣಿ (ಬ, ಧಾ) ೨ ಘುಸಘುಸೃಣ (ಬ) ೩ ಳ (ಧಾ, ಬ, ಕ) ೪ ಕೆಲಗೆಲ (ಧಾ, ಕ); ಕೆಲ (ಮೈ) ೫ ಟ್ಟಂ (ಕ) ೬ ಯ (ಮೂ) ೭ ಳಂ (ಮೈ, ಮೂ, ಧಾ).

ಹೃದಯದೊಳೆ ಜಾನಿಸಿದ ಪರಿ
ಜದು ನಿಜಲಿಂಗದೊಳಭಿನ್ನಮೆನಿಸಿರೆ ಕಂಡೇಂ
ಮುದವಾಂತನೊ ನರಪತಿ, ಬಗೆ
ಗೊದವಿದುದದು ತೋಱೆ ಪೊಱಗೆ ಸುಖಿಸದರೊಳರೇ ॥೪೮॥

ಇದು ಮುನಿಗಳ ಮನದೊಳಬೆಳ
ಗಿದು ವಿಧಿವಿಷ್ಣುಗಳ ವಾದಮಂ ಮಾಣಿಸಿದ
ಗ್ಗದ ಪರಬೊಮ್ಮಂ ತಾನಿಂ
ತಿದು ಮೋಕ್ಷಾಮಳಫಳಪ್ರದಂ ಸುರಭೂಜಂ ॥೪೯॥

॥ವ॥ ಎಂದು ಕಂ[೧]ಣ್ದೇ[೧]ವಿ ನೋಡಿ ಮನಂ[೨]ದೀ[೨]ವಿ ನೆನೆದು ಭಾವಂ[೩]ದೀ[೩]ವಿ ಭಾವಿಸಿ ಮತ್ತೆ ಮತ್ತೆ ಮಾಣದೆ—

ಸುರಿವ ಮುದಶ್ರುವೆ ಚಳೆಯಂ
ಶರೀರದೊಳ್ಮೊಳೆವ ಪುಳಕಮೇ ಗುಡಿ ಲಾಸ್ಯಂ
ಕರಕಂಪಂ ಗದ್ಗದರುತಿ
ವರವಾದ್ಯಮದಾಗೆ ಶಿವನನವನಿದಿರ್ಗೊಂಡಂ ॥೫೦॥

॥ವ॥ ಅಂತಿದಿರ್ಗೊಂಡು—

ಶ್ರುತಿಸತಿಯ ಶಿರೋಮಣಿ, ಯತಿ
ಪತಿಗಳ ಹೃದಯಾಬ್ಜದಿವ್ಯದಿನಮಣಿ, ಸತಸಂ
ತತಿಚಿಂತಾಮಣಿ, ಭುವನ
ಸ್ತುತಲಿಂಗಂ ತಾನಿದೆಂದು ಪೊಗಳ್ದಂ ಭೂಪಂ ॥೫೧॥

॥ವ॥ ನಿ[೪]ರ್ವ್ಯಾಜ[೪]ಭಕ್ತಿ[೫]ಯಿ[೫]ನಂತು ಪೊಗಳ್ದನಂತರಂ—

೧ ಣ್ತೇ (ಮೈ, ಕ, ಧಾ) ೨ ತೀ (ಮೈ, ಕ, ಧಾ) ೩ ತೀ (ಮೈ, ಕ, ಧಾ) ೪ ರ್ವ್ಯಾಜ (ಕ), ರ್ವ್ಯಾಜಿ (ಧಾ) ೫ ಯಿಂ (ಮೈ),

॥ಲಲಿತ ರಗಳೆ॥ ಸುಧೆವದಧಿಘೃತಂಮಧುಸದೃಕ್ಷುವರಸಂಗಳಿಂ
ಮಧುರತರಭಸಿತಮಿಶ್ರಿತಸಿತಜಳಂಗಳಿಂ
ಹಿಮವಿಮಳಮಳಯಜಸುಗಂಧಾನುಲೇಪದಿಂ
ಕಮಳರಿಪುಧವಳಕಳಮಾಕ್ಷತಕಳಾಪದಿಂ
ಪರಿಮಳಮಿಳಿತದಳಿತನಳಿನಕುಮುದಂಗಳಿಂ
ಸರಸಚಂಪಕವಕುಳತಿಳಕಕುಸುಮಂಗಳಿಂ
ದವನಮರುವಕಬಿಲ್ವಪಲ್ಲವಸ್ತೋಮದಿಂ
ಕಮನಘೃತಸಹಿತಗುಗ್ಗುಳಧೂಪಧೂಮದಿಂ
ಪ್ರಚುರಶುಚಿರುಚಿರರುಚಿಮಣಿದೀಪಮಾಲೆಯಿಂ
ರಚಿತರುಚಿನಿಚಿತಶುಚಿಸಾಜ್ಯಭೋಜ್ಯಾಳಿಯಿಂ
ನವನಾರಿಕೇಳಕದಳೀಫಳಪ್ರಸರದಿಂ
ವಿವಿಧತರಸುರಭಿರಸವೀಟಿಕಾವಿಸರದಿಂ
ಮದನಮದಮರ್ದಿಯಂ ಸದಮಳಕಪರ್ದಿಯಂ
ಕರಿದನುಜಭಂಗನಂ ಕರುಣಾಂತರಂಗನಂ
ಶ್ರುತಿನುತಚರಿತ್ರನಂ ವಿತತಶುಭಗಾತ್ರನಂ
ಗಿರಿಸುತಾಕಾಂತನಂ ಪರಿಹೃತಕೃತಾಂತನಂ
ಸಾರಮಹಿಮಾಕರಂ ವೈರಿಜನಭೀಕರಂ
ಭಾಜಿತದಿನಾಧಿಪಂ ರಾಜಿತಜನಾಧಿಪಂ
ರಾಜಿಸುತೆ ನಲ್ಮೆಯಿಂ ಪೂಜಿಸಿದನೊಲ್ಮೆಯಿಂ

॥ವ॥ ಅನಂತರಂ ನುತಿಸಲೆಂದು ಮನಂದಂದು—

ಜಯಜಯ ದೇವದೇವ ಪುರಶಾಸನಶಾಸನಶಾಸನೈಕಚಿ
ನ್ಮಯ ಮಯನುತ್ಯಸಂಪದ ಸಮಾ೧ನ೧ಸಮಾನ ಸಮಾನತಾಂಘ್ರಿಸ
ನ್ಮಯ ನಯನತ್ರಯಾಂಚಿತವಪುಷ್ಕರ ಪುಷ್ಕರ ಪುಷ್ಕರಾಂಕ ನಿ
ರ್ಭಯ ಲಯಕಾಲ ಸಾಯುಧಕರಾಲ ಕರಾಲ ಕರಾಲಸದ್ಭುಜಾ ॥೫೨॥

ಪುರಹರ ದಿವ್ಯಭವ್ಯಜನಪೂಜಿತರಾಜಿತಪಾದ ವೇದಭಾ
ಸುರತುರಗಾಂಗಸಂಗತ ವಿಚಿತ್ರಚರಿತ್ರ ಪವಿತ್ರಗಾತ್ರ ನಿ
ರ್ಜರಪರಭಂಗ ತುಂಗಮಹಿಮಾಕರಭೀಕರಮಿತ್ರಪುತ್ರಸಂ
ಹರ ಸುರನುತ್ಯ ನಿತ್ಯಜಯ ಕಿಂಕರಶಂಕರ ಚಂದ್ರಶೇಖರಾ ॥೫೩॥

---

೧ ಸ (ಬ)

ಅಂಬರಶಿರೋರುಹದಿಗಂಬರರಮಾವರಕಳಂಬರವಿಜಾತಹರತುಂಬುರಸುಗೀತಾಡಂ
ಬರಗಣವ್ರಜಕುಟುಂಬಜಳಜಾತಸಖಬಿಂಬಗಸುಧಾಮಯುಕದಂಬಕರಜಾಲಾಲಂಬನ
ನಿಜಾಂಗಧೃತಕಂಬಲಧನಂಜಯ ಮದಂಬಕಮಹಾಘನನಿತಂಬಗಿರಿಜಾತಾ ಚುಂಬನ
ರಸಜ್ಞ ಜಯ ಶಂಬರಹರಾಹಿತಶತಾಂಬಕಸುತಸ್ತುತಚಿದಂಬರದಿನೇಶಾ ॥೫೪॥

॥ವ॥ ಸಕಳಗಣಸಂ[೧]ದೋ[೧]ಹನಂದಿತನಂದೀಶ್ವರಮುಕುಂದಹಸ್ತಾಹತಪಿತತಮೃದು ಮೃದಂಗಮಂಗಳರವ ಶೃಂಗಾರರಸತರಂಗಿತಸುರಾಂಗನಾಸಂಗೀತಸಂಗತರಂಗಸ್ಥಳಕೃತ ವಿತತ ಪಟುನಟನ ವಿಘಟಿತ ಜಟಾಪಟಲಗಳಿತ ಗಂಗಾತರಂಗಸೀಕರನಿಕರ ಸಿಮಿಸಿಮಿತ ನಿಟಿಲ ತಟಪಟುನಯನ ಶಿಖಿ ಶಿಖೋ[೨]ದ್ದಾ[೨]ಮಧೂಮ ರೇಖಾರಚಿತವಿಧುಂತುದ-ಭ್ರಾಂತಿಪರಿಸ್ವಿನ್ನಶಶಿಶಕಲಗಳದಮೃತರಸವಿಸರಕಣ[೩]ಗ[೩]ಣಭಗಣ ಭಾಸುರವದನವಿಧು ಮಂಡಲಮಂಡಿತರದನರುಚಿನಿಚಯಸಾಂದ್ರಚಂದ್ರಿಕಾದರದಳಿತ ಕರ್ಣಪೂರಕಲ್ಹಾರ ಕುಸುಮಸಮುದಂಚಚ್ಚಂಚರೀಕಮೃದುಳರವಮಿಳಿತಕರ್ಣಧೃತ ಕಂಬಳಾಶ್ವತರ ಸರಸ ಸಂಗೀತಾಕರ್ಣನಕೌತುಕಾಂತರಂಗ ಕರಕುರಂಗತುಂಗಶೃಂಗ್ರಗಾಘರ್ಷಣಚಕಿತನಿಜಕರ-ಕಟಕೋತ್ಪಣಿತ ಫಣಿಫಣಾಮಣಿಘೃಣಿಗಣಾರುಣಿತನಿಜಭುಜಾಲಂಬಿತಗಜದನುಜಾಜಿ-ನಾಂಬರ ವಿಕಟತಾಂಡವಾಡಂಬರದೇವ ಜಯಜಯಾ—

[೪]ಇಂತು[೪] ಸಾಹಿತ್ಯಸರ್ವಜ್ಞಂ ಸರ್ವಜ್ಞನಂ ನು[೫]ತಿ[೫]ಸಿ ಯಂತ್ರವಾಹಕಂಗೆ [೬]ಮಂ[೬]ತ್ರಪುಷ್ಪಮನಿತ್ತು ನಿರ್ವ್ಯಾಜಭಕ್ತಿಯಿಂ ಪ್ರದಕ್ಷಿಣಂಗೆಯ್ದು ಪೊಡಮಟ್ಟು ಸಂದಣಿಪ ಸಾತ್ವಿಕಂಗಳಿಂ ಕಂಗೊಳಿಸಿ ಪುರುಷಪುಂಗವಂ ಪುಂಗವಧ್ವಜಂಗಾತ್ಮಾ-ರ್ಪಣಂಗೆಯ್ದಿನಿಸಾನುಂ ಪೊಳ್ತನಿಮಿಷಾಕ್ಷಿಯಿಂ ನಿರೀಕ್ಷಿಸಿ—

---

೧ ದ್ಯೋ (ರಿ) ೨ ದ್ದಾ (ಮೈ, ಮೂ, ಕ) ೩ ರ (ಕ) ೪ ಎಂದು ಇಂತು (ಮೈ, ಮೂ)
೫ ತಿಯಿ (ಬ, ಮೂ) ೬ ಸುಮಂ (ಧಾ).

ಪಳುಕುಗೊಡದೊಳಗೆ ಪೊಱಗು
ಜ್ವಳಿಪಂತಜ್ಯೋತಿಯಂತಿರೊಳಗಂ ಪೊಱಗಂ
ಬೆಳಪ ಮನೋಮಧ್ಯಸಮು
ಜ್ವಳಲಿಂಗಮನರಸನಳ್ಕಱಿಂ ಜಾನಿಸಿದಂ ॥೫೫॥

ಅಣಿಯರಮಭವನ ಸುಗುಣಮ
ನೆಣಿಪಂತಿರೆ ನೆಚ್ಚಿ ಮೆಚ್ಚಿ ತನ್ಮಹಿಮೆಗಳಂ
ಗುಣಿಪಂತಿರೆ ಜನಪಾಲಾ
ಗ್ರಣಿ ಪಂಚಾಕ್ಷರಮನಮಮ ಜಪಿಸಿದನಾಗಳ್ ॥೫೬॥

॥ವ॥ ಇಂತು ಪೂಜಾಜಪಾದಿಗಳಂ ಸಾಂಗಮೆನೆ ರಚಿಸಿ ಮತ್ತಮಿರದೆ—

[೧]ಷಡಕ್ಷರಾತ್ಮಕಂ ಷಡೂರ್ಮಿವರ್ಜಿತಂ ಷಡಂಗಗಂ
ಷಡಕ್ಷರಪ್ರಭಾವಸದ್ಗುಣಂ ಷಡಧ್ವವಲ್ಲಭಂ
ಷಡಕ್ಷ[೨]ರಾ[೨]ಗಸಾಕ್ಷಿಣಂ ಷಡಬ್ಜಕರ್ಣಿಕಾಸನಂ
ಷಡಕ್ಷರಪ್ರ[೩]ಭುಂ[೩] ಶಿವಂ ಭವಂತಮನ್ವಹಂ ಭಜೇ ॥೫೭॥

ನಿತ್ಯಾನಂದಂ ನಿಯತವರದಂ ನಿ[೪]ಷ್ಕ[೪]ಳಂ ನೀಲಕಂಠಂ
ಸತ್ಯಾರಾಮಂ ಸರಸಹೃದಯಂ ಸದ್ಘನಜ್ಯೋತಿರಂಗಂ
ಶ್ರುತ್ಯಾರೂಢಂ ಶುಭಗುಣಯುತಂ ಶುದ್ಧಸಿದ್ಧಾಂತಸಾರಂ
ಭೃತ್ಯಾಧಾರಂ ಭುವನಶರಣಂ ತ್ವಾಂ ಶರಣ್ಯಂ ಪ್ರಪ[೫]ದ್ಯೇ[೫] ॥೫೮॥

ಮನೋಜಯ ಮಹಾಯೋಗೋ
ರಾಜಾಂಕೋ ಮದ ಸುಪ್ರಿಯಃ ॥೫೯॥*

---

೧ ಪಂಚಚಾಮರ (ಬ) ೨ ರಾಂ (ಧಾ) ೩ (ಭು) (ಮೂ) ೪ ನಿಃಕ (ಮೈ) ೫ ಧ್ಯೇ (ಮೈ)
* ಇವೆರಡೂ ಚರಣಗಳು ಮೈ, ಬ ಪ್ರತಿಗಳಲ್ಲಿ ಪುನಃ ಬಂದಿವೆ.

॥ವ॥ ಎಂದು ಪೊಗಳ್ದು ಶರಣ್ಬೊಕ್ಕು ತ[೧]ತ್ವಾ[೧]ದಾಂಬುಪ್ರಸಾ[೨]ದ[೨] [೩]ಸೇ[೩]ವನಂ [೪]ಗೈದು[೪] ಸಕಲಮಾಹೇಶ್ವರರಂ ಧನಕನಕಸುವಸನಮಣಿಭೂಷಣಾದಿಗಳಿಂ ತುಷ್ಟಿವಡಿಸಿ ಪೂಜಿಸಿ ತತ್ಪ್ರಸನ್ನತೆಯಂ ಪಡೆದನಂತರಂ ನೈಪಥ್ಯನಿಕೇತನಕ್ಕೆ ನಡೆತಂದಿಕ್ಕಿದ ಕನಕಪರ್ಯಂಕಧವಳತಳ್ಪಮನಳಂಕರಿಸಿ ಸುಗುಣಾಲಂಕಾರನಲಂಕಾರಮಂ ತಳೆಯಲುಜ್ಜುಗಿಸಿರ್ಪಿನಮೊರ್ವನಲಂಕರಣಚ[೫]ತು[೫]ರಂ ಬಂದು, ಮುಖಕಮಳ[೬]ಕ್ಕೆ[೬]ಳೆವೆಣ್ಗಳ ದಿಟ್ಟಿ ತಾಗದಂತೆ ರಕ್ಕೆಗಿಡುವವೋಲ್ ವಜ್ರಮಯಮಕುಟಮನಮರ್ಚಿಯುಂ, ಮೊಗಸಿರಿಯನಾಲಿಂಗಿಸಿದೆಳವೆಱೆಯೆನಿಸಿ ಸಿತಭಸಿತತಿಳಕಮಂ ಪಣೆಯೊಳಳವಡಿಸಿಯುಂ, ಕಟಾಕ್ಷರುಚಿಲತೆಗೆ ಮುಗುಳಮಂಜರಿಯಂ ಪಡೆ[೭]ವ[೭]ಂತೆ ಮೌಕ್ತಿಕಚತುಷ್ಕಮಂಡಿತಕರ್ಣಾಭರಣಮಂ ಧರಿಸಿಯುಂ, ಹೃದಯಮಧ್ಯದೊಳಿರ್ಪ ಮದನಹರನಂ ಮಲ್ಲಿಗೆಯ ಮಾಲೆಯಿಂದರ್ಚಿಪಂತೆ ಪೇರುರದೊಳ್[೮]ತೋರ[೮]ಹಾರಮಂ ಕೆಳೆಗೊಳಿಸಿಯುಂ, ಮಂದಾಕಿನಿಯ ಡಿಂಡೀರಪಿ[೯]ಡಂ[೯]ಬಳಸಿದೈರಾವತಕರಿಕರಾಗ್ರದ ಸಿರಿಯಂ ಕೈಗೊಳಿಸಿ ಮುಂಗೈಯೊಳ್ಮುತ್ತಿನ ಕಂಕಣಮನಿಕ್ಕಿಯುಂ, ಫುಲ್ಲಶರನ ಪಲ್ಲವಶರಕ್ಕೆ ಕೆಂಗಱಿಗಟ್ಟಿದಂತೆ ಕೆಂಬೆಳಗಂ ಕಱೆವ ಕೆಂಬೆರಲುಂಗುರಮನಂಗುಲಿಯೊಳ್ತೊಡರ್ಚಿಯುಂ, ತನುರುಚಿಯಂ ಪಡೆಯಲೆಳಸಿ ತರಣಿಕಿರಣಮಪ್ಪಿದಂದಮಂ ನಿರವಿಸಿ ಕನಕಕವಚಮಂ [೧೦]ತುಡಿಯಿಸಿ[೧೦]ಯುಂ, ನಳಿನನಾಳಮಂ ಬಳಸಿ ತಳ್ತಳಿಮಾಲೆಯ ಲೀಲೆಯನೊಳಕೈಸಿ ನೀಲರತ್ನದ ಕಡೆಯಮಂ ಪದಾಗ್ರದೊಳಂದಂಗೊಳಿಸಿಯುಮ್ಮತಿಸಂತಸದಿನಿಂತು ಕಂತುವಂ ಪಸದನಂಗೊಳಿಪ ವಸಂತನಂತವಂ ಪಸದನಂಗೊಳಿಸಲೊಡನೆ—

ತೊಳಗಿದನಿಂದ್ರನಂದನನ ಮೈಸಿರಿಯಂ ಜಱೆದಾ ಮೃಗಾಂಕನು
ಜ್ವಳಮನಿಳಿಂಕೆಗೆಯ್ದು, ನಳಕೂಬರನಗ್ಗದ ಗಂಡಗಾಡಿಯಂ
ಪಳಿದು, ಮನೋಜನೋಜೆಯ ವಿಳಾಸಮನೇಳಿಸಿ, ಕಾಯಕಾಂತಿ ಮಂ
ಜುಳ[೧೧]ವ[೧೧]ದನಾಂಶು ವಿಭ್ರಮವಿಳಾಸವಿರಾಜಿತರಾಜಶೇಖರಂ ॥೬೦॥

॥ವ॥ ಆಗಳ್ಮಿತವಚನಕುಮಾರನಂತೆ ತಾನುಮನೂನಾಳಂಕಾರಾಲಂಕೃತನಾಗಿ—

೧ ತ್ವ (ಮೈ, ಮೂ) ೨ ದನ (ಬ) ೩ ಶಿ (ಕ) ೪ ಗೆಯ್ದು (ಕ) ೫ ದು (ಕ) ೬ ಕೆ (ಮೈ) ೭ ದ (ಅ) ೮ ತಾರ (ಮೈ, ಮೂ. ಕ, ಬ) ತಾರಾ (ಅ) ೯ ಡಂಗಳ್ (ಅ) ೧೦ ತೊಡಸಿ (ಬ); ತೊಡಯಿಸಿ (ಧಾ); ಮುಡಿಯಿಸಿ (ಕ); ತುಡಸಿ (ಮೂ) ೧೧ ಮು (ಮೈ)

ನುಣ್ಗದಪಂ ಪಳಂಚಲೆಯೆ ಕುಂಡಳಮಂಡಳಮಾನನಾಂಬುಜಂ
ತಣ್ಗದಿರಂಗೆ ಸೋಲಮು[೧]ನೊಡ[೧]ರ್ಚೆ, ವಿಭೂಷಣಕಾಂತಿ ಭಾನುವಂ
ನಾಣ್ಗೆಡಿಪಂತೆ ಪರ್ಬಿರೆ, ಕನತ್ಕವಚಾಂಶುಸಮೇತಮೊಪ್ಪಮಂ
ಕಣ್ಗೆರದೀಯೆ ರತ್ನಮಕುಟದ್ಯುತಿ, ಬಂದನಮಾತ್ಯನಂದನಂ ||೬೧||

||ವ|| ಅನಂತರಮವಂಬೆರಸಲ್ಲಿಂ ಸಲ್ಲೀಲೆಯಿಂದೇಳ್ತಂದು ಭದ್ರಮಂಟಪದ ಮುಂದಣ ಮುತ್ತಿನ ಮೊಗ[೨]ಸಾ[೨]ಲೆಯೊಳ್ಕತಿಪಯಭಟಪಟಲಪರಿವೃತನೋಲಗಂಗೊಟ್ಟು ಮಿತವಚನವದನಮಂ [೩]ನಿ[೩]ರೀಕ್ಷಿಸಿ ರಾಜಾಲಯದೊಳೋಜೆಮಿಗೆ ರಾಜಿಪ ರಾಜವಾಜಿಗಳಂ ಬರಿಸೆಂಬುದುಮವಂ ಬೆಸಸಲೊಡನೆ ಕಡುವೇಗದಿಂ ಕೈ[೪]ಗೈದು[೪] ಪಲ್ಲಣಿಸಿ ಪಟ್ಟಸಹಣಿಗಳಿರ್ಕೆಲದೊಳ್ಪಿಡಿದು ತಡೆಯದೆ ತರ್ಪಾಗಳ್—

ಮಿಸುನಿಯ ಪಕ್ಕರಕ್ಕೆ, ಪೊಸಮಾಣಿಕಪಲ್ಲಣಮುಚ್ಚ ಮುತ್ತುತ
ಳ್ತಸೆವಮುಖಪ್ರಸಾಧನಮುರಸ್ಥಿತಕಿಂಕಿಣಿ ಕಾಳಿ, ಪಕ್ಕದೊಳ್
ಮಿಸಗುವ ಜಲ್ಲಿ, ಬೆಳ್ಗಜಿ, ಕೊಡಂಕೆಯ ಚಾಮರಮೊಪ್ಪೆ ಬಂ[೫]ದು[೫]ವಂ
ಧಸದೃಶವಾಜಿಗಳ್ಸುಗುಣರಾಜಿಗಳುತ್ತಮಸತ್ವಭಾಜಿಗಳ್ ||೬೨||

ನೊಸಲೊಳ್ಮಿಸುಗುವ ಮಿಸುನಿಯ
ಪೊಸ ಕನ್ನಡಿ ಕಣ್ಗೆವಂದುದಿನಬಿಂಬಂ ಬಂ
ದೆಸೆವಂತೆ ನಿಜಸಮನ್ವಯ
ವಸುಧೇಶ್ವರವಿಹರಣೇಕ್ಷಣಾಪೇಕ್ಷಿತೇ[೬]ಯಿರೆ[೬] ||೬೩||

||ವ ಅಂತುಮಲ್ಲದೆಯುಂ—

ಜವದಿಂ ಗಮಿಪ್ಪುದನೆನ್ನೊಳ್
ತವೆ ಕಲ್ತಂ ಪವನನವನನಹಿ ನುಂಗುಗುಮೆಂ
ದವಧರಿಸಿ ಕರ್ಚಿದಂತಿರೆ
ನವಾಶ್ವಮಾಸ್ಯದ ಖಲೀನದಿಂ ಕಣ್ಗೊಳಿಕುಂ ||೬೪||

೧ ನಮು (ಅ) ೨ ಶಾ (ಮೂ) ೩ ಪ (ಪ್ಯೇ. ಮುಃ) ೪ ಗೆಯ್ದು (ಕ) ೫ ಡೆ (ಷುಃ)
೬ ಯಂ (ಮೂ)

॥ವ॥ ಅಂತೆಸೆದು ಬಂದಾ ಸಗರ್ವಂ ಗಂಧರ್ವಗಳಂ ಸಸಂಭ್ರಮಂ ನಿರೀಕ್ಷಿಸಿ ಸಂತಸಂಬಟ್ಟು ವಿಹರಣಪ್ರಸ್ಥಾನಭೇರಿಯಂ ಪೊಯ್ಯೆಂದು ದಂಡನಾಥಂಗೆ ಧರಾಧಿಪಂ ಬೆಸಸೆ ತನ್ನಿರೂಪದಿಂ ಮೇಘನಾದಂ ಬಂದಾ ಭೇರಿಯಂ ಭೂರಿಸ್ವನಂ ೧ನೆಗಳೆ ೨ಕನಕ೨ಕೋಣಮನೆಡಸಿಪಿಡಿದು ಪೊಡೆಯಲೊಡನೆ—

ಬಿಡುಗಣ್ಣರ್ ಕಡುಜೆರ್ಚೆ ಬಳ್ಕೆ ದಿಗಿಭಂಗಳ್ಬೋಗಿಪಂ ಬಾಗಿ ಕುಂ
ಬಿಡೆ ಭಾಸ್ವದ್ರಥದಶ್ವಮಳ್ಕೆ ಕದಡೇಳ್ದಂಬೋಧಿಯುಂ ತುಳ್ಕೆ ಕ
ಣ್ಗೆಡೆ ವಿದ್ವಿಟ್ತತಿಯುರ್ಬೆ ಪರ್ಬೆ ವಿಪುಳಬ್ರಹ್ಮಾಂಡಮಂ ತುಂಬಿ ತ
ಳ್ತಿಡೆಗೊಂಡತ್ತು ಧಳಂ ಧಳಂ ಧಳನದದ್ಗಂಭೀರಭೇರೀರವಂ ॥೬೫॥

॥ವ॥ ಆಗಳಾ ವಿಹರಣವಿಳಾಸವಿಪುಳಭೇರೀರವಂಗೇಳ್ದು ಮೇಘನಾದಮಂ ಕೇಳ್ದ ಮಯೂರಂಗಳಂತೆ ಕಡುಸಡಗರಂಮಿಕ್ಕು೩ಪೊಸ೩ಗಂಧಸಿಂಧುರಂಗಳಂ ಬಂಧುರಮೆನೆ ಪಿಂಗದೆ ಸಿಂಗರಿಸಿ ಗಜಾರೋಹಕರ್ ಪಸದನಂಬಡೆದೇಱಿ ಮಿೀಱಿ ನೆರಪಿದಾಗಳ್—

ಇಳಿದಿಳೆಯಂ ಪದಂಗೊಳಿಸೆ ದಾನಜಳಂ ಜಳದಂಗಳಂತೆ ಮಂ
ಜುಳಪೃಥುಕೂಟದಂತೆಸೆಯೆ ಕುಂಭತಟಂ ಕುಳಭೂಧರಂಗಳಂ
ತ೪ಳ೪ವಡೆ ದಂತಕಾಂತಿ ಸ್ವದೆಯಂತಿರೆ ಭದ್ರರಮಾಗೃಹಂಗಳಂ
ತ೫ಳ೫ರ್ದಖಿಳಾವನೀತಳಮನೇಂ ನೆರೆದಿರ್ದುವೊ ಮತ್ತಹಸ್ತಿಗಳ್ ॥೬೬॥

ಪೃಥುಕುಂಭಂ ದೀರ್ಘಹಸ್ತಂ ವಿಪುಳತರರದಂ ಪೀನಬದ್ಧೋದರಂ ಸಂ
ಗ್ರಥಿತೋದ್ಯಚ್ಚಾಮರಪ್ರಸ್ಫುರಿತಚಳಿತಕರ್ಣಂ ಭ್ರಮದ್ಭೃಂಗಸಂಗ
ಪ್ರಥಿತಪ್ರೋದ್ದಾನಧಾರಾಘಟಿತಕಟತಟಂ ಮೇಚಕೋಚ್ಚಂಡಚಂಚತ್
ಪೃಥುವೀಭ್ಯತ್ಸಾಮ್ಯಕಾಯಂ ಘನನಿನದಮದೇಂ ಬಂದುದೋ ದಂತಿಜಾಳಂ ॥೬೭॥

॥ವ॥ ಅಂತು ನೆರೆದೇಳ್ತಂದು ನಿಂದ ದಂತಿಸಂತತಿಯಲ್ಲದೆಯುಂ—

ಘನಘಂಟಾಕುರಮುನ್ನ ತಂಪೃಥುತರಸ್ಕಂಧಂ ಬೃಹದ್ದೀರ್ಘದೇ
ಹನಿಯುಕ್ತಂ ಸಮದಂತಮುಜ್ವಳಮುಖಂ ವ್ಯಾಲಂಬಿವಾಲಂ ಲಸ
ದ್ವನಿಚೇತೋಗತಿಸನ್ಮಣಿವ್ರಜಸಮಾಕೀರ್ಣಸ್ಫುರತ್ಸ್ವರ್ಣಮಂ
ಡನಮೇಳ್ತಂದುದಭಂಗಭಂಗವಿಳಸದ್ರಂಗತ್ತುರಂಗವ್ರಜಂ ॥೬೮॥

---

೧ ತೆ (ಕ) ೨ ಕರದೊಳ್ (ಧಾ) ೩ ಪೊಕ್ಕು(ಮೂ, ಮೈ, ಧಾ) ೪ ಳೆ (ಬ) ೫ ಳ (ಅ)

॥ವ॥ ಇಂತೇಳ್ತಂದ ಪಂಚಪಲ್ಲವದ ವಾಜಿಗಳ ರಾಜಿಗಳ[೧]ಪಿಂದೆ[೧] ಸಂದಣಿಗೊಂಡು-

[೨]ಮಿ[೨]ಳಿರ್ದೆತ್ತಂ ತೋಱಿ ಪೊಂಬಟ್ಟೆಯ ಪಳಯಿಗೆಗಳ್ಮೇಲೆ ಮುಕ್ತಾತಪತ್ರಾ
ವಳಿ ಚೆಲ್ವಂ ಬೀಱಿ ಚಕ್ರೋಚ್ಚಳಿತಚಟುಲಚೀತ್ಕಾರಮಾಶಾಪ್ರದೇಶಾ
ವಿಳಮಾಗಲ್ಮೀಱಿ ಸೂತವ್ರಜದ ಬಗೆ ತುರಂಗಂಗಳಾದಂತೆ ಮುಂದು
ಜ್ವಳಿಸುತ್ತಂ ಪಾಱಿ ಕೂಡಿತ್ತಮಮ ಪೃಥುವರೂಥವ್ರಜಂ ಪೆರ್ಮೆಯಿಂದಂ ॥೬೯॥

॥ವ॥ ಅಂತು ನೆರೆದೇಳ್ತಂದು ನಿಂದು ವರೂಥ ವಾಜಿಗಳಲ್ಲದೆಯುಂ—

ಎಡಗಾಲೊಳ್ಪೊಂದೊಡರ್ ತಳ್ತಿರೆ ಝಣಝಣನಿಕ್ವಾಣಮದೊರ್ೀರುಕಂ ನೇ
ರ್ಪಡೆ ಚೆಲ್ವಂ ಬೀಱಿ ಗೇಣಂ ತಳೆದು ಮಿಸುಗೆ ಕೆಂದಟ್ಟೆ ಪೊಂಗುಪ್ಪಸಂದೊ
ಟ್ಟೊಡನಿಟ್ಟೋರಂತೆ ಮಾಣಿಕ್ಯದ ಕಿವಿದೊಡವಂ ಸೀಸಕಂದಾಳ್ದು ಕಾಲಾ
ಳ್ಗಡಣಂ ಕೈಕೊಂಡು ನಾನಾಯುಧಮನಮಮ ಬಂದತ್ತದಂ ಪೇಳ್ವೆನೇನಂ ॥೭೦॥

॥ವ॥ [೩]ಇಂ[೩]ತನಂತಸಂಭ್ರಮದಿಂ ನೆಲನೆಲ್ಲಮನಳುರ್ಕೆಗೊಂಡು ಘುಳುಘುಳಿಸಿ ನೆರೆದು ತೆಕ್ಕನೆ ತೀವಿದ ಚತುರಂಗಬಳಮಂ ಕಂಡು ಕಡುಸಂತಸಂ ಮಿಕ್ಕು—

ವಂದಿಗಳುಗ್ಘಡಿಸುತ್ತಿರೆ
ದುಂದುಭಿ ಮಿಗೆ ಮೊಳಗೆ ಬಹಳ ಕಹಳಾನಾದಂ
ಮುಂದೆಸೆಯೊಳೆಸೆಯೆ ನೃಪನೊಲ
ವಿಂದಡರ್ದಂ ಪವನಗಮನನಾಮದ ಹಯಮಂ ॥೭೧॥

॥ವ॥ ಅಂತೇಱಿದಾಗಳಾ ಮಿತವಚನಕುಮಾರಂ ಹರಿಣಗತಿಯೆಂಬೆರಡನೆಯ ತುರಂಗಮನಾರೋಹಿಸಿ ತನ್ನೊಡನೆ ಸಡಗರಂ ಮಿಕ್ಕು ಸುರತುರಂಗಮುವನಡರ್ದ ಜಯಂತನೊಡನೆ ಧನದಾಶ್ವಮನಡರ್ದು ತಳರ್ವ ನಳಕೂಬರನಂತೆಸೆದು ಬರೆ ನಿಜ-ಮಕುಟರುಚಿರರುಚಿ ರವಿಕಿರಣಮಂ ಪಳಂಚಲೆಯೆ ತೊಡೆದ ಮೃಗಮದಕರ್ದಮದ ಕಡುಗಂಪಿಂಗೆ ಪಿಂಗದೆ ಭೃಂಗಾಳಿ ಕವಿತರೆ ಪುಷ್ಕರಪುಂಡರೀಕಮಿಲ್ಲೆಂಬ ಬಗೆಯ ನಿಲ್ಲೆನಿಪಂತೆ ಸಲ್ಲಲಿತಮುಕ್ತಾಮಯಾತಪತ್ರಂಗಳ್ಮೇಲೆ ಲೀಲೆಯಿಂ ಬರೆ ಗಗನ ಲಕ್ಷ್ಮಿಯ ಪಯೋಧರಮಂ ಮುಸುಂಕಿದ ಚೀನಾಂಬರದ ಸೆಱಂಗಿನಂತೆ ತೊಳ ತೊಳಪ ಪಳಯಿಗೆಯ [೪]ಪಟಲಗಳ್ಮೆಳಿರುತ್ತಿರೆ[೪] ವಿಭವರಮೆಯ ಕಟಾಕ್ಷಮೆಂಬಂತೆ ಭಾಮಿನೀಚಾಲಿತಚಾರುಜಾಮರಂ ಮುಂಬಿನೊಳಿಂಬುವ[೫]ಡೆ[೫]ಯೆ [೬]ಬೞ[೬]ಳಜಳಧಿ-ಯೊಳ್ನೆಗೆದ ತರಂಗದಂತೆ ಸೂಸುವ ಸೀಗುರಿ ದೇಸಿವಡೆಯೆ ಪಿರಿದುಸಂಭ್ರಮದಿಂ ಪುರವೀಥಿಯೊಳ್ ಬರ್ಪಾಗಳ್—

---

೧ ಪಿಂಗದೆ (ಮೂ) ೨ ಪ್ರ (ಬ) ೩ ಎಂ (ಬ) ೪ ಪಟಂಗಗಳೇರುತ್ತಿರೆ (ಮೂ ಕ, ಧಾ); ಪಟಳಗಳಿರುತ್ತಿರೆ (ಬ, ಮೈ) ೫ ರೆ (ಮೈ) ೬ ಜ (ಮೂ)

ಮಣಿಮಯಭೂಷಣಾಂಶು ಮಕುಟದ್ಯುತಿ ಹಾರಮರೀಚಿ ವಜ್ರಕಂ
ಕಣರುಚಿ ಮೈಯ ನುಣ್ಪೆಳಗು ಕೈಯ ಸಿತಾಸಿಯ ಕಾಂತಿ ಪೊನ್ನ[1]ವೀ[1]
ರಣೆಯ ಪೊಗರ್ ಥಳತ್ಥಳಿಸೆ ದಿವ್ಯಹಯಂಗಳನೇಱಿ ಬಂದುದಂ
ದೆಣಿಕೆಗಳುಂಬಮಾಗಿ ವಿಭವಂ ಮಿಗೆ ರಾಜಕುಮಾರಸಂಕುಳಂ ॥೭೨॥

ಆ ರಾಜಸುತರ ನಡುವೆ ಮ
ಹಾರಾಜಸುತಂ ಸಿತಾಶ್ವದಗ್ರದೊಳೆಸೆದಂ
ಶಾರದನೀರದದಗ್ರದೊ
ಳಾ ರಾಜಂ ಭಗಣಪರಿವೃತಂ ರಂಜಿಪವೋಲ್ ॥೭೩॥

ಗಗನದೊಳ್ ನೋಡಲೆಂದು
ಜ್ಜುಗಿಸಿದ ಖಚರಿಯರ ಕಣ್ಗೆ ಬಲಧೂಳಿ ಕರಂ
ಪೊಗದಂತೆ ಬೀಸಿದಪುದೆನೆ
ಮಿಗೆ ಮಿಳಿರ್ವ ಪಟಂಗಳಿಂದೆ ಪಳಯಿಗೆ ಮೊಱೆಗುಂ ॥೭೪॥

॥ವ॥ ಅಂತುಮಲ್ಲ[2]ದೆ[2]—

ಕೆಂಬಳಯಿಗೆ ಲಂಬಿಸೆ ತ
ಳ್ತಂಬುಜಸಖಬಿಂಬಮಕ್ಷಿಗಿಂಬಾದುದು ಕೆಂ
ಕಂಬಡೆದೆಸೆವಂಬುದದಿಂ
ಚುಂಬಿತಮಾಯ್ತೆಂಬ ತೆಱದೊಳಂಬರತಳದೊಳ್ ॥೭೫॥

ವಿತತಾತೋದ್ಯಪ್ರಣಾದಂ ರಥನಿಕರಲಸಚ್ಚೀತ್ಕೃತಿಧ್ವಾನಮುಜ್ಜೃಂ
ಭಿತರಾಜದ್ವಾಜಿಹೇಷಾರಸಿತಮಿಭಘಟಾಬೃಂಹಿತೋದ್ಯದ್ರವಂ ವಿ
ಶ್ರುತವಂದಿವ್ರಾತಕೋಲಾಹಲರುತಿ ಸುಭಟಸ್ಫಾರಹೂಂಕಾರರಾವಂ
ಶ್ರಿತಚಂಚತ್ಕೇತುಘಂಟಾರಣಿತಮಖಿಳದಿಗ್ದೇಶಮಂ ತೀವಿತಾಗಳ್ ॥೭೬॥

ಬಲಭಾರಕ್ಕೆ ಧರಾತಳಂ ಕುಸಿಯೆ ಸೇನಾಧೂಳಿಯಿಂ ಮಿಕ್ಕು ಬಾಂ
ಬೊಳೆ ಪಂಕಾವಿಳಮಾಗೆ ಭೇರಿಯ ಗಭೀರಧ್ವಾನದಿಂ ದಿಗ್ಗಜಾ
ವಳಿ ಕಂಪಂಗೊಳೆ ದೀರ್ಘಕೇತನಪಟಂ ಸಂದೋಹದಿಂದೊಂದಿ ಮಂ
ಜುಳಸೂರ್ಯಾತಪಮಿಲ್ಲಮಾಗೆ ಪದೆದೇಳ್ತಂದಂ ನರೇಂದ್ರಾತ್ಮಜಂ ॥೭೭॥

॥ವ॥ ಅಂತೇಳ್ತರ್ಪಾಗಳ್ ಕಲಿಗಳ್ ಕರತಳದಿನೊರೆಗಳೆದು ಕುರು[3]ಳ್ವುವ[3]

೧ ಷೇ (ರಿ) ೨ ದೆಯುಂ (ಧಾ) ೩ ಳ್ಕುವ (ರಿ), ಳ್ವ (ಕ)

ಕೈದುಗಳ ಬಳ್ಳಿವೆಳಗಿಂ ಗೊಂಚಲ್ಮಿಂಚುಗಳ್ ಸಂಚಳಿಸಿದಂತೆಯುಂ ಪಡಿತಳಿಸಿ ನಡೆಗೊಳ್ವ ಸಿಂಧುರಾರುಣಿತಗಂಧಸಿಂಧುರಸಂದೋಹದಿಂ ಸಂಧ್ಯಾರುಣಿತಪಶ್ಚಿಮಾಚಲಂ ಪಲವುರೂಪಾಂತು ನಡೆಗೊಳ್ವಂತೆಯುಂ ಪಕ್ಕರ್ಝಲ್ಲಿಗಳಿಂ ಪರಿಶೋಭೆವಡೆದು ಪರಿವ ತುರಂಗಸಂಘದಿಂ ನೊರೆಮಾಲೆವೆರಸಿ ತರಂಗೊಂಡು ತರಂಗಸಂಘಾತಂ ಬಳಜಳಧಿಯೊಳ್ನೆಗೆದಂತೆಯುಂ ಮೇಲೆ ನೆಗೆದೊತ್ತರಿಸಿ ನಡೆವ ಮುತ್ತಿನ ಸತ್ತಿಗೆಗಳಿಂ ಚಂದ್ರಭುವನಮವನತರಿಸಿದಂತೆಯುಂ ಸಾಲ್ವಿಡಿದು ಸೂಸುವ ಧವಳಚಾಮರಂ-ಗಳಿಂದಂಚೆವಿಂಡನೆರ್ಬಿದಂತೆಯುಂ ಭೋಂಕನೆ ನೂಂಕಿಬರ್ಪ ಮಣಿಮಯಮಾದ ತೇರ್ಗಳಿಂದಿಂದ್ರಚಾಪಂಬೆತ್ತ ನೀರತೇರ್ಗಳಿಳೆಗಿಳಿದು ತಳರ್ವಂತೆಯುಂ ಕವಿತರ್ಪ ಕಠಿಣಖೇಟಕಂಗಳಿಂ ಕಮಠಕೋಟಿ ಕಣ್ಗೆ ಗೋಚರಿಸಿದಂತೆಯುಂ ಮಕುಟವರ್ಧನರ ರಮಣೀಯಮಣಿಮಕುಟಂಗಳಿಂ ಮಾ[೧]ರ್ತ[೧]ಂಡ ಮಂಡಳಂಗಳಳುರ್ಕೆಗೊಂಡುದಿಸಿ ದಂತೆಯುಂ ನೆರೆನೆರೆದು ತರಂಬೆತ್ತು ಧರ್ಮಹರ್ಮ್ಯಂಗಳೊಳ್ಕೂರ್ಮೆಯಿಂ ನೋಳ್ಪ ಪೊಳಲ್ವೆಂಡಿರ ಕಣ್ಗೆ ಕೌತುಕಾವಹಮಾಗೆ ನರೇಂದ್ರಂ ತುರಂಗಮಂ ಕರತಳಾಸ್ಫಾಳನಂ ಗೆಯ್ದು ಮಡಸನ್ನೆಯಂ ಮನದೊಳ್ ನೆನೆವಲ್ಲಿಂ ಮುನ್ನಮೆ—

ಕಂತುಕದಂತೆ ಪುಷ್ಕರತಳಕ್ಕೊಗೆದೂರ್ಮಿಕೆಯಂತೆ ಪಾಯ್ದು ಮೀ
ನಂತಿರೆ ಮೀ[೨]ಜು[೨] ಲಂಘಿಸಿ ಲಸನ್ಮೃಗದಂತಿರೆ ದಾಂಟಿ ಮಿಂಚಿದೆಂ
ಬಂತೆ ನಭೋಂತದೊಳ್ಪೊಳೆದು ಸುಂಟುರೆಯಂತಿರೆ ಸುತ್ತಿ ಪತ್ತಿ ನಾ
ಗಾಂತಕನಂತೆ ಪಾರಿದುದು ತುಂಗತುರಂಗಮಿಳಾ[೩]ಧಿ[೩]ನಾಥನಾ ॥೭೮॥

ಆ ವಾಜಿಯ ಹೇಷಾರವ
ಮಾ ವಾಸವನಶ್ವಕರ್ಣಮಂ ಪುಗೆ ಭಯಮು
ತ್ತ್ಯೇವೇಳ್ವೆ ನಿನ್ನುಮದನೇ
ಭಾವಿಸು[೪]ತು[೪]ಚ್ಚೈಶ್ರವತ್ವಮಾಳ್ದದು ತೋರ್ಕುಂ ॥೭೯॥

॥ವ॥ ಅಂತುಮಲ್ಲದೆಯುಂ—

ತುರಂಗಖರಖುರಸಮುತ್ಥಿತ
ಧರಾರಜಂ ನೆಗೆದು ತೀವೆ ನಿಜಲೋಕದೊಳಾ
ಸರಸಿಜಸಂಭವನದಜ[೫]ೊ
ಳ್ಪೊರೆದಂದಿಂದಲ್ತೆ ತಾಂ[೫]ರ[೫]ಜೋನ್ವಿತನಾದಂ ॥೮೦॥

---

೧ ರ್ತಾ (ಮೈ, ಮೂ, ಬ) ೨ ಜ³ (ಕ) ೩ ಧಿಪ (ಮೈ, ಬ) ೪ ಮ (ಕ) ೫ ರಾ (ಧಾ)

ನಗರಿ ಪುಗೆ ಚಿಂತೆ ಸಂತಸ
ಮೊಗೆದುದು ರವಿರಾಗವಳಿದನಸುರಾರಿಯ ನಿ
ದ್ರೆಗೆ ಮುಳಿದಳ್ ರಮೆ ಕವಿ ಮಿಗೆ
ನಗುತಿರ್ದಂ ಚಿಂತೆಗೆಯ್ದನಮರಾಚಾರ್ಯಂ ॥೮೧॥

॥ವ॥ ಆಗಳ್—

ಪರಿಯಿಪ ನೆಟ್ಟನಟ್ಟುವಿದಿರೇಱಿಪ ಪಾರಿಪ ಕೀಳ್ತು ದಾಂಟಿಪಿ
ರ್ಬರಿಯೊಳೆ ಸುತ್ತಿ ಪಾಯತಿಕೆಯಿಂ ಮಿಗೆ ನರ್ತಿಪ ದಿಂಡುವಾಯಲು
ಪ್ಪರಿಪ ಬೆಡಂಗಿನಿಂ ನಡೆಯಿಪಂಗಮಲುಂಗದೆ ಪಂಚಧಾರೆಯೊಳ್
ಪರಿಣತಿದೋರ್ಪ ವಾಹಳಿತನಂ ಬಗೆಗೊಂಡುದು ಮಂತ್ರಿಪುತ್ರನಾ ॥೮೨॥

॥ವ॥ ಇಂತು[೧]ತು[೨]ಳವಿಳಾಸಂಬಡೆದಶ್ವಾರೋಹಣಪರಿಣತಿಯಿಂ ಪರಿಶೋಭೆವಡೆದಾ ಮಿತವಚನಂಬೆರಸು ರಾಜಶೇಖರರಾಜೇಂದ್ರಂ ರಾಜವೀಥಿಯಂ ದಾಂಟಿ ಪು[೩]ರಬಹಿರ್ದೇಶದ ವೈಹಾಳಿಯ ಬಯಲ್ಗೆ ಸಸಂಭ್ರಮಂ ಬರೆ ತದಾದೇಶಮಂ ಪಡೆದು—

ಬಲಮೆರಡಾಗಿ ಪೆರ್ಮೆವಡೆದೊಡ್ಡಿ ವಿಳಾಸದೆ ನಿಂದು ಬೊಬ್ಬೆಗೊ
ಟ್ಟಲಿದು ವಿನೋದಯುದ್ಧಮನಮರ್ಚಲೊಡರ್ಚಿ ಹಯಂಗಳೊಳ್ ಹಯಾ
ವಳಿ ಪೊಸತೇರ್ಗಳೊಳ್ಮಸುಪತೇರ್ಗಳಿಭಂಗಳೊಳೊಲ್ದಿಭಂಗಳು
ಜ್ವಲಭಟರಾಜಿಯೊಳ್ಸುಭಟರಾಜಿ ಪಳಂಚಿದುದೇನನೆಂದಪೆಂ ॥೮೩॥

॥ವ॥ ಅಂತುಭಯಪಾರ್ಥಿಗಳಿದಿರ್ಚಿ ಪಳಂಚುವಂತೆ ಪಳಂಚಿ ಮಿಸುನಿವೆಸೆದ ಪುಟ್ಟಿಗೋಲ್ಗಳಂ ಪಿಡಿದು ಜಡಿದೊಟ್ಟಜೆಯಿಂದಿಟ್ಟಣಿಸಿ ನಿಂದು—

ಶಿವಿವ ಮರಳ್ದುವಬ್ಬರಿಪ ಗರ್ವಿಪ ಬೊಬ್ಬಿರಿಪಾರ್ವ ಸಾರ್ವ ಮೇ
ಣ್ಮವಿವ ಕಡಂಗುವಿಟ್ಟಣಿಪ ಸುತ್ತುವ ಪತ್ತುವ ನಿಲ್ವ ಗೆಲ್ವ ಪೊ
ಣ್ಮುವ ಪುಟವೇಳ್ವ ಪಾಯ್ವ ಮಿಳಿಗೆಳಿಪೊಯ್ವ ತೊಡಂಕುವ ತೋಟಿಗೈವ ಕೂಂ
ಕುವ ನೆಱೆ ನೂಂಕುವೇಳ್ಗೆಯ ಬಲಂ ಬಗೆಗೊಂಡುದು ತತ್ಕುಮಾರರಾ ॥೮೪॥

॥ವ॥ ಮತ್ತಮಾ ಸೇನಾಚಕ್ರದೊಳಳುರ್ಕೆವೆತ್ತು—

---

೧ ಮ (ಕ) ೨ ರದ (ಬ) ೩ ರೆ (ಕ)

ಸುೞಿಸುೞಿದಶ್ವಮನೇಱುತೆ
ಪೊಳಯಿಸಿ ಮಿಗೆ ದಂಡೆಗುಡುತ್ತಿದಿರ್ಚುತೆ ಪೆಱಕಾ
ಲ್ಗೊಳಿಸಿ ಪೆಡಱಮೆಟ್ಟುತ್ತು
ವ್ವಳಿಸುತ್ತೆ ಪಳಂಚಿದರ್ತುರಂಗಿಗಳದಱೊಳ್ ॥೮೫॥

॥ವ॥ ಇಂತು ಪಳಂಚುವ ತುರಂಗಿಗಳಂ ಕಂಡು ಸೞಗರಂ ಮಿಕ್ಕು—

ಅಣೆದಲೆದು ನೂಂಕಿ ಗರ್ಜಿಸು
ತಣೆಯರಮಣೆಗೊಂಡಿಭಂಗಳಂ ಭರಿಕ್ಕೈಗ
ಳ್ಪೆಣೆದಿರೆ ಕಾದಿಸಿ ತಾಮುಂ
ಪೊಣರ್ದರ್ಗಿಭಾರೋಹಕರ್ವಿಳಾಸದಿನಾಗಳ್ ॥೮೬॥

॥ವ॥ ಇಂತು ಪೊಣರ್ದಿಭಾರೋಹಕರ ಕಡುಪಂ ನೋಡಿ ನೀಡುಂ ಕಡಂಗಿ—

ಇದಿರೊಳ್ಪರಿಯಿಸಿ ರಥಮಂ
ತುದಿಯೊಳ್ಮಿಳಿರ್ದಾಡೆ ಕೇತನಂ ಪೂಸರದಿಂ
ಪದೆದೆಚ್ಚಾಡಿದರಥಿಕಿಂ
ದದಱೆ ಪರಾಗಂ ನಿಜಾಂಗದೊಳ್ಪೊರೆವಿನೆಗಂ ॥೮೭॥

॥ವ॥ ಆ ರಥಿಕರಾ[1]ಟೋ[1]ಪಮನುಭಯಪದಾತಿ ಕಂಡು ಕೈಗಣ್ಮಿನಿಂದು—

ಅಲರ್ಗಳ ಚಂಡು ಕುಂಕುಮದ ನೀರ್ಗಳ ಕುಪ್ಪಿಗೆ ಚಂದನಚ್ಛಟಾ
ಕಲಿತಸರೋಜಕೋರಕಮುದಾತ್ತಮೃಗೋದ್ಭವಚೂರ್ಣಪೂರ್ಣಮು
ಜ್ವಲಿತ ರಸಾಲಪಲ್ಲವದ ಪೊಟ್ಟಣಮೆಂಬಿವಱಿಂದಿದಿರ್ಚಿ ತ
ದ್ಬಲಮೆ[2]ರಡಿ[2]ಟ್ಟು ತಳ್ತಡಸಿ ಬೊಬ್ಬಿಱಿದಾಡಿದುದೇನನೆಂದಪೆಂ ॥೮೮॥

॥ವ॥ ಇಂತು ವಿನೋದಯುದ್ಧಮಂ ಚತುರತೆಯಿಂ ರಚಿಸಿ ಚಾತುರಂಗಂ ಪುರಾಭಿಮುಖಮಾಗಿ ತಿರಿಗಿ ಸರಭಸಂ ಬರೆವರೆ—

---

೧ ಟಾ (ಕ) ೨ ಂದಿ (ಕ)

ಕರಿದಾನಾಸಾರದಿಂ ತಳ್ತಿಳೆ ಬಳಭರದಿಂ ತಾಂ ಬೆಮರ್ತಂತೆ ತೋಱು
ತ್ತಿರೆ ವಾಜಿವ್ರಾತವಕ್ತ್ರಚ್ಯುತಸಿತವಿಸರತ್ಫೇನಪಿಂಡೌಘಮೊಕ್ಕಂ
ತಿರೆ ಭೇರೀಧ್ವಾನದಿಂದಂ ಭಗಣಮಿನನಡಂಗಿರ್ದವೋಲ್ತೋಱೆ ಕೇತೂ
ತ್ಕರಭೀತಂ ಧೂಳಿಜಾಳಂ ಕವಿಯೆ ಜವದಿನೈತಂದುದಾ ರಾಜಸೈ[೧]ನ್ಯಂ ॥೮೯॥

[೨]ಖರಖುರ[೨]ಘಾತಜಾತಧರಣೀತಳರೇಣುವಜಾಂಡಪಂಕಜಾ
ತರಜಮಿದೆಂಬಿನಂ ನೆಗೆದು ತೀವಿರೆ ವೇಗಕೆ ಸೋಲ್ತು ಗ್ಲೋಂಟಿನೊ
[೩]ಳ್ಮ[೩]ರುತನಡಂಗೆ ಮೈಗಱೆಯೆ ಪುಲ್ಲೆ ವನಾಂತದೊಳಿಂದ್ರನಶ್ವಮ
ಳ್ಕಿರೆ ಸುರಲೋಕದೊಳ್ಕಿರ್ದದೇಂ ಪರಿದತ್ತೊ ತುರಂಗಮದ್ವಯಂ ॥೯೦॥

॥ವ॥ ಮತ್ತಂ—

ಸುಳಿಸುಳಿದೊತ್ತಿ ಪತ್ತಿ ತವೆ ಸುತ್ತಿ ಕಡಂಗಿ ಬೆಡಂಗುವೆತ್ತು ಸಂ
ಚಳಿಸಿ ನಭಕ್ಕೆ ಮೀಱೆ ಮಿಗೆ ಪಾಱೆ ಚಮತ್ಕೃತಿವೀಱೆ ತೋಱೆ ತ
ನ್ನಳವನಿಳಾತಳಕ್ಕೆ ಕಿಳಿರ್ದುಪ್ಪರಿಸುತ್ತುಱೆ ಮೀಂಟಿ ದಾಂಟಿ ಕಂ
ಟಳಿಸಿ ಪೊದಳ್ದು ಪಾಯ್ದು ಪರಿಯಿಟ್ಟುದು ವಾಯುರಯಂ ಹಯದ್ವಯಂ ॥೯೧॥

॥ವ॥ ಇಂತನಂತಸಂಭ್ರಮಂ ಮಿಗೆ ಜವಗಜಮನತಿಕ್ರಮಿಸಿ ಪರಿವಾ ರಾಜವಾಜಿಗಳನೋಜೆಮಿಗೆ ರಾಜವೀಥಿಯೊಳಾ ಕುಮಾರರಿರ್ವರ್ವಿವಿಧತರಗತಿಚತುರತೆಯಿನೇಱುತ್ತುಂ ಬರ್ಪಾಗಳ್—

ಕನಕಸ್ಫಾಟಿಕರತ್ನಹರ್ಮ್ಯಚಯಮಂ ಬಂದೇಱೆ ನಿಂದಲ್ಲಿ ಕಾ
ಮಿನಿಯರ್ಸಾಲ್ವಿಡಿದೀಕ್ಷಿಸುತ್ತಿರೆ ತದಾಸ್ಯಶ್ರೇಣಿಯುಂ ದೀರ್ಘಲೋ
ಚನದಿವ್ಯದ್ಯುತಿಯುಂ ಪಳಂಚಲೆದುದುದ್ಯದ್ದರ್ಪಣೇಂದ್ರೀವರಾ
ಳಿನಿಯುಕ್ತೋನ್ನತಚಾರುತೋರಣಮನಾ ವೀಥೀಪುರೋಭಾಗದೊಳ್ ॥೯೨॥

೧ ನ್ಯಮಂ (ಮೈ) ೨ ಖುರಖುರ (ಮೂ), ಖರಖುರಂ (ಮೈ) ೩ ಳ್ಮು (ಕ)

॥ವ॥ ಆ ವಿಳಾಸಿನಿಯರಲ್ಲದೆಯುಮಲ್ಲಿ ಕೆಲಂಬರಾ ನರೇಂದ್ರನನಭೀಕ್ಷಿಸಲೆಂದು—

ತೊಡವೆಳಗಿಂದ್ರಚಾಪಲತೆ,ಸೋರ್ಮುಡಿ ಕಾರ್ಮುಗಿಲ್ಪೊರ್ವಿ ಪಾಯ್ವ ಕ
ಣ್ಗಡೆ ಕುಡಿಮಿಂಚು,ಮಂಜು ಮಣಿನೂಪುರಸಿಂಜಿತಮುಬ್ಬರಾವಮೊ
ಗ್ಗೋಡೆಯದೆ ಮೇಲೆ ಸೂಸುವ ಸುಲಾಜೆಗಳೊಳ್ಸರಿಯಾಗೆ ಬಂದು ಕಾ
ರೊಡತಿಯರಲ್ಲಿ ನಿಂದರೆನೆ ಸೌಧನಗಾಗ್ರದೆ ಪೆಣ್ಗಳೊಪ್ಪಿದರ್ ॥೯೪॥

॥ವ॥ ಅಂತುಮಲ್ಲದೆಯುಂ—

ಎಳಲತೆ ತೋಳ್ಗಳಿಂದುಟಿಯೆ ಚೆಂದಳಿರೊಳ್ಪೊಡೆ ಬಾಳೆ ನಾಭಿ ತಂ
ಗೊಳಮಲಘುಸ್ತನಂ ಕೃತಕಶೈಲಮಪಾಂಗಮರೀಚಿ ಪುಷ್ಪಸಂ
ಕುಳಮಳಕಂ ಮದಾಳಿಕಳಭಂ ಮೊಗಮಂಬುಜಮಾಗೆ ಬಂದ ಕೋ
ಮಳೆಯರಿಳೇಶಚಂದ್ರಮನನಾ ವನಲಕ್ಷ್ಮಿಯರಂತೆ ನೋಡಿದರ್ ॥೯೫॥

ಕ್ಷಿತಿಪತಿರಾಜಶೇಖರನಿವಂ ನವಮೌಕ್ತಿಕಭೂಷಣಾಂಶುಭೂ
ಷಿತತನು ಮುಂದೆ ಮುಂಬಱಿವ ತುಂಗತುರಂಗಮನೇಱಿ ಬರ್ಪವಂ
ಮಿತವಚನಂ ಮೃಗಾಕ್ಷಿ ನಡೆನೋಡಿವನಲ್ತೆ ನವೀನಭೂಷಣ
ಪ್ರತತಿಯನಾಂತು ನರ್ತಿಪಸಿತಾಶ್ವಮನೇಱುತೆ[೧]ಪಿಂ[೧]ದೆ ಬರ್ಪವಂ ॥೯೬॥

॥ವ॥ ಎಂದಲ್ಲಿ ವಿದಗ್ಧೆಯರ್ ಮುಗ್ಧೆಯರ್ಗೆ ತೋಱಿನುಡಿವುತ್ತಿರೆ ಮಂತ್ರಲಕ್ಷಂ ಮಿತವಚನಸಮೇತಂ ವಿವಿಧವಿಳಾಸಮಂ ತಳೆದು ಮುಂದಣ್ಗೆ ಬರೆವರೆ ಹರಪ್ರೇರಣೆಯಿಂ ತಿರುಕೊಳವಿನಾಚಿಯೆಂಬ ಶಿವಭಕ್ತೆಯಣುಗಂ ಶಂಕರನೆಂಬ ಪೆಸರ ಪಂಚವರ್ಷದ ಕುಮಾರಂ ನಿಜಜನನಿ ನೀರ್ಗೆ ಪೋದ ಪೊಳ್ತಿನೊಳಾ ಕಳಕಳಮಂ ಕೇಳ್ದು ನೋಡಲೆಳಸಿ ಸಡಗರಂಮಿಗೆ ನಡುವೀದಿಗೆ ತಡೆಯದೆ ಬಂದು ಸಂದಣಿಪ ಮಂದಿಯೊಳಪೊಕ್ಕು ನಿಂದು ನಿರೀಕ್ಷಿಪಾಗಳ್ಕವಿವ ಪಡೆಯ ತಡೆಗಾಲ್ಪೊಡೆಯೆ ಪೊಡವಿಯೊಳ್ಕೆಡೆದು ಕಣ್ಗೆಟ್ಟಳಲ್ದು ತಾಯುಂ ಕರೆಕರೆದು ಬಾಯುಂ [೨]ಬಿಟ್ಟೆಳಲ್ದು[೨] ಕಯ್ಯೊಯ್ಯಱಿ ಮೆಲ್ಲನೇಳ್ವನಿತಱಲ್ಲಿ—

೧ ಮುಂ (ಮೈ) ೨ ಬಿಟ್ಟೊರಲ್ದು (ಮೂ, ರಿ) ಬಿಟೊಳರ್ದು (ಮೈ, ಕೆ)

ಶಿವಶಿವ ಪೇಳ್ವೆನೇನನವನೀಪತಿ ತನ್ನ ತುರಂಗಮಂ ಮಹಾ
ಜವದೊಳೆ ಕಂಡು ದಾಂಟಿಸಿ ಕೆಲಂದೆಗೆಯೆಂಬನಿತಕ್ಕೆ ಮುಂಚಿ ಮು
ನ್ನವೆ ಸಚಿವಾಶ್ವಮೈದೆ ಕೊರಗಿಂ ತಲೆ ಖಂಡಿಸಿ ಪಾಱೆ ಮೆಟ್ಟಿತಂ ಗೆಯ್ದಿ
ದವಿರಳರಕ್ತಧಾರೆ ಪೊಜಸೂಸಿರೆ ಬಾಲನ ೧ಕಂಠನಾಳಮಂ೧ ॥೯೬॥

॥ವ॥ ಅಂತು ಪರಿದಾ ರಕ್ತರಸದೊಳಳ್ದುಬಿಳ್ದಾ ಶಿರಃಪುಂಡರೀಕಮಂ ಕಂಡು ಸಚಿವಸುತನುಂ ತಾನುಂ ಮನಂ ನೊಂದು ಮತಿಯುಡುಗಿ ಮಱುಗಿ ಶಿವಶಿವಾ ಶಿವಭಕ್ತಶಿಶುವಧಮಾದುದಿದಂ ಶಿವಂ ಬಲ್ಲನೆಂದುಮ್ಮಳಿಸುತಿನಿಸಾನುಂ ಜೇಗಮಿರ್ದು—

ಇನ್ನಿದಕೆ ಚಿಂತೆಗೆಯ್ದೊಡೆ
ಪನ್ನತಿಕೆಗೆ ಬನ್ನವಲ್ತೆ ೨ಫಡಫಡ೨ ಫಣಿಭೂ
ಷಂ ನೆಟ್ಟನೆ ಮರ್ಚಿರೆ ತೋ
ರ್ಪೆಂ ನಿಜಸಾಹಸಮನಿದಕೆ ತಕ್ಕುಜ್ಜುಗಮಂ ॥೯೭॥

॥ವ॥ ಎಂದು ನಿಶ್ಚೈಸಿ ಮನಸ್ತಾಪಮಂ ಧೃತಿಸಾಂದ್ರಚಂದ್ರಿಕೆಯಿಂ ನಂದೆವೊಯ್ದು ನಡೆತಂದು ರಾಜಾಲಯದ್ವಾ೩ರೋಪಾಂತದೊಳ್ವಾಜಿಗಳನಿಳಿದು ದಂಡನಾಥಮಂಡಳಿಕಾದಿಯಂ ಯಥಾಕ್ರ೪ಮಂ೪ ಬೀಳ್ಕೊಟ್ಟು ನಿಜಗೃಹಂಗಳಂ ಪೊಕ್ಕಿರ್ದರನ್ನೆವರಮಿತ್ತಲ್ನೆರೆದ ಪುರಜನಮಾ ರುಂಡಮಂ ಮುಂಡಮಂ ಕಂಡು—

ಅಕಟಕಟದಾರಣುಗನೀ
ಸುಕುಮಾರಂ ಮಡಿದನಶ್ವಖುರಹತಿಯಿಂ ಬಾ
ಲಕವಧಮಿದನಱಿದೊಡೆ ತಾ
ನಕುಟಿಲಮತಿಚೋಳನೃಪತಿಯೇಂ ಸೈರಿಪನೇ ॥೯೮॥

ಶರಣಜನವನಜವನದಿನ
ಕರನಾ ಸತ್ಯೇಂದ್ರಚೋಳಧರಣೀಶ್ವರನೀ
ಶ್ವರಭಕ್ತವಧವನಿದನಾ
ರ್ದೊಱೆಕೊಳಿಸಿದರೆಂದು ಮುಳಿಯದಿರ್ಪನೆ ಬಳಿ೫ಯಿಂ೫ ॥೯೯॥

---

೧ ಕಂಠಮಂಗಾಳಮಂ (ಧಾ) ೨ ಪಡಪಡ (ಮೈ) ೩ ರೆದ ಉಪಾಂತದೊಳ್ವಾ (ಮೈ); ರದೊಳ್ವಾ (ಬ, ಮೂ) ೪ ಮದಿಂ (ಬ, ಮೂ) ೫ ಯಂ (ಮೈ).

ಮನುಚೋಳಂ ಮನ್ನಿಸಿದನೆ
ತನಯನನಪರಾಧಯುಕ್ತನಂ ಪಿತನೆಂದೇಂ
ನೆನೆದನೆ ೧ಚಂ೧ಡೇಶಂ ತ
ನ್ನನೆ ಬಗೆದನೆ ಬಗೆಯೊಳಾ ಪಗಲ್ಚೋಳನೃಪಂ ॥೧೦೦॥

ಅದಱಿಂದೇನಪ್ಪುದೊ ಬ
ರ್ಪುದನೀಶಂ ಬಲ್ಲನೆಂದು ಮಱುಗುತ್ತಿರೆ ತ
ಳ್ವದೆ ಘಟಮನಿಳಿಪಿ ಕಾಣದೆ
ಸುದತಿ ನಿಜಾತ್ಮಜನನಱಸಿ ತೊಳಲುತ್ತಿರ್ದಳ್ ॥೧೦೧॥

॥ವ॥ ಅಂತು ತೊಳಲ್ದು ಕಾಣದೆ ತಲ್ಲಣಿಸಿ ತಳವೆಳಗಾಗಿ—

ಎಲೆ ಸುಕುಮಾರ ಶಂಕರಕುಮಾರಕ ಬಾರ ಮದೀಯಲೋಚನೋ
ತ್ಪಲರಜನೀಶ ನಿನ್ನ ಮೊಗದಾವರೆಯಂ ಮಿಗೆ ತೋಱದೆತ್ತ ಪೋ
ದೆ ಲಲಿತಮಂದಹಾಸ ಲಲಿತಸ್ಖಲದಕ್ಷರವಾಣಿ ಗೆಜ್ಜೆ ಮೆ
ಲ್ಲುಲಿಗುಡೆ ಬಂದು ಬಲ್ಪಿಱಿಯನಪ್ಪದೆ ತಳ್ವಿದೆಯೈ ತನೂಭವಾ ॥೧೦೨॥

॥ವ॥ ಎಂದು ನಿಡುಸರದಿಂ ಕೂಗಿ ಕರೆಕರೆದು ಕಾಣದೆ ಕರಕರಿಸಿ ರಾಜಪುತ್ರನ ವಿಹರಣಮಂ ನೋಡಲೆಳಸಿ ರಾಜವೀಧಿಗೆ ಬಂದನೆಂದು ಬಗೆದು ಬಗೆಗೆಟ್ಟು ಬಾಯ್ವಿಟ್ಟು ಜನನಿ ಜವದಿನೇಳ್ತಂದಲ್ಲಿಯುಮಱಸಿ ಕಾಣದೆ—

ಕರಿಗಳ ಕಾಲ್ಗೊಳಗಾದನೊ
ವರೂಥಚಕ್ರಕ್ಕೆ ಸಿಲ್ಕಿದನೊ ಹಯಚಂಚ
ತ್ಖುರಹತಿಯಿಂದಳಿದನೊ ಶಂ
ಕರನಕಟಕಟೆಂದು ಬಗೆದು ಬಾಯ್ವಿಡುತಿರ್ದಳ್ ॥೧೦೩॥

ತನುಭವನೆಲ್ಲಿದನೆಲ್ಲಿದ
ನಿನಿವಾತಿನ ೨ಕೀರ೨ನೆಲ್ಲಿದಂ ಮೆಲ್ನಗೆಯಿಂ
ಪಿನ ಸೊಬಗನೆಲ್ಲಿದಂ ಚೆ
ಲ್ವಿನ ಕ೩ಣೆ೩ಯೆಲ್ಲಿದನೊ ಮನ್ಮನೋಂಬುಜಹಂಸಂ ॥೧೦೪॥

---

೧ ಶಂ (ಕ) ೨ ನೀಱ (ರಿ, ಬ, ಧಾ, ಟಿ, ಇ) ೩ ಣ್ಗೆ (ರ).

॥ವ॥ ಎಂದು ಪಲುಂಬಿ ಪಲವಾಡಿ ಬರ್ಪಾಗಳಾ ಪುರಜನಂ ಕಂಡೀ ಮಡಿದ ಶಿಶುವಿವಳದೆಂದು ತಿಳಿದಳವಳಿದು ಪಳಯಿಸುವಳಂ ಕರೆದು ನೆರೆದ ಜನದೊಳಪ್ಪುಗಿಸಿ ನರೇಂದ್ರುತುರಗಖುರಹತಿಯಿಂ ಮಡಿದನೆಂದು ತೋಱಲೊಡನಾ ರುಂಡಮಮಂ ಮುಂಡಮಮಂ ಕಂಡಡವಿಗಿರ್ಚುಗೊಂಡ ಪುಲ್ಲೆಯಂತೆ ಹರಣಂ ಹಮ್ಮೈಸಿ ಪರ್ದೆಱಗಿದುರಗಿಯಂತೆ ಮಿಡುಮಿಡುನೆ ಮಿಡುಕಿ ಕ[1]ಡಿ[1]ವಡೆ[2]ದೆಳೆ[2]ವಳ್ಳಿಯಂತೆ ಕಱಗಿ ಕೊಱಗಿ ಪೊಸೆದಿಟ್ಟ ಪೂಮಾಲೆಯಂತೆ ಕಂದಿ ಕುಂದಿ ಮಂದೈಸಿದಳಲಿಂ ಮುಂದುಗೆಟ್ಟು ಕೆಟ್ಟೆಂ ಕೆಟ್ಟೆನೆಂದು ಬಸಿಱಂ ಪೊಸೆದು ದೆಸೆದೆಸೆಗೆ ಬಾಯಂಬಿಟ್ಟು ಮೊಱೆಯಿಟ್ಟು ಮಱುಗಿ—

ಎಳೆಗಿಳಿಯಂ ಕೊಱಲ್ಮುಱಿದು ಮೋದಿದರಾರ್ಮುಱಿಯಂಚೆಯಂ ಭಯಂ
ಗೊಳಿಸುತೆಱಂಕೆಯಂ [3]ಪಱಿದು[3] ಪೊಯ್ದವರಾರ್ಮೃಗಶಾಬಮಂ ಕರಂ
ಮುಳಿದು [4]ಶಿರೋಧಿ[4]ಯಂ ಕೆಡೆಯಲೆಚ್ಚವರಾರ್ಬಿಸನಾಳಕಾಂಡಕೋ
ಮಳತರಕಂಠಮಂ ಕಡಿದುರುಳ್ಚಿದರಾರ್ಸುಕುಮಾರಶೇಖರಾ ॥೧೦೫॥

॥ವ॥ ಎಂದಾ ಕಬಂಧಮನೆತ್ತಿ ತೊಡೆಯೊಳಿಟ್ಟಾ ರುಂಡಮಂ ಕರಯುಗದೊಳ್ಪಿಡಿದಶ್ರುಮಿಶ್ರಕಟಾಕ್ಷದಿನೀಕ್ಷಿಸಿ ಮೊಗದೊಳ್ಮುಸುಂಕಿದ ಧೂಳಿಯಂ ಮೇಲುದಿನೊಳೊಯ್ಯನೊಱಸಿ ಕೆಲಸ[5]ರಿ[5]ದ ಮಾಂಗಾಯ್ಗುಳನೋಸರಿಸಿದರಳೆಲೆಯಂ ಸೈತುಮಾಡಿ ಗಲ್ಲಮಂ ಪಿಡಿದು ಪೆಲ್ಲನಲುಗಿ ಮುದ್ದಿಸಿ ಮುಂಡಾಡಿ ನೋಡಿ ಮೇಱೆದಪ್ಪಿದಳಲಂ ಸೈರಿಸಲಾಱದೆ—

ಹಾ ಮಗನೆ ಹಾ ಮನೋಜ್ಞನೆ
ಹಾ ಮುದ್ದುಗ ಹಾ ಮದೇಭಗತಿ ಮಂಜುಳ ಹಾ
ಹಾ ಮಧುರವಾಣಿ ಹಾ ಮ
ತ್ಪ್ರೇಮಾಸ್ಪದ ಹಾ ಮದೀ[6]ಶ[6]ವಂಶಲಲಾಮಾ ॥೧೦೬॥

ಎಲ್ಲಿಯ ಹಯಮೆಲ್ಲಿಯ ನೃಪ
ನೆಲ್ಲಿಯ ವೈಹಾಳಿಯೆಲ್ಲಿಯತಿಕಳಕಳಮಿಂ
ತೆಲ್ಲಿಯ ದರ್ಶನಗಮನಮಿ
ದೆಲ್ಲಿಯ ಮೃತಿ ನಿನಗೆ ಬಂದುದೆಲೆ ಸುಕುಮಾರಾ ॥೧೦೭॥

---

೧ ಡೆ (ಮೂ) ೨ ದ (ಮೂ) ೩ ಮುಱಿದು (ಮೂ) ೪ ಶರಾಳಿ (ಬ) ೫ ರಿಸಿ (ಮೈ) ೬ ಯ (ಅ).

ಮುನ್ನಱುವರಳಿದಳಲನೆಲೆ
ನಿನ್ನಂ ನೆಱೆನೋಡಿ ಮಗನೆ ಮಱೆದಿರ್ದೆಂ[೧] ಪೇಳ್
ಇನ್ನಾರಿಂದಂ ಮಱೆದಪೆ
ನೆನ್ನೊಳುಸುರ್ಸುಮ್ಮನಿರದಿರೆಲೆ ತನುಜಾತಾ ॥೧೦೮॥

ಗಳಗಳನೆ ಬಳೆದು ಧನಮಂ
ಗಳಿಸಿ ಚರಾರ್ಚನೆಯನೆಸಗಿ ಹರಕೃಪೆವಡೆದು
ಜ್ವಳಸುಖಮನೀವನೆಂದಿರೆ
ತಿಳಿವಿಲ್ಲದೆ ಮಗನೆ ತುರಗಹತಿಯಿಂ ಮಡಿದೈ ॥೧೦೯॥

ಕೊರಲಂ ಮೆಟ್ಟುವ ಪದದೊಳ್
ತುರಗಂ;ಕಂಗೆಟ್ಟು ಜನನಿಯೆಂದೆನ್ನಂ ನೀ
ಕರೆದೆಯೊ ಮಱೆದೆಯೊ ದೋಷಾ
ಕರೆಯೆಂದೇಂ ತೊಱೆದೆಯೋ ತನೂಜನೆ ಪೇಳೈ ॥೧೧೦॥

॥ವ॥ ಇಂತಳವಳಿದವಳ್ಪಲವಾಡಿ ಪಳಯಿಸುತ್ತಿರ್ಪಾಗಳ್—

ಇವಳವನಿಪಂಗೆ ಮೊಱೆಯಿ
ಕ್ಕುವಳಾನಿರೆ ಕುವರರೆಸಗಿದಪರಾಧಮನೆಂ
ದವಧರಿಸಿ ಪೋದನೆಂದೆನೆ
ರವಿ ಪಶ್ಚಿಮಗಿರಿಯ ಶೃಂಗಮಂ ಮಱೆಗೊಂಡಂ ॥೧೧೧॥

॥ವ॥ ಆಗಳ್—

ವರುಣಾಶಾವನಚೂತವಲ್ಲಿ ಗಗನಾಲಂಬಕ್ಕೆ ಪರ್ಬಿರ್ದು ಭಾ
ಸ್ಕರಚೈತ್ರಂ ಬರೆ ಸಂಜೆಗೆಂಪೆನಿಪ ಭಾಸ್ವತ್ಪಲ್ಲವಂದಾಳ್ದು ಸೈ
ತಿರೆ ಪೂರ್ವಾಶೆಯಿನಲ್ಲಿಗೈದುವ ಪಿಕಾನೀಕಂಬೊಲಿಂಬಾಯ್ತು ನೋ
ಳ್ಪರ ಕಣ್ಗಂಧತಮಂ ತಮಾಲಕತಮಶ್ರೀಶಾಂಬುದಶ್ಯಾಮಳಂ ॥೧೧೨॥

೧ ರ್ದೆ (ಮೈ).

॥ವ॥ ಅಂತು ತನ್ನಳಲುರಿಯ ಪೆರ್ಬೊಗೆ ಕವಿದಂತೆ ಕವಿದ ಕಡುಗೞ್ತಲೆಯೊಳಾ ತಿರುಕೊಳವಿನಾಚಿ ತನ್ನ ಮಗನ ಕಳೇವರಮನೆತ್ತಿ ತಳ್ಕೈಸಿಕೊಂಡೆಂತಾನು ಮಲ್ಲಿಂದೇಳ್ದು ನಿಜಗೃಹಕ್ಕೇೞ್ತಂದು ಮುಂಡಮಂ ರುಂಡಮಂ ಪತ್ತಿಸಿ ನೋಡಿ ಮತ್ತಮಿರದೆ—

ಕಡ್ಡವರಮಡಂಗಿತೇ, ಪೊಸ
ಕಡ್ಡಾರಮಿಂದಕಟ ಮಾಯಮಾದುದೆ, ಮೆಱೆವಿರ
ಗಡಲಿಂಗಿಪೋದುದೇ, ಕಡಿ
ವಡಿದುದೆ ಕಲ್ಪಾವನೀಜಮಿದು ವಿಧಿವಶದಿಂ ॥೧೧೩॥

ಪಸಿದೆಯೆಲೆ ಕಂದ, ಬತ್ತಿತು
ಬಸುಱಿದು, ಕಳೆಗುಂದಿತಾನನಂ, ಕಣ್ಬೊಣರ್ಗಳ್
ಮಸುಳ್ದುವುಣಲ್ಬಡೆಯದೆ ಮಿಗೆ
ಬಸವಳಿದಿಂತಿರ್ಪುದುಚಿತವೇ ಸುಕುಮಾರಾ ॥೧೧೪॥

ಸರಿವರೆಯದ ಮಕ್ಕಳ್ಶಂ
ಕರನೆಲ್ಲಿದನಾಡಲೆಂದು ಬೆಸಗೊಳಲೇನೆಂ
ದಿರದೆ ಮಱುಮಾತುಗೊಟ್ಟಪೆ
ನರಸನ ಹಯದಿಂದೆ ಮಡಿದನೆಂಬೆನೆ ಮಗನೇ ॥೧೧೫॥

ನೀನಾಡಿದೆಡೆಗಳಂ, ಸುತ,
ನೀನೊಱಗಿದ ಪಾಸುವಂ, ತನೂಭವ, ಪದಪಿಂ
ನೀನುಂಡ ತಾಣಮುಮನಿ
ನ್ನಾನೆಂತೀಕ್ಷಿಸುವೆನೆಂತು ಸೈರಿಪೆನಕಟಾ ॥೧೧೬॥

ಗಾಡಿಯೊಳಾಡಿ ಮಕ್ಕಳೊಡನಂಗಣಕ್ಕೈದಿರೆ ತಳ್ತ ಧೂಳಿಯಂ
ನಾಡೆ ಸೆಱಂಗಿನಿಂದೊಱಸಿ ಮೈದೊಳೆದೊಳ್ಪಣೆಸಿಂಕ್ಕಿ[1] ಮುದ್ದುಗೈ
ದೂಡಿ ವಿಳಾಸಮಂ ಮೆಱೆದು ಸಿಂಗರಿಸುತ್ತಮದರ್ಪ್ಪಿ ಬೇಡಿತಂ
ನೀಡಿ ನಿರೀಕ್ಷಿಪೆನ್ನಸುಳಿದೊರ್ವನೆ ಪೋಪುದೆ ನೀಂ ತನೂಭವಾ ॥೧೧೭॥

---

೧ ತ್ತು (ಅ)

ಅಳಲದಿರು ತಾಯೆ ದುಃಖಂ
ಗೊಳದಿರ್ ನೀನೆಂದು ನೋಡಿ ಸಂತೈಸದೆ ಕ
ಣ್ಗಳ ಜಳಮಂ ತೊಡೆಯದೆ ಕಡು
ಮುಳಿದರವೋಲ್ಸುಮ್ಮನಿರ್ಪುದೇ ಸುಕುಮಾರಾ ॥೧೧೮॥

ನೋಡುವ ಕಣ್ಣೊಡೆದುದು ಮಾ
ತಾಡಿಪ ನಾ[1]ಲ[1]ಗೆ ಮುರುಂಟಿದುದು ನಿನ್ನಂ ಮುಂ
ಡಾಡುವ ಕೈಯುಡಿದುದು ಸಲೆ
ಪಾಡುವ ಬಾಯ್ಬೆಂದುದಣುಗ ನೀಂ ಮಡಿಯಲೊಡಂ ॥೧೧೯॥

ಆರೊಡನುಸುರ್ವೆಂ ದುಃಖಮ
ನಾರುಂಟೆನಗಕಟ ಮಗನೆ ಮಗನೆ ಮನೋಜಾ
ತಾರಿಯ ಕೃಪೆ ತಪ್ಪಿದ ಬಳಿ
ಕಾರಾದೊಡಮೇನೊ ನಿನ್ನನೇಂ ಕಾಣಿಪರೇ ॥೧೨೦॥

॥ವ॥ ಎಂದಾಕ್ರಂದನಂಗೈದಳಲ್ದು ಬಳಲ್ದು ಬಸವಳಿದು ಬಲ್ಪುಗುಂದಿ ಬಿಸು-ಸುಯ್ದು ಬಸುಱಂ ಪೊ[2]ಸೆ[2]ದು ದೈನ್ಯಂಬಟ್ಟು ಬಾಯಂ ಬಿಟ್ಟು ಪೆಸರ್ಗೊಂಡು ಕರೆಕರೆ[3]ದೊ[3]ಳರ್ದು—

ಮಗನೆ ನೀನಿಂತಳಿಯೆ ಸೈರಿಪೆನೆಂತೊ ಪೇಳ್ಕೈ ಶಂಕ[4]ರಾ[4]
ಸುಗುಣನಿಧಿ ನೀನೆನ್ನ ಮೊಱೆಗಳನೊರ್ಮೆ ಕೇಳ್ಕೈ ಶಂಕರಾ ॥೧೨೧॥
ಪರಸಿ ಪಾಡಿ ಮಹೇಶನಿಂದವೆ ಬೇಡಿ ಮುನ್ನಂ [5]ಶಂಕರಾ[5]
ತುರಗಖುರಕೆಂದಕಟ ಪೆತ್ತೆನೆ ಕುವರ ನಿನ್ನಂ ಶಂಕರಾ ॥೧೨೨॥
ಎಂತು ಮಱೆವೆನೊ ಸವಿಯ ಸಾಲಿಡುವಮುರ್ದುನಗೆಯಂ ಶಂಕರಾ
ಕಾಂತಿ ಶೋಭಿಸೆ ಮುದ್ದುವೀಱುವ ಮೊಗದ ಬಗೆಯಂ ಶಂಕರಾ ॥೧೨೩॥
ಝುಣಝುಣಿಸೆ ಕಿಱುಗೆಜ್ಜೆ ಕರತಳತಾಳರವಕೇ ಶಂಕರಾ
ಕುಣಿವ ನಿನ್ನಯ ಬಿನದಮೊಪ್ಪುಗುಮೆನ್ನ ಮನಕೇ ಶಂಕರಾ ॥೧೨೪॥
ಶರಣಪದಪಂಕಜರಜಂಗಳೊಳಾಳದಂತುಂ ಶಂಕರಾ
ತುರಗಖುರಹತಿಜನಿತಧೂಳಿಯೊಳಳಿದೆಯಿಂತುಂ ಶಂಕರಾ ॥೧೨೫॥

---

೧ ಲಿ (ಮೈ, ಬ, ಧಾ, ಕ) ೨ ಸಿ (ಕ) ೩ ದ (ಮೂ) ೪ ರ (ಮೈ) ೫ ಮೈ. ಬ, ಧಾ ಪ್ರತಿಗಳಲ್ಲಿ ಮೊದಲನೆಯ ಪದ್ಯ ಬಿಟ್ಟುಳಿದ ಕಡೆ ಶಂಕರಾ ಎಂಬುದನ್ನು ಬಿಡ ಲಾಗಿದೆ.

ಎನ್ನನೋವುವನೆಂದು ನಂಬಿರಲಿಂತು ಮಡಿದೈ ಶಂಕರಾ
ಮುನ್ನಮೆನ್ನಯ ಹರ್ಷವಲ್ಲಿಯ ಕುಡಿಯನುಡಿದೈ ಶಂಕರಾ ||೧೨೬||

ನಿನ್ನಳಿವನೀಕ್ಷಿಸಿಯುಮೆನ್ನಸು ಪೋಗದಂದುಂ ಶಂಕರಾ
ನಿನ್ನೊಳೆನ್ನಯ ಕೂರ್ಮೆ ನಿಜಮೆಂತೆನಿಪುದಿಂದುಂ ಶಂಕರಾ ||೧೨೭||

ಹರಣದ[1]ಳಿ[2]ವಿಂಗಂಜುವೆನೆ ನಿನ್ನಾಣೆ ಮಗನೇ ಶಂಕರಾ
ಶಿರವರಿದು ನಿನ್ನಂದವಾಗದೆ ಪಿಂಗಿದಪೆನೇ ಶಂಕರಾ ||೧೨೮||

||ವ|| ಎಂದು ನಂದನನ ಗುಣವೃಂದಮಂ ನೆನೆನೆನೆದಾಕ್ರಂದಿಸಿ ಮತ್ತಮಿರದೆ—

ಪರಮ ಕೃಪಾಕರನೆಂಬೀ
ಬಿರುದಂ ಬಿಸುಟಕಟ ಶಂಕರಾ ಶಂಕರನಂ
ಹರಿರಿಸಿ ನಡುಗಾಡೊಳಂಥೆಯ
ಕರದಂಡಮನೆಳೆದುಕೊಂಡವೋಲ್ಮಾಡಿದೆಯೈ ||೧೨೯||

ಎಲೆ ಗಿರಿಜಾತೆ ಮಾತೆ ಕರುಣಾಕರೆ [3]ಶಾ[3]ಂಕರಿ ದಿವ್ಯರೂಪೆ ನಿ
ರ್ಮಲೆ ನಿಗಮಾಗಮಸ್ತುತೆ ಮಹೇಶ್ವರಿ ಮಂಗಳಮೂರ್ತಿ ಭಕ್ತವ
ತ್ಸಲೆ ರತಿಗಂದಳಲ್ಗ([4]ಳೆ[4])ದ ದೇವಿ ರಮಾನತೆ ನೊಂದೆನಿಂದು ನಿ
ನ್ನಲಘುಕೃಪಾಕಟಾಕ್ಷದಿನಭೀಕ್ಷಿಸಿ ರಕ್ಷಿಪುದೆನ್ನನಂಬಿಕೇ ||೧೩೦||

||ವ|| ಎಂದು ಹಂಬಲಿಸಿ ಹಳಯಿಸುತ್ತುಮಿರೆಯಿರೆ—

ಇಂದೆನ್ನ ವಂಶಭವರೊಲ
ವಿಂದಂ ಪನ್ನತಿಕೆದೋಱಿ ಬರಿಪರ್ಗಡ ಬಾ
ಲೇಂದುಶಿರೋಮಣಿಯಂ ನೋ
ಳ್ಪೆಂ ದಿಟಮೆಂದೆಯ್ದಿದಂತೆ ಮೂಡಿದನರ್ಕಂ ||೧೩೧||

ಮೂಡಣದಿಕ್ಕು ಕೆಂಪಡರೆ ಮೂಡಿದ ದಿವ್ಯದಿನೇಶಬಿಂಬಮಂ
ನೋಡಿ ಶಶಾಂಕ[5]ಶಂಕೆದಳೆದಂತೆ[5]ವೊಲುತ್ಪಳಮುಂ ಸರೋಜಮುಂ
ಕೂಡಿರೆ ಸಂಜೆ ನೀಳ್ದಿಸಳನೊಂದನಮರ್ಚುವ ಬಿರ್ಚುವಾಟಮಂ
ಮಾಡಿದುವಂತೆ ಸಂಪೆಗಮೆ ಸತ್ವರಕಾರ್ಯಕೆ ವಿಘ್ನಮಲ್ಲ[6]ವೇ[6] ||೧೩೨||

---

೧ ಳು (ಬ) ೨ ರಿ (ಮೈ, ಭ, ಮೂ, ಕ) ೩ ಶಂ (ಧಾ) ೪ ಳಿ (ಮೈ, ಬ, ಮೂ. ಧಾ, ಕ)
೫ ಶಂಕೆಯುಮನಾಂತ (ರಿ, ಮೂ) ೬ ದೇ (ಮೈ, ಮೂ) ದೆನೇ (ಬ)

ನೀಲಾಚಲ[೧]ನಿ[೧]ಚಯಂ ಸಲೆ
ಸಾಲಿಟ್ಟೈದಿ[೨]ದ್ದುದು[೨] ಕದನಕೆಂದಂಧತಮೋ
ಜಾಲಮನಾಲೋಕಿಪ ಸುರ
ಪಾಲನ ಮಕುಟಂಬೊಲೆಸೆದುದಾ ರವಿಬಿಂಬಂ ॥೧೩೩॥

॥ವ॥ ಆಗಳವಳ್ನಿಜಾಲಯಮಂ ಪೊಱಮಟ್ಟು ರಾಜವೀ[೩]ಧಿ[೩]ಗೇಳ್ತಂದು—

ನೊಂದು ಪಲುಂಬಿ ಪಂಬಲಿಸಿ ಮೇಣ್ಪಲವಾಡಿ ಬಳಲ್ದು ಬಾಡಿ ಕ
ಣ್ಣಿಂದಿಳಿವಶ್ರು ಕಾಳ್ಪುರಮುದಾಗಿರೆ ಬಾಯ್ದೆಱೆ ಬತ್ತೆ ಮತ್ತೆ ಶೋ
ಕಂ ದಳವೇಱೆ ಪೌರರಳಲುತ್ತಿರೆ ತಾನಳುತಲ್ಲಿ ತಾಳ್ದು ತ
ನ್ನಂದನನಂಗಮಂ ಮೊಱೆಯಿಡಲ್ನಡೆಗೊಂಡಳಿಳಾಧಿನಾಥನೊಳ್ ॥೧೩೪॥

ದೆಸೆಗಳ್ಮಾರ್ದನಿಗುಡೆ ಬಿಡ
ದಸವಸದಿಂದೊಳರ್ವ ನಿನದದಿಂ ಕಣ್ಬನಿಯಿಂ
ರಸೆ ಕೆಸಱೆೞ್ದಿರೆ ಬಂದ
ಳ್ಬಸವಳಿಯುತ್ತಳಲುತರಸನರಮನೆಯತ್ತಲ್ ॥೧೩೫॥

॥ವ॥ ಅಂತು ಬರ್ದು [೪]ಸತ್ಯೇಂದ್ರ[೪]ನಂತಃಪು[೫]ರ[೫]ಬಹಿರ್ದ್ವಾರದೇಶದೊಳ್ನಿಂದು ನೀ[೬]ಡುಸರಂ[೬]ದೋಱೆ ಕೊರಲೆತ್ತಿ ಕರಮಂ ನೆಗಪಿ—

ವಿಪುಳತರಧರ್ಮಸಾಮ್ರಾ
ಜ್ಯಪಾಳಸತ್ಯಾಬ್ಧಿಚಂದ್ರ ಸತ್ಯೇಂದ್ರಧರಾ
ಧಿಪ ಮೊಱೆಯೊ ಶಿವ ಸದಾಶಿವ
ಕೃಪಾರಸಾಮ[೭]ತ್ರ[೭]ಪುತ್ರನಳಿದಂ ಕೆಳದಂ ॥೧೩೬॥

॥ವ॥ ಎಂದವಿದಿಡುವಾಕ್ರಂದನಸ್ವರಮಂ ಕೇಳ್ದು ಶಿವಭಕ್ತಗರ್ಜದ ಸೋವಪ್ಪುದೋಯೆಂದು ಘನನಿನಾದಮಂ ಕೇಳ್ದ ರಾಜಹಂಸನಂತೆ ರಾಜಹಂಸಂ ಸೆಡೆದು ಸಿಡಿಮಿಡಿಗೊಂಡಂತಪುರದಿಂ ಚಿಂತಾಭರದಿನೇಳ್ತಂದು ಸಿಂಹಾಸನಾರೂಢನಾಗಿ ರೋದನಾಲಾಪಮೆತ್ತಣದೆಂಬನಿತಱೊಳ್ಬಂದೊರ್ವವೃದ್ಧಕಂಚುಕಿ ಕೈಮುಗಿದಿಂತೆಂದಂ—

೧ ಗೀನಿ (ಬ) ೨ ದಿಂದು (ಮೂ) ೩ ಥಿ (ಧಾ, ಬ) ೪ ಸತ್ಯೇಂದ್ರಚೋಳ (ರಿ, ಙ) ೫ ರದ (ಮೈ) ೬ ಸರಂ (ಮೈ, ಮೂ, ಬ) ೭ ತ್ (ಬ)

ಕಂದನ ಪಂದಲೆಯಂ ಪಿಡಿ
ದಿಂದೀವರನಯನೆಯೊರ್ವಳುಱೆಮೊಱೆಯಿಡುತುಂ
ಕಂದರ್ಪರಿಪುಗೆ ಬಾಗಿಲೊ
ಳಂದಂಗೆಟ್ಟಳುತುಮಿರ್ಪಳವನಿಪತಿಲಂ೧ಕಾಂ ॥೧೩೭॥

॥ವ॥ ಎನಲಾನೆ ವಿಚಾರಿಪೆಂ ತಳ್ವದೊಳಪುಗಿಸೆಂಬುದುಮವಂ ಮಹಾಪ್ರಸಾದ ಮೆಂದವಳನೊಳಪುಗಿಸಿ ಕರೆದುತರ್ಪಾಗಳ್—

ಕರತಳದಲ್ಲಿ ತಾಳ್ದ ತಲೆ,ಸೋಂಗಿಲೊಳಿಟ್ಟ ಕಬಂಧಮೆತ್ತಲುಂ
ಪರೆದಳಕಾಳಿ,ಧೂಳಿ ಪುದಿದಂಗಮುಡಂಗಿದ ಜಲ್ಪ ನೇತ್ರದೊಳ್
ಪೊರೆದ ಸೆಱಿಂಗು , ಪಾಯ್ದುಗುವ ಕಣ್ಬನಿ,ಬತ್ತುವ ಬಾಯ್ದೊದಲ್ದಸು
ಯ್ಕೊರಗಿದ ವಕ್ತ್ರಮುಚ್ಚಳಿತಹಾರವಮೊಪ್ಪಿರೆ ಬಂದಳಾರ್ತದಿಂ ॥೧೩೮॥

॥ವ॥ ಅಂತು ಬಂದಾ ನರೇಂದ್ರನಿದಿರೊಳಾ ರುಂಡಮಂ ಮುಂಡಮನಿೞಿ೨-ಪುತ್ತಳಲಿರ್ಮಡಿಸೆ ಶೋಕೋದ್ರೇಕಗದ್ಗದಕಂಠೆಯಾಗಿ ಗಂಟಲೊಡೆವಿನಮೊಳದುೞ ಮೊಱೆಯಿಟ್ಟು ಮಱುಗಿ ಮಗುಳ್ದುಮಗುಳ್ದಳುತ್ತುಮಿರೆಯಿರೆ—

ಅಳದಿರೆಲೆ ತಾಯೆ,ನೀನಾ
ಳಿದಣುಗನಿದಾರವಂ,ಕೊರಲ್ಗೊರೆದ ಮಹಾ
ಖಳನಾವನಾತನಂ ಪೇ
ಳ್ವೞಿಯೊಳ್ನೆಱೆ ಕಾಣ್ಬೆನಿದಕೆ ತಕ್ಕುಜ್ಜುಗಮಂ ॥೧೩೯॥

॥ವ॥ ಎನಲೆಂತಾನುಮಳಲಂ ಸಂತೈಸಿಕೊಂಡು ಕೈಮುಗಿದು ನಿಂದು ಕರುಣಾಂತರಂಗಂಗೆ ಸತ್ಯೇಂದ್ರಂಗೆ ಗದ್ಗದಾಂಕುರಿತಶಿಥಿಲಾಕ್ಷರಂಗಳ್ಪೊಱಮಡೆ ಪೇಳಲ್ಮ-ಗುಳ್ದಿಂತೆಂದಳ್—

ಕೇಳವನೀಶವರ್ಯ,ಭವದೀಯ ಪುರಸ್ಥಿತನಾಗಿ ಸದ್ವಣಿ
ಗ್ಜಾಳದೊಳೇಳ್ಗೆವೆತ್ತು ಸಿರಿಯಿಂ ಗುಣದಿಂ ಶಿವಭಕ್ತಿಯಿಂ ಕರಂ
ಬಾಳುತುಮಿರ್ದನೊರ್ವ ರವಿನಾಮಿವಣಿಗ್ವರನೆನ್ನ ವಲ್ಲಭಂ
ಪಾಳಿಯೊಳೀಶಭಕ್ತಚರಣಾಬ್ಜಸಮರ್ಚನೆಗೆಯ್ವುತಳ್ಕಱಿಂ ॥೧೪೦॥

---

೧ ಕಂ (ಕ) ೨ ಞು (ಮೈ, ಬ, ಮೂ)

ಪಿರಿದು ಸಿರಿಯೆಸಕದಿಂದಾ
ನಿರುತವನೊಡಗೂಡಿ ಪಡೆದೆನಱುವರುಮಂ ಪು
ತ್ರರನಮಳಗಾತ್ರರಂ ಭೂ
ವರ ಕೇಳ್ಸುಖದಿಂದಮಿರ್ದೆನಿರ್ಪನ್ನೆವರಂ ॥೧೪೧॥

ತನಗುಳ್ಳರ್ಥಮನೆಲ್ಲಮಂ ಬಿಡದೆ ಕೊಂಡುತ್ಸಾಹದಿಂದಂ ವಣಿ
ಗ್ಜನಯುಕ್ತಂ ಕಡಲೊಳ್ಪಡಂಗಡರ್ದು ಪೋಗುತ್ತಿರ್ದೊಡಾ ನಾವೆ ತ
ದ್ಘನವಾರಾಶಿಯೊಳಾಗಳಾಳೆ ಮಗುಳ್ದಿನ್ನಾಳ್ದಂ ಸಮಂತಾಳ್ದು ಜೀ
ವನದೊಳ್ಜೀವನಮಂ ವಿಸರ್ಜಿಸಿದನೇನೆಂಬೆಂ ಮಹೀಪಾಲಕಾ ॥೧೪೨॥

॥ವ॥ ಅಂತುಮಾ ಮಾ[1]ರ್ತ[2]ಂಡನಸ್ತಮಯಮಾರ್ತಂಡನಂತೆ ನಿಜವಸ್ತುಸಮೇತಂ ವನಧಿಮಧ್ಯದೊಳ್ ಮುಳುಂಗಿ ಪೋಗಲೊಡನೆ—

ಸಮನಿಸಿದುದೆನಗೆ ಚಿಂತಾ
ತಿಮಿರಂ ಮತಿನೇತ್ರಮಳಿದುದಮಳಿನತರಹೃ
ತ್ಕಮಳಂ ಕೊರಗಿದುದಸುಚ
ಕ್ರಮಿದುಬ್ಬೆಗಮಾಂತುದಾರ್ತಜನವನಚೈತ್ರಾ ॥೧೪೩॥

ಎನಗಿನನಿಂತಳಿವಂದಿನ
ದಿನಕ್ಕೆ ಮೂದಿಂಗಳೆಸೆವ ಗರ್ಭಂ ನೆಲಸಿ
ತ್ತನುಗತಮಾದುದು ಕಡುಬಡ
ತನಮೊಡನೆ ಶಿವೈಕ್ಯಸೂಕ್ತಿಕರ್ಣಾಭರಣಾ ॥೧೪೪॥

ಕಡುರುಜೆಯಡಸಿದ ತನುವುಂ
ಬಡತನಮೆಡೆಗೊಂಡ ಬಾಳ್ಕೆಯುಂ ಖಲಜನರೊಂ
ದೊಡನಾಟಮುಮೆರ್ದೆಗಳಲಂ
ಪಡೆಯದೆ ಮಾಣ್ದಪುದೆ ಶೈವಹಿತಶುಭಚರಿತಾ ॥೧೪೫॥

ಪತಿಗತಿಯೆ ಸತಿಗೆ ಗತಿಯೆಂ
ಬತಿಶಯಮುಮಂ ತಾಳ್ದು ತನುವಹಿತ್ರಸಮೇತಂ
ತತದುಃಖಾಂಬುಧಿಯೊಳ್ಸಂ
ಗತಿವಿಡೆದಾಳ್ದಿಂ ಶಿವಾಂಘ್ರಿನಖಮಣಿಮುಕುರಾ ॥೧೪೬॥

---

೧ ರ್ತಾ (ಮೈ, ಮೂ, ಬ) ೨ ವಿ (ಕ).

ಬಡಬಶಿಖಿಯಲ್ಲಿ ಪರ್ಬುವ
ಪೊಡರ್ಪನೊಳಕೊಂಡು ಮೇಲೆ ಮೇಲ್ಕೈತರ್ಪೆ
ನ್ನೊಡಲುರಿಯನವಧರಿಸು ನಿ
ನ್ನಡಿಗೆಱಗಿದಪೆಂ ಪರೋಪಕೃತಿಗುಣಧಾಮಾ ॥೧೪೭॥

ಅಱುದಿಂಗಳೊಳಗೆ ತನುಭವ
ರಱುವರ್ಗಳಗಳನೆ ರುಜೆಯಿನಳಿದರ್ಪೇಳಲ್
ಪೆಱತೇನೊ ದುಃಖಮಿಂತೆಂ
ದಱುಪಲ್ನೆರೆದಪೆನೆ ಕೀರ್ತಿಧವಳಿತಭುವನಾ ॥೧೪೮॥

ಉರಿದುದು ಬಗೆ, ಮಿಗೆ ಬೆಂದುದು
ಹರಣಂ, ತನುಕಂದಿ ಕುಂದಿದುದು, ಕಳವಳಮೊ
ತ್ತರಿಸಿದುದು, ಮೂರ್ಛೆ ಬಿಡದಾ
ವರಿಸಿದುದೆನಗಾಗಳತುಳಸತ್ಯನಿ[೧]ಧಾ[೧]ನಾ ॥೪೪೯॥

॥ವ॥ ಆ ಮೂರ್ಛೆಯೊಳಾನಿರ್ಪಾಗಳುಮಾರಮಣನಮಿತಶಿಕೃಪೆ[೨]ಯಿನೇಳ್ತಂ-
ದಂಜದಿರೆಂದಭಯಮಿತ್ತು—

ಕಯ್ದಳಿರಿಂದೆ ಮೈದಡವಿ, ವಾಮವಿಲೋಚನದಿಂದೆ ನೋಡಿ, ಸೈ
ಪೆಯ್ದೆ ಪದಾಬ್ಜಮಂ ಪಣೆಯೊಳಿಟ್ಟಳದಿರ್ನಿನಗೊರ್ವ ಸೂನು ತಾ
ನೆಯ್ದೆ ಗುಣಾಂಕನುದ್ಭವಿಪನೀಯಳಲಂ ಪಱಿದಿಕ್ಕಿ ಮುಕ್ತಿಗೊ
ಲ್ದೊಯ್ದಪನೆಂದು ಪೇಳ್ದು, ತಳರ್ದಂ ತರುಣೇಂದುಧರಂ ಧರಾಧಿಪಾ ॥೧೫೦॥

ತಿಳಿದುದನಿತ[೩]ಱೊಳಿ ಮೂರ್ಛಾ
ಕುಳತೆ ಮನಸ್ತಾಪಮುಳಿದು[೪]ಮೊ[೪]ಳಸಾರ್ದುದು ವಿ
ಹ್ವಳತೆ ಶಿವನೊಲವದೇನಂ
ಕಳೆಯದೊ ಮನದಳಲನವನಿಪಾಲಕತಿಳಕಾ ॥೧೫೧॥

೧ ದಾ (ಕ) ೨ ಪ್ರೇರಣಾಕೃಪೆ (ಮೈ, ಬ), ಪ್ರೇರಣೆಕೃಪೆ (ಮಪ) ೩ ದೊ (ಕ)
೪ ಲ (ಧಾ, ಕ).

ನಂಬಿದ್ದೆನಂಬಿಕೆಯರಸನೊ
ಡಂಬಡೆ ಪೇಳ್ದ ಮಳವಚಮನ್ನನ್ನಿತಱಿೊಳೊಗೆತಂ
ದಂ ಬಾಲಕನಿವನೆನ್ನಳ
ಲಂ ಬಱಿಕೆಯ್ದಂ ವಿಳಾಸದಿಂದಿಳೆಯರಸಾ ॥೧೫೨॥

ಹರನೊಱಿದ ತೆಱಿದೊಳುಱಿ ಶಂ
ಕರನೆಂದ್ದೊಳ್ವಿಸರನಿಟ್ಟು ಗತಿಯುಂ ಮತಿಯುಂ
ಪರಸುಖದನ್ನೀತನೆಂದಾಂ
ಪೊರೆದೆಂ ಪೊರೆವಂತೆ ಕಲ್ಪಭೂಜದ ಸಸಿಯಂ ॥೧೫೩॥

ಇಹನಸ್ತಮಿಸಿದೊಡೊದವಿದ
ಘನತಿಮಿರಮನಿಂದು ಕಳೆವವೊಲ್ನೆಱಿ ಕಳೆದಂ
ಇಹನಸ್ತಮಿಸಿದೊಡೊದವಿದ
ಘನದುಃಖಮನಿಂದುನಿಭನಿವಂ ಮನುಜೇಂದ್ರಾ ॥೧೫೪॥

ಹರೆಯಂ ಕಿಱಿದಾದೊಡಮೇಂ
ಪಿರಿದೊ ವಿವೇಕಂ ಶಿವಾಂಕಮಾಲೆಯನತ್ಯಾ
ದರದಿಂ ಪಾಡುವನಭವನ
ಶರಣರ್ಗೆಱಗುವನವಂದಿಱಿೊಳ್ಬಿನದಿಸುವಂ ॥೧೫೫॥

ಶಿವಕೀರ್ತನಮಂ ಕೇಳ್ವಂ,
ಶಿವಾಂಘ್ರಿಪೂಜೆಯನೊಱಲ್ದು ನೋಳ್ಪಂ ಮುದದಿಂ
ಶಿವನಾಮಮನುಚ್ಚರಿಪಂ,
ಶಿವಂಗೆ ಕೊಟ್ಟಲ್ಲದೇನುಮಂ ಕೊಳಲೊಲ್ಲಂ ॥೧೫೬॥

॥ವ॥ ಇಂತಭಿನವಾಶ್ಚರ್ಯಕರಪವಿತ್ರಚರಿತ್ರನೆನಿಸಿ ಪುತ್ರಂ ಪಂಚವರ್ಷಂಬರಂ ನೆರೆದೆಸೆದಿರ್ದನಿರ್ಪನ್ನೆಗಂ—

ನಿನ್ನಿನ ಮುಂಬಗಲ್ಪದೆದು ನಿನ್ನ ಕುಮಾರನಮಾತ್ಯಪುತ್ರನುಂ
ಚೆನ್ನೆಸೆದಿರ್ಪಿನಂ ವಿಹರಿಪಲ್ಲಿ ಪುರಾಂತದೊಳೈದಿಬರ್ಪ ಸೇ
ನೋನ್ನತಿಯಂ ನಿರೀಕ್ಷಿಸಲಿವಂ ಪೊಱಿವಟ್ಟಿರೆ ತತ್ತುರಂಗಮೋ
ತ್ತನ್ನಿಜಮಸ್ತಕಂ ಪಱಿಯೆ ಮೆಟ್ಟಿದುದುತ್ಸುರದಿಂ ಧರಾಧಿಪಾ ॥೧೫೭॥

ಇವನಿಂದೆ ಮುಂದೆ ಪಡೆದಪೆ
ನವಿರಳತರಸುಖಮನೆಂದು ನಂಬಿರ್ದೆಂ,ಕೇ
ಳ್ಕುವರಾಜನಶ್ವಖುರಕೀ
ಕುವರಂ ಬಲಿಯಪ್ಪನೆಂದು ಬಲ್ಲೆನೆ ನೃಪತೀ ॥೧೫೮॥

ಎಂದಿಂತೆಲ್ಲಮನವಳಳ
ಲಿಂದುಸುರೆ ನರೇಂದ್ರವರ್ಯನಾಲಿಸಿ ಮನದೊಳ್
ನೊಂದು ಶಿವಶಿವ ಶಿವಂ ಬ
ಲ್ಲಂ ದಿಟಮಿದನೆಂದು ಮಗುಳ್ದು ತಲೆದೂಗುತ್ತುಂ ॥೧೫೯॥

ಬಡಬಾನಳಮಂ ಜಲಮಂ
ಕಡಲ್ಪೊಡನಾಂತಂತೆ ಕಾಯ್ದುವುಮಂ ಕರುಣಮನಾಂ
ತೊಡನೊಪ್ಪಿದನಾತ್ಮಜನೊ
ಳ್ಕಡುಶೋಕಂಗೈವ ಸುದತಿಯೊಳ್ಸತ್ಯೇಂದ್ರಂ ॥೧೬೦॥

॥ವ॥ ಅಂತೊಪ್ಪುತ್ತುಮಿರ್ದು ಪತಿಮೋಹಿಮಂತ್ರಿಪನಂ ಬರಿಸೆಂದು ವೃದ್ಧಕಂಚು-
ಕಿಗೆ ಬೆಸಸುತ್ತುಮಿರೆಯಿರೆ—

ಜನನಿ ಜಗತ್ರಯಾಶ್ರಿತೆ ಜನಾರ್ದನವಂ[೧]ದ್ಯೆ[೧]ವದಾನ್ಯೆ ಮಾನ್ಯೆ ಮಾ
ನಿನಿ ಮಹನೀಯೆ ಮಂಗಳೆ ಮಹೇಶ್ವರಿ ಮಾಸುತೆ ಮಂದಯಾನೆ ಸ
ಜನಹಿತೆ ಸದ್ಗುಣಾನ್ವಿತೆ ಸದಂಚಿತೆ ಸತ್ಯನಿ[೨]ಧಾ[೨]ನೆ ಸೌಖ್ಯದಾ
ಯಿನಿ ಸವಿಳಾಸೆ ಲೇಸೆನೆ ಪರಾತ್ಪರೆ ಪಾಲಿಪುದೆನ್ನನಂಬಿಕೇ ॥೧೬೧॥

ಇದು ವಿನಮದಮರವರಮಕುಟತಟಘಟಿತಮಣಿಗಣಮಹಾಪ್ರಭಾಪಟಲ
ಪರಿವೃತಪರಶಿವಶ್ರೀಪಾದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾ
ಚಂಚಚ್ಚಕೋರಾಯಮಾನ ಸರಸಜನಮಾನಿತೋಭಯಕವಿತಾ
ವಿಶಾರದಶ್ರೀಷಡಕ್ಷರಿದೇವವಿರಚಿತಮಪ್ಪರಾಜಶೇಖರ
ವಿಳಾಸವಿಪುಳಪ್ರಬಂಧದೊಳ್‌ತಿರುಕೊಳವಿನಾಚಿ
ಪ್ರಳಾಪವರ್ಣನಂ ತ್ರಯೋದಶಾಶ್ವಾಸಂ
ಸಂಪೂರ್ಣಂ

ಮಂಗಳಮಹಾ
ಶ್ರೀ ಶ್ರೀ ಶ್ರೀ

---

೧ ದೆ (ಮೈ, ಮೂ, ಬ) ೨ ದಾ (ಮೈ).

ಚತುರ್ದಶಾಶ್ವಾಸಂ

ಶ್ರೀಮದಗಜಾಭುಜಾಸುಮ
ನೋಮಂಜುಳಮಾಲಿಕಾವೃತಶ್ರೀಕಂಠಂ
ಸೋಮಕಳಾಧರನೆಮ್ಮಂ
ಪ್ರೇಮಂ ಮಿಗೆ ಪೊರೆಗೆ ಸಂತತಂ ಶಿವಲಿಂಗಂ ॥೧॥

ವಿಳಸದ್ರತ್ನಕಿರೀಟಕಾಂತಿ ಬಿಸಿಲಂ ತಳ್ಪೊಯ್ಯೆ ವಕ್ತ್ರೇಂದುಮಂ
ಡಳಮಂ ಚುಂಬಿಪ ತಾರೆ ತಾನೆನಿಸಿ ಮುಕ್ತಾಕುಂಡಳಂ ಗಂಡದೊಳ್
ಮಿಳಿರ್ದಾಡುತ್ತಿರೆ ತಾರಹಾರಕಿರಣಂ ಬೆಳ್ದಿಂಗಳಂ ಬೀಱೆ [೧]ಕಣ್[೧]
ಗೊಳಿಸುತ್ತಂ ನಡೆತಂದು ಮಂತ್ರಿತಿಳಕಂ ಪೊಕ್ಕಂ ತದಾಸ್ಥಾನಮಂ ॥೨॥

॥ವ॥ ಅಂತು ಪೊಕ್ಕು ಸಿಜೇಶ್ವರಾಂಘ್ರಿಗೆಱಗಿ ಕೃತಾಂ[೨]ಜ[೨]ಲಿಪುಟನಾಗಿ ನಿಂದಿರ್ದ-ನಿತ[೩]ಱೊಳಿದಿರೊಳಾ ಬಾಲ[೩]ಶಿರಮಂ ಪಿಡಿದಳಲ್ವ [೪]ಹರಭಕ್ತೆ[೪]ಯಪ್ಪ ಸುದತಿಯಂ ಕಂಡಿದೇನೆಂದು ತನ್ನೊಳನುವಿಸಿ—

ಇದು ನಿನ್ನಿನಶ್ವದೇಱಾ
ಟದೊಳೆನ್ನ ತನೂಜನಿಂ ನೃಪಾತ್ಮಜನಿಂ ಬಂ
ದುದು ಗಡ ತಾನಲ್ಲದೊಡೇಂ
ಸುದತಿ ಸಭಾಸ್ಥಳಕೆ ಮೊರೆಯನಿಡಲ್ಬೈದುವಳೇ ॥೩॥

ಇದಕೆ ಪರಿ[೫]ಹಾರಮಣಮಿ
ಲ್ಲಿ[೫]ದು ಶಿವಕೃತಮಕ್ಕುಮಭವನೊಲ್ಮೆಗೆ ನೃಪನ
ಗ್ಗದ ಮಹಿಮೆಗೆ ಕಾರಣಮಿಂ
ತಿದು ತಾನೆಂದಱಿದನವನದೇಂ ಸಿ[೬]ತ[೬]ಮತಿಯೋ ॥೪॥

॥ವ॥ ಇಂತಮಾತ್ಯವರೇಣ್ಯಂ ತಿಳಿದ ಬಗೆಯಂ ಮೊಗಮಂ ನೋಡಿದನಿತಱೊಳ್ ಪರೇಂಗಿತ[೭]ಪ್ರಜ್ಞನಾದ[೭]ನರೇಂದ್ರಂ ತಿಳಿದವನಭಿಜ್ಞತೆಗೆ ಮನದೊಳ್ಮೆಚ್ಚಿ ತಾನು ಮುಸಿರದೆಯುಂ—

---

೧ ಕಂ (ರಿ) ೨ ಜು (ರಿ, ಧಾ) ೩ ಱೊಳಖಿಳಬಾಳ (ಮೂ) ಱೊಳಿದಿರೊಳಬಳ (ಮೈ, ಕ) ೪ ಭಕ್ತೆ (ರಿ) ೫ ಹರಣಮಣಮಿಲ್ಲ (ರಿ); ಹಾರಮಣಿಮಿಲ್ಲ (ಮೂ) ೬ ಪ (ಮೂ) ೭ ಪ್ರಣಾದಿ (ಮೂ)

ಕರೆಕರೆ ಕೃತಾಪರಾಧಕ
ಧರಾತಿಭಾರಕಕುಮಾರಕರನೀಗಳೆನು
ತ್ತರಸನುಸಿರ್ವನಿತಱೊಳ್ಬಂ
ದರಿಳಾಪತಿಸೂನುಸಚಿವಸೂನುಗಳಿರ್ವರ್ ॥೫॥

॥ವ॥ ಅಂತೈತಂದು ಮಣಿಮಕುಟ[1]ಕಿರಣಮರುಣಕುಸುಮ[1]ಮಂ ಪದ[2]ಪೀಠ-ದೊಳ್ಬಲಿಗೆದರ್ದಂತಾಗೆ ಬಾಗಿ ಪೊಡಮಟ್ಟು ನಿಜಾಪರಾಧಮನರಸನಱಿದಪನೆಂದು ಶಂಕಿಸುತ್ತಂ[3]ಶಂ[3]ತೆ ಕಂಪಿಸುತ್ತಂ ಕೆಲಸಾರ್ದು ನಿಂದಿರ್ದ ನಿಜಕುಮಾರನುಮಂ ಸಚಿವಸುತನುಮಂ ಕೆಂಪಡರ್ದ ಕಡೆಗಣ್ಗಳಿಂದಡಸಿ ನೋಡಿ—

ಕುಡಿಮೀಸೆ ಕುಣಿಯೆ ಪಣೆಯೊ
ಳ್ಪಡದೊಗೆತರೆ ಘರ್ಮಜಳಕಣಂ ಭ್ರುಕುಟಿ ಪೊದ
ಳ್ದಡೆಗೊಂಡಿರೆ ಕೋಪಾಗ್ನಿಯ
ಪೊಡರ್ಪು ರೂಪಾಂತ ತೆಱದೆ ಘುಡುಘುಡಿಸುತ್ತುಂ ॥೬॥

ಇನಿತೊಂದೌದ್ಧತ್ಯಮೇಂ ಸಲ್ವುದೆ ತನುಮದದಿಂ ಯೌವನೋದ್ರೇಕಲಕ್ಷ್ಮೀ
ಜನಿ[4]ತೋ[4]ದ್ಯದ್ದರ್ಪದಿಂ ಮುಂದಱಿಯದಪಯಶಕ್ಕಳ್ಕದತ್ಯಂತದೋಷ
ಕ್ಕೆ ನಿತ್ರಾಂತಂ ಬಳ್ಕದೆನ್ನತ್ತಣಿನಿನಿತು ಭಯಂದೋರದೀ ಧಾತ್ರಿಯೊಳ್ಸ
ಜ್ಜನರಲ್ಲಲ್ತೆಂ[5]ಬರೆಂದೆಂಬು[5]ದೆನೆ ಬಗೆಯದೀ ಬಾಲನಂ ಕೊಂದಿರಲ್ತೇ ॥೭॥

॥ವ॥ ಎಂದು ಮತ್ತಮಿರದೆ—

ಶರಣಪದಂಗಳಂ ಪದೆದು ಪೂಜಿಸಿ ಶಂಕರಪೂಜೆಗೆಯ್ದು ಸ
ಚ್ಚರಿತಮನಾಂತು ಶೈವಮತವರ್ತನೆಯಂ ಬಗೆಗೊಂಡು ತಾಳ್ದು ಭಾ
ಸುರಗುಣವೃಂದಮಂ ವಿಮಳಕೀರ್ತಿಯನಾರ್ಜಿಸಿ ಬಾಳ್ದುಮೆಮ್ಮನು
ದ್ಧರಿಸುವೆನೆಂದು ನಚ್ಚಿರೆ ಕುಮಾರಕ ಲೇಸನಿದಂ ನೆಗಳ್ಚಿದೈ ॥೮॥

---

೧ ಕಿರಣಕುಸುಮ (ಮೂ) ೨ ದ್ಮ (ಕ) ೩ ದಂತೆ (ಕ); ತೆ (ಶಿ) ೪ ತೌ (ಮೈ)
೫ ಬು (ಮೂ)

ಅರಿನೃಪರಂ ಪಡಲ್ವಡಿಪ ಕೇಳಿಯನೊಲ್ಲದೆ,ಶಂಭುಪಾದಪಂ
ಕೆರುಹಮನೊಲ್ದು ಪೂಜಿಪ ವಿಳಾಸಕೆ ಸಲ್ಲದೆ,ಶೈವಕಾವ್ಯಮಂ
ಸರಸತೆಯಿಂದೆ ಕೇಳ್ವ ಬಗೆಯೊಳ್ಮಿಗೆ ನಿಲ್ಲದೆ,ಭರ್ಗಭಕ್ತಭಾ
ಸುರಶಿಶುವಂ ಕೊರ[೧]ಲ್ಗೊ[೧]ಟಿವ ಲೀಲೆಗೆ ಸಂದುದೆ ಚಿತ್ತಮಾತ್ಮಜಾ ॥೯॥

ಶಿವಭಕ್ತಂಗೊರ್ವರ್ಗೆ ಭಿಕ್ಷಾನ್ನಮನೆ ವಿನಯದಿಂದಿತ್ತವಂ ಕೋಟಿಯಜ್ಞೋ
ದ್ಭವ ಪು[೨]ಣ್ಯಾ[೨]ವಾಪ್ತಿಯಂ ತಾಂ ಪಡೆವನೆನೆ ತದಾಗಸ್ಕರಂ ಕೋಟಿಪಾಪೌ
ಘವಿಶೇಷಾವಾಪ್ತಿಯಂ ಮೇಣ್ಪಡೆಯನೆ ಸುಕೃತಕ್ಕಾದ ಬಲ್ಪೇನಘಕ್ಕಿ
ಲ್ಲವೆ ಪೇಳೀ ದೋಷಕಿನ್ನಾವುದೊ ಪರಿಹರಣಂ ಧಾತ್ರಿಯೊಳ್ನೋಡೆ ನೀಡುಂ ॥೧೦॥

ಶರಣರ ಮನಕ್ಕೆ ನೋವಂ
ದೊರೆಕೊಳಿಸಿದಘಕ್ಕೆ ದೊರೆಯುದೆನೆ ಪರಿಹಾರಂ
ಶರಣಶಿಶುಶಿರಮನರಿದೀ
ದುರಿತಂ ನಿಜಶಿರಮನಿತ್ತೊಡಂ ಪೋದಪುದೇ ॥೧೧॥

ಹರಪೂಜೆಯಿಂದೆ ಮಿಗಿಲೀ
ಶ್ವರಭಕ್ತರ ಪೂಜೆಯೆಂಬುದಾಗಮಮಧದಱಿಂ
ಹರಚರಣದ್ರೋಹದಿನೀ
ಶ್ವರಶರ[೩]ಣ[೩]ದ್ರೋಹ[೪]ಮೆ[೪]ಗ್ಗಳಂ ವಸುಮತಿಯೊಳ್ ॥೧೨॥

॥ವ॥ ಎಂದು ಸತ್ಯೇಂದ್ರಚೋಳಾಧಿಪಂ ಯುವರಾಜನುಮಂ ಮಿತವಚನನುಮ-
ನಂತೆ ಜಡಿದು ನುಡಿದುಮೀ ಶಿಶುವನಿರ್ವರೊಳಾವಾತಂ ಕೊಂದನೆಂಬುದಂ ಬೇಗಂ
ಬೆಸಸಿಮೆನೆ ಮಿತವಚನಂ ಮುಂದಣ್ಗೆವಂದು ಕರಾರವಿಂದಮಂ ಮುಗಿದು ನಿಂದು—

ದೇವ,ಮದೀಶ,ಬಿನ್ನಪಮುನೂಸಹಯಂಗಳನೇಱಿ ಮೀಱಿ ಸೇ
ನಾವಳಿಗೂಡಿ ಗಾಡಿ[೫]ಮಿಗೆ[೫] ಬರ್ಪಿನಮೀ ಶಿಶು ನೋಳ್ಪೊಡೈದೆ ಕಂ
ಡೀ ವಿಭು ತನ್ನ ವಾಜಿಯನೆ ದಾಂಟಿಸಿದಂ ತಲೆ ಪಾಱಿ ರಕ್ತಧಾ
ರಾವಿಳಮಿಕ್ಕಿ ಮೆಟ್ಟಿದುದು ಮತ್ತುರಗಂ ಖುರದಿಂ ಶಿರೋಧಿಯಂ ॥೧೩॥

೧ ಲೆ ಕೊ (ಮೂ) ೨ ಣ್ಯೈ (ಮೆಸೊ) ೩ ಣೆರ (ಧಾ) ೪ ಮೆ (ಮೆಸೊ) ೫ ಯೊಳೆ (ಶಿ)

ಅದಱಿಂದೆ ದೇವ ತಪ್ಪೆ
ನ್ನದು ಬಳಿಕೀ ಶಿರಕೆ ಪಳಿಯನೆನ್ನಯ ಶಿರಮಂ
ಪದೆದೀವುದುಚಿತಮೇದಾ
ಡಿದನಾ ಮಿತವಚನನಚಳಸೂನೃತವಚನಂ ॥೧೪॥

॥ವ॥ ಆಗಳಾ ಸತ್ಯೇಂದ್ರನಾ ಮಾತಂ ಬಗೆಗೊಂಡು ನಿಜಮಂತ್ರಿಯಂ ನಿರೀಕ್ಷಿಸುತ್ತಮೀತನ ಶಿರವನರಿದೀ ಶಿಶುಶಿರಕ್ಕೆ ಪಳಿಗೊಡುವುದೆನೆ ಘಳಿಲನೆ ಪಳಿಪೊರ್ದದ ಮಳಚರಿತನಿದಿರ್ಗೆವಂದೆನ್ನ ಶಿರಮಿದಕ್ಕೆ ಪಳಿಯೆಂದು ತೋರ್ಪಂತೆ ಪಂಣೆಂವೆಱ ಯೊಳ್ ಕರಾಂಜಲಿಯನಮರ್ಚಿ ನಿಂದು—

ವರಸತ್ಯವಾಣಿ ಗಂಭೀ
ರರವಂ ಕೌತುಕಮನಾಳೆ ಸಭೆ ನೃಪನ ಮನಂ
ಹರು[2]ಷ[2]ಮು[3]ನಮರ್ಚೆ ಸಚಿವಂ
ಗಿರದಳಲಿರ್ಮಡಿಸೆ ಮಂತ್ರಲಕ್ಷಂ ನುಡಿದಂ ॥೧೫॥

ಅವಧರಿಪುದು ಬಿನ್ನಪ[4]ಮಂ[4]
ಭುವನೇಶ್ವರ ತಪ್ಪಿದೆನ್ನದೆಂತೆನ[5]ಲಾಂ[5] ಸೈಂ
ಧವನಿತ್ತ ಸೈಂಧವಮನೇ
ಱುವ ಬಗೆವಿಡಿದಿರ್ದು ಕೇಳ್ದೊಡೀ ಮಿತವಚನಂ ॥೧೬॥

ಪೊಸತೀ ವಾಜಿಯುಗಂ ಪುರಂ ಪ್ರಬಳಶೈವವ್ರಾತದಿಂ ತೀವಿ ರಂ
ಜಿಸುಗುಂ ಸೈನ್ಯಮಗಣ್ಯಮುನ್ನತಮುದಂ ಮಧ್ವೂಭವಂ ಭಕ್ತಮಾ
ನಸಸಂತಾಪಕರಾಸಹಿಷ್ಣುವದಱಿಂದೀ ಕಜ್ಜಮಂ ಕೂ[6]ರ್ತು[6]ಯೋ
[7]ಚಿ[7]ಸಲೇನಕ್ಕುಮೆ ಮಾಣ್ಬುದೆಂದನಿವನೆನ್ನಂ ಮುನ್ನ[8]ಮುರ್ವೀ[8]ಶ್ವರಾ ॥೧೭॥

ಎನೆ ನಿನಗೆ ಬಂದ ತಪ್ಪಿಂ
ಧೆನಗೆ ವಿನೋದಕ್ಕೆ ವಿಘ್ನಮಂ ಮಾಡದಿರ್ದೇ
ಳೆನುತಾಗ್ರಹಿಸುತೊಡಂಬ[9]ಡ[9]
ಲಸು[10]ಂಗೈದೆಂ[10] ದೇವ ವಿಹರಿಪೊಂದುಜ್ಜುಗ[11]ಮಂ[11] ॥೧೮॥

---

೧ ಣಿ (ರಿ) ೨ ಸ (ಕ) ೩ ವ (ಮೂ) ೪ ವಂ (ಮೈ, ಮೂ) ೫ ಲಾ (ಮೈ, ಮೂ) ೬ ರ್ಮ (ಕ) ೭ ಜಿ (ಅ) ೮ ಮೂರ್ತಿ (ಕ) ೯ ಡಂ (ಕ) ೧೦ ಗೆಯ್ದಂ (ಮೈ, ಧಾ, ಕ) ೧೧ ದೊಳ್ (ಮೈ, ಕ)

ಅದಱಿಂದಪರಾಧಮಿದೆ
ನ್ನದು ಗಡ ನೀಮಱಿಯದುದೆ ಮಹೇಶ್ವರ ಸರ್ವ
ಜ್ಞ ದಯಾನಿಧಿ ಪೞಿಗೀವುದು
ಮದುತ್ತಮಾಂಗಮನುಮಾಧವಂ ಮು[೧]ಚ್ಚು[೧]ವಿನಂ ॥೧೯॥

ಅ[೨]ನಿ[೨]ಮಿತ್ತಮೀಶಭಕ್ತಿಯ
ತನುಭವನಿಂತೞಿದನೆಂದು ಮಱುಗಿದಪುದು ಮ
ನ್ಮನಮಿನಿತಲ್ಲದೆ ಮಜ್ಜೀ
ವನಮಂ ತೊಱೆ[೩]ವಲ್ಲಿ ಮಱುಕ[೪]ಮೇಂ[೪] ತೋಱುಗುಮೇ ॥೨೦॥

॥ವ॥ ಎಂದು ನುಡಿ[೪]ದಾ[೪]ಳ ರಾಜಶೇಖರಸುಕುಮಾರನ ಬಗೆಗೆ ಸಭಾಸದವೃದ್ಧ ಪ್ರಸಿದ್ಧರಾಜನ್ಯಕಂ ಬಗೆ[೫]ಮಚ್ಚಿ[೫]ಮಣಿಮಕುಟಮನೊಲೆದು ತೂಗಿ—

ಪುಸಿಪೊಂದದ ಪೊಸನುಡಿಯಂ
ವಸುಮತಿಯೊಳ್ ನುಡಿಯಲಕ್ಕುಮೀ ನೃಪಸುತನಂ
ತಸುವಳಿಗುಮೆಂಬ ಬಗೆಯೊಳ
ಮುಸು[೬]ರುವ[೬]ನನ್ನಿಗಳ ನಾಯಕರ್ಪೆಱರೊಳರೇ ॥೨೧॥

॥ವ॥ ಎಂದು ನುತಿಸುತಿರ್ಪಿನಮಾ ಸತ್ಯೇಂದ್ರನಾ ಕುವರಂಗಾದ ತಪ್ಪನಱಿದಪೆನೆಂದುದನಪ್ಪುಕೈದು ಸಚಿವಾಸ್ಯಮಂ ನಿರೀಕ್ಷಿಸಿ—

ಸಂದೆಗಮೇನಿನ್ನಿದಕೆಲೆ
ಕೊಂದವನಿವನಾದಮಾದನೀತನ ಶಿರಮಂ
ತಂದೀವುದು ಪೞಿಗುಚಿತಮಿ
ದೆಂ[೭]ದಂ[೭] ಶಿವಶಿವ ಸಭಾಸದರ್ಮಱುಗುವಿನಂ ॥೨೨॥

---

೧ ಚ್ಚು (ಮೈ, ಅ) ೨ ನು (ಮೂ) ೩ ಮಿಂ (ಧಾ) ೪ ವ (ಮೂ) ೫ ಮೆಚ್ಚಿ (ಮೂ, ಧಾ); ಮರ್ಚಿ (ಅ) ೬ ರದ (ಕ) ೭ ದುಂ (ಮೂ)

ಎನೆ ಕಳೆಯೇಱಿದನುರ್ವಿದ
ನನುರಾಗಂದಾಳ್ದನಭವನಡಿದಾವರೆಯಂ
ನೆನೆದನ್ನಮರ್ಚಿದನಾ ನಿಜ
ಜನಕನ ಕನದಂಘ್ರಿಕಂಜದೊಳ್ಪೆಱೆನೊಸಲಂ ॥೨೩॥

॥ವ॥ ಅಂತೆರಗಿ ಬೆಸ[1]ನಂ[1]ಪಡೆದೇಳ್ದು ನಿಂದು—

ನಿಮ್ಮಯ ಮನಕ್ಕೆ ಮಾಡಿದೆ
ನುಮ್ಮಳಮಂ ಜನಕ ಗಿರಿಶಭಕ್ತಿಯ ಶಿಶುವಂ
ದಿಮ್ಮಿದರಲ್ತೆನೆ ಕಡುಪಿಂ
ದಾಂ ಮ[2]ಡಿಪಿ[2]ದೆನೆನ್ನವೋಲ್ಕೃತ[3]ಘ್ನ[3]ರುಮೊಳರೇ ॥೨೪॥

ಮಱೆವುದಿದನೆಂತುಮೆನ್ನಂ
ಮಱೆಯಲ್ವಲಮಾಗದೆಂದು ಬೀಳ್ಕೊಂಡ[4]ಲ್ಲಿಂ[4]
ಪೊ[5]ಱ[5]ಮಟ್ಟನಮಮ ಪದಪಿಂ
ನೆಱೆಗಲಿಗಳ ದೇವನಾರ್ಪು ಮಿಗೆ ಯುವರಾಜಂ ॥೨೫॥

ಒಡನೇಳ್ದು ತನ್ನಿರೂಪಂ
ಬಡೆದಾ ಸಚಿವೇಂದ್ರನಾ ನರೇಂದ್ರಾತ್ಮಜನೊಳ್
ನಡೆತಂದಂ ಪೆಱತೊಂದಂ
ಕಡುಕಜ್ಜಮನಲ್ಲಿ ತನ್ನೊಳಾಳೋಚಿಸು[6]ತಂ[6] ॥೨೬॥

॥ವ॥ ಅಂತು ನಡೆತಂ[7]ದಾ[7]ಕುಮಾರನ ಸತ್ಯವಚನಕ್ಕಮಾ[8]ತ್ರ[8]ನ ಧೈರ್ಯೋನ್ನತಿಗಮಾತನುತ್ಕಟಶಿವಭಕ್ತಿಗಂ ಮನದೊಳ್ಮೆಚ್ಚಿ ಪೊಗಳ್ದು ದೇವಾ ನೀಮುಮೀ ಕ್ಷಣಂ ಮೃಡಪೂಜೆಗೆಯ್ದು ಬರ್ಪುದೆಂದಂತಪುರದಂತಮನೆಯ್ದಿಸಿ ತಾನುಂ ನಿಜನಿಳಯಕೇಳ್ತಂದತೀವಭಕ್ತಿಯಿಂದೇಕಾಂತಭವನದೊಳುಮಾಕಾಂತನಂ ಪೂಜಿ[9]ಸುತನಂತರಂ[9]—

೧ ನ (ಅ) ೨ ಡು ಪಿ (ಮೂ); ಡಿ ಸಿ (ಮೈ) ೩ ಜ್ಞ (ಮೈ) ೪ ಳಲಿಂ (ಅ) ೫ ಱ (ಮೂ) ೬ ತುಂ (ಅ) ೭ ದ (ಮೂ) ೮ ತ್ಯ (ಮೈ, ಮೂ); ಮಾನ (ಕ) ೯ ಸಿ ತದನಂತರಂ (ಮೂ)

ನಿತ್ಯಂ ನಿಜೇಶ್ವರಪ್ರಿಯ
ಕೃತ್ಯಂ ಶಿವಭೃತ್ಯನಧಿಕಸತ್ಯಂ ಘನಸಾ
ಹಿತ್ಯಂ ಜನನುತ್ಯಂ ಸದ
ಮಾತ್ಯಂ ಕರತಳದೊ[೧]ಳಲಗ[೧]ನಳವಡಿಸುತ್ತಂ ॥೨೭॥

ಒಡೆಯನನ[೨]ಗ್ಗದ[೨]ಪುತ್ರನನೀಗಳಾಂ
ಮಡಿಪುತಕ್ಕಟ ಬೆಂದ ಶರೀರಮಂ
ಪಿಡಿದು ಬಾಳ್ವೆನೆ ಧಾತ್ರಿಯೊಳೆಂದು ತ
ನ್ನೊಡಲ ನೀಗಲೊಡರ್ಚಿದನಾ ಕ್ಷಣಂ ॥೨೮॥

॥ವ॥ ಅಂತೊಡರ್ಚಿ ಶಿವಾಂಘ್ರಿಯುಗಳಮನೆ[೩]ರ್ದೆ[೩]ಯೊಳನುಗೊಳಿಸಿ ನಮಿಸಿ—

ಕಡುಗಲಿ ಚಂಡಿಕೆಯಂ ತ
ನ್ನೆಡಗೈಯಿಂದಡಸಿಪಿಡಿದು ಸಾರ್ಚಿ ಕೊರಲ್ಗಾ
ಕಡುಗಮನೆ ಘುರಿಘುರಿಲನೆಡೆ
ಯುಡುಗದೆ ಕೊಱ[೩]ದರರೆ ಮಡಗಿದಂ ನಿಜಶಿರ[೪]ಮಂ[೪] ॥೨೯॥

ಪತಿಯಾಣತಿಯಂ ಮೀಱದೆ
ಪತಿಯಣುಗನನೆಯ್ದೆ ಮಡಿಪಲಾಱದೆ ಮಡಿದಂ
ಪತಿಮೋಹಿ ಸಚಿವಸಂಕುಳ
ಪತಿ ಪರಿಕಿಪೊಡೀತನೊರೆಗೆ ಬರ್ಪವರೊಳರೇ ॥೩೦॥

॥ವ॥ ಎಂದಱ[೫]ದಖಿಳಪುರಜನಂ ಕೀರ್ತಿಸುತ್ತುಮಿರ್ಪಿನಮಿತ್ತಲ್ ರಾಜಶೇಖರ ರಾಜಂ ರಾಜಶೇಖರಪೂಜಾಗೃಹಮನೋಜೆಯಿಂ ಪೊಕ್ಕು ಮಿಕ್ಕು ನಿರ್ಮಳೀಕೃತಕರ ಚರಣನುಮಸಮಭಸಿತತ್ರಿಪುಂಡ್ರಲಸಿತಲಲಾಟತಟನುಮಭಿನವರುದ್ರಾಕ್ಷಮಾಲಾಕಲಿತ-ಕಂಧರನುಮಾಗಿ—

ವರಪಂಚಾಮೃತ ಪಂಚಗವ್ಯ ಮೃಗಭೂಕಾಶ್ಮೀರಸಮ್ಮಿಶ್ರಭಾ
ಸುರವಾರಿಸ್ನಪನಂಗಳಂ ರಚಿಸಿ [೫]ಬಿ[೫]ಲ್ವೇಂದೀವ[೬]ರಾ[೬]ಬ್ಜಾದಿಯಂ
ಧರಿಸುತ್ತರ್ಪಿಸಿ ಧೂಪದೀಪವಿಳಸನ್ನೈವೇದ್ಯ ತಾಂಬೂಲಮಂ
ನರನಾಥಾಗ್ರಣಿ ಪೂಜೆಗೆಯ್ದನೊಲವಿಂ ಶ್ರೀಶೈಲಜಾಕಾಂತನಂ ॥೩೧॥

---

೧ ಳಗ (ಕ) ಗ್ಗಳದ (ರಿ) ೩ ದೇ (ರಿ) ೪ ವಂ (ಮೂ) ೫ ಚೆ (ಮೂ) ೬ ರ (ಮು)

॥ವ॥ ಅಂತು ನಿರತಿಶಯಭಕ್ತಿಯಿಂದರ್ಚಿಸಿ, ಕ[1]ಣ್ದೇ[1]ವಿ ನೋಡಿ, ಬಗೆಗೊಂಡು ಭಾವಿಸಿ—

ಕಾಮಾರಾತೇ ತ್ರಿಭುವನಪತೇ ಶರ್ವಭಕ್ತಾನುಕಂಪಿನ್
ಸೋ[2]ಮಾ[2]ರ್ಧಾಂಕ ತ್ರಿಪುರಹರ ಕಾಲಾಂತಕ ತ್ರ್ಯಕ್ಷ ಶೂಲಿನ್
ವ್ಯೋಮಾತೀತ ಪ್ರಣವಗಫಣಾಭೃದ್ಧರ ಸ್ವರ್ಗ ಮೋಕ್ಷ
ಸ್ವಾಮಿನ್ ದೇವಪ್ರಮಥಪರಿಷನ್ನಾಥ ತುಭ್ಯಂ ನಮೋಸ್ತು[3] ॥೩೨॥

॥ವ॥ ಎಂದಮಂದಾನಂದದಿಂದಿಂದುಧರನಂ ನುತಿಸುತ್ತೆಱಗಿ ತತ್ಪ್ರಸಾದಂಬಡೆದನಂತರಮಖಿಳಮಾಹೇಶ್ವರರಂ ಬರಿಸಿ—

ಘನತರಭಕ್ತಿ[4]ಕೈಮಿಗೆ[4]ಪದಾಬ್ಜಮನರ್ಚಿಸಿ ಪೂರ್ಣರಾಗದಿಂ
ಧನಕನಕಾಂಬರಪ್ರಸರಸನ್ಮಣಿಭೂಷಣವೃಂದಮಂ ಮಹಾ
ವಿನಯದಿನಿತ್ತು ಕೈಮುಗಿದು ಕಿಂಕರಭಾವಮನಾಳ್ದು ಪೇಳು ಮು
ನ್ನಿನ ನಿಜವೃತ್ತಮಂ ಪಡೆದವಂದಿರ ಸತ್ಕೃಪೆಯಂ ಕುಮಾರಕಂ ॥೩೩॥

ತೊಡವೆಳ[5]ಗು[5]ಪೊಳೆಯೆ ವದನಮು
ದುಡುಪತಿಯಂ ಪಳಿಯೆ ನೇತ್ರರುಚಿ ಚಂದ್ರಿಕೆಯಂ
ಜಡಿಯೆ ನಡೆತಂದನೊಲವಿಂ
ಮೃಡನಂ ಜಾನಿಸುತೆ ಜನನಿಯರಮನೆಗಾಗಳ್ ॥೩೪॥

॥ವ॥ ಅಂತು ಬಂದು ಮಣಿಪೀಠಮನಳಂಕರಿಸಿ ವಿ[6]ನಿ[6]ಯೋಗದ ಮಡದಿಯರ ನಡುವೆ ಕುಳ್ಳಿರ್ದಮೃತಮತಿದೇವಿಯರಡಿದಾವರೆಪೆಱಗಲೊಡನೆ—

ಕಡಗಂ ಗಲ್ಕೆನೆ ತೋಳ್ಗಳಿಂ ನೆಗಪಿದಳ್ತಳ್ಕೈಸಿದಳ್ತನ್ನ ಕ
ಣ್ಗಡೆಯಿಂ ತುಳ್ಕೆ ಮು[7]ದ[7]ಶ್ರು ನೋಡಿ ನಲಿದಳ್ಮುಂಡಾಡಿದಳ್ಮುದ್ದಿಸು
ತ್ತೊಡನರ್ಧಾಸನದಲ್ಲಿ ಕುಳ್ಳಿರಿಸಿದಳ್ಕೂರ್ತಪ್ಪಿದಳ್ಮತ್ತೆ ಮೆ
ಲ್ನುಡಿಗೊಟ್ಟಳ್ಮುದವಾಂತಳಾ ಜನನಿ ಪುತ್ರಸ್ನೇಹಮೆಂತಪ್ಪುದೋ ॥೩೫॥

೧ ಣ್ತೇ (ಮೈ, ಮೂ, ಕ) ೨ ಮ (ಮೂ) ೩ + ತೇ(ಮೈ) ೪ ಮಿಗೆ (ಮೂ) ಕೆಂಭಿಗೆ (ಕ) ೫ ಗುಂ (ಮೂ) ೬ ನ (ಮೂ) ೭ ದಾ (ಮೂ).

॥ವ॥ ಅನಂತರಂ—

ಮಗನೆ ಪೊಸತೊಂದು ಕಜ್ಜಂ
ನೆಗಳ್ದಿದೆ ನಗೆಮೊಗದೊಳಱುಪದೇನೆಂಬುದನೆಂ
ದೊಗುಮಿಗೆಯಿಂ ಮುದ್ದಿಸಿ ಮಿಗೆ
ಮೃಗಶಾಬೇಕ್ಷಣೆ ಕುಮಾರನಂ ಬೆಸಗೊಂಡಳ್ ॥೩೬॥

ಜನನಿ ತುರಂಗ[1]ಮೇ[1]ಱಿ ಬಲಗೂಡಿ ಬರುತ್ತಿರೆ ಮೆಟ್ಟಿತೋರ್ವ ಭ
ಕ್ತನ ಶಿಶುವಂ ಕೊರ[2]ಲ್ಪ[2]ಱಿಯೆ ಮಂತ್ರಿಕುಮಾರಕನಶ್ವಮಾತನ
ಲ್ತೆನೆ ನಿನಗಾದ ತಪ್ಪೆನಗೆನುತ್ತು[3]ಸು[3]ರ್ದೆಂ ಮೊದಲಂತದಕ್ಕೆ ಮ
ಜ್ಜನಕನರೇಂದ್ರನೆನ್ನ ಶಿರಮಂ ಪಱಿಗಿತ್ತಪನಿಂದು ನಿಶ್ಚಯಂ ॥೩೭॥

ಅಂಬಿಕೆ ನಿಮ್ಮಡಿಗೆಱಗುತೆ
ಡಂಬಡೆ ಬೀಳ್ಕೊಂಡು ಪೋಗಲೈದಿದೆನೆನ್ನಂ
ಪಂಬಲಿಸದೆ ಮಿತವಚನನ
ನಿಂಬಱಿದೆನ್ನಂತೆ ಕಾಣ್ಬುದಿಂತಿದೆ ಕಜ್ಜಂ ॥೩೮॥

॥ವ॥ ಎಂದು ಮಗು[4]ಳ್ದಿ[4]ಂತೆಂದಂ—

ಮೊದಲೆಳೆಯರ್ಕಳಿಲ್ಲದುಱಿದೂಱಿಸಿ ಮದ್ಗುರುವಿತ್ತ ಮಂತ್ರದಿಂ
ಪದಪಿನೊಳೀತನಂ ಪಡೆದು ಬಾಲ್ಯದ ಲೀಲೆಯನೊಲ್ದು ನೋಡಿ[5]ಪೆಂ[5]
ಪೊದವಿದ ಯೌವನೋದಯವಿಳಾಸಮನೀಕ್ಷಿಪ ಕಾಲಕಿಂತು ಬಂ
ದುದೆ ಮೃತಿಯೆಂದು ಚಿಂತಿಸದಿರಿಂತಿದನಾಂ ಸೆಱಗೊಡ್ಡಿ ಬೇಡಿದೆಂ ॥೩೯॥

॥ವ॥ ಎಂದಾ ಯುವರಾಜರಾಜಶೇಖರಂ ಬಿನ್ನವಿಸೆ ತಾನತ್ಯಂತಶಿವನಿಷ್ಠೆ-ಯಪ್ಪುದಱಿಂ ತಲೆದೋರ್ಪ ಮನಃಕ್ಷತಾಂಕುರಮಂ ಧೃತಿನಖಾಗ್ರದಿಂ[6]ಚಿವ್ಟಂಟಿ[6]

೧ ವೇ (ಮೂ) ೨ ಲ್ಮ (ಅ); ಲ್ವ (ಧಾ) ೩ ಸಿ (ಅ) ೪ ಳಿ (ರಿ) ೫ ಪಿಂ (ಕ)
೬ ಚಿವುಟಿ (ಮೂ)

ಮ[೧]ಗು[೧]ಳ್ದು ಬರಸೆಳೆದು ಮೊಲೆ ತೊರೆಯೆ ಬಿಗಿದಪ್ಪಿ ಮೊಗಮಂ ನೋಡಿ ಮುದ್ದು-
ಗೆಯ್ದು—

ಎನ್ನಾಳ್ದನ ಸತ್ಯಂ ಗೆಲೆ
ನಿನ್ನಸುವಂ ಭಕ್ತಶಿಶುಗೆ ಕುಡು ಚಿಂತೆಯದೇ
ಕೆನ್ನಸುವೆ ಪಾರ್ವತೀಪತಿ
ಪನ್ನಳಿನಭ್ರಮರಲೀಲೆದಳೆ ತಳರೆಂದಳ್ ॥೪೦॥

ಈ ಸತ್ಯವಚನಮೀ ನಯ
ಮೀ ಸದ್ಗುಣಮೀ ವಿವೇಕಮೀ ಸಕಳಕಳೋ
ದ್ಭಾಸತೆಯೀ ಘನಧೃತಿವಿ
ನ್ಯಾಸಂ ಮತ್ತೂನುಗಲ್ಲದನ್ಯರೊಳೊಳವೇ ॥೪೧॥

॥ವ॥ ಎಂದು]ಕೆಲದೊಳಿರ್ದ ಕೆಳದಿಯರೊಳ್ಪೊಗಳು[೨]ತ್ತಮಿರ್ಪಿನ[೨]ಮಲ್ಲಿಂ[ಬೀ-
ಳ್ಕೊಂಡು ಧೃತಿಧರಾಧರಂ ರಾಜವೀ[೩]ಥಿ[೩]ಗೇಳ್ತಂದು ಸಚಿವವೃತ್ತಮಂ ದೂತವಚನ
[೪]ದಿ[೪]ನಱಿದು ಜನಕನಿರ್ಪೆಡೆಗೇಳ್ತಂ[೫]ದೀ[೫] ವೃತ್ತಾಂತಮೆಲ್ಲಮಂ ಪೇಳಲೊಡನೆ
ಕೇಳ್ದು ಸಕೌತುಕಾಂತರಂಗಂ ಸಂದಾಯಿಯೆಂಬ ಹಡಪವಳನಾನನಮಂ ಪಿ[೬]ತ[೬]ರಿಗಿ
ನಿರೀಕ್ಷಿಸಿ—

ಹರಚರಣ ಭಕ್ತಿ[೭]ರಸ[೭]ಭಾ
ಸುರಹೃದಯಾಂಬುರುಹನಾ ನರೇಶ್ವರನವನಂ
ಕರೆದೆಲವೊ ಪೋಗು ಕುವರನ
ಶಿರಮಂ ಮಿಗೆ ತರ್ಪುದೆಂದು ಬೆಸಸಿದನಾಗಳ್ ॥೪೨॥

ಜೀಯ ಮಹಾಪ್ರಸಾದಮೆನುತಂದೊಡನೇಳ್ತರೆ ಖಡ್ಗಮಾಂತು ಸಂ
ದಾಯಿಯೆನಿಪ್ಪ ಭೃತ್ಯನವನೀಶಸಭಾಂತರದತ್ತಣಿಂ ಸರೋ
ಜಾಯತನೇತ್ರನೊಲ್ದು ಪೊಱಮಟ್ಟ[೮]ದ[೮]ಟಿಂ ನರ್ದ[೯]ಗೊಂಡ[೯]ನಲ್ಲಿ ಪು
ಷ್ಪಾಯು[೧೦]ಧ[೧೦]ವೈರಿಯಂಘ್ರಿಗಳನಾಂತೆರ್ದೆಯೊಳ್ಮಿಗೆ ರಾಜಶೇಖರಂ ॥೪೩॥

---

೧ ರ (ಮೂ) ೨ ತ್ತಿರ್ಪಿನಂ (ಮೈ) ೩ ಧಿ (ಅ) ೪ ಮ (ಮೂ) ೫ ದು (ಮೂ)
೬ ದಿ (ಧಾ, ಕ) ೭ ಸರಸ (ಧಾ) ೮ ದ (ಮೂ) ೯ ತಂದ (ಮೂ) ೧೦ ದ (ಮೂ)

॥ವ॥ ಅಂತು ರಾಜವೀಥಿಯೊಳ್ಬೈತರ್ಪಿನಮಾ ಪೌರಜನಂ ೧ರೀಕ್ಷಿಸಿ—

ಚತುರಂಭೋನಿಧಿ ಮುಟ್ಟಿದುರ್ವರೆಗಧೀಶತ್ವಂ ಗಡಾ ವಿಶ್ವವಿ
ಶ್ರುತಸಾಮಂತನರೇಂದ್ರಮೌಲಿಘಟಿತಾಂಘ್ರಿತ್ವಂ ಗಡಾ ಯೌವನಾ
ನ್ವಿತಸೌಂದರ್ಯತನುತ್ವಮುಂ ಗಡ ಬಳಿಕ್ಕಂತಾದೊಡಂ ತನ್ನ ಜೀ
ವಿತಮೀವಂ ಗಡ ನನ್ನಿಗೀ ಕುವರನಂ ಪೋಲ್ವನ್ನರಾರ್ಧಾತ್ರಿಯೊಳ್ ॥೪೪॥

ಅಕ್ಕಟ ಸಹತ್ಯೇಂದ್ರಂಗಿದು
ತಕ್ಕುದೆ ನುಡಿದಂಡಮೊಳವೆ ಸಚಿವಸುತಾಶ್ವಂ
ಚಕ್ಕನೆ ಮಗುವಂ ಮುಗ್ಗಿಡಿಪಿದೊ
ಡಿಕ್ಕಿದಪಂ ಗಡ ಕುಮಾರಕುಸುಮಾಯುಧನಂ ॥೪೫॥

॥ವ॥ ಎನುತ್ತಿರೆಯಿರೆ ಮತ್ತೆ ಕೆಲಂಬರಬಲೆಯರ್ನೆರೆದು—

ಬಿಸುಸುಯ್ದಂಬಕದಂಬುವಂ ಮಿಡಿದು ಹಾಯೆಂದಳ್ತು ಕೈನೀಡಿ ತೆ
ಳ್ವಸಿಱಿಂ ಮೇಣ್ಪೊಸೆದೆಲ್ಲಿ ಬಂದುದೊ ತುರಂಗಂ ಕೇಳಿಯೇಕಾದುದೀ
ಶಿಶುವಿಂತೇಕಳಿದತ್ತೊ ದೂಱಿದಳದೇತಕ್ಕೀಕೆ ವೋವೋವೊ ಕೋ
ಪಿಸಿ ಚೋಳಾಧಿಪನೇಕೆ ಕೊಲ್ವನೊ ಧರಿತ್ರೀಮಿತ್ರನಂ ಪುತ್ರನಂ ॥೪೬॥

॥ವ॥ ಎಂದೆಂದಳಲ್ದು ಬಳಲ್ದು ಮಱುಗುತ್ತಿರ್ಪನ್ನೆಗಂ—

ನಡೆತಂದಂ ಧೃತಿಮೇರು ಸತ್ಯನಿಧಿ ಸಾಹಿತ್ಯಾಬ್ಜಸೂರ್ಯಂ ಮಹಾ
ಮೃಡಭಕ್ತಿಪ್ರಮದಾಮನೋರಮಣನಾ ಶ್ರೀಮಂತ್ರಲಕ್ಷ್ಮಾಂಕನೊ
ಳ್ಪಡರ್ದು ಧ್ಯಾನಧರಿತ್ರಿಯಲ್ಲಿಗದಟಿಂ ಪದ್ಮಾಸನಂಗೊಂಡು ನೇ
ರ್ಪಡೆ ಕುಳ್ಳಿರ್ದಗಜೇಶನಂ ನಿಜ ಮನಃಪಂಕೇಜದೊಳ್ತಾಳ್ದಿದಂ ॥೪೭॥

---

೧ ಡು (ಮೂ)

॥ವ॥ ಅಂತು ತಾಳ್ದ ಖರ್ವಭಕ್ತಿಯಿಂದೆಱಗಿ—

ಪ್ರಮಥಗಣಾನ್ವಿತಂ ವಿಧಿವಿಧುಪ್ರಮುಖಾಮರಸಂಕುಳಾವೃತಂ
ಹಿಮಗಿರಿಕನ್ಯಕಾ ಸಹಿತನಂಗಜಮರ್ದನನಂಬರಪ್ರದೇ
ಶಮನಡರ್ದಲ್ಲಿ ನೋಡುತಿರೆ ರಾಜಕುಮಾರಕನೋಜೆಯಿಂದೆ ಖ
ಡ್ಗಮನಿರದೆತ್ತಿ ಪೋಣ್ಜಡಿದು ಕಂತಕೆಮರ್ಚಲೊಡರ್ಚುತಿರ್ಪಿನಂ ॥೪೮॥

ಕರ ಪೊಸತು ಜೀಯ ಪಂಚಾ
ಕ್ಷರಮಂ ನೀಂ ಮಱೆದು ಮಡಿಯಲುಜ್ಜುಗಿಪುದಿದೇಂ
ದಿರದನುಚರನೆನೆ ಪೊಗದೊ
ಳ್ದರಹಸನಂ ಪೊಳೆಯೆ ಮಂತ್ರಲಕ್ಷಂ ನುಡಿದಂ ॥೪೯॥

ಎನಗಾಪ್ತನಲ್ತೆ ಮಱೆದಿರೆ
ನೆನೆಯಿಸಿದೈ ಭಾಪು ನಿನಗದಾರ್ಸರಿ ಪೇಳೆಂ
ದೆನೆ ಕೌತುಕಮೊಗೆತರೆ ನೃಪ
ತನಯನನಾ ಕಿಂಕರಂ ಕರಂ ಬೆಸಗೊಂಡಂ ॥೫೦॥

ಸರಸಮೆ ದೇವ ಕಿಂಕರನೊಳಿಂ[೧]ತಿ[೧]ದಱಿಂದಿರವಿಂತುಟೆಂದು ಬಿ
ತ್ತರಿಪುದು, ಜೀವನಿಷ್ಕ್ರಮಣದೊಳ್ ಶಿವಮಂತ್ರಜಪಂ ಪ್ರಶಸ್ತಮೆಂ
ದೊರೆವ ಹಿತೋಕ್ತಿ[೨]ಯೇಂ[೨] ಪುಸಿ[೩]ಯೊ[೩] ಪೇಳೆನೆ 'ನಿನ್ನಯ ಭೃತ್ಯವೃತ್ತಿ ಭೂ
ವರನ ನಿಜಾಜ್ಞೆ ಕೆಟ್ಟಪುದೆನುತ್ತುಳಿದೆಂ ಗಡ ದಿವ್ಯಮಂತ್ರಮಂ' ॥೫೧॥

॥ವ॥ ಎಂದಾ ರಾಜಕುಮಾರನ ಗಂಭೀರೋಕ್ತಿಯನಾ ಕಿಂಕರನಾಕರ್ಣಿಸಿ—

ಇದು ಚಿತ್ರಂ ನೀಂ ಜಪಿಸಿದೊ
ಡಿದಱಿಂದೆನ್ನಾಳ್ತನಂ ಜನಾಧಿಪನಾ[೪]ಜ್ಞಾ[೪]
ಪದಮಳಿಗುಮೆಂಬ ಬಗೆ, ಬಗೆ
ಗೊದವಿದ ಸಂದೆಗಮನಿಳಿಪಿಳಾಧಿಪತಿಳಕಾ ॥೫೨॥

---

೧ ನಿ (ಕ) ೨ ಯೇ (ಅ) ೩ ಯೆ (ಧಾ, ಮೂ) ೪ ಗ್ನಾ (ಮೂ)

ಇಂತೆಂದೋರಂತೆ ಲೆಂಕಂ ಬೆಸಗೊಳೆ ಕಮಳಾಕಾಂತನುಂ ಬೊಮ್ಮನುಂ ತಾ
ಮೆಂತುಂ ವೇದಂಗಳುಂ ಕಾಣದ ಪರಶಿವನಂ ತೋರ್ಪ ಸಾಮರ್ಥ್ಯಮಂ ತಾ
ಳ್ದಂತಿಂತೆಂಬೂಹೆಯಂ ಮೀಱಿದ ನಿರುಪಮಸನ್ಮಂತ್ರಮಂ ಪೇಳಲಾಂ ಖ
ಡ್ಗಂ ತಾಂ ಪೂಮಾಲೆಯಾದಪ್ಪುದು ಪಱಿಯದೆ ಪೋದಪ್ಪುದೆಂದಂ ಕುಮಾರಂ ॥೫೩॥

॥ವ॥ ಅದಱಿನರಸನಾಜ್ಞೆಯುಂ ನಿನ್ನ ಭೃತ್ಯತ್ವತೆಯುಮೊಡನೆ ಕೆಡುಗುಮೆನ
ಲೊಡಂ ಕೇಳ್ದು ಕೌತುಕಂದಾಳ್ದು—

ಆದೊಡಮೆನ್ನಯ ಭೃತ್ಯತೆ
ಪೋದೊಡಮೆನ್ನರಸನಾಜ್ಞೆಯಳಿದೊಡಮೇಂ[1] ನೀ
ನೋದದೆ ಮಂತ್ರಮನಳಿದೊಡೆ
ಮಾದೇವನೊಳೈಕ್ಯವೃತ್ತಿಯೇಂ ಸಮನಿಕುಮೇ ॥೫೪॥

॥ವ॥ ಎನೆ ಮುಗುಳ್ನಗೆ ನಕ್ಕು—

ಒಂದಿನಿತು ಪೊಳ್ತು ಸೈರಿಸಿ
ಸಂದಾಯಿ ನಿರೀಕ್ಷಿಸುತ್ತಮಿರು ತೋರ್ದಪೆನೆ
ನ್ನಂದಮನೆನುತ್ತೆ ಪೂಣ್ದು ಸು
ರ್ದಂಧರಸಂ ಖಡ್ಗಮಂ ಕೊರಲ್ಗೊಂದಿಸಿದಂ ॥೫೫॥

ಎಲೆಎಲೆ ದೇವದೇವ ಕುವರಂ ಕೊರಲಂ ಕೊಱೆದಪ್ಪನಯ್ಯೊ ನಿ
ಶ್ಚಲಕರುಣಾಸಮುದ್ರ ಶಶಿಶೇಖರ ಶಂಕರ ಕಾವುದೀವುದು
ಜ್ವಲಸುಖಮಂ ಸಮಂತೆನೆ ಕೃಪಾಕರೆ ಶಾಂಕರಿ ಮುಂದೆ ಕಜ್ಜಮುಂ
ಟೆಲೆ ಗಿರಿಜಾತೆ ಸೈರಿಪುದಭೀಕ್ಷಿಪುದದ್ಭುತಭಕ್ತಿಯುಕ್ತರಂ ॥೫೬॥

॥ವ॥ ಎಂದಂಬರದೊಳ್ತ್ರ್ಯಂಬಕನಂಬಿಕೆಯನೊಡಂಬಡಿಸುತ್ತುಮಿರೆಯಿರೆ—

ನಡೆನೋಡುತ್ತಿರೆ ಕಿಂಕರಂ ಮುಗಿದ ಕಯ್ಯಂ ಪೊತ್ತು ಚಿತ್ತಾಂತದೊ
ಳ್ಮೃಡನಂ ಜಾನಿಸಿ ಖಡ್ಗಮಂ ಜಡಿದು ಸಾರ್ಚುತ್ತಾತ್ಮಕಂಠಕ್ಕೆ ಕೈ
ಗುಡೆ ಸಾಸಂ ಘುರಿಲೆಂಬಿನಂ ಕೊಱೆದಿಳಾಧೀಶಂ ಮಹಾಮಂತ್ರಮಂ
ಬಿಡದೋರಂತೊದಱುತ್ತುಮಿರ್ಪ ಶಿರಮಂ ತಾಳ್ದಂ ಕರಾಂಭೋಜದಿಂ ॥೫೭॥

---

೧ ಡೆಯೇಂ (ಮೂ); ಡದೇಂ (ಅ)

ಪೊಸತೊಂದು ತೇಜಮದು ರಂ
ಜಿಸೆ ಥಳಥಳಿಸುತ್ತೆ ನೋಡಲಣ್ಮದೆ ಭೃತ್ಯಂ
ಕುಸಿದೆಱಗಿ ನಿಂದು ಮಿಗೆ ಕೀ
ರ್ತಿಸುತಿರೆ ತಂತ್ಕಂರಕೆ ನೀಡಿದಂ ನಿಜಶಿರಮಂ ॥೫೮॥

ಅಶಿರಮಗನೆಂದವೊಲ್ ನೆಗಳ್ದ ಕಜ್ಜಮನೀಕ್ಷಿಸಿ ಚೋದ್ಯವಟ್ಟು ಕಿಂ
ಕರನೆಱಗುತ್ತೆ ಮತ್ತವನ ನಲ್ನುಡಿ ತಾನುಪದೇಶಮಾಗೆ ತತ್
ಸುರುಚಿರಮೂರ್ತಿ ತನ್ನ ಬಗೆಯೊಳ್ನೆಲೆಗೊಂಡಿರೆ ಕೀಟಭೃಂಗದಂ
ತಿರೆ ಶಿವಮಂತ್ರಸಿದ್ಧನೆನಿಸಿರ್ದನದೆಂತೊ ಮಹಾತ್ಮಸಂಗಮಂ ॥೫೯॥

ವಿಲಸತ್ಪಂಚಾಕ್ಷರೀಸಲ್ಲಲಿತತರುಲತಾಕಂದಮೋ, ಭಕ್ತಿವಲ್ಲೀ
ಫಲಮೋ, ನಿರ್ವಾಣಲಕ್ಷ್ಮೀಕಲಿತಕಮಲಮೋ, ಸತ್ಯದುಗ್ಧಾಬ್ಧಿಪೂರ್ಣಾ
ಮಲಿನಪ್ರಾಲೇಯರುಙ್ಮಂಡಳಮೊ, ಮಹಿತಚಿದ್ಯೋತಿದಾದರ್ಶಮೋ, ಮಂ
ಜುಲತೇಜಃಪಿಂಡಮೋ ಪೇಳೆನೆ ಮೆಱೆದುದು ತದ್ರಾಜಪುತ್ರೋತ್ತಮಾಂಗಂ ॥೬೦॥

॥ವ॥ ಅಂತುಮಲ್ಲದೆಯುಂ—

ಅದು ಗಗನಂಬೊಲಬ್ಜಮಧುರಂ ಮಧುರಂಜಿತನಂದನಂಬೊಲ
ಭ್ಯುದಿತರಸಾಲಸಸ್ಮಿತ ಸಮುದ್ಗಮಮುದ್ಗಮದಂತೆ ಸದ್ರವಾ
ಸ್ಪದಮಮೃತಾಬ್ಧಿಯಂತೆ ಸರದಚ್ಛವಿರಾಜಿ ವಿರಾಜಿವೊಲ್ಬಿದಾ
ಘದ ನವವಿದ್ರುಮಾಧರದಳಾಶ್ರಿತಮಾಶ್ರಿತದಂತೆ ಸಂಭೃತಂ ॥೬೧॥

॥ವ॥ ಅಂತೆಸೆವ ಶಿರೋಬ್ಜಮಂ ಕರಾಬ್ಜದೊಳ್ಪಿಜಯಂಗೆಯ್ದಿಕೊಂಡು ಸೂರ್ಯವೀಥಿಯೊಳವಂ ತಳ್ವದೈತರುತ್ತಮಿರೆಯಿರೆ—

ಅಮರ್ದಿನೊಳ್ಪಿರ್ದ ಕಮಳಮೊ,
ವಿಮಳ ಸುಧಾಬ್ಧಿಯೊಳೆ ಪುಟ್ಟಿದಮೃತದ್ಯುತಿಬಿಂ
ಬಮೊ, ಪೇಳೆನೆ ಮೆಱೆದುದು ಹಸ
ನಮಯೂಂಖಾಂವೃತಮುಖಂ ನರೇಂದ್ರಾತ್ಮಜನಾ ॥೬೨॥

---

೧ ಕ್ಕ (ಕ) ೨ ಅ (ಮೈ, ಕ); ಅರು (ಮೂ) ೩ ರ (ರಿ, ಧಾ) ೪ ಟಕ (ಮೂ)
೫ ಹಾಂ ತಂ (ರಿ) ೬ ಲ (ಮೂ) ೭ ದ್ಯ (ಮೈ) ೮ ರ್ಣ (ಮೂ) ೯ ಳಿಧಾ (ಮೂ)
೧೦ ಖ (ಮೂ)

ಪುರನಾರೀಜನಮೀಕ್ಷಿಸುತ್ತೆ ಮಱುಗುತ್ತಿರ್ಪನ್ನೆಗಂ, ಕಾಣುತ
ಚ್ಚರಿಯೆಂದಲ್ಲಿ ಬುಧರ್ಕಳೊಲ್ದು ಪೊಗಳುತ್ತಿರ್ಪನ್ನೆಗಂ, ಶೈವಭ
ಕ್ತರದೆತ್ತಂ ನೆರೆದಾರ್ದುಘೇಜಯಯೆನುತ್ತಿರ್ಪನ್ನೆಗಂ, ತಂದು ಕಿಂ
ಕರನಾ ಮಸ್ತಕಮಂ ಕರಾಂಬುಜದೊಳಿತ್ತಂ ಚೋಳಭೂಪಾಲನಾ ॥೬೩॥

॥ವ॥ ಆಗಳ್—

ಕಮಳದಳಾಯತೇಕ್ಷಣರುಚಿಪ್ರಸರಂ ಭಸಿತತ್ರಿಪುಂಡ್ರಮಂ
[೧]ಜ[೧]ಮಯುತಪಾಲಮಾ ಲಲಿತ ಕುಂಡ[೨]ಳ[೨]ಮಂಡಿತ ಗಂಡಮಂಡಳಂ
ವಿಮಳರದದ್ಯುತಿಸ್ಫುಟರದಚ್ಛದಮು[೩]ದ್ಗ[೩]ತ ಮಂದಹಾಸವಿ
ಭ್ರಮಮುರುಮಂತ್ರನಾದಮಹಿತಂ ಶಿರಮೊಪ್ಪಿದುದಾ ಕುಮಾರನಾ ॥೬೪॥

॥ವ॥ ಅಂತೊಪ್ಪು[೪]ತ್ತಮಿರ್ಪ[೪]ನಿಜತನಯನುತ್ತಮಾಂಗಮನುದಾತ್ತಚಿತ್ತಂ ನಿರೀಕ್ಷಿಸುತ್ತಂ—

ಮೃಡ ಪಂಚವರ್ಣಮಂತ್ರಮ
ನಡಿಗಡಿಗೆಡೆವಿಡದೆ ನುಡಿವ ಬಗೆಗಂಡರಸಂ
ಪಡೆದಚ್ಚರಿಯಂ ಶಿವ ಶಿವ
ಕಡುಪೊಸತಿಳೆಗಿಂತಿದೆಂದು ವಿಸ್ಮಿತನಾದಂ ॥೬೫॥

ನುತ ಸೌರಭಾಸ್ಪದ ಶ್ರೀ
ಯುತಮುದಿತಗುಣಾಂಕಮಖಿಳ ಸಾರಂಭುವನೋ
ನ್ನತಮೆನಿಪಸುತಶಿರೋಬ್ಜದೊ
ಳತಿರತಿವಡೆದತ್ತು ಪಂಚವರ್ಣಭ್ರಮರಂ ॥೬೬॥

॥ವ॥ ಎಂದು ಕೆಲದೊಳಿರ್ದ[೫]ವೃದ್ಧ[೫]ರಾಜನ್ಯಕದೊಳ್ಪೊಗಳ್ದು ಮಗುಳ್ದು ನಿಜಾನುಚರನ ವದನಾರವಿಂದಮಂ ನೀಡುಂ ನೋಡಿ—

---

೧ ಡಿತ (ಮೈ); ಜ (ಧಾ) ೨ ಲ (ಮೈ, ಧಾ) ೩ ದ್ಧ (ರಿ) ೪ ತ್ತಿರ್ಪ (ಮೂ)
೫ ಮುಗ್ಧ (ಕ)

ಎಂತು ಪೞಿದಿತ್ತನೀ ಕುವ
ರಂ ತಡೆಯದೆ ಮಂತ್ರಸಹಿತಮೀ ಶಿರಮನದೆಂ
ತೆಂತುಸಿರ್ದನೆಲವೊ ಮುಂ,ಪೇ
ೞ್ನೀಂ ತಂಳ್ವದೆನುತ್ತೆ ಭೂವರಂ ಬೆಸಗೊಂಡಂ ॥೬೭॥

॥ವ॥ ಆಗಳಾತನಾ ಯುವರಾಜನೆಂದುದುಮಂ ತಾನೆಂದುದುಮನಿನಿಸುಳಿಯ-
ದೆಲ್ಲಮಂ ಪೇಳ್ದನಂತರಂ—

ಅದನೇವೇಳ್ವುದೊ ಭೃತ್ಯಮುಖ್ಯನಳವಂ ತನ್ಮೂರ್ತಿಯಂ ಜಾನಿಸು
ತ್ತದಱಿಂ ಯೋಗಿಮಹೇಶನಂ ನೆನೆದು ತಾನಾ ದಂತಿರಾವೇಶಮಂ
ಗದೊಳೆತ್ತಂ ಬಿಡೆ ತೀವೆ ನಿಷ್ಠೆ ಮಿಗೆ ನೋಡಿಂತೆಂದು ಖಡ್ಗಾಗ್ರದಿಂ
ದದಟಿಂ ಮೇಣ್ಕೊಱೆದಿತ್ತನಾತ್ಮಶಿರಮಂ ಸನ್ಮಂತ್ರಸಂಯುಕ್ತಮಂ ॥೬೮॥

॥ವ॥ ಅಂತಿತ್ತಾಗಳಾ ಶಿರಮನಾ ನರೇಂದ್ರಂ ನಡೆನೋಡಿ ವಾಮಕರ-
ದೊಳ್ಪಿಡಿದು—

ಸುಲಿಪಲ್ನೆಱೆ ಮಿಱುಗುತ್ತಿರೆ
ವಿಲಸನ್ಮಂತ್ರಮನೆ ಜಪಿಪ ತನ್ಮಸ್ತಕಮಂ
ನಲಿನಲಿದು ನೋಡಿ ನರಪತಿ
ತಿಲಕಂ ನಿಜಭೃತ್ಯಕೃತ್ಯಮಿದು ಪೊಸತೆಂದಂ ॥೬೯॥

॥ವ॥ ಆಗಳ್—

ಹರಶರಣಸಂಗಮೇನಂ
ದೊರಕೊಳಿಸದೊ ವಿಪುಳಮಹಿಮೆಯಂ ಶಿವ ಶಿವ ಭೂ
ವರನಣುಗನ ಸಂಗತಿಯಿಂ
ದೊರೆದುದಿವಂಗವನವೋಲ್ ಮಹಾಮಂತ್ರಜಪಂ ॥೭೦॥

---

೧ ಳುವ (ಮೂ) ೨ ಆಗಳಾ (ಮೂ) ೩ ರಾ (ಮೂ) ೪ ಸ (ಮೂ)

ಮೊದಲಳಿದ ಮಂತ್ರಿಪಂಗೇ
ನಿದು ದೊರೆದುದೆ ಪರಮಮಂತ್ರಮೀ ಭೃತ್ಯಂಗಾ
ದುದು ಬಳಿಯಿನಳಿದವಂಗಂ
ತದಜಿಂ ಘನ ಮಂತ್ರಿ ಬಗೆವೊಡೀ ಭಟನಲ್ತೇ ॥೭೧॥

॥ವ॥ ಎಂದನೇಕಸುಜನಜನಂ ನುತಿಸುತ್ತಮಿರೆಯಿರೆ—

ತಿರುಕೊಳವಿನಾಚಿ ನಿನ್ನಯ
ವರಸುತಶಿರವೊಂದಕೆರಡು ಶಿರಮಿದೆ ನೋಡೆಂ
ದಿರಿಸಿದನವನಿಪಕುಲಶೇ
ಖರನುಜಿ ಶಂಕರನ ಶಿರದ ಕೆಲದೊಳ್ಬಲದೊಳ್ ॥೭೨॥

ತಳಿವ ಸುಧೆ ಪೊಳೆವ ಸುಳಿಪೆ
ಲ್ವೆಳಗದು ಸಂಜೀವನಾಖ್ಯಮಂತ್ರಂ ಜಪಿಪೆ
[೧]ಗ್ಗ[೧]ಳಮಂತ್ರಮಾಗೆ ಶಿಶುಶಿರ
ದೊಳೆ [೨]ಜೀವಂ[೨]ಬಡೆದುದಾ ಶಿರೋದ್ವಯಮಾಗಳ್ ॥೭೩॥

ಎರಳಿಡುಂ[೩] ಕಿವಿಗಳೊಳಿರದು
ಚ್ಚರಿಪ ಮಹಾಮಂತ್ರಮಾಸ್ಯವಿವರದೆ ಪೊಱಪಾ
ಯ್ವಿರವನನುಕರಿಸಿ ತನ್ನಂ
ತ್ರರವಂಬಡೆದಿರ್ದುದಾ ಶಿರಂ ಶಂಕರನಾ ॥೭೪॥

॥ವ॥ ಆಗಳಾ[೪]ತತ್ಪ್ರಭಾವ[೪]ಮನಖಿಳಪೌರ್ಗಗಳುತ್ತಮಿರ್ಪಿನಂ ತಿರುಕೊಳವಿನಾಚಿ
ಸಂದಾಯಿಯ ಕಬಂಧದ ಕರತಳದ ಖಡ್ಗಮಂ [೫]ಕ[೫]ಳೆದುಕೊಂಡು—

---

೧ ಗರ್ (ಮೈ) ೨ ಶಿರವಂ (ಮೂ) ೩ ಡು (ಮೈ) ೪ ಪ್ರಭಾವ (ಮೂ) ೫ ಸೆ (ಮೂ)

ಕೇಳಲೆ ಚೋಳಭೂಪತಿ ಮದೀಯತನೂಜನ ಮಸ್ತಕಕ್ಕೆ ಲೋ
ಕಾಳಿಯನೊಲ್ದು ಪಾಲಿಪ ಕುಮಾರನ ಮಸ್ತಕಮಿತ್ತೆಯಲ್ತೆ ನಿ
ನ್ನಾಳೆನಿಸಿರ್ದನೀ ಶಿರಕೆ ಮಾ೧ಚ್ಚಿ೧ರಮೇ ಪಳಿ ನೋಳ್ಪುದೆಂದವ
ಳ್ಪಾಳನಮರ್ಚಿ ಗೋಣ್ಗೊ೨ಱೆದು ಸಾರ್ಚಿದಳಾತ್ಮಸಮಂತ್ರಶೀರ್ಷಮಂ ॥೭೫॥

॥ವ॥ ಆಗಳ್—

ತಿರುಕೊಳವಿನಾಚಿಯೆಸಗಿದ
ಪರಿಗಚ್ಚರಿವಟ್ಟು ನೃಪತಿ ಸಚಿವನ ಶಿರಮಂ
ತರಿಸಿ ಬಳಿಯಿರಿಸಿ ನೋಳ್ಪಿನ
ಮಿರದದುಮಭವಾಂಕಮಂತ್ರಮಾಂತುದು ಪದಪಿಂ ॥೭೬॥

ಪಂಚತ್ವಮನಾನದೆಯುಂ
ಪಂಚತ್ವಮನಾಂತು ಪರಮಪಂಚಾಕ್ಷರಮಂ
ಪಂಚಮೆನೆ ಜಪಿಪ ತಲೆಗಳ
ಪಂಚಮುಖಧ್ಯಾನಿ ಚೋಳನೃಪನೀಕ್ಷಿಸಿದಂ ॥೭೭॥

॥ವ॥ ಅಂತೀಕ್ಷಿಸುತ್ತುಮೀ ಪಂಚಶಿರಃಪಂಚವರ್ಣಂಗ೩ಳ್ಗೆ೩ನ್ನ ಶಿರಃಪ್ರಣವದಿ-
ನಳಂಕರಿಪೆನೆಂದುತ್ಸಾಹಿಸಿ ಸಿತಾಸಿಯಂ ಕೊರಲ್ಗಮರ್ಚಿ ಕೊಱೆದು—

ನರನಾಥಂ ಮಸ್ತಕಮಂ
ಶಿರೋಧಿಯಿಂದಿೞಿಪಿ ವಾಮಕರದೊಳ್ಸಮಸಂ
ಹರನ ಪೆಸರೆನಿಪ ಪಂಚಾ
ಕ್ಷರಮಂ ಜಪಿಪಂತೆ ಮಾಡಿ ಮಡಗಿದನಾಗಳ್ ॥೭೮॥

ಮರಕತಕುಂಡಳದ್ಯುತಿ ಸುವರ್ಣಕಿರೀಟಮಯೂಖಮಕ್ಷಿಭಾ
ಸುರತರತಾರಕಾಂಶು ರದನಚ್ಛದದೀಧಿತಿ ಮಂದಹಾಸಬಂ
ಧುರರುಚಿ ತಳ್ತು ರಂಜಿಸೆ ತದೀಯಶಿರಂ ವರಪಂಚವರ್ಣಪಂ
ಜರಮೆನೆ ಪಂಚವರ್ಣಶುಕಮೊಪ್ಪಿದುದಲ್ಲಿ ಚಿದಂಗನಾಪ್ರಿಯಂ ॥೭೯॥

---

೧ ಶ್ಚಿ (ಮೈ) ೨ ಳೆ (ಮೂ) ೩ ಳು (ಮೂ)

॥ವ॥ ಅನಂತರಮಾ ಮಿತವಚನನಾ ತಾಣಕ್ಕೆಯ್ತಂದವಂದಿರ ಶಿರಂಗಳಿರವಂ ನೋಡಿ—

ಶಂಕರನಂ ಕರಂ ತುಳಿದುದೆನ್ನ ತುರಂಗಮಿಳೇಶಪುತ್ರನಂ
ಸೋಂಕಿದುದಲ್ತೆ [೧]ನೆ[೧]ರ್ನೆರನೆ ಮಾತಿನ ಮಾಲೆಯ ದೂಱಿದಕ್ಕಟಾ
ಶಂಕಿಸದೆಲ್ಲರಿಂತಳಿದರಾನಿವರಿಂ ಮೊದಲ್ಲೈದಧಾದೆನ್ನೆ
ನ್ನಿಂ ಕಡುಗಾಂಪನಾವನೊ ಧರಿತ್ರಿಯೊಳೆಂದು ಕರಾಳಖಡ್ಗಮಂ ॥೮೦॥

ಸೆಳೆದಭವನಂಘ್ರಿಗೆಱಗು
ತ್ತೊಳಗೆ ಕೊರಲ್ಗೈದೆ ಸಾರ್ಚಿ ಘರಿಲನೆ ಕೊಱೆದು
ಜ್ವಳಪಂಚಾಕ್ಷರಜಪಮಂ
ತಳೆವಂತಿರೆ ಮಾಡಿ ಮಡಗಿದಂ ನಿಜಶಿರಮಂ ॥೮೧॥

ಅರಸಿ ನಿಜೇಶ್ವರಾತ್ಮಜಮುಖರ್ತಲೆಗೊಟ್ಟರೆನಿಪ್ಪ ವಾರ್ತೆಯಂ
ತರುಣಿಯರಿಂದೆ ಕೇಳ್ದು ತರುಣೇಂದುಧರಾಂಘ್ರಿಪಯೋಜಪೂಜೆಯಂ
ವಿರಚಿಸಿ ರತ್ನಭೂಷಣ[೨]ರುಚಿ[೨]ಪ್ರಸರಂ ವದನೇಂದುಕಾಂತಿ ಸೈ
ವರಿಯೆ ಕುಮಾರಕಾಂತೆಯೊಡನೇಳ್ತರೆ ಬಂದಳುದಗ್ರವೃತ್ತಿಯಿಂ ॥೮೨॥

॥ವ॥ ಆಗಳ್ಸಚಿವಸತಿಯುಂ ಮಿತವಚನಕಾಂತೆಯುಮೊಡನೇಳ್ತರೆ ಸಭಾಸ್ಥಳಕ್ಕೇಳ್ತಂದು ನಿಂದು ನೀಡುಂ ನೋಳ್ಪನ್ನೆಗಂ—

ಹರಿನೀಲಸ್ಫಟಿಕಕುಟ್ಟಿಮಸ್ಥಳಸರಸ್ಥಾನಸ್ಥಿತಂಗಳ್ಮಹೇ
ಶ್ವರನಿಷ್ಠಾಮಿಹಿರಪ್ರಭಾವಿಕಸಿತಂಗಳ್ ಶೈವಷಡ್ವರ್ಣಷ
ಟ್ಚರಣಧ್ಯಾನಮನೋಹರಂಗಳಮಳಶ್ರೀಮಂಜುಳಂಗಳ್ಮಹೇ
ಶ್ವರಮುಖ್ಯಸ್ಫುರದುತ್ತಮಾಂಗಕಮಳಂಗಳ್ಕಣ್ಗೆ ದೇಂ ತೋ[೩]ರ್ದು[೩]ವೋ ॥೮೩॥

॥ವ॥ ಅಂತೆಸೆ[೪]ವಾ[೪] ಶಿರಂಗಳಂ ನಿರೀಕ್ಷಿಸಿ—

---

೧ ನಿ (ಅ) ೨ ಪ್ರರುಚಿ (ಮೂ) ೩ ರ್ದ (ಮೂ) ೪ ವ (ಮೈ, ಮೂ)

ಮೃದುರವಮೊಂದೆ ಶಂಕರಶಿರಂ, ಸಚಿವಾಸ್ಯಮುಮಳ್ಸರೋಜಾಕ್ಷಿಂ[1]
ತಿದು ಸುತಮಸ್ತಕಂ ಗುಣಯುತಂ, ಚತುರಂ ಚತುರಶೀರ್ಷಮಾನನಂ,
ಸುದತಿಯ ಪಂಚಮುರ್ವಿಪ ಮುಖಂ, ನಿಗಮಾಂಗವಿಭಾಸಿ ಮಾತೃಕಾ
ಸ್ಪದಮಿದು, ಮಂತ್ರಿಪುತ್ರವದನಂ ಮೆಱೆದಪ್ಪುದುದಾತ್ತವೃತ್ತಿಯಿಂ ॥೮೪॥

॥ವ॥ ಎಂದಮೃತಮತಿ ಮಹಾದೇವಿ ಕೆಲದೊಳಿರ್ದ ಲಲನೆಯರೊಳು[2]ಸು[3]ರ್ದು ವೀರಾವೇಶಮಂ ಕೈಕೊಂಡು ಕರಾಳ ಕರವಾಳಮಂ ಕರತಳದಿಂದಡಸಿ ಪಿಡಿದಾಗಳಾ ಸರ್ವಮಂಗಳಾದೇವಿಯುಂ ಸಚಿವಪತ್ನಿಯುಂ ಮಿತವಚನನಂಗನೆಯುಮರಸಿಯುಡಿದಳಿರ್ಗೆಱಗಿ ತಾಮುಮತಿನಿಶಿತಮಾದ ಖಡ್ಗಂಗಳಂ ಕರಾಗ್ರದೊಳ್ಪಿಡಿದು ತಮತಮ್ಮಿನಿಯರ ಶಿರಂಗಳಿದಿರೊಳ್ನಿಂದು ಕಳೆಯೇಱೆ ಮೀಱೆ—

ಹರಹರ ಬಣ್ಣಿಪಂಗರಿದು ತತ್ಸತಿಯರ್ಕಳ ವೀರವೃತ್ತಿಯಂ:
ಕರತಳಖಡ್ಗಮಂ ಜಡಿದು, ಜಾನಿಸಿ ಶೈಲಜೆಯಾಣ್ಮನಂ ನಿಜೇ
ಶ್ವರಶಿರಮೆಂಬ ಲಿಂಗಕೆ ಮುಖಾಂಬುಜದರ್ಚನೆಗೆಯ್ಯಲೆಂದು ಬಿ
ತ್ತರಿಪವೊಲಾತ್ಮಕಂಧರಕಮರ್ಚುತೆ ಖಂಡಿಪ ತತ್‌ಕ್ಷಣಾರ್ಧದೊಳ್ ॥೮೫॥

ಇಂದುಖಂಡಮಹಿಕುಂಡಳಮುದ್ಯತ್ಸ್ವರ್ಣದಿ, ಭಾಳವಿಲೋಚನಂ,
ದಂದಶೂಕಪತಿಹಾರಮುದಾರಸ್ಮೇರಮುಖಂ, ದ್ವಿರದಾಜಿನಂ,
ಸುಂದರಾಂಗಮುಸಿತದ್ಯುತಿಕಂಠಂ, ಕ[4]ಣ್ಗೆ[4]ರದೀಯೆ ಬೆಡಂಗನಾ
ನಂದಿವಾಹನನನಘಂ[5]ನಿಜರೂಪಂ ತೋಱಿದನದ್ರಿಸುತಾಧವಂ[5] ॥೮೬॥

॥ವ॥ ಆಗಳ್—

ಮೊಳಗುವ ದೇವದುಂದುಭಿರವಂ ಮೊಳಗಲ್ಲಿಳಿತರ್ಪ ದೇವಸಂ
ಕುಳದ ಕಿರೀಟರತ್ನರುಚಿ ಶಕ್ರಶರಾಸನಮಪ್ಸರೋವಧೂ
ವಿ[6]ಳ[6]ಸಿತ ಲೋಚನಾಂಶು ಸೆಳೆಮಿಂಚು, ನಭಃಸ್ಥಳಮಭ್ರಮಾಗೆ, ಕಾ
ರ್ಮಳೆ ಸುರಿವಂತೆ ಸೂಸಿದುದು ಪೆರ್ಮಳೆ[7]ದಿವ್ಯತರುಪ್ರಸೂನದಾ[7] ॥೮೭॥

---

೧ ಮಿಂ (ಮೂ) ೨ ಸಿ (ಅ) ೩ ಣ್ದೆ (ಮೂ) ೪ ದೆ (ಮೂ) ೫ ನಿಜರೂಪಂ ದೋರ್ದನುಮಾಸಹಿತಂ ಶಿವಂ (ರಿ, ಮೈ, ಮೂ) ೬ ಳಾ (ಮೈ) ೭ ದಿವ್ಯಪ್ರಸೂ... (ಮೂ)

ಮಾರಜನಕಂ ವಿಪುಳಸಾರಸಭವಂ ದಿವಿಜವಾರವರನುಂ ದಹನನಾರವಿತನೂಜಂ
ಧೀರದಿತಿಜಂ. ವಿನುತನೀರನಿಲಯಂ ಪೃಥುಸಮೀರನನಘಂ ಘನಕುಬೇರನನಲಾಕ್ಷಂ
ವೀರಗಣಮುಂ ಪ್ರಮಥಸಾರನಿವಹಂ ಸಮದವಾರಣಮುಖಂ ನವಮಯೂರಪತಿವಾಹಂ
ಸೇ[೧]ರಿ ನೆರೆದೊಪ್ಪಿರೆ ಕೃಪಾರಸಸಮುದ್ರನಗಜಾರಮಣನುಜ್ವಳಪುರಾರಿಮೆಱೆದಿರ್ದಂ
॥೮೮॥

॥ವ॥ ಅಂತು ಮೆಱೆದು ನಿಜಕರಾಗ್ರದಿಂ ತತ್ಕರತಳ[೨]ಕರಾಳಖಡ್ಗಮಂ ಕಳೆದು ಬಿಸುಟು—

ದರಹಾಸಪ್ರಭೆ ಸೂಸು
ತ್ತಿರೆ ಕರುಣಾಮೃದ ತೆರೆಯಿದೆನೆ ಮೊಗದೊಳ್ಮಂ
ಕರನೆಱಗಿ ನಿಂದ ತನ್ನೃಪ
ನರಸಿಗೆ ನಿನ್ನಿಷ್ಟಮಾವುದದ[೩]ನೆ[೩]ಱೆಯೆಂದಂ ॥೮೯॥

ಎನಲೊಡನೆ ದೇವ ಪಂಚಾ
ನನ ಮುನ್ನಳಿದಂಗೆ [೪]ಹರಣ[೪]ಮಂ ಕರುಣಿಪುದೆಂ
ದೆನೆ ಮಗುಳ್ದು ಮೆಚ್ಚಿದೆಂ ಬೇ
ಡೆನುತಿರ್ದಂ ಭಕ್ತವತ್ಸಲಂ ಕೃಪೆಯಿಂದಂ ॥೯೦॥

॥ವ॥ ಎಂದಭವನಮೋಘವಚನಮಂ ಕೇಳ್ದು—

ತಿರುಕೊಳವಿನಾಚಿಗಂ ಶಂ
ಕರ ಕರುಣಿಪುದಸುವನಾದೊಡೆನೆ ಮೆಚ್ಚಿ ಮಹೇ
ಶ್ವರನಬಳೆ ನೀಗೆಣಿಪುದೀ
ಶಿರಂಗಳಂ ಕ್ರಮದಿನೆಂದು ಬೆಸಸಿದನಾಗಳ್ ॥೯೧॥

॥ವ॥ [೫]ಎನೆ[೫]ಮಹಾಪ್ರಸಾದಮೆಂದದಂ ಮನದೆಗೊಂಡಾ ಶಿರಂಗಳಂ ಪದೆದ್ದು ನೋಡಿ—

---

೧ ಸಾ (ಧಾ, ಕ, ಅ) ೨ ಖಡ್ಗಮಂ (ಮೂ) ೩ ನೊ (ಮೂ) ೪ ಪ್ರಾಣ (ಮೈ)
೫ ಎನೆ ಕೇಳ್ದು (ಮೂ)

ಅರಸಿ ನಿಜಾಂಗುಲಿಯಿಂದೊಂ
ದೆರಡುಂ ಮೂಱುಂ ನಾಲ್ಕುಮೈದಾಱೇಳೆಂ
ದಿರದೆಣಿಪುದುಮಾಗಳೆ ನಿಜ
ಶಿರಂಗಳೇಳ್ದಂಗದೊಂದುಗೂಡಿದುವಾಗಳ್ ॥೯೨॥

ಜಯರವಮುಂ ಸುರವರಭೇ
ರಿಯ ರವಮುಂ,ಶರಣಜನದುರ್ಘೋರವಮುಂ ವಿ
ಸ್ಮಯಕರಸುರಕುಜಸುಮವೃ
ಷ್ಟಿಯ ರವಮುಂ,ದೆಸೆಯನಳುರ್ದುದೇಂ ಮುಸುಕಿದುದೋ ॥೯೩॥

ಬಲವರಲಾಟಿಸುತ್ತಿರೆ ಪದಂ,ಪದಪಿಂ ನಡೆ ನೋಡಲೆಂದು ಕ
ಣ್ಮಲರೆಳಸುತ್ತೆ ಬಿರ್ಚಿರೆ,ಕರಂ ಕರಮರ್ಚಿಸಲೆಂದು ನಾಟಕಂ
ನಲಿಯೆ ರಸಜ್ಞೆ ಕೀರ್ತಿಸಲೊಡರ್ಚಿರೆ ಚಚ್ಚರಮುಚ್ಚಿಗಂ ಪೊದ
ಳ್ದಲರೆ,ಸಮಾನಮಾನಸರದೇನೆಸೆದಿರ್ದರೊ [೧]ಭೂಭುಜಾದಿ[೧]ಗಳ್ ॥೯೪॥

॥ವ॥ ಅಂತೆಸೆಯುತ್ತುಮಿರ್ದು ಕಟ್ಟಿದಿರೊಳೆಸೆವಿಷ್ಟಪ್ರದನೆನಿಪ್ಪಷ್ಟಮೂರ್ತಿಯ ವಿಮಳಮೂರ್ತಿಯನಾನಂದಬಾಷ್ಪಬಿಂದುಮಂಜರೀಮಂಜುಳಾಕ್ಷಿಗಳಿನವರಭೀಕ್ಷಿಪಾಗಳ್—

ಜಡೆಮುಡಿ ತಾಳ್ದ ಗಂಗೆ ಪಣೆ[೨]ಗಳ್ಪ[೨]ಣಿಕುಂಡಳಮಿಂದುಲೇಖೆ ಚೆ
ಲ್ವಿಡಿದೆಸೆವೈಮೊಗಂ ಕಱುಗೊರಲ್ಕರಿಕೃತ್ತಿಮೃಗಾರಿಚರ್ಮದೊ
ಳ್ಪಡೆ ತಿಸುಳಂ ಕರೋಟಿ ದಶಬಾಹು ಮುರಾಂತಕನಕ್ಷಿ ತಳ್ತ ಮೆ
ಲ್ಲಡಿಯೊಡಲರ್ಧದದ್ರಿಜೆ ವಿರಾಜಿಸೆ ರಂಜಿಸಿದಂ ಮಹೇಶ್ವರಂ ॥೯೫॥

॥ವ॥ ಅಂತಿದಿರೊಳೆಸೆವ ಮದನ[೩]ಮದದ್ವಿರದ[೩]ಬಿದುವಿದಳನವಿಳಾಸ ಪಂಚಾಸ್ಯನಂ ಪಂಚಾಸ್ಯನನವಂಚಿತಪಂಚಾಕ್ಷರೀಪ್ರಭಾವಪ್ರಭಾವಲ್ಲಭಪ್ರಭರ್ಭಾವಂ ಬೆರಸು ಮಾಮಹಾನುಭಾವರ್ಭಕ್ತಿರಸವಿಸರವಿಲುಳಿತಲಲಿತಹೃದಯಾರವಿಂದರಾಗಿ ದಂಡಪ್ರಣಾಮಂಗೈದು ನುತಿಸು[೪]ತ್ತುಮಿ[೪]ರ್ಪಾಗಳ್—

೧ ಭೂಭವಾದಿ (ಅ), ಭೂಭುಜಾಳಿ (ಮೈ) ೨ ಯೊಳ್ (ಮೂ) ೩ ಪುದರದ (ಧಾ, ಕ)
೪ ತಿ (ಮೂ)

ಜನತಾಪಾಪಹ[೧]ಪಾ[೧]ದನೂರ್ಜಿತಕಳಾಪೂರ್ಣಂ ಮನೋಜಾತಿರಂ
ಜನದಿವ್ಯಾಂಗನನಂತಕಾಂತನಿದಿರೊಳ್ತಾನೊಪ್ಪೆ ಸೋಮಂ ನರೇಂ
ದ್ರನ ಕಣ್ಣೈದಿಲರ[೨]ಲ್ವು[೨]ದುಂ ಮುಗಿವುದುಂ ಹಸ್ತಾಬ್ಜಮೇಂ ಚಿತ್ರ[೩]ಮೀ[೩]
ತನ ಹೃದ್ವಕ್ತ್ರಸರೋಜಮೊಲ್ದಲರ್ದುದಾಶ್ಚರ್ಯಾವಹಂ ಭಾವಿಸಲ್ ||೯೬||

||ವ|| ಎಂದಲ್ಲಿ ನೆರೆದ ವಿಬುಧರ್ನುತಿಸು[೪]ತ್ತಿ[೪]ರ್ಪನ್ನೆಗಂ—

ಪಿರಿದುತ್ಸಾಹದೆ ನೋಡಿಯುಂ ಗಿರಿಶನಂ ಕೊಂಡಾಡಿಯುಂ ಪಾಡಿಯುಂ
ಚರಣಾಂಭೋಜಕೆ ಮತ್ತೆಮತ್ತೆಱಗಿಯುಂ ರಾಗಾಕುಳಂ ಚಿತ್ತಮೊಂ
ದಿರೆ ಪೂರ್ಣೋತ್ಸವ[೫]ಮೈದಿ[೫]ಯುಂ ತಣಿದುದಿಲ್ಲೇನೆಂಬೆನುದ್ಯತ್ಕಳೇ
ವರ ವಿಸ್ಫೂರ್ಜಿತಸಾತ್ವಿಕಂ ಗುಣನಿಧಿಶ್ರೀಚೋಳಭೂಪಾಲಕಂ ||೯೭||

ಶ್ರೀರಾಜಶೇಖರಾ[೬]ಖ್ಯ[೬]ಕು
ಮಾರಂ ನಿಜಮೌಳಿಮಣಿರುಚಿಪ್ರಸವದಿನಂ
ದಾ ರಾಜಶೇಖರಾಂಘ್ರಿಸ
ರೋರುಹಮಂ ಪೂಜೆಗೆಯ್ದು ನುತಿಸಿದನೊಲವಿಂ ||೯೮||

||ವ|| ಅದೆಂತೆನೆ—

ಪುರಹರ ಪೂರ್ಣರೂಪ ಪುರುಷೋತ್ತಮವಂದ್ಯ ಪುರಂದರಾರ್ಚ್ಯ ಪು
ಷ್ಕರಸರಿದುತ್ತಮಾಂಗ ಪರಮೇಶ್ವರ ಪನ್ನಗಭೂಷ ಪಾರ್ವತೀ
ವರ ಶರಣಾಗತಪ್ರಕರರಕ್ಷಕ[೭]ಶಂಕರ[೭]ಶರ್ವರೀ[೮]ಶಶೇ[೮]
ಖರ ಜಯದೇವದೇವ ಜಗತೀಧರಮಂದಿರ ಮಂಗಳೋದಯಾ ||೯೯||

||ವ|| ಎಂದು ಪೊಗಳ್ದು ಮಗುಳ್ದೆಱಗಿ ನಿಂದು—

ಚರಣನಖಮಣಿಮುಕುರದೊ
ಳ್ನರಪತಿ ಮಾರ್ಪೊಳೆದು ತೋಱಿದಂ ಕೈಲಾಸ
ಸ್ಥಿರತೆಗಿದಗ್ಗಳಮೆನುತಂ
ತುರಿಪಂ ಮಿಗೆ ನೆಲಸಿದಂತಿರಾ ಶಶಿಧರನಾ ||೧೦೦||

||ವ|| ಆಗಳ್—

---

೧ ತಾ (ಮೂ), ರಾ (ಮೈ) ೨ ಲ್ಬು (ಕ) ೩ ಪೂ (ಮೂ) ೪ ತ್ತಮಿ (ಮೂ)
೫ ಮೈದೀಲಿ (ಕ) ೬ ಜ (ಮೈ, ಮೂ) ೭ ಕರ (ಮೂ) ೮ ಶಶಿಶೇ (ಮೈ).

ವಿಳಸನ್ನೇತ್ರಂಗಳಿಂದೀಕ್ಷಿಸಿದನಮಮ ಸತ್ಯೇಮಮಂ ಬೀಱಿದಂ ಮಂ
ಜುಳಬಾಹಾಮಂಡಳಂ ತಳ್ತಿರೆ ಮಿಗೆ ಬಿಗಿದೊಲ್ದಪ್ಪಿದಂ ಕಂದ ಬಾರೆಂ
ದೆಳಸುತ್ತಂ ಮತ್ತೆ ಮನ್ಮಂತ್ರದ ಮಹಿಮೆಯನಿಂತಾವನೈ ತೋರ್ದನುರ್ವೀ
ತಳದೊಳ್ಪೇಳೆಂದು ನಂದೀಶನೊಳೆ ಪೊಗಳ್ದನಾನಂದದಿಂದದ್ರಿಜೇಶಂ ॥೧೦೧॥

॥ವ॥ ಎಂದು ಮತ್ತಮಿರದೆ—

ಸ್ಕಂದನುಪಮನ್ಯುಮುನಿ ಸಾ
ನಂದ ಶತಾನಂದ ಮುರುಘರೀ ಧರಣೀಭೃ
ನ್ನಂದನನಿವರರುವರ್ಸ್ಗೆ
ಪೊಂದಿದ ಪರತರಷಡಕ್ಷರಾತ್ಮಕರಲ್ತೇ ॥೧೦೨॥

॥ವ॥ ಅಂತುಮಲ್ಲದೆಯುಂ—

ಇವನೇ ಸತ್ಯೇಂದ್ರನಪ್ಪಂ ಬಗೆವೊಡಮಮ ಸತ್ಯೇಂದ್ರಚೋಳೋರ್ವಿಪಂ ಮ
ತ್ತಿವನೇ ಸನ್ಮಂತ್ರಲಕ್ಷಂ ನಿಜದಿನರರೆ ಸನ್ಮಂತ್ರಲಕ್ಷಂ ಬಳಿಕ್ಕಿಂ
ತಿವನೇ ನೋಳ್ಪಾಗಳಾಹಾ ಮಿತವಚನನಿವಂ ತಪ್ಪದೆಂತಪ್ಪೊಡಂ ಕೇ
ಳಿವನೇ ಸನ್ಮಂತ್ರಿ ನಾಥಂಗತಿಹಿತನೆನುತಂ ಶಂಕರಂ ನಂದಿಗೆಂದಂ ॥೧೦೩॥

॥ವ॥ ಮತ್ತಮಲ್ಲಿ—

ಅಂಬಿಕೆ ಸಂಭ್ರಮಂ ಮಿಗೆ ಪದಕ್ಕೆಱಗಿರ್ದ ನರೇಂದ್ರಕಾಂತೆಯಂ
ತಾಂ ಬಿಗಿದಪ್ಪಿ ತತ್ಸುತಸತೀಮುಖರಂ ಕೃಪೆಯಿಂದೆ ನೋಡಿ ಹ
ಸ್ತಾಂಬುಜದಿಂದೆ ಮೆಯ್ದಡವಿ ಮೇಣ್ಪರಸುತ್ತಿವರಂತೆ ಶಂಭುವಂ
ನಂಬಿದರಾರೆನುತ್ತೆ ಪೊಗಳ್ದಳ್ಕಮಳಾಮುಖಶಕ್ತಿಬೃಂದದೊಳ್ ॥೧೦೪॥

ಕರಿಮುಖನಿಂದು ಪೊಸತೆಂದಂ
ಶರಜನ್ಮಂ ಚಿತ್ರಮೆಂದನಮರರ್ಪಿರಿದ
ಚ್ಚರಿಯೆಂದರ್ಸುರಮುನಿಗ
ಳ್ಕರಮರಿದರಿದೆಂದರವರ ಚರಿತಮನಾಗಳ್ ॥೧೦೫॥

॥ವ॥ ಅಂತು ಸಮಸ್ತಪ್ರಶಸ್ತಪ್ರಮಥರುದ್ರಭಕ್ತಮಹಾಗಣಮಗಣಿತೋತ್ಸವಂ
ಮಿಗೆ ಪೊಗಳುತ್ತುಮಿರೆಯಿರೆ—

---

೧ ವಿ (ಕ)

ಜವದಿಂದೇಳ್ತಂದು[೧]ವೀ[೧]ಶಂ ಬೆಸಸಲೊಡನೆ ಬಾನತ್ತಣಿಂ ಭಾನುಭಾನು
ಪ್ರವಿರಾಜದ್ಧರ್ಮಚಂಚತ್ಕಳಶವಿಳಸಿತಂಗಳ್ಮಣಿಶ್ರೇಣಿಮಾಲಾ
ನಿವಹಂಗಳ್ಶೃಂಗಳಾಲಂಕರಣ ಶತಯುತಂಗಳ್ಪತಾಕಾನ್ವಿತಂಗ
[೨]ಳ್ದಿ[೨]ವಿಜಕ್ಷ್ಮಾಜಪ್ರಸೂನಪ್ರಸರಸರಯುತಂಗಳ್ಮಹಾಪುಷ್ಪಕಂಗಳ್ ॥೧೦೬॥

॥ವ॥ ಅಂತೇಳ್ತಂದ ಪುಷ್ಪಕಂಗಳೊಳವಂದಿರಂ ಕೂರ್ಮೆಯಿಂ ಕುಳ್ಳಿರಿಸಿ ಪುಷ್ಪೇಷುದರ್ಪಪ್ರಭಂಜನಂ ಪ್ರಭಂಜನಾಪ್ತೇಕ್ಷಣನಾಕ್ಷಣಂ ಸಕ್ಷಣಂ ಸಕಲಗಣಂಬೆರಸು ಶೈಲಜಾಸಹಿತಂ ಕೈಲಾಸಾಭಿಮುಖನಾಗಿ ಗಗನಮಂಡಳದೊಳಗಣಿತೋತ್ಸವಂ ಮಿಗೆ ಬರು[೩]ತ್ತು[೩]ಮಿರೆಯಿರೆ—

ಆ ಸಮಯದೊಳಮರರ್ಜಯಜಯ[೪]ಮೆ[೪]ನೆ
ಭಾಸುರ ಸುರಕುಜದಲರ್ವಳೆ ಭೋರೆನೆ
ಸುರಿ[೫]ವು[೫]ತ್ತಿರೆ ಸುತ್ತಿರೆ ಗಣನಿಚಯಂ
ಪಿರಿದೊತ್ತರಿಸುತ್ತಿರೆ ಖಚರಚಯಂ
ಎಡವಕ್ಕದೆ ರಕ್ಕಸವಗೆಯಂ ಬರೆ
ಜಡಜಭವಂ ಬಲವಕ್ಕದೊಳೈತರೆ
ಪಿಂದೆಸೆ ಸುಮನೋರಮಣಾದಿಗಳಿರೆ
ಮುಂದೆಸೆ ರಂಭಾವಧು ನರ್ತಿಸುತಿರೆ
ಮುತ್ತಿನ ಸತ್ತಿಗೆ ತೊಳತೊಳಗುತ್ತಿರೆ
ಸುತ್ತಿ ತನುದ್ಯುತಿ ಥಳಥಳಿಸುತ್ತಿರೆ
ಕರೆದುವು ಬಿರುದಿನ ಕಹಳೆಗಳಾಗಳ್
ಪರೆದುದು ದುಂದುಭಿರವಮೆಣ್ದೆಸೆಯೊಳ್
ಪೊಸ ರನ್ನದ ಚಿನ್ನದ ನಡೆತೋರಣ
ಮೆಸೆದಿರ್ದುದು ಗಮನೋತ್ಸವಕಾರಣ
ಮಿಂದಿರೆ ಶಾರದೆಯರ್ಚಾಮರಮಂ
ಮುಂದೆಸೆ ಡಾಳಿಸುತಿರೆ ಸಾಮರಮಂ
ಗುಡುತರಂ ನುತಿಸುತ್ತಿರೆ ಸುರಮುನಿಗಳ್
ಮೃಡ ಜಯಜಯಯೆಂದೆನೆ ಘನಮುನುಗಳ್
ಸುರನದಿ ತೆರೆಮಸ[೬]ಗ[೬]ದ ತೆಱದಿಂದಂ
ಭರದಿಂ ನಂದಿಯನೇಱುತ್ತಂದಂ
ಮಿಗೆ ಬಂದಾಸ್ಥಾನದೊಳಗಜೇಶಂ
[೭]ಸೊಗಯಿಸಿದಂ ಕೈಲಾಸದೊಳೀಶಂ[೭]

೧ ದೀ (ಮೂ) ೨ ವ (ಮೂ) ೩ ತ (ಕ) ೪ ಯೆ (ಮೂ) ೫ ಯು (ಅ) ೬ ಗಿ (ಮೂ, ಕ)
೭ ಮೂ ಪ್ರತಿಯಲ್ಲಿಲ್ಲ,

॥ವ॥ ಮತ್ತಮದು ಸಂತತಸಮಧಿಗತ ಭರ್ಮ ಕೂರ್ಮಸಶರ್ಮಪರಿಚಲತ್
ಪೃಥುಳತರಶಫರಸಲಿಲಕರಿನಿಕರ ಮಕರ ಸುಕರ ಹಿಮಕರಧವಳಮರಾಳಮಂಜುಳ
ಮದಮಧುಕರ[೧]ಪ್ರಕರಮಧುರ[೨]ರವ ಪರಿಗತ[೩]ನಿ[೩]ಜರಜಃಪುಂಜಪಿಂಜರಿತಜಳಕನಕ
ಕಮಳ ಕುಮುದಕಲ್ಹಾರ[೪]ವಿಸರ[೪]ಸರಳತರತರಂಗರಂಗದಭಂಗ ಶೈವಲಲತಾವಿತಾನ
ವಿಳಸಿತಪಿತತ ಸ್ವಕೀಯ ಮಹನೀಯ ಗಾಂಭೀರ್ಯ ಪರಿಹಸಿತಸುಧಾಶರಧಿಪುರಶ್ರೀ
ಮೇಖಲಾಕಲಿತಪರಿಖಾವಲಯವಲಿತಪುರೋಪವನಕಂಪಿತ ಸರಸರಸಾಲತರು ಸಲ್ಲ-
ಲಿತ ಸಮುಲ್ಲಸಿತಪಲ್ಲವಪ್ರತಾನ ಪ್ರತಿಬಿಂಬಕದಂಬ ಪದ್ಮರಾಗಾ[೫]ಯಿ[೫]ತ ಸ್ಫಟಿಕಮಣಿ
ಮಯವಿಶಾಲಸಾಲಾಟ್ಟಾಲಜಾಲಚಾರುತರಚತುರ್ದ್ವಾರಸಾರಸುಗಮನಿಗಮಮಯನ
ಘಟಕಟಾಹಚುಂಬಿಜೃಂಭಿತಮಹಾಗೋಪುರಾಗ್ರಕಮನೀಯ [೬]ತಪನೀಯದಂಡ[೬]
ಮಂಡಿತ ಸಮುತ್ತುಂಗಪುಂಗವಧ್ವಜರುಚಿರ ಮಣಿಮುಕುರಮುಖಮುಕುರಾವಲೋ-
ಕನ ಚಿರಸ್ಮಿತಹಿಮಕರವಧೂನಿಕರಕೇಕರಪ್ರಸಾದಪರಿವಿಲೀನಪರಿಸರಸ್ಥಿತ[೭]ಲಸಿತ
ವಿಶದ[೭] ಶಶಿಮಣಿಪ್ರಾಸಾದಪರಿ[೮]ಗ[೮]ಳಿತ ಸದಮಳಜಳಪ್ರವಾಹ ನಿಷ್ಪ್ರಯಾಸಪರಿವರ್ಧಿ
ತಾನಲ್ಪಕಲ್ಪತರುಪಙ್ಕ್ತಿಸಂತತದರದಳಿತ ಪರಿಮಳಭರಿತ ಕುಸುಮವಿಸರವಿಸರದ
ಮಂದಮರಂದರಸ ಕದಂಬಕರ್ದಮಿತವಿಧು ರವಿವೀಥಿಸನಾಥಮುಂ, ಮಹೋಜ್ವಳ
ಮಹೀಂದ್ರಮಣಿಖಚಿತರುಚಿನಿಚಿತಭರ್ಮನಿರ್ಮಿತನಿಶಾಂತ ಸಂತಾನಪುರೋಭಾಗಭಾ-
ಸುರ ವ್ಯಕ್ತಾಮುಕ್ತಾಫಳಪ್ರಕರಪರಿಖಚಿತವಿಳಾಸ ಸೌಧಾಗ್ರ[೯]ಪ್ರ[೯]ತ್ಯಗ್ರರತ್ನಪಂಜರ
ಮಂಜುಳ ಶುಕಸಾರಿಕಾನಿಕುರುಂಬ ಪರಿಪ[೧೦]ಠಿ[೧೦]ತ ನಿಟಿಲನಯನಲೀಲಾಕಥಾಕಲಾ
ಕರ್ಣನಕರ್ಣ ಕೌತುಕಾಂತರಂಗ ಸಂಗತ ಸತ್ತ್ರಮ[೧೧]ದ[೧೧]ಪ್ರಮೋದಭರಭರಿತ[೧೨]ಸ
ಸಾ[೧೨]ತ್ತ್ವಿಕಾಗಣ್ಯಾ[೧೩]ಗು[೧೩]ಣಾಗ್ರಗಣ್ಯಸಮುದಯಸ[೧೪]ಮ[೧೪]ಲಂಚಿತಮುಂ, ಮತ್ತಂ
ಕಾಂಚನೋದಂಚಿತ ಪಾಂಚಾಲಿಕಾಪುಂಜರಂಜಿತ ವಜ್ರಮಯಸ್ತಂಭಸಂಭೃತಪ್ರವಾಲ
ಜಾಲದಂಡಮಂಡಿತ ಹರಿನ್ಮಣಿವಿತರ್ದಿವೇದಿಕಾ ಹರಿಮಣಿಪ್ರತೋಳಿಕಾ ದ್ವಾರನವಮಣಿ
ಗ್ರಥಿತ ಚಾರುತೋರಣಾಂಚಿತ ವೈಢೂರ್ಯಮಣಿಸೋಪಾನವಿಳಸಿತವಿಳಾಸಮಂಟಪ
ಪರಂಪರಾಪರಿಶೋಭಿತಪದ್ಮರಾಗಮಣಿಮಯಕನತ್ಕಳಶಪ್ರಭಾಭಿಭಾಸುರ ತರುಣ
ಭಾಸ್ಕರಕಿರಣ[೧೫]ಪಲ್ಲವಿತ[೧೫]ಘನಗಗನಗಹನಮುಂ, ನಿರುಪಮಾನ ನಿತ್ಯೈಶ್ವರ್ಯ
ಲಕ್ಷ್ಮೀಲಾಸ್ಯರಂಗಸ್ಥಳಮುಂ ಷಡ್ವರ್ಗ[೧೬]ದುರ್ದಮಧ್ವಾಂತ[೧೬]ವಿಧ್ವಂಸನ ವಿಧಿಮಾ-
[೧೭]ತ್ರ[೧೭]ಂಡಮಂಡಳಮುಂ, ನಿರತಿಶಯ[೧೮]ಸುಖ[೧೮]ಫಲೋದಯಕಲ್ಪಪಾದ

೧ ಲ (ಮೂ) ೨ ಮಧುರ (ಮೂ) ೩ ನೀರ (ಮೂ) ೪ ವಿವಿಧ (ಮೂ) ೫ ನ್ವಿ (ಮೂ)
೬ ದಂಡ (ಮೂ) ೭ ವಿಶದ (ಮೂ, ಧಾ) ೮ ಮ (ಮೂ) ೯ ಪ (ರಿ) ೧೦ ಲಿ (ಮೂ)
೧೧ ಥ (ಕ) ೧೨ ಸಾ (ಮೂ) ೧೩ ಗ (ಮೈ, ಧಾ, ಕ) ೧೪ ಮು (ಮೂ)
೧೫ ಸಲ್ಲಲಿತ (ಮೂ) ೧೬ ಮಧ್ವಾಂತ (ಮೂ) ೧೭ ಮಾರ್ತಾ (ಮೂ)
೧೮ ನಿಜಸುಖ (ಮೂ)

ಪಮುಂ, ಸಮಂಜಸಮುಕ್ತಿರಮಣೀರಮಣೀಯಮುಕುರಮುಂ, ನಿಜಸ್ಮರಣಪರಿಣತಜನವಿಪುಳವಿಪತ್ಕದಂಬಜಲದಪಟಲಜಂಝಾಪ್ರಭಂಜನಮುಂ, [೧]ಶ್ರುತಿ[೧]ತತಿಕೃತಸ್ತುತಿತರಂಗಿಣೀಸಂಗತ ಪಾರಾವಾರಮುಂ, ಶರಣಾಗತಜನವ್ರಜವಜ್ರಪಂಜರಮುಂ, ಸಕಲಮಂಗಳಕಳಾಕೇಳೀನಿವಾಸಮುಮೆನಿಸಿ ಪೊಗಳ್ತೆವೆತ್ತು ಪೆಂಪುವಡೆದ ಕೈಲಾಸಾಖ್ಯಮಹಾಪುರದಂತರ್ವಳಯವಿಳಸಿತ ಶಶಧರಶತಕರಸಹಸ್ರರುಚಿನಿಜಯರುಚಿರತರ ಸವಲಂಕಾರ ಸಾರಸ್ವತಸದನ, ಮಹಾಸಭಾಮಂಟಪಮಧ್ಯಮಂಜುಳದಿವ್ಯಸಿಂಹಾಸನಸವ್ಯಪಾರ್ಶ್ವಸಮುಪಸ್ಥಿತಸರ್ವಮಂಗಳಾಚರಣಾರವಿಂದ ಸೇವಾವಸರಸಾವಧಾನಮಾನಸ ಮಾನಸಂಯುತ ನಿರತಿಶಯಸೌಂದರ್ಯಮಾಧುರ್ಯಸಮಾರೂಢಪ್ರೌಢತಾರುಣ್ಯಲಾವಣ್ಯಪರಿ[೨]ಮಿ[೨]ಳಿತ ಘನಜಘನಕನಕಘಟಸಮಸಮಸ್ತನಯುಗಳ ಕೇಶಭರಭಾರಭಾಸುರ ಭಾರತಿ ಭಾರ್ಗವಿಪ್ರಮುಖ ಲೇಖನಾಯಕನಿಕಾಯಕಾಮಿನೀಪ್ರಬಲಬಲಕಲಿತ ಸುಲಲಿತ ಕಲೇ[೩]ವರ ಸಮುಜ್ವಳವಿಳಾಸ ವಿಧಿತ ಕುಸುಮವಿಸರವಿಭೂಷಣ ಭೂಷಿತಾವಯವ ನವವಯಃಸಮುದಿತ ವಿಪುಳ ವಿಭವ ವಿಭ್ರಮವಿರಾಜಿತ ಸರತಿಸಾಂಜ[೪]ಲಿ[೪]ಪುಟನಿಟಿಲಕುಟಿಲ ಕೃ[೫]ಷ್ಣೇ[೫]ಕ್ಷು ಕೋದಂಡಮಂಡಿತಬಂಧುರಕಂಧರಕಂದರ್ಪನಿನುದಾರಸಾರಶೃಂಗಾರರಸಮುಮಂ, ಮತ್ತಮತಿವಿಕೃತವೇಷಮುಮರ್ದಿರೆ ನೆತ್ತಿಯೊಳೆತ್ತಿಕಟ್ಟಿದ ಜಂಡಿಕೆಯೊಳ್ತೊಡರ್ಚಿದ ಜೇಗ್ಗವಡಿಕೆಯ ಮಾಲೆಚೂಳಿಕೆವಿಡಿದು ಜತಿಜತಿಗೊಲೆಯೆ ಪು[೬]ಲಿ[೬]ದೊವಲಬಲ್ಗಾಸೆಯ ಮೇಲಳವಡಿಸಿಕಟ್ಟಿಬಿಟ್ಟ ಕಿಱುಗಂಟೆಗಳ ತೊಂಗಲ್ತೊನೆದು ಝಣಝಣಧ್ವನಿಗುಡೆ ಮೊಗಮನುರುಗಿಸಿ ಮೂಗನಲರ್ಚಿಸಿ ಪು[೭]ರ್ಬೇಱಿ[೭]ಸಿ ಕಣ್ಣಂ ಮೇಳಿಸಿ ನಾಲಗೆಯಂ ನೀಡಿ ಪಲ್ಗಳಂ ತೆಱೆದು ಬಸಿರನುರ್ವಿಸಿ ಕೊರಲಂ ಕೊಂಕಿಸಿ ನ[೮]ಡುವಂ[೮]ಬಂಕಿಸಿ ನೆರೆದಗಣಂಗಳ್ನಗೆಗಡಲೊಳೋಲಾಡೆ ಪಾದತ್ರಯದೊಳ್ನಲಿದು ನರ್ತಿಸಿ ಮೃಡನ ಮೊಗದಾವರೆಗೆ ಮುಗುಳ್ನಗೆಯನೋಲಗಿಪ ಭೃಂಗಿರಿಟಿಯಿಂ ಹಾಸ್ಯರಸಮುಮಂ, ಮತ್ತಂ ಚಿರಕಾಲಮುಗ್ರತಪಂಗೈದು ವನಜಭವನಿಂ ವರಂಬಡೆದು ಕಡುಕೊರ್ಬಿದ ದನುಜಜನದಿ[೯]ನಾ[೯]ದಬಾಧೆಗಳ್ಕಿಬಳ್ಕಿ [೧೦]ಕಂ[೧೦]ದಿ ನೊಂದೇಳ್ತಂದಿಂದುಧರನಂಘ್ರಿಗೆ ಬಿನ್ನವಿಸಲ್ ಸಮಯಂಬಡೆಯದೆ ಕಡೆವಾಗಿಲೊಳ್ಪಿರಿದುಕಾಲಂ ಕಾದು ನಿಂದೊಳಗಣ್ಗೆ ಸಲ್ಗೆ ಮಿಗೆ ಪೋಪ ಗರುಡಧ್ವಜಾದಿ ದಿವಿಜವ್ರಜದ ಬೆಂಬಳಿಯೊಳೊಯ್ಯನಡಂಗಿ ಪೊಕ್ಕು ಪೋಪಾಗಳ್ ತಡೆದು ಪಿಡಿದು ನೂಂಕಿ ಝಂ[೧೧]ಕಿ[೧೧]ಸಿ [೧೨]ಜ[೧೨]ಡಿದುಪೊಡೆವ ದೌವಾರಿಕ ಪ್ರಚಂಡಗಣೇಂದ್ರರ ದಂಡ ಪಾತದಿಂ ದಿಂತಗೆಡೆದಳಲ್ದು ಬಿಸುಸುಯ್ದು ಬಸವಳಿದು ಕಂಬನಿದುಂಬಿ ತಮ್ಮನಗಲ್ದು ಸೆಱೆ

---

೧ ಮಂಜುಳಶ್ರುತಿ (ಮೂ) ೨ ಮ (ಮೂ) ೩ ಳೀ (ಮೂ) ೪ ವಿ (ರಿ) ೫ ಷ್ಣ (ಕ) ೬ ಲೇ (ಕ); ಲಿಯ (ರಿ); ೭ ರ್ಬನೇಱಿ (ಧಾ) ರ್ಬೇರ (ಮೂ) ೮ ಡುಂ (ಮೂ) ೯ ಪಾ (ಮೂ) ೧೦ ಕು (ಮೂ) ೧೧ ಗಿ (ರಿ) ೧೨ ಬ (ಮೂ)

ಸಿಕ್ಕಿದ ನಿಜಾಂಗನೆಯರಂ ನೆನೆನೆನೆದು ಪಲುಂಬಿ ಪಳಯಿಸುವ ದಿವೌಕಸರಿಂ ಕರುಣಾರಸಮುಮಂ, ಮತ್ತಮಾ ವಿಷಾ[೧]ದವಿಧುರಿತರ[೧] ಕಾರ್ಪಣ್ಯೋಕ್ತಿಗೇಳ್ದು ಕರುಣಂಗೈದು ಶಿವನಂಘ್ರಿಯುಂ ಕಾಣಿಸಿ ಬಿನ್ನಪಂಗೈಸಿ ತನ್ನಿರೂಪದಿಂ ನಂದೀಶ್ವರ[೨]ನಂ ಕಳುಪೆ[೨] ಕಡುಪಿಂ ಪರಿತಂದು ತದಾರಾತಿಖಲದನುಜಬಲಮಂ ಬೆಂಬತ್ತಿ ಮುತ್ತಿ ಪೊಡೆದು ಬಡಿದು[೩]ಕಡಿಕಂಡ[೩]ಗೈ[೪]ದು[೪] ಸೀಳ್ದು ಪೋಳ್ದು ಸಂಹರಿಸಿ ಮುಗುಳ್ದು ಭವನಲ್ಲಿಗೇಳ್ತಂದಾಗಳ್ ಕೆನ್ನೆ[೫]ತ್ತ[೫]ರಿಂ [೬]ನೆನೆದ[೬] ಕರುಳ ಮಾಲೆ[೭]ಯಮಂತ್ರ[೭] ಪೋತ [೮]ಕರಿ[೮]ನಾಸ್ತಿವ್ರಾತಮುಂ ತೊಡರ್ದ ಕರಾಳತರ ಖರಖಡ್ಗಂ ಕರತಳದೊಳಿಂಬುವಡೆಯೆ ವಿಕಚಜಪಾಕುಸುಮ ರಕ್ತರಕ್ತಜಳಧಾರಾ[೯]ಸ[೯]ಕ್ತ[೧೦]ಂಶ್ರುಮಾಂಸ ಕಳಕಂ[೧೧]ಠಾ[೧೧]ಕುಂಠಿತ[೧೨]ಭ್ರುಕುಟಿ[೧೨]ಭಯಂಕರ ಮುಖತದೀಯ ವಿಕಟ ಶಿರೋಮಾಲೆ ಕಂಠೋಪಕಂಠದೊಳ್ಮೆಱೆಯೆ ಪೊಡಮಟ್ಟುನಿಂದ ಭೀಕರಾಕಾರ ಭೈರವವ್ರಜದಿಂ ಭೀಭ[೧೩]ತ್ಸ[೧೩]ರಸಮುಮಂ, ಮತ್ತಮನೇಕ ಮುಖಂಗಳನನಂತನೇತ್ರಂಗಳನಪರಿಮಿತಭುಜಂಗಳನಗಣಿತಪದಂಗಳನಸಂಖ್ಯಾತ[೧೪]ಕರಂ ಗಳಂ[೧೪] ತಳೆದು ಶಶ್ವದ್ವಿಶ್ವರೂಪಮಂ ತೋರ್ಪ ವಿಧಿಸೃಷ್ಟಿಯುಮನಳಿದು ಪೊಸತಂ ಮಾಳ್ಪ ನಿಜಾಭರಣ ಫಣಿಯಿಂ ಗರುಡನಂ ಬೆಂಕೊಳಿಪ ಮೌಳಿಜೂ[೧೫]ಳ[೧೫]ದೊಳ್ತಳೆದ ವಿಧುಶಕಲದಿಂ ವಿಧುಂತುದನನ[೧೬]ದಿ[೧೬]ರ್ಚುವ ಪದನಖ[೧೭]ಮ[೧೭]ಯೂಖದಿಂ ಖದ್ಯೋತಮಂಡಳಮಂ ಖದ್ಯೋತಕೆಳೆಯೆನಿಪ ಲೀಲಾವೇ[೧೮]ಶ[೧೮]ವಶೇಷದುನ್ಮಿಷಿತನಿಟಿಲ ತಟನಯನ[೧೯]ಪುಟ[೧೯]ಸ್ಫುಟ ವಿನಿರ್ಗತ ಶಿಖಿಶಿಖಾ ವಿಸ್ಫುರ[೨೦]ದ್ವಿ[೨೦]ಸ್ಫುಲಿಂಗ ದಿನಂಭೋಧಿ[೨೧]ಯೆ[೨೧]ಲ್ಲಮನಾಪೋಷಣಂಗೊಳಿಪ ಹೂಂಕೃತಧ್ವಾನದಿನಜಾಂಡ ಭಾಂಡಮಂ ಅಲ್ಲಾಡಿಪ ಭುಜಪರಿಘ ಭ್ರಾಂತಿಯಿಂ ಭಗಣಮನಿಳೆಗುದಿರ್ಚುವ ನಿಜ ಶ್ವಾಸ ಜಂಝಾಪ್ರಭಂಜನಪಾತದಿಂ ದಿವಿಜ ವಿಮಾನಕೋಟಿಯಂ ತರಗೆಲೆಯಂತೆ ಪಾರಿಪ ಮಹಾದ್ಭುತ ವಿಚಿತ್ರ ಚರಿತ್ರ ಸನಾಥಶರಣಾಗತರಕ್ಷಕ ಖಲಶಿಕ್ಷಕ ನಿರುಪಮಾನ ಮಹಾಮಾನೋನ್ನತಾನೂನಸಾಮರ್ಥ್ಯಸಮನ್ವಿತ ಸಮುಂಚಿತನಿರರ್ಗಳ ನಿಸರ್ಗ ಪ್ರಭಾವ ಮಹಾನುಭಾವಪ್ರಸಿದ್ಧ ರುದ್ರಗಣೇಂದ್ರರಿಂದದ್ಭುತರಸಮುಮಂ, ಮತ್ತಮಿದಿರ್ಚಿದೊಡೆ ಜವನ ಕೋಣನ ಕೋಡಂ ಕೀಳ್ವ, ಮಿಳ್ತುವಿನ ದಾಡೆಯಂ ಮುಱಿವ, ಮಾರಿಯ ನಾ[೨೨]ಲ[೨೨]ಗೆಯಂ ಪರಿವ ಭೈರವನ ಮುಂದ[೨೩]ಲೆ[೨೩]ಗೊಯ್ವ ಬಾಸುಗಿಯ ಸುಗಿದುಂಗುರುಂಗೆಯ್ದಂಗುಲಿಯೊಳ್ತೊಡರ್ಚುವ ಕುಳಗಿರಿಯಂ ನೆಗಪಿ ತಿರಿಕಲ್ಲಾ

೧ ಧುರಿತರ (ಮೂ) ೨ ನುಂ ಕಳುಪೆ (ರಿ): ನ (ಕ) ೩ ಕಡಿದು ಕಡಿಕಂಡ (ಮೂ); ಕಡಿಕಹ (ಕ) ೪ ಗೆಯ್ದು (ಮೂ) ೫ ತ (ಮೂ) ೬ ನೆ (ರಿ) ೭ ಯುಮಮಾತ್ರ (ಧಾ); ಯಾಯಂತ್ರ (ಮೂ, ರಿ) ೮ ತ್ತಿ (ಮೂ) ೯ ಸ್ತಿ (ರಿ, ಕ) ೧೦ ಮಸ್ತಕ (ಮೂ) ೧೧ ಠ (ಧಾ) ೧೨ ಭ್ರಾಕುಂಠಿ (ಮೂ, ಕ) ೧೩ ತ್ಸಾ (ವ್ಯಾ) ೧೪ ಕರ್ಣಂಗಳಂ (ಕ, ಧಾ, ರಿ) ೧೫ ಡ (ಮೂ) ೧೬ ದ (ಮೂ) ೧೭ ಮೈ (ರಿ) ೧೮ ಷ (ರಿ, ಮೂ) ೧೯ ಪಟ್ಟು (ರಿ) ೨೦ ವಿ (ಮೂ) ೨೧ ಯನ್ನೆ (ಮೂ) ೨೨ ಲಿ (ರಿ) ೨೩ ಲೆಯ (ಮೂ.

ಢುವಾದಿಕಮತನ ಕಠಿಣ ಖರ್ಪರಂ ತರ್ಗಿನುಗ್ಗೆ[೧]ಮೆಟ್ಟಿ ನಾಟ್ಯಮ[೧]ನಾಡುವ ದಿಗ್ಗ[೨]ಜಂ[೨]ಗಳ ನಿಗ್ಗವಮಂ ಮುಱಿದು ಮುದ್ಗರಂಗೆಯ್ದು ಪಿಡಿವ ಮಹಿವಿಯತ್ತಳಮಂ [೩]ಕರತಳದಿಂ[೩] ತಳೆದು ತಾಳಂಗುಟ್ಟುವ ಸಿಡಿಲಂ [೪]ಪಿ[೪]ಡಿದು ಕಡೆಯಂ ಗೆಯ್ದೆಡಗಾಲೊಳಿಕ್ಕುವ [೫]ಕಾಲಾಗ್ನಿಯಿಂ[೫] ಪೊಸೆದು ಬೊಟ್ಟಿಟ್ಟುಕೊಳ್ವ ಪೊಡೆಯಲರನಂ ಜಡಿವ ಜಡಜಜನ ಫಣೆಯಕ್ಕರಮಂ ತೊಡೆವ ಕಡಲಂ ಕುಡಿವ [೬]ಬ[೬]ಡಬನಂ ಪಿಡಿವ ರವಿಶಶಿಗಳಂ ಮಿಡಿವ ಕುಳಿಕನಂ ತೊಡುವ ಭಗಣಮಂ ಮುಡಿವ ಮೃಡನ [೭]ಸಾಹಸ[೭]ಮೆ ಪಲವು ರೂಪಾಂತುದೆನಿಸಿ ನಿಂದತಿಬಳಪ್ರಥಿತಪ್ರತಾಪ ಸಮಗ್ರೋದಗ್ರ ವಿಗ್ರಹ ವಿಜಿತ ವಿಗ್ರಹ ವೀರ ವೀರಪ್ರಮಥವಾರದಿಂ ವಿ[೮]ಸ್ಫಾ[೮]ರ ವೀರರಸಮುಮಂ, ಮತ್ತಂ ಜಡಿವ ಫಣಿಕುಂಡಲದ ಕೆಂಬೆಳಗು ಥಳಥಳಿಸಿ ತಳ್ತಿರೆ ಕುಡಿಗೆಂಪನಾಳ್ದು ಪೊಳೆದು ಬಿಂಕಂಬೆತ್ತು ಕೊಂಕಿನಿಂದ ಕೂರ್ದಾಡೆಗಳ ನಿಜ ನಿಟಿಲ ತಟದೊಳಳವಟ್ಟು ಬಿಸಿಯ ಬೆಳಗನೊಳಕೊಂಡೊಳಗೊಳಗೆ ಘುಳುಘುಳಿಪ ವಿಪುಳತರ ಸುರದ್ವಿಸ್ಫುಲಿಂಗ ಸಂಘಾತ ಸಂಗತ ಸಂವರ್ತ ಶಿಖಿವಿಲೋಚನದ ಚಟುಲ ತ[೯]ಟಿ[೯]ಲ್ಲತಾ ಕುಟಿಲ ಜಟಾಪಟಲ ಮಕುಟ ತಟಘಟಿತ ಪಟುದನುಜ ಕಪಾಲಮಾಲಾವಲಯದ ಧಗಧಗಿತ ನಿಸ್ತ್ರಿಂಶ ತ್ರಿ[೧೦]ಶೂಲ[೧೦] ಖಡ್ಗ ಚಾಪ[೧೧]ಮಾರ್ಗಣ[೧೧] ಕಣಕಲಿತ [೧೨]ಕರಚತುಷ್ಟಯ[೧೨]ದ ಕಂಠೋಪಕಂಠಸಂಘಟಿತ ಘನಘೋಷ ವಿ[೧೩]ಷ ವಿಷಮ[೧೩]ಭೀಷಣೋತ್ಫಣಿತ ಫಣೀಂದ್ರ [೧೪]ಗ್ರೈ[೧೪]ವೇಯಕದ ನಿಜಭುಜಾಂತರಾಳದೊಳ್ ಬೊಬ್ಬೆಗೊಟ್ಟಬ್ಬರಿಸಿ ಕೊರ್ಬಿದ ಸುರರಿಪುಶಿರೋಮಾ[೧೫]ಲೆಯಂ[೧೫] ವಿಕಟಾಟ್ಟಹಾಸ ಭಾಸುರ ಭ್ರುಕುಟಿ ಭಯಂಕರ ಮುಖಾಂಬುಜದ ಬಿಗಿದುಟ್ಟ ಚಿತ್ರಕಾ[೧೬]ಯ ಚರ್ಮಚಿತ್ರ ವಸನ[೧೬]ದ[೧೭]ಪೊದೆದ[೧೭] ಮದೇಭಚರ್ಮದುತ್ತರೀಯಕದ ವಾಮಾಂಘ್ರಿಯೊಳೊಲೆದುದ್ಘೋಷಿಪ ದನುಜ ಮದಭಂಜನನೆಂಬ ಬಿರಿದಿನ ತೊಡರ ಸಜಳ ಜಳಧರ ಮದಾಳಿಕುಳ ನೀಲರುಚಿ ಸಮ[೧೮]ಗ್ರೋದಗ್ರೋಗ್ರ[೧೮]ವಿಗ್ರಹದ ಪೊಡರ್ಪು ವಿಜೃಂಭಿಸೆ [೧೯]ಸಮ[೧೯] ಪರಾಕ್ರಮ ಸಮನ್ವಿತಾಪ್ರಮಿತ ಪ್ರಮಥ ರುದ್ರಗಣ ಸಮಾವೃತ ದಕ್ಷಮುಖ ಸಮಾಗತ ಸಕಳ ದಿವಿಜ ವಿದ್ರಾವಣ ವೀರಭದ್ರನಿಂ ರೌದ್ರರಸಮುಮಂ, ಮತ್ತಮತಿ ವಿತತವಿಶದರುಚಿಪರಿಹಸಿತ[೨೦]ಶಶಿರುಚಿಸ್ಫಟಿಕಮಣಿಕುಟ್ಟಿಮಪ್ರತಿಬಿಂಬಿತ

---

೧ ಮುಟ್ಟಿ ನಾಟ್ಯಮು (ಮೈ), ನಾಟ್ಯವ (ಮೂ) ೨ ಜ (ಮೂ) ೩ ತಳದಿಂ (ಧಾ, ಕ) ೪ ಕ (ಮೂ, ಮೈ) ೫ ಕಾಲ್ಗಾಯಿಂ (ರಿ) ೬ ವ (ಮೂ) ೭ ಸಾಸ (ರಿ, ಧಾ, ಕ) ೮ ಸ್ಫೂ (ಕ) ೯ ಟ (ಮೈ) ೧೦ ಶೂಲದ (ರಿ) ೧೧ ಮಾರ್ಗ (ರಿ) ೧೨ ಚತುಷ್ಟಯ (ಮೂ); ಕರಡ ಚತುಷ್ಟಯ (ರಿ) ೧೩ ಷ್ಣ (ರಿ) ವಿಷಮ(ಕ) ೧೪ ಗೈ (ಮೂ, ಕ) ೧೫ ಲಿಕೆಯ (ರಿ) ೧೬ ರ್ಯ ಚರ್ಮಚಿತ್ರವಸನ (ರಿ);, ಯ ಚಿತ್ರವಸನ (ಮೂ) ೧೭ ಪೊಸದ (ಮೈ), ಪೊಸದಾದ (ಮೂ) ೧೮ ಗ್ರೋಗ್ರ (ಮೈ, ಕ, ಧಾ) ೧೯ ಅಸಮ (ಮೂ) ೨೦ ರುಚಿ (ಮ ೧).

ಮಹೇಂದ್ರಮಣಿನಿರ್ಮಿತ[೧]ತ[೧]ಸ್ಮಂಟಪಾಗ್ರವಲಭಿಭಾಗಸಂಭೃತಪ್ರಚುರಮೇಚಕ ರುಚಿಪ್ರಚಯಮಂ ಮುನ್ನೀರೊಳ್ ಮುನ್ನಮೊಗೆದು ಬೆನ್ನಟ್ಟಿ ಸುಟ್ಟುರುಪಿ ವಿಲಯಂಗೈಯಲುಜ್ಜುಗಿಸಿ[೨]ವ[೨]ಂದಘೋರ[೩]ತರಗರಳಂ[೩] ಗೆತ್ತಗಿದು ಸುಗಿದು ಪೆಡಂಮೆಟ್ಟಿ ನಡನಡಂನಡುಂಗಿ ಸೆಡೆದಡಿಗಡಿಗೆ ತಲ್ಲಣಿಸಿ ಮೃಡಂಗೆ ಮೊಱೆಯಿಡಲುಜ್ಜುಗಿಪಮುಗ್ಧಾಮರಪ್ರಕರದಿಂ ಭಯಾನಕರಸಮುಮಂ, ಮತ್ತಮೆಳಲ್ವಕೆಂಜೆಡೆಯ ಪೊಳೆವ ಸುಲಿಪಲ್ಗಳ ನೊಸಲೊ[೪]ಳ್ಮಿಸುಪ ಭಸಿತ[೪]ತ್ರಿಪುಂಢ್ರದ ಹಸನರುಚಿಲಸಿತಸುಪ್ರಸನ್ನ ಮುಖಾಂಬುಜದ ಕೊರಲುರಂ ತೀವಿ ತಳೆದ ರುದ್ರಾಕ್ಷಮಾಲಿಕೆಗಳೆಡವೆಗಲಿಂ ಬಲದ ಬರಿವರೆಗಮೆಳಲೆವಿಟ್ಟ [೫]ಜೋ[೫]ಗವಟ್ಟಿಗೆಯ ವಾಮಕಕ್ಷದೊಳಿಱುಂಕಿದ ಭಸ್ಮಘಂಟಿಕೆಯ ಬಲದ ಕರಾಗ್ರದೊಳಾಂತ ಪಳಕು[೬]ಗುಂ[೬]ಡಿಗೆ[೭]ಯ[೭] [೮]ಪೊದೆದುಟ್ಟು[೮] ಮೃದು ವಲ್ಕಲದ ಕಡುಬೆಡಂಗಡರೆ ಹೃದಯಕಮಲಮಧ್ಯಮಂಡಿತಮಂಡಲತ್ರಯಾಗ್ರದೊಳ್ಬಿಡದೆ ಜಾನಿಪ ದಿವ್ಯಮೂರ್ತಿ ಜಲಕ್ಕನೆ ಸುರಸಭಾಮಧ್ಯಭಾಸಮಾನಸಿಂಹಾಸ[೯]ನ[೯] ಸಮಾಸೀನಮಾಗಿ ತೊಳತೊಳಗಿ ತೊಟ್ಟನೆ ದಿಟ್ಟಿಗಿನಿದುಗಱಿದುಮೆಱೆಯೆ ಕೀಲಿಸಿದಂತೆ[೧೦]ತಳ್ತಿಮೆ[೧೦] ಮಿಡುಕದ ನೋಟಮುಮಾ ನೋಟದೊಳ್[೧೧]ಸಿಲ್ಕಿ[೧೧]ಕಟ್ಟುವಡೆದಂತೆ ನೆಲೆಗೊಂಡ ಮನಮುಮಾ ಮನದ ಬೆಂಬಳಿವಿಡಿದು [೧೨]ಪಾಱ[೧೨]ಳಿದುಶೇಷಕರಣಂಗಳುಮಾ ಕರಣಂಗಳೊಡನಡಂಗಿ ನಿಷ್ಪಂದತೆಗೆ ಪಕ್ಕಾದ ಹರಣಮುಮಾ ಹರಣಮಂ ಬಳಿವಿಡಿದು ನಿಶ್ಚಲತ್ವಂಬಡೆದಹಂಕೃತಿಯಳಿದು ಹರವಸಂ ಕೈಮಿಕ್ಕು ಜಳಧಿಯೊಳಾಳ್ದ ಜಳೋಪಲದಂತೆ ಕಟ್ಟನೆ ಕರಗಿ ತೊಟ್ಟನೆ ರಸಮಯಮಾದ ಪರಮಾನಂದಸುಧಾಸಮುದ್ರದೊಳವಗಾಹಮಿರ್ದ ಶಿವಯೋ[೧೩]ಗೀ[೧೩]ಂದ್ರ ಸಂತಾನದಿಂ ಶಾಂತರಸಮುಮಂ, ಕೈಕೊಂಡು ತಳೆದತ್ಯಂತ ಮನೋಹರಮಾಗಿ ರವಿ ಶಶಿ ಶಿಖಿಗಳ ಶತಕೋಟಿದಿವ್ಯರುಚಿಯಂ ಪಳಿದು ಪಜ್ಜಳಿಪ ನಿರುಪಮ ನಿರತಿಶಯ ನಿರವದ್ಯ ನಿರವಧಿ ವಿವಿಧ[೧೪]ವಿಭವ[೧೪]ಸಮಧಿಗತ ತನ್ಮಹಾಸಭಾಮಧ್ಯಮಂಡಿತ ಮಣಿಗಣಖಚಿತಮ[೧೫]ಹ[೧೫]ನೀಯ ತಪನೀಯ ಮಯಮಧು[೧೬]ಮು[೧೬]ದಿತಮಧುಕರರವಮಧು[೧೭]ರ[೧೭] ಸರಸಪರಿಮಳಮಿಳಿತದರದಳಿತಸುರಕುಜ ಕುಸುಮವಿಸರಮಾಲಿಕಾಲಂಕೃತಮಹಾ[೧೮]ಮರಮಣಿ[೧೮] ರಮಣೀಯ ವಿತಾನದ ಕೆಳಗೆಳವಟ್ಟವಿತತಪ್ರಭಾವಳಯವಿಳಸಿತಮಾದ [೧೯]ಮೃಗೇಂದ್ರಾಸನ[೧೯]ಮಧ್ಯದಲ್ಲಿ—

೧ ಲಸ (ರಿ) ೨ ತ (ಕ) ೩ ಗರಳಂ (ಧಾ) ೪ ಭಸಿತ (ಮೂ) ೫ ಜೆಡೆ (ಮೂ) ೬ ಘು (ಧಾ) ೭ ಟೀಕೆಯ (ರಿ) ೮ ಪೊಡಮಟ್ಟ (ಮೂ) ೯ ನಾ (ಮೂ) ೧೦ ತಳ್ತಿವೆ (ಕ); ಕಳ್ತಲೆ (ಮೂ) ೧೧ ಕ್ಕಿ (ಮೈ) ೧೨ ರ್ಪ (ಮೂ) ೧೩ ಗೇ (ಮೂ) ೧೪ ವಿಭ್ರಮ ೧೫ ಹಾ (ಮೂ) ೧೬ ಮ (ಮೂ, ಮೈ) ೧೭ ರಸ (ಮೂ) ೧೮ ರಮಣೀ (ಮೂ) ೧೯ ಮಹಾಮೃಗೇಂದ್ರಾಸನ (ಮೂ, ಮೈ),

ಫಣಿಪತಿ ನಾಳಂ ದಳಕುಳ
ಮಣಿಮಾದಿಗಳಮರ್ದ ಶಕ್ತಿ ಕರ್ಣಿಕೆ ಭಾಸ್ವ
ದ್ಗುಣವಿದ್ಯೇಶರ್ಕೇಸರ
ಣವಗಿೞಾಗರೆ ಮಿಸುಪ ಪದ್ಮಪೀಠಸ್ಥಳದೊಳ್ ॥೧೦೭॥

ವಿತತಾನಂದರಸಾಕರಂ ಪ್ರಣತವೃಂದಶ್ರೀಕರಂ ವಿಶ್ವವಿ
ಶ್ರುತವಿದ್ಯಾಬ್ಜದಿವಾಕರಂ ಪ್ರಬಳಮಾಯಾಭೀಕರಂ ಭಕ್ತಸಂ
ತತಿದುಗ್ಧಾಬ್ಧಿಸುಧಾಕರಂ ಸುಕೃತ[1]ಸದ್ರತ್ನಾಕರಂ[1] ದೇವವಂ
ದಿತನಿರ್ದಂ ಮಹಿಮಾಕರಂ ಶಶಿಕಳಾಶ್ರೀಶೇಖರಂ ಶಂಕರಂ ॥೧೦೮॥

ಗಿರಿಜಾತಾದೀರ್ಘನೇತ್ರದ್ಯುತಿಧವಳಿತಚರ್ಮಾಂಬರಂ ಕ್ಷೌಮದಿವ್ಯಾಂ
ಬರಮಂ ತನ್ಮಂಜುಮಂದಶ್ವಸಿತಸುರಭಿತಶ್ರೀಗಳ ಶ್ರೀರಸಂ ಕ
ಸ್ತುರಿಯಂ ತತ್ಕಾಯಭಾಸ್ವದ್ರುಚಿನಿಚಯ ಪಿಶಂಗೀಕೃತಾಂಗಾಹಿಚಾಮೀ
ಕರಚಂಚನ್ಮಾಲೆಯಂ ಪೋಲ್ತಿರೆ ಕರಮೆಸೆದಂ ಬಾಲಚಂದ್ರಾವತಂಸಂ ॥೧೦೯॥

॥ವ॥ ಮತ್ತಂ—

ಕಱೆಮಱೆಯಿಲ್ಲದ ಬಲ್ಲವ
ರಱಿತಕ್ಕೊಳಗಾಗದಾಗಮದ ಬಗೆ ಪುಗದೆ
[2]ಳ್ವ[2]ಱ ಜತಿಗಳ ಜಾಸಕ್ಕೆಡೆ
ದೆಱಪಾಗದ ಚಿನ್ಮಯಪ್ರಭಂ ಮೆಱೆದಿರ್ದಂ ॥೧೧೦॥

ತತ್ತ್ವಾತೀತಂ ತತ್ತ್ವವಿ
ಭುತ್ತ್ವಯುತಂ ತತ್ತ್ವಕಾರಣಂ ತತ್ತ್ವನಿಯಂ
ತೃತ್ವ ಪರತಂತ್ರರಹಿತಂ
ತತ್ತ್ವಲಯಸ್ಥಾನನೆಸೆದನಾಸ್ಥಾಯಿಕೆಯೊಳ್ ॥೧೧೧॥

ಎಲ್ಲಂ ತಾನಲ್ಲದ ಬಳಿ
ಕೆಲ್ಲಂ ತಾನಾದ ಶೂನ್ಯನಲ್ಲದ ರೂಪೊಂ
ದಿಲ್ಲದೊಳಗಲ್ಲದುಱೆ ಪೊಱ
ಗಲ್ಲದ ಪವಣಕ್ಕೆ ನಿಲ್ಲದನುಪಮು[3]ನೆಸೆದಂ[3] ॥೧೧೨॥

ಪಳೆವಾತಿನ ಮಾತಿನ ಗಳ
ಬಳಮಂ ಬಗೆಗೊಳದ ಬಚ್ಚಬಱಿಯಱಿವಿನ ತ
ಣ್ವೆಳಗಿನ ಬಳಗಂ ಬಳೆದು
ಜ್ವಳಿಸಿದುದೆನಿಸಿದುದು ಮೃಡನ ಮೂರ್ತಿವಿಳಾಸಂ ॥೧೧೩॥

---

೧ ಸಂತಾನಾಕರಂ (ರಿ, ಮೂ, ಮೈ) ೨ ಳ್ವ (ಮೂ) ೩ ನಿಸಿದಂ (ಧಾ)

ಅಮಿತಮಹಿಮಾಬ್ಧಿ ಶತಕೋ
ಟಿ ಮನೋಭವರೂಪ [೧]ನೆನಿಪ[೧] ರುದ್ರನ ಸೌಂದ
ರ್ಯಮನಿಂತುಟೆಂದು ಬಣ್ಣಿಸ
ಲಮರಾಚಾರ್ಯಾಹಿರಾಜರೇಂ ನೆರೆದಪರೇ ॥೧೧೪॥

ಆದಱಿಂ ಪೊಗಳಲ್ಕಾನ
ಳ್ಕಿದೆನೀ ವಾಣೀವಧೂಟಿ ಶಿವಭಕ್ತಿರಸೋ
ನ್ಮದೆ ಮಗುಳ್ದು ಪೊಗಳಲಾಟಿಪ
ಳಿದಲಂಘ್ಯಂ ಪ್ರೇಮಕಾಮಿನೀಜನವೃತ್ತಂ ॥೧೧೫॥

॥ವ॥ ಅದುಕಾರಣದಿಂ ಬಲ್ಲಂತೆ ಬಣ್ಣಿಪೆನದೆಂ[೨]ತೆಂದೊಡೆ[೨]—

ಪರಿವೃತಫಣಿವರನಮುದ್ರೋ
ಪ್ಪಿರೆ ಪರಿಗತಸಿಂಧುಬಂಧುರಂ ಮಂದರಭೂ
ಧರಮೆನಿಸಿ ಮೆಱೆದುದಾ ಪುರ
ಹರನುಜ್ವಳಮಕುಟಮತುಳಮಣಿಗಣಮಹಿತಂ ॥೧೧೬॥

ಜಡೆವಳ್ಳಿಯಾಂತ ಮುಗುಳ್ಗಳ
ಗಡಣಂ ತಾನೆನಿಸಿ ಗಂಗಾಜಳಕಣತತಿ ಸಂ
ಗಡಿಸಿರೆ ಶಶಿಕಳೆ ಬಳಸಿ
ರ್ದುಡುಗಳ ಮಧ್ಯದೊಳೆ ಮೆಱೆವುದೆನೆ ಕಣ್ಗೊಳಿಕುಂ ॥೧೧೭॥

ಜೆಡೆದುಱುಗಲೆಡೆಯ ಮಡದಿಯ
ಮುಡಿಯಗ್ರದೊಳೆಯ್ದೆ ತೊಳಪ ಮುತ್ತಿನ ಪೇಱಿಯೆಂ
ಬೆಡೆಗೆಡೆಯಾದುದು ಪದಪಂ
ಪಡೆದೆಳೆವೆಱೆ ಮಕುಟದಗ್ರದೊಳ್ ಪಶುಪತಿಯಾ ॥೧೧೮॥

ಗಿರಿಧನುಗೇಱಿಸುತಂ ಫಣಿ
ಧಿರುವಂ ಜೇವಡೆಯೆ ಸಿಡಿದ ಫಣಮಣಿ ಫಣಿ ಪ
ತ್ತಿರದೆಸೆವೊಲೆಸೆದುದು ಶಂ
ಕರನನುಪಮನಿಟಿಲತಟಧನಂಜಯ ನಯನಂ ॥೧೧೯॥

---

೧ ಮೆನಿಪ (ಕ) ೨ ತೆನೆ (ಮೈ).

ಅರಿಬಾನನಬಿಂಬಾಧರ
ಚುಂಬನಸಂಕ್ರಾಂತ[೧]ಘು[೧]ಸೃಣರಸತಿಲಕಂ ತಾ
ನೆಂಬಿನಮಂಬಕಮಳಿಕದೊ
ಳಿಂಬಾದುದು ಶಂಬರಾರಿಮದಭಂಜನನಾ ॥೧೨೦॥

ವಿಲಸದ್ದ್ವಿಜರಾಜದ್ಯುತಿ
ಮಿಲಿತಾರುಣಬಿಂಬ ಸುಪ್ರಭಾಧರಮಧಿಕೋ
ಜ್ವಲಘನರುಚಿವದನಂ ಕ
ಣ್ಗೊಲವಿತ್ತುದನಂತಸಂಪದಂ ಪರಶಿವನಾ ॥೧೨೧॥

ನಿಂದಿಸಿದುದಿಂದುಬಿಂಬಮ
ನಿಂದುಧರಾನನಮಮಂದರುಚಿಯುತಮನಿಶಂ
ಕಂದದ ಕುಂದದ ದೋಷಂ
ಬೊಂದದ ಚೆಲ್ವಿಂಗೆ ಸತ್ಕಳಾಪರಿಪೂರ್ಣಂ ॥೧೨೨॥

ನಿಜಕೋಟಿ ಮಿಡುಕೆ ಮಿಡುಕಿಪ್ರ
ದು ಜಗತ್ಕೋಟಿಯನೆನಿಪ್ಪ ಶರ್ವನ ಪು[೨]ರ್ವಣಿ[೨]
ಗಜಧನುಗಸಾರಕೋಟಿಗೆ
ವಿಜಿತಕ್ಕೆಣೆ[೩]ಯಂ[೩]ಬನಾಗನೇ ಕಡುಗಾಂಪಂ ॥೧೨೩॥

ವಿದಿತಜಗತ್ಪ್ರಾಣಂ ಪು
ಟ್ಟಿದ ತಾಣಂ ಘ್ರಾಣಮತುಳಮಂಜುಳಮೆಂಧು ಗೆ
[೪]ಲ್ವು[೪]ದು ಸಾರ್ದಳಿಶಿಶುವಸುವಂ
ಸದೆದಿಕ್ಕುವ ಕನಕಚಂಪಕಮನಘಹರನಾ ॥೧೨೪॥

ಶಿವಕರ್ಣಾಕಾರಶ್ರೀ
ಭವಮಾ ಶ್ರೀ ಕಾರಮಪ್ಪುದಲ್ಲದೊಡುರು ವ
ರ್ಣವಿಳಾಸತೆ ಶಾಸ್ತ್ರಾದಿ
ಶ್ರವಣತೆ ಶುಭಕರಣಭಾವಮೇಂ ಸಮನಿಪ್ರದೇ ॥೧೨೫॥

---

೧ ಘು (ಪ್ರೈ)   ೨ ಬುರ್ಗಂ (ಶಿ)   ೩ ಯೆಂ (ಮೂ)   ೪ ಲ್ದು (ಧಾ. ಮೂ)

ಹರಕರ್ಣಪೂರಕಮಳಂ
ಶಿರದಿಂದುವನೆಯ್ದೆ ಪಿಡಿದು ಸೊದೆಗೊಂಬುದೆನು
ತ್ತುರರೆ ಪಿಸುಣಾಡುವಂತಿರೆ
ಕರಮೆಸೆದುದು ಕರ್ಣದ[೧]ಹಿ[೧]ಯೊಳಳಿರವಮಿಷದಿಂ ॥೧೨೬॥

ಗೌರೀವಿಲೋಚನಾಸ್ಯಚ
ಕೋರಾಂಬುಜಸಮ್ಮದಪ್ರದಪ್ರಭಮತುಳಂ
ರಾರಾಜಿಸಿದುದು ಕುಮುದಸ
ರೋರುಹಸಖಲೋಚನದ್ವಯಂ ಶಶಿಧರನಾ ॥೧೨೭॥

ಫಣಿಫಣಮಣಿಕಿರಣಗಣಾ
ರುಣಿತಂ ಮಣಿದರ್ಪಣಪ್ರಭಂ ಕದಪದು ಪಾ
ರ್ವಣಸಮುದಿತೇಂದುಬಿಂಬಮ
ನಣಕಿಪುದಮಳಾಂಶು ಚಂದ್ರಚೂಡಾಮಣಿಯಾ ॥೧೨೮॥

ಹಾರೋರಗಫಣಮಣಿದೀ
ಪೋರುಶಿಖಾಕಜ್ಜಳಾಯಿತಂ ಗಳಗರಳಂ
ಗೌರೀನಯನಾಂಜನರೇ
ಖಾರಸಮುಮರ್ದಂತೆ ಮೆಱೆದುದಹಿಭೂಷಣನಾ ॥೧೨೯॥

ಗಿರಿಜಾತಾಗುರುತರಕುಚ
ಭರಕಾಶ್ಮೀರಾಂಗರಾಗರಾಗಾಂಕಪರಿ
ಸ್ಫುರಿತಭುಜಮಜಿತಮಿಳಿಪುದು
ದರುಣಾಬ್ಜರಜಃಪಿಶಂಗಿತೋರ್ಮಿಯ ಚೆಲ್ವಂ ॥೧೩೦॥

ಹರಬಾಹುಕಲ್ಪತರುಭಾ
ಸುರಶಾಖೆಯ ಪಲ್ಲವಂ ಕರಂ ಕರಮೆಸೆವು
ತ್ತಿರೆ ತತ್ಪ್ರಸೂನನವಮಂ
ಜರಿಯೆನಿಸಿದುದಮಳನಖನಿಕಾಯಾಂಶುಚಯಂ ॥೧೩೧॥

---

೧ ವ (ಮೂ)

ನಿಟಿಲಾಕ್ಷ[1]ಮ[1]ಕ್ಷವಗಜಾ
ಘಟಕುಚಚಂದನರಸಾಂಕಮಮಳಿನಮತುಳ
ಸ್ಫಟಿಕಕವಾಟದ ಸಿರಿ: ಸಂ
ಘಟಿಸಿರೆ ಮೆಱೆದುದು ಚಿದಂಗನಾಮಣಿಗೃಹದಾ ॥೧೩೨॥

ಕುಂಜರಭಂಜನಶೌರ್ಯಸ
ಮಂಜ[2]ಸ[2]ಕುಧರಾಗ್ರವಾಸಿ ಪಂಚಾಸ್ಯಂಗೇಂ
ಮಂಜುಳತರಕೃಶಮಧ್ಯಂ
ರಂಜಿಪುದಚ್ಚರಿಯೆ ನೋಳ್ಪೊಡೆಂಬವೊಲೆಸೆಗುಂ ॥೧೩೩॥

ಇಂಗಡಲೊಳೊಗೆದ ಸುೞಿಯುಂ
[3]ಭಂ[3]ಗಾನ್ವಿತಮೆನಿಪ ಭವನ ನಾಭೀವಲಯುಂ
ತಾಂ ಗೆಲೆವಂದುದರಲ್ದೆ ಬೆ
ಡಂಗಾಂತೆಸೆವಚ್ಚ ದುಂಡುಮಲ್ಲಿಗೆಯುರಲಂ ॥೧೩೪॥

ಅಭ್ರಮುವಲ್ಲಭಕುಂಭದ
ವಿಭ್ರಮಮಂ ಸೆಳೆದು ತಳೆದು ಮೆಱೆದುದು ಪೊರೆವಾರ್
ಶುಭ್ರರುಚಿಹೇಮಸೂತ್ರಪ
ರಿಭ್ರಾಜಿತಮಧಿಕಮಂಧಕಧ್ವಂಸಕನಾ ॥೧೩೫॥

ಮಾರಾರಿಯ ನುಣ್ದೊಡೆಯಾ
ಕಾರಮನಾನಲ್ಕೆ ಬಯಸಿ ಬಾಳೆಗಳನಿಶಂ
ನೀರುಂಡು ನಾರನುಡುತಂ
ಸಾರಿ ಸದಾತಪಮನಾಂತು ಮೆಱೆಗುಂ ಬನದೊಳ್ ॥೧೩೬॥

ಹರಚರಣದ ಸೌಂದರ್ಯಮ
ನರವಿಂದಜನಿಂದಮಾಗದುದನರ್ತಿಸಿ ಪಂ
ಕರುಹಮದು ಪಾದಪೀಠದ
ಪರಿಜಂ ತಳೆದದನೆ ಪೊತ್ತು ಸೇವಿಪುದಿನ್ನುಂ ॥೧೩೭॥

---

೧ ಮ (ರ) ೨ ಸ (ಮೈ, ಮೂ) ೩ ಭೈ (ಮೈ).

ಮಣಿವ ಹರಿಮುಖಸುರರ್ಕಳ
ಮಣಿಮಕುಟದ ಮೌಕ್ತಿಕಂಗಳುಡುಗಣಮೈತಂ
ದಣಿಯರದಿಂ ಪದನಖಪಾ
ರ್ವಣಶಶಿಯಂ ಸೇವಿಪಂತಿರೇನೊಪ್ಪಿದು¹ದೋ¹ ॥೧೩೮॥

ಬಿಡುಗಣ್ಣರರ್ಚಿಸಿದ ಸೊಂ
ಪಡರ್ದ ಸರೋಜದ ಪರಾಗತತಿ ಕಂಗೊಳಿಕುಂ
ಕಡುಜತಿಗಳ ಮನಮೆಲ್ಲಂ
ಬಿಡದೋಲಗಿಪಂತೆ ಮೃಡನ ಮೆಲ್ಲಡಿದಳಿರೊಳ್ ॥೧೩೯॥

ಸೊದೆಗೆತ್ತು ನಖರುಚಿಗೆ ಬಳ
ಸಿದ ಫಣಿಪನ ಫಣೆಯ ಮಣಿಯ ಬೆಳಗೆಳೆವಿಸಿಲೆಂ
ಮೊದವಿದ ಸೊಂಪಂ ತಳೆದಂ
ದದೆ ಮೆಱೆದುದು ಪಾದಪಂಕಜಂ ಪುರಹರನಾ ॥೧೪೦॥

ಜನನಕುಜಮೂಲಮಂ ನೆ
ಟ್ಟನೆ ಕಡಿಯಲ್ವಿಡಿದನೆನಿಸಿದುದು ಪರಶು ಶಿವಾ
ನನಶಶಿಯಿಂ ತೆಗೆದಾಂತವೊ
ಲೆ²ನೆ²ಸುಂ ಮಿಗಮಿರ್ದುದಾ ಕಪರ್ದಿಯ ಕರದೊಳ್ ॥೧೪೧॥

ಪಳಿದುದ್ಯದ್ದುಗ್ಧವಾರ್ಧಿದ್ಯುತಿಯನೊದೆದು ದೇವಾಂಗನಾಪಾಂಗದೊಳ್ ಬೆ
ಳ್ವೆಳಗಂ ತಳ್ಪೊಯ್ದು ಚಂದ್ರಾತಪಮನಲೆದು ವಾಣೀತನುದ್ಯೋತಿಯ ಪೆಂ
ಪಳಿವನ್ನಂ ಪೊಯ್ದು ತಾರಾಚಳರುಚಿಚಯಮಂ ತೂಳ್ದು ಮಂದಾಕಿನೀಮಂ
ಜುಳಕಾಯಚ್ಛಾಯೆಯಂ ಪರ್ಬಿದುದು ಪರ³ಶಿವಾ³ಂಗಾವದಾತ್ತ ಪ್ರಕಾಶಂ ॥೧೪೨॥

ಗಗನಂ ನಾಭಿ ನಭಂ ಶತಾಂಶು ನಿಜತೇಜೋಬಿಂದು ಬೀಜಂ ಮಹಾ
ಗ್ನಿ ಗಳತ್ಪಾದರಜಂ ಧರಿತ್ರಿ ಶಶಿ ನಿರ್ಮಾಲ್ಯೋ⁴ದ್ಗಮಂ ಶ್ವಾಸಮಾ
ಶುಗಮಾದ್ಯಂ ಜಲಮಂಗಘರ್ಮಜಲಮಾತ್ಮಾಂಭೋಧಿನಿರ್ಯತ್ಕಣಾ
ಳಿಗಳಿಂದ್ರಾದಿಗಳೆಂದೊಡೇಂ ⁵ಪೊ⁵ಗಳ್ವೆನೋ ಪೆಂಪಂ ಮಹಾದೇವನಾ ॥೧೪೩॥

ಕನಕನಗೇಂಗ್ರಧರ್ಮಕರನಾಗಿಯುಮುನ್ನತಧರ್ಮಹಂ⁶ತೃ⁶ಸಂ
ಜನಿತಪರಾರ್ಥನಾಗಿಯುಮುದಗ್ರಪರಾರ್ಥಹರಂ ಪ್ರದತ್ತಕಾ
ಮನುಮೆನಿಸಿರ್ದು ಕಾಮಮಥನಂ ಪರಮೋಕ್ಷದನಾಗಿಯುಂ ಸನಾ
ತನ ಪರಮೋಕ್ಷಲುಬ್ಧಮತಿಯೆಂದೆನಿಸಿರ್ದನಹೀಂದ್ರಭೂಷಣಂ ॥೧೪೪॥

೧ವೋ (ರಿ) ೨ ನೆ (ಮೂ) ೩ ವ (ಮೂ) ೪ ದ (ಅ) ೫ ಪೊ (ಮೈ) ೬ ತ್ಯ (ಮೂ)

ಚರಿ[೧]ತ[೧]ದೊಳುಂಟೆ [೨]ನೋಡೆ ಕಱ[೩] [೨]ಕಂತದೊಳಲ್ಲದೆ ರಾಗಮಾ ಜಟೋ
ತ್ಕರದೊಳಮಲ್ಲದುಂಟೆ ಮನದೊಳ್ವಿಷಮಸ್ಥಿತಿ ನೈಜನೇತ್ರಭಾ
ಸುರತೆಯೊಳಲ್ಲದುಂಟೆ ಮತಿಯೊಳ್ಜಡಸಂಗತಿ ತನ್ನೊಳುಂಟೆ ಮೇಣ್
ಶ್ವಿರದೊಳಗಲ್ಲದೆಂಬ ನುಡಿಗೊಲ್ದಿಡೆಗೊಟ್ಟನವಂ ಸದಾಶಿವಂ ॥೧೪೫॥

ಸಿರಿಗಧಿದೇವಿ ಶಾರದೆಯ ಸತ್ಕಳೆ ಸೈಪಿನ ಜನ್ಮಭೂಮಿ ಸ
ಚ್ಚರಿತದ ಸೀಮೆ ಸತ್ಯದ ತವರ್ಮನೆ ಪೆರ್ಮೆಗಡರ್ಪು ಸಿದ್ಧಿಗಾ
ಗರಮೞತುೞೋತ್ಸವಕ್ಕೆ ನೆಲೆ ಚೆಲ್ವಿನ ಕೋಶಮನೂನ ಮಂಗಳೋ
ತ್ಕರನಿಧಿ ಗೌರಿ ರಂಜಿಸಿದಳಂಕದೊಳಿಂದುಕಳಾವತಂಸನಾ ॥೧೪೬॥

ನಗೆಗಣ್ಣೈದಿಲಸೈದೆ ನೀರ್ವುಗಿಸೆ ಚಂದ್ರಂಗೀಯೆ ಕುಂದಂ ಮೊಗಂ
ನಗಮಂ ಪತ್ತಿಸೆ ನಾಸಿಕಂ ಸುಲಲಿತಂ ಚಾಂಪೇಯಮಂ ಪೊನ್ನ ಬಿಂ
ದಿಗೆಯಂ ಮೈಗೇಱಿವಂತೆ ಗೈಯೆ ಕುಚಮಾ ವೇಣೀಭರಂ ಕಾಳಪ
ನ್ನಗನಂ ಪುತ್ತಡರ್ವಂತೆ ಮಾಡೆ ಮೆಱೆದಳ್ ಶರ್ವಾಣಿ ಸೌಂದರ್ಯದಿಂ ॥೧೪೭॥

ಅರುಣಂ ಪಾಣಿ ತಳಿರ್ ಕುಚಂ ಕುಸುಮಗುಚ್ಛಂ ಕುಂದದಂತಾಂಶು ಭಾ
ಸುರಪುಷ್ಪಂ ಭ್ರಮರಾಳಿ ನೀಲಮಣಿ ಚಂಚನ್ಮಾಲೆ ಪಾದಾಬ್ಜ ಬಂ
ಧುರಪೀಠಂ ಕಲಿತಾಲವಾಲಮಮರೀ ನೇತ್ರಾಂಶು ಪೊಯ್ನೀರದಾ
ಗಿರೆ ಸಂಶ್ಲಿಷ್ಟ ಶಿವಾಮರಾಗೆ ಶಿವೆಯಾಂತಳ್ ಸ್ವರ್ಲತಾಶೋಭೆಯಂ ॥೧೪೮॥

ಗಳದುದ್ಯದ್ದಾನಧಾರಾಸುರಭಿಮಿಳಿತಕರ್ಣಾನಿಳೋದ್ದಂಡ ಶುಂಡಾ
ಗ್ರಳಸತ್ಫೂತ್ಕಾರನಿರ್ಯಜ್ಜಲಲವನಿವಹಕ್ಕಾಸೆವಟ್ಟೈದಿ ನಿಂದಂ
ತಿಳಿಯಂ ಪೊತ್ತಿರ್ದಹೀಂದ್ರಂ ಮಿಸುಗೆ ಪೊಡೆಯಹೀಂದ್ರಂ ಕರಂ ಕಣ್ಗೆವಂದಂ
ಗಳಿತಾಶಂ ವಿಘ್ನನಾಶಂ ಪೃಥುಸಕಳಕಳಾಪೂರ್ಣಕೋಶಂ ಗಣೇಶಂ ॥೧೪೯॥

ಬಾಲಾದಿತ್ಯಾಂಶುಭಾಸ್ವತ್ತನುಮಣಿಗಣಭೂಷಾವಹಂ ಪೀನಮುಕ್ತಾ
ಮಾಲಾಲಂಕಾರವಕ್ಷಃಸ್ಥಳನುರುತರಕೋಟೀರಧೌರೇಯಸಸ್ಮೇ
ರಾಲಾಪಾಳಿಸ್ವನಾಸ್ಯಾಂಬುಜನಹಿಭುಗಿನಾರೂಢನೊಪ್ಪಿರ್ದನುದ್ಯ
ಲ್ಲೀಲಾಯುಕ್ತಂ ಸಶಕ್ತಿಸ್ಫುರಿತಭುಜನುಮಾಸತ್ಕುಮಾರಂ ಕುಮಾರಂ ॥೧೫೦॥

ಪದಪಾದಂ ವೇದಪಾದಸ್ಫುಟಮಣಿಕಟಕಂ ಕಾಲವಾಲಂ ಕಳಾಕಾಂ
ತಿ ದಯಾಸ್ಯಂ ಚಿತ್ರಭಾಕ್ಷಂ ಪ್ರಣವರವಠಣತ್ಕಾರನಾನಂದ ಸಾಸ್ನಾ
ಸ್ಪದನಾಮ್ನಾಯಾಂತಘಂಟಾಗಳನಮೃತಕಕುದ್ಬಂಧುರಂ ಚಿತ್ಕ್ರಿಯಾಹ್ಲಾ
ದದಶೃಂಗಂ ಧರ್ಮರೂಪಂ ತೊಳಗಿದನಭವಾಂಭೋಧಿಚಂದ್ರಂ ವೃಷೇಂದ್ರಂ ॥೧೫೧॥

---

೧ ತ್ರ (ಮೂ) ೨ ಕಜ[೩] (ಮೂ) ೩ ಮ (ಮೂ)

ಸ್ಮಿತವಕ್ತ್ರಂ ರಕ್ತಕರ್ಣಾಭರಣಕಲಿತಮುದ್ದೀಪ್ತದೀರ್ಘಾಂಗನಾಲಂ
ಬಿತಹಾರಂ ಭಸ್ಮರೇಖಾತ್ರಯವಿಳಸಿತಭಾಳಸ್ಥಳಂ ಚೀನಚೇಲಾ
ವೃತಮಧ್ಯಂ ಮೌಕ್ತಿಕಪ್ರಸ್ಫುಟಮಕುಟದಂಚತ್ಸುವರ್ಣೋರುವೇತ್ರಾಂ
ಚಿತಹಸ್ತಂ ನಿಂದು ಕಣ್ಗೊಪ್ಪಿದನಭವಸಭಾವಾಸದೊಳ್ನಂದಿಕೇಶಂ ॥೧೫೨॥

ರುರು ಘಂಟಾಕರ್ಣನಂಡಾಭರಣನಹಿಧರಂ ಶಂಕುಕರ್ಣಂ ಪ್ರಕುಂಡೋ
ದರನಂಭೋದಸ್ವನಂ ಧೂರ್ಜಟಿ ಜಟಿಲಜಟಾಮಾಲಿ ಕಾಲಾಂತಕಂ ಶಂ
ಕರನೋಂಕಾರಂ ವೃಷೇಂದ್ರಧ್ವಜನಜಿನವಸಾನಂ ವಿಷಾದಂ ವಿಪದ್ಭೀ
ಕರನಂಗಾರಾಂಗನಂಗೋದ್ಭವಹರನಸುರಧ್ವಂಸಕಂ ವೀರಭದ್ರಂ ॥೧೫೩॥

ಹರವಕ್ತ್ರಂ ಕರಿವಕ್ತ್ರನಶ್ವವರವಕ್ತ್ರಂ ಮೇಷವಕ್ತ್ರಂ ಫಣೀ
ಶ್ವರವಕ್ತ್ರಂ ನರವಕ್ತ್ರನುಷ್ಟ್ರಪತಿವಕ್ತ್ರಂ ಗೋಪವಕ್ತ್ರಂ ವನೇ
ಚರವಕ್ತ್ರಂ ಕಿರಿವಕ್ತ್ರನುಗ್ರಶಿಖಿವಕ್ತ್ರಂ ವ್ಯಾಘ್ರವಕ್ತ್ರಂ ಪಯ
ಶ್ಚರವಕ್ತ್ರಂ ರುರುವಕ್ತ್ರನೆಂಬರೆಸೆದರ್ವಿಶ್ವೇಶ್ವರಾಸ್ಥಾನದೊಳ್ ॥೧೫೪॥

ವಟರುದ್ರಂ ವಂದ್ಯರುದ್ರಂ ಕಲವಿಕರಣರುದ್ರಂ ಕಳಾಮೇಯರುದ್ರಂ
ವಿಟರುದ್ರಂ ವೀರರುದ್ರಂ ಬಲವಿಕರಣರುದ್ರಂ ಮಹಾಬಾಹುರುದ್ರಂ
ಪಟುರುದ್ರಂ ಪಾಶಿರುದ್ರಂ ಪರಮಮಹಿಮರುದ್ರಂ ಪರೇಶಾನರುದ್ರಂ
ನಟರುದ್ರಂ ನೀಲರುದ್ರಂ ಜಗದಧಿಪತಿರುದ್ರಂ ಜನಾಧಾರರುದ್ರಂ ॥೧೫೫॥

ತಿರುಮೂಲಂ ಚೇರಮಾಂಕಂ ಮುರುಘರಿರಿವದಾಂಡಾರಿ ವಾಗೀಶ್ವರಂ ಸೌಂ
ದರನಾ ನೈನಾರರೇಣಾಂಥಣರಣು ತನುವೇಳ್ಕೂತರೇಣಾಧಿನಾಥಂ
ಸಿರಿಯಾಳ್ವಂ ಸೇದಿರಾಜಂ ಮೊನೆ[೧]ಯೆ[೧]ಡು[೨]ವ[೨]ನುಮಷ್ಪೂತಿಯೇಕಾಳಿ ಚಂಡೇ
ಶ್ವರನಾ ಕಣ್ಣಪ್ಪದೇವರ್ಮೆಐ[೩]ದರಭವಸದ್ಭಕ್ತಿಸಂಪತ್ತಿಯುಕ್ತರ್ ॥೧೫೬॥

ಶುಕಕಣ್ವಾಗಸ್ತ್ಯಭೃಗ್ವಂಗಿರಸ ಸನಕ ಸಾನಂದ ಸೂತಾ[೩]ತ್ರಿ[೩]ಗಳ್ಕೌ
ಶಿಕ ಭಾರದ್ವಾಜ ಶಾತಾತಪ ಕಪಿಲ ಕಣಾದಾನಿಲಾದಾಕ್ಷಪಾದಾ
ಜಕ ಮಾ[೪]ರ್ಕಂ[೪]ಡೇಯ ಮಾಂಡವ್ಯರುರು ವಿಮಲಜಾಬಾಲಬೋಧಾಯನರ್ನಿಂ
ದಕಳಂಕರ್ಕೀರ್ತಿಸುತ್ತೊಪ್ಪಿದರಭವಸಭಾವಾಸದೊಳ್ ಭಕ್ತಿ[೫]ಯಿಂದಂ[೫] ॥೧೫೭॥

---

೧ ಯು (ಮೂ) ೨ ತ (ಮೂ) ೩ ದಿ (ವ್ಯೆ, ಮೂ), ದಿತ್ರಿ (ಧಾ) ೪ ರ್ಕಾ (ಮೂ)
೫ ಯುಕ್ತಂ (ಮೊ)

ವರುಣಂ ಪೊಂಗಿಂಡಿಯಂ ವಾಸವನೆ ಡವಕೆಯಂ ಪಾವಕಂ ದೀಪಮಂ ಭಾ
ಸ್ಕರಪುತ್ರಂ ಛತ್ರಮಂ [೧]ವೀಜನ[೧]ಮನನಿಲನಬ್ಜಾ[೨]ಪ್ತ[೨]ನಾದರ್ಶಮಂ ಚಾ
ಮರಮಂ ಶ್ರೀವಾಣಿಗಳ್ವಿತ್ತಪನಡಪವನೀಶಾನನಂಗಾಂಗರಾಗೋ
ತ್ಕರಮಂ ಖಡ್ಗಾದಿಯಂ ದಾನವಪತಿ ಪಿಡಿದೋಲೈಸಿ ನಿಂದಿರ್ದರಾಗಳ್ ॥೧೫೮॥

॥ವ॥ ಮತ್ತಮಾಮಹಾಸ್ಥಾ[೩]ನಂ[೩] ಸಾರಸ್ವತಸ್ಫುರಿತಮಾನಸಕಮಳವಿತತಾಮೋ-ದವಾ[೪]ಹ[೪]ಸುಧಿರಾಜಸಮನ್ವಿತಮುಂ, ಸಾರಸ್ವತಸ್ಫುರಿತಮಾನಸಕಮಳವಿತತಾಮೋ-ದವಾಹಕ ಸುಧಿರಾಜಸಮನ್ವಿತಮುಂ ಸಾನಂದ ಸನಂದನ ಸಮಾಗತ ಶತಕ್ರತುಸ್ಸ ಮನೋಮುನಿಸಮಂಚಿತಮುಂ ಸಾನಂದ ಸನಂದನ ಸಮಾಗತಕ್ರತು ಸುಮನೋ ಮುನಿ ಸಮಂಚಿತಮುಂ, ವಿತತಸಖರುಚಿರುಚಿರ ವನಮಾಲಾ ಸುಮನಃಸುಗಂಧದೇ ಹಾನುಕಂಪಿತ ಸುಪರ್ಣಸಮುದ್ಧೃತಪರಾಗಸ್ತೋಮ ಮಧುಹರ ಪರಮಹಿಮಯುತ ಹರಿವಿರಾಜಿತಮುಂ, ವಿತತಸಖರುಚಿರುಚಿರ ವನಮಾಲಾಸುಮನಃಸುಗಂಧದೇಹಾ-ನುಕಂಪಿತ ಸುವರ್ಣಸಮುದ್ಧೃತಪರಾಗಸ್ತೋಮಮಧುಹರ ಪರಮಹಿಮಯುತ ಹರಿ ವಿರಾಜಿತಮುಂ, ಹುತಾಶನ ಚಂಡದಂಡಧರಪಾಶಹಸ್ತ[೫]ನಿಧೀ[೫]ಶವೃಷಾಂಕಶೂಲಧರ ರುಂಡಾಭರಣಮಹಾಭೈರವಗಣಕಲಿತಮುಂ, ಹುತಾಶನ ಚಂಡದಂಡಧರಪಾಶಹಸ್ತನಿ-ಧೀಶವೃಷಾಂಕಶೂಲಧರರುಂಡಾಭರಣಮಹಾಭೈರವಗಣಕಲಿತಮುಂ, ಸದಾಲೋಕ ಹಿತಕರ ಸ್ಫುರಿತ ಪುಷ್ಕರ ವಿಬುಧ ಚಕ್ರಸಮಾಹಿತೋದಯ ರುಚಿರಸಿತ ಭಾನು ರಂಜಿತ ಮಹೋತ್ಪಳಮಿತ್ರವಿಳಸಿತಮುಂ ಸದಾಲೋಕ ಹಿತಕರಸ್ಫುರಿತಪುಷ್ಕರವಿಬು ಧಚಕ್ರಸಮಾಹಿತೋದಯರುಚಿರಸಿತಭಾನುರಂಜಿತಮಹೋತ್ಪಳ ಮಿತ್ರವಿಳಸಿತಮು ಮೆನಿಸಿರ್ದುದಂತುಮಲ್ಲದೆಯುಂ—

ಮರುದಾಕೀರ್ಣಾಪ್ಸರಂ ಸತ್ತಿಲಕವಿಲಸಿತಂ ರಾಜಹಂಸಾನ್ವಿತಂ ಭಾ
ಸುರರಂಭಾಶೋಕಪೂಗಸ್ಥಿತಿಶಿಖಿಶುಕವಿಭ್ರಾಜಿತಂ ಗಂಧವಾಹಾ
[೬]ಗ[೬]ರುಗೋಜಸ್ಫಾರ ಪುನ್ನಾಗಕಮುರುಸುಮನೋವೃಂದಪದ್ಮಾಭಿರಾಮ
ಸ್ವರಚಂಚದ್ಭೃಂ[೭]ಗ್ಯ[೭]ಲಂಕಾರಕಮಭವ[೮]ಸ ಭಾವಾಸಮುದ್ಯಾನಷಾಮ್ಯಂ ॥೧೫೯॥

ಕರಮೆಸೆದಿರ್ದುದಭ್ರಚರದಿಂಚರದಿಂ ಚರದಿಂದಿರಾಮುಖಾ
ಮರತರುಣೀ ಸುಲಾಸ್ಯರಸದಿಂ ರಸದಿಂ ರಸದಿಂ ಪೊದಳ್ದ ಶಂ
ಕರ ಕವಿವರ್ಗದಿಂದೆ ಸುರಭಾಸುರಭಾಸುರ ಭಾಗಭಂಗಮಾ
ವರನುತಿಯಿಂ ಸಭಾಸ್ಥಳಕಳಾಪ ಕಳಾಪ ಕಳಾಪಮೌಳಿಯಾ ॥೧೬೦॥

---

೧ ವಿಜ್ಜನ (ಧಾ), ವೇಜನ (ಮೂ) ೨ ಕ್ಷ (ಅ) ೩ ನಮಂ (ಮೈ) ೪ ಹಕ (ಅ) ೫ ನದೀ (ಮೂ) ೬ ಗು (ಅ) ೭ ಗ (ಮೂ) ೮ ಸರ (ಮೂ).

॥ವ॥ ಇಂತನಂತಸಂಭ್ರಮಮುಮನಮಂದವಿಭ್ರಮಮುಮನನೂನಾಶ್ಚರ್ಯಮನತೀವಸಂಪ ದಮುನತರ್ಕ್ಯವಿಸ್ತಾರಮನಖಂಡ ಮಹಿಮೆಯನೊಳಕೊಂಡು ಸುತಿಪೊಡಸದಳಮಾದ ನಿರುಪಮಾನೂನ ಘನ ಪರಮಮಂಗಳ ೧ಮಹಿತ೧ ಮಹಾಸ್ಥಾ೨ನ೨ದಲ್ಲಿ—

ನಮದಮರಕನಕಮೌ೪ಳಿಗ
ಳಮರ್ದೊರಸಿದೊಡುದಿರ್ದ ರೇಣು ೩ಪು೩ಗೆ ಬಾಯ್ಗಳೊಳಾ
ಗಮಮಂ ಪದೆದೋದುವ ವಾ
ಗ್ರಮಣಂ ತಳೆದಂ ಹಿರಣ್ಯಗರ್ಭಾಖ್ಯತೆಯಂ ॥೧೬೧॥

ಗಳಪದಿರಿಂದ್ರ ನೂಂಕದಿರುಪೇಂದ್ರ ತೊಲಂಗೆಲೆ ಚಂದ್ರ ಮೆಲ್ಲನೊ
ಲ್ದೊಳಪುಗು ಮಿತ್ರ ಕಯ್ಮುಗಿ ವಿಧಾತ್ರ ಶರಣ್ಬುಗು ವೀತಿಹೋತ್ರ ಪಿಂ
ದುಳಿ ಧನಪಾಲ ಸಾರ್ಕಡೆಗೆ ಲೋಲಸಮೀರಣ ಕಾಲ ನಿಲ್ವುದೆಂ
ದಳಘುರವಂಗುಡುತ್ತೆ ಜಡಿದಂ ಜವದಿಂದಮೆ ನಂದಿಕೇಶ್ವರಂ ॥೧೬೨॥

ಪೊಡೆ೪ಯು೪ತ್ತುಂ ವೇತ್ರ೫ದಿಂ೫ದಿಟ್ಟಣಿಪ ದನುಜರಂ ಯಕ್ಷರಂ ನೂಂಕುತಂ ಕ
ಣ್ಗಡೆಯಿಂದಂ ಝುಂಕಿಸುತ್ತಂ ಮುನಿನಿವಹವನಾದೊರ್ತ್ತುತುಂ ಸಿದ್ಧರಂ ಮೇ
ಣ್ಜಡಿಯುತ್ತುಂ ಸಾಧ್ಯರಂ ಹೊಯ್ಯೆನುತೆ ನಿಲಿಸುತಿಂದ್ರಾದ್ಯರಂ ಗೀತನೃತ್ಯ
ಕ್ಕೆಡೆಯಪ್ಪಂತಲ್ಲಿ ಕೋಲಾಹಲಮನುಡುಗಿಸುತ್ತುಂ ಮಹಾಕಾಳನಿರ್ದಂ ॥೧೬೩॥

ಶ್ರುತಿಕೋಟಿಸ್ತೋತ್ರನಾದಂ ಮುನಿಪಜಯಜಯಧ್ವಾನಮಂಭೋಜಗರ್ಭೋ
ನ್ನತವಕ್ತ್ರೋದ್ಭೂತಸಾಮಧ್ವನಿ ಸುರವನಿತಾಗೀತರಾವಂ ಪ್ರಮೋದಾಂ
ಚಿತಗಂಧರ್ವಾಂಗನಾನರ್ತನಘನನಿನದಂ ಭೃಂಗಿನಾಟ್ಯಸ್ವನಂ ಪ್ರ
ಸ್ತುತ ನಾನಾವಾದ್ಯಘೋಷಂ ಬೆರಸಿ ಬಳೆದುದೆತ್ತೆತ್ತಲುಂ ಪರ್ಬಿತಾಗಳ್ ॥೧೬೪॥

ಸುರಪಂ ಮಂದಾರದಿಂದಚ್ಯುತನರುಣಸರೋಜಾತದಿಂ ಚಂದ್ರನಿಂದೀ
ವರದಿಂ ಬಾಲಾಬ್ಜಮಿತ್ರಂ ಧವಳಕಮಳದಿಂ ಪದ್ಮಜಂ ಹೇಮಪದ್ಮೋ
ತ್ಕರದಿಂ ವಿತ್ತೇಶನುದ್ಯತ್ಕನಕಕುಸುಮದಿಂ ಮಾರುತಂ ದಿವ್ಯಸೌಗಂ
ಧಿರಜಃಸೌಗಂಧದಿಂದರ್ಚಿಸೆ ನಿಜಪದಮಂ ಭರ್ಗನೊಪ್ಪಿರ್ದನಾಗಳ್ ॥೧೬೫॥

---

೧ ಮಹೀತಳ (ಮೂ) ೨ ನಕ (ಧಾ) ೩ ಮಿ (ಮೂ) ೪ ವು (ಮೂ, ಕ) ೫ ರ (ಮೂ, ಧಾ)

ಕರಮೆಸೆದಿರ್ದರೀಶ್ವರ ಸಮಕ್ಷದೊಳುದ್ಭಟ ಬಾಣಭಟ್ಟ ಭಾ
ಸ್ಕರ ವರ ಪುಷ್ಪದತ್ತರುಮುದಗ್ರ ಹರೀಶ್ವರ ರಾಘವಾಂಕ ಶಂ
ಕರವಿಭುಗಳ್ಸುಕೇಶಿ ಮಲಯಾಧಿಪ ಮಲ್ಹಣ ಭೀಮ ಬಿಲ್ಹಣ
ರ್ಸುರುಚಿರ ಕಾಳಿದಾಸಕವಿ ಭೋಜಮುಖರ್ನುತಿಸುತ್ತೆ ಭಕ್ತಿಯಿಂ ॥೧೬೬॥

ಮಣಿಮಣಿದೇಳ್ವ ನಿಲ್ವ ನಡೆನೋಡುವ ಪಾಡುವ ಜೋಲ್ವ ತೇಲ್ವ ಸಂ
ದಣಿಪ ಕುಕಿಲ್ವ ಕೂಗಿಡುವ ರಾಗಿಪ ರಂಜಿಪ ಸುತ್ತಿ ಬರ್ಪ ರಿಂ
ಗಣಗುಣಿವಾರ್ವ ಸಾರ್ವ ನಗುವಂಘ್ರಿಯನಪ್ಪುವ ಲಲ್ಲೆದೋರ್ಪ ಕ
ಣ್ಬೊಣರ ಸುಖಾಶ್ರುವಿಂ ನನೆವ ನಚ್ಚಿನ ಮೆಚ್ಚಿನ ಭಕ್ತರೊಪ್ಪಿದರ್ ॥೧೬೭॥

ತವಕದೆ ನೋಡಿ ನೋಡಿ ತಣಿವೈದವು ಕಣ್ಗಳನೂನಮೂರ್ತಿಯಂ
ಸವಿ ಮಿಗೆ ಪಾಡಿಪಾಡಿ ತಣಿವೈದದು ಜಿಹ್ವೆ ತದೀಯ ಕೀರ್ತಿಯಂ
ಸವೆಯದೆ ಮಾಡಿ ಮಾಡಿ ತಣಿವೈದದು ಪಾಣಿ ತದಂಘ್ರಿಸೇವೆಯಂ
ನವವಿಧ ಭಕ್ತಿಯುಕ್ತ ಶರಣಾವಳಿಗೆಂದೆನೆ ಸೈಪದೆಂತುಟೋ ॥೧೬೮॥

ಇಂತತ್ಯಂತಪ್ರಭಾವಂಬಡೆದು ಮಿಸುಗುವಾಸ್ಥಾನದೊಳ್ಸತ್ಕೃಪಾರ್ದ್ರ
ಸ್ವಾಂತಂ ಸತ್ಯೇಂದ್ರನಂ ತತ್ತನುಜಮುಖ[೧]ರ[೨]ನೊಲ್ದೀಕ್ಷಿಸುತ್ತಂ ಭವಾನೀ
ಕಾಂತಂ ಕೊಂಡಾಡಿ ಕೇಡಿಲ್ಲದ ಗಣಪದಸಾಮ್ರಾಜ್ಯಮಂ ಸಾರ್ಚಿ ತಾನ
ಶ್ರಾಂತಂ ಕಣ್ಗೊಪ್ಪಿದಂ ಮಂಜಳಗುಣಗಣಮಾಣಿಕ್ಯಕೋಶಂ ಮಹೇಶಂ ॥೧೬೯॥

॥ವ॥ ಆಗಳ್ಮೆಯ್ಯಿಕ್ಕಿ ಕೆಯ್ಯೆತ್ತಿ ಸಮ್ಮುಖದೊಳ್ಚಂಡಕೀರ್ತಿಗಳ್ಕಳಕಳಮಂ ನಿವಾರಿಸಿ ಸಂಭ್ರಮಿಸಿ ನಿಂದು—

ಜಯ ಜಯ ಸುಧಾಕರಕಲಾಕಲಿತಕೋಟೀರ
ಜಯ ಜಯ ಶಿವಾಂಗಸಂಗತಮಂಗಳಾಕಾರ
ಜಯ ಜಯ ವಿತಂದ್ರ ವೃಷಭೇಂಗ್ರಚತುರತುರಂಗ
ಜಯ ಜಯ ಮಹಾನಟನಚಲಕುಲಾಚಲಶೃಂಗ
ಜಯ ಜಯ ಮಹಾಮಹಿಮ ಹಿಮಗಿರಿಸುತಾಕಾಂತ
ಜಯ ಜಯ ಸುಭಿಕ್ಷಾಟ[೩]ನೇ[೩]ಕ್ಷಿತೇಂದ್ರನಿಶಾಂತ

೧ ಲ್ವ (ಮೂ) ೨ ವ (ಮೂ) ೩ ನೀ (ಮೂ, ಮೈ).

ಜಯ ಜಯ ವಿಶೃಂಖಲಖಿಲಾಂಗಜಾಂಗವಿಭಂಗ
ಜಯ ಜಯ ಹೃತೋದ್ದಂಡ ದಂಡಧರ ಕುಧರಾಂಗ
ಜಯ ಜಯ ನಭೋನಗರಹರಣಪಟು ನಿಟಿಲಾಕ್ಷ
ಜಯ ಜಯ ಜಲಂಧರ ಮದಾಂಧ ಗಜಹ[೧]ರ್ಯ[೧]ಕ್ಷ
ಜಯ ಜಯ ಪಿತಾಮಹ ಮಹಾಕರೋಟಿಕರಾಗ್ರ
ಜಯ ಜಯ ನಿಕೃತ್ತಸುರಪಕ್ಷ ದಕ್ಷಮಹೋಗ್ರ
ಜಯ ಜಯ ನೃಸಿಂಹಸಂಹರಣಪಟುಶರಭಾಂಗ
ಜಯ ಜಯ ನಿಜಾಂಗಾರ್ಧಸಂಗನಗಜಾರ್ಧಾಂಗ
ಜಯ ಜಯ ಸುತಾಕಾಮ ವಿಧಿಹರ ಕಿರಾತೇಶ
ಜಯ ಜಯ ಜಿತತ್ರಿವಿಕ್ರಮ ವಿಕ್ರಮನಿವೇಶ
ಜಯ ಜಯ ಸಮಾದತ್ತ ಚಂಡ ವರ ವರದೇವ
ಜಯ ಜಯ ಜಗತ್ಪ್ರಳಯಕಗರಧರಗ್ರೀವ
ಜಯ ಜಯಾಚ್ಯುತದತ್ತಚಕ್ರರಕ್ಷಣಶೀಲ
ಜಯ ಜಯ ಗಜೇಂದ್ರಮುಖ ಮುಖವಿಲೋಕನ ಲೋಲ
ಜಯ ಜಯ ಕುಮಾರಮಾರಿತ ದಿವಿಜರಿಪುಜಾಲ
ಜಯ ಜಯ ವಿಳಾಸಕೃತವಿದಿತೈಕಪದಲೀಲ
ಜಯ ಜಯ ಶುಭಾವಹ ಸುಖಾವಹ ಸದಾಲಾಪ
ಜಯ ಜಯ ಸುದಕ್ಷಿಣಾಮೂರ್ತಿ ವಿಳಸಿತರೂಪ
ಜಯ ಜಯ ಹರಿಬ್ರಹ್ಮಮೃಗ್ಯ ಪರ[೨]ತ[೨]ರಲಿಂಗ
ಜಯ ಜಯ ಸದಾಮ್ನಾಯಗೇಯ ಮಹಿಮೋತ್ತುಂಗ

॥ವ॥ ಜಯದೇವ ದೇವ ಮಹಾದೇವ ನಮಸ್ತೇ ನಮಃ ಎಂದಖಂಡವಿಭವ-ಕೊಂಡಾಡುತ್ತಮಿರೆಯಿರೆ—

ಹರಭಕ್ತಿಸುಖಸುಧಾಸಾ
ಗರಮಗ್ನಂಗಣುತೃಣೋಪಮಂ ಹರಿಸುರಪಾ
ದ್ಯರ ಪದಪಲ್ಲವಲಮಮದುಂ
ಡರ ಬಾಯ್ಗಂಬಿಲದ ರಸಮದೇಂ ಸೊಗಯಿಕುಮೇ ॥೧೭೦॥

॥ವ॥ ಎನಿಸಿ—

---

೧ ರಿಯ (ಮೈ) ೨ ಕ (ಮೂ).

ಪರಮಾನಂದರಸಪ್ರಸನ್ನವದನಂ ಪಂಚಾಕ್ಷರಾಮೋದ ವಿ
ಸ್ಫುರಿತಸ್ವಾಂತಪಯೋರುಹಂ ಶಿವಪದಾಂಭೋಜಾತಭೃಂಗಂ ಗುಣಾ
ಕರ ಚೂಡಾಮಣಿ ರಾಜಶೇಖರಮಹೀಶಂ ತನ್ಮಹಾದೇವ ಭ
ಕ್ತಿರಸಾನಂದತೃಣೀಕೃತಾನ್ಯಸುಖನೊಪ್ಪಿರ್ದಂ ತದಾಸ್ಥಾನದೊಳ್ ॥೧೭೧॥

